ಹುಬ್ಬಳ್ಳಿ
ಶುಕ್ರವಾರ, 17 ಏಪ್ರಿಲ್ 2026
ಸಂಪುಟ 16, ಸಂಚಿಕೆ 23, ಪುಟಗಳು 14
■ ಹುಬ್ಬಳ್ಳಿ ■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ
₹5
RNI No.KARKAN/ 2011/64413
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಬಾಲಚೇತನ ಹೆಸರಲ್ಲಿ ಪಠ್ಯಪುಸ್ತಕ | 02
ನಿದಾಗೆ ಉಗ್ರ ವೈದ್ಯೆ ಶಾಹೀನ್ ಸಂಪರ್ಕ | 02
ರಾಜ್ಯಗಳಿಗಿಲ್ಲ ತಾರತಮ್ಯ: ಮೋದಿ | 02

ಲೋಕಸಭೆ ಕ್ಷೇತ್ರಗಳ ಪುನರ್‌ವಿಂಗಡಣೆ ಗೊಂದಲಕ್ಕೆ ತೆರೆ ಎಳೆದ ಶಾ

ದಕ್ಷಿಣದ ಸ್ಥಾನ 195ಕ್ಕೆ ಏರಿಕೆ

• **ಹೊಸದಿಲ್ಲಿ:** ದೇಶದ ಲೋಕಸಭೆ ಸ್ಥಾನಗಳ ಮರುಹಂಚಿಕೆ ಕುರಿತಾಗಿ ಉಂಟಾಗಿದ್ದ ಗೊಂದಲ ಮತ್ತು ಆತಂಕಗಳಿಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಸ್ಪಷ್ಟನೆ ನೀಡಿದ್ದು, ಕರ್ನಾಟಕ ಸೇರಿ ದಕ್ಷಿಣ ರಾಜ್ಯಗಳ ಪ್ರಾತಿನಿಧ್ಯ ಕಡಿಮೆಯಾಗುವುದಿಲ್ಲ, ಬದಲಿಗೆ ಗಣನೀಯವಾಗಿ ಹೆಚ್ಚಲಿದೆ ಎಂದು ತಿಳಿಸಿದ್ದಾರೆ. ಐದು ದಕ್ಷಿಣ ರಾಜ್ಯಗಳಲ್ಲಿ ಲೋಕಸಭೆ ಸ್ಥಾನಗಳು ಪ್ರಸ್ತುತ 129ರಿಂದ 195ಕ್ಕೆ ಏರಿಕೆಯಾಗಲಿದ್ದು, ಇದು ಶೇ.50ರಷ್ಟು ಹೆಚ್ಚಳವಾಗುತ್ತದೆ ಎಂದು ಅವರು ಲೋಕಸಭೆಯಲ್ಲಿ ಹೇಳಿದ್ದಾರೆ.

ಲೋಕಸಭೆಯ ಒಟ್ಟು ಸ್ಥಾನಗಳನ್ನು 543ರಿಂದ 816ಕ್ಕೆ ಹೆಚ್ಚಿಸುವ ಪ್ರಸ್ತಾವನೆ ಕುರಿತು ನಡೆದ ಚರ್ಚೆಯಲ್ಲಿ ಮಧ್ಯಪ್ರವೇಶಿಸಿದ ಶಾ, ದಕ್ಷಿಣ ರಾಜ್ಯಗಳ ಬಗ್ಗೆ ತಪ್ಪು ಮಾಹಿತಿ ಹರಡಲಾಗುತ್ತಿದೆ ಎಂದು ಆರೋಪಿಸಿದರು. ➡ಪುಟ 4



- ದಕ್ಷಿಣ ರಾಜ್ಯಗಳಲ್ಲಿ ಲೋಕಸಭೆ ಸ್ಥಾನಗಳು 129ರಿಂದ 195ಕ್ಕೆ ಏರಿಕೆ
- ಕರ್ನಾಟಕಕ್ಕೆ 28ರಿಂದ 42 ಸ್ಥಾನಗಳು
- ಲೋಕಸಭೆ ಒಟ್ಟು ಬಲ 543ರಿಂದ 816ಕ್ಕೆ ಹೆಚ್ಚಳ
- ಮಹಿಳಾ ಮೀಸಲಾತಿ 2029ರಿಂದ ಮಾತ್ರ ಜಾರಿ
- ಡಿಲಿಮಿಟೇಶನ್ ಬಗ್ಗೆ ತಪ್ಪು ಪ್ರಚಾರಕ್ಕೆ ಅಮಿತ್ ಶಾ ತಿರುಗೇಟು
- ಜಾತಿ ಜನಗಣತಿ ಜನಗಣತಿಯೊಂದಿಗೆ ನಡೆಸಲು ಸರ್ಕಾರ ನಿರ್ಧಾರ

598 ಗ್ರಾಪಂಗಳಲ್ಲಿದೆ ಕುಡಿವ ನೀರಿನ ಸಮಸ್ಯೆ

• **ಬೆಂಗಳೂರು:** ರಾಜ್ಯದಲ್ಲಿ ಬೇಸಿಗೆಯಲ್ಲಿ ಕುಡಿಯುವ ನೀರಿನ ಸಮಸ್ಯೆಯನ್ನು ಎದುರಿಸಬಹುದಾದ 213 ತಾಲೂಕುಗಳನ್ನು ಹಾಗೂ 2410 ಗ್ರಾಮ ಪಂಚಾಯತ್‌ಗಳನ್ನು ಗುರುತಿಸಲಾಗಿದೆ. ಪ್ರಸ್ತುತ 114 ತಾಲೂಕುಗಳ 598 ಗ್ರಾಮ ಪಂಚಾಯತ್‌ಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾಗಲಿದ್ದು, ಜಿಲ್ಲಾಧಿಕಾರಿಗಳು ಯಾವುದೇ ತೊಂದರೆ ಆಗದಂತೆ ಎಚ್ಚರ ವಹಿಸಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚಿಸಿದ್ದಾರೆ. • ವಿವರ ಪುಟ 2

ಸಿಎಂ ರೇವಂತ್ ಜಿಡಿಪಿ ಮಾದರಿ ಹಾಸ್ಯಾಸ್ಪದ

• **ಹೊಸದಿಲ್ಲಿ:** ಲೋಕಸಭೆ ಕ್ಷೇತ್ರ ಮರುಹಂಚಿಕೆ ವಿಚಾರಕ್ಕೆ ಸಂಬಂಧಿಸಿದಂತೆ ತೆಲಂಗಾಣ ಮುಖ್ಯಮಂತ್ರಿ ರೇವಂತ್ ರೆಡ್ಡಿ ಸೂಚಿಸಿರುವ ಜಿಡಿಪಿ ಆಧಾರಿತ ಮಾದರಿ 'ಹಾಸ್ಯಾಸ್ಪದ ಹಾಗೂ ಅಸಾಧ್ಯ' ಎಂದು ಬಿಜೆಪಿ ಸಂಸದ ತೇಜಸ್ವಿ ಸೂರ್ಯ ಟೀಕಿಸಿದ್ದಾರೆ. ಲೋಕಸಭೆಯಲ್ಲಿ ಮಹಿಳಾ ಮೀಸಲಾತಿ ಕಾಯ್ದೆ ತಿದ್ದುಪಡಿ ಸೇರಿದಂತೆ ಸಂಬಂಧಿತ ಮಸೂದೆಗಳ ಚರ್ಚೆಯಲ್ಲಿ ಮಾತನಾಡಿದ ಅವರು, ಕ್ಷೇತ್ರ ಮರುಹಂಚಿಕೆ ಪ್ರಕ್ರಿಯೆ 'ಜನತಾಂತ್ರಿಕ ಅಗತ್ಯವಷ್ಟೇ ಅಲ್ಲ, ➡ಪುಟ 4



ಕಿರುಸುದ್ದಿ

ವಾಸ್ತು ಕಾರ್ಯಾಗಾರ

ಹುಬ್ಬಳ್ಳಿ: ಮಜ್ಜಗದ್ಗುರು ಶಂಕರಾಚಾರ್ಯ ಸಂಸ್ಕೃತ ಪಾಠಶಾಲಾ ಹಾಗೂ ಧಾರವಾಡ ಪಂಚಾಂಗ ಸಮಿತಿ ಹಾಗೂ ಕರ್ನಾಟಕ ಜ್ಯೋತಿಷಿಗಳ ಒಕ್ಕೂಟ ಸಹಯೋಗದಲ್ಲಿ ಏ.19ರಂದು ಬೆಳಗ್ಗೆ 9.30ಕ್ಕೆ ಜ್ಯೋತಿಷ್ಯ ಹಾಗೂ ವಾಸ್ತು ಕಾರ್ಯಾಗಾರ ಹಮ್ಮಿಕೊಳ್ಳಲಾಗಿದೆ ಎಂದು ಒಕ್ಕೂಟದ ಸದಸ್ಯ ಸುರೇಶ ಕೊಪ್ಪರ ತಿಳಿಸಿದರು. ನಗರದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾರ್ಯಕ್ರಮ ಧಾರವಾಡದ ಗಾಂಧಿ ಚೌಕ್‌ನಲ್ಲಿರುವ ಸಂಸ್ಕೃತ ಪಾಠ ಶಾಲಾ ಸಭಾಂಗಣದಲ್ಲಿ ನಡೆಯಲಿದೆ. ಇಗ್ನೋ ವಿಶ್ವವಿದ್ಯಾಲಯ ವಲಯ ನಿವೃತ್ತ ಮುಖ್ಯಸ್ಥ ಡಾ. ಜಿ.ಎಚ್. ಇಮ್ರಾಪುರ, ಕಾರ್ಯಾಗಾರಕ್ಕೆ ಚಾಲನೆ ನೀಡಲಿದ್ದಾರೆ. ಅತಿಥಿಯಾಗಿ ಕೆವಿಜಿ ಬ್ಯಾಂಕ್ ನಿವೃತ್ತ ಪ್ರಬಂಧಕ ನರಸಿಂಹರಾವ ಸೋಮಲಾಪುರ, ಅಧ್ಯಕ್ಷತೆ ಖ್ಯಾತ ಮನೋರೋಗ ತಜ್ಞ ಡಾ. ಆನಂದ ಹಂದಿಗೋಳ ವಹಿಸುವರು ಎಂದರು. ಸುದ್ದಿಗೋಷ್ಠಿಯಲ್ಲಿ ಆನಂದ ಹಂದಿಗೋಳ, ಎಂ. ಸತ್ಯನಾರಾಯಣ, ಮಹಾರುದ ಬಡಿಗೇರ, ಮಹಾದೇವಿ ದೊಡ್ಡಮನಿ ಇದ್ದರು.

ಅಭಿವೃದ್ಧಿಗೆ ಸಂದ ದಂಡ

ಹುಬ್ಬಳ್ಳಿ: ಕೇಂದ್ರ ಸರ್ಕಾರದ 2026ರ ಕ್ಷೇತ್ರ ಪುನರ್ ವಿಂಗಡಣೆ ಮಸೂದೆಯು ಕರ್ನಾಟಕ ಪಾಲಿಕೆ ಇದು ಪ್ರಜಾಪ್ರಭುತ್ವದ ಕೊಲೆ ಹಾಗೂ ಅಭಿವೃದ್ಧಿಗೆ ಸಂದ ದಂಡ ಎಂದು ಕಾಂಗ್ರೆಸ್ ಮುಖಂಡ ರಜತ್ ಉಳ್ಳಾಗಡ್ಡಿಮಠ ಆರೋಪಿಸಿದ್ದಾರೆ. ಈ ಕುರಿತು ಪತ್ರಿಕಾ ಪ್ರಕಟಣೆಗೆ ತಿಳಿಸಿದ ಅವರು, ಕೇವಲ ಒಂದು ಆಡಳಿತಾತ್ಮಕ ಪ್ರಕ್ರಿಯೆಯಲ್ಲ, ಬದಲಿಗೆ ಇದು ದಕ್ಷಿಣ ಭಾರತದ, ವಿಶೇಷವಾಗಿ ಕರ್ನಾಟಕದ ರಾಜಕೀಯ ಅಸ್ತಿತ್ವವನ್ನೇ ಅಳಿಸಿಹಾಕುವ ಒಂದು ವ್ಯವಸ್ಥಿತ ಪಿತೂರಿಯಾಗಿದೆ. ಕಳೆದ ಐದು ದಶಕಗಳಲ್ಲಿ ಕರ್ನಾಟಕವು ಕೇಂದ್ರ ಸರ್ಕಾರದ ಜನಸಂಖ್ಯಾ ನಿಯಂತ್ರಣ ನೀತಿಗಳನ್ನು ಅತ್ಯಂತ ಯಶಸ್ವಿಯಾಗಿ ಜಾರಿಗೆ ತಂದಿದೆ. ಆದರೆ ಈಗ ಅದೇ ಜನಸಂಖ್ಯೆಯನ್ನು ಮಾನದಂಡವಾಗಿಟ್ಟುಕೊಂಡು ಲೋಕಸಭೆಯ ಸೀಟುಗಳನ್ನು ಹಂಚಿಕೆ ಮಾಡುತ್ತಿರುವುದು ದಕ್ಷಿಣದ ರಾಜ್ಯಗಳಿಗೆ ಮಾಡಿದ ನಂಬಿಕೆದ್ರೋಹ. ಕರ್ನಾಟಕ ಸರ್ಕಾರ ಮತ್ತು ಎಲ್ಲಾ ಕನ್ನಡಿಗರು ಪಕ್ಷಾತೀತವಾಗಿ ಈ ಮಸೂದೆಯನ್ನು ವಿರೋಧಿಸಬೇಕು. ಜನಸಂಖ್ಯೆಯ ಆಧಾರದ ಮೇಲೆ ಮಾತ್ರವಲ್ಲದೆ, ಆರ್ಥಿಕ ಕೊಡುಗೆ, ಶಿಕ್ಷಣ ಮಟ್ಟ ಮತ್ತು ಅಭಿವೃದ್ಧಿ ಸೂಚ್ಯಂಕಗಳನ್ನು ಮಾನದಂಡವಾಗಿಟ್ಟುಕೊಂಡು ಪ್ರಾತಿನಿಧ್ಯ ನೀಡಬೇಕು ಎಂದು ಆಗ್ರಹಿಸಿದ್ದಾರೆ.

ವಿವಿಧ ಕಾರ್ಯಕ್ರಮ

ಹುಬ್ಬಳ್ಳಿ: ಡಾ. ಬಿ.ಆರ್. ಅಂಬೇಡ್ಕರ್ 135ನೇ ಜಯಂತಿ ಅಂಗವಾಗಿ ಏ.19 ರಂದು ಅರವಿಂದ ನಗರದ ಬಿಜೆಪಿ ಕಚೇರಿಯಲ್ಲಿ ವಿವಿಧ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಬಿಜೆಪಿ ಹು-ಧಾ ಮಹಾನಗರ ಅಧ್ಯಕ್ಷ ತಿಪ್ಪಣ್ಣ ಮಜ್ಜಗಿ ತಿಳಿಸಿದ್ದಾರೆ. ಈ ಕುರಿತು ಪತ್ರಿಕಾ ಪ್ರಕಟಣೆಗೆ ತಿಳಿಸಿದ ಅವರು, ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ 30 ಜನರಿಗೆ



ಸನ್ಮಾನಿಸಲಾಗುವುದು. ಅತಿಥಿಗಳಾಗಿ ಮಾರುತಿ ಕಟ್ಟಿಮನಿ, ಶಿಕ್ಷಕರು ಅವರು ಭಾಗವಹಿಸುವರು ಹಾಗೂ ಉಪನ್ಯಾಸ ನೀಡುವರು. ಡಾ.ಬಾಬಾಸಾಹೇಬ ಅವರು ನಡೆದು ಬಂದ ಜೀವನ ಚರಿತ್ರೆ, ಹೋರಾಟ, ಹಲವಾರು ವಿಷಯಗಳ, ಆಯ್ದ ಭಾಗಗಳ ಎಲ್.ಇ.ಡಿ. ಮುಖಾಂತರ ಪ್ರದರ್ಶನ ಮಾಡಲಾಗುವುದು. ಡಾ.ಬಾಬಾ ಸಾಹೇಬರ ಪ್ರಮುಖ ಭಾವಚಿತ್ರಗಳ ಪ್ರದರ್ಶನಿ ಮತ್ತು ಕೇಂದ್ರ ಸರ್ಕಾರವು ಡಾ.ಬಾಬಾಸಾಹೇಬರ ಹೆಸರಿನ ನೆನೆಪಿಗೆ ಮಾಡಲಾದ ಮಹಾನಕಾರ್ಯಗಳ, ಚಿತ್ರಪಟಗಳು ಮತ್ತು ತಲೆಬರಹಗಳ ಅನಾವರಣ ಮಾಡಲಾಗುವುದು ಎಂದಿದ್ದಾರೆ.

ಆರೂಢ ಆರತಿ ಇಂದು

ಹುಬ್ಬಳ್ಳಿ: ಸಿದ್ಧಾರೂಢ ಸ್ವಾಮಿಯವರ ಮಠ ಟ್ರಸ್ಟ್ ಕಮಿಟಿ ವತಿಯಿಂದ ಸಿದ್ಧಾರೂಢ ಸ್ವಾಮಿ ಮಠದ ಆವರಣದ ಪುಷ್ಕರಣಿ ಬಳಿ ಏ.17 ರಂದು ಸಂಜೆ 6.15 ಕ್ಕೆ ಆರೂಢ ಆರತಿ ಹಮ್ಮಿಕೊಳ್ಳಲಾಗಿದೆ. ಸಾನಿಧ್ಯ ಶಾಂತಾಶ್ರಮ ಅಭಿನವ ಸಿದ್ಧಾರೂಢ ಸ್ವಾಮೀಜಿ ವಹಿಸುವರು. ಮುಖ್ಯ ಅತಿಥಿಯಾಗಿ ಮಾಜಿ ಸಚಿವ ಶಂಕರ ಪಾಟೀಲ ಮುನೇನಕೊಪ್ಪ, ಜಿಲ್ಲಾಧಿಕಾರಿ ಸ್ನೇಹಲ್ ಆರ್., ಪೊಲೀಸ್ ಆಯುಕ್ತ ಎನ್. ಶಶಿಕುಮಾರ, ಪಾಲಿಕೆ ಆಯುಕ್ತ ರುದ್ರೇಶ ಘಾಳಿ ಹಾಗೂ ಅಧ್ಯಕ್ಷತೆಯನ್ನು ಶ್ರೀಮಠ ಚೇರಮನ್ ಬಾಳು ಮಗಜಿಕೊಂಡಿ ವಹಿಸುವರು.

ನೋಂದಣಿಗೆ ಅವಕಾಶ

ಹುಬ್ಬಳ್ಳಿ2 : ಇಲ್ಲಿಯ ಲಿಂಗರಾಜ ನಗರದ ಆದರ್ಶ ಪಿಯು ವಿಜ್ಞಾನ ಕಾಲೇಜ್‌ನಲ್ಲಿ ಏ. 27 ರಂದು ಬೆಳಗ್ಗೆ 10 ಗಂಟೆಗೆ 2026ನೇ ಸಾಲಿನಲ್ಲಿ ಎಸ್ಸೆಸ್ಸೆಲ್ಸಿ ಪರೀಕ್ಷೆ ಉತೀರ್ಣರಾದ ವಿಜ್ಞಾನ ಹಾಗೂ ಪ್ರಾಯೋಗಿಕಕ್ಕೆ ಸಂಬಂಧಿಸಿ ಬ್ರಿಜ್ ಕೋರ್ಸ್‌ನ್ನು ಹಮ್ಮಿಕೊಳ್ಳಲಾಗಿದೆ. ಆಸಕ್ತ ವಿದ್ಯಾರ್ಥಿಗಳು ಉಚಿತವಾಗಿ ನೋಂದಣಿ ಮಾಡಿಕೊಳ್ಳಬಹುದು. ಮೊಬೈಲ್ ನಂ :7204593475 ಸಂಪರ್ಕಿಸಿ ಎಂದು ಪ್ರಕಟಣೆಗೆ ತಿಳಿಸಿದ್ದಾರೆ.



ಧಾರವಾಡ: ಜನತಾ ಶಿಕ್ಷಣ ಸಮಿತಿಯ ಡಾ. ಡಿ.ವೀರೇಂದ್ರ ಹೆಗ್ಗಡೆ ಸಂಶೋಧನಾ ಕೇಂದ್ರದಲ್ಲಿ ಪಿಎಚ್‌ಡಿ ಮಾರ್ಗದರ್ಶಕ ಡಾ. ವೈ. ಎಂ.ಭಜಂತ್ರಿ ಅವರನ್ನು ಸನ್ಮಾನಿಸಲಾಯಿತು. ಕಾರ್ಯದರ್ಶಿ ಡಾ.ಅಜಿತ ಪ್ರಸಾದ, ಡಾ.ಜಿನದತ್ತ ಹಡಗಲಿ, ಮಹಾವೀರ ಉಪಾದ್ಯೆ, ಡಾ.ಜಿನ್ನಪ್ಪ ಕುಂದಗೋಳ ಇದ್ದರು.

ಇಂದಿನಿಂದ ಬಸವ ಜಯಂತಿ ಉತ್ಸವ

ಹುಬ್ಬಳ್ಳಿ: ವಿಶ್ವಗುರು ಬಸವೇಶ್ವರ ಜಯಂತಿ ಉತ್ಸವ ಸಮಿತಿ ಹಾಗೂ ವೀರಶೈವ ಸಂಘಟನಾ ಸಮಿತಿ ವತಿಯಿಂದ ನಗರದ ಮೂರು ಸಾವಿರ ಮಠದ ಆವರಣದಲ್ಲಿ ಬಸವ ಜಯಂತಿ ಉತ್ಸವ ಕಾರ್ಯಕ್ರಮವನ್ನು ಏ.17ರಿಂದ 20ರ ವರೆಗೆ ಹಮ್ಮಿಕೊಳ್ಳಲಾಗಿದೆ ಎಂದು ಉತ್ಸವ ಸಮಿತಿ ಅಧ್ಯಕ್ಷ ಪ್ರವೀಣ ಕುಬಸದ ಹೇಳಿದರು. ನಗರದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಏ.17ರಂದು ಬೆಳಗ್ಗೆ 8.30ಕ್ಕೆ ಷಟ್‌ಸ್ಥಲ ಧ್ವಜಾರೋಹಣ, ಬೆಳಗ್ಗೆ 10 ಗಂಟೆಗೆ ಬಸವ ಸಂದೇಶ ಸಾರಲು ಬೈಕ್ ರ‍್ಯಾಲಿ, ಸಂಜೆ 4 ಗಂಟೆಗೆ ಮಕ್ಕಳಿಗಾಗಿ ವಚನ ಗಾಯನ ಸ್ಪರ್ಧೆ ನಡೆಯಲಿದೆ. ಇಲ್ಲಿನ ಶಾಂತಾಶ್ರಮದ ಅಭಿನವ ಸಿದ್ಧಾರೂಢ ಸ್ವಾಮೀಜಿ ಅವರಿಂದ ಪ್ರವಚನ ಏ.18ರಂದು ಸಂಜೆ 5 ಗಂಟೆಗೆ ನಡೆಯಲಿದೆ. ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಕಾರ್ಯಕ್ರಮ ಉದ್ಘಾಟಿಸಲಿದ್ದು, ಸಂಸದ ಜಗದೀಶ ಶೆಟ್ಟರ್, ಸಚಿವ ಸಂತೋಷ್ ಲಾಡ್ ಭಾಗವಹಿಸಲಿದ್ದಾರೆ. ಏ.19ರಂದು ಮಣಕವಾಡದ ದೇವಮಂದಿರ ಮಠದ ಅಭಿನವ ಮೃತ್ಯುಂಜಯ ಸ್ವಾಮೀಜಿ ಅವರಿಂದ ಪ್ರವಚನ ನಡೆಯಲಿದೆ. ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಕಾರ್ಯಕ್ರಮ ಉದ್ಘಾಟಿಸುವರು. ಏ.20ರಂದು ಸಂಜೆ 4 ಗಂಟೆಗೆ ಬಸವಣ್ಣನವರ ಅಶ್ವಾರೂಢ ಮೂರ್ತಿಯ ಭವ್ಯ ಮೆರವಣಿಗೆ ನಡೆಯಲಿದೆ. ಮೂರು ಸಾವಿರ ಮಠದ ಗುರುಸಿದ್ಧರಾಜಯೋಗೀಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದು, ಶಾಸಕ ಮಹೇಶ ಟೆಂಗಿನಕಾಯಿ ಕಾರ್ಯಕ್ರಮಕ್ಕೆ ಚಾಲನೆ ನೀಡುವರು ಎಂದರು. ನಿತ್ಯಾನಂದ ಮತ್ತೂರಮಠ, ವೀರಣ್ಣ ಕಲ್ಲೂರ, ಶಿವು ಮೆಣಸಿನಕಾಯಿ, ಸರೋಜಾ ಹೂಗಾರ, ಅರವಿಂದ ಕುಬಸದ, ಚನ್ನಬಸಪ್ಪ ಧಾರವಾಡಶೆಟ್ಟರ್, ಚನ್ನು ಹೊಸಮನಿ ಇದ್ದರು.



ಹುಬ್ಬಳ್ಳಿ: ಸಮತಾ ಸೇನಾ ಕರ್ನಾಟಕ ಹಾಘೂ ವಿವಿಧ ದಲಿತ ಸಂಘ ಸಂಸ್ಥೆಗಳ ಮಹಾಮಂಡಳ ವತಿಯಿಂದ ಬಿ.ಆರ್. ಅಂಬೇಡ್ಕರ್ ಅವರಿಗೆ ಮಾಲಾರ್ಪಣೆ ಮಾಡಲಾಯಿತು. ಅಧ್ಯಕ್ಷರಾದ ಗುರುನಾಥ ಉಳ್ಳಿಕಾಶಿ,ಮಹೇಶ ದಾಬಡೆ,ಗುರಪ್ಪ ಚಲವಾದಿ,ಲೋಹಿತ ಗಾಮನಗಟ್ಟಿ,ಮಂಜುಳಾ ಬೆಣಗಿ, ಮಂಜು ಸಣ್ಣಕ್ಕಿ,ಉಮೇಶ ಹಲಗಿ,ದೇವೇಂದ್ರ ಇಟಗಿ,ಶಂಕರ ಭೋಜಗಾರ ಇತರರಿದ್ದರು.

ಜಿಲ್ಲಾಮಟ್ಟದ ರೈತರ ಸಭೆ | ರೈತರಿಂದ ಜಿಲ್ಲಾಧಿಕಾರಿಗೆ ಅಹವಾಲು ಸಲ್ಲಿಕೆ

ರಸಗೊಬ್ಬರ ಅಕ್ರಮ ತಡೆಗೆ ಸೂಚನೆ

ಧಾರವಾಡ: ನಗರದ ಜಿಲ್ಲಾಧಿಕಾರಿ ಕಚೇರಿಯಲ್ಲಿ ನಡೆದ ರೈತರ ಸಭೆಯಲ್ಲಿ ಸಕ್ಕರೆ ಕಾರ್ಖಾನೆ ಆರಂಭ, ಕಡಲೆ, ಮೆಕ್ಕೆಜೋಳ, ಕುಸಬೆ, ಸೂರ್ಯಕಾಂತಿ ಖರೀದಿ, ವಿದ್ಯುತ್, ಬೀಜ-ರಸಗೊಬ್ಬರ ಪೂರೈಕೆಗೆ ರೈತರು ಜಿಲ್ಲಾಧಿಕಾರಿಗೆ ಅಹವಾಲು ಸಲ್ಲಿಸಿದರು.

ಅಹವಾಲು ಸ್ವೀಕರಿಸಿದ ಜಿಲ್ಲಾಧಿಕಾರಿ ಸ್ನೇಹಲ್ ಆರ್. ಮಾತನಾಡಿ, ಜಿಲ್ಲಾಮಟ್ಟದಲ್ಲಿ ಪರಿಹರಿಸುವ ಸಮಸ್ಯೆಗಳನ್ನು ಅಧಿಕಾರಿಗಳ ಸಭೆ ಕರೆದು ಕ್ರಮ ಕೈಗೊಳ್ಳಲಿದ್ದು, ಸರ್ಕಾರದ ಹಂತದ ಕ್ರಮಗಳಿಗೆ ಜಿಲ್ಲಾಡಳಿತವೇ ಪ್ರಸ್ತಾವನೆ ಸಲ್ಲಿಸುವುದಾಗಿ ರೈತರಿಗೆ ಭರವಸೆ ನೀಡಿದರು.

ರಸಗೊಬ್ಬರ ಅಕ್ರಮ ತಡೆಗೆ ಕೃಷಿ ಇಲಾಖೆ ಎಫ್ ಐಡಿ ಕಡ್ಡಾಯಗೊಳಿಸಿದೆ. ಪ್ರತಿ ತಿಂಗಳು ಎಕರೆಗೆ ಒಂದು ಚೀಲ, ಕಬ್ಬು ಬೆಳೆಗಾರರಿಗೆ ಎರಡು ಚೀಲ ಗೊಬ್ಬರ ನೀಡಲಿದೆ. ರೈತರು ರಸಗೊಬ್ಬರ ಮಿತವಾಗಿ ಬಳಸಬೇಕು ಎಂದರು.

ಪ್ರತಿ ರೈತರು ಫ್ರೂಟ್ಸ್ ಐಡಿ ಹೊಂದುವುದು ಕಡ್ಡಾಯ. ಕಾರಣ ರಸಗೊಬ್ಬರ, ಬೆಳೆ ಪರಿಹಾರ, ಬೀಜಗಳ ವಿತರಣೆ ಹಾಗೂ ಕೃಷಿಗೆ ಸಂಬಂಧಿಸಿದ ಇತರ ಸರ್ಕಾರಿ ಸೌಲಭ್ಯಗಳು ನೀಡಲು ಸರ್ಕಾರ, ಫ್ರೂಟ್ ಐಡಿ ಅನುಸರಿಸಲಿದೆ ಎಂದು ಮಾಹಿತಿ ನೀಡಿದರು.

ಪ್ರತಿ ರೈತರು ತಮ್ಮ ಜಮೀನನ್ನು ಫ್ರೂಟ್ಸ್ ತಂತ್ರಾಂಶಕ್ಕೆ ಒಳಪಡಿಸಬೇಕು. ಸದ್ಯ ಈ ಐಡಿ ಹೊಂದಿದ ರೈತರಿಗೆ ಮಾತ್ರವೇ ಸರ್ಕಾರ, ರಸಗೊಬ್ಬರ ವಿತರಿಸುವಂತೆ ಸೂಚಿಸಿದೆ. ಹೀಗಾಗಿ ರೈತರು ಫ್ರೂಟ್ಸ್ ಐಡಿ ಹೊಂದಬೇಕು ಎಂದು ಹೇಳಿದರು.



ಜಮೀನು ನೋಂದಾಯಿಸಿ

ಧಾರಾಡ ಜಿಲ್ಲೆಯ 3,21,762 ಜಮೀನು(ತಾಕುಗಳು) ಫ್ರೂಟ್ಸ್ ತಂತ್ರಾಂಶದಲ್ಲಿ ನೋಂದಣಿ ಆಗಬೇಕಿದ್ದು, ಈ ಪೂಕಿ 2,47,145 ಜಮೀನುಗಳು ನೋಂದಣಿ ಆಗಿವೆ. 74,617 ಜಮೀನುಗಳ ನೋಂದಣಿ ಪ್ರಗತಿಯಲ್ಲಿದೆ. ಉಳಿದ ರೈತರು ಈ ತಂತ್ರಾಂಶದಲ್ಲಿ ನೋಂದಣಿ ಮಾಡಿಕೊಳ್ಳಲು ಜಿಲ್ಲಾಧಿಕಾರಿ ಸ್ನೇಹಲ್ ಆರ್. ಸಲಹೆ ನೀಡಿದರು.

- ಮಿತ ಗೊಬ್ಬರ ಬಳಸಿ
- ಫ್ರೂಟ್ಸ್ ಐಡಿ ಹೊಂದಿ
- ತ್ವರಿತ ಪರಿಹಾರ

ಬೆಳೆಹಾನಿ ಪರಿಹಾರ ವಿತರಣೆ ವಿಳಂಬ ಮಾಡದೆ ನೀಡುವಂತೆ ಕಂದಾಯ ಮತ್ತು ಕೃಷಿ ಇಲಾಖೆಯ ಅಧಿಕಾರಿಗಳಿಗೆ ನಿರ್ದೇಶನ ನೀಡಿದ ಜಿಲ್ಲಾಧಿಕಾರಿ ಸ್ನೇಹಲ್ ಆರ್. ಅವರು, ರೈತರು ಅರ್ಜಿ ಸಲ್ಲಿಸಿದ ಬಳಿಕ ತ್ವರಿತ ಪರಿಶೀಲನೆ ನಡೆಸಿ, ನಿಯಮಾನುಸಾರ ಕ್ರಮ ಕೈಗೊಳ್ಳಲು ಆದೇಶಿಸಿದರು.

ರೈತರಿಗೆ ಬ್ಯಾಂಕ್ ಸಾಲ, ಬೆಳೆವಿಮೆ, ಮಾರುಕಟ್ಟೆ ದರಗಳ ಸರಿಯಾದ ಮಾಹಿತಿ ನೀಡುವ ಜವಾಬ್ದಾರಿ ಅಧಿಕಾರಿಗಳ ಮೇಲಿದೆ. ರೈತರು ಮಧ್ಯವರ್ತಿ ಅವಲಂಬನೆ ಇಲ್ಲದೆ ನೇರವಾಗಿ ಮಾರುಕಟ್ಟೆಯಲ್ಲಿ ಉತ್ಪನ್ನಗಳ ಮಾರಾಟಕ್ಕೆ ಪ್ರೋತ್ಸಾಹಿಸಲು ಸೂಚಿಸಿದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಸಿ.ಡಿ.ಗೀತಾ, ಜಿಲ್ಲಾ ಯೋಜನಾಧಿಕಾರಿ ಅಜೀಜ್ ದೇಸಾಯಿ, ಎಸಿ ಶಾಲಂ ಹುಸೇನ್, ಮಂಜುನಾಥ ಅಂತರವಳ್ಳಿ, ಕೆ.ಸಿ.ಭದ್ರಣ್ಣವರ, ಡಾ. ಎಸ್.ವಿ.ಸಂತಿ, ವೀರನಗೌಡ ಪಾಟೀಲ, ಗುಂಜನ್ ಆರ್ಯ ಸೇರಿ ಅನೇಕರು ಇದ್ದರು.

ಸಭೆಗೆ ಗೈರಾದ ಅಧಿಕಾರಿಗಳಿಗೆ ನೋಟಿಸ್

ಕುಂದಗೋಳ: ಬಸವೇಶ್ವರ ಜಯಂತಿಯ ಪೂರ್ವಭಾವಿ ಸಭೆಗೆ ಗೈರಾದ ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ ಸಮಾಜದ ಮುಖಂಡರು,ಈ ಕೂಡಲೇ ಕ್ರಮಕ್ಕೆ ಆಗ್ರಹಿಸಿದರು.

ತಹಶೀಲ್ದಾರ್ ಕಚೇರಿಯಲ್ಲಿ ಏ.20 ರಂದು ಜರುಗುವ ಜಯಂತ್ಯುತ್ಸವ ಕಾರ್ಯಕ್ರಮ ಕುರಿತು ಜರುಗಿದ ಪೂರ್ವಭಾವಿ ಸಭೆಗೆ ಹಲವು ಅಧಿಕಾರಿಗಳು ಗೈರಾಗಿದ್ದರು. ಕೆಲವರು ತಮ್ಮ ಸಿಬ್ಬಂದಿಯನ್ನು ಕಳಿಸಿದ್ದರು. ಇದರಿಂದ ಅಸಮಾಧಾನಗೊಂಡ ಪಟ್ಟಣ ಪಂಚಾಯತಿ ಮಾಜಿ ಅಧ್ಯಕ್ಷ ಮಲ್ಲಿಕಾರ್ಜುನ ಕಿರೇಸೂರ, ಪ್ರತಿ ಸಭೆಗೆ ಗೈರಾಗುವ ಅಧಿಕಾರಿಗಳ ವಿರುದ್ಧ ತಾಲೂಕು ಆಡಳಿತ ಯಾವ ರೀತಿ ಕ್ರಮ ಜರುಗಿಸಿದೆ ಎಂದು ಪ್ರಶ್ನಿಸಿದರಲ್ಲದೇ 33 ಇಲಾಖೆಗಳಪೈಕಿ ಕೆಲವೇ, ಕೆಲವು ಅಧಿಕಾರಿಗಳು ಕಾಟಾಚಾರಕ್ಕೆ ಜಯಂತಿ ಆಚರಿಸುತ್ತಾರೆ. ಬಹುತೇಕ ಗ್ರಾಮ ಪಂಚಾಯತಿಗಳಲ್ಲೂ ಕಾರ್ಯಕ್ರಮ ಇರಲ್ಲ ಎಂದು ಸಭೆಯ ಗಮನ ಸೆಳೆದರು.

ಈ ಕುರಿತು ಮಾತನಾಡಿದ ತಹಶೀಲ್ದಾರ್ ರಾಜು ಮಾವರಕರ್, ಎಲ್ಲಾ ಇಲಾಖೆ ಹಾಗೂ ಗ್ರಾ.ಪಂ.ನವರು ಜಯಂತಿ ಆಚರಣೆಯ ಜಿಪಿಎಸ್ ಪೋಟೋ ಸಹಿತ ಮಾಹಿತಿ ನೀಡಬೇಕು ಎಂದರಲ್ಲದೇ ಗೈರಾದ ಅಧಿಕಾರಿಗಳಿಗೆ ನೋಟಿಸ್ ನೀಡಲು ಸೂಚಿಸಿದರು. ತಾಲೂಕು ಆಡಳಿತದಿಂದ ಜರುಗುವ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಸಮಾಜದ ಮುಖಂಡರಿಗೆ ಸತ್ಕಾರ, ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಸನ್ಮಾನ ನೆನಪಿನ ಕಾಣಿಕೆ ನೀಡಲು ತೀರ್ಮಾನಿಸಲಾಯಿತು.

ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಮಲ್ಲಿಕಾರ್ಜುನ ಕಿರೇಸೂರ, ಹಸಿರು ಶಾಲು ಹಾಕಿಕೊಂಡು ಪೋಸು ನೀಡುವವರು ನಿಜವಾದ ರೈತರಲ್ಲ,ಬಿಳಿಬಟ್ಟೆ ಹಾಕಿಕೊಂಡು ಮಜಾ ಮಾಡಿದವರಿಗೆ ಸನ್ಮಾನ ಮಾಡಿ ಸತ್ಕಾರಕ್ಕಿರುವ ಗೌರವವನ್ನು ಹಾಳು ಮಾಡಬೇಡಿ ಎಂದರು.ಫಕೀರ ದಿಂಗಾಲೇಶ್ವರರನ್ನು ಆಹ್ವಾನಿಸಲು ತೀರ್ಮಾನಿಸಲಾಯಿತು. ತಾಲೂಕು ಆಡಳಿತದ ಕಾರ್ಯಕ್ರಮ ನಂತರ ಸಂಜೆ ಬಸವ ಸೇನೆಯಿಂದ ಜಯಂತಿ ಮೆರವಣಿಗೆಯು ಶಂಭುಲಿಂಗೇಶ್ವರ ದೇವಸ್ಥಾನದಿಂದ ಹೊರಡಲಿದೆ.

ಬಸವ ಜಯಂತಿ ಜೊತೆಗೆ ಭಗೀರಥ ಹಾಗೂ ಶಂಕರ ಜಯಂತಿಯ ಕುರಿತಾಗಿಯೂ ಚರ್ಚಿಸಲಾಯಿತು. ಅಖಿಲ ಭಾರತ ವೀರಶೈವ ಮಹಾಸಭಾದ ತಾಲೂಕು ಅಧ್ಯಕ್ಷ ಉಮೇಶ ಹೆಬಸೂರ, ಶ್ರೀಕಂಠಗೌಡ ಹಿರೇಗೌಡ್ರ, ನಾಗರಾಜ ದೇಶಪಾಂಡೆ, ಸೋಮರಾವ್ ದೇಸಾಯಿ,ರಮೇಶ ಕೊಪ್ಪದ, ಮಲ್ಲಿಕಾರ್ಜುನ ಕುನ್ನೂರ, ವೀರೇಶ ಪ್ರಳಯಕಲ್ಮಠ, ಬಸವರಾಜ ಸಿರಸಂಗಿ, ರಮೇಶ ಇಂಗಳಳ್ಳಿ,ವೀರೇಶ ರವದಿ, ದೇವಪ್ಪ ಇಚ್ಚಂಗಿ, ಬಸಣ್ಣ ಬಳ್ಳಾರಿ ಇತರರಿದ್ದರು.



ಕಾಮಗಾರಿಗೆ ಶಾಸಕ ಕೋನರಡ್ಡಿ ಭೂಮಿಪೂಜೆ

ನವಲಗುಂದ: ಕಳೆದ ಬಾರಿ ಸುರಿದ ಭಾರೀ ಮಳೆಯಿಂದ ತಡಹಾಳ ಗ್ರಾಮದ ಹತ್ತಿರ ಬೆಣ್ಣೆಹಳ್ಳಕ್ಕೆ ಶತಮಾನ ಹಿಂದೆ ನಿರ್ಮಿಸಿದ ಸೇತುವೆಯು ಕುಸಿದು ತಡಹಾಳ ಹಾಗೂ ನರಗುಂದ ಸಾರ್ವಜನಿಕರ ಸಂಪರ್ಕವೇ ಕಡಿತಗೊಂಡಿದ್ದು ಇದಕ್ಕೆ ಸರ್ಕಾರದಿಂದ ರೂ. 80 ಕೋಟಿ ಅನುದಾನ ಬಿಡುಗಡೆ ಮಾಡಿದ್ದಕ್ಕೆ ನವಲಗುಂದ ಶಾಸಕ ಎನ್.ಎಚ್. ಕೋನರಡ್ಡಿ ಸರ್ಕಾರಕ್ಕೆ ಅಭಿನಂದನೆ ಹೇಳಿದರು.

ಅವರು ಅರಭಾವಿ-ಚಳ್ಳಕೇರಿ ರಾಜ್ಯ ಹೆದ್ದಾರಿ 45 ರ ತಡಹಾಳ-ನರಗುಂದ ಬೆಣ್ಣೆಹಳ್ಳ, ದೊಡ್ಡಹಳ್ಳಕ್ಕೆ ತಾತ್ಕಾಲಿಕ ಸ್ಟೀಲ್ ಸೇತುವೆ ನಿರ್ಮಾಣ ಹಾಗೂ ಗ್ರಾಮ ದೇವಿ ದೇವಸ್ಥಾನದ ಭೂಮಿಪೂಜೆ ನೆರವೇರಿಸಿ ಮಾತನಾಡಿ, ಈ ಬಾರಿ ಹೆಚ್ಚಿನ ಮಳೆಯಾಗಿ ಸೇತುವೆ ಸಂಪೂರ್ಣ ಕೊಚ್ಚಿಹೋಗಿದ್ದರಿಂದ ಧಾರವಾಡ ಜಿಲ್ಲೆಯ ತಡಹಾಳ-ಶಲವಡಿ ಹಾಗೂ ಗದಗ ಜಿಲ್ಲೆಯ ನರಗುಂದ ರಸ್ತೆ ಸಂಪರ್ಕವೇ ಕಡಿತಗೊಂಡಿತ್ತು. ಮುಖ್ಯ ಸೇತುವೆ ಕಾಮಗಾರಿ ಮುಗಿಯುವವರೆಗೆ ಸರ್ವಿಸ್ ರಸ್ತೆ ತರಹ ರೂ. 2 ಕೋಟಿ 20 ಲಕ್ಷದಲ್ಲಿ ಸ್ಟೀಲ್ ಬ್ರಿಡ್ಜ್ ನಿರ್ಮಿಸಲು ಭೂಮಿಪೂಜೆ ಹಾಗೂ ಬಹುದಿನದ ಗ್ರಾಮದ ಬೇಡಿಕೆಯಾದ ಗ್ರಾಮ ದೇವತೆ ದೇವಸ್ಥಾನಕ್ಕೆ ಸರ್ಕಾರದಿಂದ 20 ಲಕ್ಷ ರೂ. ಅನುದಾನದಲ್ಲಿ ಕಟ್ಟಡ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಲಾಯಿತು. ದೇವಸ್ಥಾನಕ್ಕೆ ಗ್ರಾಮದ ಮಹಿಳೆಯರು ಗೃಹಲಕ್ಷ್ಮೀ ಯೋಜನೆಯ 9 ಲಕ್ಷ ಹಣವನ್ನು ದೇವಸ್ಥಾನ ನಿರ್ಮಿಸಲು ನೀಡಿರುವುದು ವಿಶೇಷ ಎಂದರು.

ಕೆಪಿಸಿಸಿ ಸದಸ್ಯ ವಿಜಯ ಕುಲಕರ್ಣಿ, ಮಲ್ಲನಗೌಡ್ರ ಚನ್ನವೀರಗೌಡ್ರ, ಗುರಯ್ಯ ಸಾಲಿಮಠ, ವೀರುಪಾಕ್ಷ ಬಸವರಾಜ ಮಣ್ಣೂರ, ಬಸನಗೌಡ ಚನ್ನವೀರಗೌಡ್ರ, ಸತೀಶ ಮಮಟಗೇರಿ, ಬಸವಂತಪ್ಪ ಕೋಟಿ, ನಿಂಗಪ್ಪ ಸವದಿ, ಚನ್ನಪ್ಪ ಕಿಟಗೇರಿ, ನಿಂಗಪ್ಪ ಮರಿನಾಯ್ಕರ, ಮಾನಪ್ಪ ಬಡಿಗೇರ, ಮುತ್ತಪ್ಪ ಮೇಟಿ, ಶಿವನಗೌಡ ಹಿರೇಗೌಡ್ರ, ಮಾರುತಿ ಜಾಧವ, ಯಲ್ಲಪ್ಪ ಮಾದರ, ಚಂದಪ್ಪ ಚಲವಾದಿ, ಜುಮ್ಮಪ್ಪ ಸಂಗಳದ, ಅಮರಪ್ಪಾ ಅಮ್ಮಣ್ಣವರ, ಕಪಲೆಪ್ಪ ಮಣ್ಣೂರ, ರಮೇಶ ಮೇಟಿ, ನಿಂಗಪ್ಪ ಹನಮಂತಪ್ಪ ಮರಿನಾಯ್ಕರ, ಪರಮಾನಂದ ಭೂಸನೂರಮಠ, ವೀರಪ್ಪ ಅಮ್ಮಣ್ಣವರ, ರಮಜಾನ ನದಾಫ, ಫಕ್ಕೀರಪ್ಪ ಸಂಗಳದ, ಶಿವರಾಯಪ್ಪ ಮಾದರ (ಅರಹಟ್ಟಿ), ಪರಮೇಶ ಮಡಿವಾಳರ, ಚಂಬಣ್ಣ ಹಡಪದ, ಮಂಜುನಾಥ, ಪಿಡಿಓ ರಗಟಿ ಸೇರಿದಂತೆ ಮುಂತಾದವರಿದ್ದರು.



ಕನ್ನಡಿಗರು ಕನ್ನಡ ನಾಡು-ನುಡಿಗೆ ಋಣಿಯಾಗಿರಲಿ: ಎಸ್.ಬಿ. ಮಟ್ಟೋಳ್ಳಿ

ಹುಬ್ಬಳ್ಳಿ: ಕನ್ನಡ ನಾಡು - ನುಡಿಗೆ ಋಣಿಯಾಗಿರುವುದು ಕನ್ನಡಿಗರ ಆದ್ಯ ಕರ್ತವ್ಯವಾಗಿದೆ. ಕನ್ನಡಿಗರ ಜವಾಬ್ದಾರಿಯನ್ನು ನಿವೃತ್ತ ಪ್ರಾಧ್ಯಾಪಕ ಎಸ್.ಬಿ. ಮಟ್ಟೋಳ್ಳಿ ಹೇಳಿದರು.

ಕೆ.ಎಲ್.ಇ ಸಂಸ್ಥೆಯ ಜಗದ್ಗುರು ಗಂಗಾಧರ ವಾಣಿಜ್ಯ ಮಹಾವಿದ್ಯಾಲಯದಲ್ಲಿ ಪದವಿ ಮತ್ತು ಸ್ನಾತಕೋತ್ತರ ವಿಭಾಗದಲ್ಲಿ ಒಂದು ದಿನದ ರಾಜ್ಯ ಮಟ್ಟದ ಸಾಂಸ್ಕೃತಿಕ ಸ್ಪರ್ಧೆಗಳಿಗೆ ಚಾಲನೆ ನೀಡಿ ಮಾತನಾಡಿದರು.

ಅಧ್ಯಕ್ಷತೆಯನ್ನು ಕೆ.ಎಲ್.ಇ ಸಂಸ್ಥೆಯ ಆಡಳಿತ ಮಂಡಳಿಯ ಸದಸ್ಯ ಮಂಜುನಾಥ.ಎಸ್. ಮುನವಳ್ಳಿ ವಹಿಸಿ ಮಾತನಾಡಿ, ಸ್ಪರ್ಧಾತ್ಮಕ ಯುಗದಲ್ಲಿ ಸ್ಪರ್ಧೆಯ ಮಹತ್ವವನ್ನು ತಿಳಿಸುವುದರ ಜೊತೆಗೆ ವಿದ್ಯಾರ್ಥಿಗಳಿಗೆ ಶುಭಾಶಯ ತಿಳಿಸಿದರು.

ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥ ಪ್ರೊ. ಬಸವರಾಜ ಹುಬ್ಬಳ್ಳಿ, ಕನ್ನಡ ವಿಭಾಗದ ಮುಖ್ಯಸ್ಥ ಡಾ. ನೇತ್ರಾವತಿ ಗಬ್ಬೂರ, ಪಿ.ಜಿ ವಿಭಾಗದ ಸಂಯೋಜಕಿ ಪ್ರೊ. ಸುನಿತಾ ಗೋನಾಳ, ಪದವಿಪೂರ್ವ ಕಾಲೇಜಿನ ಪ್ರಾಚಾರ್ಯ ಡಾ. ದತ್ತು ವಾಗ್ಮೋಡೆ ಉಪಸ್ಥಿತರಿದ್ದರು. ರಾಜ್ಯದ ವಿವಿಧ ಮಹಾವಿದ್ಯಾಲಯಗಳಿಂದ ಸುಮಾರು 30 ಮಹಾವಿದ್ಯಾಲಯಗಳು, 330 ವಿದ್ಯಾರ್ಥಿಗಳು ಈ ಸ್ಪರ್ಧೆಯಲ್ಲಿ ಉತ್ಸಾಹದಿಂದ ಭಾಗವಹಿಸಿದ್ದರು. ಸಮಾರೋಪ ಸಮಾರಂಭದಲ್ಲಿ ವಿಜೇತ ಸ್ಪರ್ಧಾರ್ಥಿಗಳಿಗೆ ಬಹುಮಾನ ಮತ್ತು ಪ್ರಶಸ್ತಿಪತ್ರವನ್ನು ವಿತರಿಸಲಾಯಿತು.



ಹುಬ್ಬಳ್ಳಿ ಜಿಜಿ ಕಾಮರ್ಸ್ ಕಾಲೇಜಿನಲ್ಲಿ ನಡೆದ ರಾಜ್ಯ ಮಟ್ಟದ ಸಾಂಸ್ಕೃತಿಕ ಸ್ಪರ್ಧೆಯ ಚರ್ಚಾ ವಿಭಾಗದ ಸ್ಪರ್ಧೆಯಲ್ಲಿ ಕೆಎಲ್‌ಇ ಬಿಬಿಎ ಕಾಲೇಜಿನ ವಿದ್ಯಾರ್ಥಿ ಅಭಿಷೇಕ ಗೊಂಬಿ ಪ್ರಥಮ ಸ್ಥಾನ ಪಡೆದಿದ್ದಾನೆ. ಜಿಜಿ ಕಾಲೇಜಿನ ಪ್ರಾಚಾರ್ಯ ಎಸ್. ಎಲ್.ಪಾಟೀಲ ಬಹುಮಾನ ವಿತರಿಸಿ ಗೌರವಿಸಿದರು.

ಹಂತ ಹಂತವಾಗಿ ಹೊಸ ಕಂಬ ಅಳವಡಿಕೆ ಕಾಮಗಾರಿ: ಕುರುಬರ

ಅಳ್ನಾವರ: ಈ ಹಿಂದೆ ಹೆಸ್ಕಾಂ ಇಲಾಖೆಗೆ ಸಂಬಂಧಿಸಿದ ಅನೇಕ ದೂರುಗಳು ಬಂದ ಪ್ರಯುಕ್ತ ಮೇಲಾಧಿಕಾರಿಗಳ ಗಮನಕ್ಕೆ ವಿಷಯ ತಂದು ಸುಮಾರು ರೂ.3 ಕೋಟಿ ವೆಚ್ಚದ ಹೊಸ ವಿದ್ಯುತ್ ತಂತಿ ಹಾಗೂ ಹೊಸ ಕಂಬ ಅಳವಡಿಕೆ ಕಾಮಗಾರಿಯನ್ನು ಹಂತ ಹಂತವಾಗಿ ನಡೆಸಲಾಗುತ್ತಿದೆ ಎಂದು ಪಂಚ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿಯ ತಾಲೂಕಾಧ್ಯಕ್ಷ ವಿನಾಯಕ ಕುರುಬರ ಹೇಳಿದರು.

ತಾಲೂಕಿನ ಕಡಬಗಟ್ಟಿ ಗ್ರಾಮದ ಲಕ್ಷ್ಮೀದೇವಿ ದೇವಸ್ಥಾನದಲ್ಲಿ ಗುರುವಾರ ನಡೆದ ಪಂಚಗ್ಯಾರಂಟಿ ಯೋಜನೆಯ ಪ್ರಗತಿ ಪರಿಶೀಲನಾ ಸಭೆಯಲ್ಲಿ



ಮಾತನಾಡಿದ ಅವರು, ತಾಲೂಕಿನಲ್ಲಿ ಗ್ಯಾರಂಟಿ ಯೋಜನೆ ಸಮರ್ಪಕವಾಗಿ ಅನುಷ್ಠಾನಗೊಂಡಿದೆ. ಗೃಹಲಕ್ಷ್ಮೀ ಯೋಜನೆಯಡಿ ನಿಯಮಿತವಗಿ ಹಣ ಪಾವತಿ ಆಗಿದ್ದು, ಜಿಲ್ಲೆಯಲ್ಲಿಯೇ ನಮ್ಮ ತಾಲೂಕು ಉತ್ತಮ ಪ್ರಗತಿ ಸಾಧಿಸಿದೆ. ಹಳ್ಳಿಗಳಲ್ಲಿ ನಡೆದ ಸಭೆಗಳು ಫಲಪ್ರದವಾಗುತ್ತಿವೆ ಎಂದರು.

ತಾಪಂ ಇಒ ಪ್ರಶಾಂತ ತುರ್ಕಾಣಿ ಮಾತನಾಡಿ, ತಾಂತ್ರಿಕ ಕಾರಣಗಳಿಂದ ಯೋಜನೆಯಿಂದ ಹೊರಗುಳಿದವರನ್ನು ಗುರುತಿಸುವ ಕಾರ್ಯ ನಡೆಯುತ್ತಿದೆ ಎಂದರು. ಪಶುವೈದ್ಯಾಧಿಕಾರಿ ಮತ್ತು ಕಡಬಗಟ್ಟಿ ಗ್ರಾಪಂ ಆಡಳಿತಾಧಿಕಾರಿ ಡಾ.ಸುನಿಲ್ ಬನ್ನಿಗೋಳ, ಪಿಡಿಒ ಆನಂದ ಪಾಟೀಲ, ಶೀಲ್ಪಾ ತರಗಾರ, ಷಣ್ಮುಖ ಸುಳಗೇಕರ, ಹಿರಿಯರಾದ ನಿಂಗಪ್ಪ ಬೇಕ್ವಾಡಕರ, ಸಲೀಂ ತಡಕೋಡ, ಆಸಂಬಿ ಹೊಲ್ತಿಕೋಟಿ, ಕಲ್ಮೇಶ ಬಡಿಗೇರ, ಎಂ.ಕೆ. ಬಾಗವಾನ್, ರಾಜು ಪನ್ನಾಳಕರ, ಶಿವಾನಂದ ಗೋವಿನಕೊಪ್ಪ, ಲಲಿತಾ ಬಡಿಗೇರ ಇದ್ದರು.

ಮಕ್ಕಳಿಗೆ ಸಂಸ್ಕಾರಯುತ ಶಿಕ್ಷಣ ನೀಡುವುದು ಅಗತ್ಯ

ಹುಬ್ಬಳ್ಳಿ: ದೇಶದ ಭವಿಷ್ಯ ಮಕ್ಕಳ ಕೈಯಲ್ಲಿದೆ. ಮಕ್ಕಳಿಗೆ ಸಂಸ್ಕಾರಯುತ ಶಿಕ್ಷಣ ನೀಡುವುದು ನಮ್ಮ ಜವಾಬ್ದಾರಿ ಎಂದು ಕಾಲೇಜಿನ ಕಾರ್ಯದರ್ಶಿ ಡಾ. ಸತ್ಯಮೂರ್ತಿ ಆಚಾರ್ಯ ಹೇಳಿದರು.

ಇಲ್ಲಿನ ಬುಡರಸಿಂಗಿಯ ಕೆಎಸ್‌ಎಸ್ ವಿಜ್ಞಾನ ಹಾಗೂ ವಾಣಿಜ್ಯ ಪದವಿಪೂರ್ವ ಮಹಾವಿದ್ಯಾಲಯದಲ್ಲಿ ನಡೆದ ದ್ವಿತೀಯ ಪಿಯುಸಿಯಲ್ಲಿ ಅತೀ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಸನ್ಮಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿ, ಉತ್ತಮ ಅಂಕಗಳಿಸಲು ವಿದ್ಯಾರ್ಥಿಗಳು ಶ್ರಮಿಸಬೇಕು. ವಿಜ್ಞಾನ ವಿಭಾಗದಲ್ಲಿ 98.50ರಷ್ಟು ಅಂಕ ಪಡೆದು ರಾಜ್ಯಕ್ಕೆ 8ನೇ ರ‍್ಯಾಂಕ್ ಬಂದಿರುವ ಐಶ್ವರ್ಯಾ ರಡ್ಡೇರ ಮತ್ತು ವಾಣಿಜ್ಯ ವಿಭಾಗದಲ್ಲಿ ಶೇ.98ರಷ್ಟು ಅಂಕ ಪಡೆದು ರಾಜ್ಯಕ್ಕೆ 12ನೇ ರ‍್ಯಾಂಕ್ ಬಂದಿರುವ ಪಲಕ ಎಸ್. ರಾವ್ ಅವರ ಸಾಧನೆಗೆ ಸಂತೋಷ ವ್ಯಕ್ತಪಡಿಸಿದರು.

ಕಾಲೇಜಿನ ಖಜಾಂಚಿ ಅನಂತ



ಪದ್ಮನಾಭ ಐತಾಳ ಮಾತನಾಡಿ, ನಮ್ಮ ಸಂಸ್ಥೆಯಲ್ಲಿ ಸ್ವಾಮೀಜಿಯವರ ಆಸೆಯಂತೆ ಗುಣಮಟ್ಟದ ಆಹಾರ ಒಳ್ಳೆಯ ಶಿಕ್ಷಣ ಹಾಗೂ ನುರಿತ ಅನುಭವಿ ಶಿಕ್ಷಕರು ಇರುವುದರಿಂದ ನಮಗೆ ಒಳ್ಳೆಯ ಫಲಿತಾಂಶ ಬಂದಿದೆ ಎಂದರು.

ಕಾಲೇಜಿನ ಜಂಟಿ ಕಾರ್ಯದರ್ಶಿ ಗೋಪಾಲ ಕುಲಕರ್ಣಿ ಮಾತನಾಡಿ, ನಮ್ಮ ಸಂಸ್ಥೆಯಲ್ಲಿ ಸ್ವಾಮೀಜಿಯವರ ಆಸೆಯಂತೆ ನಮ್ಮಲ್ಲಿ ಒಳ್ಳೆಯ ಶಿಕ್ಷಣ ವ್ಯವಸ್ಥೆಯಿದ್ದು ಇದರಿಂದ ನಮಗೆ ರಾಜ್ಯಕ್ಕೆ 8 ನೇ ರ‍್ಯಾಂಕ್ ಬರಲು ಸಹಾಯಕಾರಿಯಾಗಿದೆ. ವಿದ್ಯಾರ್ಥಿಗಳ ಸತತವಾದ ಪರಿಶ್ರಮ ಹಾಗೂ ಉಪನ್ಯಾಸಕರ ಒಳ್ಳೆಯ ಬೋಧನೆಯಿಂದ ಈ ಫಲಿತಾಂಶ ಬಂದಿದೆ ಎಂದರು. ಕಾಲೇಜಿನ ಪ್ರಾಚಾರ್ಯ ಮಹೇಂದ್ರ ಜಿ.ಎ. ಮಾತನಾಡಿ, ನಮ್ಮ ಕಾಲೇಜು ಈ ವರ್ಷ ರಾಜ್ಯಕ್ಕೆ ವಿಜ್ಞಾನ ವಿಭಾಗದಲ್ಲಿ 8ನೇ ರ‍್ಯಾಂಕ್ ಪಡೆದಿರುವುದಕ್ಕೆ ಉಪನ್ಯಾಸಕ ವೃಂದ ಹಾಗೂ ಪಾಲಕರ ಬೆಂಬಲ ಕಾರಣ ಎಂದರು. ಕಾಲೇಜಿನ ಕಾರ್ಯಾಧ್ಯಕ್ಷ ಶ್ರೀಕಾಂತ ಕೆಮ್ತೂರ್ ಹಾಗೂ ಕಾಲೇಜಿನ ಉಪ ಕಾರ್ಯಾಧ್ಯಕ್ಷ ಎ. ಸಿ. ಗೋಪಾಲ, ಕಾಲೇಜಿನ ಜಂಟಿ ಕಾರ್ಯದರ್ಶಿ ಗೋವಿಂದ ಮೈಸೂರ, ಕಾಲೇಜಿನ ಸದಸ್ಯರಾದ ಶ್ರೀಪತಿ ಐತಾಳ, ಶ್ರೀ ಕೃಷ್ಣರಾಜ ಕೆಮ್ತೂರ ಸೇರಿದಂತೆ ಇತರರಿದ್ದರು.

ದುರ್ಘಟನೆಯಿಂದ ನೆಮ್ಮದಿ ಹಾಳು

ಅಣ್ಣಿಗೇರಿ: ತಾಲೂಕಿನ ಬಸಾಪುರ ಗ್ರಾಮದ ಚನ್ನಬಸಪ್ಪ ಮೆಗುಂಡಿ ಅವರ ಬದುಕಿಗೆ ಆಸರೆಯಾಗಿದ್ದ ಆ ಪುಟ್ಟ ಅಂಗಡಿ ಇಂದು ಗ್ಯಾಸ್ ಸಿಲಿಂಡರ್ ಸ್ಫೋಟಕ್ಕೆ ಆಹುತಿಯಾಗಿ, ಸರ್ವಸ್ವವೂ ಸುಟ್ಟು ಭಸ್ಮವಾಗಿರುವ ಸುದ್ದಿ ಕೇಳಿ ಮನಸ್ಸಿಗೆ ತುಂಬಾನೇ ಆಘಾತವಾಯಿತು. ವರ್ಷಗಳ ಕಾಲ ಬೆವರು ಸುರಿಸಿ ಕಟ್ಟಿದ ಆ ಅಂಗಡಿ ಕೇವಲ ನಾಲ್ಕು ಗೋಡೆಗಳಲ್ಲ, ಅದು ಚನ್ನಬಸಪ್ಪನವರ ಸಂಸಾರದ ಜೀವನಾಡಿ. ಒಂದು ಕ್ಷಣದ ದುರ್ಘಟನೆ ಇಡೀ ಕುಟುಂಬದ ನೆಮ್ಮದಿಯನ್ನು ಕಿತ್ತುಕೊಂಡಿದೆ ಎಂದು ಮಾಜಿ ಸಚಿವ ಶಂಕರ್ ಪಾಟೀಲ್ ಮುನೆನಕೊಪ್ಪ ಹೇಳಿದರು.

ಚನ್ನಬಸಪ್ಪನವರ ಅವರನ್ನು ಭೇಟಿ ಮಾಡಿ ಮಾತನಾಡಿದ ಅವರು, ಹೋದದ್ದು ಹೋಗಲಿ, ಜೀವ ಉಳಿದಿದ್ದೇ ಸದ್ಯದ ಸಮಾಧಾನ. ಮರಳಿ ಬದುಕು ಕಟ್ಟಿಕೊಳ್ಳಲು ನಾವಿದ್ದೇವೆ ಎಂಬ ಭರವಸೆ ನೀಡರಲ್ಲದೇ ವೈಯಕ್ತಿಕವಾಗಿ ಅವರಿಗೆ ಆರ್ಥಿಕ ಸಹಾಯ ಮಾಡುವ ಭರವಸೆ ನೀಡಿದರು. ಆನಂದ್ ಚವಡಿ, ಊರಿನ ಹಿರಿಯರು ಮತ್ತು ಸಂತ್ರಸ್ತರು ಉಪಸ್ಥಿತರಿದ್ದರು.



ಡಾ. ಬಿ.ಆರ್. ಅಂಬೇಡ್ಕರ್ ಜಯಂತಿ ಅದ್ದೂರಿ

ಹುಬ್ಬಳ್ಳಿ: ಕರ್ನಾಟಕ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಹುಬ್ಬಳ್ಳಿ ಕರ್ನಾಟಕ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಹುಬ್ಬಳ್ಳಿ ಹಾಗೂ ಕೆಂ.ಎಂ.ಸಿ.ಆರ್.ಐ. ಎಸ್ಸಿ/ ಎಸ್ಟಿ ನೌಕರರ ಅಭಿವೃದ್ಧಿ ಸಂಘ ಇವರ ಸಂಯುಕ್ತಾಶ್ರಯದಲ್ಲಿ ಡಾ. ಬಿ. ಆರ್. ಅಂಬೇಡ್ಕರ್ ಅವರ 135 ನೇ ಜಯಂತಿ ಆಚರಣೆಯನ್ನು ಕೆಂ.ಎಂ.ಸಿ.ಆರ್ .ಐ. ಸಂಸ್ಥೆಯಲ್ಲಿ ವಿಜೃಂಭಣೆಯಿಂದ ಆಚರಿಸಲಾಯಿತು.

ಅಧ್ಯಕ್ಷತೆಯಯನ್ನು ಕೆಂ. ಎಂ.ಸಿ.ಆರ್.ಐ. ಸಂಸ್ಥೆಯ ನಿರ್ದೇಶಕ ಡಾ. ಈಶ್ವರ ಆರ್. ಹೊಸಮನಿ ವಹಿಸಿದ್ದರು. ವಿಶೇಷ ಆಮಂತ್ರಿತರಾಗಿ ಕಾನೂನು ಮಹಾವಿದ್ಯಾಲಯ, ಕರ್ನಾಟಕ ವಿಶ್ವವಿದ್ಯಾಲಯ ಪ್ರಾಂಶುಪಾಲೆ ಡಾ. ಮಂಜುಳಾ ಎಸ್. ಆರ್.



ಇವರು ಆಗಮಿಸಿ ಡಾ. ಬಿ. ಆರ್. ಅಂಬೇಡ್ಕರ್ ಅವರ ಬಗ್ಗೆ ವಿಶೇಷ ಉಪನ್ಯಾಸ ನೀಡಿದರು. ಶಿವಾನಂದ ಚಲವಾದಿ ಎ.ಸಿ.ಪಿ. ಹಾಗೂ ಮುರುಗೇಶ ಚನ್ನಣ್ಣನವರ ಸಿ.ಪಿ.ಐ. ವಿದ್ಯಾನಗರ ಹುಬ್ಬಳ್ಳಿ ಮತ್ತು ಡಾ. ಸೂರ್ಯಕಾಂತ ಕಲ್ಲೂರಾಯ ಪ್ರಾಂಶುಪಾಲರು, ಮುಖ್ಯ ಆಡಳಿತಾಧಿಕಾರಿ ರಮೇಶ ಕಳಸದ, ಡಾ. ಈಶ್ವರ ಹಸಬಿ, ಪಿ.ಎಂ.ಎಸ್. ಎಸ್.ವೈ. ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ. ಎಸ್. ರಾಜಾಶಂಕರ, ಪ್ರಾಧ್ಯಾಪಕಿ ಡಾ. ಜಾನಕಿ ತೊರವಿ, ಆವರಣಾಧಿಕಾರಿ ಸಿ. ಜಿ. ಜಿನಗಾ, ಪ್ರಾಧ್ಯಾಪಕ ಡಾ. ಕೇಶವ ಅಬ್ಬಯ್ಯ, ಪದ್ಮಾವತಿ ಪಿ., ಡಾ. ಅನ್ನಪೂರ್ಣಾ ಘಂಟಿಸಿದ್ದಪ್ಪನವರ ಪ್ರಾಂಶುಪಾಲರು, ನರ್ಸಿಂಗ್ ಮಹಾವಿದ್ಯಾಲಯ ಮತ್ತು ಕಾಶೀನಾಥ ಹವಳಪ್ಪ ಅಧ್ಯಕ್ಷರು ಎಸ್ಸಿ/ ಎಸ್ಟಿ ನೌಕರರ ಅಭಿವೃದ್ಧಿ ಸಂಘ, ಕೆಂ. ಎಂ.ಸಿ.ಆರ್.ಐ. ಹುಬ್ಬಳ್ಳಿ ಇವರು ಉಪಸ್ಥಿತರಿದ್ದರು. ಶಿವಾನಂದ ಹೊನಕೇರಿ ನಿರೂಪಿಸಿದರು. ವಿಜಯ ಪಟ್ಟೇದ ಸ್ವಾಗತಿಸಿದರು. ಬೋರಯ್ಯ ಎ.ಎಂ. ವಂದಿಸಿದರು.

ಹುಬ್ಬಳ್ಳಿ
ಶುಕ್ರವಾರ, 17 ಏಪ್ರಿಲ್ 2026
ಸಂಪುಟ 16, ಸಂಚಿಕೆ 23, ಪುಟಗಳು 14
■ಹುಬ್ಬಳ್ಳಿ ■ಬೆಂಗಳೂರು ■ಮಂಗಳೂರು ■ಶಿವಮೊಗ್ಗ ₹5
RNI No.KARKAN/2011/64413
hosadigantha.com
epaper.hosadigantha.com
Hosadigantha Digital

ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಉಕ್ರೇನ್ ಮೇಲೆ ರಷ್ಯಾ ದಾಳಿ: 16 ಸಾವು | 02
ಶಾಂತಿ ಮಾತುಕತೆ ಇನ್ನೂ ಅನಿಶ್ಚಿತ | 02
ರಾಜ್ಯಸಭಾ ಸದಸ್ಯರಾಗಿ ನಿತಿನ್ ಪ್ರಮಾಣ | 02

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಅಮಾವಾಸ್ಯೆ, ನಕ್ಷತ್ರ: ರೇವತಿ

ದಿನದ ಮಾತು

ಬರೇ ಬಯಕೆಗಳಿಂದ ಕಾರ್ಯಗಳು ಸಿದ್ಧಿಸುವುದಿಲ್ಲ, ಅವು ಪ್ರಯತ್ನದಿಂದ ಮಾತ್ರ ಸಿದ್ಧಿಸುತ್ತವೆ.
▲ಲಾಮೋತ್ಸೆ

ಅಮೆರಿಕದ ದ್ವಂದ್ವ ನಿಲುವೇ ಬಿಕ್ಕಟ್ಟುಗಳಿಗೆ ಕಾರಣ

ಲೇಖನ
•ಸುಬ್ರಹ್ಮಣ್ಯ ಎನ್.
•ಪುಟ ೬

ಕಿರುಸುದ್ದಿ

ಭೀಕರ ಅಪಘಾತ: ಎಂಟು ಮಂದಿ ಸಾವು

•**ರಾಯಚೂರು:** ಬುಲೆರೋ ಹಾಗೂ ಫ್ಲೈಯಾಶ್ ಟ್ಯಾಂಕರ್ ಮುಖಾಮುಖಿ ಡಿಕ್ಕಿಯಾಗಿ ಮಂತ್ರಾಲಯದ ರಾಘವೇಂದ್ರ ಸ್ವಾಮಿಗಳ ದರ್ಶನಕ್ಕೆ ತೆರಳುತ್ತಿದ್ದ ಹಾಸನ, ಚಿಕ್ಕಮಗಳೂರು ಮೂಲದ ಎಂಟು ಜನರು ಸ್ಥಳದಲ್ಲೇ ಮೃತಪಟ್ಟು, ಇತರೆ ಎಂಟು ಜನ ಗಂಭೀರ ಗಾಯಗೊಂಡ ಘಟನೆ ಬುಧವಾರ ನಸುಕಿನ ಜಾವ ಸಂಭವಿಸಿದೆ. ಈ ಘಟನೆ ಆಂಧ್ರ ಪ್ರದೇಶದ ಕರ್ನೂಲ್ ಜಿಲ್ಲೆಯ ಮಂತ್ರಾಲಯ ಬಳಿಯ ಚಿಲಕನಡೋಣ ಬಳಿ ಸಂಭವಿಸಿದೆ. ಘಟನೆ ಸಂಬಂಧ ತೀವ್ರ ಸಂತಾಪ ಸೂಚಿಸಿರುವ ಪ್ರಧಾನಿ ಮೋದಿಯವರು, ಮೃತರ ಕುಟುಂಬಕ್ಕೆ ತಲಾ 2 ಲಕ್ಷ ರೂ. ಹಾಗೂ ಗಾಯಾಳುಗಳಿಗೆ ತಲಾ 50 ಸಾವಿರ ರೂ. ಪರಿಹಾರ ಘೋಷಿಸಿದ್ದಾರೆ.
•ಪುಟ ೫

ಮಧ್ಯಪ್ರಾಚ್ಯಕ್ಕೆ ಅಮೆರಿಕದ ಹೆಚ್ಚುವರಿ ಸೈನ್ಯ ರವಾನೆ
•ಪುಟ ೭

ಹಿಜ್ಬೊಲ್ಲಾ ಡ್ರೋನ್ ತಡೆದ ಇಸ್ರೇಲ್ ಮಿಸೈಲ್ ದೋಣಿ
•ಪುಟ ೭

ಉದ್ವಿಗ್ನತೆಯಿಂದ ಎಲ್ಲಾ ರಾಷ್ಟ್ರಗಳ ಮೇಲೆ ಪರಿಣಾಮ
•ಪುಟ ೭

ಮುಸಲ್ಮಾನ ಸ್ತ್ರೀಯರಿಗೆ ಸಮಾನ ಹಕ್ಕಿಗೆ ಮನವಿ
•ಪುಟ ೭

ಮಹಿಳಾ ಕಲ್ಯಾಣಕ್ಕೆ ವಿಜಯ್ ಆದ್ಯತೆ
•ಪುಟ ೭

ಧರ್ಮಾಧಾರಿತ ಮೀಸಲಾತಿ ಅಸಾಂವಿಧಾನಿಕ: ಶಾ
•ಪುಟ ೭

ತೃತೀಯ ಭಾಷೆಗೆ ಗ್ರೇಡ್: ಹೈಕೋರ್ಟ್ ತಡೆ
•ಪುಟ ೫

ಪೂರೈಕೆ ಕುಸಿತ: ಕಾಫಿ ಬೆಲೆ ಮತ್ತೆ ಏರಿಕೆ
•ಪುಟ ೫

ಕ್ಷೇತ್ರ ಮರುವಿಂಗಡಣೆಯಲ್ಲಿ ಯಾವುದೇ ರಾಜ್ಯಕ್ಕೆ ಅನ್ಯಾಯವಾಗಲ್ಲ
ಮೀಸಲಾತಿ ವಿರೋಧಿಗಳನ್ನು ಮಹಿಳೆಯರು ಕ್ಷಮಿಸಲ್ಲ: ಮೋದಿ

ರಾಜ್ಯಗಳಿಗಿಲ್ಲ ತಾರತಮ್ಯ

•**ಹೊಸದಿಲ್ಲಿ:** ಯಾವುದೇ ರಾಜ್ಯ– ದೊಡ್ಡದಾಗಲಿ ಸಣ್ಣದಾಗಲಿ, ಉತ್ತರವಾಗಲಿ ದಕ್ಷಿಣವಾಗಲಿ, ಪೂರ್ವವಾಗಲಿ ಪಶ್ಚಿಮವಾಗಲಿ– ಮಹಿಳಾ ಮೀಸಲು ಕಾಯ್ದೆಯ ಜಾರಿಗೆ ಸಂಬಂಧಿಸಿದ ಕ್ಷೇತ್ರಗಳ ಮರು ವಿಂಗಡಣೆ (ಡಿಲಿಮಿಟೇಶನ್) ಪ್ರಕ್ರಿಯೆಯಲ್ಲಿ ಭೇದಭಾವಕ್ಕೆ ಒಳಪಡುವುದಿಲ್ಲ ಎಂದು ಪ್ರಧಾನಿ ನರೇಂದ್ರ ಮೋದಿ ಗುರುವಾರ ಸ್ಪಷ್ಟಪಡಿಸಿದ್ದಾರೆ.

2029ರಲ್ಲಿ ಮಹಿಳಾ ಮೀಸಲಾತಿ ಜಾರಿಗೆ ತರುವುದನ್ನು ಅವರು ದೃಢವಾಗಿ ಬೆಂಬಲಿಸಿ, ಈ ಕ್ರಮಕ್ಕೆ ವಿರೋಧಿಸುವವರನ್ನು ದೇಶದ ಮಹಿಳೆಯರು ಕ್ಷಮಿಸುವುದಿಲ್ಲ ಎಂದು ಎಚ್ಚರಿಸಿದರು.

ಲೋಕಸಭೆಯಲ್ಲಿ ಮಹಿಳಾ ಮೀಸಲು ಕಾಯ್ದೆಗೆ ತಿದ್ದುಪಡಿ ಮಾಡಲು ಮತ್ತು ಡಿಲಿಮಿಟೇಶನ್ ಆಯೋಗವನ್ನು ಸ್ಥಾಪಿಸಲು ತರಲಾದ ಮೂರು ಮಸೂದೆಗಳ ಕುರಿತು ನಡೆದ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿದ ಮೋದಿಯವರು, ಯಾವುದೇ ರಾಜಕೀಯ ಪಕ್ಷ ಈ ಕಾಯ್ದೆಗೆ ವಿರೋಧಿಸಿದರೆ, ಅದರಿಂದ ತಮಗೆ ರಾಜಕೀಯ ಲಾಭವಾಗುವುದು ಸಹಜ ಎಂದು ಹೇಳಿದರು. ಈ ಕ್ರಮದಲ್ಲಿ ಮೋದಿಗೆ ರಾಜಕೀಯ ಸ್ವಾರ್ಥ ಇದೆ ಎಂದು ಕೆಲವರು ಭಾವಿಸುತ್ತಾರೆ. ನೀವು ಇದಕ್ಕೆ ವಿರೋಧಿಸಿದರೆ, ನನಗೆ ರಾಜಕೀಯ ಲಾಭವಾಗುವುದು ಸಹಜ. ಆದರೆ ನೀವು ಜೊತೆಯಾಗಿದ್ದರೆ, ಯಾರಿಗೂ ರಾಜಕೀಯ ಲಾಭವಾಗುವುದಿಲ್ಲ. ನಮಗೆ ಕ್ರೆಡಿಟ್ ಬೇಡ ಎಂದು ಅವರು ಹೇಳಿದರು.



ಕೆಲವು ರಾಜ್ಯಗಳು, ವಿಶೇಷವಾಗಿ ದಕ್ಷಿಣ ಮತ್ತು ಪೂರ್ವ ಭಾಗದ ರಾಜ್ಯಗಳು, ಡಿಲಿಮಿಟೇಶನ್ ಪ್ರಕ್ರಿಯೆಯ ಬಗ್ಗೆ ಹೊಂದಿರುವ ಆತಂಕಗಳನ್ನು ನಿವಾರಿಸಲು ಯಾವುದೇ ರಾಜ್ಯಕ್ಕೂ ಅನ್ಯಾಯವಾಗುವುದಿಲ್ಲ ಮತ್ತು ಯಾರಿಗೂ ಭೇದಭಾವ ಇರಲ್ಲ ಎಂದರು.
ಪುಟ ೪



> ಶಾಸಕಾಂಗಗಳಲ್ಲಿ ಮೀಸಲಾತಿ ಮಹಿಳೆಯರ ಹಕ್ಕು ಮತ್ತು ಅದು ಯಾರು ನೀಡುವ ಉಡುಗೊರೆಯಲ್ಲ. ಈ ಹಕ್ಕುಗಳನ್ನು ನೀಡಲು ಈ ಹಿಂದೆ ವಿರೋಧಿಸಿದವರು ಅದರ ಪರಿಣಾಮಗಳನ್ನು ಎದುರಿಸಿದ್ದಾರೆ. ಈ ಕಾಯ್ದೆಯನ್ನು ವಿರೋಧಿಸುವ ರಾಜಕೀಯ ಪಕ್ಷಗಳನ್ನು ಮಹಿಳೆಯರು ಕ್ಷಮಿಸುವುದಿಲ್ಲ.
> ■ ನರೇಂದ್ರ ಮೋದಿ, ಪ್ರಧಾನಿ

ಇಂದು ಸಂಜೆ 4 ಗಂಟೆಗೆ ಮತಕ್ಕೆ

ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಮಹಿಳಾ ಮೀಸಲಾತಿ ಸೇರಿದಂತೆ ಒಟ್ಟು ಮೂರು ಪ್ರಮುಖ ಮಸೂದೆಗಳನ್ನು ಲೋಕಸಭೆಯಲ್ಲಿ ಮಂಡಿಸಿದ್ದು, ಸದನದಲ್ಲಿ ಈ ಮಸೂದೆಗಳ ಚರ್ಚೆಗೆ 15 ಗಂಟೆ ಸಮಯ ಮೀಸಲಿರಿಸಲಾಗಿದೆ ಎಂದು ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ತಿಳಿಸಿದ್ದಾರೆ. ಸದಸ್ಯರು ಹೆಚ್ಚಿನ ಸಮಯಕ್ಕೆ ಒತ್ತಾಯಿಸಿದಲ್ಲಿ, ಸ್ಪೀಕರ್ ಅವಧಿಯನ್ನು 18 ಗಂಟೆಗಳವರೆಗೆ ವಿಸ್ತರಿಸುವ ಸಾಧ್ಯತೆಯೂ ಇದೆ ಎಂದರು. ಸದನದ ಕಲಾಪ ಮಧ್ಯರಾತ್ರಿವರೆಗೂ ಮುಂದುವರಿಯುವ ಸಾಧ್ಯತೆ ಇದೆ. ಶುಕ್ರವಾರ ಸಂಜೆ 4 ಗಂಟೆಗೆ ಮಸೂದೆಗಳ ಅಂಗೀಕಾರಕ್ಕಾಗಿ ಮತದಾನ ನಡೆಯಲಿದೆ ಎಂದು ಅವರು ಸ್ಪಷ್ಟಪಡಿಸಿದರು. ಈ ವಿಶೇಷ ಅಧಿವೇಶನದಲ್ಲಿ ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಲ್ಲಿ ಮಹಿಳೆಯರಿಗೆ ಶೇ. 33ರಷ್ಟು ಮೀಸಲಾತಿ ಕಲ್ಪಿಸುವ ಮಸೂದೆ, ಕ್ಷೇತ್ರ ಪುನರ್‌ವಿಂಗಡಣೆ ಪ್ರಕ್ರಿಯೆಗೆ ಸಂಬಂಧಿಸಿದ ಕಾಯ್ದೆ ಸೇರಿದಂತೆ ಮೂರು ಮಸೂದೆಗಳನ್ನು ಮಂಡಿಸಲಾಗಿದೆ.
ಪುಟ ೪

ಮಸೂದೆಗಳ ಕುರಿತ ಚರ್ಚೆಗೆ 15 ಗಂಟೆ ನಿಗದಿ

ತಿದ್ದುಪಡಿಗಳು ಮತ್ತು ಮಹಿಳಾ ಮೀಸಲಾತಿ

ಲೋಕಸಭೆಯು ಗುರುವಾರ ಮೂರು ನಿರ್ದಿಷ್ಟ ಮಸೂದೆಗಳ ಬಗ್ಗೆ ಚರ್ಚೆ ನಡೆಸಿತು: ಸಂವಿಧಾನದ (131ನೇ ತಿದ್ದುಪಡಿ) ಮಸೂದೆ 2026, ಕೇಂದ್ರಾಡಳಿತ ಪ್ರದೇಶಗಳ ಕಾನೂನುಗಳ (ತಿದ್ದುಪಡಿ) ಮಸೂದೆ 2026, ಮತ್ತು ಮರುವಿಂಗಡಣೆ ಮಸೂದೆ 2026. ಈ ಪ್ರಸ್ತಾವನೆಗಳ ಅನ್ವಯ ಲೋಕಸಭೆಯ ಒಟ್ಟು ಬಲವನ್ನು 815 ಸ್ಥಾನಗಳಿಗೆ ಹೆಚ್ಚಿಸಲು ನಿರ್ಧರಿಸಲಾಗಿದೆ. ಇದರಲ್ಲಿ ಒಟ್ಟು 272 ಸ್ಥಾನಗಳನ್ನು ಅಂದರೆ ಸದನದ ಶೇ.33ರಷ್ಟನ್ನು ಮಹಿಳೆಯರಿಗೆ ಮೀಸಲಿಡಲಾಗುವುದು.

ಒಕ್ಕೂಟ ವ್ಯವಸ್ಥೆಯ ಮೇಲೆ ದಾಳಿ: ವಿಪಕ್ಷ
•ಪುಟ ೪

ಮಹಿಳಾ ಮೀಸಲು: ಸಮಾನ ಪ್ರತಿನಿಧಿತ್ವದ ದಿಕ್ಕಿನಲ್ಲಿ ದಿಟ್ಟ ಹೆಜ್ಜೆ
ಸಂಪಾದಕೀಯ •ಪುಟ ೬

598 ಗ್ರಾಪಂಗಳಲ್ಲಿದೆ ಕುಡಿವ ನೀರಿನ ಸಮಸ್ಯೆ

ಎಚ್ಚರಿಕೆ ವಹಿಸಲು ಡಿಸಿಗಳಿಗೆ ಸಿಎಂ ಸೂಚನೆ



•**ಬೆಂಗಳೂರು:** ರಾಜ್ಯದಲ್ಲಿ ಬೇಸಿಗೆಯಲ್ಲಿ ಕುಡಿಯುವ ನೀರಿನ ಸಮಸ್ಯೆಯನ್ನು ಎದುರಿಸಬಹುದಾದ 213 ತಾಲೂಕುಗಳನ್ನು ಹಾಗೂ 2410 ಗ್ರಾಮ ಪಂಚಾಯತ್‌ಗಳನ್ನು ಗುರುತಿಸಲಾಗಿದೆ. ಪ್ರಸ್ತುತ 114 ತಾಲೂಕುಗಳ 598 ಗ್ರಾಮ ಪಂಚಾಯತ್‌ಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾಗಲಿದ್ದು, ಜಿಲ್ಲಾಧಿಕಾರಿಗಳು ಯಾವುದೇ ತೊಂದರೆ ಆಗದಂತೆ ಎಚ್ಚರ ವಹಿಸಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚಿಸಿದ್ದಾರೆ.



ಗುರುವಾರ ವಿಧಾನಸೌಧ ಸಭಾಂಗಣದಲ್ಲಿ ನಡೆದ ಗ್ರಾಮೀಣ ಹಾಗೂ ಪಟ್ಟಣ ಪ್ರದೇಶಗಳಲ್ಲಿನ ಕುಡಿಯುವನೀರುಪೂರೈಕೆಕುರಿತಾಗಿಜಿಲ್ಲಾಉಸ್ತುವಾರಿ ಸಚಿವರು, ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಸಭೆಯಲ್ಲಿ ಸೂಚನೆ ನೀಡಿದರು. ಟ್ಯಾಂಕರ್‌ಗಳ ಮೂಲಕ 137 ಗ್ರಾಮಗಳಿಗೆ ಒಟ್ಟು 129 ಟ್ಯಾಂಕರ್‌ಗಳ ಮೂಲಕ ಕುಡಿಯುವ ನೀರು ಸರಬರಾಜು ಮಾಡಲಾಗುತ್ತಿದೆ. 585 ಖಾಸಗಿ ಬೋರ್‌ವೆಲ್‌ಗಳನ್ನು ಬಾಡಿಗೆಗೆ ಪಡೆಯಲಾಗಿದ್ದು, ಇದರ ಮೂಲಕ 515 ಗ್ರಾಮಗಳಿಗೆ ನೀರು ಪೂರೈಕೆಮಾಡಲಾಗುತ್ತಿರುವ ಬಗ್ಗೆ ಮುಖ್ಯಮಂತ್ರಿಗಳು ಮಾಹಿತಿ ಪಡೆದರು.
ಪುಟ ೪

ಗ್ರಾಮಗಳನ್ನು ಗುರುತಿಸಿ

ಕಲಬುರಗಿ ಜಿಲ್ಲೆಯ 147 ಗ್ರಾಮ ಪಂಚಾಯತ್, ಬಾಗಲಕೋಟೆ 114, ಬೆಳಗಾವಿಯ 127, ಚಿಕ್ಕಮಗಳೂರಿನ 115, ಹಾವೇರಿಯ 138, ಮಂಡ್ಯ 130, ತುಮಕೂರಿನ 141 ಹಾಗೂ ಉತ್ತರಕನ್ನಡ ಜಿಲ್ಲೆಯ 125 ಗ್ರಾಮ ಪಂಚಾಯತ್‌ಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾಗಬಹುದೆಂದು ಗುರುತಿಸಲಾಗಿದೆ ಎಂದು ಸಭೆಯಲ್ಲಿ ತಿಳಿಸಲಾಯಿತು.

ಅನುದಾನದ ಕೊರತೆಯಿಲ್ಲ

ಸಾರ್ವಜನಿಕರಿಗೆ ನೆರಳಿನ ವ್ಯವಸ್ಥೆ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಬೇಕು. ಕುಡಿಯುವ ನೀರು ಪೂರೈಕೆಯನ್ನು ಖಾತ್ರಿಪಡಿಸಲು ಯಾವುದೇ ಅನುದಾನದ ಕೊರತೆಯಿಲ್ಲ. ಜಿಲ್ಲಾಧಿಕಾರಿಗಳ ವರದಿ ಆಧಾರದಲ್ಲಿ ಅಗತ್ಯ ಅನುದಾನವನ್ನು ಒದಗಿಸಲು ಹಣಕಾಸು ಇಲಾಖೆಗೆ ಈಗಾಗಲೇ ಸೂಚನೆ ನೀಡಲಾಗಿದೆ ಎಂದರು.

ರೈತರಿಗೆ ರಸಗೊಬ್ಬರ ಲಭ್ಯತೆ ಖಾತ್ರಿಪಡಿಸಿ
•ಪುಟ ೪

24ಕ್ಕೆ ವಿಶೇಷ ಸಂಪುಟ ಸಭೆ ನಡೆಸಲು ನಿರ್ಧಾರ

ಒಳಮೀಸಲಾತಿ ವರದಿ ಅಧ್ಯಯನಕ್ಕಾಗಿ ಸಮಿತಿ

•**ಬೆಂಗಳೂರು:** ಒಳಮೀಸಲಾತಿ ಜಾರಿಗೆ ಸಂಬಂಧಪಟ್ಟಂತೆ ವರದಿ ಅಧ್ಯಯನಕ್ಕೆ ಮುಖ್ಯ ಕಾರ್ಯದರ್ಶಿ ನೇತೃತ್ವದಲ್ಲಿ ತಾಂತ್ರಿಕ ಸಮಿತಿ ರಚನೆ ಮಾಡಲು ಸಚಿವ ಸಂಪುಟ ನಿರ್ಧರಿಸಿದ್ದು, ಈ ಸಂಬಂಧ ಏ.24 ರಂದು ವಿಶೇಷ ಸಂಪುಟ ಸಭೆ ನಡೆಸಲು ತೀರ್ಮಾನ ಕೈಗೊಳ್ಳಲಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ಸಂಬಂಧ ತೀರ್ಮಾನಕೈಗೊಳ್ಳಲಾಗಿದ್ದು, ಒಳಮೀಸಲಾತಿ ಜಾರಿಗೆ ಎದುರಾಗಿರುವ ಕೆಲವು ತಾಂತ್ರಿಕ ಸಮಸ್ಯೆಗಳನ್ನು ಅಧ್ಯಯನ ಮಾಡಿ, ಏ.24ರ ಒಳಗೆ ವರದಿ ಸಲ್ಲಿಸಲು ಮುಖ್ಯಕಾರ್ಯದರ್ಶಿಗೆ ಸೂಚಿಸಲಾಗಿದೆ.

ಅಲ್ಲದೇ, ಕಳೆದ ಅಧಿವೇಶನದಲ್ಲಿ ಮಂಡನೆಯಾಗಿದ್ದ ರೋಹಿತ್ ವೇಮುಲಾ ವಿಧೇಯಕಕ್ಕೆ ಗುರುವಾರ ನಡೆದ ಸಂಪುಟದಲ್ಲಿ ಅನುಮೋದನೆ ನೀಡಲಾಗಿದ್ದು, ಇದು ಕಾಯ್ದೆಯಾಗಿ ಜಾರಿಯಾಗಲಿದೆ ಎಂದು ಎಂದು ಕಾನೂನು ಸಚಿವ ಎಚ್.ಕೆ. ಪಾಟೀಲ್ ತಿಳಿಸಿದರು. ಬಾಗಲಕೋಟೆ ಜಿಲ್ಲೆಯ ಇಳಕಲ್ ನಗರಸಭೆ, ಹುನಗುಂದ ಪುರಸಭೆ ಮತ್ತು ಕೊಪ್ಪಳ ಜಿಲ್ಲೆಯ ಯಲಬುರ್ಗಾ ಪಟ್ಟಣ ಪಂಚಾಯಿತಿ, ಕಲಬುರಗಿ ಜಿಲ್ಲೆಯ ಉದನೂರು, ನಾಗನಹಳ್ಳಿ ಗ್ರಾಮ ಮತ್ತು ಮಾಲಗತ್ತಿ ಗ್ರಾಮದ ವ್ಯಾಪ್ತಿಯಲ್ಲಿ ನಾಗರಿಕ ಸೌಲಭ್ಯಕ್ಕೆ ಮೀಸಲಿರಿಸಿರುವ ನಿವೇಶನಗಳನ್ನು ಕಾಂಗ್ರೆಸ್ ಭವನ ನಿರ್ಮಾಣಕ್ಕೆ ಕಾಂಗ್ರೆಸ್ ಭವನ ಟ್ರಸ್ಟ್ ಇವರಿಗೆ ಗುತ್ತಿಗೆ ಆಧಾರದ ಮೇಲೆ ನೀಡಲು ಸಂಪುಟದಲ್ಲಿ ತೀರ್ಮಾನ ಕೈಗೊಳ್ಳಲಾಗಿದೆ ಎಂದು ತಿಳಿಸಿದರು.
ಪುಟ ೪



ಜೆಜೆಎಂ 2.0 ಅನುಷ್ಠಾನಕ್ಕೆ ಒಡಂಬಡಿಕೆ ಮಾಡಲು ಅಸ್ತು

ಜಲ್ ಜೀವನ್ ಮಿಷನ್ ವಿಸ್ತರಿತ ಹಂತದಲ್ಲಿ ಪುನರ್ ರಚಿತ ಜಲ ಜೀವನ್ ಮಿಷನ್ 2.0 ಅನ್ನು ಅನುಷ್ಠಾನಿಸಲು ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರದ ನಡುವೆ ತಿಳುವಳಿಕೆ ಒಡಂಬಡಿಕೆ ಮಾಡಿಕೊಳ್ಳಲು ಸಚಿವ ಸಂಪುಟ ಸಮ್ಮತಿಸಿದೆ ಎಂದು ಸಚಿವ ಎಚ್.ಕೆ. ಪಾಟೀಲ್ ತಿಳಿಸಿದರು.
ಪುಟ ೪

ನಾಸಿಕ್ ಟಿಸಿಎಸ್ ಎಚ್‌ಆರ್ ಮ್ಯಾನೇಜರ್ ವಿರುದ್ಧ ತೀವ್ರ ತನಿಖೆ

ನಿದಾಗೆ ಉಗ್ರ ವೈದ್ಯೆ ಶಾಹೀನ್ ಸಂಪರ್ಕ

•**ಹೊಸದಿಲ್ಲಿ:** ನಾಸಿಕ್ ಟಿಸಿಎಸ್ ಬಿಪಿಒ ಘಟಕದಲ್ಲಿ ನಡೆದ ಲೈಂಗಿಕ ಕಿರುಕುಳ ಮತ್ತು ಬಲವಂತದ ಮತಾಂತರ ಪ್ರಕರಣದ ಪ್ರಮುಖ ಆರೋಪಿ ಎಚ್‌ಆರ್ ಮ್ಯಾನೇಜರ್ ನಿದಾ ಖಾನ್‌ಗೂ ಕೆಂಪು ಕೋಟೆಕಾರುಸ್ಫೋಟ ಹಿಂದಿನ ವೈಟ್‌ಕಾಲರ್ ಭಯೋತ್ಪಾದಕಿ ಡಾ.ಶಾಹೀನ್ ಶಾಹಿದ್‌ಗೂ ಸಂಪರ್ಕವಿತ್ತೆಂಬ ಬಗ್ಗೆ ಭಾರೀ ಚರ್ಚೆ ನಡೆಯುತ್ತಿದೆ.



ಕೆಲವು ಸಾಮಾಜಿಕ ಜಾಲತಾಣ ಪೋಸ್ಟ್‌ಗಳ ಪ್ರಕಾರ, ನಿದಾ ಖಾನ್ ಮತ್ತು ಡಾ.ಶಾಹೀನ್ ಶಾಹಿದ್ ದಿಲ್ಲಿಯಲ್ಲಿ ಹಲವು ಬಾರಿ ಭೇಟಿಯಾಗಿದ್ದರು. ಕೆಂಪು ಕೋಟೆ ಸಮೀಪದಲ್ಲಿ ಸಂಭವಿಸಿದ ಆತ್ಮಾಹುತಿ ಕಾರು ಬಾಂಬ್ ಸ್ಫೋಟವು ರಾಷ್ಟ್ರೀಯ ಭದ್ರತೆಗೆ ಅಪಾಯಕಾರಿ ಆಗಿತ್ತು. ನಾಸಿಕ್ ಪ್ರಕರಣವು ಉದ್ಯೋಗ ಸ್ಥಳದಲ್ಲಿನ ಲೈಂಗಿಕ ಕಿರುಕುಳ, ಅತ್ಯಾಚಾರ, ಬಲವಂತದ ಮತಾಂತರಕ್ಕೆ ಯತ್ನಿಸಿದ ಆರೋಪವಿದೆ.
ಪುಟ ೪

ಟಿಸಿಎಸ್ ನಾಸಿಕ್ ಘಟಕ ಸ್ಥಗಿತ

ಲೈಂಗಿಕ ದೌರ್ಜನ್ಯ, ಕಿರುಕುಳ ಮತ್ತು ಬಲವಂತದ ಮತಾಂತರ ಆರೋಪಗಳನ್ನು ಒಳಗೊಂಡಂತೆ ಪ್ರಕರಣದಲ್ಲಿ ಈಗಾಗಲೇ 9 ಎಫ್‌ಐಆರ್‌ಗಳು ದಾಖಲಾಗಿದ್ದು, 6 ಬಂಧನಗಳೂ ನಡೆದಿರುವ ಹಿನ್ನೆಲೆಯಲ್ಲಿ ಟಾಟಾ ಕನ್ಸಲ್ಟೆನ್ಸಿ ಸರ್ವಿಸಸ್ (ಟಿಸಿಎಸ್) ತನ್ನ ನಾಸಿಕ್ ಬಿಪಿಒ ಘಟಕದ ಕಾರ್ಯಾಚರಣೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಿದೆ. ಕಂಪನಿ ಎಲ್ಲಾ ಸಿಬ್ಬಂದಿಯನ್ನು ವರ್ಕ್ ಫ್ರಮ್ ಹೋಮ್ ವ್ಯವಸ್ಥೆಗೆ ವರ್ಗಾಯಿಸಿದ್ದು, ತನಿಖೆ ನಡೆಯುತ್ತಿರುವ ನಡುವೆಯೇ ಈ ಕ್ರಮ ಕೈಗೊಳ್ಳಲಾಗಿದೆ.

ಬಲವಂತದ ಮತಾಂತರ ಭಯೋತ್ಪಾದನೆಗೆ ಸಮ? •ಪುಟ ೭

ಪಾಕ್‌ನಲ್ಲಿ ಲಷ್ಕರೆ ಸಂಸ್ಥಾಪಕ, ಉಗ್ರಗಾಮಿ ಹಮ್ಜಾಗೆ ಗುಂಡು

•**ಲಾಹೋರ್:** ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್‌ಸಿ) ಸೇರಿ ದೇಶದ ಹಲವೆಡೆ ಭಯೋತ್ಪಾದಕ ದಾಳಿ ಹಿಂದಿನ ರೂವಾರಿ, ಲಷ್ಕರ್–ಎ– ತೈಬಾ (ಎಲ್‌ಇಟಿ) ಉಗ್ರ ಸಂಘಟನೆಯ ಉಗ್ರ ಹಾಗೂ ಸಂಸ್ಥಾಪಕ ಸದಸ್ಯರಲ್ಲಿ ಒಬ್ಬನಾದ ಅಮೀರ್ ಹಮ್ಜಾನ ಮೇಲೆ ಮಂಗಳವಾರ ತಡರಾತ್ರಿ ಲಾಹೋರ್‌ನಲ್ಲಿ ಅಪರಿಚಿತ ಬಂದೂಕುಧಾರಿಗಳು ಗುಂಡಿನ ದಾಳಿ ನಡೆಸಿದ್ದು, ಗಂಭೀರ ಸ್ಥಿತಿಯಲ್ಲಿದ್ದಾನೆ ಎಂದು ವರದಿಯಾಗಿದೆ.



ಕಳೆದೊಂದು ವರ್ಷದಲ್ಲಿ ಇದು ಎರಡನೇ ಬಾರಿಗೆ ಅಪರಿಚಿತರು ಹಮ್ಜಾ ಮೇಲೆ ಗುಂಡಿನ ದಾಳಿ ನಡೆಸಿದ್ದಾರೆ. ಪಾಕಿಸ್ತಾನದ ಖಾಸಗಿ ಸುದ್ದಿವಾಹಿನಿಯೊಂದರ ಕಚೇರಿ ಹೊರಭಾಗದಲ್ಲಿ ಈ ಘಟನೆ ನಡೆದಿದೆ.
ಪುಟ ೪

ದಿಲ್ಲಿಗೆ ಸಿಎಂ, ಡಿಸಿಎಂ, ಪಕ್ಷದ ವರಿಷ್ಠರ ಭೇಟಿ?

•**ಬೆಂಗಳೂರು:** ಉಪ ಚುನಾವಣೆಯ ಕಾವು ಮುಗಿಯುತ್ತಿದಂತೆ ಸಂಪುಟ ವಿಸ್ತರಣೆ ಕೂಗು ಜೋರಾಗಿರುವ ನಡುವೆಯೇ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಜಂಟಿಯಾಗಿ ದಿಲ್ಲಿಗೆ ತೆರಳುತ್ತಿರುವುದು ಕುತೂಹಲ ಮೂಡಿಸಿದೆ. ಶುಕ್ರವಾರ ದಿಲ್ಲಿಯ ಖಾಸಗಿ ಹೋಟೆಲ್‌ನಲ್ಲಿ ರಾಜತಾಂತ್ರಿಕರ ಜತೆ ಸಮಾಲೋಚನೆ ನಡೆಸುವ ಬ್ರಿಡ್ಜ್ ಟು ಬೆಂಗಳೂರು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಇಬ್ಬರು ನಾಯಕರು ಒಂದೇ ವಿಶೇಷ ವಿಮಾನದಲ್ಲಿ ಪ್ರಯಾಣಿಸುತ್ತಿದ್ದಾರೆ. ಸಂಜೆ 5.30ಕ್ಕೆ ಕಾರ್ಯಕ್ರಮ ನಿಗಧಿಯಾಗಿದ್ದು, ಮಧ್ಯಾಹ್ನ 3.30ಕ್ಕೆ ದಿಲ್ಲಿಗೆ ತಲುಪಲಿದ್ದಾರೆ.
ಪುಟ ೪



ಮಕ್ಕಳಿಗೆ ಕನ್ನಡ, ಇಂಗ್ಲಿಷ್ ಕಲಿಕೆ ಅನುಭವ ನೀಡುವ ಉದ್ದೇಶ

ಬಾಲಚೇತನ ಹೆಸರಲ್ಲಿ ಪಠ್ಯಪುಸ್ತಕ

▸ ನಂದಿನಿ ಎನ್.

ದಿಗಂತ ವಿಶೇಷ

•**ಬೆಂಗಳೂರು:** ಮಕ್ಕಳಿಗೆ ಮಾತೃಭಾಷೆ(ಕನ್ನಡ) ಮತ್ತು ಇಂಗ್ಲಿಷ್ ಎರಡರ ಮೂಲಕ ಕಲಿಕೆ ಅನುಭವ ನೀಡುವ ಉದ್ದೇಶದಿಂದ ಪೂರ್ವಪ್ರಾಥಮಿಕ ಹಂತದಲ್ಲಿ ಈ ವರ್ಷದಿಂದಲೇ ಬಾಲಚೇತನ ಎಂಬ ಹೆಸರಿನಲ್ಲಿ ಕನ್ನಡ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಪಠ್ಯಪುಸ್ತಕಗಳನ್ನು ಪರಿಚಯಿಸಿದ್ದು, ಈ ಮೂಲಕ ಸರ್ಕಾರಿ ಶಾಲೆಗಳತ್ತ ಆಕರ್ಷಣೆ ಹೆಚ್ಚಿಸುವ ಸದುದ್ದೇಶ ಹೊಂದಿದೆ.

ರಾಜ್ಯ ಸರ್ಕಾರವು ಪೂರ್ವಪ್ರಾಥಮಿಕ ಹಂತವಾದ ಎಲ್‌ಕೆಜಿ ಮತ್ತು ಯುಕೆಜಿ ತರಗತಿಗೆ ದ್ವಿಭಾಷಾ ನೀತಿ ಶಿಕ್ಷಣವನ್ನು 2026–27ನೇ ಶೈಕ್ಷಣಿಕ ವರ್ಷದಿಂದ ಈ ವ್ಯವಸ್ಥೆ ಜಾರಿಗೆ ಬಂದಿದ್ದು, ರಾಜ್ಯ ಸರ್ಕಾರಿ ಶಾಲೆಗಳ ಎಲ್‌ಕೆಜಿ, ಯುಕೆಜಿ ಮಕ್ಕಳಿಗೆ ದ್ವಿಭಾಷಾ(ಕನ್ನಡ ಮತ್ತು ಇಂಗ್ಲಿಷ್) ಪಠ್ಯಕ್ರಮ ಈಗ ಪ್ರಮುಖವಾಗಿ ಪರಿಚಯವಾಗಿದೆ. 4 ರಿಂದ 6 ವರ್ಷ ವಯಸ್ಸಿನ ಮಕ್ಕಳ ಸಾಮಾನ್ಯ ಮಾನಸಿಕ ಬೆಳವಣಿಗೆಗೆ ಅನುಗುಣವಾಗಿ ಈ ಪಠ್ಯಕ್ರಮ ಆಧಾರಿತ ಅಭ್ಯಾಸ ಪುಸ್ತಕವನ್ನು ಪೂರ್ವ ಪ್ರಾಥಮಿಕ ಹಂತದ ಕಲಿಕೆಗಾಗಿ ವಿನ್ಯಾಸಗೊಳಿಸಲಾಗಿದ್ದು, ಇವುಗಳಲ್ಲಿ ಅಕ್ಷರ ಮತ್ತು ಪದಗಳನ್ನು ಗುರುತಿಸುವಿಕೆ, ಉಚ್ಚಾರಣೆ ಮತ್ತು ಬರವಣಿಗೆ, ಮೂಲ ಸಂಖ್ಯಾಜ್ಞಾನ ಹಾಗೂ ಸುತ್ತಲಿನ ಪರಿಸರದ ಅರಿವನ್ನು ಮೂಡಿಸಲು ಅರ್ಥಪೂರ್ಣ ಹಾಗೂ ಸರಳ ಚಟುವಟಿಕೆಗಳನ್ನು ಅಳವಡಿಸಲಾಗಿದೆ.
ಪುಟ ೪



ಪಠ್ಯ ಪುಸ್ತಕದಲ್ಲಿನ ವಿಶೇಷತೆ

ಮಕ್ಕಳಿಗೆ ಪಠ್ಯ ತೆರೆದ ಕೂಡಲೇ ಆಕರ್ಷಣೆವಾಗುವಂತೆ ವಿವಿಧ ಚಿತ್ರಗಳ ಜತೆಗೆ ಇಷ್ಟದ ಆಹಾರ ಪದಾರ್ಥದ ಒಂದು ಚಿತ್ರವನ್ನು ಸಂಗ್ರಹಿಸಿ ಅಂಟಿಸೋಣ, ಚಿತ್ರದಲ್ಲಿರುವ ಆಹಾರವಲ್ಲದೆ ನಿನಗೆ ಇಷ್ಟವಾದ ಆಹಾರ ಯಾವುದು?, ಮನೆಯಲ್ಲಿ ಒಣ–ಹಸಿ ಕಸಗಳನ್ನು ಪತ್ಯೇಕ ಡಬ್ಬದಲ್ಲಿ ಹಾಕಲು ಪ್ರಯತ್ನಿಸು, ಆಟವಾಡುವ ಹಾಗೂ ಹೊರ ಸಂಚಾರದ ಸಮಯದಲ್ಲಿ ಎಚ್ಚರವಹಿಸಬೇಕಾದ ಕ್ರಮಗಳ ಕುರಿತು ಹಿರಿಯರಿಂದ ತಿಳಿದುಕೊಳ್ಳಿ.
ಪುಟ ೪

ಕಾಂಗ್ರೆಸ್‌ನಿಂದ ಇಡೀ ಮುಸ್ಲಿಂ ಸಮುದಾಯ ದೂರವಾಗುತ್ತೆ!



•**ದಾವಣಗೆರೆ:** ದಾವಣಗೆರೆ ದಕ್ಷಿಣ ಕ್ಷೇತ್ರದ ಬೆಳವಣಿಗೆ ಹಿನ್ನೆಲೆಯಲ್ಲಿ ಸಚಿವ ಜಮೀರ್ ಅಹಮ್ಮದ್ ತಲೆದಂಡವಾದರೆ, ರಾಜ್ಯದಲ್ಲಿನ ಇಡೀ ಮುಸ್ಲಿಂ ಸಮುದಾಯ ಕಾಂಗ್ರೆಸ್‌ನಿಂದ ದೂರವಾಗುತ್ತದೆ. ಮುಂಬರುವ 2028ರ ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ 20–30 ಕ್ಷೇತ್ರಗಳನ್ನು ಗೆಲ್ಲುವುದೂ ಕಷ್ಟವಾದೀತು ಎಂದು ವಿಶ್ವ ಮುಸ್ಲಿಂ ಪರಿಷತ್ ಎಚ್ಚರಿಸಿದೆ.

ಮುಸ್ಲಿಂ ನಾಯಕರ ತಲೆದಂಡ ಹಿನ್ನೆಲೆ ವಿಶ್ವ ಮುಸ್ಲಿಂ ಪರಿಷತ್ ಎಚ್ಚರಿಕೆ

ಗುರುವಾರ ಸುದ್ದಿಗೋಷ್ಠಿಯಲ್ಲಿ ಪರಿಷತ್ತಿನ ಸಂಸ್ಥಾಪಕ ರಾಜ್ಯಾಧ್ಯಕ್ಷ ಸುಭಾನ್ ಖಾನ್ ಮಾತನಾಡಿ, ಈಗಾಗಲೇ ಕಾಂಗ್ರೆಸ್ ಅಲ್ಪಸಂಖ್ಯಾತರ ಘಟಕದ ರಾಜ್ಯಾಧ್ಯಕ್ಷ ಸ್ಥಾನದಿಂದ ಕೆ.ಅಬ್ದುಲ್ ಜಬ್ಬಾರ್, ದಕ್ಷಿಣ ಕ್ಷೇತ್ರಕ್ಕೆ ಸಂಬಂಧವೇ ಇಲ್ಲದ ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿ ಹುದ್ದೆಯಿಂದ ನಸೀರ್ ಅಹಮ್ಮದ್ ತಲೆದಂಡವಾಗಿದೆ.
ಪುಟ ೪

> ಮುಸ್ಲಿಂ ಮುಖಂಡರ ಮೇಲೆ ಕಾಂಗ್ರೆಸ್ ಕ್ರಮ ಕೈಗೊಳ್ಳುತ್ತಿರುವುದು ಬೇಸರವಾಗಿದ್ದು, ನಮಗೆ ಕಾಂಗ್ರೆಸ್ ಹೊರತುಪಡಿಸಿ ಬೇರೆ ಆಯ್ಕೆಗಳಿವೆ. ಸಮುದಾಯದ ಹಿತಾಸಕ್ತಿ ಗಳನ್ನು ರಕ್ಷಿಸುವ ನಿಟ್ಟಿನಲ್ಲಿ ಶೀಘ್ರ ಸಭೆಗಳನ್ನು ನಡೆಸಿ ಮುಂದಿನ ಕ್ರಮಗಳ ಬಗ್ಗೆ ತೀರ್ಮಾನ ಕೈಗೊಳ್ಳಲಾಗುವುದು.
> ■ ಮುಫ್ತಿ ಇಫ್ತಿಖಾರ್ ಅಹ್ಮದ್ ಖಾಸ್ಮೀ, ಜಮಿಯತ್ ಉಲಮಾ ಕರ್ನಾಟಕ ಅಧ್ಯಕ್ಷ

ಹೈಕಮಾಂಡ್ ಭೇಟಿಯಾದ ಹಿರಿಯ ಶಾಸಕರ ನಿಯೋಗ



•**ಬೆಂಗಳೂರು:** ಸಚಿವ ಸಂಪುಟ ಪುನರ್ ರಚನೆ ಸಂಬಂಧ ಹೈಕಮಾಂಡ್ ಮೇಲೆ ಒತ್ತಡ ಹೇರಲು ಹೊಸದಿಲ್ಲಿಯಲ್ಲಿ ಬೀಡುಬಿಟ್ಟಿರುವ ಕಾಂಗ್ರೆಸ್‌ನ ಹಿರಿಯ ಶಾಸಕರ ನಿಯೋಗ ಗುರುವಾರ ರಾಜ್ಯ ಕಾಂಗ್ರೆಸ್ ಉಸ್ತುವಾರಿ ಪ್ರಧಾನಕಾರ್ಯದರ್ಶಿ ರಣದೀಪ್‌ಸಿಂಗ್ ಸುರ್ಜೇವಾಲ ಅವರನ್ನು ಭೇಟಿ ಮಾಡಿದ್ದಾರೆ.

ಸಚಿವ ಸಂಪುಟ ಪುನರ್ ರಚಿಸಿ, ಸಚಿವ ಸ್ಥಾನ ನೀಡಲು ಮನವಿ

ಹೊಸದಿಲ್ಲಿಯಲ್ಲಿ ಬೀಡುಬಿಟ್ಟಿರುವ ಶಾಸಕರಾದ ಟಿ.ಬಿ.ಜಯಚಂದ್ರ, ಅಶೋಕ್ ಪಟ್ಟಣ್, ಕೆ. ಷಡಕ್ಷರಿ, ಜಿ.ಟಿ.ಪಾಟೀಲ್, ಬಿ.ಜಿ.ಶಾಂತನಗೌಡ, ಪುಟ್ಟರಂಗಶೆಟ್ಟಿ, ಹಂಪನಗೌಡ ಬಾದರ್ಲಿ, ಬಿ.ಶಿವಣ್ಣ, ಮಹಂತೇಶ್ ಕೌಜಲಗಿ, ಯಶವಂತರಾಯಗೌಡ ಪಾಟೀಲ್, ಸಿ.ಎಸ್.ನಾಡಗೌಡ ಸೇರಿದಂತೆ ಹಲವರು ಗುರವಾರ ಬೆಳಗ್ಗೆ ರಣದೀಪ್ ಸಿಂಗ್ ಸುರ್ಜೇವಾಲರನ್ನು ಭೇಟಿ ಮಾಡಿ ಮಾತುಕತೆ ನಡೆಸಿದ್ದಾರೆ.
ಪುಟ ೪

ಬೆಳ್ಳಿ ಬಂಗಾರ (ಬೆಂಗಳೂರು) ಬೆಳ್ಳಿ: 2,70,000 (2,70,000) ಅಪರಂಜಿ ಚಿನ್ನ: 1,55,570 (1,55,350) ಆಭರಣ ಚಿನ್ನ: 1,42,600 (1,42,400) ಚಿನ್ನ 10 ಗ್ರಾಂಗೆ, ಬೆಳ್ಳಿ 1 ಕೆ.ಜಿಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ)

ಷೇರು ಸೂಚ್ಯಂಕ ಬಿಎಸ್‌ಇ 77,988 (122↓) ಎನ್‌ಎಸ್‌ಇ 24,196 (34↓)

$1 = ₹93.38

ಬಾಲಚೇತನ ಹೆಸರಲ್ಲಿ ಪಠ್ಯಪುಸ್ತಕ

ಪುಟ ೩➡ ಭಾಷೆ-1(ಕನ್ನಡ), ಭಾಷೆ-2(ಇಂಗ್ಲಿಷ್) ಗಣಿತ ಮತ್ತು ಪರಿಸರ ಅಧ್ಯಯನ ವಿಷಯಗಳಲ್ಲಿ ಪ್ರತ್ಯೇಕ ಚಟುವಟಿಕೆಗಳ ಪುಸ್ತಕಗಳನ್ನು ವಿನೂತನ ರೀತಿಯಲ್ಲಿ ಹೊರತರಲಾಗಿದೆ. ಈ ಅಭ್ಯಾಸ ಪುಸ್ತಕಗಳು ವಿಭಿನ್ನ ರೀತಿಯ ಕಲಿಕಾ ಅನುಭವಗಳನ್ನು ಮಕ್ಕಳಿಗೆ ಒದಗಿಸುವ ಉದ್ದೇಶದಿಂದ ಹಲವು ಬಗೆಯ ವೈವಿಧ್ಯಮಯ ಚಟುವಟಿಕೆಗಳನ್ನು ಹೊಂದಿದ್ದು, ಸೃಜನಶೀಲ ಆಟ ಅಥವಾ ರಚನಾತ್ಮಕ ಕಲಿಕೆ, ವಿಮರ್ಶಾತ್ಮಕ ಚಿಂತನೆ ಮತ್ತು ಸಮಸ್ಯೆ-ಪರಿಹರಿಸುವ ಸಾಮರ್ಥ್ಯಗಳನ್ನು ಬೆಳೆಸುವಂತಿವೆ. ಕಥೆಗಳು, ಪ್ರಾಸಗೀತೆಗಳು, ಹಾಡುಗಳು, ಸುತ್ತಮುತ್ತಲಿನ ವಸ್ತು, ಸಸ್ಯ ಮತ್ತು ಪ್ರಾಣಿಗಳನ್ನು ಗುರುತಿಸುವುದು. ಕಲೆ ಮತ್ತು ಕರಕುಶಲ ಚಟುವಟಿಕೆಗಳು, ಚಿತ್ರ ಬರೆಯುವುದು. ಬಣ್ಣ ತುಂಬುವುದು, ಆಟಿಕೆಗಳ ಬಳಕೆ, ಆಟ ಮತ್ತು ಚಟುವಟಿಕೆ-ಆಧಾರಿತ ಕಲಿಕಾ-ಬೋಧನಾ ವಿಧಾನವನ್ನು ಅಭಿವೃದ್ಧಿಪಡಿಸಲು ಕಾರಣವಾಗುವಂತಿವೆ. ಅಭ್ಯಾಸ ಪುಸ್ತಕಗಳಲ್ಲಿರುವ ಚಟುವಟಿಕೆಗಳು ಶ್ರೇಣೀಕೃತವಾಗಿದೆ. ಜತೆಗೆ ಪ್ರತಿ ಪುಸ್ತಕದ ಪ್ರತಿ ಪುಟಗಳಲ್ಲೂ ಪೋಷಕರ ಹಾಗೂ ಶಿಕ್ಷಕರ ಸಹಿ ಮತ್ತು ದಿನಾಂಕವನ್ನು ಕಡ್ಡಾಯಗೊಳಿಸಲಾಗಿದೆ.

ಪಠ್ಯಪುಸ್ತಕದಲ್ಲಿನ ವಿಶೇಷತೆ

ಪುಟ ೩➡ ಹೀಗೆ ಕಲಿಕೆ ಜತೆಗೆ ಪಠ್ಯೇತರ ಹಾಗೂ ಉತ್ತಮ ಹವ್ಯಾಸಗಳನ್ನು ಪ್ರತಿ ಪುಟದಲ್ಲೂ ಪುಸ್ತಕದ ಅಡಿಭಾಗದಲ್ಲಿ ಸೂಚನೆಯಲ್ಲಿ ತಿಳಿಸಲಾಗಿದೆ.

ಶಿಕ್ಷಕರಿಗೆ ವಿಶೇಷ ತರಬೇತಿ: ರಾಜ್ಯದಲ್ಲಿ ದ್ವಿಭಾಷಾ ಶಿಕ್ಷಣ ನೀತಿಯನ್ನು ಪರಿಣಾಮಕಾರಿಯಾಗಿ ಜಾರಿಗೆ ತರುವ ಹಿನ್ನೆಲೆಯಲ್ಲಿ ಶಿಕ್ಷಕರಿಗೆ ವ್ಯಾಪಕ ತರಬೇತಿ ಕಾರ್ಯಕ್ರಮಗಳನ್ನು ಸರ್ಕಾರ ಈಗಾಗಲೇ ಆರಂಭಿಸಿದೆ. ಶಾಲಾ ಶಿಕ್ಷಕರಿಗೆ ದ್ವಿಭಾಷಾ ಬೋಧನೆ ಬಗ್ಗೆ ತರಬೇತಿ ನಡೆಸುತ್ತಿದ್ದು, ಆಯಾ ಜಿಲ್ಲೆಗಳ ವ್ಯಾಪ್ತಿಯಲ್ಲಿ ಸಂಪನ್ಮೂಲ ವ್ಯಕ್ತಿಗಳ ನೆರವಿನಿಂದ ಶಿಕ್ಷಕರಿಗೆ ದ್ವಿಭಾಷಾ ಬೋಧನೆಯ ಬಗ್ಗೆ ತರಬೇತಿ ನಡೆಯುತ್ತಿದೆ.

ರಾಜ್ಯಗಳಿಗಿಲ್ಲ ತಾರತಮ್ಯ

ಪುಟ ೩➡ ''ಈ ಸದನದಿಂದ ನಾನು ಬಹಳ ಜವಾಬ್ದಾರಿಯಿಂದ ಹೇಳಲು ಬಯಸುತ್ತೇನೆ- ದಕ್ಷಿಣವಾಗಲಿ, ಉತ್ತರವಾಗಲಿ, ಪೂರ್ವವಾಗಲಿ, ಪಶ್ಚಿಮವಾಗಲಿ, ಸಣ್ಣ ರಾಜ್ಯಗಳಾಗಲಿ ದೊಡ್ಡ ರಾಜ್ಯಗಳಾಗಲಿ- ಈ ನಿರ್ಧಾರ ಪ್ರಕ್ರಿಯೆಯಲ್ಲಿ ಯಾವುದೇ ರಾಜ್ಯದ ವಿರುದ್ಧ ಭೇದಭಾವ ನಡೆಯುವುದಿಲ್ಲ ಎಂದು ಅವರು ಹೇಳಿದರು. ಲೋಕಸಭೆಯ ಸ್ಥಾನಗಳ ಪ್ರಮಾಣದಲ್ಲಿ ಯಾವುದೇ ರಾಜ್ಯಕ್ಕೂ ಕಡಿತವಾಗುವುದಿಲ್ಲ. ಆ ಪ್ರಮಾಣದಲ್ಲಿ ಯಾವುದೇ ಬದಲಾವಣೆ ಆಗುವುದಿಲ್ಲ, ಹೆಚ್ಚಳವೂ ಅದೇ ಪ್ರಮಾಣದಲ್ಲಿ ಆಗುತ್ತದೆ ಎಂದು ಅವರು ಹೇಳಿದರು. ಮಹಿಳಾ ಮೀಸಲಾತಿ ಎಂದರೆ ಮಹಿಳೆಯರಿಗೆ ನೀಡಲಾಗುತ್ತಿರುವ ದಾನವಲ್ಲ, ಅದು ಅವರ ಹಕ್ಕು ಎಂದರು.

ಶ್ರೇಯಸ್ಸನ್ನು ವಿಪಕ್ಷಗಳೊಂದಿಗೆ ಹಂಚಿಕೊಳ್ಳಲು ಸಿದ್ಧ: ಮೀಸಲಾತಿ ಕಾಯ್ದೆಯನ್ನು 2029ರಲ್ಲಿ ಜಾರಿಗೆ ತರಲು ಯೋಜಿಸಲಾಗಿದೆ. ಸಮಯದ ಅಭಾವದಿಂದಾಗಿ 2024ರ ವೇಳೆಗೆ ಈ ಸುಧಾರಣೆಯನ್ನು ಪೂರ್ಣಗೊಳಿಸಲು ಸಾಧ್ಯವಾಗಲಿಲ್ಲ, ಆದರೆ, ಇನ್ನು ಮುಂದೆ ವಿಳಂಬ ಮಾಡಬಾರದು ಎಂದು ಪ್ರಧಾನಿ ಒತ್ತಿ ಹೇಳಿದರು. ಆಡಳಿತ ಪಕ್ಷ ಯಾವುದೇ ಸ್ವಹಿತಕ್ಕೆ ಈ ಕಾಯ್ದೆ ಜಾರಿ ಮಾಡುತ್ತಿಲ್ಲ, ರಾಷ್ಟ್ರೀಯ ಹಿತಾಸಕ್ತಿಯ ಈ ಸುಧಾರಣೆಯ ಶ್ರೇಯಸ್ಸನ್ನು ವಿರೋಧ ಪಕ್ಷಗಳೊಂದಿಗೆ ಹಂಚಿಕೊಳ್ಳಲು ಸಿದ್ಧ ಎಂದರು.

ಇಂದು ಸಂಜೆ 4 ಗಂಟೆಗೆ ಮತಕ್ಕೆ

ಪುಟ ೩➡ ಈ ಕ್ರಮಗಳನ್ನು ಜಾರಿಗೆ ತರಲು 131ನೇ ಸಂವಿಧಾನ



ತಿದ್ದುಪಡಿ ಮಾಡಲು ಕೇಂದ್ರ ಸರ್ಕಾರ ಮುಂದಾಗಿದೆ. ಮಹಿಳಾ ಮೀಸಲಾತಿ ಹಾಗೂ ಕ್ಷೇತ್ರ ಪುನರ್‌ವಿಂಗಡಣೆ ಆಯೋಗ ಸ್ಥಾಪನೆಗೆ ಸಂಬಂಧಿಸಿದ ಈ ಮಸೂದೆಗಳ ಮೇಲೆ ಶುಕ್ರವಾರ ಸಂಜೆ 4 ಗಂಟೆಗೆ ಲೋಕಸಭೆಯಲ್ಲಿ ಮತದಾನ ನಡೆಯಲಿದೆ ಎಂದು ಸ್ಪೀಕರ್ ಓಂ ಬಿರ್ಲಾ ತಿಳಿಸಿದ್ದಾರೆ.

ಒಕ್ಕೂಟ ವ್ಯವಸ್ಥೆ ಮೇಲೆ ದಾಳಿ: ವಿಪಕ್ಷ

ದಕ್ಷಿಣ ಭಾರತದ ರಾಜ್ಯಗಳಾದ ತಮಿಳುನಾಡು(ಡಿಎಂಕೆ) ಮತ್ತು ಕೇರಳದ ನಾಯಕರು, ಜನಸಂಖ್ಯೆ ಆಧಾರಿತ ಕ್ಷೇತ್ರ ಮರುವಿಂಗಡಣೆಯು ದಕ್ಷಿಣದ ರಾಜ್ಯಗಳ ರಾಜಕೀಯ ಪ್ರಾತಿನಿಧ್ಯವನ್ನು ಕುಗ್ಗಿಸುತ್ತದೆ ಮತ್ತು ಉತ್ತರದ ರಾಜ್ಯಗಳಿಗೆ ಹೆಚ್ಚಿನ ಲಾಭ ಮಾಡಿಕೊಡುತ್ತದೆ ಎಂದು ದೂರಿದ್ದಾರೆ. ಇದನ್ನು ಒಕ್ಕೂಟ ವ್ಯವಸ್ಥೆಯ ಮೇಲಿನ ದಾಳಿ ಎಂದು ಕೆ.ಸಿ. ವೇಣುಗೋಪಾಲ್ ಬಣ್ಣಿಸಿದ್ದಾರೆ. ವಿರೋಧ ಪಕ್ಷಗಳು ಮಹಿಳಾ ಮೀಸಲಾತಿಯನ್ನು ಕ್ಷೇತ್ರ ಮರುವಿಂಗಡಣೆಯೊಂದಿಗೆ ಜೋಡಿಸುವುದನ್ನು ವಿರೋಧಿಸಿವೆ. ಮಹಿಳಾ ಮೀಸಲಾತಿಯನ್ನು ಈಗಿರುವ 543 ಲೋಕಸಭಾ ಸ್ಥಾನಗಳಲ್ಲೇ ತಕ್ಷಣವೇ ಜಾರಿಗೆ ತರಬೇಕು ಎಂಬುದು ವಿರೋಧ ಪಕ್ಷಗಳ ಮುಖ್ಯ ಬೇಡಿಕೆಯಾಗಿದೆ.

ಒಳಮೀಸಲಾತಿ ವರದಿ ಅಧ್ಯಯನಕ್ಕಾಗಿ ಸಮಿತಿ

ಪುಟ ೩➡ ಅಲ್ಲದೇ, ಕಲಬುರಗಿ ಜಿಲ್ಲೆ ಹಾಗರಗಾ ಗ್ರಾಮದ ಸರ್ವೇ ನಂ. 215ರಲ್ಲಿ ಲಭ್ಯವಿರುವ ಕಲಬುರಗಿ ನಗರಾಭಿವೃದ್ಧಿ ಪ್ರಾಧಿಕಾರದ 2 ಎಕರೆ ಸಿ.ಎ. ನಿವೇಶನವನ್ನು ಶೈಕ್ಷಣಿಕ ಹಾಗೂ ಸಾರ್ವಜನಿಕ ಸೇವಾ ಭವನವನ್ನು ನಿರ್ಮಿಸಲು ಮಂಜೂರು ಮಾಡಲು ಒಪ್ಪಿಗೆ ನೀಡಿದೆ ಎಂದರು. ರಾಜ್ಯದ ವಿವಿಧ ಕೇಂದ್ರ, ಕಾರಾಗೃಹಗಳಲ್ಲಿರುವ 25 ಜೀವಾವಧಿ ಶಿಕ್ಷಾ ಬಂಧಿಗಳನ್ನು ಸನ್ನಡತೆ ಆಧಾರದ ಮೇಲೆ ಅವಧಿಪೂರ್ವ ಬಿಡುಗಡೆ ಮಾಡಲು ನಿರ್ಧರಿಸಲಾಗಿದೆ ಎಂದರು.

ಜೆಜೆಎಂ 2.0 ಅನುಷ್ಠಾನಕ್ಕೆ ಒಡಂಬಡಿಕೆ ಮಾಡಲು ಅಸ್ತು

ಪುಟ ೩➡ ಸಂಜೀವಿ-ಕೆಎಸ್‌ಆರ್‌ಎಲ್‌ಪಿಎಸ್ ಅಭಿಯಾನದಲ್ಲಿ ಗ್ರಾಮ ಪಂಚಾಯತ್ ಮಟ್ಟದ ಒಕ್ಕೂಟಗಳಿಗೆ (ಜಿಪಿಎಲ್‌ಎಫ್) ಡಿಜಿಟಲ್ ಕಾರ್ಯವ್ಯವಸ್ಥೆ ಬಲಪಡಿಸುವ ಉದ್ದೇಶದಿಂದ ಆಲ್ ಇನ್ ವನ್ ಡೆಸ್ಕ್‌ಟಾಪ್ ಮಲ್ಟಿಫಂಕ್ಷನ್ ಪ್ರಿಂಟರ್ಸ್ ಮತ್ತು ಯುಪಿಎಸ್‌ಗಳನ್ನು 25 ಕೋಟಿ ರೂ. ಮೊತ್ತದಲ್ಲಿ ಖರೀದಿಸಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

ಪಾಕ್‌ನಲ್ಲಿ ಲಷ್ಕರೆ ಸಂಸ್ಥಾಪಕ ಉಗ್ರ ಹಮ್ಜಾಗೆ ಗುಂಡು

ಪುಟ ೩➡ ದಾಳಿ ನಡೆಸಿದವರು ಬಹಳ ಸಮೀಪದಿಂದ ಗುಂಡಿನ ದಾಳಿ ನಡೆಸಿ ಸ್ಥಳದಿಂದ ಪರಾರಿಯಾಗಿದ್ದಾರೆ. ಗಾಯಗೊಂಡ ಹಮ್ಜಾನನ್ನು ತಕ್ಷಣ ಸಮೀಪದ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಚಿಕಿತ್ಸೆ ನಡೆಯುತ್ತಿದೆ. ಇದಕ್ಕೂ ಮುನ್ನ ಕಳೆದ ವರ್ಷದ ಮೇ ತಿಂಗಳಲ್ಲಿ ಲಾಹೋರಿನಲ್ಲಿರುವ ಅವರ ನಿವಾಸದ ಹೊರಗೆ ಅಪರಿಚಿತರು ಗುಂಡಿನ ದಾಳಿ ನಡೆಸಿದ್ದರು. ಆ ದಾಳಿಯಿಂದ ಬದುಕುಳಿದಿದ್ದ. ನಂತರ ಅವರ ಭದ್ರತೆಯನ್ನು ಹೆಚ್ಚಿಸಲಾಗಿದೆ ಎಂದು ವರದಿಯಾಗಿದ್ದರೂ, ಅಧಿಕಾರಿಗಳು ಯಾವುದೇ ಅಧಿಕೃತ ಹೇಳಿಕೆ ನೀಡಿರಲಿಲ್ಲ. 1959ರ ಮೇ 10ರಂದು ಪಾಕ್‌ನ ಪಂಜಾಬ್ ಪ್ರಾಂತ್ಯದ ಗುಜ್ರಾನ್‌ವಾಲಾದಲ್ಲಿ ಜನಿಸಿದ್ದ ಹಮ್ಜಾ, ಅಫ್ಘಾನ್ ಜಿಹಾದ್ ಸೇರಿಕೊಂಡಿದ್ದ. ಅಲ್ಲಿಂದ 1985-86ರ ಅವಧಿಯಲ್ಲಿ ಹಾಫಿಜ್ ಸಯೀದ್ ಜತೆಗೂಡಿ ಲಷ್ಕರೆ ಉಗ್ರ ಸಂಘಟನೆ ಸ್ಥಾಪಿಸಿದ್ದ.

ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

◈ ಪಾಕಿಸ್ತಾನದಲ್ಲಿರುವ ಭಯೋತ್ಪಾದಕ ನೆಲೆಗಳಿಗೆ ನಮ್ಮ ಸರಕಾರ ಆಪರೇಷನ್ ಸಿಂಧೂರ ಮಾಡಿದೆ.ಆದರೆ ಕಾಂಗ್ರೆಸ್ ಪಾಕಿಸ್ತಾನದ ತಾಳಕ್ಕೆ ತಕ್ಕಂತೆ ಕುಣಿಯುತ್ತಿದೆ - **ಮೋದಿ**

- ಅವರದು ತಾಳ, ಇವರದು ಮೇಳ. ಈ ತಾಳ ಮೇಳವನ್ನು ತಡೆಯದೆ ಹೋದರೆ ಮುಂದೆ ದೇಶದ ಪರಿಸ್ಥಿತಿ ಅಲ್ಲೋಲ ಕಲ್ಲೋಲ!

ದಿನ ಭವಿಷ್ಯ

ಮೇಷ
ಮನೆಯಲ್ಲಿ ಶಾಂತ, ಸೌಹಾರ್ದ ವಾತಾವರಣ. ಹಣದ ವಿಚಾರದಲ್ಲಿ ಪೂರಕ ಬೆಳವಣಿಗೆ. ವೃತ್ತಿಯಲ್ಲಿ ಸ್ವಲ್ಪ ಸಮಸ್ಯೆ ಕಾಣಿಸಿಕೊಳ್ಳಬಹುದು.

ವೃಷಭ
ನಿಮ್ಮ ವ್ಯವಹಾರ ವಿಸ್ತರಿಸುವುದು ನಿಮ್ಮ ಮುಖ್ಯ ಗುರಿ. ಅದೃಷ್ಟ ನಿಮ್ಮ ಜತೆಗಿದೆ. ಉದ್ಯೋಗ ಬದಲಾವಣೆಗೆ ಕಾಲ ಪಕ್ವವಾಗಿದೆ. ಧನಪ್ರಾಪ್ತಿ.

ಮಿಥುನ
ಪ್ರಗತಿಗೆ ಪೂರಕ ವಾತಾವರಣ. ಕೆಲಸದಲ್ಲಿ ಅತ್ಯುತ್ಸಾಹ ತೋರುವಿರಿ. ಮನೆಯಲ್ಲಿ ಹಿರಿಯರ ಆರೋಗ್ಯ ಸಮಸ್ಯೆ. ಕಾಳಜಿ ವಹಿಸಿರಿ.

ಕಟಕ
ಇಂದು ಹಣದ ವಿಚಾರದಲ್ಲಿ ಪ್ರಗತಿ ಕಾಣದು. ಮುಂದಿನ ದಿನಗಳಲ್ಲಿ ಪರಿಸ್ಥಿತಿ ಸುಧಾರಣೆ. ಕೌಟುಂಬಿಕ ಒತ್ತಡ ಶಮನ.

ಸಿಂಹ
ಬಾಕಿ ಇರುವ ಕಾರ್ಯ ಮುಗಿಸಲು ಗಮನ ಕೊಡಿ. ವೃತ್ತಿಯಲ್ಲಿ ಒತ್ತಡ ಹೆಚ್ಚು . ಕೆಲವರ ಅವಕೃಪೆಗೆ ತುತ್ತಾಗುವಿರಿ.

ಕನ್ಯಾ
ಒತ್ತಡದ ಬದುಕಿಂದ ದೂರವಾಗಿ ಪ್ರವಾಸ ಹೊರಡಲು ಸಕಾಲ. ಮನೆಯವರ ಇಚ್ಛೆ ಅರಿತು ವ್ಯವಹರಿಸಿ.

ತುಲಾ
ಹೆಚ್ಚು ಭಾವುಕರಾಗಿ ವರ್ತಿಸುವಿರಿ. ಇತರರ ಜತೆಗಿನ ವ್ಯವಹಾರದಲ್ಲಿ ಅದು ಪ್ರತಿಫಲಿಸಲಿದೆ. ಅನಾರೋಗ್ಯದ ಸಂಕೇತ ಕಂಡರೆ ವೈದ್ಯರನ್ನು ಕಾಣಿ.

ವೃಶ್ಚಿಕ
ಮಹತ್ತರ ತೀರ್ಮಾನ ಇಂದು ತಾಳದಿರಿ. ಅದು ಸೂಕ್ತ ಫಲ ನೀಡದು. ಆತ್ಮೀಯರೇ ವಿರೋಧ ಸೂಚಿಸುವರು. ಹೊಂದಾಣಿಕೆ ಒಳಿತು.

ಧನು
ಆರ್ಥಿಕವಾಗಿ ನಿಮಗೆ ಮಹತ್ವದ ದಿನ. ಧನಲಾಭ. ಅನ್ಯರ ಜತೆ ಹೊಂದಿಕೊಳ್ಳಲು ಕಲಿಯಿರಿ. ಹಠಮಾರಿ ಧೋರಣೆ ಬಿಟ್ಟುಬಿಡಿ.

ಮಕರ
ಇತರರ ನೆರವು ಬೇಡವೆಂಬ ಮನಸ್ಥಿತಿ ನಿಮ್ಮದು. ಆದರೆ ಎಲ್ಲರನ್ನು ದೂರ ಮಾಡಬೇಡಿ. ನಿಮ್ಮ ತಪ್ಪು ಒಪ್ಪಿಕೊಳ್ಳಲು ಮುಜುಗರ ಬೇಕಾಗಿಲ್ಲ.

ಕುಂಭ
ಕುಟುಂಬ ಸದಸ್ಯರ ಜತೆ ಹೊಂದಾಣಿಕೆ ಇರಲಿ. ಜಗಳಕ್ಕೆ ಆಸ್ಪದ ನೀಡಬೇಡಿ. ಪ್ರಯಾಣ ಸಾಧ್ಯತೆಯಿದೆ. ಖರ್ಚು ಇಂದು ಹೆಚ್ಚಲಿದೆ.

ಮೀನ
ಮನೆಯಲ್ಲಿ ಸಂಬಂಧ ಕೆಡಲು ಆಸ್ಪದ ಕೊಡಬೇಡಿ. ಹೊಟ್ಟೆ ಕೆಡುವ ಸಾಧ್ಯತೆ. ಸಾತ್ವಿಕ ಆಹಾರ ಸೇವಿಸಿ. ಆರ್ಥಿಕ ಪರಿಸ್ಥಿತಿ ಉತ್ತಮ.

ರಾಹುಕಾಲ: 10.30-12.00
ಗುಳಿಕಕಾಲ: 7.30-9.00

ಅದೃಷ್ಟ ಸಂಖ್ಯೆ : 3,8,2,7

ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ ಸಿಬಿಐ ಮನವಿ

ಜೀವಾವಧಿ ಶಿಕ್ಷೆ ನೀಡಿ

• **ಬೆಂಗಳೂರು:** ಬಿಜೆಪಿ ಮುಖಂಡ ಯೋಗೇಶ್ ಗೌಡ ಕೊಲೆ ಪ್ರಕರಣದಲ್ಲಿ ಅಪರಾಧಿಗಳಾಗಿರುವ ಕಾಂಗ್ರೆಸ್ ಶಾಸಕ ವಿನಯ್ ಕುಲಕರ್ಣಿ ಸೇರಿ 16 ಮಂದಿ ಆರೋಪಿಗಳಿಗೆ ಕ್ಷಮಾದಾನವಿಲ್ಲದ ಜೀವನ ಪರ್ಯಂತ ಶಿಕ್ಷೆ ವಿಧಿಸುವಂತೆ ಬೆಂಗಳೂರಿನ ಜನ ಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ ಗುರುವಾರ ಸಿಬಿಐ ಮನವಿ ಮಾಡಿತು.



ಪ್ರಕರಣದಲ್ಲಿ 16 ಮಂದಿಯನ್ನು ಕೊಲೆ ಪ್ರಕರಣದಲ್ಲಿ ದೋಷಿಗಳು ಎಂದು ನಿರ್ಧರಿಸಿದ್ದು, ಗುರುವಾರ ಶಿಕ್ಷೆಯ ಪ್ರಮಾಣ ನಿರ್ಧರಿಸುವುದಕ್ಕೆ ಸಂಬಂಧಿಸಿದಂತೆ ಖುದ್ದು ಅಪರಾಧಿಗಳು ಮತ್ತು ಅವರ ಪರ ವಕೀಲರ ವಾದವನ್ನು ನ್ಯಾಯಾಧೀಶ ರಾದ ಸಂತೋಷ್ ಗಜಾನನ್ ಭಟ್ ಅವರು ಸುದೀರ್ಘವಾಗಿ ಆಲಿಸಿ, ಶುಕ್ರವಾರ ತೀರ್ಪು ಪ್ರಕಟಿಸುವುದಾಗಿ ಹೇಳಿದರು.

ಸಿಬಿಐ ಪ್ರತಿನಿಧಿಸಿದ್ದ ಹೆಚ್ಚುವರಿ ಸಾಲಿಸಿಟರ್ ಜನರಲ್ ಎಸ್.ವಿ.ರಾಜು ಅವರು ಅಪರಾಧಿಗಳಿಗೆ ಗಲ್ಲು ಶಿಕ್ಷೆ ವಿಧಿಸುವಂತೆ ಕೋರುವುದಿಲ್ಲ, ಬದಲಿಗೆ ಕ್ಷಮಾದಾನವಿಲ್ಲದ ಜೀವನ ಪರ್ಯಂತ ಶಿಕ್ಷೆ ವಿಧಿಸಬೇಕು ಎಂದು ಕೋರಿದರು. ಸಂತ್ರಸ್ತನಾದ ಯೋಗೀಶ್ ಗೌಡನ ಕಣ್ಣಿಗೆ ಖಾರದಪುಡಿ ಎರಚಿ, ತಪ್ಪಿಸಿಕೊಳ್ಳಲು ಅವಕಾಶ ನೀಡದೇ ಬರ್ಬರವಾಗಿ ಹತ್ಯೆ ಮಾಡಲಾಗಿದೆ.

ಇದೊಂದು ವಿರಳಾತಿ ವಿರಳ ಪ್ರಕರಣವಾಗಿದ್ದು, ಸಿಬಿಐ ತನಿಖೆ ಆರಂಭಿಸಿದ ಬಳಿಕ ಪಿತೂರಿ ಬಯಲಾಗಿದೆ. ಪೊಲೀಸ್ ಅಧಿಕಾರಿಗಳು ಮತ್ತು ಇಡೀ ವ್ಯವಸ್ಥೆಯನ್ನು ದುರ್ಬಳಕೆ ಮಾಡಲಾಗಿದೆ. ನ್ಯಾಯಾಂಗಕ್ಕೆ ವಂಚಿಸಿರುವುದನ್ನು ಗಂಭೀರವಾಗಿ ಪರಿಗಣಿಸಿ ಗರಿಷ್ಠ ಶಿಕ್ಷೆ ವಿಧಿಸಬೇಕು ಎಂದು ಕೋರಿದರು. ವಿನಯ್ ಕುಲಕರ್ಣಿ ಪ್ರತಿನಿಧಿಸಿದ್ದ ಹಿರಿಯ ವಕೀಲ ಎಂ.ಎಸ್. ಶ್ಯಾಮ್ ಸುಂದರ್ ಅವರು ವಿನಯ್ ಕುಲಕರ್ಣಿ ಜನರ ವಿಶ್ವಾಸಗಳಿಸಿ ಗೆದ್ದಿದ್ದಾರೆ. ಮೂವರು ಮಕ್ಕಳಿದ್ದು, 3,500ಕ್ಕೂ ಅಧಿಕ ಆಕಳು, ಎಮ್ಮೆ ಸಾಕಿದ್ದು ಅವುಗಳನ್ನು ನೋಡಿಕೊಳ್ಳಬೇಕಿದೆ. ರಾಜಕೀಯ ಕಾರಣಕ್ಕಾಗಿ ಅವರನ್ನು ಕೃತ್ಯದಲ್ಲಿ ಸಿಲುಕಿಸಲಾಗಿದೆ. ಕಡಿಮೆ ಶಿಕ್ಷೆ ವಿಧಿಸಬೇಕು ಎಂದು ಕೋರಿದರು.

ನ್ಯಾಯಾಲಯದ ಸೂಚನೆಯಂತೆ ಪೀಠದ ಮುಂದೆ ಹಾಜರಾದ ವಿನಯ್ ಕುಲಕರ್ಣಿ 27 ವರ್ಷದಿಂದ ರಾಜಕೀಯದಲ್ಲಿದ್ದೇನೆ. ನನ್ನ ಜೀವನದಲ್ಲಿ ಯಾರಿಗೂ ಅನ್ಯಾಯ ಮಾಡಿಲ್ಲ, ರಾಜಕೀಯ ಪ್ರತೀಕಾರಕ್ಕಾಗಿ ಈ ಕೆಲಸ ಮಾಡಿದ್ದಾರೆ. ಮೂವರು ಮಕ್ಕಳಿದ್ದು, ಅವರು ಮದುವೆಗೆ ಬಂದಿದ್ದಾರೆ. ಮೂರು ಬಾರಿ ಶಾಸಕನಾಗಿದ್ದೇನೆ. ಎರಡು ಬಾರಿ ಸಂಸತ್ ಚುನಾವಣೆಯಲ್ಲಿ ನಿಂತು ಸೋತಿದ್ದೇನೆ. ಒಮ್ಮೆ ಸಚಿವನಾಗಿದ್ದೇನೆ. ನನಗೆ ಕಡಿಮೆ ಶಿಕ್ಷೆ ವಿಧಿಸಬೇಕು ಎಂದು ಮನವಿ ಮಾಡಿದರು.

3,500 ಹಸು/ಎಮ್ಮೆ ಇವೆ. ಅವುಗಳನ್ನು ನೋಡಬೇಕಿದೆ. ಈ ಪ್ರಕರಣದಿಂದಾಗಿ ನನ್ನ ಕ್ಷೇತ್ರದ ಜನರಿಗೂ ಅನ್ಯಾಯವಾಗಿದೆ. ಹೀಗಾಗಿ, ವಿನಾಯಿತಿ ತೋರಬೇಕು ಎಂದರು. ಎಲ್ಲಾ ಅಪರಾಧಿಗಳು ನ್ಯಾಯಾಲಯದ ಮುಂದೆ ತಮ್ಮ ಪರಿಸ್ಥಿತಿಗಳನ್ನು ವಿವರಿಸಿ, ಕಡಿಮೆ ಶಿಕ್ಷೆ ವಿಧಿಸಬೇಕು ಎಂದು ಮನವಿ ಮಾಡಿದರು. ಈ ಪ್ರಕರಣದಲ್ಲಿ ವಿನಯ್ ಕುಲಕರ್ಣಿ ಎಲ್ಲ ಅಪರಾಧಿಗಳಿಗೆ ಶುಕ್ರವಾರ ಮಧ್ಯಾಹ್ನದ ವೇಳೆಗೆ ನ್ಯಾಯಾಧೀಶರು ಪ್ರತಿಯೊಬ್ಬರ ಪಾತ್ರಕ್ಕೆ ಅನುಗುಣವಾಗಿ ಶಿಕ್ಷೆಯನ್ನು ಪ್ರಕಟಿಸಲಿದ್ದಾರೆ.

ಪೀಠದ ಮುಂದೆ ಅಪರಾಧಿಗಳ ಮನವಿ

- **ಎ-4, ಎ-14: ಆಟೋ ಮತ್ತು ಕಾರ್ ಚಾಲಕರು; ವಯಸ್ಸಾದ ತಂದೆ-ತಾಯಿಯನ್ನು ಸಾಕುವ ಜವಾಬ್ದಾರಿ ನಮ್ಮ ಮೇಲಿದೆ.**
- **ಎ-5: ರಿಯಲ್ ಎಸ್ಟೇಟ್ ಉದ್ಯೋಗಿ; ಅನಾರೋಗ್ಯದಿಂದ ಬಳಲುತ್ತಿರುವ ತಂದೆ-ತಾಯಿಯನ್ನು ನೋಡಿಕೊಳ್ಳಬೇಕು.**
- **ಎ-9, ಎ-10, ಎ-11: ಪೋಷಕರಿಲ್ಲದ ಅನಾಥರು ಅಥವಾ ವಯಸ್ಸಾದ ತಾಯಿ ಮಾತ್ರ ಇರುವವರು; ಸಣ್ಣ ಮಕ್ಕಳ ಭವಿಷ್ಯಕ್ಕಾಗಿ ಶಿಕ್ಷೆ ಕಡಿಮೆ ಮಾಡಿ.**
- **ಎ-6, ಎ-12, ಎ-18: ಕೃಷಿಕರು, ಟೈಲರ್ ಮತ್ತು ಗುತ್ತಿಗೆದಾರರು; ಇವರಿಗೆ 4 ರಿಂದ 7 ವರ್ಷದ ಪುಟ್ಟ ಮಕ್ಕಳಿದ್ದಾರೆ ಹಾಗೂ ಹೆಣ್ಣು ಮಕ್ಕಳ ಮದುವೆಯ ಜವಾಬ್ದಾರಿಯಿದೆ.**
- **ಎ-13: ಹೃದಯ ಶಸ್ತ್ರಚಿಕಿತ್ಸೆಯಾಗಿ ಸ್ಟಂಟ್ ಅಳವಡಿಸಲಾಗಿದೆ; ತೀವ್ರ ಅನಾರೋಗ್ಯವಿದೆ.**
- **ಎ-16: ದಂಪತಿಗಳಿಬ್ಬರೂ ಹೃದಯ ಸಂಬಂಧಿ ಕಾಯಿಲೆಯಿಂದ ಬಳಲುತ್ತಿದ್ದಾರೆ; ಇತ್ತೀಚೆಗಷ್ಟೇ ಮೊಮ್ಮಗನ ಸಾವಿನ ನೋವಿನಲ್ಲಿದ್ದಾರೆ.**
- **ಎ-7: ಆಟೋ ಚಾಲಕ; ತೀವ್ರ ಕಣ್ಣಿನ ಸಮಸ್ಯೆಯಿಂದ ಬಳಲುತ್ತಿದ್ದಾರೆ.**
- **ಎ-19 (ಟೆಂಗಿನಕರ್): ಈವರೆಗೆ ಯಾವುದೇ ಕೆಟ್ಟ ದಾಖಲೆಗಳಿಲ್ಲ (ಬ್ಲ್ಯಾಕ್ ಮಾರ್ಕ್); ಈ ಹಿಂದೆ ನಗದು ಪ್ರಶಸ್ತಿ ಕೂಡ ಲಭಿಸಿದೆ.**
- **ಎ-8: ತಂದೆ-ತಾಯಿ ಯಾರೂ ಇಲ್ಲ, ನಾನೊಬ್ಬನೇ ದುಡಿಯುವವನು.**

ನಿದಾಗೆ ಉಗ್ರ ವೈದ್ಯೆ ಶಾಹೀನ್ ಸಂಪರ್ಕ

ಪುಟ ೩➡ ಅಲ್ಲದೆ ಲೈಂಗಿಕ ಕಿರುಕುಳದ ವಿರುದ್ಧ ಮಹಿಳಾ ಉದ್ಯೋಗಿಗಳು ನೀಡಿದ್ದ ದೂರುಗಳನ್ನು ಎಚ್‌ಆರ್ ಮತ್ತು ಲೈಂಗಿಕ ದೌರ್ಜನ್ಯ ತಡೆ ಕಾಯ್ದೆ (ಪೋಶ್) ಸಮಿತಿ ಸದಸ್ಯೆಯಾಗಿದ್ದ ನಿದಾ ಖಾನ್ ಕಡೆಗಣಿಸಿದ್ದು, ಇವುಗಳಿಗೆಲ್ಲಾ ಬೆಂಬಲವಾಗಿ ನಿಂತಿದ್ದಳು. ಟಿಸಿಎಸ್‌ನ ಉನ್ನತ ಅಧಿಕಾರಿಗಳ ಗಮನಕ್ಕೆ ಬರದಂತೆ ನೋಡಿಕೊಂಡಿದ್ದಳು. ನಿದಾ ಖಾನ್, ಡಾ.ಶಾಹೀನ್ ಶಾಹಿದ್ ನಡುವಿನ ನೇರ ಸಂಪರ್ಕದ ಕುರಿತು ಅಧಿಕಾರಿಗಳು ಅಧಿಕೃತ ಹೇಳಿಕೆಗಳನ್ನು ನೀಡಿಲ್ಲ. ಉದ್ಯೋಗ ಸ್ಥಳದಲ್ಲಿ ಲೈಂಗಿಕ ದೌರ್ಜನ್ಯ ತಡೆಯಬೇಕಾದ ಸಿಬ್ಬಂದಿಯೇ ಲೈಂಗಿಕ ದೌರ್ಜನ್ಯ, ಬಲವಂತದ ಮತಾಂತರ ನಡೆಸಲು ಪ್ರೇರೇಪಿಸುತ್ತಿದ್ದಳು ಎಂಬ ಆಘಾತಕಾರಿ ಮಾಹಿತಿ ಮಹಿಳಾ ಪೊಲೀಸರ ಕಾರ್ಯಾಚರಣೆಯಲ್ಲಿ ತಿಳಿದುಬಂದಿತ್ತು.

ಡಾ.ಶಾಹೀನ್ ಯಾರು?: 2025ರ ದಿಲ್ಲಿ(ಕೆಂಪು ಕೋಟೆ) ಆತ್ಮಾಹುತಿ ಬಾಂಬ್ ಸ್ಫೋಟ ಪ್ರಕರಣದಿಂದ ಬೆಳಕಿಗೆ ಬಂದ ವೈಟ್ ಕಾಲರ್ (ವೈದ್ಯಕೀಯ) ಭಯೋತ್ಪಾದನಾ ಜಾಲದ ಪ್ರಮುಖ ಆರೋಪಿಯಾಗಿದ್ದಳು. ಜೈಶ್-ಎ-ಮೊಹಮ್ಮದ್(ಜೆಇಎಂ) ನಂತಹ ಉಗ್ರ ಸಂಘಟನೆಗಳೊಂದಿಗೆ ಸಂಪರ್ಕದಲ್ಲಿದ್ದ ಡಾ.ಶಾಹೀನ್, ವೈಟ್ ಕಾಲರ್ ಉಗ್ರ ಸಂಚಿನ ಸಂಘಟಕಿಯಾಗಿದ್ದಳು.

ಉತ್ತರಪ್ರದೇಶದ ಗಾಜಿಯಾಬಾದ್‌ನ ಅಲ್-ಫಲಾ ವಿಶ್ವವಿದ್ಯಾಲಯ, ದಿಲ್ಲಿ ಮತ್ತು ಜಮ್ಮು ಕಾಶ್ಮೀರದ ವಿವಿದೆಡೆಯ ವೈದ್ಯಕೀಯ ವೃತ್ತಿಪರರನ್ನು ಸೇರಿಸಿ ತಂಡವನ್ನು ರಚಿಸಿಕೊಂಡಿದ್ದಳು ಎಂದು ದಿಲ್ಲಿ ಪೊಲೀಸ್ ಮತ್ತು ಎನ್‌ಐಎ ತನಿಖೆಯಲ್ಲಿ ತಿಳಿದುಬಂದಿದೆ. ಭಾರತದಲ್ಲಿ ಜೆಇಎಂ ಮಹಿಳಾ ಘಟಕ ಸ್ಥಾಪಿಸುವುದೇ ಈಕೆಯ ಗುರಿಯಾಗಿತ್ತು.

ಕಂಪನಿಗಷ್ಟೇ ಸೀಮಿತವಲ್ಲ?: ಕೆಲವು ಮೂಲಗಳ ಪ್ರಕಾರ, ಇದು ನಾಸಿಕ್‌ನಲ್ಲಿ ಟಿಸಿಎಸ್ ಅಥವಾ ಕಂಪನಿಗಷ್ಟೇ ಸೀಮಿತವಾಗಿರದೆ, ಇನ್ನಷ್ಟು ದೊಡ್ಡ ಸಂಪರ್ಕಜಾಲವೆಂಬ ಮಾಹಿತಿಯಿದೆ. ಕೇವಲ ನಾಸಿಕ್ ಮಾತ್ರವಲ್ಲದೆ, ಹಲವು ನಗರಗಳಲ್ಲಿ ಒಂದು ದೊಡ್ಡ ಸಂಪರ್ಕಜಾಲವಾಗಿ ಸೇರಿಕೊಂಡು ಹಿಂದು ಮಹಿಳೆಯರು ಅಥವಾ ಮಹಿಳಾ ಉದ್ಯೋಗಿಗಳನ್ನು ಇಸ್ಲಾಂಗೆ ಬಲವಂತದ ಮತಾಂತರ ನಡೆಸಲು ದೊಡ್ಡ ಜಾಲ ನಡೆಸುತ್ತಿದ್ದಾರೆಂಬ ಸಂಶಯ ವ್ಯಕ್ತವಾಗಿದೆ.

ನಿದಾ ಎಲ್ಲಿದ್ದಾಳೆ

ಆರೋಪಿ ನಿದಾ ಖಾನ್‌ಗಾಗಿ ಪೊಲೀಸರು ಭಿವಂಡಿ ಸಹಿತ ಹಲವು ಸ್ಥಳಗಳಲ್ಲಿ ಹುಡುಕಾಟ ನಡೆಸುತ್ತಿದ್ದಾರೆ. ನಿದಾ ಬಂಧಿಸಿದರೆ ಹಲವು ಪ್ರಶ್ನೆಗಳಿಗೆ ಉತ್ತರ ಸಿಗಬಹುದೆಂಬ ನಂಬಿಕೆ ಯಲ್ಲಿ ಪೊಲೀಸರಿದ್ದಾರೆ.

ದಿಲ್ಲಿಗೆ ಸಿಎಂ, ಡಿಸಿಎಂ, ಪಕ್ಷದ ವರಿಷ್ಠರ ಭೇಟಿ?

ಪುಟ ೩➡ ಈ ಅವಧಿಯಲ್ಲಿ ಪಕ್ಷದ ವರಿಷ್ಠರ ಭೇಟಿಯಾಗುವ ಸಾಧ್ಯತೆ ಇದೆ. ಸಂಪುಟ ವಿಸ್ತರಣೆ ಮಾಡಬೇಕೆಂದು ಒತ್ತಾಯಿಸುತ್ತಿರುವ ಸಚಿವ ಸ್ಥಾನದ ಆಕಾಂಕ್ಷಿಗಳ ಒತ್ತಡವನ್ನು ಹೈಕಮಾಂಡ್ ಗಮನಿಸಿದ್ದು, ಇತ್ತೀಚೆಗೆ ನಡೆದ ದಾವಣಗೆರೆ ಉಪಚುನಾವಣೆಯಲ್ಲಿ ಉಂಟಾದ ಬಂಡಾಯದ ಬಗ್ಗೆ ವರದಿ ಕೇಳುವ ಸಾಧ್ಯತೆ ಇರುವುದರಿಂದ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಬಳಿ ವಿವರ ನೀಡಲು ಸಿದ್ಧತೆ ಮಾಡಿಕೊಳ್ಳಲಾಗಿದೆಂದು ಮಾಹಿತಿ ಇದೆ. ದಾವಣಗೆರೆ ಉಪಚುನಾವಣೆಯಲ್ಲಿ ಹಿನ್ನಡೆಯಾದರೆ ಜಮೀರ್ ತಲೆದಂಡ ಎಂದು ಹೇಳಲಾಗುತ್ತಿದ್ದು, ಚುನಾವಣೆ ಪೂರ್ವ, ಚುನಾವಣೆ ಸಂದರ್ಭದಲ್ಲಿ ಸಚಿವ ಜಮೀರ್ ಅವರ ಕಾರ್ಯವೈಖರಿ ಹೈಕಮಾಂಡ್‌ಗೆ ಅಸಮಾಧಾನ ತಂದಿದೆ.

ಹೈಕಮಾಂಡ್ ಭೇಟಿಯಾದ ಹಿರಿಯ ಶಾಸಕರ ನಿಯೋಗ

ಪುಟ ೩➡ ಸಚಿವ ಸಂಪುಟ ಪುನರ್ ರಚನೆಯಾಗಬೇಕು. ತಮಗೆ ಅವಕಾಶ ನೀಡಬೇಕು ಎಂಬುದು ಈ ಶಾಸಕರ ಬೇಡಿಕೆಯಾಗಿದೆ. ಅದೇ ಸಮಯದಲ್ಲಿ ರಾಜ್ಯದಲ್ಲಿನ ನಾಯಕತ್ವ ಬದಲಾವಣೆಯಲ್ಲಿನ ಗೊಂದಲಗಳನ್ನು ಬಗೆಹರಿಸುವಂತೆ ಹಿರಿಯ ಶಾಸಕರು ಮನವಿ ಮಾಡಿದ್ದಾರೆ. ಕಳೆದ ಭಾನುವಾರದಿಂದಲೂ ದಿಲ್ಲಿಯಲ್ಲೇ ಬೀಡುಬಿಟ್ಟಿರುವ ಶಾಸಕರು ಸೋಮವಾರ ಎಐಸಿಸಿಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿ ಮಾಡಿದ್ದರು. ಅನಂತರ ರಾಹುಲ್ ಗಾಂಧಿ ಸೇರಿದಂತೆ ಬೇರೆ ಯಾವ ನಾಯಕರೂ 5 ದಿನಗಳಾದರೂ ಲಭ್ಯವಾಗಿರಲಿಲ್ಲ. ಶಾಸಕರ ಒತ್ತಡಕ್ಕೆ ಮಣಿದು ರಣದೀಪ್ ಸಿಂಗ್ ಸುರ್ಜೇವಾಲ ಭೇಟಿಗೆ ಸಮಯ ನೀಡಿತ್ತು. ಕೆ.ಸಿ. ವೇಣುಗೋಪಾಲ್ ಕೇರಳದಿಂದ ದಿಲ್ಲಿಗೆ ಮರಳಿದ್ದರೂ ಕೂಡ ಹಿರಿಯ ಶಾಸಕರ ನಿಯೋಗಕ್ಕೆ ಸಮಯ ನೀಡಲು ಹಿಂದೇಟು ಹಾಕಿದ್ದರು.

ಸಂಪುಟ ಪುನಾರಚನೆ ಸಿಎಂ ಪರಮಾಧಿಕಾರ: ಸಚಿವ ಸ್ಥಾನಕ್ಕಾಗಿ ಶಾಸಕರು ದಿಲ್ಲಿಗೆ ಭೇಟಿ ನೀಡುವ ಅಗತ್ಯ ಇಲ್ಲ. ಹೀಗಾಗಿ ಎಲ್ಲರೂ ವಾಪಸ್ ತೆರಳಿ ಎಂದು ವರಿಷ್ಠರು ಸಂದೇಶ ರವಾನಿಸಿದ್ದಾರೆ. ಸಂಸತ್‌ನಲ್ಲಿ ಮಹಿಳಾ ಮೀಸಲಾತಿಯ ಮಸೂದೆ ಮಂಡನೆಯಾಗುತ್ತಿದೆ. ಅತೀ ಮುಖ್ಯವಾದ ಈ ಮಸೂದೆ ಮೇಲಿನ ಚರ್ಚೆಗೆ ಕಾಂಗ್ರೆಸ್ ಹಿರಿಯ ನಾಯಕರು ತಯಾರಿ ನಡೆಸುತ್ತಿದ್ದಾರೆ. ಹೀಗಾಗಿ ಕರ್ನಾಟಕದ ನಿಯೋಗಕ್ಕೆ ಭೇಟಿ ಮಾಡಲು ಸಮಯ ನೀಡುತ್ತಿಲ್ಲ ಎಂದು ಹೇಳಲಾಗಿದೆ. ಅಲ್ಲದೇ, ಸಚಿವ ಸಂಪುಟ ವಿಸ್ತರಣೆ ಸಿಎಂ ಅವರ ಪರಮಾಧಿಕಾರ ಹೀಗಿರುವಾಗ ಹೈಕಮಾಂಡ್ ಮಧ್ಯಪ್ರವೇಶ ಸಾಧ್ಯವಿಲ್ಲ ಎಂದು ಸಪಷ್ಟಪಡಿಸಿದೆ ಎನ್ನಲಾಗಿದೆ.

ಕಾಂಗ್ರೆಸ್‌ನಿಂದ ಇಡೀ ಮುಸ್ಲಿಂ ಸಮುದಾಯ ದೂರವಾಗುತ್ತೆ!

ಪುಟ ೩➡ ಈಗಲಾದರೂ ಕಾಂಗ್ರೆಸ್ ತನ್ನ ತಪ್ಪು ಸರಿಪಡಿಸಿಕೊಳ್ಳದಿದ್ದರೆ, ಮುಸ್ಲಿಂ ಸಮುದಾಯ ಪಾಠ ಕಲಿಸುವ ಕೆಲಸ ಮಾಡುತ್ತದೆ ಎಂದರು. ಮುಸ್ಲಿಂ ನಾಯಕರಿಗೆ ತೊಂದರೆ ನೀಡಿದರೆ ಸಮುದಾಯದವರು ಕಾಂಗ್ರೆಸ್ಸಿಂದ ದೂರ ಸರಿದು, ಪ್ರಾದೇಶಿಕ ಪಕ್ಷ ಹುಟ್ಟು ಹಾಕುತ್ತೇವೆ. ಮುಸ್ಲಿಂ ಸೇರಿದಂತೆ ಅಹಿಂದ ವರ್ಗದ ಎಲ್ಲಾ ಜಾತಿ, ಸಮುದಾಯ ಒಟ್ಟುಗೂಡಿದರೆ, ಕಾಂಗ್ರೆಸ್, ಬಿಜೆಪಿಯಂತಹ ರಾಷ್ಟ್ರೀಯ ಪಕ್ಷ ಅಥವಾ ಜೆಡಿಎಸ್‌ನಂತಹ ಪ್ರಾದೇಶಿಕ ಪಕ್ಷದಂತಹ ಪರ್ಯಾಯ ಶಕ್ತಿಯ ಉದಯವಾಗಲಿದೆ. ಕಾಂಗ್ರೆಸ್ಸಿನಲ್ಲಿ ಜಮೀರ್ ಅಹಮ್ಮದ್ ತಲೆದಂಡವಾದರೆ ಮುಂದಿನ ದಿನಗಳಲ್ಲಿ ಕಾಂಗ್ರೆಸ್ ನೆಲ ಕಚ್ಚಲಿದೆ. ಕೆ.ಅಬ್ದುಲ್‌ಜಬ್ಬಾರ್‌ಗೆ ಏನಾದರೂ ತೊಂದರೆಯಾದರೆ ದಾವಣಗೆರೆ ನಗರ, ಜಿಲ್ಲೆಯಲ್ಲಷ್ಟೇ ಅಲ್ಲ, ಎಲ್ಲಾ ಕಡೆ ಕಾಂಗ್ರೆಸ್ ಸರ್ವನಾಶವಾಗುತ್ತದೆ. ದಾವಣಗೆರೆ ದಕ್ಷಿಣದ ಕಾಂಗ್ರೆಸ್ ಅಭ್ಯರ್ಥಿ ಸಮರ್ಥ ಶಾಮನೂರು ವಿರುದ್ಧ ಅಬ್ದುಲ್ ಜಬ್ಬಾರ್ ಪಕ್ಷ ವಿರೋಧಿ ಚಟುವಟಿಕೆ ಮಾಡಿದ್ದಾರೆಂದು ಪಕ್ಷದ ಪ್ರಾಥಮಿಕ ಸದಸ್ಯತ್ವದಿಂದಲೇ ತೆಗೆದು ಹಾಕಿದ್ದು ಖಂಡನೀಯ ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದರು.

ಮುಸ್ಲಿಂ ನಾಯಕರ ವಿರುದ್ಧ ಕಾಂಗ್ರೆಸ್ ಕ್ರಮ ಕೈಗೊಂಡರೆ, ವಿಶ್ವ ಮುಸ್ಲಿಂ ಪರಿಷತ್ತನ್ನು ರಾಜಕೀಯ ಪಕ್ಷವಾಗಿ ಮಾಡುತ್ತೇವೆ. ಜಮೀರ್ ಅಹಮದ್ ಅವರನ್ನೇ ರಾಷ್ಟ್ರೀಯ ಅಧ್ಯಕ್ಷರನ್ನಾಗಿ ಮಾಡಿ, ಲಕ್ಷಾಂತರ ಜನರನ್ನು ಸೇರಿಸಿ ಸಮಾವೇಶ ಮಾಡುತ್ತೇವೆ. ಕಾಂಗ್ರೆಸ್ ಅಲ್ಪಸಂಖ್ಯಾತರನ್ನು ಕಡೆಗಣಿಸಿದರೆ, ರಾಜಕೀಯವಾಗಿ ಮುಗಿಸಲು ಹೊರಟರೆ ಕೈಕಟ್ಟಿಕೊಂಡು ಕೂರುವ ಸ್ಥಿತಿ ತಂದುಕೊಳ್ಳುತ್ತದೆ. ಮುಸಲ್ಮಾನರ ಸ್ವಾಭಿಮಾನ ಕೆಣಕಿದ ಕಾಂಗ್ರೆಸ್ ಪಕ್ಷ ದಾವಣಗೆರೆ ದಕ್ಷಿಣದಲ್ಲಿ ನೂರಕ್ಕೆ ನೂರರಷ್ಟು ಸೋಲನುಭವಿಸಲಿದೆ ಎಂದು ಅವರು ತಿಳಿಸಿದರು.

ದಾವಣಗೆರೆ ದಕ್ಷಿಣ ಕ್ಷೇತ್ರಕ್ಕೆ ನನ್ನ 40 ವರ್ಷದ ಸ್ನೇಹಿತ ಸಾದಿಕ್ ಪೈಲ್ವಾನ್ ಅವರ ನಾಮಪತ್ರ ಭರ್ತಿ ಮಾಡಿ, ಉಮೇದುವಾರಿಕೆ ಹಾಕಿಸಿದ್ದೇ ನಾನು. ಸಾದಿಕ್‌ಗೆ ನಾಮಪತ್ರ ಸಲ್ಲಿಸಲು ಕೆ.ಅಬ್ದುಲ್ ಜಬ್ಬಾರ್, ನಸೀರ್ ಅಹಮ್ಮದ್, ಜಮೀರ್ ಅಹಮ್ಮದ್ ಯಾರೂ ಹೇಳಿಲ್ಲ. ಆದರೂ ಚುನಾವಣೆ ಫಲಿತಾಂಶ ಬರುವ ಮುನ್ನವೇ ಕಾಂಗ್ರೆಸ್ ಅಲ್ಪಸಂಖ್ಯಾತ ಮುಖಂಡರನ್ನು ಗುರಿಯಾಗಿಸಿಕೊಂಡು, ಕ್ರಮ ಕೈಗೊಳ್ಳುತ್ತಿರುವುದು ಸರಿಯಲ್ಲ. ಇದರಲ್ಲಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಕೈವಾಡವಿದೆ ಎಂದು ಅವರು ಆರೋಪಿಸಿದರು.

ನನ್ನ ಗೆಳೆಯ ಸಾದಿಕ್ ಪೈಲ್ವಾನ್ ಕಾಂಗ್ರೆಸ್ಸಿನಲ್ಲಿ ದುಡಿದರೂ ತನ್ನನ್ನು ಗುರುತಿಸಲಲ್ಲವೆಂದು ಬೇಸರ ತೋಡಿಕೊಂಡಿದ್ದ ಕಾರಣ ನನ್ನದೇ ಹಣದಲ್ಲಿ ಠೇವಣಿ ಕಟ್ಟಿ ನಾಮಪತ್ರ ಸಲ್ಲಿಸಲು ಹೇಳಿದ್ದೆ. ಆದರೆ ಆತ ಇದ್ದಕ್ಕಿದ್ದಂತೆ ಯು ಟರ್ನ್ ಹೊಡೆತ್ತಾನೆಂದು ನಾನಂತೂ ಅಂದುಕೊಂಡಿರಲಿಲ್ಲ. ಚುನಾವಣಾ ಕಣದಲ್ಲಿ ಉಳಿಯುವುದು, ಬಿಡುವುದು ಅವನ ಇಷ್ಟ.

ಸಾದಿಕ್ ಪೈಲ್ವಾನ್‌ಗೆ ನಾಮಪತ್ರ ಸಲ್ಲಿಸಲು, ಹಿಂದಕ್ಕೆ ಪಡೆಯದಂತೆ ಹೇಳಿದ್ದು ನಾನೇ ಹೊರತು ಅಬ್ದುಲ್ ಜಬ್ಬಾರ್, ಜಮೀರ್ ಅಹಮ್ಮದ್, ನಸೀರ್ ಅಹಮ್ಮದ್ ಅಲ್ಲ. ಉಪ ಚುನಾವಣೆಗೆ ಇಡೀ ಕ್ಯಾಬಿನೆಟ್ ದಾವಣಗೆರೆಗೆ ಬಂದು ಠಿಕಾಣಿ ಹೂಡಿತ್ತು. ಇಲ್ಲಿಯೇ ಇದ್ದವರು ಒಂದು ಸಲ ಅಬ್ದುಲ್ ಜಬ್ಬಾರ್ ಮನೆಗೆ ಭೇಟಿ ನೀಡಬೇಕಿತ್ತು. ಸಾದಿಕ್ ಮನೆಯಲ್ಲಿ ಊಟ ಮಾಡಿದ ಸಿಎಂ ಸಿದ್ದರಾಮಯ್ಯ ಕೂಡ ಅಬ್ದುಲ್ ಜಬ್ಬಾರ್ ಮನೆಗೆ ಹೋಗಲಿಲ್ಲ ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದರು. ಪರಿಷತ್ ಮುಖಂಡರಾದ ಪರ್ವೇಜ್, ಮಂಜುನಾಥ, ಅಲ್ಲಾಭಕ್ಷಿ ಸುದ್ದಿಗೋಷ್ಠಿಯಲ್ಲಿದ್ದರು.

ಸಿಎಂ ರೇವಂತ್ ಜಿಡಿಪಿ ಮಾದರಿ ಹಾಸ್ಯಾಸ್ಪದ

ಪುಟ ೧➡ ಸಂವಿಧಾನಾತ್ಮಕ ಕರ್ತವ್ಯವೂ ಆಗಿದೆ' ಎಂದು ಹೇಳಿದರು. ಸರ್ಕಾರ ಮಂಡಿಸಿರುವ ಹೊಸ ಪ್ರಸ್ತಾವನೆಯಿಂದ ಎಲ್ಲಾ ರಾಜ್ಯಗಳಿಗೆ ಹೆಚ್ಚಿನ ಸ್ಥಾನಗಳು ಸಿಗಲಿದ್ದು, 'ಒಂದು ಮತಕ್ಕೆ ಒಂದು ಮೌಲ್ಯ' ಎಂಬ ಮೂಲತತ್ತ್ವದ ಆಧಾರದ ಮೇಲೆ ಪ್ರತಿನಿಧಿತ್ವ ಹೆಚ್ಚುತ್ತದೆ ಎಂದು ವಾದಿಸಿದರು.



ಇದಕ್ಕೆ ವಿರುದ್ಧವಾಗಿ ಕಾಂಗ್ರೆಸ್ ಮೂರು ಪರ್ಯಾಯಗಳನ್ನು ಮುಂದಿಟ್ಟಿದ್ದು ಈಗಿನ 543 ಸ್ಥಾನಗಳನ್ನು ಹಾಗೆಯೇ ಉಳಿಸಿಕೊಳ್ಳುವುದು, ಜನಸಂಖ್ಯೆ ಮತ್ತು ರಾಜ್ಯದ ಜಿಎಸ್‌ಡಿಪಿ ಆಧಾರಿತ ಸಂಯೋಜಿತ ಮಾದರಿ ಹಾಗೂ ಯೂರೋಪಿನ ಮಾದರಿಯ ಅನುಪಾತೀಯ ವಿಧಾನ ಇವುಗಳನ್ನು ಸೂರ್ಯ ತಿರಸ್ಕರಿಸಿದರು.

'ಜಿಎಸ್‌ಡಿಪಿ ಆಧಾರದ ಮೇಲೆ ಮತದ ಮೌಲ್ಯ ನಿರ್ಧರಿಸಿದರೆ ಶ್ರೀಮಂತರಿಗೆ ಹೆಚ್ಚು ಮೌಲ್ಯ ಸಿಗುತ್ತದೆ. ಹಾಗಾದರೆ ಮುಕೇಶ್ ಅಂಬಾನಿ ಅವರಿಗೆ ಲಕ್ಷ ಮತಗಳ ಮೌಲ್ಯ, ಸಾಮಾನ್ಯ ಜನರಿಗೆ ಒಂದೇ ಮತ ಎಂಬ ಪರಿಸ್ಥಿತಿ ಬರಬಹುದು,'' ಎಂದು ವ್ಯಂಗ್ಯವಾಡಿದರು. ಹಾಗೆಯೇ, ಜಿಎಸ್‌ಡಿಪಿ ಏರಿಳಿತದ ಮೇಲೆ ಕ್ಷೇತ್ರಗಳ ಸಂಖ್ಯೆಯನ್ನು ನಿರ್ಧರಿಸುವುದು ಪ್ರಾಯೋಗಿಕವಲ್ಲ ಎಂದು ಅವರು ಹೇಳಿದರು. 'ಒಂದು ವರ್ಷ ಮಳೆ ಚೆನ್ನಾಗಿದ್ದರೆ ಹೆಚ್ಚುವರಿ ಸ್ಥಾನ, ಮುಂದಿನ ವರ್ಷ ಕುಸಿತವಾದರೆ ಕಡಿತ, ಇದು ಸಾಧ್ಯವೇ?' ಎಂದು ಪ್ರಶ್ನಿಸಿದರು. ನಾನು ಹೆಮ್ಮೆಯ ಕನ್ನಡಿಗನಾಗಿ ರೇವಂತ್ ರೆಡ್ಡಿ ಅವರ ಈ ಪ್ರಸ್ತಾಪವನ್ನು ತಿರಸ್ಕರಿಸುತ್ತೇನೆ ಎಂದೂ ಹೇಳಿದರು.

ಈ ಮಸೂದೆಗಳ ಕುರಿತು ಕಾಂಗ್ರೆಸ್ ಸಂಸದರ ಆಕ್ಷೇಪಗಳನ್ನು ತೇಜಸ್ವಿ ಸೂರ್ಯ ತಿರಸ್ಕರಿಸಿದರು. ಹಾಗೆಯೇ, ಆಂಧ್ರ ಪ್ರದೇಶವನ್ನು ಅತ್ಯಂತ ಕೆಟ್ಟ ರೀತಿಯಲ್ಲಿ ಇಬ್ಭಾಗ ಮಾಡಿದ ಕಾಂಗ್ರೆಸ್ ಈಗ ಮೊಸಳೆ ಕಣ್ಣೀರು ಸುರಿಸುತ್ತಿದೆ. ಆಗ ಆಂಧ್ರ ಪ್ರದೇಶವನ್ನು ಕಾಂಗ್ರೆಸ್, ಬ್ರಿಟಿಷರು ಭಾರತ ವನ್ನು ಇಬ್ಭಾಗ ಮಾಡಿದ್ದಕ್ಕಿಂತ ಕೆಟ್ಟದಾಗಿತ್ತು ಎಂದು ಆರೋಪಿಸಿದರು.

ಕಾಂಗ್ರೆಸ್ ತುಕ್ಡೆ ತುಕ್ಡೆ ಗ್ಯಾಂಗ್ ಜತೆಯಲ್ಲಿದ್ದರೆ, ಡಿಎಂಕೆ ಪ್ರತ್ಯೇಕತಾವಾದದ ಬಗ್ಗೆ ಮಾತನಾಡುತ್ತದೆ. ಆದರೆ, ನಾವು ಇದನ್ನು ಬಲವಾಗಿ ತಿರಸ್ಕರಿಸುತ್ತೇವೆ ಎಂದೂ ಹೇಳಿದರು. ದಕ್ಷಿಣ ರಾಜ್ಯಗಳಿಗೆ ಅನ್ಯಾಯವಾಗುತ್ತದೆ ಎಂಬ ಭಯವನ್ನು ತಳ್ಳಿಹಾಕಿದ ಸೂರ್ಯ, 'ಇದು ತಪ್ಪು ಪ್ರಚಾರ. ದಕ್ಷಿಣ ಭಾರತಕ್ಕೆ ಇದಕ್ಕಿಂತ ಉತ್ತಮ ಒಪ್ಪಂದ ಬೇರೊಂದಿಲ್ಲ' ಎಂದು ಸ್ಪಷ್ಟಪಡಿಸಿದರು. ಈ ವೇಳೆ ಕೇಂದ್ರ ಸರ್ಕಾರ ಕಳೆದ ಹತ್ತು ವರ್ಷಗಳಲ್ಲಿ ದಕ್ಷಿಣ ರಾಜ್ಯಗಳಿಗೆ ನೀಡಿದ ನೆರವು ಶೇ.250ಕ್ಕೂ ಹೆಚ್ಚಾಗಿದೆ ಎಂದು ಹೇಳಿದ ಅವರು, ವಿರೋಧ ಪಕ್ಷಗಳ ಟೀಕೆಗಳನ್ನು ತಳ್ಳಿಹಾಕಿದರು.

598 ಗ್ರಾಪಂಗಳಲ್ಲಿದೆ ಕುಡಿವ ನೀರಿನ ಸಮಸ್ಯೆ

ಪುಟ ೩➡ ಈ ವರ್ಷ ಮುಂಗಾರಿನಲ್ಲಿ ವಾಡಿಕೆಗಿಂತ ಕಡಿಮೆ ಮಳೆಯಾಗುವ ಸಾಧ್ಯತೆಯಿದೆ ಎಂದು ಕೇಂದ್ರ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಆಗಸ್ಟ್‌ನಲ್ಲಿ ವಾಡಿಕೆ ಮಳೆಯಾಗುವ ಸಾಧ್ಯತೆಯಿದ್ದು, ಸೆಪ್ಟೆಂಬರ್‌ನಲ್ಲಿ ಮಳೆ ಕಡಿಮೆ ನಿರೀಕ್ಷಿಸಲಾಗಿದೆ. ರಾಜ್ಯದ ಐದು ಜಿಲ್ಲೆಗಳನ್ನು ಹೊರತುಪಡಿಸಿ ಉಳಿದ 26 ಜಿಲ್ಲೆಗಳಲ್ಲಿ ಮುಂಗಾರು ಕೊರತೆ ನಿರೀಕ್ಷಿಸಲಾಗಿದ್ದು, ಕುಡಿಯುವ ನೀರಿಗೆ ತೊಂದರೆಯಾಗದಂತೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲು ಜಿಲ್ಲಾಧಿಕಾರಿಗಳಿಗೆ ಸಿಎಂ ಸಿದ್ದರಾಮಯ್ಯ ಸೂಚಿಸಿದರು.

ತೊಂದರೆಯಾದರೆ ಡಿಸಿಗಳೇ ಹೊಣೆ: ಕುಡಿಯುವ ನೀರಿಗೆ ತೊಂದರೆಯಾದರೆ ಆಯಾ ಡಿಸಿಗಳೇ ಇದಕ್ಕೆ ಹೊಣೆಯಾಗುತ್ತಾರೆ. ಕಂದಾಯ, ಪಂಚಾಯತ್ ರಾಜ್ ಹಾಗೂ ನಗರಾಭಿವೃದ್ಧಿ ಇಲಾಖೆಗಳು ಪರಸ್ಪರ ಸಮನ್ವಯದೊಂದಿಗೆ ಕಾರ್ಯ ನಿರ್ವಹಿಸಬೇಕು ಎಂದು ಸಿಎಂ ಸೂಚಿಸಿದರು. ಈ ಬಾರಿ ಏಪ್ರಿಲ್-ಜೂನ್ ಅವಧಿಯಲ್ಲಿ ಉತ್ತರ ಒಳನಾಡಿನ ಬಹುತೇಕ ಜಿಲ್ಲೆಗಳಲ್ಲಿ ವಾಡಿಕೆಗಿಂತ ಹೆಚ್ಚು ಬಿಸಿಗಾಳಿ ದಿನಗಳು ಕಂಡುಬರುವ ಸಾಧ್ಯತೆಯಿದೆ. ಇಂತಹ ಸಂದರ್ಭದಲ್ಲಿ ಯಾವ ರೀತಿಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕು. ಹವಾಮಾನ ಇಲಾಖೆಯ ಮುನ್ಸೂಚನೆಗಳನ್ನು ಗಂಭೀರವಾಗಿ ಪರಿಗಣಿಸಬೇಕು ಎಂಬ ಬಗ್ಗೆ ಎಲ್ಲಾ ಜಿಲ್ಲಾಧಿಕಾರಿಗಳು ಸೂಚನೆಗಳನ್ನು ನೀಡಬೇಕು ಎಂದರು.

22 ಕೊಳವೆ ಬಾವಿಗಳು ಬಾಡಿಗೆಗೆ: ಪ್ರಸ್ತುತ 27 ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕುಡಿಯುವ ನೀರಿನ ಸಮಸ್ಯೆಯಿದ್ದು, 95 ನಗರ ಸ್ಥಳೀಯ ಸಂಸ್ಥೆಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾಗಬಹುದು ಎಂದು ಗುರುತಿಸಲಾಗಿದೆ. ಒಟ್ಟು 145 ವಾರ್ಡ್‌ಗಳಿಗೆ 57 ಟ್ಯಾಂಕರ್‌ಗಳ ಮೂಲಕ ಕುಡಿಯುವ ನೀರು ಪೂರೈಕೆ ಮಾಡಲಾಗುತ್ತಿದ್ದು, ಬಾಡಿಗೆಗೆ 22 ಕೊಳವೆ ಬಾವಿಗಳನ್ನು ಪಡೆಯಲಾಗಿದೆ ಎಂದು ಸಭೆಯಲ್ಲಿ ತಿಳಿಸಲಾಯಿತು. ಅನಿವಾರ್ಯ ಸಂದರ್ಭಗಳಲ್ಲಿ ಮಾತ್ರ ಟ್ಯಾಂಕರ್ ನೀರು ಪೂರೈಕೆ ಮಾಡಬೇಕು. ಖಾಸಗಿ ಬೋರ್‌ವೆಲ್‌ಗಳನ್ನು ಬಾಡಿಗೆ ಪಡೆಯುವುದಕ್ಕೆ ಆದ್ಯತೆ ನೀಡಬೇಕು. ಅಗತ್ಯ ಸಂದರ್ಭದಲ್ಲಿ ಕೊಳವೆ ಬಾವಿ ಕೊರೆಯಬಹುದಾಗಿದೆ ಎಂದು ಮುಖ್ಯಮಂತ್ರಿಗಳು ಸೂಚಿಸಿದರು.

ಪ್ರಸ್ತುತ 321.93 ಟಿಎಂಸಿ ನೀರು ಲಭ್ಯ: ರಾಜ್ಯದ ಪ್ರಮುಖ 14 ಜಲಾಶಯಗಳಲ್ಲಿ ಪ್ರಸ್ತುತ 321.93 ಟಿಎಂಸಿ ನೀರು ಲಭ್ಯವಿದ್ದು, ಇದು ಒಟ್ಟು ಸಾಮರ್ಥ್ಯದ ಶೇ.36 ರಷ್ಟಿದೆ. ಕಳೆದ ವರ್ಷ ಇದೇ ಅವಧಿಯಲ್ಲಿ 330.35 ಟಿಎಂಸಿ ನೀರು ಲಭ್ಯವಿತ್ತು. ಪ್ರಸ್ತುತ ಕುಡಿಯುವ ನೀರಿಗೆ ಸಾಕಷ್ಟು ನೀರು ಜಲಾಶಯಗಳಲ್ಲಿ ಲಭ್ಯವಿದೆ. ಕುಡಿಯುವ ನೀರಿಗಾಗಿ ಜಲಾಶಯಗಳಲ್ಲಿ ನೀರಿನ ಲಭ್ಯತೆಯನ್ನು ಖಾತ್ರಿಪಡಿಸಿ ಮಳೆಗಾಲ ವಿಳಂಬವಾಗಿ ಆರಂಭ ವಾಗುವ ಸಾಧ್ಯತೆಯಿರುವುದರಿಂದ ಜುಲೈ ಮಧ್ಯದವರೆಗೂ ಕುಡಿಯುವ ನೀರಿಗಾಗಿ ಜಲಾಶಯಗಳಲ್ಲಿ ನೀರಿನ ಲಭ್ಯತೆ ಖಾತ್ರಿಪಡಿಸಬೇಕು.

ರೈತರಿಗೆ ರಸಗೊಬ್ಬರ ಲಭ್ಯತೆ ಖಾತ್ರಿಪಡಿಸಿ



ಮಧ್ಯಪ್ರಾಚ್ಯ ಯುದ್ಧ ಪರಿಸ್ಥಿತಿಯಿಂದಾಗಿ ಈ ಬಾರಿ ರಸಗೊಬ್ಬರ ಪೂರೈಕೆಯಲ್ಲಿ ಅಡಚಣೆ ಉಂಟಾಗುವ ಸಾಧ್ಯತೆಯಿದೆ. ವ್ಯಾಪಾರಿಗಳು ರಸಗೊಬ್ಬರವನ್ನು ಹೆಚ್ಚಿನ ಪ್ರಮಾಣದಲ್ಲಿ ಖರೀದಿಸಿ ದಾಸ್ತಾನು ಇರಿಸುವುದನ್ನು ತಪ್ಪಿಸಲು ಕ್ರಮ ಕೈಗೊಳ್ಳಬೇಕು. ರೈತರಿಗೆ ಸೂಕ್ತ ಸಮಯದಲ್ಲಿ ರಸಗೊಬ್ಬರ ಲಭ್ಯತೆಯನ್ನು ಖಾತ್ರಿಪಡಿಸಲು ಕ್ರಮ ಕೈಗೊಳ್ಳಬೇಕು. ಯೂರಿಯಾ, ಡಿಎಪಿ ಸರಿಯಾಗಿ ವಿತರಣೆಯಾಗುವಂತೆ ನೋಡಿಕೊಳ್ಳಬೇಕು. ಬೇರೆ ರಾಜ್ಯಗಳಿಗೆ ರಸಗೊಬ್ಬರ ಸಾಗಾಟ ಮಾಡುವುದನ್ನು ನಿಯಂತ್ರಿಸಬೇಕು. ಇದಕ್ಕಾಗಿ ಚೆಕ್ ಪೋಸ್ಟ್‌ಗಳಲ್ಲಿ ತಪಾಸಣೆಯನ್ನು ಬಿಗಿಗೊಳಿಸಬೇಕು ಎಂದು ಮುಖ್ಯಮಂತ್ರಿ ಅವರು ಸೂಚನೆ ನೀಡಿದರು. ಅರ್ಹ ರೈತರಿಗೆ ರಸಗೊಬ್ಬರ ಕೊರತೆಯಾಗದಂತೆ ಎಚ್ಚರಿಕೆ ವಹಿಸಬೇಕು. ಹಾವೇರಿ ಸೇರಿದಂತೆ ಕೆಲವು ಜಿಲ್ಲೆಗಳಲ್ಲಿ ಈಗಾಗಲೇ ಕಳೆದ ವರ್ಷಕ್ಕಿಂತ ಹೆಚ್ಚಿನ ಪ್ರಮಾಣದ ರಸಗೊಬ್ಬರ ಮಾರಾಟವಾಗಿದ್ದು, ಇದಕ್ಕೆ ಕಾರಣವೇನು? ರಸಗೊಬ್ಬರ ಮಾರಾಟದ ಮೇಲೆ ನಿರಂತರ ನಿಗಾವಹಿಸಿ, ಅರ್ಹ ರೈತರಿಗೆ ರಸಗೊಬ್ಬರ ಕೊರತೆಯಾಗದಂತೆ ಎಚ್ಚರಿಕೆ ವಹಿಸಬೇಕು ಎಂದು ಹೇಳಿದರು.

ದಕ್ಷಿಣದ ಸ್ಥಾನ 195ಕ್ಕೆ ಏರಿಕೆ

ಪುಟ೧➡ ದಕ್ಷಿಣ ರಾಜ್ಯಗಳ ಪ್ರಾತಿನಿಧ್ಯ ಶೇಕಡಾವಾರು ಪ್ರಮಾಣವೂ 23.76ರಿಂದ23.87ಕ್ಕೆ,ಅಂದರೆಸುಮಾರುಶೇ.24ಕ್ಕೆಏರಿಕೆಯಾಗಲಿದೆ ಎಂದು ವಿವರಿಸಿದರು. ರಾಜ್ಯವಾರು ವಿವರಗಳನ್ನು ನೀಡಿದ ಶಾ, ಕರ್ನಾಟಕದಲ್ಲಿ ಲೋಕಸಭೆ ಸ್ಥಾನಗಳು 28ರಿಂದ 42ಕ್ಕೆ, ಆಂಧ್ರ



ಪ್ರದೇಶದಲ್ಲಿ 25ರಿಂದ 38ಕ್ಕೆ, ತೆಲಂಗಾಣದಲ್ಲಿ 17ರಿಂದ 26ಕ್ಕೆ, ತ.ನಾಡಿನಲ್ಲಿ 39ರಿಂದ 59ಕ್ಕೆ ಹಾಗೂ ಕೇರಳದಲ್ಲಿ 20ರಿಂದ 30ಕ್ಕೆ ಏರಿಕೆಯಾಗಲಿದೆ ಎಂದರು. ಲೋಕಸಭೆಯ ಒಟ್ಟು ಸ್ಥಾನಗಳನ್ನು ಗರಿಷ್ಠ 850ರವರೆಗೆ ಹೆಚ್ಚಿಸುವ ಅವಕಾಶ ಮಸೂದೆಯಲ್ಲಿ ಉಲ್ಲೇಖವಾಗಿದ್ದರೂ, ವಾಸ್ತವಿಕವಾಗಿ 816 ಸ್ಥಾನಗಳಲ್ಲೇ ನಿಗದಿಯಾಗಲಿದೆ ಎಂದು ಶಾ ಸ್ಪಷ್ಟಪಡಿಸಿದರು.


ಇದು ಇಂದಿನ ಸಂಖ್ಯೆಯಿಗಿಂತ ಶೇ.50ರಷ್ಟು ಹೆಚ್ಚಳವಾಗಿದೆ. ಮಹಿಳಾ ಮೀಸಲಾತಿ ಕುರಿತು ಮಾತನಾಡಿದ ಶಾ, ಶೇ.33 ಮೀಸಲಾತಿ 2029ರ ಲೋಕಸಭೆ ಚುನಾವಣೆಯಿಂದ ಮಾತ್ರ ಜಾರಿಗೆ ಬರುತ್ತದೆ ಎಂದು ಹೇಳಿದರು. ಅದರವರೆಗೆ ನಡೆಯುವ ಎಲ್ಲಾ ಚುನಾವಣೆಗಳು ಇಂದಿನ ವ್ಯವಸ್ಥೆಯಲ್ಲೇ ನಡೆಯಲಿವೆ. 2027ರ ಉತ್ತರ ಪ್ರದೇಶ ವಿಧಾನಸಭೆ ಚುನಾವಣೆಯೂ ಇದೇ ವ್ಯವಸ್ಥೆಯಡಿ ನಡೆಯಲಿದೆ ಎಂದರು. ಸಮಾಜವಾದಿ ಪಕ್ಷದ ನಾಯಕ ಅಖಿಲೇಶ್ ಯಾದವ್ ಅವರನ್ನು ಉದ್ದೇಶಿಸಿ ಮಾತನಾಡಿದ ಶಾ, ಉತ್ತರ ಪ್ರದೇಶದಲ್ಲಿ ಗೆಲುವಿನ ಬಗ್ಗೆ ಚಿಂತಿಸುವ ಅಗತ್ಯವಿಲ್ಲ ಎಂದು ವ್ಯಂಗ್ಯವಾಡಿದರು. ಜಾತಿ ಜನಗಣತಿ ಕುರಿತ ಬೇಡಿಕೆ ಬಗ್ಗೆ ಪ್ರತಿಕ್ರಿಯಿಸಿದ ಶಾ, ಸರ್ಕಾರ ಈಗಾಗಲೇ ಜಾತಿಗಣತಿ ನಡೆಸಲು ನಿರ್ಧಾರ ಕೈಗೊಂಡಿದೆ ಎಂದರು.

ಎಚ್‌ಡಿಕೆ ಬೆದರಿಕೆ ಆರೋಪ: ಮಧ್ಯಸ್ಥಿಕೆಗೆ ನ್ಯಾ.ಓಕಾ ನೇಮಕ

ಬೆಂಗಳೂರು: ಲೋಕಾಯುಕ್ತ ಎಡಿಜಿಪಿ ಎಂ.ಚಂದ್ರಶೇಖರ್ ಮತ್ತು ಅವರ ಕುಟುಂಬಕ್ಕೆ ಕೇಂದ್ರ ಸಚಿವ ಎಚ್.ಡಿ ಕುಮಾರಸ್ವಾಮಿ ಬೆದರಿಕೆ ಹಾಕಿರುವ ಆರೋಪಕ್ಕೆ ಸಂಬಂಧಿಸಿದಂತೆ ದಾಖಲಾಗಿರುವ ಪ್ರಕರಣವನ್ನು ಸಂಧಾನದ ಮೂಲಕ ಇತ್ಯರ್ಥಪಡಿಸಲು ಮಧ್ಯಸ್ಥಿಕೆದಾರರನ್ನಾಗಿ ಸುಪ್ರೀಂಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎ.ಎಸ್.ಓಕಾ ಅವರನ್ನು ಹೈಕೋರ್ಟ್ ಗುರುವಾರ ನೇಮಿಸಿದೆ.

ಲೋಕಾಯುಕ್ತ ಎಡಿಜಿಪಿ ಮತ್ತು ಎಸ್‌ಐಟಿ ಮುಖ್ಯಸ್ಥ ಎಂ.ಚಂದ್ರಶೇಖರ್ ಅವರಿಗೆ ಬೆದರಿಕೆ ಹಾಕಿದ ಆರೋಪದ ಪ್ರಕರಣದಲ್ಲಿ ತಮ್ಮ ವಿರುದ್ಧ ಸಂಜಯನಗರ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಎಫ್‌ಐಆರ್ ರದ್ದುಪಡಿಸಬೇಕು ಎಂದು ಕೋರಿ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ, ನಿಖಿಲ್ ಕುಮಾರಸ್ವಾಮಿ, ಸುರೇಶ್ ಬಾಬು ಸಲ್ಲಿಸಿರುವ ಅರ್ಜಿ ವಿಚಾರಣೆಯನ್ನು ನ್ಯಾ. ಎಸ್.ಸುನೀಲ್ ದತ್ ಯಾದವ್ ಅವರ ಏಕಸದಸ್ಯ ಪೀಠ ನಡೆಸಿತು. ಕಳೆದ ಬಾರಿ ನಡೆದ ವಿಚಾರಣೆಯಲ್ಲಿ ಕರ್ನಾಟಕ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಆಗಿದ್ದ ನ್ಯಾ. ಎ.ಎಸ್. ಓಕಾ ಅವರನ್ನು ಮಧ್ಯಸ್ಥಿಕೆದಾರರನ್ನಾಗಿ ನೇಮಿಸುವುದಾಗಿ ಹೇಳಲಾಗಿತ್ತು. ಇದಕ್ಕೆ ಉಭಯ ಪಕ್ಷಕಾರರು ಒಪ್ಪಿಗೆ ಸೂಚಿಸಿದ್ದಾರೆ. ಹೀಗಾಗಿ, ನ್ಯಾ. ಓಕಾ ಅವರನ್ನು ಮಧ್ಯಸ್ಥಿಕೆದಾರರನ್ನಾಗಿ ನೇಮಿಸಲಾಗಿದೆ. ಗೌರವಧನ ಮತ್ತು ವೆಚ್ಚದ ಕುರಿತು ಪಕ್ಷಕಾರರು ನಿರ್ಧರಿಸಿಕೊಳ್ಳಬಹುದು. ಮಧ್ಯಸ್ಥಿಕೆ ಸ್ಥಳ ಮತ್ತು ಇತರೆ ವಿಚಾರಗಳನ್ನು ಆದೇಶದಲ್ಲಿ ಉಲ್ಲೇಖಿಸಲಾಗುವುದು ಎಂದು ಪೀಠ ಆದೇಶಿಸಿತು.


ಈ ನಡುವೆ ಕುಮಾರಸ್ವಾಮಿ ಪರ ಹಿರಿಯ ವಕೀಲ ಹಷ್ಮತ್ ಪಾಷಾ ಅವರು ಮಧ್ಯಸ್ಥಿಕೆದಾರರು ಉಭಯ ಪಕ್ಷಕಾರರನ್ನು ಪ್ರತ್ಯೇಕವಾಗಿ ಸಂಪರ್ಕಿಸಿ, ಚರ್ಚಿಸಬೇಕು ಎಂದರು. ಇದಕ್ಕೆ ಪೀಠವು ಮಧ್ಯಸ್ಥಿಕೆದಾರರು ಎಲ್ಲವನ್ನೂ ನಿಭಾಯಿಸಲಿದ್ದಾರೆ. ಏತಕ್ಕಾಗಿ ಈ ಪ್ರಕರಣವನ್ನು ಅವರಿಗೆ ಕಳುಹಿಸಲಾಗಿದೆ ಎಂಬುದು ಗೊತ್ತಿರುತ್ತದೆ. ಸ್ಥಳವನ್ನು ಅವರು ನಿಗದಿ ಮಾಡುತ್ತಾರೆ. ಇದು ಮತ್ತೆ ಇಲ್ಲಿಗೆ ಬರುವುದಿಲ್ಲ ಎಂಬ ವಿಶ್ವಾಸ ಹೊಂದೋಣ ಎಂದಿತು.



ಗೃಹ ಕಚೇರಿ ಕೃಷ್ಣದಲ್ಲಿ ಗುರುವಾರ ಸಿಎಂ ಸಿದ್ದರಾಮಯ್ಯ ಅವರು ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಿದರು.

ತೃತೀಯ ಭಾಷೆಗೆ ಗ್ರೇಡ್: ಹೈ ತಡೆ

ಬೆಂಗಳೂರು: ಪ್ರಸಕ್ತ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹಿಂದಿ ಸೇರಿದಂತೆ ತೃತೀಯ ಭಾಷಾ ವಿಷಯಗಳಿಗೆ ಗ್ರೇಡ್ ನೀಡುವ ಸರ್ಕಾರದ ನಿರ್ಧಾರಕ್ಕೆ ಹೈಕೋರ್ಟ್ ತಡೆ ನೀಡಿದ್ದು, ಅಂಕಗಳನ್ನೇ ನೀಡುವಂತೆ ರಾಜ್ಯ ಸರ್ಕಾರಕ್ಕೆ ಮಹತ್ವದ ನಿರ್ದೇಶನ ನೀಡಿದೆ.



ಸರ್ಕಾರದ ಇತ್ತೀಚಿನ ನಿರ್ಧಾರವನ್ನು ಪ್ರಶ್ನಿಸಿ ಸಹನಾ ಆರ್. ನಾಯ್ಕ್ ಸೇರಿದಂತೆ ಮೂವರು ವಿದ್ಯಾರ್ಥಿಗಳು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾ. ಇ.ಎಸ್. ಇಂದಿರೇಶ್ ಅವರಿದ್ದ ಏಕಸದಸ್ಯ ನ್ಯಾಯಪೀಠವು ಈ ಆದೇಶ ಹೊರಡಿಸಿದೆ.

ಅರ್ಜಿದಾರರ ಪರ ವಾದ ಮಂಡಿಸಿದ ವಕೀಲ ಆರ್.ವಿ. ನಾಯ್ಕ್, ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯಮಾಪನ ಮಂಡಳಿಯು 2024-25ರಲ್ಲಿ ಹೊರಡಿಸಿರುವ ಮಾರ್ಗಸೂಚಿಗಳ ಪ್ರಕಾರ, ತೃತೀಯ ಭಾಷೆಗಳಿಗೆ 80 ಅಂಕಗಳ ಲಿಖಿತ ಪರೀಕ್ಷೆ ಮತ್ತು 20 ಅಂಕಗಳ ಆಂತರಿಕ ಮೌಲ್ಯಮಾಪನ ಅಂಕಗಳನ್ನು ನೀಡಬೇಕು. ಆದರೆ, ಪರೀಕ್ಷೆ ನಡೆಯುತ್ತಿರುವ ಸಂದರ್ಭದಲ್ಲೇ ಸರ್ಕಾರವು ಅಂಕಗಳ ಬದಲಿಗೆ ಗ್ರೇಡ್ ನೀಡಲು ಮುಂದಾಗಿರುವುದು ಸರಿಯಲ್ಲ ಎಂದು ಆಕ್ಷೇಪ ವ್ಯಕ್ತಪಡಿಸಿದರು.

ಮುಂದುವರಿದು, ಯುಪಿಎಸ್‌ಸಿ ಸೇರಿದಂತೆ ಕೇಂದ್ರ ಸರ್ಕಾರದ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಗ್ರೇಡ್‌ಗಳನ್ನು ಪರಿಗಣಿಸದೆ ಅಂಕಗಳನ್ನು ಮಾತ್ರ ಗಣನೆಗೆ ತೆಗೆದುಕೊಳ್ಳಲಾಗುತ್ತದೆ. ಸರ್ಕಾರದ ಈ ಹಠಾತ್ ಬದಲಾವಣೆಯಿಂದಾಗಿ ರಾಜ್ಯದ ವಿದ್ಯಾರ್ಥಿಗಳಿಗೆ ಭವಿಷ್ಯದಲ್ಲಿ ಉದ್ಯೋಗ ಮತ್ತು ಉನ್ನತ ಶಿಕ್ಷಣದ ಸಮಯದಲ್ಲಿ ತೊಂದರೆಯಾಗಲಿದೆ ಎಂದು ನ್ಯಾಯಾಲಯದ ಗಮನಕ್ಕೆ ತಂದರು.

ಹಳೆಯ ಮಾರ್ಗಸೂಚಿ ಅನುಸರಿಸಿ

ವಿಚಾರಣೆ ವೇಳೆ ಸರ್ಕಾರದ ಪರ ವಕೀಲರು ಉತ್ತರಿಸಿ, ಗ್ರೇಡಿಂಗ್ ವ್ಯವಸ್ಥೆಯ ಬಗ್ಗೆ ಸದ್ಯ ಕರಡು ಅಧಿಸೂಚನೆ ಹೊರಡಿಸಲಾಗಿದೆ ಎಂದು ತಿಳಿಸಿದರು. ವಾದ-ಪ್ರತಿವಾದಗಳನ್ನು ಆಲಿಸಿದ ಪೀಠವು, ಚಾಲ್ತಿಯಲ್ಲಿರುವ ನಿಯಮಗಳು ಮತ್ತು ಹಳೆಯ ಮಾರ್ಗಸೂಚಿಗಳನ್ನೇ ಅನುಸರಿಸಬೇಕು ಎಂದು ಸ್ಪಷ್ಟಪಡಿಸಿತು.

ಕಿರುಸುದ್ದಿ

ಯೋಗೇಶಗೌಡ ಸಾವಿಗೆ ನ್ಯಾಯ ಸಿಕ್ಕಿದೆ: ಅಕ್ಕಮಹಾದೇವಿ

ಹುಬ್ಬಳ್ಳಿ: ನನ್ನ ಸಹೋದರನ(ಯೋಗೇಶಗೌಡ) ಸಾವಿಗೆ ಕೊನೆಗೂ ನ್ಯಾಯ ಸಿಕ್ಕಿದೆ. ಅವನ ಹತ್ಯೆ ಮಾಡಿದ ಅಪರಾಧಿಗಳಿಗೆ ಜೀವಾವಧಿ ಶಿಕ್ಷೆಯಾಗಬೇಕು ಎಂದು ಯೋಗೇಶಗೌಡ ಅವರ ಸಹೋದರಿ ಅಕ್ಕಮಹಾದೇವಿ ತಿಳಿಸಿದರು. ನಗರದಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪ್ರಕರಣಕ್ಕೆ ಸಂಬಂಧಿಸಿದಂತೆ ನಮ್ಮ ತಾಯಿ ನ್ಯಾಯಾಲಯ ಮೊರೆ ಹೋದರು. ಬಸವರಾಜ ಕೊರವರ ಸೇರಿದಂತೆ ಅನೇಕರು ಸಹಕಾರ ನೀಡಿದ್ದಾರೆ. ಆತನನ್ನು ಮೋಸದಿಂದ ಕೊಲೆ ಮಾಡಿದರು. ಅವಾಗಲೇ ಆತನ ಸಾವಿಗೆ ನ್ಯಾಯ ದೊರೆಯಬೇಕಿತ್ತು ಎಂದರು. ಕೊಲೆ ಮಾಡಿಸಿದ ವ್ಯಕ್ತಿಗೆ ಅಧಿಕಾರವಿದೆ ಎಂಬ ದರ್ಪದಲ್ಲಿದ್ದ. ದೇವರು ಹಾಗೂ ಕಾನೂನು ನಮ್ಮ ಕೈ ಹಿಡಿದಿದೆ. ನ್ಯಾಯ ದೊರಕಿದ್ದು, ಸಂತಸ ತರಿಸಿದೆ. ನಮ್ಮ ಸಹೋದರನ ಆತ್ಮಕ್ಕೆ ಶಾಂತಿ ಸಿಕ್ಕಿದೆ. ಬಸವರಾಜ ಮುತಗಿ ಆವಾಗಲೇ ಸ್ವಲ್ಪ ಮಾಹಿತಿ ನೀಡಿದ್ದರೆ ನನ್ನ ಸಹೋದರ ಸಾಯುತ್ತಿರಲಿಲ್ಲ. ಈಗ ನಮ್ಮ ಕುಟುಂಬ ನೆಮ್ಮದಿಯಿಂದ ಇರುತ್ತಿತ್ತು. ಆದರೆ, ಹಲವು ವರ್ಷಗಳ ಬಳಿಕ ನಮ್ಮ ಸಹೋದರನಿಗೆ ನ್ಯಾಯ ದೊರೆಕಿದೆ ಎಂದು ಹೇಳಿದರು. ನಮಗೆ ಯಾರ ಜೀವ ಬೆದರಿಕೆ ಇಲ್ಲ. ಹಿಂದೆ ನನ್ನ ಸಹೋದರನಿಗೆ ಹಾಗೂ ಕುಟುಂಬಕ್ಕೆ ಜೀವ ಬೆದರಿಕೆ ಇತ್ತು. ಧೈರ್ಯದಿಂದ ಹೋರಾಟ ಮಾಡಿದ್ದರಿಂದ ನ್ಯಾಯ ದೊರೆಕಿದೆ. ನ್ಯಾಯಾಲಯದ ಮೇಲೆ ನಂಬಿಕೆ ಇಟ್ಟಿದ್ದರಿಂದ ನ್ಯಾಯ ಸಿಕ್ಕಿದೆ ಎಂದರು.

ಹೃದಯಘಾತದಿಂದ ನ್ಯಾಯಾಧೀಶೆ ಸಾವು

ಮಧುಗಿರಿ: ತಾಲೂಕಿನ ಹೆಚ್ಚುವರಿ ಸಿವಿಲ್ ನ್ಯಾಯಾಲಯದ ನ್ಯಾಯಾಧೀಶರಾದ ಕಾಂತಮ್ಮ(43) ಅವರು ಹೃದಯಘಾತದಿಂದ ಗುರುವಾರ ಬೆಳಗಿನ ಜಾವ ವಸತಿ ಗೃಹದಲ್ಲಿ ಮೃತಪಟ್ಟಿದ್ದಾರೆ. ಪಟ್ಟಣದ ಪಿಡಬ್ಲ್ಯೂಡಿ ಕ್ವಾಟ್ರಸ್‌ನಲ್ಲಿ ಉಪ ವಿಭಾಗ ಅಧಿಕಾರಿಗಳ ನಿವಾಸದ ಮನೆಯಲ್ಲಿ ವಾಸವಾಗಿದ್ದರು. ಇವರಿಗೆ ಮೊದಲಿನಿಂದಲೂ ಲೋ ಬಿಪಿ ಮತ್ತು ಅರೋಗ್ಯ ಸಮಸ್ಯೆ ಇತ್ತು ಎಂದು ತಿಳಿದು ಬಂದಿದೆ. ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲೂಕಿನ ಅಂಚೆದೊಡ್ಡಿ ಗ್ರಾಮದವರು. ಅವಿವಾಹಿತರಾಗಿದ್ದು 2025 ಜೂನ್ ತಿಂಗಳಲ್ಲಿ ಮಧುಗಿರಿ ಪಟ್ಟಣದ ಹೆಚ್ಚುವರಿ ಸಿವಿಲ್ ಜಡ್ಜ್ ಜೆಎಂಎಫ್‌ಸಿ ನ್ಯಾಯಾಲಯದ ನ್ಯಾಯಾಧೀಶರಾಗಿ ನೇಮಕಗೊಂಡಿದ್ದರು. ವಸತಿ ಗೃಹಕ್ಕೆ ಮಧುಗಿರಿಯ ನ್ಯಾಯಾಧೀಶರು ಹಾಗೂ ವಕೀಲರ ಸಂಘದ ಅಧ್ಯಕ್ಷ ಪಿ.ಸಿ. ಕೃಷ್ಣಾ ಭೇಟಿ ನೀಡಿ ಅಂತಿಮ ದರ್ಶನ ಪಡೆದರು.



ಸಾಕಾನೆ ದಾಳಿ: ಕಾವಾಡಿಗ ರಾಜುಗೆ ಗಾಯ

ಹಾಸನ: ತಾಲೂಕಿನ ಬಿಕ್ಕೋಡಿನಲ್ಲಿರುವ ತಾತ್ಕಾಲಿಕ ಆನೆ ಬಿಡಾರದಲ್ಲಿ ಗುರುವಾರ ಬೆಳಗ್ಗೆ ಆಹಾರ ನೀಡುತ್ತಿದ್ದ ಕಾವಾಡಿಗ ರಾಜು ಮೇಲೆ ಸಾಕಾನೆ ಸುಗ್ರೀವ ದಾಳಿ ಮಾಡಿದ್ದು ಗಂಭೀರ ಗಾಯಗೊಂಡಿದ್ದಾರೆ. ಆಹಾರ ನೀಡುತ್ತಿದ್ದ ಕಾವಾಡಿಗ ರಾಜು ಅವರ ಎಡಬದಿಯ ಹೊಟ್ಟೆಗೆ ಏಕಾಏಕಿ ಕೋರೆಯಿಂದ ತಿವಿದು ಇದರಿಂದ ಕರುಳು ಹೊರಕ್ಕೆ ಬಂದಿದ್ದು, ಬೇಲೂರು ತಾಲೂಕು ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ನೀಡಲಾಯಿತು. ಹೆಚ್ಚಿನ ಹಾಸನದ ಹಿಮ್ಸ್ ಆಸ್ಪತ್ರೆಗೆ ರವಾನಿಸಲಾಯಿತು. ಗಂಭೀರ ಗಾಯಗೊಂಡಿರುವ ಅವರನ್ನು ಹಾಸನದ ಹಿಮ್ಸ್ ಆಸ್ಪತ್ರೆಗೆ ದಾಖಲು ಮಾಡಿ ಚಿಕಿತ್ಸೆ ನೀಡಲಾಗುತ್ತಿದೆ. ಹಿಮ್ಸ್‌ನ ಐಸಿಯುನಲ್ಲಿ ಚಿಕಿತ್ಸೆ ಪಡೆಯುತ್ತಿರುವ ರಾಜು ಅವರನ್ನು ಡಿಸಿಎಫ್ ಸೌರಭ್‌ಕುಮಾರ್ ಭೇಟಿ ನೀಡಿ ಗಾಯಾಳು ಆರೋಗ್ಯ ವಿಚಾರಿಸಿದರು.

ಕಾಡುಗಳ ನಾಶದಿಂದ ಜಾಗತಿಕ ತಾಪಮಾನ ಏರಿಕೆ: ಈಶ್ವರ ಖಂಡ್ರೆ

ಪರಿಸರ ರಕ್ಷಣೆ ಎಲ್ಲರ ಹೊಣೆ

ಬೆಂಗಳೂರು: ಕರ್ನಾಟಕವು ಜಾಗತಿಕ ಜೀವ ವೈವಿಧ್ಯತೆಯ ಅದ್ಭುತ ತಾಣವಾದ ಪಶ್ಚಿಮ ಘಟ್ಟಗಳನ್ನು ಹೊಂದಿದ್ದು, ಹಲವು ಬಗೆಯ ವಿಶಿಷ್ಟ ಸಸ್ಯ ಸಂಕುಲ, ಪ್ರಾಣಿ ಸಂಕುಲ, ಪಕ್ಷಿ ಸಂಕುಲ ಹಾಗೂ ಕೀಟ ಸಂಕುಲಗಳ ತಾಣವಾದ ಈ ಸಮೃದ್ಧ ಕಾನನವನ್ನು ಸಂರಕ್ಷಿಸುವ ಜವಾಬ್ದಾರಿ ಎಲ್ಲರ ಮೇಲಿದೆ ಸಚಿವ ಈಶ್ವರ ಖಂಡ್ರೆ ತಿಳಿಸಿದರು.

ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಒಕ್ಕೂಟ ಆಯೋಜಿಸಿದ್ದ ಜಾಗತಿಕ ಸುಸ್ಥಿರ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ಶೃಂಗಸಭೆ 2026ರ ಪೂರ್ವಭಾವಿ ಸಭೆ ಉದ್ದೇಶಿಸಿ ಮಾತನಾಡಿದ ಅವರು, ನಾವಿಂದು, ಜಾಗತಿಕ ತಾಪಮಾನ ಏರಿಕೆ ಹಾಗೂ ಹವಾಮಾನ ಬದಲಾವಣೆಯ ಪರಿಣಾಮಗಳ ಕಾಲಘಟ್ಟದಲ್ಲಿ ನಿಂತಿದ್ದು, ಈ ಸಂದರ್ಭದಲ್ಲಿ ಸುಸ್ಥಿರ ಅಭಿವೃದ್ಧಿ, ಹವಾಮಾನ ಚೇತರಿಕೆ ಮತ್ತು ಸಮಗ್ರ ಪ್ರಗತಿಯ ಕಾರ್ಯತಂತ್ರಕ್ಕೆ ಸಾಂಸ್ಥಿಕ ಸಾಮಾಜಿಕ ಹೊಣೆಗಾರಿಕೆ ಚಾಲಕ ಶಕ್ತಿಯಾಗಿದೆ ಎಂದರು.

ಹಲವು ಜೀವ ನದಿಗಳ ಮೂಲವೇ ಪಶ್ಚಿಮ ಘಟ್ಟವಾಗಿದ್ದು, ಮಳೆಯ ಮಾರುತಗಳನ್ನು ತಡೆದು ದೇಶಾದ್ಯಂತ ವ್ಯಾಪಕವಾಗಿ ಮಳೆ ಸುರಿಸುವಂತೆ ಮಾಡುವ ಪಶ್ಚಿಮ ಘಟ್ಟಗಳನ್ನು ಉದ್ದಿಮೆದಾರರು ಕೇವಲ ಒಂದು ಸಂಪನ್ಮೂಲವಾಗಿ ನೋಡದೆ, ಭವಿಷ್ಯದ ಪೀಳಿಗೆಯ ಜೀವನಾಡಿಯಾಗಿ ನೋಡಬೇಕು ಎಂದು ಹೇಳಿದರು.

ಜೀವನವೂ ಇರಬೇಕು, ಜೀವನೋಪಾಯವೂ ಇರಬೇಕು. ಪ್ರಕೃತಿಯೂ ಉಳಿಯಬೇಕು, ಜೀವನವೂ ನಡೆಯಬೇಕು. ಅಭಿವೃದ್ಧಿಯೂ ಆಗಬೇಕು. ಹಸಿರು ಉಳಿಸಿಕೊಂಡು, ಬೆಳೆಸಿಕೊಂಡು ಅಭಿವೃದ್ಧಿ ಸಾಧಿಸುವುದೇ ಸುಸ್ಥಿರತೆಯ ಮಂತ್ರ. ಇದು ಇಂದಿನ ಅಗತ್ಯ ಮತ್ತು ಅನಿವಾರ್ಯ. ಈ ಹಾದಿಯಲ್ಲಿ ನಡೆಯಲು ಸರ್ಕಾರ ಬದ್ಧವಾಗಿದೆ. ಇದಕ್ಕೆ ಉದ್ದಿಮೆಗಳ ಸಹಕಾರ ನೀಡಬೇಕು ಎಂದರು.



ಬೆಂಗಳೂರು ಕಾಂಕ್ರೀಟ್ ಕಾಡು

ಬೆಂಗಳೂರು ನಗರ ಒಂದು ಕಾಲದಲ್ಲಿ ನಿವೃತ್ತರ ಸ್ವರ್ಗ, ಹವಾ ನಿಯಂತ್ರಿತ ನಗರ ಎಂಬ ಖ್ಯಾತಿ ಪಡೆದಿತ್ತು. ಇಂದು ಬೆಂಗಳೂರು ಕೂಡ ಕಾಂಕ್ರೀಟ್ ಕಾಡಾಗುತ್ತಿದ್ದು, ತಾಪಮಾನದ ಏರಿಕೆಯ ಅನುಭವ ಆಗುತ್ತಿದೆ. ಬೆಂಗಳೂರು ನಗರದಲ್ಲಿ ವಾಹನಗಳ ಸಂಖ್ಯೆಯಲ್ಲಿ ಹೆಚ್ಚಳವಾಗುತ್ತಿದ್ದು, ಧೂಳು, ಹೊಗೆಯಿಂದಾಗಿ ವಾಯುಗುಣಮಟ್ಟವೂ ಕುಸಿಯುತ್ತಿದೆ. ಈ ನಿಟ್ಟಿನಲ್ಲಿ ಬೆಂಗಳೂರು ನಗರ ದೆಹಲಿಯಂತೆ ಮತ್ತೊಂದು ಗ್ಯಾಸ್ ಚೇಂಬರ್ ಆಗದಂತೆ ತಡೆಯಲು ಈಗಿನಿಂದಲೇ ಕ್ರಮ ವಹಿಸುವುದು ಅತ್ಯಗತ್ಯ ಎಂದು ಸಚಿವ ಖಂಡ್ರೆ ಹೇಳಿದರು.

ಅರಣ್ಯೀಕರಣ, ಕ್ಷೀಣಿಸಿದ ಅರಣ್ಯಗಳ ಮರುಸ್ಥಾಪನೆ ಮತ್ತು ನಗರ ಹಸಿರು ಹೊದಿಕೆ ಹೆಚ್ಚಳದಂತಹ ಉಪಕ್ರಮಗಳಲ್ಲಿ ಕೈಗಾರಿಕೋದ್ಯಮಿಗಳು ಸಕ್ರಿಯವಾಗಿ ಭಾಗವಹಿಸಿದರೆ, ಅದು ಮುಂದಿನ ಪೀಳಿಗೆಗೆ ಶುದ್ಧ ಗಾಳಿಯ, ನಿರ್ಮಲ ಪರಿಸರದ, ಸುಗಮ ಜೀವನವನ್ನು ಖಾತ್ರಿ ಪಡಿಸುತ್ತವೆ. ಸಾರ್ವಜನಿಕರು, ತಮ್ಮ ಮನೆಯ ಸೌಂದರ್ಯಕ್ಕೆ ಅಡ್ಡಿ ಯಾಗುತ್ತದೆ, ಮನೆಯ ಮುಂದೆ ಎಲೆ ಉದುರುತ್ತದೆ ಎಂದು ಮರ, ಗಿಡ ಕಡಿಯದೆ, ಹಸಿರು ಉಳಿಸಬೇಕು. ಇಲ್ಲವಾದರೆ ಮುಂದೆ ಉಸಿರಾಟಕ್ಕೂ ಕಷ್ಟ ಪಡಬೇಕಾಗುತ್ತದೆ ಎಂದು ಹೇಳಿದರು.

ವೇಳೆ ಅರಣ್ಯ ಇಲಾಖೆ 10 ಸಾವಿರ ಸಸಿಗಳನ್ನು ನೀಡುತ್ತಿದ್ದು, ಅವುಗಳನ್ನು ನೆಟ್ಟು ಬೆಳೆಸುವ ಜವಾಬ್ದಾರಿ ವಹಿಸಿಕೊಳ್ಳುವುದಾಗಿ ಎಫ್‌ಕೆಸಿಸಿಐ ಸಿಎಸ್‌ಆರ್ ಮತ್ತು ಸುಸ್ಥಿರತೆ ಸಮಿತಿ ಅಧ್ಯಕ್ಷ ಕೆ. ಕೀರ್ತನ್ ಕುಮಾರ್ ತಿಳಿಸಿದರು. ಕಾರ್ಯಕ್ರಮದಲ್ಲಿ ಎಫ್‌ಕೆಸಿಸಿಐ ಅಧ್ಯಕ್ಷೆ ಉಮಾ ರೆಡ್ಡಿ ಸೇರಿದಂತೆ ಇನ್ನಿತರರಿದ್ದರು.

ಮಹಿಳೆಯರಿಗೆ ಸಮಾನ ಅವಕಾಶ: ಛಲವಾದಿ

ಬೆಂಗಳೂರು: ಮಹಿಳಾ ಮೀಸಲಾತಿ ಮಸೂದೆಗಾಗಿ ಸಂಸತ್ತಿನ ವಿಶೇಷ ಅಧಿವೇಶನ ನಡೆಯುತ್ತಿದ್ದು, ಮಹಿಳೆಯರಿಗೂ ಕಾನೂನು ರಚನೆಗೆ ಸಮಾನ ಅವಕಾಶ ಸಿಗಲಿದೆ. ಇದಕ್ಕೆ ವಿರೋಧಪಕ್ಷ ಕಾಂಗ್ರೆಸ್ ಬೆಂಬಲ ನೀಡಲಿದೆ ಎಂಬ ವಿಶ್ವಾಸವಿದೆ ಎಂದು ವಿಧಾನ ಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣ ಸ್ವಾಮಿ ಹೇಳಿದರು.



ಬಿಜೆಪಿ ಕಚೇರಿಯಲ್ಲಿ ಗುರುವಾರ ಮಾಧ್ಯಮಗಳ ಜತೆ ಮಾತನಾಡಿ, ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರು ದೇಶದಲ್ಲಿ ಸರ್ವರಿಗೂ ಸಮಾನ ಹಕ್ಕು ಇರಬೇಕು, ಸಮಾನ ಅವಕಾಶ ಸಿಗಬೇಕು ಎಂದು ಬಯಸಿದ್ದರು. ಹೆಣ್ಣೊಂದು ಕಲಿತರೆ ಶಾಲೆಯೊಂದು ತೆರೆದಂತೆ ಎಂದೂ ಹೇಳಿದ್ದರು. ಇದೀಗ ಪ್ರಧಾನಿ ನರೇಂದ್ರ ಮೋದಿ ಅವರು ಬಾಬಾಸಾಹೇಬರ ಚಿಂತನೆಗೆ ಶಕ್ತಿ ಕೊಟ್ಟಿದ್ದಾರೆ ಎಂದರು.

ಈ ಹಿಂದೆ ಮಹಿಳೆಯರಿಗೆ ಅವಕಾಶ, ಅಧಿಕಾರ ಮತ್ತು ಸಮಾನ ಹಕ್ಕು ಕೊಡುವಲ್ಲಿ ಬಾಯಿ ಮಾತಿನ ಭಾಷಣ ಇತ್ತೇ ಹೊರತು ಹೃದಯವಂತಿಕೆ ಇರಲಿಲ್ಲ. ಆದರೆ ಇಂದು ನಾರಿ ಶಕ್ತಿ ಹೆಸರಿನಲ್ಲಿ ಪ್ರಧಾನಿಯವರು ಸಂಸತ್ತಿನ ವಿಶೇಷ ಅಧಿವೇಶನ ಕರೆದು ಮಸೂದೆ ಮಂಡಿಸುತ್ತಿದ್ದಾರೆ. ಇನ್ನು ಮುಂದೆ ಹೆಣ್ಣು ಮಕ್ಕಳಿಗೆ ಎಲ್ಲ ರೀತಿಯ ಅವಕಾಶಗಳ ದೊರೆಯಲಿವೆ. ನಾರೀಶಕ್ತಿ ಮಸೂದೆ ಮೂಲಕ ಕಾನೂನು ರಚನೆಯಲ್ಲೂ ಮಹಿಳೆಯರಿಗೆ ಸಮಾನ ಅವಕಾಶ ಸಿಗಲಿದೆ ಎಂದರು.

ಸುವರ್ಣಾಕ್ಷರದಲ್ಲಿ ಬರೆದಿಡುವ ದಿನ: ಭಾರತಿ ಶೆಟ್ಟಿ

ಬೆಂಗಳೂರು: ಮಹಿಳಾ ಮೀಸಲಾತಿ ಜಾರಿಯು ನಮಗೆಲ್ಲ ಸಂತಸ ತಂದಿದೆ. ನಾವು ಈ ದಿನವನ್ನು ಸುವರ್ಣಾಕ್ಷರದಲ್ಲಿ ಬರೆದಿಡಬೇಕು ಎಂದು ವಿಧಾನಪರಿಷತ್ ಸದಸ್ಯೆ ಭಾರತಿ ಶೆಟ್ಟಿ ತಿಳಿಸಿದ್ದಾರೆ. ಬಿಜೆಪಿ ಕಚೇರಿಯಲ್ಲಿ ಮಾಧ್ಯಮಗಳ ಜೊತೆ ಮಾತನಾಡಿದ ಅವರು, ನರೇಂದ್ರ ಮೋದಿಜೀ ಅವರ ಪ್ರಯತ್ನದಿಂದ ಮಸೂದೆ ಅನುಮೋದನೆ ಪಡೆದಿದೆ. ಇದು ಅತ್ಯಂತ ಸಂತೋಷ ತಂದಿದೆ. 19 ವರ್ಷದ ಬಳಿಕ ಸಂತಸ, ಖುಷಿ, ನ್ಯಾಯ ಲಭಿಸಿದೆ ಎಂದು ಹೇಳಿದರು. ಮೋದಿಜೀ ಅವರ ಕಾಲದಲ್ಲಿ ಮಹಿಳೆಯರ ಆಡಳಿತಾತ್ಮಕ ಸಬಲೀಕರಣ ನಡೆದಿದೆ. ಅದು ಉತ್ತುಂಗಕ್ಕೆ ಏರಿದೆ. ಬೇಟಿ ಬಚಾವೋ, ಬೇಟಿ ಪಡಾವೋ, ಲಕ್ಪತಿ ಸೇರಿ ಇದೀಗ ಮೀಸಲಾತಿಯ ಅವಕಾಶ ನೀಡಿದ್ದಾರೆ. ಮಹಿಳೆಯರಿಗೆ ರಕ್ಷಣಾ ಕ್ಷೇತ್ರದಲ್ಲೂ ಅವಕಾಶ ಕೊಟ್ಟಿದ್ದಾರೆ ಎಂದು ಪ್ರಶಂಸಿಸಿದರು.



ರಾಯರ ದರ್ಶನಕ್ಕೆ ತೆರಳಿದ್ದ ಭಕ್ತರ ದುರ್ಮರಣ | ಹಲವರಿಗೆ ಗಾಯ

ಭೀಕರ ಅಪಘಾತ: 8 ಮಂದಿ ಸಾವು

ರಾಯಚೂರು: ಬುಲೆರೋ ಹಾಗೂ ಪ್ಲೈಯಾಶ್ ಟ್ಯಾಂಕರ್ ಮುಖಾಮುಖಿ ಡಿಕ್ಕಿಯಾದ ಪರಿಣಾಮ ಮಂತ್ರಾಲಯದ ರಾಘವೇಂದ್ರ ಸ್ವಾಮಿಗಳ ದರ್ಶನಕ್ಕೆ ತೆರಳುತ್ತಿದ್ದ ಹಾಸನ, ಚಿಕ್ಕಮಗಳೂರು ಮೂಲದ ಎಂಟು ಜನರು ಸ್ಥಳದಲ್ಲೇ ಮೃತಪಟ್ಟು, ಎಂಟು ಜನ ಗಂಭೀರ ಗಾಯಗೊಂಡ ಘಟನೆ ಬುಧವಾರ ನಸುಕಿನ ಜಾವ ಸಂಭವಿಸಿದೆ.

ಈ ಘಟನೆ ಆಂಧ್ರದ ಕರ್ನೂಲ್ ಜಿಲ್ಲೆಯ ಮಂತ್ರಾಲಯ ಬಳಿಯ ಚಿಲಕನಡೋಣ ಬಳಿ ಬುಧವಾರ ನಸುಕಿನ ಜಾವ ನಾಲ್ಕು ಗಂಟೆ ಸಮಯದಲ್ಲಿ ಸಂಭವಿಸಿದೆ. ಮೃತರಲ್ಲಿ ಐವರು ಮಹಿಳೆಯರು, ಇಬ್ಬರು ಪುರುಷರು, ಮೂರು ವರ್ಷದ ಒಂದು ಮಗು ಸೇರಿ ಒಟ್ಟು ಎಂಟು ಜನ ಸೇರಿದ್ದಾರೆ. ಮೃತರನ್ನು ಹಾಸನ ಜಿಲ್ಲೆ ಬೇಲೂರು ತಾಲೂಕಿನ ಶೆಟ್ಟಿಗೆರೆಯ ಸುನೀಲ(27), ಲೋಲಾಕ್ಷಿ(38), ಕುಮಾರ್(51), ಚಿಕ್ಕಮಗಳೂರು ಜಿಲ್ಲೆ ತರೀಕೆರೆ ತಾಲೂಕಿನ ಉಡೇವು ಗ್ರಾಮದವರಾದ ಮೀನಾಕ್ಷಮ್ಮ(54), ಪುಟ್ಟಮ್ಮ (60), ಹಾಸನ ಜಿಲ್ಲೆ ಬೇಲೂರು ತಾಲ್ಲೂಕು ನೇಹರು ನಗರದ ಎಸ್.ಕೆ.ವೀಣಾ(25) ಇವರ ಮಗಳು ನಿಶಿತಾ(3) ಹಾಗೂ ಜಯಮ್ಮ ಎಂದು ಗುರುತಿಸಲಾಗಿದೆ.

ಗಂಭಿರವಾಗಿ ಗಾಯಗೊಂಡಿರುವ ಒಂಬತ್ತು ಜನರನ್ನು ಕರ್ನೂಲ್ ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಇವರಲ್ಲಿ ನಾಲ್ವರ ಸ್ಥಿತಿ ಗಂಭಿರವಾಗಿದೆ. ಗಾಯಗೊಂಡಿರುವ ಇನ್ನು ನಾಲ್ವರಿಗೆ ಯಮ್ಮಿಗನೂರು ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ.



ಬುಲೆರೋ ವಾಹನದಲ್ಲಿ ಒಂದೇ ಕುಟುಂಬಕ್ಕೆ ಸೇರಿದ 21 ಜನರು ಮಂತ್ರಾಲಯ ಮಠಕ್ಕೆ ಆಗಮಿಸುತ್ತಿದ್ದರು. ಮಂತ್ರಾಲಯ ಇನ್ನೂ 7 ಕಿಮೀ ದೂರದಲ್ಲಿರುವಾಗ ಚಿಲಕನಡೋಣ ಗ್ರಾಮದ ಬಳಿಯಲ್ಲಿ ಈ ದುರ್ಘಟನೆ ಸಂಭವಿಸಿದೆ. ಘಟನೆ ಬಳಿಕ ಟ್ಯಾಂಕರ್ ಚಾಲಕನನ್ನ ಮಂತ್ರಾಲಯ ಪೊಲೀಸರು ವಶಕ್ಕೆ ಪಡೆದಿದ್ದಾರೆ. ಘಟನಾ ಸ್ಥಳಕ್ಕೆ ಹಿರಿಯ ಪೊಲೀಸ್ ಅಧಿಕಾರಿಗಳ ತಂಡ ಹಾಗೂ ಆರ್‌ಟಿಓ ಅಧಿಕಾರಿಗಳ ತಂಡ ಭೇಟಿ ತನಿಖೆ ಕೈಗೊಂಡಿದೆ. ಅತೀ ವೇಗದಿಂದ ವಾಹನ ಚಾಲನೆಯಿಂದ ನಿಯಂತ್ರ ತಪ್ಪಿದ ಹಿನ್ನೆಲೆ ಈ ಅಪಘಾತಕ್ಕೆ ಕಾರಣ ಎಂದು ಪೊಲೀಸರು ಅಂದಾಜಿಸಿದ್ದಾರೆ. ಮಂತ್ರಾಲಯ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ.

ಮುಂದಿನ ನಿರ್ಧಾರದ ಬಗ್ಗೆ ಶೀಘ್ರವೇ ಸಭೆ: ಜಮಿಯತ್ ಉಲಮಾ

ಕೈ ವರ್ತನೆಗೆ ಮುಸ್ಲಿಂ ನಾಯಕರ ಬೇಸರ

ಬೆಂಗಳೂರು: ಮುಸ್ಲಿಂ ಮುಖಂಡರ ಮೇಲೆ ಕಾಂಗ್ರೆಸ್ ಪಕ್ಷ ಕ್ರಮ ಕೈಗೊಳ್ಳುತ್ತಿರುವುದು ಬೇಸರವಾಗಿದ್ದು, ನಮಗೆ ಕಾಂಗ್ರೆಸ್ ಹೊರತುಪಡಿಸಿ ಬೇರೆ ಆಯ್ಕೆಗಳಿವೆ. ಸಮುದಾಯದ ಹಿತಾಸಕ್ತಿಗಳನ್ನು ರಕ್ಷಿಸುವ ನಿಟ್ಟಿನಲ್ಲಿ ಶೀಘ್ರದಲ್ಲೇ ಸಭೆಗಳನ್ನು ನಡೆಸಿ ಮುಂದಿನ ಕ್ರಮಗಳ ಬಗ್ಗೆ ತೀರ್ಮಾನ ಕೈಗೊಳ್ಳಲಾಗುವುದು ಜಮಿಯತ್ ಉಲಮಾ ಎಚ್ಚರಿಕೆ ನೀಡಿದೆ.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಜಮಿಯತ್ ಉಲಮಾ ಕರ್ನಾಟಕ ಅಧ್ಯಕ್ಷ ಮುಫ್ತಿ ಇಫ್ತಿಖಾರ್ ಅಹ್ಮದ್ ಖಾಸ್ಮೀ ಮಾ.20ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿ ಮಾಡಲಾಗಿತ್ತು. ಅದೇ ದಿನ ರಾತ್ರಿ, ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರನ್ನು ಶಾಸಕ ರಿಜ್ವಾನ್ ಅರ್ಷದ್ ಅವರ ನಿವಾಸದಲ್ಲಿ ಭೇಟಿಯಾಗಿ, ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಅಲ್ಪಸಂಖ್ಯಾತ ಅಭ್ಯರ್ಥಿಗೆ ಅವಕಾಶ ನೀಡುವಂತೆ ಒತ್ತಾಯಿಸಲಾಗಿತ್ತು ಎಂದು ತಿಳಿಸಿದರು.

ಹಿಂದಿನ ಶಾಸಕ ದಿ.ಶಾಮನೂರು ಶಿವಶಂಕರಪ್ಪ ತಮ್ಮ ಕೊನೆಯ ಚುನಾವಣೆಯಾಗಿ ಘೋಷಿಸಿ, ಮುಂದಿನ ಬಾರಿ ಅಲ್ಪಸಂಖ್ಯಾತ ಅಭ್ಯರ್ಥಿಗೆ ಅವಕಾಶ ನೀಡುವ ಭರವಸೆ ನೀಡಿದ್ದ ಹಿನ್ನೆಲೆಯಲ್ಲಿ ಈ ಬೇಡಿಕೆ ಇಟ್ಟಿದ್ದೆವು. ದಾವಣಗೆರೆ ಉತ್ತರ ಮತ್ತು ದಕ್ಷಿಣ ಕ್ಷೇತ್ರಗಳಲ್ಲಿ ಅಲ್ಪಸಂಖ್ಯಾತ ಮತದಾರರ ಪ್ರಮಾಣ ಹೆಚ್ಚಿರುವುದರಿಂದ ಕನಿಷ್ಠ ಒಂದು ಕ್ಷೇತ್ರದಲ್ಲಿ ಅವಕಾಶ ನೀಡುವುದು ನ್ಯಾಯಸಮ್ಮತವಾಗುತ್ತಿತ್ತು. ಆದರೆ, ನಂತರ ಕಾಂಗ್ರೆಸ್ ಪಕ್ಷವು ಶಾಮನೂರು ಕುಟುಂಬದ ಅಭ್ಯರ್ಥಿಯನ್ನು ಘೋಷಿಸಿದ ಹಿನ್ನೆಲೆಯಲ್ಲಿ ಸಮುದಾಯದಲ್ಲಿ ನಿರಾಶೆ ಮತ್ತು ಆಘಾತ ಉಂಟಾಗಿದೆ. ಪದೇಪದೇ ಮನವಿಗಳು ನಿರ್ಲಕ್ಷ್ಯವಾಗುತ್ತಿವೆ ಎಂಬ ಅಭಿಪ್ರಾಯ ಸಮುದಾಯದಲ್ಲಿ ಬಲವಾಗುತ್ತಿದೆ ಎಂದು ಖಾಸ್ಮೀ ವಿವರಿಸಿದರು.

ಕಾಂಗ್ರೆಸ್‌ನಿಂದ ಸಮುದಾಯಕ್ಕೆ ನಕಾರಾತ್ಮಕ ಸಂದೇಶ

ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿಯಾಗಿದ್ದ ನಸೀರ್ ಅಹ್ಮದ್ ಅವರನ್ನು ಹುದ್ದೆಯಿಂದ ತೆಗೆದುಹಾಕಿರುವುದು ಮತ್ತು ಕೆಪಿಸಿಸಿ ಅಲ್ಪಸಂಖ್ಯಾತ ಘಟಕದ ಅಧ್ಯಕ್ಷ ಅಬ್ದುಲ್ ಜಬ್ಬಾರ್ ಅವರ ರಾಜೀನಾಮೆ ಸಮುದಾಯಕ್ಕೆ ನಕಾರಾತ್ಮಕ ಸಂದೇಶ ನೀಡಿದೆ. ಈ ಕ್ರಮಗಳು ಅಲ್ಪಸಂಖ್ಯಾತರ ಮೇಲೆ ನಿರ್ಲಕ್ಷ್ಯವನ್ನು ತೋರಿಸುತ್ತವೆ. ಹಾಗೇ, 2024ರ ಲೋಕಸಭಾ ಚುನಾವಣೆಯಲ್ಲಿ ಬಿ.ವೈ. ರಾಘವೇಂದ್ರ ಅವರಿಗೆ ಬೆಂಬಲ ನೀಡಿದ ಆರೋಪ ಸೇರಿದಂತೆ ಕೆಲವು ಪ್ರಕರಣಗಳಲ್ಲಿ ಕ್ರಮ ಕೈಗೊಳ್ಳದಿರುವುದರ ಬಗ್ಗೆ ಕಾಂಗ್ರೆಸ್ ನಾಯಕತ್ವವನ್ನು ಪ್ರಶ್ನಿಸಲಾಗಿದೆ. ಕಾಂಗ್ರೆಸ್ ಪಕ್ಷವು ನಮ್ಮ ಬೆಂಬಲವನ್ನು ಲಘುವಾಗಿ ತೆಗೆದುಕೊಳ್ಳುತ್ತಿದೆ ಎಂಬ ಭಾವನೆ ಸಮುದಾಯದಲ್ಲಿ ಹೆಚ್ಚುತ್ತಿದೆ, ಮುಂದುವರೆದರೆ ನಮಗೆ ಕಾಂಗ್ರೆಸ್ ಹೊರತುಪಡಿಸಿ ಬೇರೆ ಆಯ್ಕೆಗಳಿವೆ ಎಂದರು.

ಏಪ್ರಿಲ್‌ನಲ್ಲಿ 52, ಮೇನಲ್ಲಿ 62 ಗ್ರಾಮಕ್ಕೆ ಕುಡಿಯುವ ನೀರಿನ ಸಮಸ್ಯೆ ಹೆಚ್ಚಳ

114 ಗ್ರಾಮಗಳಲ್ಲಿ ನೀರಿನ ಅಭಾವ ಸಾಧ್ಯತೆ

ಜಗದೀಶ ಎಂ.ಗಾಣಿಗೇರ

ದಿಗಂತ ವಿಶೇಷ

ಬಾಗಲಕೋಟೆ: ತ್ರಿವೇಣಿ ನದಿಗಳು ಹರಿದು ಹೋಗಿರುವ ಬಾಗಲಕೋಟೆ ಜಿಲ್ಲೆಯಲ್ಲಿ ಬೇಸಿಗೆ ಸಮಯದಲ್ಲಿ ಕುಡಿಯುವ ನೀರಿನ ಸಮಸ್ಯೆ ಉಂಟಾಗಲಿದ್ದು ಏಪ್ರಿಲ್ ಮತ್ತು ಮೇ ತಿಂಗಳಲ್ಲಿ 114 ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾಗಲಿದೆ.

ಕಳೆದ ಒಂದು ವಾರದಿಂದ ಬಾಗಲಕೋಟೆ ಜಿಲ್ಲೆಯಲ್ಲಿ ಭಾರೀ ಬಿಸಿಲಿನ ತಾಪ ಹೆಚ್ಚಾಗಿದೆ. ನದಿಯಲ್ಲಿ ಅಲ್ಲಲ್ಲಿ ಸಂಗ್ರಹವಾಗಿರುವ ನೀರು ಕೂಡ ಬಿಸಿಲಿನ ಹೊಡೆತಕ್ಕೆ ಆವಿಯಾಗುವಂತಹ ಸ್ಥಿತಿ ಬಂದಿದ್ದು ಅಷ್ಟೊಂದು ಬಿಸಿಲು ಜಿಲ್ಲೆಯಲ್ಲಿದೆ. ಬಿಸಿಲಿನ ತಾಪ ಹೆಚ್ಚು ಒಂದು ಕಡೆಯಾದರೆ ಇನ್ನೊಂದೆಡೆ ಕೆಲವೊಂದು ಗ್ರಾಮಗಳಲ್ಲಿ ನೀರಿನ ಸಮಸ್ಯೆ ಉಂಟಾಗಿದೆ.

ಜಿಲ್ಲೆಯಲ್ಲಿ ಏಪ್ರಿಲ್ ತಿಂಗಳಲ್ಲಿ 52 ಗ್ರಾಮ ಮೇ ತಿಂಗಳಲ್ಲಿ 62 ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾಗಲಿದೆ. ನೀರಿನ ಸಮಸ್ಯೆಯಾಗುವುದನ್ನು ತಪ್ಪಿಸಲು ಈಗಾಗಲೇ ಜಿಲ್ಲಾಡಳಿತ 111 ಖಾಸಗಿ ಕೊಳವೆ ಬಾವಿಗಳನ್ನು ಗುರುತಿಸಿದೆ. ಗುಳೇದಗುಡ್ಡ ತಾಲೂಕಿನ ಚಿಮ್ಮಲಗಿ, ಇಳಕಲ್ ತಾಲೂಕಿನ ಚಿಕ್ಕ ಕೊಡಗಲಿ ಗ್ರಾಮದಲ್ಲಿ ಕುಡಿಯುವ ನೀರಿನ ತೊಂದರೆ ಉಂಟಾಗಿದ್ದು ಖಾಸಗಿ ಬೋರವೆಲ್ ಮೂಲಕ ನೀರು ಪೂರೈಸಲಾಗುತ್ತಿದೆ. ಬಾದಾಮಿ ತಾಲೂಕಿನಲ್ಲಿ 12, ಗುಳೇದಗುಡ್ಡ ತಾಲೂಕಿನ 4, ಬಾಗಲಕೋಟೆ 2, ಬೀಳಗಿ 7, ಹುನಗುಂದ 4, ಇಳಕಲ್ 5, ಜಮಖಂಡಿ 6, ಮುಧೋಳ 4, ರಬಕವಿ-ಬನಹಟ್ಟಿ ತಾಲೂಕಿನ 8 ಗ್ರಾಮಗಳಲ್ಲಿ ಏಪ್ರಿಲ್ ತಿಂಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಿಸಬಹುದು ಎಂದು ಜಿಲ್ಲಾಡಳಿತ ಅಂದಾಜಿಸಿದೆ.



ಪ್ರಸಕ್ತ ಸಾಲಿನ ಕುಡಿಯುವ ನೀರಿನ ಸಮಸ್ಯೆ ಉಂಟಾಗಬಹುದಾದ ಗ್ರಾಮಗಳಿಗೆ ಮುಂಜಾಗ್ರತೆ ಕ್ರಮವಾಗಿ 206 ಕಾಮಗಾರಿಗಳಿಗೆ 611.89 ಲಕ್ಷಗಳಿಗೆ ಕ್ರಿಯಾ ಯೋಜನೆಯನ್ನು ಜಿಲ್ಲಾಡಳಿತ ತಯಾರಿಸಿದೆ. ಏ.10ರಂದು ಮಲಪ್ರಭಾ ನದಿಗೆ 1 ಟಿಎಂಸಿ ನೀರನ್ನು ಬಿಡುಗಡೆಗೊಳಿಸಲಾಗಿದೆ. ಏ.15ರಂದು ಶಿವಯೋಗ ಮಂದಿರದ ಬ್ಯಾರೇಜ್‌ಗೆ ತಲುಪಿದ್ದು, ಇನ್ನು 15 ಬ್ಯಾರೇಜ್ ದಾಟಿ ಹಡಗಲಿ ಬ್ಯಾರೇಜ್‌ಗೆ ತಲುಪಲು ಬಾಕಿ ಇರುತ್ತದೆ.

> ಬಾಗಲಕೋಟೆ ಜಿಲ್ಲೆಯಲ್ಲಿ 196 ಗ್ರಾಮ ಪಂಚಾಯತಿಗಳಿದ್ದು, 597 ಹಳ್ಳಿ ಹಾಗೂ 1006 ಜನವಸತಿಗಳಿವೆ. 39 ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳ ಮೂಲಕ ಒಟ್ಟು 402 ಹಳ್ಳಿಗಳಿಗೆ ನೀರು ಪೂರೈಕೆ ಮಾಡಲಾಗುತ್ತಿದೆ.
> ■ ಶಶಿಧರ ಕುರೇರ, ಜಿಪಂ ಸಿಇಓ

ನೀರು ಬಿಡುಗಡೆಯಿಂದ ಎಲ್ಲ ಬಹುಗ್ರಾಮ ಕುಡಿಯುವ ನೀರು ಸರಬರಾಜು ಯೋಜನೆಗಳು ಚಾಲ್ತಿಯಲ್ಲಿರುತ್ತವೆ. ಚಿಕ್ಕಪಡಸಲಗಿ ಬ್ಯಾರೇಜ್ ಅಡಿಯಲ್ಲಿ 3 ಎಂವಿಎಸ್ ಯೋಜನೆಗಳಿದ್ದು, 27 ಗ್ರಾಮಗಳಿಗೆ ಕುಡಿಯುವ ನೀರಿನ ಸಮಸ್ಯೆ ಇರುವುದಿಲ್ಲ. ಸದ್ಯದ ಪರಿಸ್ಥಿತಿಯಲ್ಲಿ ಚಿಕ್ಕಪಡಸಲಗಿ ಬ್ಯಾರೇಜ್‌ನಿಂದ ಏಪ್ರಿಲ್ ಅಂತ್ಯದವರೆಗೆ ಮಾತ್ರ ನೀರು ಸರಬರಾಜು ಮಾಡಬಹುದಾಗಿದೆ.

ಪೂರೈಕೆ ಕುಸಿತ: ಕಾಫಿ ಬೆಲೆ ಮತ್ತೆ ಏರಿಕೆ

ಮಡಿಕೇರಿ: ಅಂತಾರಾಷ್ಟ್ರೀಯ ಮಾರುಕಟ್ಟೆಗೆ ಬ್ರೆಜಿಲ್‌ನಿಂದ ಕಾಫಿ ಸರಬರಾಜು ಕುಸಿತಗೊಂಡಿರುವುದರಿಂದ ಈ ವಾರದಲ್ಲಿ ಕಾಫಿ ಧಾರಣೆ ಮತ್ತೆ ಏರಿಕೆ ಕಂಡಿದೆ. ಇದು ಭಾರತದ ಕಾಫಿ ಉದ್ಯಮದ ಮೇಲೂ ಪರಿಣಾಮ ಬೀರಿದ್ದು, ದೇಶ ಕಾಫಿ ಮಾರುಕಟ್ಟೆಗಳಲ್ಲೂ ಬೆಲೆ ಏರಿಕೆಯ ಲಕ್ಷಣಗಳು ಗೋಚರಿಸಿದೆ.

ಮಾ. ಕೊನೆಯ ವಾರದಿಂದ ನಿಂತ ನೀರಿನಂತಾಗಿದ್ದ ಕಾಫಿ ಮಾರುಕಟ್ಟೆಯಲ್ಲಿ ಇದೀಗ ಸಂಚಲನ ಸೃಷ್ಟಿಯಾಗಿದ್ದು, ಏ.15ರಿಂದ ಕಾಫಿ ವಹಿವಾಟು ಪುನರಾರಂಭಗೊಂಡಿದೆ. ಪರಿಣಾಮವಾಗಿ 50 ಕೆಜಿ ಅರೇಬಿಕಾ ಪಾರ್ಚ್‌ಮೆಂಟ್ ಕಾಫಿ ದರ ಇದೀಗ 23,500ರೂ.ಗಳಿಗೆ ಏರಿಕೆಯಾಗಿದ್ದು, ರೋಬಸ್ಟಾ ಪಾರ್ಚ್‌ಮೆಂಟ್ ದರ 12,400ರೂ.ಗಳಿಗೆಜಿಗಿದಿದೆ. ಅರೇಬಿಕಾ ಚೆರಿ 23,500 ರೂ.ಗಳಷ್ಟಿದ್ದು, ರೋಬಸ್ಟಾ ಚೆರಿ 18,100ರೂ.ಗಳಿಗೆ ಮಾರಾಟವಾಗಿದೆ ಎಂದು ಮಾರುಕಟ್ಟೆ ಮೂಲಗಳು ತಿಳಿಸಿವೆ.



ಬ್ರೆಜಿಲ್ ರಫ್ತು ಕುಸಿತ: ಬುಧವಾರ ಕಾಫಿ ಬೆಲೆಗಳು ಏರಿಕೆಯಾಗಿದ್ದು, ರೋಬಸ್ಟಾ ಸುಮಾರು ಸುಮಾರು ಒಂದೂವರೆ ವಾರಗಳ ಗರಿಷ್ಠ ಮಟ್ಟ ತಲುಪಿತು. ಬ್ರೆಜಿಲ್‌ನಿಂದ ಸರಬರಾಜು ಕಡಿಮೆಯಾಗುತ್ತಿರುವ ಲಕ್ಷಣಗಳ ನಡುವೆ ಕಾಫಿ ಬೆಲೆಗಳು ಏರಿಕೆಯಾಗಿದ್ದು, ವರದಿಗಳ ಪ್ರಕಾರ ಬ್ರೆಜಿಲ್‌ನ ಮಾರ್ಚ್ ಹಸಿರು ಕಾಫಿ ರಫ್ತು ವರ್ಷದಿಂದ ವರ್ಷಕ್ಕೆ ಶೇ.10ರಷ್ಟು ಕುಸಿದು 2.65 ಮಿಲಿಯನ್ ಬ್ಯಾಗ್‌ಗಳಿಗೆ ಇಳಿದಿವೆ. ಕಳೆದ ಬುಧವಾರ ಬ್ರೆಜಿಲ್ ವಾಣಿಜ್ಯ ಸಚಿವಾಲಯದ ವರದಿ ಪ್ರಕಾರ, ಮಾರ್ಚ್ ಕಾಫಿ ರಫ್ತುಗಳು ಶೇ.31 ರಷ್ಟು ಕುಸಿದು 151,000 ಮೆಟ್ರಿಕ್ ಟನ್‌ಗೆ ಇಳಿದಿವೆ. ರೋಬಸ್ಟಾ ಸಂಗ್ರಹಗಳು 1.25 ವರ್ಷದ ಕನಿಷ್ಟಮಟ್ಟವಾದ 3,891 ಲಾಟ್‌ಗಳಿಗೆ ಇಳಿದಿರುವುದರಿಂದ ಪ್ರಸ್ತುತ ಸರಬರಾಜಿನ ಕೊರತೆಯೂ ರೋಬಸ್ಟಾ ಬೆಲೆ ಏರಿಕೆಗೆ ಕಾರಣ ಎನ್ನಲಾಗಿದೆ.

ಬ್ರೆಜಿಲ್‌ನಲ್ಲಿ ಸರಾಸರಿಗಿಂತ ಕಡಿಮೆ ಮಳೆಯಾಗಿರುವುದರಿಂದ ಕಾಫಿ ಉತ್ಪಾದನೆಗೆ ಹಾನಿಯಾಗುವ ಸಾಧ್ಯತೆ ಇದೆ. ಇದರಿಂದ ಬೆಲೆಗಳು ಮತ್ತಷ್ಟು ಏರಿಕೆಯಾಗುವ ಸಾಧ್ಯತೆ ಇದೆ. ಅಲ್ಲಿನ ವರದಿ ಪ್ರಕಾರ, ಬ್ರೆಜಿಲ್‌ನ ಅತಿ ದೊಡ್ಡ ಅರೇಬಿಕಾ ಬೆಳೆ ಪ್ರದೇಶವಾದ ಮಿನಾಸ್ ಜೆರೈಸ್‌ನಲ್ಲಿ ಕಳೆದ ವಾರ ಕೇವಲ 4.2 ಮಿಮೀ ಮಳೆಯಾಗಿದ್ದು, ಇದು ಸಾಮಾನ್ಯ ಸರಾಸರಿಯ ಕೇವಲ ಶೇ.20 ಮಾತ್ರ ಎಂದು ಹೇಳಲಾಗಿದೆ. ಬ್ರೆಜಿಲ್'ನಲ್ಲಿ ಕಾಫಿ ಉತ್ಪಾದನೆ ಹಾಗೂ ಹವಾಮಾನ ವೈಪರೀತ್ಯ ಉಂಟಾದರೆ ಇಡೀ ಜಾಗತಿಕ ಮಟ್ಟದಲ್ಲಿ ಕಾಫಿ ಬೆಲೆಯಲ್ಲಿ ಏರಿಳಿತಗಳಾಗುವುದು ಸಹಜವಾಗಿದ್ದು, ಇದೀಗ ಅಲ್ಲಿನ ಕಾಫಿ ಸರಬರಾಜು ಕುಸಿತವಾಗಿರುವುದರಿಂದ ಭಾರತದ ಅದರಲ್ಲೂ ದಕ್ಷಿಣ ಭಾರತದ ಕರ್ನಾಟಕದ ಬೆಳೆಗಾರರಿಗೆ ಬಂಪರ್ ಬೆಲೆ ಸಿಗುವ ನಿರೀಕ್ಷೆಯಿದೆ.

ಸಂಪಾದಕೀಯ

ಮಹಿಳಾ ಮೀಸಲು: ಸಮಾನ ಪ್ರತಿನಿಧಿತ್ವದ ದಿಕ್ಕಿನಲ್ಲಿ ದಿಟ್ಟ ಹೆಜ್ಜೆ

ಲೋಕಸಭೆಯಲ್ಲಿ ಮಂಡನೆಯಾದ ಮಹಿಳಾ ಮೀಸಲು ಕಾಯ್ದೆ ತಿದ್ದುಪಡಿ ಹಾಗೂ ಲೋಕಸಭೆ ಕ್ಷೇತ್ರಗಳ ಪುನರ್‌ವಿಂಗಡಣೆ ಪ್ಯಾನಲ್ ಸ್ಥಾಪನೆಗೆ ಸಂಬಂಧಿಸಿದ ಮೂರು ಮಸೂದೆಗಳು ಭಾರತದ ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ಮಹತ್ವದ ಘಟ್ಟವನ್ನು ಸೂಚಿಸುತ್ತವೆ. ಮಹಿಳೆಯರಿಗೆ ಶೇ.33 ಮೀಸಲಾತಿ ಒದಗಿಸುವ ಮೂಲಕ ರಾಜಕೀಯ ಕ್ಷೇತ್ರದಲ್ಲಿ ಸಮಾನ ಅವಕಾಶ ಕಲ್ಪಿಸುವುದು ಕೇಂದ್ರ ಸರ್ಕಾರದ ದೂರದೃಷ್ಟಿಯ ನಿರ್ಧಾರವೆಂದೇ ಹೇಳಬೇಕು.



ಸ್ವಾತಂತ್ರ್ಯ ಬಂದಾಗಿನಿಂದ ಇಲ್ಲಿವರೆಗೆ ಮಹಿಳೆಯರ ರಾಜಕೀಯ ಪಾಲ್ಗೊಳ್ಳುವಿಕೆ ಪ್ರಮಾಣ ಕಡಿಮೆಯಾಗಿಯೇ ಉಳಿದಿರುವುದು ವಾಸ್ತವ. ಈ ಹಿನ್ನೆಲೆಯಲ್ಲಿ ಮೀಸಲಾತಿ ಕೇವಲ ನೀತಿ ಘೋಷಣೆ ಆಗದೆ, ಪರಿಣಾಮಕಾರಿ ಜಾರಿಗೆ ಬರಬೇಕಾದ ಅಗತ್ಯವಿದೆ. ಅದಕ್ಕಾಗಿ ಜನಗಣತಿ ಹಾಗೂ ಕ್ಷೇತ್ರ ಪುನರ್‌ವಿಂಗಡಣೆ ಪ್ರಕ್ರಿಯೆಯನ್ನು ಅನಿವಾರ್ಯವಾಗಿ ಜೋಡಿಸಿರುವುದು ಸೂಕ್ತವಾದ ಆಡಳಿತಾತ್ಮಕ ಕ್ರಮ. ಕ್ಷೇತ್ರಗಳ ಪುನರ್ ರಚನೆ ಮೂಲಕ ಸಮಾನ ಜನಸಂಖ್ಯೆಗೆ ಸಮಾನ ಪ್ರತಿನಿಧಿತ್ವ ದೊರಕುವಂತೆ ಮಾಡುವುದು ಪ್ರಜಾಪ್ರಭುತ್ವದ ಮೂಲ ಸಿದ್ಧಾಂತವೇ ಆಗಿದೆ.

ಕ್ಷೇತ್ರ ಪುನರ್‌ವಿಂಗಡಣೆ ಮೂಲಕ ಲೋಕಸಭೆ ಸ್ಥಾನಗಳ ಹೆಚ್ಚಳವೂ ಸಾಧ್ಯವಾಗಲಿದೆ. ಇದರಿಂದ ದೇಶದ ವಿವಿಧ ಭಾಗಗಳಿಗೆ, ವಿಶೇಷವಾಗಿ ಜನಸಂಖ್ಯೆ ಹೆಚ್ಚುತ್ತಿರುವ ಪ್ರದೇಶಗಳಿಗೆ, ಹೆಚ್ಚಿನ ಪ್ರತಿನಿಧಿತ್ವ ದೊರೆಯಲಿದೆ. ಜೊತೆಗೆ ಮಹಿಳೆಯರಿಗೆ ಹೊಸ ಅವಕಾಶಗಳು ಸೃಷ್ಟಿಯಾಗಲಿದ್ದು, ರಾಜಕೀಯದಲ್ಲಿ ಅವರ ಪಾತ್ರ ಮತ್ತಷ್ಟು ಬಲಿಷ್ಠವಾಗಲಿದೆ.

ದಕ್ಷಿಣ ರಾಜ್ಯಗಳ ಆತಂಕಗಳನ್ನೂ ನಿರ್ಲಕ್ಷಿಸದೇ, ಸಮತೋಲನ ಕಾಪಾಡುವ ರೀತಿಯಲ್ಲಿ ಈ ಪ್ರಕ್ರಿಯೆ ಮುಂದುವರಿಯಲಿದೆ ಎಂಬ ವಿಶ್ವಾಸವಿದೆ. ಕೇಂದ್ರ ಸರ್ಕಾರವು ಸಮಗ್ರ ಅಭಿವೃದ್ಧಿ ಮತ್ತು ಸಮಾನತೆ ಎಂಬ ದ್ವಿತೀಯ ಉದ್ದೇಶಗಳನ್ನು ಹೊಂದಿ ಈ ಮಸೂದೆಗಳನ್ನು ಮುಂದಿಟ್ಟಿದೆ.

ಈಗಾಗಲೇ ಪ್ರಧಾನಿ ನರೇಂದ್ರ ಮೋದಿ ಮತ್ತು ಗೃಹ ಸಚಿವ ಅಮಿತ್ ಶಾ ಅವರು ದಕ್ಷಿಣ ರಾಜ್ಯಗಳಿಗೆ ಅನ್ಯಾಯವಾಗುವುದಿಲ್ಲ ಎಂದಿದ್ದಾರೆ. ಜತೆಗೆ, ಎಲ್ಲರ ಒತ್ತಾಯದಂತೆ ಜನಸಂಖ್ಯೆ ಆಧರಿತವಾಗಿ ಪುನರ್‌ವಿಂಗಡಣೆ ಮಾಡದೇ, ಶೇ.50ರ ಆಧಾರದಲ್ಲಿ ಹೆಚ್ಚಳ ಮಾಡಲಾಗುತ್ತಿದೆ. ಇದರಿಂದ ಎಲ್ಲ ರಾಜ್ಯಗಳಿಗೂ ಸಮಾನ ನ್ಯಾಯ ಸಿಗಲಿದೆ. ಕರ್ನಾಟಕದಲ್ಲೂ 42 ಸ್ಥಾನಗಳಿಗೆ ಏರಿಕೆಯಾಗಲಿದೆ. ಈ ಬಗ್ಗೆ ಕೇಂದ್ರ ಸರ್ಕಾರ ಅಭಯ ನೀಡಿರುವುದರಿಂದ ಈ ಮಸೂದೆಗಳ ಬಗ್ಗೆ ರಾಜಕೀಯವಾಗಿ ಯೋಚನೆ ಮಾಡದೆ, ಮಹಿಳೆಯರ ಹಿತದೃಷ್ಟಿಯಿಂದ ಯೋಚಿಸಿ ಮುಂದಡಿ ಇಡಬೇಕಾಗಿದೆ. ಈಗಾಗಲೇ ಹಿಂದೆ ಒಂದಿಲ್ಲೊಂದು ಕಾರಣಗಳಿಂದಾಗಿ ಈ ಮಹಿಳಾ ಮಸೂದೆ ಜಾರಿಯಾಗದೇ ಉಳಿದಿತ್ತು. ಈಗ ಐತಿಹಾಸಿಕ ನಿರ್ಧಾರ ತೆಗೆದುಕೊಳ್ಳುವ ಸಮಯ ಬಂದಿರುವುದರಿಂದ ಈಗಲಾದರೂ ಅತ್ತ ಹೆಜ್ಜೆ ಇಡಬೇಕಾಗಿದೆ. ಒಟ್ಟಿನಲ್ಲಿ, ಮಹಿಳಾ ಮೀಸಲು ಮತ್ತು ಡಿಲಿಮಿಟೇಶನ್ ಮಸೂದೆಗಳು ಕೇವಲ ಕಾನೂನು ಬದಲಾವಣೆಗಳಲ್ಲ; ಅವು ಸಾಮಾಜಿಕ ನ್ಯಾಯ, ಸಮಾನತೆ ಮತ್ತು ಮಹಿಳಾ ಸಬಲೀಕರಣದ ದಿಕ್ಕಿನಲ್ಲಿ ದೇಶವನ್ನು ಮುಂದಕ್ಕೆ ಕೊಂಡೊಯ್ಯುವ ದಿಟ್ಟ ಹೆಜ್ಜೆಗಳಾಗಿವೆ. ಭಾರತದ ಪ್ರಜಾಪ್ರಭುತ್ವವನ್ನು ಮತ್ತಷ್ಟು ಒಳಗೊಂಡ ಮತ್ತು ಸಮತೋಲನಯುತವಾಗಿಸುವ ಈ ಪ್ರಯತ್ನ ಸ್ವಾಗತಾರ್ಹ.

ಹಣಕ್ಕಾಗಿ ಮನುಷ್ಯರಲ್ಲ

ಉತ್ತಮಾಃ ಧನಮಾರ್ಜೇಯುಃ ಧನಮಾರ್ಜತಿನೋತ್ತಮಾನ್ ।
ಮನುಷ್ಯಾಣಾಂ ಕೃತೇ ವಿತ್ತಂ ನ ವಿತ್ತಸ್ಯಾ ಕೃತೇ ತು ತೇ॥ -ಸುವಚನ ಶತಕಂ

ಉತ್ತಮ ಜನರು ಹಣವನ್ನು ಗಳಿಸಬಲ್ಲರು. ಆದರೆ ಹಣ ಉತ್ತಮರನ್ನು ಕೊಳ್ಳಲಾರದು. ಮನುಷ್ಯರಿಗಾಗಿ ಹಣ, ಹಣಕ್ಕಾಗಿ ಮನುಷ್ಯರಲ್ಲ -ಎಂಬುದು ಶ್ಲೋಕಾರ್ಥ.

ಸುಖಮಯ ಜೀವನವನ್ನು ಸಾಗಿಸುವುದಕ್ಕೆ ಬೇಕಾದ ಕೆಲವೇ ಮುಖ್ಯ ಅಂಶಗಳಲ್ಲಿ ಪ್ರಧಾನವಾದದ್ದು ಹಣ. ಹಣವೊಂದಿದ್ದರೆ ಬಹುತೇಕ ಕಾರ್ಯ ಸಾಧಿಸಿದಂತೆ. ಹಣ ಎಲ್ಲ ಗುಣಗಳ ಆಗರ. ಈ ಕಾರಣಕ್ಕಾಗಿಯೇ ''ಸರ್ವೇ ಗುಣಾ- ಕಾಂಚಮಾಶ್ರಯಂತಿ'' ಎಂಬ ಸೂಕ್ತಿ ಹೊರಟಿದೆ.



ಹಣಕ್ಕಾಗಿ ಹಪಹಪಿಸುವವರಿರುವಂತೆ ಹಣವನ್ನು ಸಂಪೂರ್ಣ ತಿರಸ್ಕರಿಸಿದವರಿದ್ದಾರೆ. ಆದರೆ ಇಂಥವರ ಸಂಖ್ಯೆ ತೀರಾ ವಿರಳ.

ಹಣವಿಲ್ಲದೇ ಜೀವನ ನಿರ್ವಹಣೆ ಅಸಾಧ್ಯ. ಬದುಕನ್ನು ಶ್ರೀಮಂತಗೊಳಿಸುವ ಹಣವನ್ನು ದುಡಿಮೆಯಿಂದ ಸಂಪಾದಿಸಬಹುದು. ಉತ್ತಮ ಗುಣನಡತೆಯುಳ್ಳವರು, ಪರಿಶ್ರಮಿಗಳು ಹಣವನ್ನು ಗಳಿಸಬಲ್ಲರು. ಮೈಮುರಿದು ದುಡಿದರೆ ಸಂಪತ್ತು ಬಂದೇಬರುತ್ತದೆ. ಬಂದ ಸಂಪತ್ತನ್ನು ನೋಡಿ ಮೈಮರೆಯದೆ ಸರಿಯಾಗಿ ವಿನಿಯೋಗಿಸಿಕೊಂಡಾಗ ಸಾರ್ಥಕತೆ ಪಡೆಯುತ್ತದೆ. ಶ್ರಮವನ್ನು ಆರಾಧಿಸುವ ಉತ್ತಮರಾದ ಯಾರೂ ಕೂಡ ಸಂಪತ್ತಿನ ಅಧಿಪತಿಗಳಾಗಲು ಸಾಧ್ಯ, ಸಂಪತ್ತನ್ನು ಗಳಿಸಲು ಸಾಧ್ಯ. ಆದರೆ ಹಣ ಉತ್ತಮರನ್ನು ಕೊಂಡುಕೊಳ್ಳಲಾರದು.

ಈ ಮಾತಿಗೆ ಅಪವಾದವೆಂಬಂತೆ ಹಣದಿಂದ ಜನರನ್ನು ಕೊಂಡುಕೊಳ್ಳುವ ಕೆಟ್ಟ ಚಾಳಿಯನ್ನು ಈಗೀಗ ಕಾಣಬಹುದು. ರಾಜಕೀಯದಲ್ಲಂತೂ ಇದು ಸಾಮಾನ್ಯವೆನಿಸಿದೆ. ಚೀಲ ಚೀಲ ಹಣ ಕೊಟ್ಟು ಶಾಸಕರನ್ನು ಖರೀದಿಸಿ ಅಧಿಕಾರ ಗದ್ದುಗೆ ಏರಿದವರು ಇದ್ದಾರೆ. ನ್ಯಾಯವನ್ನು ಕೊಂಡುಕೊಳ್ಳುವವರಿದ್ದಾರೆ. ಇದೇ ಚಾಳಿಯು ಈಗ ಬಿಟ್ಟಿ ಭಾಗ್ಯವೆಂಬ ಹೆಸರಿನಿಂದ ಮುಂದುವರಿದಿದೆ. ಈ ಕರ್ಮದ ಹಿಂದೆ ಸ್ವಾರ್ಥ, ಅಧಿಕಾರಗಳ ಹೊರತಾಗಿ ಲೋಕಕಲ್ಯಾಣದ ಯಾವ ಚಿಂತನೆಯೂ ಇಲ್ಲ.

ಮನುಷ್ಯರಿಗೆ ಮಾತ್ರ ಸಂಪತ್ತು, ಅಧಿಕಾರ, ಮಾನ್ಯತೆ... ಇತ್ಯಾದಿಗಳು ಬೇಕು. ಇದಕ್ಕಾಗಿ ಏನನ್ನೂ ಮಾಡುತ್ತಾರೆ. ದೇಶವನ್ನೇ ಮಾರುತ್ತಾರೆ. ಭೂಮಿಯನ್ನೂ ಬರಡು ಮಾಡುತ್ತಾರೆ. ಆಜನ್ಮ ವಿರೋಧಿಗಳೊಂದಿಗೂ ಕೈ ಜೋಡಿಸುತ್ತಾರೆ.

ಮನುಷ್ಯನಿಗೆ ತನ್ನ ಬದುಕನ್ನು ಚೆನ್ನಾಗಿ ನಿರ್ವಹಿಸುವಷ್ಟು ಸಂಪತ್ತು ಬೇಕು. ಅದಕ್ಕೂ ಹೆಚ್ಚಾಗಿ ಕೂಡಿಡುವ ಸಂಪತ್ತಿನಿಂದ ಏನು ಪ್ರಯೋಜನ? ಸಂಪತ್ತಿಗಾಗಿ ನಮ್ಮ ಬದುಕನ್ನು ಮೀಸಲಿಡಬಾರದು. ಬಾಹ್ಯವಾದ ಯಾವ ಸಂಪತ್ತೂ ಶಾಶ್ವತವಲ್ಲ. ಸಂಪತ್ತು ಎಂದಿದ್ದರೂ ಚಂಚಲ. ಹೃದಯ ಸಂಪತ್ತು ಮಾತ್ರ ಶಾಶ್ವತ. ಸಂಪತ್ತಿರುವಷ್ಟು ದಿನ ಶ್ರೀಮಂತರ ಹಿಂದೆ ಸುತ್ತುವವರು ಸಂಪತ್ತು ಕರಗಿದ ಮೇಲೆ ದೂರ ಸರಿಯುತ್ತಾರೆ.

ಆದ್ದರಿಂದ ಹಣ ಮಾಡುವುದೇ ಗುರಿಯಾಗದೇ ಉತ್ತಮ ಜೀವನ ನಿರ್ವಹಣೆಗೆ ಮಣೆ ಹಾಕಬೇಕು. ಯಾವುದೇ ಇರಲಿ, ಒಂದು ಹಂತ ಮೀರಿದರೆ ಅಪಾಯ, ತೊಂದರೆ ತಪ್ಪಿದ್ದಲ್ಲ. ಹಣಕ್ಕಾಗಿಯೇ ಮನುಷ್ಯ ಜನ್ಮವಲ್ಲ ಎಂಬ ಎಚ್ಚರವಿದ್ದರೆ ಸಾಕು.

ಅಮೆರಿಕದ ದ್ವಂದ್ವ ನಿಲುವೇ ಬಿಕ್ಕಟ್ಟುಗಳಿಗೆ ಕಾರಣ

▸ಸುಬ್ರಹ್ಮಣ್ಯ ಎನ್.

ಪಾಕಿಸ್ತಾನದಲ್ಲಿ ನಡೆದ ಇರಾನ್ - ಅಮೆರಿಕ ಶಾಂತಿ ಮಾತುಕತೆ ಮುರಿದುಬಿದ್ದಿದೆ. ಇರಾನ್ ಮತ್ತು ಅಮೆರಿಕಗಳು ಒಮ್ಮತಕ್ಕೆ ಬರಲು ವಿಫಲಗೊಂಡಿವೆ. ಇದು ದುರದೃಷ್ಟಕರ ನಿಜ. ಆದರೆ ಆಶ್ಚರ್ಯಕರವಲ್ಲ. ಮಾತುಕತೆಯು ಮುರಿದು ಬೀಳುವುದೆಂಬ ಸಂಕೇತ ಆರಂಭದಿಂದಲೇ ಇತ್ತು. ಏಕೆಂದರೆ ಸಂಧಾನ ಪ್ರಕ್ರಿಯೆ ಏರ್ಪಟ್ಟುದೇ ಅವಸರದಲ್ಲಿ. ಅಮೆರಿಕವು ಯುದ್ಧ ನಿಲ್ಲಿಸುವುದಕ್ಕಿಂತಲೂ ಮುಖ್ಯವಾಗಿ ತನ್ನ ಮುಖವುಳಿಸಿಕೊಳ್ಳಲು ಈ ಮಾತುಕತೆಗೆ ಮುಂದಾಗಿತ್ತು. ನರೇಟಿವ್ ಕದನದಲ್ಲಿ ಇರಾನ್ ಮೇಲುಗೈ ಸಾಧಿಸುತ್ತಿರುವುದನ್ನು ಕಂಡ ಟ್ರಂಪ್ ಅದಕ್ಕಾಗಿ ಶಾಂತಿ ಮಾತುಕತೆಯ ನಾಟಕವಾಡಿದ್ದರು. ತನ್ನ ಧಣಿಯಾದ ಅಮೆರಿಕದ ಅಪ್ಪಣೆಯಂತೆ ಪಾಕಿಸ್ತಾನವು ಮಾತುಕತೆ ಏರ್ಪಡಿಸಲು ಮುಂದಾಗಿತ್ತು.

ಇಲ್ಲೀಗ ಮುಖ್ಯ ವಿಷಯವಿರುವುದು ಮಾತುಕತೆ ಮುರಿದು ಬಿದ್ದಿರುವುದಲ್ಲ. ವಿಶ್ವದಲ್ಲಿ 'ಜಿಹಾದ್ ಫ್ಯಾಕ್ಟರಿ' ಎಂದು ಕರೆಯಲ್ಪಡುವ ದೇಶವೊಂದು ಶಾಂತಿ ಮಾತುಕತೆಗೆ ತಾಣವಾದುದೇ ಅತ್ಯಂತ ದೊಡ್ಡ ವ್ಯಂಗ್ಯ. ಶಾಂತಿ ಮಾತುಕತೆ ನಡೆದ ಸಮಯ ಸಂದರ್ಭವಂತೂ ಇನ್ನೂ ವಿಪರ್ಯಾಸದ್ದು. ಏಕೆಂದರೆ ಕೆಲವೇ ದಿನಗಳ ಮೊದಲು ಪಾಕಿಸ್ತಾನದ ವಿದೇಶಾಂಗ ಸಚಿವ ಖ್ವಾಜಾ ಆಸೀಫ್ ರವರು, 'ಇಸ್ರೇಲ್ ಮನುಕುಲಕ್ಕೆ ಒಂದು ಶಾಪ ಹಾಗೂ ಕ್ಯಾನ್ಸರ್' ಎಂದು ಬಣ್ಣಿಸಿದ್ದರು. ಅದಕ್ಕೂ ಮುನ್ನ ಇದೇ ಆಸೀಫ್ ಕೊಲ್ಕತ್ತಾ ನಗರದ ಮೇಲೆ ಬಾಂಬ್ ಹಾಕುವುದಾಗಿ ಬೆದರಿಸಿದ್ದರು.

ಇದು ಖ್ವಾಜಾ ಆಸಿಫ್ ಒಬ್ಬರದೇ ಮನಸ್ಥಿತಿಯಲ್ಲ. ಪಾಕಿಸ್ತಾನದ ಎಲ್ಲರ ಮನಸ್ಥಿತಿಯೂ ಅಂತಹುದೇ. ಹಿಂದೊಮ್ಮೆ ಪಾಕಿಸ್ತಾನದ ವಿದೇಶಾಂಗ ಸಚಿವರಲ್ಲಿ ದೇವರಲ್ಲಿ ನಿಮ್ಮ ಮೆಚ್ಚಿನ ಕೋರಿಕೆ ಯಾವುದು ಎಂದು ಕೇಳಿದಾಗ ಆತ '' ದೇವರು ನನ್ನ ಕೋರಿಕೆ ಈಡೇರಿಸುವುದಾದರೆ, ನಾನು ನನ್ನ ಎರಡು ಕೈಗಳಲ್ಲಿ ಎರಡು ಪರಮಾಣು ಬಾಂಬ್‌ಗಳನ್ನು ನೀಡುವಂತೆ ಕೋರುತ್ತೇನೆ. ಅದರಲ್ಲಿ ಒಂದನ್ನು ಮುಂಬೈ ಮೇಲೆ ಹಾಗೂ ಇನ್ನೊಂದನ್ನು ದಿಲ್ಲಿ ಮೇಲೆ ಹಾಕುತ್ತೇನೆ'' ಎಂದು ನುಡಿದಿದ್ದ.

ಪಾಶ್ಚಿಮಾತ್ಯ ದೇಶಗಳು, ಅದರಲ್ಲಿಯೂ ಮುಖ್ಯವಾಗಿ ಅಮೆರಿಕವು ಪಾಕಿಸ್ತಾನದ ಮುಖಂಡರ ಇಂತಹ ಹೇಳಿಕೆಗಳನ್ನೆಲ್ಲಾ ಪರಿಗಣನೆಗೆ ತೆಗೆದುಕೊಳ್ಳದಿರುವುದು ಪರಮಾಶ್ಚರ್ಯ. ಏಕೆಂದರೆ ಇವೇನು ಯಾವುದೋ ಭಯೋತ್ಪಾದಕ ಸಂಘಟನೆಗಳ ಮಾತುಗಳಲ್ಲ. ಪಾಕಿಸ್ತಾನದ ರಾಜಕೀಯ ಮುಖಂಡರಿಂದ, ಸರಕಾರದಿಂದ ಬರುವ ಹೇಳಿಕೆಗಳಿವು. ಇಂಥ ಹೇಳಿಕೆ ನೀಡುವುದರಲ್ಲಿ ಅವರಿಗೆ ಯಾವುದೇ ಮುಜುಗರವೂ, ಹಿಂಜರಿಕೆಯೂ ಇಲ್ಲ. ಹಾಗಿದ್ದರೆ ಪಾಕಿಸ್ತಾನದಲ್ಲಿ ಮುಖ್ಯವಾಹಿನಿಯಲ್ಲಿ ಇರುವವರಾದರೂ ಯಾರು? ಇಲ್ಲಿ ನಿಮಗೆ ಯಾವುದೇ ಭೇದವೇ ಕಾಣುವುದಿಲ್ಲ. ಮುಖ್ಯವಾಹಿನಿ ಮತ್ತು ಭಯೋತ್ಪಾದನೆಯ ಹಾದಿ ತುಳಿದವರು ಎಲ್ಲರೂ ಒಂದೇ ಆಗಿದ್ದಾರೆ.

ಹಾಗಿದ್ದರೆ, ಪಾಕಿಸ್ತಾನದ ಜಿಹಾದಿ ಅಸ್ಮಿತೆಯು 'ಉದಾರವಾದಿ' (ಲಿಬರಲ್) ಪಾಶ್ಚಿಮಾತ್ಯ ದೇಶಗಳಿಗೆ ಸಮ್ಮತವಾದುದಾದರೂ ಹೇಗೆ?



ಇದಕ್ಕೆ ಉತ್ತರ ಪಾಕಿಸ್ತಾನ ಬೆಳೆದು ಬಂದ ರೀತಿಯಲ್ಲಿದೆ. 1947ರಲ್ಲಿ ಪಾಕಿಸ್ತಾನವು ರೂಪುಗೊಂಡುದೇ ಇಸ್ಲಾಮಿಕ್ ಮೂಲಭೂತವಾದಿ ಮಾನಸಿಕತೆ ಮತ್ತು ಬ್ರಿಟಿಷ್ - ಅಮೆರಿಕನ್ ಭೌರಾಜಕೀಯ ಚಿತಾವಣೆಯಿಂದ. ಮೇಲ್ನೋಟಕ್ಕೆ ಪಾಕಿಸ್ತಾನವು ಆಧುನಿಕವೂ, ಮೂಲಭೂತವಾದವೂ ಜತೆಯಾಗಿ ಮಿಶ್ರಣಗೊಂಡಂತಿತ್ತು. ಈ ವೈರುಧ್ಯವನ್ನು ಪರಿಹರಿಸಿಕೊಳ್ಳುವ ಬದಲಿಗೆ ಪಾಕಿಸ್ತಾನವು ಅದನ್ನೇ ಸಾಂಸ್ಥಿಕಗೊಳಿಸುತ್ತಾ ಬಂತು. ಹೊರಗಿನಿಂದ ಆಧುನಿಕವಾಗಿ ಕಂಡರೂ ಒಳಗಿನಿಂದ ಪಾಕಿಸ್ತಾನವು ಹೆಚ್ಚು ಮೂಲಭೂತವಾದಿ ಯಾಗಿ ಮತ್ತು ಆಕ್ರಮಣಕಾರಿಯಾಗಿ ಬೆಳೆಯುತ್ತಾ ಬಂತು.

ಪಾಕಿಸ್ತಾನದ ಈ ದ್ವಂದ್ವ ನೀತಿಯನ್ನು ಪಾಶ್ಚಿಮಾತ್ಯ ದೇಶಗಳು ಅದರಲ್ಲೂ ಮುಖ್ಯವಾಗಿ ಅಮೆರಿಕವು ಲಾಗಾಯ್ತಿನಿಂದಲೂ ಬೆಂಬಲಿಸುತ್ತಾ ಬಂದಿದೆ. ಖ್ಯಾತ ಲೇಖಕ ಬ್ರೂಸ್ ರೀಡೆಲ್ ಬರೆಯುತ್ತಾರೆ '' ಪ್ರಜಾಪ್ರಭುತ್ವದ ಚಾಂಪ್ಯನ್ ಎಂದು ಕರೆಸಿಕೊಳ್ಳುವ ಅಮೆರಿಕವು ನಿರಂತರವಾಗಿ ಪಾಕಿಸ್ತಾನದ ಸರ್ವಾಧಿಕಾರಿಗಳನ್ನು ಬೆಂಬಲಿಸಿಕೊಂಡು ಬಂದಿದೆ. ಪಾಕಿಸ್ತಾನವು ಭಾರತದ ವಿರುದ್ಧ ಯುದ್ಧ ಸಾರಿದರೂ , ಒಳಗಿನಿಂದ ಜಿಹಾದ್ ಮಾನಸಿಕತೆಯನ್ನು ಬೆಳೆಸಿಕೊಳ್ಳುತ್ತಾ ಬಂದರೂ ಅಮೆರಿಕವು ಪಾಕಿಸ್ತಾನದ ಬೆಂಬಲಕ್ಕೇ ನಿಂತಿದೆ. ಆಯೂಬ್‌ಖಾನ್‌ನಿಂದ ಹಿಡಿದು ಜಿಯಾ ಉಲ್ ಹಕ್, ಮುಷರಫ್ ತನಕ ಎಲ್ಲಾ ನಿರಂಕುಶಾಧಿಕಾರಿಗಳು ಅಮೆರಿಕದ ಬೆಂಬಲ ಪಡೆಯುತ್ತಾ ಬಂದಿದ್ದಾರೆ. ಕೆನಡಿ ಪಾಕಿಸ್ತಾನದ ಅಯೂಬ್ ಖಾನ್‌ಗೇ ಡಿನ್ನರ್ ಪಾರ್ಟಿ ಏರ್ಪಡಿಸಿದ್ದರು. ಪಾಕಿಸ್ತಾನವು ಸಾವಿರಾರು ಬಾಂಗ್ಲಾದೇಶೀಯರನ್ನು ಅಮಾನುಷವಾಗಿ ಹತ್ಯೆಗೈದಾಗ ರಿಚರ್ಡ್ ನಿಕ್ಸನ್ ಕಣ್ಣು ಮುಚ್ಚಿ ಕೂತಿದ್ದರು. ಜಿಯಾ ಉಲ್ ಹಕ್ ಭಯೋತ್ಪಾದಕ ಸಂಘಟನೆಗಳನ್ನು ಬೆಳೆಸಿದರೂ ರೊನಾಲ್ಡ್ ರೇಗನ್ ಅವರಿಗೆ ಬೆಂಬಲವಾಗಿ ನಿಂತಿದ್ದರು. ಮುಷರಫ್ ತಾಲಿಬಾನ್ ಬೆಳೆಸಿದಾಗ ಜಾರ್ಜ್ ಬುಶ್ ಕಂಡೂ ಕಾಣದಂತೆ ಕೂತರು. ಅದೇ ತಾಲಿಬಾನ್ ಬಳಿಕ ಅಮೆರಿಕನ್ನರನ್ನೇ ಕೊಲ್ಲತೊಡಗಿತು''

ಇಂತಿರುವಾಗ ಡೊನಾಲ್ಡ್ ಟ್ರಂಪ್‌ರವರು ಪಾಕಿಸ್ತಾನಿ ಸೇನಾ ಮುಖಂಡ ಅಸೀಮ್ ಮುನೀರ್‌ನನ್ನು 'ನನ್ನ ಮೆಚ್ಚಿನ ಫೀಲ್ಡ್ ಮಾರ್ಷಲ್' ಎಂದು ಕರೆಯುವುದು ಅಚ್ಚರಿ ತರುವುದಿಲ್ಲ. ಇವೆಲ್ಲ ಪಾಕಿಸ್ತಾನದ ಆಡಳಿತದಲ್ಲಿ ಒಂದು ನಂಬಿಕೆಯನ್ನು ಗಟ್ಟಿಗೊಳಿಸಿದೆ. ತಾವು ಎಷ್ಟೇ ಭಯೋತ್ಪಾದಕ ಕೃತ್ಯಗಳಿಗೆ ಬೆಂಬಲ ನೀಡಿದರೂ, ಎಷ್ಟೇ ಜಿಹಾದಿ ಮಾನಸಿಕತೆಯನ್ನು ಪ್ರಕಟಿಸಿದರೂ ಪಾಶ್ಚಿಮಾತ್ಯ ಜಗತ್ತು ತಮ್ಮನ್ನು ಒಪ್ಪಿಕೊಳ್ಳುತ್ತದೆ ಎಂಬುದಾಗಿ.

> ವಿಶ್ವದಲ್ಲಿ 'ಜಿಹಾದ್ ಫ್ಯಾಕ್ಟರಿ' ಎಂದು ಕರೆಯಲ್ಪಡುವ ದೇಶವೊಂದು ಶಾಂತಿ ಮಾತುಕತೆಗೆ ತಾಣವಾದುದೇ ಅತ್ಯಂತ ದೊಡ್ಡ ವ್ಯಂಗ್ಯ.

ಹಾಗಾಗಿ ಉದಾರವಾದಿ ಪಾಕಿಸ್ತಾನಿಯರು ಕೂಡಾ ಕಾಲಕ್ರಮೇಣ ಉಗ್ರವಾದಿ ಮಾನಸಿಕತೆ ಬೆಳೆಸಿಕೊಂಡರು. ಮಹಮ್ಮದ್ ಆಲಿ ಜಿನ್ನಾ ಕೂಡಾ ಒಂದು ಕಾಲದಲ್ಲಿ ಹಿಂದು-ಮುಸ್ಲಿಂ ಏಕತೆಯ ಸರದಾರ ಎಂದು ಬಣ್ಣಿಸಲ್ಪಟ್ಟಿದ್ದ. ಆದರೆ ಹಿಂದುಗಳನ್ನು ಪಾಕಿಸ್ತಾನದಲ್ಲಿ ಉಳಿಸಿಕೊಳ್ಳಲು ಆತ ಪಟ್ಟ ಪ್ರಯತ್ನವು ಆತನ ಕಾರ್ಯತಂತ್ರದ ಒಂದು ಭಾಗವಾಗಿತ್ತೇ ಹೊರತು ಪ್ರಾಮಾಣಿಕವಾದುದಾಗಿರಲಿಲ್ಲ. ಭಾರತದಲ್ಲಿರುವ ಮುಸ್ಲಿಮರಿಗೆ ಸುರಕ್ಷೆ ಒದಗಿಸುವುದು ಆತನ ಈ ನಡೆಯ ಹಿಂದಿನ ಉದ್ದೇಶವಾಗಿತ್ತು.

ಪಾಕಿಸ್ತಾನದ ಆಡಳಿತಗಾರರೆಲ್ಲ ಜಿಹಾದಿ ಆಯಾಮವನ್ನು ಬೆಂಬಲಿಸಿಕೊಂಡೇ ಬಂದವರು. ಜುಲ್ಫಿಕರ್ ಆಲಿ ಭುಟ್ಟೋ ಕೂಡಾ ತಮ್ಮ ಸಮಾಜವಾದಿ ಸಿದ್ಧಾಂತದ ಜತೆಗೇ ಪಾಕಿಸ್ತಾನದ ಇಸ್ಲಾಮೀಕರಣವನ್ನು ಬಲಗೊಳಿಸಿದ್ದರು. ಬೆನಜೀರ್ ಭುಟ್ಟೋ ಲಿಬರಲ್ ನಾಯಕಿ ಎಂಬ ಮುಖವಾಡ ಹಾಕಿಕೊಂಡಿದ್ದರೂ ಕಾಶ್ಮೀರಕ್ಕೆ ಸಂಬಂಧಿಸಿ ಜಿಹಾದನ್ನು ಪ್ರೋತ್ಸಾಹಿಸಿದ್ದರು ಹಾಗೂ ತಾಲಿಬಾನ್ ಬೆಳೆಯಲೂ ಅವರೇ ಕಾರಣರಾಗಿದ್ದರು. ನವಾಜ್ ಶರೀಫ್ ಆಡಳಿತದ ಅವಧಿಯಲ್ಲಿ ಮುಂಬೈ ಸ್ಫೋಟಗಳು ಮತ್ತು ಕಾರ್ಗಿಲ್ ಅತಿಕ್ರಮಣ ನಡೆದಿತ್ತು. ಪಾಕಿಸ್ತಾನದ ಈಗಿನ ಸೇನಾ ಮುಖ್ಯಸ್ಥ ಮುನೀರ್ ಕೂಡಾ ಇದೇ ರೀತಿಯ ಮಾನಸಿಕತೆಯವನು.

ಪಾಕಿಸ್ತಾನವು ಜಿಹಾದಿ ಫ್ಯಾಕ್ಟರಿಯಾಗಿರುವುದರ ಜತೆಗೆ ಪಾಶ್ಚಿಮಾತ್ಯ ದೇಶಗಳ ಮಿತ್ರನೂ ಆಗಿರುವುದು ಭಾರತದ ಪಾಲಿಗೆ ಎರಡಲಗಿನ ಕತ್ತಿಯಂತಾಗಿದೆ. ಭಾರತವು ಪಾಶ್ಚಿಮಾತ್ಯ ದೇಶಗಳ ಸ್ನೇಹವುಳಿಸಿಕೊಂಡೇ ಇತ್ತ ಪಾಕಿಸ್ತಾನದ ವಿರುದ್ಧ ಹೋರಾಡಬೇಕಾದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಪಾಕಿಸ್ತಾನವನ್ನು ಭಾರತವು ದುರ್ಬಲಗೊಳಿಸಲು ಯತ್ನಿಸಿದರೂ ಅಮೆರಿಕ ಅದನ್ನು ಮತ್ತೆ ಬಲಗೊಳಿಸುವ ಯತ್ನಕ್ಕೆ ಕೈಹಾಕುತ್ತದೆ.

ಇವೆಲ್ಲದರ ಹಿನ್ನೆಲೆಯಲ್ಲಿ ನೋಡುವಾಗ, ಪಾಕಿಸ್ತಾನದಲ್ಲಿ ನಡೆದ ಇರಾನ್ -ಅಮೆರಿಕ ಶಾಂತಿ ಮಾತುಕತೆ ಮುರಿದುಬೀಳುವುದು ಅನಿವಾರ್ಯವಾಗಿತ್ತು. ಆದರೆ ಈ ಮಾತುಕತೆಯ ವೈಫಲ್ಯದ ನಿಜವಾದ ಕಾರಣ ಬೇರೆಡೆಯಲ್ಲಿದೆ. ಮುಖ್ಯವಾಗಿ ಅಮೆರಿಕದ ದ್ವಂದ್ವ ನಿಲುವು ಇದಕ್ಕೆ ಕಾರಣ. ಅಮೆರಿಕದ ಮಾತಿನಲ್ಲೊಂದು ಹಾಗೂ ಕೃತಿಯಲ್ಲೊಂದು ವರ್ತನೆಯು ಸಮಸ್ಯೆ ಪರಿಹಾರವಾಗಲು ಅವಕಾಶ ನೀಡುವುದಿಲ್ಲ. ಈ ವರ್ತನೆಯನ್ನು ನಿಲ್ಲಿಸದ ಹೊರತು ಅಮೆರಿಕವು ಸ್ವಂತ ಗೋಲು ಹೊಡೆಯುತ್ತಲೇ ಇರಬೇಕಾಗುತ್ತದೆ. ಪಾಕಿಸ್ತಾನವು ಪದೇಪದೇ ಅದರ ಲಾಭ ಪಡೆಯುತ್ತಲೇ ಇರುತ್ತದೆ. ಅಂತಿಮವಾಗಿ ಇದು ಪಾಶ್ಚಿಮಾತ್ಯ ದೇಶಗಳ ಮತ್ತು ಅಮೆರಿಕದ ವಿಶ್ವಾಸಾರ್ಹತೆಗೇ ಕುಂದು ತರಲಿದೆ.

ಮಹಿಳಾ ಸಬಲೀಕರಣದತ್ತ ದೃಷ್ಟಿ-ವಿಕಸಿತ ಭಾರತಕ್ಕೆ ನಾರೀಶಕ್ತಿ

▸ಶುಭಾ ಹೆಗಡೆ ಗಿರಣಿಮನೆ

ಭಾರತವು ಅಭಿವೃದ್ಧಿ ಪಥದಲ್ಲಿ ವೇಗವಾಗಿ ಸಾಗುತ್ತಿದೆ. ಈ ಕಾಲಘಟ್ಟದಲ್ಲಿ ಮಹಿಳೆಯರ ಸಬಲೀಕರಣವು ಕೇವಲ ಒಂದು ಸಾಮಾಜಿಕ ವಿಚಾರವಲ್ಲ, ಅದು ರಾಷ್ಟ್ರ ನಿರ್ಮಾಣದ ಆಧಾರಕ್ಕೂ ಮೂಲವಾಗಿದೆ. ಇಂಥಹ ಸಂದರ್ಭದಲ್ಲಿ ಮಹಿಳಾ ಮೀಸಲಾತಿ ಅಧಿನಿಯಮ (Women's Reservation Act) ಒಂದು ಐತಿಹಾಸಿಕ ಹಜ್ಜೆಯನ್ನು ಇಡುತ್ತಿದೆ. ರಾಜಕೀಯ ಕ್ಷೇತ್ರದಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆಯನ್ನು ಹೆಚ್ಚಿಸುವುದು, ಸಮಾನ ಅವಕಾಶಗಳನ್ನು ಒದಗಿಸುವುದು ಮತ್ತು ಪ್ರಜಾಸತ್ತಾತ್ಮಕ ವ್ಯವಸ್ಥೆಯನ್ನು ಬಲಪಡಿಸುವ ಉದ್ದೇಶ ಈ ಅಧಿನಿಯಮದಲ್ಲಿದೆ.

ನಮ್ಮ ಸಂವಿಧಾನದಲ್ಲಿ ಸಮಾನತೆ ಎನ್ನುವ ತತ್ತ್ವವನ್ನು ಘೋಷಿಸಿದ್ದರೂ ರಾಜಕೀಯದಲ್ಲಿ ಮಹಿಳೆಯರ ಪ್ರಾತಿನಿಧಿತ್ವ ಕಡಿಮೆಯಲ್ಲೇ ಉಳಿದಿತ್ತು. 2019ರ ಚುನಾವಣೆಯ ನಂತರವೂ ಸಹ ಕೇವಲ ಸುಮಾರು 14% ರಷ್ಟು ಮಾತ್ರವಿತ್ತು. ಇದು ರಾಜ್ಯ ವಿಧಾನಸಭೆಗಳಲ್ಲೂ ಹೆಚ್ಚಿನ ಬದಲಾವಣೆ ಏನೂ ಆಗಿರಲಿಲ್ಲ. ಹಾಗಿರುವಾಗ ಈ ಸ್ಥಿತಿ ಬದಲಿಸಿ ಹೊಸ ನಿಯಮ ತರುವುದು ಅವಶ್ಯವಾಗಿತ್ತು. ಈ ನಿಟ್ಟಿನಲ್ಲಿ 2023ರಲ್ಲಿ 'ನಾರೀಶಕ್ತಿ ವಂದನ ಅಧಿನಿಯಮ'ವು ಸಂಸತ್ತಿನಲ್ಲಿ ಅಂಗೀಕಾರವಾಯಿತು. ಪರಿಣಾಮ ಲೋಕಸಭೆ ಮತ್ತು ರಾಜ್ಯ ವಿಧಾನಸಭೆಗಳಲ್ಲಿ ಮಹಿಳೆಗೆ ಈ ಮಹಿಳಾ ಮೀಸಲಾತಿ ಅಧಿನಿಯಮ ಪ್ರಕಾರ 33% (1/3)ರಷ್ಟು ಸ್ಥಾನಕ್ಕೆ ಮಹಿಳೆಯರು ಇರುತ್ತಾರೆ. ಇದರಿಂದ ಮಹಿಳೆ ಆಡಳಿತಕ್ಕೆ ಬಂದರೆ ಒಂದು ಸಮತೋಲನವನ್ನು ತರಲು ಪ್ರಯತ್ನಿಸಿದಂತಾಗುತ್ತದೆ.

ಈ ಪ್ರಯತ್ನವು ದೇಶದ ಅಭಿವೃದ್ಧಿ, ಭ್ರಷ್ಟಾಚಾರ, ಕುಟುಂಬ ರಾಜಕಾರಣ, ಸ್ಥಳೀಯ ಅನೇಕ ಸಮಸ್ಯೆಗಳ ಕಡೆ ಸೂಕ್ಷ್ಮವಾಗಿ ಗಮನಿಸುವಿಕೆ ಹೀಗೆ ಅನೇಕ ರೀತಿಯ ಬದಲಾವಣೆಯ ಪರಿಣಾಮ ಬೀರುತ್ತದೆ. ನಮ್ಮ ದೇಶದ ಪ್ರಧಾನಿ ನರೇಂದ್ರ ಮೋದಿಯವರು ತಮ್ಮ ಭಾಷಣವೊಂದರಲ್ಲಿ ''ನಾರೀಶಕ್ತಿಯು ದೇಶದ ಅಭಿವೃದ್ಧಿಗೆ ಮೂಲಶಕ್ತಿ. ಮಹಿಳೆಯು ಮುಂದಾದರೆ ಭಾರತವು ವಿಕಸಿತ ರಾಷ್ಟ್ರವಾಗುವುದು ಖಚಿತ'' ಎಂದರು. ಇನ್ನೊಂದು ವಿಶೇಷವೆಂದರೆ ಈ ಮಸೂದೆಗೆ ಅಂಕಿತ ಹಾಕಿದವರು ಸಹ ರಾಷ್ಟ್ರಪತಿ ದ್ರೌಪದಿ ಮುರ್ಮು ಮಹಿಳೆಯೇ ಎನ್ನುವುದು ಹೆಮ್ಮೆ ಪಡುವಂಥಹ ಸಂಗತಿ. ಹಾಗಾದರೆ ಮಹಿಳೆಯರು ರಾಜಕೀಯದಲ್ಲಿ ಹೆಚ್ಚಿನದಾಗಿ ಪಾಲ್ಗೊಂಡರೆ ಆಗುವ ಪರಿಣಾಮಗಳೇನು? ಎಂದು ನೋಡಬೇಕಾಗುತ್ತದೆ.

ಮಹಿಳಾ ಮೀಸಲಾತಿ ಅಧಿನಿಯಮ

ನಾರಿ ಶಕ್ತಿಯಿಂದಾಗುವ ಪರಿಣಾಮಗಳು: ನಮ್ಮಲ್ಲಿ ಮಹಿಳೆ ಎಂದರೆ ಕೇವಲ ಕುಟುಂಬ ನಿರ್ವಹಣೆಗೆ ಮಾತ್ರ ಎನ್ನುವ ಕಾಲವೊಂದಿತ್ತು. ಹಾಗಂತ ಹೊರಜಗತ್ತಿಗೆ ಮಹಿಳೆ ಕಾಣಿಸಿಕೊಂಡೇ ಇಲ್ಲ ಅಂತಲ್ಲ, ಆದರೆ ಪ್ರಮಾಣ ಕಡಿಮೆ ಇತ್ತು. ಆದರೂ ರಾಜಕೀಯದಂಥಹ ಕ್ಷೇತ್ರದಲ್ಲಿ ಮಹಿಳೆಯ ಸ್ಥಾನವು ಮಾನಸಿಕವಾಗಿಯೂ ಹಿಂದೆ ಇತ್ತು ಹಾಗೂ ಸಂವಿಧಾನಿಕವಾಗಿಯೂ ಶೇಕಡಾವಾರು ಕಮ್ಮಿಯೇ ಇತ್ತು. ಈಗ ಜಾರಿಗೊಳ್ಳುತ್ತಿರುವ ಹೊಸ ಅಧಿನಿಯಮವು ಇಷ್ಟು ದಿನದ ಸಮಾನತೆ ಎನ್ನುವ ಕೂಗಿಗೂ ಸಹ ಒಂದು ಹೊಸ ಅಧ್ಯಾಯ ನೀಡುತ್ತದೆ. ಮಹಿಳೆಯರಲ್ಲಿ ಐದು ಆಡಳಿತಾತ್ಮಕ ಗುಣಗಳನ್ನು ಕಾಣಬಹುದು. ಶಿಸ್ತು, ಭ್ರಷ್ಟಾಚಾರ ನಿರ್ಮೂಲನೆ, ಅಭಿವೃದ್ಧಿ, ನೀತಿ ನಿರೂಪಣೆ, ಆಡಳಿತ ಇವೇ ಆ ಪಂಚಸೂತ್ರಗಳು.

ಶಿಸ್ತು: ಆಕೆ ತನಗೆ ನೀಡಿದ ಜವಬ್ದಾರಿಯನ್ನು ಶಿಸ್ತಿನಿಂದ ಪಾಲಿಸುವುದು ಹುಟ್ಟುಗುಣ. ಅಂಥಹ ಶಿಸ್ತು ರಾಜಕೀಯದಲ್ಲಿ, ಆಡಳಿತದಲ್ಲಿ ಬೇಕಾಗಿದೆ. ಮಹಿಳೆಯರು ಆ ಶಿಸ್ತನ್ನು ಪಾಲಿಸಬಲ್ಲರು.

ಭ್ರಷ್ಟಾಚಾರ ನಿರ್ಮೂಲನೆ: ಭಾರತದಲ್ಲಿ ಭ್ರಷ್ಟಚಾರ ಎನ್ನುವುದು ನಿತ್ಯ ಊಟ ಮಾಡುವ ಅನ್ನದಷ್ಟೇ ಪತ್ಯವಾಗಿಬಿಟ್ಟಿದೆ. ದೇಶದ ಭವಿಷ್ಯ ನಿರ್ಮಾಣಕ್ಕೆ ಭ್ರಷ್ಟಾಚಾರ ದೊಡ್ಡ ತೊಡಕು. ಅಂತಹ ಭ್ರಷ್ಟಾಚಾರವನ್ನು ಮಹಿಳೆ ಹತ್ತಿಕ್ಕಬಲ್ಲಳು.

ಅಭಿವೃದ್ಧಿ: ಮಹಿಳೆಗೆ ಸೂಕ್ಷ್ಮ ದೃಷ್ಟಿತ್ವವಿದೆ. ಯಾವ ಸಮಸ್ಯೆಯನ್ನು ಯಾವ ರೀತಿಯಲ್ಲಿ ಬಗೆ ಹರಿಸಬೇಕು ಎನ್ನುವ ಜಾಣ್ಮೆ ಮತ್ತು ತಾಳ್ಮೆ ಆಕೆಯ ಕೆಲಸಕ್ಕೆ ಪೂರಕವಾಗಿರುತ್ತದೆ.

ನೀತಿ ನಿರೂಪಣೆ: ಒಂದು ಕೆಲಸವನ್ನು ಕೈಗೆತ್ತಿಕೊಂಡರೆ ಆ ಕೆಲಸ ನಿಯತ್ತಾಗಿ ಮುಗಿಸಲು ಬೇಕಿರುವ ನಿಯಮ, ನೀತಿ, ಕಾನೂನನ್ನು ಅಚ್ಚುಕಟ್ಟಾಗಿ ಪಾಲಿಸಬಲ್ಲಳು.



ಆಡಳಿತ: ಪ್ರಜಾಪ್ರಭುತ್ವ ರಾಷ್ಟ್ರದಲ್ಲಿ ಆಡಳಿತಗಾರನೂ ಸೇವಕನಾಗಿ ಕೆಲಸ ಮಾಡಬೇಕು. ಕಾಯಕವೇ ಕೈಲಾಸ ಎಂದುಕೊಂಡ ಮಹಿಳೆ ಅಧಿಕಾರ ಸಿಕ್ಕರೆ ಆಕೆಯ ಕ್ಷಮತೆಯನ್ನು ಓರೆಗೆ ಹಚ್ಚಿ ಕೆಲಸವನ್ನು ಮಾಡುತ್ತಾಳೆ.

ಇಂಥಹ ಐದು ನಿಯಮವನ್ನು ಪಾಲಿಸುವ ಮಹಿಳೆಗೆ ರಾಜಕೀಯದಲ್ಲಿ ಹೆಚ್ಚಿನ ಅವಕಾಶ ಸಿಗುತ್ತಿರುವುದು ಸ್ವಾಗತಾರ್ಹ. ಭಾರತದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಮಹಿಳೆಯರಿಗೆ 33% ಮೀಸಲಾತಿ ಈಗಾಗಲೇ ನೀಡಲಾಗಿದೆ. ಕೆಲವು ರಾಜ್ಯಗಳಂತು 50%ವರೆಗೂ ಮೀಸಲಾತಿ ಹೆಚ್ಚಿಸಿವೆ. ಇದರ ಪರಿಣಾಮ ಗ್ರಾಮೀಣ ಮಟ್ಟದಲ್ಲಿ ಗಮನಾರ್ಹವಾಗಿ ಬದಲಾವಣೆಯನ್ನು ಕಾಣಬಹುದು. ಅಧ್ಯಯನಗಳ ಪ್ರಕಾರ ಗ್ರಾಮ ಪಂಚಾಯತಿಗಳಲ್ಲಿ ಶಿಕ್ಷಣ, ಆರೋಗ್ಯ, ಮತ್ತು ಕುಡಿಯುವ ನೀರಿನಂತಹ ಮೂಲಭೂತ ಸೌಲಭ್ಯಗಳ ಮೇಲೆ ಹೆಚ್ಚಿನ ಗಮನ ಹರಿಸಿರುವುದು ಕಂಡು ಬರುತ್ತದೆ.

ಮಹಿಳೆಯರ ಶಿಕ್ಷಣ: ಭಾರತವು ಸ್ವತಂತ್ರ ಬಂದ ನಂತರ 1951ರಲ್ಲಿ ಮಹಿಳಾ ಸಾಕ್ಷರತೆ ಕೇವಲ 8.9%ರಷ್ಟು ಇತ್ತು. ಕಾಲವು ಬದಲಾಗುತ್ತ ಸಾಗಿದಂತೆ ಮಹಿಳೆಯರಿಗೆ ಶಿಕ್ಷಣದ ಒತ್ತು ಹೆಚ್ಚಿದೆ. 2011ರ ಜನಗಣತಿಯ ಅಂಕಿ ಅಂಶ ನೋಡಿದರೆ ಸುಮಾರು 65%ರಷ್ಟು ಹೆಚ್ಚಿದೆ. ಇತ್ತಿಚಿನ ಅಂದಾಜಿನ ಪ್ರಕಾರ 70% ದಾಟಿದೆ ಎಂದು ಹೇಳಲಾಗುತ್ತಿದೆ. ವಿದ್ಯಾಭ್ಯಾಸದಲ್ಲಿ ಈ ಮಟ್ಟದಲ್ಲಿ ಬದಲಾವಣೆ ಆದರೂ ಸಹ ರಾಜಕೀಯದಲ್ಲಿ ಮಾತ್ರ ಪಾಲ್ಗೊಳ್ಳುವಿಕೆ ಬಹಳ ಕಡಿಮೆ ಇದೆ. ಮಹಿಳೆಯರಿಗೆ ರಾಜಕೀಯಕ್ಕೆ ಬನ್ನಿ ಎಂದು ಕರೆದರೆ ಬರಲಾಗದು. ಸಂವಿಧಾನದಲ್ಲೂ ತಿದ್ದುಪಡಿಯಾಗಬೇಕು. ಆ ಮೂಲಕ ಮಹಿಳೆಯರಲ್ಲಿ ಜಾಗೃತಿ ಮೂಡಿಸುವ ಶಿಕ್ಷಣ ಬೇಕು. ಈ ಜಾಗೃತಿ ಮೂಡಿಸುವ ವ್ಯಕ್ತಿ ಮಹಿಳೆಯೇ ಆಗಿದ್ದರೆ! ಹೌದು, ಇದು ಒಂದು ರೀತಿಯ ಸರಪಳಿಯ ಕೊಂಡಿಯಂತೆ ಒಂದಕ್ಕೊಂದು ಅಂಟಿಕೊಂಡಿದೆ. ಹಾಗಾಗಿ ಇದನ್ನು ಸರಿದೂಗಿಸಲು ಮಹಿಳಾ ಮೀಸಲಾತಿ ಅಧಿನಿಯಮ ಜಾರಿಗೆ ಬರುವುದು ಅಗತ್ಯವಾಗಿದೆ. ಈ ನಿಯಮದಿಂದ ಮಹಿಳೆಯರಿಗೆ ರಾಜಕೀಯದಲ್ಲಿ ಅವಕಾಶ ಸಿಕ್ಕರೆ ಕೇವಲ ತಮ್ಮ ಹಕ್ಕುಗಳನ್ನು ಪ್ರತಿಪಾದಿಸಲು ಮಾತ್ರವಲ್ಲ, ಸಮಾಜದ ಹಿತಕ್ಕಾಗಿ ಕೆಲಸ ಮಾಡುವ ಸಾಮರ್ಥ್ಯವನ್ನು ತೋರಿಸುತ್ತಾರೆ.

ಈ ಮೀಸಲಾತಿ ಮಹಿಳೆ ಮತ್ತು ಮಕ್ಕಳ ಸಮಸ್ಯೆಗೆ ಬರಿಹಾರವಾಗಬಲ್ಲದೇ: ಹೆಣ್ಣಿನ ನೋವು ಹೆಣ್ಣಿಗೆ ತಿಳಿಯುವುದು, ಮಗುವಿನ ನೋವು ತಾಯಿಗೆ ತಿಳಿಯುವುದು ಎನ್ನುವಂಥಹ ಸಂಗತಿ ಎಲ್ಲರಿಗೂ ಗೊತ್ತಿರುವಂಥದ್ದೆ. ಹಾಗಿರುವಾಗ ಮಹಿಳೆ ಶಾಸಕಿಯಾಗಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಖಾತೆಯನ್ನು, ಶಿಕ್ಷಣ ಖಾತೆಯನ್ನು, ಸಾಮಾಜಿಕ ಭದ್ರತೆಯ ವಿಷಯವಾಗಿ, ಆರ್ಥಿಕ ಕ್ಷೇತ್ರದಲ್ಲಿ ಹೀಗೆ ಪ್ರಮುಖ ಕ್ಷೇತ್ರದಲ್ಲಿದ್ದರೆ ಅಭಿವೃದ್ಧಿಯ ಸಮಗ್ರ ದೃಷ್ಟಿಕೋನವನ್ನು ಇಟ್ಟುಕೊಂಡು ಪ್ರತಿಬಿಂಬಿಸುತ್ತಾರೆ. ಅಲ್ಲದೇ ಮಹಿಳೆಯರ ರಾಜಕೀಯ ಪ್ರವೇಶ ಹೆಚ್ಚಾಗುವುದರಿಂದ ಸ್ವಯಂಸಹಾಯ ಸಂಘಗಳಲ್ಲಿ ಗಣನೀಯ ಪ್ರೋತ್ಸಾಹ, ಮಹಿಳಾ ಉದ್ಯಮಶೀಲತೆಯ ಮೂಲಕ ಗ್ರಾಮೀಣ ಆರ್ಥಿಕತೆ ಬಲಪಡಿಸುವಿಕೆ, ಮಕ್ಕಳ ಮೇಲಿನ ಮಾನಸಿಕ ಒತ್ತಡ ನಿರ್ವಹಣೆಗೆ ಬೇಕಾಗುವ ಕ್ರಮ, ಮಹಿಳೆ ಮತ್ತು ಮಕ್ಕಳ ದೈಹಿಕ ಹಾಗೂ ಮಾನಸಿಕ ಆರೋಗ್ಯದ ಬಗ್ಗೆ ಗಮನ ಹೀಗೆ ಅತೀ ಹತ್ತಿರದಿಂದ ಬಲ್ಲವರಾಗಿ ಅದಕ್ಕೆ ಬೇಕಾಗುವ ರೀತಿಯಲ್ಲಿ ಕಾರ್ಯವನ್ನು ನಿರ್ವಹಿಸುವ ಕೆಲಸ ಮಹಿಳೆಯು ಮಾಡುತ್ತಾಳೆ.

ನ್ಯಾಯ ಮತ್ತು ಧರ್ಮ: ಶಿಕ್ಷಣ, ಆರೋಗ್ಯ, ಆರ್ಥಿಕ ಸ್ವಾವಲಂಬನೆ ಹಾಗೂ ಸಾಮಾಜಿಕ ಗೌರವವನ್ನು ಸಮಗ್ರವಾಗಿ ನೋಡಿದರೆ ಈ ಅಧಿನಿಯಮವು ಜಾರಿಗೆ ಬರುತ್ತಿರುವುದು ಅಭಿವೃದ್ಧಿ ದಿಕ್ಕಿಗೆ ಕೊಂಡೊಯ್ಯುವ ಮತ್ತೊಂದು ಮೈಲುಗಲ್ಲಾಗುತ್ತದೆ ಎನ್ನುವುದರಲ್ಲಿ ಸಂಶಯವಿಲ್ಲ. ಮಹಿಳೆ ನಿರ್ಧಾರ ಮಾಡುವ ಸ್ಥಾನದಲ್ಲಿದ್ದಾಗ ಸಮಾಜದ ಎಲ್ಲ ವರ್ಗಗಳಿಗೂ ಧ್ವನಿಯಾಗುವ ಮತ್ತು ನ್ಯಾಯ ಕೊಡಿಸುವ ಅವಕಾಶಗಳು ಹೆಚ್ಚಿದೆ. ಇಂದಿನ ಕಾಲದಲ್ಲಿ ತಂತ್ರಜ್ಞಾನ, ವಿಜ್ಞಾನ, ಕ್ರೀಡೆ, ಸೇನೆ ಹೀಗೆ ಎಲ್ಲ ಕ್ಷೇತ್ರದಲ್ಲೂ ಇದ್ದಾರೆ ಎಂದು ನಾವು ಹೆಮ್ಮೆ ಪಡುತ್ತೇವೆ. ಆದರೆ ರಾಜಕೀಯ ಬಲವು ಮಹಿಳೆಗೆ ಸಿಕ್ಕರೆ ಈ ಎಲ್ಲ ಕ್ಷೇತ್ರದಲ್ಲಿರುವ ಮಹಿಳೆಯರಿಗೆ ಸಿಗುವ ಬಲವು ಬೇರೆಯದೇ ಆಗಿರುತ್ತದೆ. ಇದಕ್ಕೆ ಗ್ರಾಮ ಪಂಚಾಯ್ತಿಗಳಲ್ಲಿ ಆದ ಬದಲಾವಣೆಯೇ ನಾವು ಗಮನಿಸಬಹುದು. ಇದರೊಟ್ಟಿಗೆ ಮಹಿಳಾ ಮೀಸಲಾತಿ ಅಧಿನಿಯಮವು ಸಮಾಜದಲ್ಲಿರುವ ಅನೇಕ ಅಂತರವನ್ನು ತೊಡೆದು ಹಾಕಲು ಸಹ ಸಹಾಯ ಮಾಡುತ್ತದೆ.

''ವಿಕಸಿತ ಭಾರತ'' ಎನ್ನುವ ಕನಸನ್ನು ಸಂಪೂರ್ಣವಾಗಿ ಸಾಕಾರಗೊಳಿಸಲು ''ನಾರಿ ಶಕ್ತಿ''ಯ ಪಾತ್ರ ಬಹಳ ದೊಡ್ಡದಾಗಿದೆ. ದೇಶದಲ್ಲಿ ಸಮಾನತೆ, ನ್ಯಾಯ, ಅಭಿವೃದ್ಧಿ ಸಾಧಿಸಲು ಈ ಅಧಿನಿಯಮವು ಪೂರಕವಾಗುತ್ತದೆ. ಮಹಿಳಾ ಮೀಸಲಾತಿ ಅಧಿನಿಯಮವು ನಮ್ಮ ದೇಶದ ಪ್ರಜಾಸತ್ತಾತ್ಮಕ ವ್ಯವಸ್ಥೆಯನ್ನು ಇನ್ನಷ್ಟು ಸಮಾನತೆ, ಭದ್ಧತೆ, ಮತ್ತು ಭದ್ರತೆಯತ್ತ ಕೊಂಡೊಯ್ಯುವ ಮಹತ್ತರ ಹೆಜ್ಜೆ. ರಾಷ್ಟ್ರವೊಂದು ಇದ್ದರೆ ಸಾಲದು. ಅಲ್ಲಿ ಸರ್ವತೋಮುಖ ಅಭಿವೃದ್ಧಿಯಾದರೆ ಮಾತ್ರ ಜಗತ್ತಿಗೆ ವಿಶ್ವಗುರು ರಾಷ್ಟ್ರವಾಗಬಲ್ಲದು. ಈ ನಿಟ್ಟಿನಲ್ಲಿ ನಾರಿ ಶಕ್ತಿಶಾಲಿಯಾದಾಗ ಮಾತ್ರ ಭಾರತವು ನಿಜವಾದ ಅರ್ಥದಲ್ಲಿ ವಿಕಸಿತ ರಾಷ್ಟ್ರವಾಗಲು ಸಾಧ್ಯ.

ದಶಕಗಳ ಕನಸಿಗೆ ರೂಪ ನೀಡಿದ ದೃಢ ರಾಜಕೀಯ ಇಚ್ಛಾಶಕ್ತಿ


▸ಶ್ರೀವಲ್ಲಿ



ಭಾರತದ ರಾಜಕೀಯ ವೇದಿಕೆಯಲ್ಲಿ ಮಹಿಳೆಯರಿಗೆ ಸಮಾನ ಅವಕಾಶಗಳನ್ನು ಒದಗಿಸುವುದು ಇಂದಿನ ಅಗತ್ಯ. 2023ರ ಸೆಪ್ಟೆಂಬರ್ 28ರಂದು ಲೋಕಸಭೆಯಲ್ಲಿ ಮತ್ತು ಒಕ್ಟೋಬರ್ 21ರಂದು ರಾಜ್ಯಸಭೆಯಲ್ಲಿ ಅಂಗೀಕಾರಗೊಂಡ 'ನಾರಿ ಶಕ್ತಿ ವಂದನ್ ಅಧಿನಿಯಮ್' (106ನೇ ಸಾಂವಿಧಾನಿಕ ತಿದ್ದುಪಡಿ) ಈ ಗುರಿಯತ್ತ ಒಂದು ಮೈಲಿಗಲ್ಲು. ಮೋದಿ ಸರ್ಕಾರದ ನೇತೃತ್ವದಲ್ಲಿ ಜಾರಿಗೊಂಡ ಈ ಮಸೂದೆ, ಲೋಕಸಭೆ, ರಾಜ್ಯಸಭೆ ಮತ್ತು ರಾಜ್ಯ ವಿಧಾನಸಭೆಗಳಲ್ಲಿ ಮಹಿಳೆಯರಿಗೆ 33 ಶೇಕಡಾ ಮೀಸಲಾತಿಯನ್ನು ಖಾತರಿಪಡಿಸುತ್ತದೆ. ಇದು ದೇಶದ ರಾಜಕೀಯ ಚೈತನ್ಯವನ್ನು ಹೆಚ್ಚಿಸುವ ದೊಡ್ಡ ಹೆಜ್ಜೆಯಾಗಿದೆ.

ಈ ಮಸೂದೆಯ ಇತಿಹಾಸವು ದೀರ್ಘಕಾಲದ ಹೋರಾಟದಿಂದ ಆರಂಭವಾಗುತ್ತದೆ. 1992ರಲ್ಲಿ 73ನೇ ಮತ್ತು 74ನೇ ಸಾಂವಿಧಾನಿಕ ತಿದ್ದುಪಡಿಗಳ ಮೂಲಕ ಗ್ರಾಮ ಪಂಚಾಯಿತಿ ಮತ್ತು ನಗರ ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯರಿಗೆ 33 ಶೇಕಡಾ ಮೀಸಲಾತಿಯನ್ನು ಜಾರಿಗೊಳಿಸಲಾಯಿತು. ಇದರಿಂದ ಲಕ್ಷಾಂತರ ಮಹಿಳೆಯರು ಗ್ರಾಮೀಣ ಮತ್ತು ನಗರ ಮಟ್ಟದಲ್ಲಿ ನಾಯಕತ್ವ ವಹಿಸಿದರು. ಆದರೆ ರಾಷ್ಟ್ರೀಯ ಮತ್ತು ರಾಜ್ಯ ಮಟ್ಟದ ಸಹಕಾರೀ ರಾಜಕೀಯದಲ್ಲಿ ಮಹಿಳೆಯರ ಪ್ರಾತಿನಿಧ್ಯ ಕೇವಲ 14 ಶೇಕಡಾ ಇದ್ದು, ಇದು ಸಮಾನತೆಯ ಕೊರತೆಯನ್ನು ತೋರಿಸುತ್ತಿತ್ತು.

1996ರಲ್ಲಿ ಎನ್.ಡಿ.ಎ ಸರ್ಕಾರವು ಮೊದಲ ಬಾರಿಗೆ ಈ ಮಸೂದೆಯನ್ನು ಪರಿಚಯಿಸಿತು. ಆದರೆ ರಾಜ್ಯಸಭೆಯಲ್ಲಿ ಅಡ್ಡಿ ಬಂದಿತು. ಆದರೆ ವಿರೋಧ ಪಕ್ಷಗಳ ಧರ್ಮನಿರಪೇಕ್ಷತೆ ಮತ್ತು ಓಬಿಸಿ ಮೀಸಲಾತಿಯ ಬೇಡಿಕೆಗಳಿಂದ ಪರಿಚಯಿಸಿದರೂ, ಲೋಕಸಭೆಯಲ್ಲಿ ನಿಲ್ಲಿಸಲ್ಪಟ್ಟಿತು. ಈ ಹೋರಾಟದಲ್ಲಿ ಎನ್.ಡಿ.ಎ ಮತ್ತು ಬಿಜೆಪಿಯವರು ನಿರಂತರವಾಗಿ ಬೆಂಬಲ ನೀಡಿದರು. ಮೋದಿ ಸರ್ಕಾರ 2014ರಲ್ಲಿ ಅಧಿಕಾರಕ್ಕೆ ಬಂದ ನಂತರ, 2019ರಲ್ಲಿ ಲೋಕಸಭೆ ಚುನಾವಣಾ ಘೋಷಣಾ ಪತ್ರದಲ್ಲಿ ಈ ಮಸೂದೆಯನ್ನು ಪ್ರಮುಖ ಅಭಿಪ್ರಾಯವಾಗಿ ಘೋಷಿಸಿತು. ಕೊನೆಗೂ 2023ರಲ್ಲಿ ಐತಿಹಾಸಿಕ ಜಯ ಸಾಧಿಸಿತು.



ಮಹಿಳಾ ಅಭಿವೃದ್ಧಿಯ ಕೇಂದ್ರಬಿಂದು

ಈ ಮಸೂದೆಯ ಮಹತ್ವವು ಅಪಾರ. ಇದು ರಾಜಕೀಯದಲ್ಲಿ ಮಹಿಳೆಯರನ್ನು ಸಬಲೀಕರಿಸುತ್ತದೆ. ಇದರಿಂದ ಲಿಂಗ ಸಮಾನತೆ ಸಾಧ್ಯವಾಗುತ್ತದೆ. ಲೋಕಸಭೆಯ 543 ಸ್ಥಾನಗಳಲ್ಲಿ 181 ಸ್ಥಾನಗಳು ಮಹಿಳೆಯರಿಗೆ ಮೀಸಲಾಗುತ್ತವೆ. ಇದು ನೀತಿ ನಿರ್ಧಾರದಲ್ಲಿ ಮಹಿಳೆಯರ ಮತ್ತು ಕುಟುಂಬಗಳ ಸಮಸ್ಯೆಗಳಾದ ಶಿಕ್ಷಣ, ಆರೋಗ್ಯ, ಸುರಕ್ಷತೆ ಮತ್ತು ಆರ್ಥಿಕ ಸ್ವಾತಂತ್ರ್ಯಕ್ಕೆ ಆದ್ಯತೆ ನೀಡುತ್ತದೆ. ಉದಾಹರಣೆಗೆ, ಪಂಚಾಯಿತಿ ಮಟ್ಟದಲ್ಲಿ ಮಹಿಳಾ ನಾಯಕತ್ವದಿಂದ ರಸ್ತೆ, ನೀರು, ವಿದ್ಯುತ್ ಸೌಲಭ್ಯಗಳು ಹೆಚ್ಚಾದವು. ರಾಷ್ಟ್ರೀಯ ಮಟ್ಟದಲ್ಲಿ ಇದು ದೇಶದ ಅಭಿವೃದ್ಧಿಯನ್ನು ತೋರಿಸುತ್ತದೆ. ಸಂಯುಕ್ತರಾಷ್ಟ್ರ ಸಂಘದ ಲಿಂಗ ಸಮಾನತೆ ಗುರಿಗಳೊಂದಿಗೆ ಸಮನ್ವಯಗೊಳ್ಳುತ್ತದೆ.

ಮೋದಿ ಸರ್ಕಾರದ ಮಹಿಳಾ ಬೆಂಬಲದ ಸ್ಥಾನವು ಸ್ಪಷ್ಟ. 'ಬೇಟಿ ಬಚಾವ್ ಬೇಟಿ ಪಢಾವ್' ಯೋಜನೆಯಿಂದ ಲಕ್ಷಾಂತರ ಬಾಲಕಿಯರ ಉಳಿವು ಮತ್ತು ಶಿಕ್ಷಣ ಹೆಚ್ಚಾಯಿತು. 'ಉಜ್ಜ್ವಲಾ' ಯೋಜನೆಯಿಂದ 10 ಕೋಟಿ ಮಹಿಳೆಯರಿಗೆ ಉಚಿತ ಗ್ಯಾಸ್ ಸೌಲಭ್ಯ ನೀಡಲಾಯಿತು. 'ಮುದ್ರಾ' ಯೋಜನೆಯಲ್ಲಿ 70 ಶೇಕಡಾ ಋಣಗಳು ಮಹಿಳೆ ಯರಿಗೆ ತಲುಪಿದವು. 'ಸುಷಾಸನ್' ಯೋಜನೆಯ ಮೂಲಕ 6 ಕೋಟಿ ಮಹಿಳೆಯರಿಗೆ ಜನ್ ಧನ್ ಖಾತೆ ಜಾರಿಗೊಳಿಸಲಾಯಿತು. 'ಪಿಂಕ್ ರೆವಲ್ಯೂಷನ್' ಮೂಲಕ ಕಿಸಾನ್ ಸಮ್ಮಾನ್ ನಿಧಿಯಲ್ಲಿ ಮಹಿಳಾ ರೈತೆ ಯರಿಗೆ ಆದ್ಯತೆ. ಇವೆಲ್ಲವೂ ಮಹಿಳಾ ಸಬಲೀಕರಣದ ದೀರ್ಘಕಾಲದ ಚಿಂತನೆಯನ್ನು ತೋರಿಸುತ್ತವೆ. ಪ್ರಧಾನಿ ಮೋದಿ 'ಮಹಿಳೆಯರು ದೇಶದ ಶಕ್ತಿ' ಎಂದು ಘೋಷಿಸಿ, ಈ ಮಸೂದೆಯನ್ನು 'ನಾರಿ ಶಕ್ತಿ' ಎಂದು ಕರೆದರು.

ಹೊಸ ಭಾರತದ ರೂಪುರೇಷೆ

ಇದು ಕೇವಲ ಮಹಿಳೆಯರ ಜಯವಲ್ಲ. ಇದು ದೃಢ ನಾಯಕತ್ವದ ಜಯ. ಸಮಾನತೆಯತ್ತ ಭಾರತ ಸಾಗುತ್ತಿರುವ ದಾರಿಯಲ್ಲಿ, ಈ ಮಸೂದೆ ಒಂದು ಮಹತ್ವದ ಮೈಲುಗಲ್ಲಾಗಿದ್ದು, ಮೋದಿ ಮಾದರಿಯ ಆಡಳಿತದ ಸ್ಪಷ್ಟ ಪ್ರತಿಬಿಂಬವಾಗಿದೆ. 40 ವರ್ಷಗಳಿಂದ ಮಹಿಳೆಯರು ತಮ್ಮ ಹಕ್ಕುಗಳಿಗಾಗಿ ಕಾಯುತ್ತಿದ್ದರು. ದೇಶದ ನೀತಿ ನಿರೂಪಣೆಯಲ್ಲಿ ಭಾಗವಹಿಸಲು ಕಾಯುತ್ತಿದ್ದರು. ಈಗ ಅವರಿಗೆಲ್ಲ ಅವಕಾಶ ಸಿಗುವ ಸಂದರ್ಭ ಬಂದಿದೆ. ಪ್ರಧಾನಿ ನರೇಂದ್ರ ಮೋದಿಜಿ ಅವರ ಸರ್ಕಾರ ಮೂರು ಮಸೂದೆ ಮಂಡಿಸುವ ಮೂಲಕ ಭಾರತದ ಅಭಿವೃದ್ಧಿಯ ಪಯಣದಲ್ಲಿ ಹೊಸ ಅಧ್ಯಾಯವನ್ನು ಬರೆಯುವಂತೆ ಮಾಡಿದ್ದಾರೆ. ಮಹಿಳಾ ಮೀಸಲು ಮೂಲಕ ರಾಷ್ಟ್ರ ನಿರ್ಮಾಣದಲ್ಲಿ ವಿಶ್ವಾಸಾರ್ಹ ಪ್ರಾತಿನಿಧಿತ್ವ ಸಾಧ್ಯವಾಗಲಿದೆ. ಇಂತಹ ಮಹತ್ವದ ಕ್ರಮಕ್ಕೆ ಮುಂದಾದ ಪ್ರಧಾನಿಯವರನ್ನು ದೇಶದ ಎಲ್ಲ ಮಹಿಳೆಯರ ಪರವಾಗಿ ನಾನು ಅವರನ್ನು ಅಭಿನಂದಿಸುತ್ತೇನೆ. ಈ ಮಸೂದೆಯು ರಾಜಕೀಯದಲ್ಲಿ ಮಹಿಳೆಯರು ಭಾಗವಹಿಸುವಿಕೆಯನ್ನು ಆಮೂಲಾಗ್ರವಾಗಿ ಬದಲಿಸಲಿದೆ. ಈ ಹಿಂದಿನ ಸರ್ಕಾರದ ಅವಧಿಯಲ್ಲಿ ಮಸೂದೆ ಮಂಡನೆ ಮಾಡಿದಾಗ ಸಮಾಜವಾದಿ ಪಕ್ಷ, ಆರ್‌ಜೆಡಿಯ ಮುಖಂಡರು ತಡೆ ಒಡ್ಡಿದ್ದರು.

ಈಗಲೂ ವಿರೋಧಪಕ್ಷ ಹೊಸ ವಾದದೊಂದಿಗೆ ಮಸೂದೆಗೆ ತಡೆ ಮಾಡಲು, ವಿರೋಧ ಮಾಡಲು ಮುಂದೆ ಬಂದಿದೆ. ಮಹಿಳಾ ಮೀಸಲಾತಿ ಮಸೂದೆಗೆ ಕ್ಷೇತ್ರ ಮರುವಿಂಗಡಣೆ ನೆಪವನ್ನು ವಿರೋಧಪಕ್ಷಗಳು ಒಡ್ಡುತ್ತಿವೆ. ಕಳೆದ ಮೂರು ದಿನಗಳಿಂದ ವಿರೋಧಪಕ್ಷದ ನಾಯಕರು ಈ ಮಸೂದೆ ಬಗ್ಗೆ ಅಪ್ರಚಾರದಲ್ಲಿ ತೊಡಗಿದ್ದಾರೆ. ಬೇಜವ್ದಾರಿತನದಿಂದ ವರ್ತಿಸುತ್ತಿದ್ದಾರೆ. ಈ ಮಹಿಳಾ ಮೀಸಲು ಮಸೂದೆಯನ್ನು ವಿರೋಧಿಸಿದರೆ ವಿರೋಧ ಪಕ್ಷಗಳನ್ನು ಜನ ಎಂದೂ ಕ್ಷಮಿಸುವುದಿಲ್ಲ.

ಮಧ್ಯಪ್ರಾಚ್ಯಕ್ಕೆ ಅಮೆರಿಕದ ಹೆಚ್ಚುವರಿ ಸೈನ್ಯ ರವಾನೆ

ವಾಷಿಂಗ್ಟನ್: ಇರಾನ್ ಜತೆಗಿನ ಎರಡು ವಾರಗಳ ಕದನ ವಿರಾಮವು ಏ.22ಕ್ಕೆ ಅಂತ್ಯಗೊಳ್ಳಲಿರುವ ಹಿನ್ನೆಲೆಯಲ್ಲಿ, ಅಮೆರಿಕ ಮಧ್ಯಪ್ರಾಚ್ಯಕ್ಕೆ 10,000ಕ್ಕೂ ಹೆಚ್ಚು ಹೆಚ್ಚುವರಿ ಸೈನಿಕರನ್ನು ನಿಯೋಜಿಸುತ್ತಿದೆ. ಯುಎಸ್‌ಎಸ್ ಜಾರ್ಜ್ ಎಚ್.ಡಬ್ಲ್ಯೂ. ಬುಷ್ ನೌಕೆಯಲ್ಲಿರುವ ಸುಮಾರು 6,000 ಸೈನಿಕರು ಮತ್ತು ಬಾಕ್ಸರ್ ಆಂಫಿಬಿಯಸ್ ರೆಡಿ ಗ್ರೂಪ್‌ನ 4,200 ನೌಕಾಪಡೆ ಮತ್ತು ಮರೀನ್ ಸಿಬ್ಬಂದಿ ಈ ತಿಂಗಳ ಅಂತ್ಯದ ವೇಳೆಗೆ ಈ ಪ್ರದೇಶವನ್ನು ತಲುಪಲಿದ್ದಾರೆ. ಇವರು ಇರಾನ್ ವಿರುದ್ಧದ ಕಾರ್ಯಾಚರಣೆಯಲ್ಲಿ ತೊಡಗಿರುವ 50,000 ಹಾಲಿ ಸಿಬ್ಬಂದಿಯನ್ನು ಸೇರಿಕೊಳ್ಳಲಿದ್ದಾರೆ.

ನೌಕಾ ದಿಗ್ಬಂಧನ ಮುಂದುವರಿಕೆ: ಇಸ್ಲಾಮಾಬಾದ್‌ನಲ್ಲಿ ನಡೆದ ಶಾಂತಿ ಮಾತುಕತೆ ವಿಫಲವಾದ ನಂತರ ಭಾನುವಾರ ಅಮೆರಿಕ ಇರಾನ್ ಬಂದರುಗಳ ಮೇಲೆ ಹೇರಿದ್ದ ನೌಕಾ ದಿಗ್ಬಂಧನ ಮುಂದುವರಿದಿದೆ. ದಿಗ್ಬಂಧನ ಜಾರಿಯಾದ 36 ಗಂಟೆಗಳ ಒಳಗೆ ಇರಾನ್‌ನ ಸಮುದ್ರ ವ್ಯಾಪಾರವನ್ನು ಸಂಪೂರ್ಣವಾಗಿ ಸ್ಥಗಿತಗೊಳಿಸಲಾಗಿದೆ ಎಂದು ಅಮೆರಿಕದ ಸೆಂಟ್ರಲ್ ಕಮಾಂಡ್ ವರದಿ ಮಾಡಿದೆ.

ಇರಾನ್ ಸೇನೆಯ ಪ್ರತಿಕ್ರಿಯೆ: ಅಮೆರಿಕದ ಈ ದಿಗ್ಬಂಧನ, ವಾಣಿಜ್ಯ ಮತ್ತು ತೈಲ ಹಡಗುಗಳಿಗೆ ಅಭದ್ರತೆಯನ್ನು ಉಂಟುಮಾಡುತ್ತಿದೆ, ಎಂದು ಇರಾನ್ ಸೇನೆಯ ಕೇಂದ್ರ ಕಮಾಂಡ್ ಸೆಂಟರ್ ತಿಳಿಸಿದೆ. ದಿಗ್ಬಂಧನ ಮುಂದುವರಿದರೆ ಪರ್ಷಿಯನ್ ಕೊಲ್ಲಿ, ಓಮನ್ ಸಮುದ್ರ ಅಥವಾ ಕೆಂಪು ಸಮುದ್ರದಲ್ಲಿ ಯಾವುದೇ ರಫ್ತು ಅಥವಾ ಆಮದಿಗೆ ಅವಕಾಶ ನೀಡುವುದಿಲ್ಲ, ಎಂದು ಕಮಾಂಡ್ ಮುಖ್ಯಸ್ಥ ಅಲಿ ಅಬ್ದೊಲ್ಲಾಹಿ ಎಚ್ಚರಿಸಿದ್ದಾರೆ.

ಈ ಸಂಘರ್ಷ ಶೀಘ್ರದಲ್ಲೇ ಕೊನೆಗೊಳ್ಳಲಿದ್ದು, ಇದರಿಂದ ಅನಿಲ ಬೆಲೆಗಳು ಗಣನೀಯವಾಗಿ ಇಳಿಕೆಯಾಗಲಿವೆ, ಎಂದು ಯುಎಸ್ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದಾರೆ. ಇರಾನ್ ಆರ್ಥಿಕತೆಯ ಶೇ.90ರಷ್ಟು ಭಾಗ ಸಮುದ್ರ ವ್ಯಾಪಾರದ ಮೇಲೆ ಅವಲಂಬಿತವಾಗಿದೆ.

ಹಿಜ್ಬೊಲ್ಲಾ ಡ್ರೋನ್ ತಡೆದ ಇಸ್ರೇಲ್ ಮಿಸೈಲ್ ದೋಣಿ



ಟೆಲ್ ಅವೀವ್: ದಕ್ಷಿಣ ಲೆಬನಾನ್‌ನಿಂದ ಇಸ್ರೇಲ್‌ನತ್ತ ಹಿಜ್ಬೊಲ್ಲಾ ಭಯೋತ್ಪಾದಕರು ಕಳುಹಿಸಿದ ಡ್ರೋನ್ ಅನ್ನು ಇಸ್ರೇಲ್ ನೌಕಾಪಡೆಯ ಕ್ಷಿಪಣಿ ದೋಣಿಯು ತಡೆಯುವಲ್ಲಿ ಯಶಸ್ವಿಯಾಗಿದೆ ಎಂದು ಇಸ್ರೇಲ್ ಸೇನೆ (ಐಡಿಎಫ್) ಗುರುವಾರ ಹೇಳಿದೆ. ಹಿಜ್ಬೊಲ್ಲಾ ಡ್ರೋನ್ ಹೊಡೆದುರುಳಿಸಿದ ವಿಡಿಯೋ ಫೂಟೇಜ್ ಅನ್ನು ಐಡಿಎಫ್ ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಂಡಿದೆ. ಹಿಜ್ಬೊಲ್ಲಾ ಉಗ್ರ ಸಂಘಟನೆಯ ವಿರುದ್ಧ ಇಸ್ರೇಲ್ ಆಪರೇಷನ್ ರೋರಿಂಗ್ ಲಯನ್ ಆರಂಭಿಸಿದ ಬಳಿಕ ಇಸ್ರೇಲ್ ನೌಕಾಪಡೆಯ ಕ್ಷಿಪಣಿ ದೋಣಿಯು ಇಂತಹ 40ಕ್ಕೂ ಹೆಚ್ಚು ಕಾರ್ಯಾಚರಣೆಗಳನ್ನು ನಡೆಸಿದೆ. ದಕ್ಷಿಣ ಲೆಬನಾನ್‌ನ ಅರಣ್ಯ ಪ್ರದೇಶಗಳಲ್ಲಿ ತಲೆಮರೆಸಿಕೊಂಡಿದ್ದ ಹಿಜ್ಬೊಲ್ಲಾ ಉಗ್ರರನ್ನು ಇಸ್ರೇಲ್ ಸೇನೆ ವೈಮಾನಿಕ ದಾಳಿಯಲ್ಲಿ ಹೊಡೆದುರುಳಿಸಿದ ವಿಡಿಯೋ ಫೂಟೇಜ್ ಸಹ ಐಡಿಎಫ್ ಗುರುವಾರ ಬಿಡುಗಡೆಗೊಳಿಸಿದೆ. ಹಿಜ್ಬೊಲ್ಲಾ ಭೂಗತ ಶಸ್ತ್ರಾಸ್ತ್ರಾಗಾರ ವಶ: ದಕ್ಷಿಣ ಲೆಬನಾನ್‌ನಲ್ಲಿ ಹಿಜ್ಬೊಲ್ಲಾ ಉಗ್ರರನ್ನು ಸದೆಬಡಿದ ಇಸ್ರೇಲ್ ಸೇನೆಯ 769ನೇ ಬ್ರಿಗೇಡ್, ಹಿಜ್ಬೊಲ್ಲಾಗೆ ಸೇರಿದ ಭೂಗತ ಶಸ್ತ್ರಾಸ್ತ್ರಾಗಾರವನ್ನು ವಶಪಡಿಸಿಕೊಂಡಿದೆ. ಇವುಗಳಲ್ಲಿ ಕಲಾಶ್‌ನಿಕೋವ್ ರೈಫಲ್‌ಗಳು, ಟ್ಯಾಂಕ್ ನಿರೋಧಕ ಕ್ಷಿಪಣಿಗಳು, ಕ್ಷಿಪಣಿ-ಚಾಲಿತ ಗ್ರೆನೇಡ್ (ಆರ್‌ಪಿಜಿ) ಲಾಂಚರ್ಸ್ ಮತ್ತು ಮದ್ದುಗುಂಡುಗಳಿದ್ದವು ಎಂದು ಐಡಿಎಫ್ ತಿಳಿಸಿದೆ.

ಇರಾನ್ ಮೇಲೆ ಆರ್ಥಿಕ ಮತ್ತು ಸೈನಿಕ ಒತ್ತಡ

ಅಮೆರಿಕ ನೌಕಾಪಡೆಯು ಇರಾನ್ ಬಂದರುಗಳ ಮೇಲೆ ನಾಕಾಬಂದಿಯನ್ನು ಮುಂದುವರಿಸಿದ್ದು, ಹೊಸ ಆರ್ಥಿಕ ನಿರ್ಬಂಧಗಳನ್ನು ಜಾರಿಗೊಳಿಸುವುದಾಗಿ ಅಮೆರಿಕ ಖಜಾನೆ ಕಾರ್ಯದರ್ಶಿ ಹೇಳಿದ್ದಾರೆ. ಇರಾನ್ ಜತೆ ವ್ಯಾಪಾರ ನಡೆಸುವ ದೇಶಗಳ ಮೇಲೂ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಲಾಗಿದೆ. ಈ ಕ್ರಮವನ್ನು ಹಣಕಾಸು ದಾಳಿಗೆ ಸಮಾನ ಎಂದು ವಿವರಿಸಲಾಗಿದೆ.

ಮೋದಿ-ಮ್ಯಾಕ್ರೊನ್ ಮಾತುಕತೆ

ಹೊಸದಿಲ್ಲಿ: ಪ್ರಧಾನಿ ನರೇಂದ್ರ ಮೋದಿ ಹಾಗೂ ಫ್ರಾನ್ಸ್ ಅಧ್ಯಕ್ಷ ಇಮ್ಯಾನುಲ್ ಮ್ಯಾಕ್ರಾನ್ ದೂರವಾಣಿ ಮೂಲಕ ಮಾತುಕತೆ ನಡೆಸಿ, ಪಶ್ಚಿಮ ಏಷ್ಯಾದ ಪರಿಸ್ಥಿತಿಯ ಬಗ್ಗೆ ಚರ್ಚಿಸಿದರು. ಈ ವೇಳೆ ಹಾರ್ಮುಜ್ ಜಲಸಂಧಿಯಲ್ಲಿ ನೌಕಾಯಾನ ಸುರಕ್ಷತೆ ಹಾಗೂ ಸ್ವಾತಂತ್ರ್ಯವನ್ನು ತಕ್ಷಣ ಪುನಃಸ್ಥಾಪಿಸುವ ಅಗತ್ಯವಿದೆ ಎಂದು ಇಬ್ಬರು ನಾಯಕರು ಒತ್ತಿ ಹೇಳಿದರು. ಮ್ಯಾಕ್ರೊನ್ ಕರೆ ಮೂಲಕ ಮಾತುಕತೆ ಆರಂಭವಾಗಿದ್ದು, ಪ್ರದೇಶದಲ್ಲಿ ಶಾಂತಿ ಮತ್ತು ಸ್ಥಿರತೆಯನ್ನು ಕಾಪಾಡಲು ಪರಸ್ಪರ ಸಹಕಾರ ಮುಂದುವರಿಸುವುದಾಗಿ ಮೋದಿ ತಿಳಿಸಿದ್ದಾರೆ. ಫೆ.28ರಿಂದ ಆರಂಭವಾದ ಪಶ್ಚಿಮ ಏಷ್ಯಾ ಸಂಘರ್ಷಕ್ಕೆ ಇದೀಗ ಸುಮಾರು 50 ದಿನಗಳು ಕಳೆದಿವೆ. ಅಮೆರಿಕಾ-ಇಸ್ರೇಲ್ ದಾಳಿಗೆ ಪ್ರತಿಯಾಗಿ ಇರಾನ್ ಪ್ರತಿಕ್ರಿಯೆ ನೀಡಿದ ಬಳಿಕ ಉದ್ವಿಗ್ನತೆ ಹೆಚ್ಚಾಗಿದೆ. ಈ ನಡುವೆ ಹಾರ್ಮುಜ್ ಜಲಸಂಧಿಯಲ್ಲಿ ನೌಕಾಯಾನಕ್ಕೆ ಅಡಚಣೆ ಉಂಟಾಗಿರುವುದು ಜಾಗತಿಕ ತೈಲವಾಯು ಸರಬರಾಜಿನ ಮೇಲೆ ಪರಿಣಾಮ ಬೀರಿದೆ. ಭಾರತವು ಸಂವಾದ ಮತ್ತು ರಾಜತಾಂತ್ರಿಕ ಪರಿಹಾರವೇ ಸಮಸ್ಯೆಗೆ ಮಾರ್ಗವೆಂದು ಪುನರುಚ್ಚರಿಸಿದೆ.

2ನೇ ಸುತ್ತಿನ ಚರ್ಚೆ | ಟೆಹ್ರಾನ್‌ನಲ್ಲಿ ಪಾಕ್ ಸೇನಾ ಮುಖ್ಯಸ್ಥ

ಶಾಂತಿ ಮಾತುಕತೆ ಇನ್ನೂ ಅನಿಶ್ಚಿತ





ದುಬೈ: ಮಧ್ಯಪ್ರಾಚ್ಯದಲ್ಲಿ ಮುಂದುವರಿದಿರುವ ಉದ್ವಿಗ್ನತೆ ಕಡಿಮೆ ಮಾಡಲು ಮತ್ತು ಅಮೆರಿಕ-ಇರಾನ್ ನಡುವೆ ಮತ್ತೊಮ್ಮೆ ಮಾತುಕತೆ ನಡೆಸುವ ದಾರಿಯನ್ನು ಸುಗಮಗೊಳಿಸಲು ಪಾಕಿಸ್ತಾನದ ಸೇನಾ ಮುಖ್ಯಸ್ಥ ಆಸಿಮ್ ಮುನೀರ್ ಗುರುವಾರ ಟೆಹ್ರಾನ್‌ನಲ್ಲಿ ಇರಾನಿನ ಅಧಿಕಾರಿಗಳನ್ನು ಭೇಟಿ ಮಾಡಿದ್ದಾರೆ. ಸುಮಾರು ಏಳು ವಾರಗಳಿಂದ ನಡೆಯುತ್ತಿರುವ ಯುದ್ಧದ ನಂತರ ಈ ಸಭೆ ಮಹತ್ವ ಪಡೆದುಕೊಂಡಿದೆ. ಪಾಕಿಸ್ತಾನವು ಮಧ್ಯವರ್ತಿಯಾಗಿ ಪಾತ್ರವಹಿಸುತ್ತಿದ್ದು, ಇಸ್ಲಾಮಾಬಾದ್‌ನಲ್ಲಿ ಹಿಂದಿನ ನೇರ ಮಾತುಕತೆಗಳಿಗೆ ಆತಿಥ್ಯ ವಹಿಸಿತ್ತು.

ಇಸ್ಲಾಮಾಬಾದ್‌ನಲ್ಲಿ ಮಾತುಕತೆ ಸಾಧ್ಯತೆ: ವೈಟ್ ಹೌಸ್ ಮಾಹಿತಿ ಪ್ರಕಾರ, ಮುಂದಿನ ಮಾತುಕತೆಗಳು ಪಾಕಿಸ್ತಾನದ ರಾಜಧಾನಿ ಇಸ್ಲಾಮಾಬಾದ್‌ನಲ್ಲಿ ನಡೆಯುವ ಸಾಧ್ಯತೆ ಇದೆ. ಆದರೆ ಅಂತಿಮ ನಿರ್ಧಾರ ಇನ್ನೂ ಕೈಗೊಳ್ಳಲಾಗಿಲ್ಲ.

ಪಾಕಿಸ್ತಾನದ ರಾಜತಾಂತ್ರಿಕ ಚಟುವಟಿಕೆ: ಪಾಕಿಸ್ತಾನದ ಸೇನಾ ಮುಖ್ಯಸ್ಥರು ಇರಾನ್ ಸಂಸತ್ ಸ್ಪೀಕರ್‌ರನ್ನು ಭೇಟಿಯಾಗಿದ್ದಾರೆ. ಇದೇ ವೇಳೆ ಪಾಕಿಸ್ತಾನದ ಪ್ರಧಾನಮಂತ್ರಿ ಕತಾರ್‌ಗೆ ಭೇಟಿ ನೀಡಿ ಶಾಂತಿ ಪ್ರಕ್ರಿಯೆ ಕುರಿತ ಚರ್ಚೆ ನಡೆಸುತ್ತಿದ್ದಾರೆ. ಅವರು ನಂತರ ಟರ್ಕಿಗೆ ಭೇಟಿ ನೀಡಲಿದ್ದಾರೆ.

ನಿಗದಿಯಾಗದ ಎರಡನೇ ಸುತ್ತಿನ ಮಾತುಕತೆ ದಿನಾಂಕ

ಇಸ್ಲಾಮಾಬಾದ್: ಅಮೆರಿಕ ಮತ್ತು ಇರಾನ್ ನಡುವಿನ ಎರಡನೇ ಸುತ್ತಿನ ಮಾತುಕತೆಗೆ ಯಾವುದೇ ದಿನಾಂಕಗಳನ್ನು ಇನ್ನೂ ಅಂತಿಮಗೊಳಿಸಲಾಗಿಲ್ಲ, ಎಂದು ಪಾಕಿಸ್ತಾನದ ವಿದೇಶಾಂಗ ಕಚೇರಿಯ ವಕ್ತಾರ ತಾಹಿರ್ ಅಂದ್ರಾಬಿ ಗುರುವಾರ ತಿಳಿಸಿದ್ದಾರೆ. ಮಾತುಕತೆಗಳು ಹೆಚ್ಚಿನ ವಿಶ್ವಾಸ ಮತ್ತು ಗೌಪ್ಯತೆಯೊಂದಿಗೆ ಮುಂದುವರಿಯುತ್ತಿವೆ, ಎಂದು ಅಂದ್ರಾಬಿ ತಿಳಿಸಿದ್ದಾರೆ. ನಿಯೋಗದ ರಚನೆ ಮತ್ತು ಸಮಯದ ವಿವರಗಳನ್ನು ನಿರ್ಧರಿಸುವುದು ಆಯಾ ದೇಶಗಳಿಗೆ ಬಿಟ್ಟ ವಿಚಾರ. ಈ ಚರ್ಚೆಗಳಲ್ಲಿ ಪರಮಾಣು ವಿಷಯವೂ ಸೇರಿದೆ. 21 ಗಂಟೆಗಳ ಕಾಲ ನಡೆದ ಇಸ್ಲಾಮಾಬಾದ್ ಮಾತುಕತೆಯ ನಂತರ, ಸಂದೇಶಗಳ ವಿನಿಮಯಕ್ಕೆ ಪಾಕಿಸ್ತಾನ ಮಧ್ಯಸ್ಥಿಕೆ ವಹಿಸುವುದನ್ನು ಮುಂದುವರಿಸಿದೆ. ಪ್ರಧಾನಿ ಶೆಹಬಾಜ್ ಷರೀಫ್ ಪ್ರಸ್ತುತ ಸೌದಿ ಅರೇಬಿಯಾ, ಕತಾರ್ ಮತ್ತು ಟರ್ಕಿ ಪ್ರವಾಸದಲ್ಲಿದ್ದಾರೆ. ಫೀಲ್ಡ್ ಮಾರ್ಷಲ್ ಅಸಿಮ್ ಮುನೀರ್ ನೇತೃತ್ವದ ನಿಯೋಗ ಟೆಹ್ರಾನ್‌ಗೆ ಭೇಟಿ ನೀಡಿ ಇರಾನ್ ಸಂಸತ್ತಿನ ಸ್ಪೀಕರ್ ಮೊಹಮ್ಮದ್ ಬಾಘರ್ ಘಾಲಿಬಾಫ್ ಸೇರಿದಂತೆ ಪ್ರಮುಖ ಅಧಿಕಾರಿಗಳನ್ನು ಭೇಟಿ ಮಾಡಿದೆ. ಪ್ರಸ್ತುತ ಜಾರಿಯಲ್ಲಿರುವ ಎರಡು ವಾರಗಳ ಕದನ ವಿರಾಮವು ಏ.22ರಂದು ಮುಕ್ತಾಯಗೊಳ್ಳಲಿದೆ. ಕಳೆದ ವಾರಾಂತ್ಯದಲ್ಲಿ ಇಸ್ಲಾಮಾಬಾದ್‌ನಲ್ಲಿ ನಡೆದ ಮಾತುಕತೆಗಳು ಯಾವುದೇ ಒಪ್ಪಂದವಿಲ್ಲದೆ ಅಂತ್ಯಗೊಂಡಿದ್ದವು.

ನೌಕಾ ನಾಕಾಬಂದಿ

ನೌಕಾ ನಾಕಾಬಂದಿಯನ್ನು ಜಾರಿಗೊಳಿಸಲು 10,000 ಕ್ಕೂ ಹೆಚ್ಚು ಸೈನಿಕರು ಕಾರ್ಯನಿರ್ವಹಿಸುತ್ತಿದ್ದಾರೆ. ಹಡಗುಗಳು ಬಂದರೆ ಮೊದಲಿಗೆ ಎಚ್ಚರಿಕೆ ನೀಡಲಾಗುತ್ತದೆ. ಇದುವರೆಗೆ ಯಾವುದೇ ಹಡಗನ್ನು ಬಲವಂತವಾಗಿ ತಡೆಯದಿಲ್ಲ, 13 ಹಡಗುಗಳು ಹಿಂದಿರುಗಿವೆ ಎಂದು ಅಮೆರಿಕೆ ಹೇಳಿದೆ. ರಕ್ಷಣಾ ಕಾರ್ಯದರ್ಶಿಯ ಪ್ರಕಾರ, ಅಮೆರಿಕ ತನ್ನ ಒಟ್ಟು ನೌಕಾ ಶಕ್ತಿಯ 10% ಕ್ಕಿಂತ ಕಡಿಮೆ ಭಾಗವನ್ನು ಮಾತ್ರ ಬಳಸುತ್ತಿದೆ. ಮಧ್ಯಪ್ರಾಚ್ಯದಲ್ಲಿ 16 ಯುದ್ಧನೌಕೆಗಳು ನಿಯೋಜಿಸಲ್ಪಟ್ಟಿವೆ, ಇದರಲ್ಲಿ ಡಿಸ್ಟ್ರಾಯರ್‌ಗಳು, ಏರ್‌ಕ್ರಾಫ್ಟ್ ಕ್ಯಾರಿಯರ್ ಹಾಗೂ ಇತರ ನೌಕೆಗಳು ಸೇರಿವೆ.

ಇಸ್ರೇಲ್-ಲೆಬನಾನ್ ಮಧ್ಯೆ 10 ದಿನಗಳ ಕದನ ವಿರಾಮ: ಟ್ರಂಪ್

ವಾಷಿಂಗ್ಟನ್: ಇಸ್ರೇಲ್-ಲೆಬನಾನ್ ಮಧ್ಯೆ 10 ದಿನಗಳ ಕಾಲ ತಾತ್ಕಾಲಿಕ ಕದನ ವಿರಾಮವನ್ನು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಗುರುವಾರ ರಾತ್ರಿ ಘೋಷಿಸಿದ್ದಾರೆ. ಟ್ರಂಪ್ ಹೇಳಿಕೆಯ ಪ್ರಕಾರ, ಲೆಬನಾನ್ ಅಧ್ಯಕ್ಷ ಜೋಸೆಫ್ ಔನ್ ಹಾಗೂ ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರೊಂದಿಗೆ ಉತ್ತಮ ಮಾತುಕತೆ ನಡೆದಿದ್ದು, ಶಾಂತಿ ಪುನಃಸ್ಥಾಪಿಸಲು ಉಭಯ ರಾಷ್ಟ್ರಗಳು 10 ದಿನಗಳ ಅಧಿಕೃತ ಯುದ್ಧ ವಿರಾಮಕ್ಕೆ ಒಪ್ಪಿಕೊಂಡಿವೆ. ಲೆಬನಾನ್ ಅಧ್ಯಕ್ಷ ಜೋಸೆಫ್ ಔನ್ ಮತ್ತು ಇಸ್ರೇಲ್ ಪ್ರಧಾನಿ ಬಿಬಿ ನೆತನ್ಯಾಹು ಅವರೊಂದಿಗೆ ನಾನು ಉತ್ತಮ ಮಾತುಕತೆ ನಡೆಸಿದ್ದೇನೆ. ಈ ಇಬ್ಬರು ನಾಯಕರೂ ತಮ್ಮ ದೇಶಗಳ ನಡುವೆ ಶಾಂತಿ ನೆಲೆಗೊಳಿಸಲು ಗುರುವಾರದಿಂದ 10 ದಿನಗಳವರೆಗೆ ಕದನ ವಿರಾಮಕ್ಕೆ ಒಪ್ಪಿಕೊಂಡಿದ್ದಾರೆ. 34 ವರ್ಷಗಳ ನಂತರ ಈ ಎರಡು ದೇಶಗಳು ವಾಷಿಂಗ್ಟನ್‌ನಲ್ಲಿ ಮೊದಲ ಬಾರಿಗೆ ನೇರ ಮಾತುಕತೆ ನಡೆಸಿವೆ. ನಮ್ಮ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೋ ಉಪಸ್ಥಿತಿಯಲ್ಲಿ ಈ ಮಾತುಕತೆ ನಡೆದಿದೆ. ವಿಶ್ವದೆಲ್ಲೆಡೆ 9 ಯುದ್ಧಗಳನ್ನು ನಿಲ್ಲಿಸಿದ ಗೌರವ ನನಗೆ ಸಿಕ್ಕಿದೆ, ಇದು ನನ್ನ 10ನೇ ಸಾಧನೆ ಎಂದು ಟ್ರಂಪ್ ಟ್ರುಥ್ ಸೋಶಿಯಲ್‌ನಲ್ಲಿ ಬರೆದಿದ್ದಾರೆ.

ಇರಾನ್, ರಷ್ಯಾ ತೈಲ ಖರೀದಿಗೆ ಅಮೆರಿಕ ವಿನಾಯಿತಿ ವಿಸ್ತರಿಸಲ್ಲ

ವಾಷಿಂಗ್ಟನ್: ಇರಾನ್ ಮತ್ತು ರಷ್ಯಾದಿಂದ ತೈಲಾ ಖರೀದಿಸಲು ನೀಡಿದ್ದ ತಾತ್ಕಾಲಿಕ ವಿನಾಯಿತಿಯನ್ನು ಯಾವುದೇ ಕಾರಣಕ್ಕೂ ಮುಂದುವರಿಸುವ ಯೋಜನೆಯಿಲ್ಲ ಎಂದು ಅಮೆರಿಕ ಟ್ರೆಷರಿ ಕಾರ್ಯದರ್ಶಿ ಸ್ಕಾಟ್ ಬೆಸ್ಸೆಂಟ್ ಬುಧವಾರ ಸ್ಪಷ್ಟವಾಗಿ ಹೇಳಿದ್ದಾರೆ. ಹಾರ್ಮುಜ್ ಜಲಸಂಧಿ ತೆರೆಯುವ ವಿಚಾರದಲ್ಲಿನ ಅನಿಶ್ಚಿತತೆ ಹಿನ್ನೆಲೆ ಕೇಂದ್ರ ಸರ್ಕಾರ ರಷ್ಯಾ ಕಚ್ಚಾ ತೈಲ ಖರೀದಿ ಮುಂದುವರಿಸಲಿದೆ. ರಷ್ಯಾ ಮತ್ತು ಇರಾನ್ ತೈಲ ಖರೀದಿಸಲು ನೀಡಿದ್ದ ವಿನಾಯಿತಿ ಪರವಾನಗಿಯನ್ನು ನಾವು ಮರುನವೀಕರಿಸುವುದಿಲ್ಲ ಅಥವಾ ವಿಸ್ತರಿಸುವುದಿಲ್ಲ. ಮಾ.11ರವರೆಗೆ ತೈಲ ಹಡಗುಗಳಲ್ಲಿ ಲೋಡ್ ಮಾಡಲಾಗಿದ್ದ ತೈಲಕ್ಕೆ ಮಾತ್ರ ಈ ವಿನಾಯಿತಿ ಅನ್ವಯಿಸಿತ್ತು. ಆ ತೈಲ ಪ್ರಮಾಣ ಈಗಾಗಲೇ ಬಳಕೆಯಾಗಿವೆ ಎಂದು ಬೆಸ್ಸೆಂಟ್ ಹೇಳಿದ್ದಾರೆ.

ಉದ್ವಿಗ್ನತೆಯಿಂದ ಎಲ್ಲಾ ರಾಷ್ಟ್ರಗಳಿಗೆ ಪರಿಣಾಮ ಬೀರಿದೆ: ಪ್ರಧಾನಿ ಮೋದಿ



ಹೊಸದಿಲ್ಲಿ: ಜಗತ್ತಿನ ಇಂದಿನ ಉದ್ವಿಗ್ನ ಸನ್ನಿವೇಶ ಎಲ್ಲಾ ರಾಷ್ಟ್ರಗಳ ಮೇಲೂ ಪರಿಣಾಮ ಬೀರಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಕಳವಳ ವ್ಯಕ್ತಪಡಿಸಿದ್ದಾರೆ. ಮಿಲಿಟರಿ ಸಂಘರ್ಷದಿಂದ ಯಾವುದೇ ಸಮಸ್ಯೆ ಬಗೆಹರಿಸಲಾಗದು, ಹಾಗಾಗಿ ಉಕ್ರೇನ್ ಮತ್ತು ಪಶ್ಚಿಮ ಏಷ್ಯಾದಲ್ಲಿ ಶಾಶ್ವತವಾಗಿ ಶಾಂತಿ ನೆಲೆಸಬೇಕೆಂಬ ಪ್ರಾಮಾಣಿಕ ಆಶಯವನ್ನು ಪ್ರಧಾನಿ ಮೋದಿ ಪರೋಕ್ಷವಾಗಿ ವ್ಯಕ್ತಪಡಿಸಿದ್ದಾರೆ.

ಜಂಟಿ ಶ್ರಮ ಸಂಕಲ್ಪ: ಆಸ್ಟ್ರಿಯಾದ ಫೆಡರಲ್ ಚಾನ್ಸೆಲರ್ ಕ್ರಿಶ್ಚಿಯನ್ ಸ್ಟಾಕರ್ ಜತೆ ವಿಸ್ತೃತ ಮಾತುಕತೆ ನಂತರದಲ್ಲಿ ಪ್ರಧಾನಿ ಮೋದಿ ಜಾಗತಿಕ ಸನ್ನಿವೇಶ ಕುರಿತು ಈ ತೆರ ಬೇಗುದಿ ವ್ಯಕ್ತಪಡಿಸಿದರು. ವ್ಯಾಪಾರ, ರಕ್ಷಣೆ ಮತ್ತು ಮೂಲಸೌಕರ್ಯ ರಂಗಗಳಲ್ಲಿ ಭಾರತ-ಆಸ್ಟ್ರಿಯಾ ನಡುವಣ ದ್ವಿಪಕ್ಷೀಯ ಬಾಂಧವ್ಯವನ್ನು ಮತ್ತಷ್ಟು ಬಲಪಡಿಸುವ ವಿಚಾರವಾಗಿ ಪ್ರಧಾನಿ ಮೋದಿ ಮತ್ತು ಸ್ಟಾಕರ್ ಚರ್ಚಿಸಿದ್ದಾರೆ. ಉಕ್ರೇನ್ ಮತ್ತು ಪ.ಏಷ್ಯಾ ಸಂಘರ್ಷಗಳು ಜಾಗತಿಕ ಆರ್ಥಿಕತೆ ಮೇಲೆ ಬೀರಲಿರುವ ಪರಿಣಾಮಗಳ ಬಗ್ಗೆ ಚರ್ಚಿಸಿ, ಇದನ್ನೆದುರಿಸಲು ಜಂಟಿಯಾಗಿ ಶ್ರಮಿಸುವ ಸಂಕಲ್ಪವನ್ನು ಉಭಯ ನಾಯಕರು ತೊಟ್ಟಿದ್ದಾರೆ. ಆಸ್ಟ್ರಿಯನ್ ಚಾನ್ಸೆಲರ್ ಸ್ಟಾಕರ್ ತಮ್ಮ ನಾಲ್ಕು ದಿನಗಳ ಪ್ರವಾಸದ ನಿಮಿತ್ತ ಭಾರತಕ್ಕೆ ಬಂದಿಳಿದಿದ್ದಾರೆ. ಯುರೋಪ್ ಹೊರಗಡೆ ಸ್ಟಾಕರ್ ಅವರ ಪ್ರಥಮ ಅಧಿಕೃತ ಪ್ರವಾಸ ಇದಾಗಿದೆ.

ಭಯೋತ್ಪಾದನೆ ನಿರ್ಮೂಲನೆ: ಇಡೀ ಜಗತ್ತಿಂದು ತೀರಾ ಗಂಭೀರ ಮತ್ತು ಉದ್ವಿಗ್ನ ಸನ್ನಿವೇಶದಲ್ಲಿದೆ. ಇದರ ಪರಿಣಾಮ ನಮ್ಮೆಲ್ಲರ ಮೇಲಾಗುತ್ತಿದೆ. ಇಂತಹ ಉದ್ವಿಗ್ನ ಜಾಗತಿಕ ಸನ್ನಿವೇಶದಲ್ಲಿ, ಮಿಲಿಟರಿ ಸಂಘರ್ಷದಿಂದ ಯಾವುದೇ ಸಮಸ್ಯೆಗಳು ಬಗೆಹರಿಯವು. ಉಕ್ರೇನ್‌ನಲ್ಲಾಗಲಿ, ಪ.ಏಷ್ಯಾದಲ್ಲಾಗಲಿ ಸ್ಥಿರ, ಸಹ್ಯ ಮತ್ತು ಶಾಶ್ವತವಾದ ಶಾಂತಿಯನ್ನು ನಾವು ಬೆಂಬಲಿಸುತ್ತೇವೆ ಎಂದು ಪ್ರಧಾನಿ ಮೋದಿ ಮಾಧ್ಯಮ ಹೇಳಿಕೆಯಲ್ಲಿ ತಿಳಿಸಿದ್ದಾರೆ. ಬೆಳೆಯುತ್ತಿರುವ ಜಾಗತಿಕ ಸವಾಲುಗಳ ಎದುರಿಸಲು ಜಾಗತಿಕ ಸಂಸ್ಥೆಗಳ ಪುನಾರಚನೆ ಅತ್ಯವಶ್ಯವೆಂದು ನಾವು ಒಪ್ಪುತ್ತೇವೆ. ಭಯೋತ್ಪಾದನೆ ನಿರ್ಮೂಲನೆ ವಿಚಾರದಲ್ಲೂ ನಾವು ಸಮಾನ ಬದ್ಧತೆ ಹೊಂದಿದ್ದೇವೆ ಎಂದು ಪ್ರಧಾನಿ ಮೋದಿ ಗಮನ ಸೆಳೆದಿದ್ದಾರೆ. ಸ್ಟಾಕರ್ ಭೇಟಿ ತೀರಾ ಮಹತ್ವಪೂರ್ಣವೆಂದಿರುವ ಪ್ರಧಾನಿ ಮೋದಿ, ಭಾರತದ ರೈಲ್ವೆ ಪರಿಶುದ್ಧ ಇಂಧನ ಉಪಕ್ರಮಗಳ ಸಹಿತ ದೇಶದ ಹಲವಾರು ಇಂಜಿನಿಯರಿಂಗ್ ಪ್ರಾಜೆಕ್ಟ್‌ಗಳಲ್ಲಿ ಆಸ್ಟ್ರಿಯನ್ ಕಂಪೆನಿಗಳು ತೊಡಗಿಸಿಕೊಂಡಿರುವುದನ್ನು ಉಲ್ಲೇಖಿಸಿದ್ದಾರೆ.

ಆರು ಒಪ್ಪಂದಗಳಿಗೆ ಸಹಿ: ಭಾರತ ಮತ್ತು ಆಸ್ಟ್ರಿಯಾ ಆರ್ಥಿಕತೆಗಳಲ್ಲಿ ಹೂಡಿಕೆ ಹೂಡಬಯಸುವ ಕಂಪೆನಿಗಳಿಗೆ ನೆರವಾಗಲು ಫಾಸ್ಟ್‌ಟ್ರ್ಯಾಕ್ ವ್ಯವಸ್ಥೆ ಸ್ಥಾಪನೆ, ಮಿಲಿಟರಿ ರಂಗದಲ್ಲಿ ಸಹಕಾರ ಸಹಿತ ಆರು ಒಪ್ಪಂದಗಳಿಗೆ ಪ್ರಧಾನಿ ಮೋದಿ ಮತ್ತು ಸ್ಟಾಕರ್ ಸಹಿ ಹಾಕಿದರು. ಜನವರಿಯಲ್ಲಿ ಸಹಿ ಹಾಕಿರುವ ಭಾರತ-ಇಯು ರಕ್ಷಣಾ ಮತ್ತು ಭದ್ರತಾ ಪಾಲುದಾರಿಕೆ ಒಡಂಬಡಿಕೆ ಆಧಾರದಲ್ಲಿ ಪರಸ್ಪರ ಸಹಕಾರ ವರ್ಧನೆಗೆ , ಮಿಲಿಟರಿ ಸಹಕಾರ ಕುರಿತ ಉದ್ದೇಶಪತ್ರವು ಸಾಂಸ್ಥಿಕ ಚೌಕಟ್ಟನ್ನು ಒದಗಿಸಲಿದೆ.

ಕಿರುಸುದ್ದಿ

ಮಕ್ಕಳ ಆನ್ಲೈನ್ ಭದ್ರತೆ ಜಾಲತಾಣಗಳ ಹೊಣೆ

ಲಂಡನ್: ಸಾಮಾಜಿಕ ಜಾಲತಾಣ ಸಂಸ್ಥೆಗಳು ಮಕ್ಕಳ ಆನ್‌ಲೈನ್ ಭದ್ರತೆಯ ಹೊಣೆ ಹೊರಬೇಕೆಂದು ಬ್ರಿಟನ್ ಪ್ರಧಾನಿ ಕೀರ್ ಸ್ಟಾರ್ಮರ್ ಕಠಿಣ ಸಂದೇಶ ನೀಡಿದ್ದಾರೆ. ಸಾಮಾಜಿಕ ಜಾಲತಾಣಗಳು ಮಕ್ಕಳಿಗೆ ತಮ್ಮನ್ನು ಹೇಗೆ ಕಾಣುತ್ತಾರೆ, ಅವರ ಸ್ನೇಹಿತ ವರ್ಗ ಮತ್ತು ಅವರ ಸುತ್ತಲಿನ ಜಗತ್ತನ್ನು ಹೇಗೆ ಅರ್ಥೈಸಿಕೊಳ್ಳುತ್ತಾರೆ ಎಂಬುದನ್ನು ರೂಪಿಸುತ್ತವೆ. ಇದರಲ್ಲಿ ನಿಜವಾದ ಅಪಾಯಗಳಿದ್ದಾಗ, ಅದನ್ನು ನಿರ್ಲಕ್ಷಿಸುವುದು ಆಯ್ಕೆಯೇ ಅಲ್ಲ ಎಂದು ಸ್ಟಾರ್ಮರ್ ಹೇಳಿದರು.

ಲಖನೌ ಅಗ್ನಿ ಅವಗಢದಲ್ಲಿ ಬಾಲಕಿ, 2 ತಿಂಗಳ ಶಿಶು ಬಲಿ

ಲಖನೌ: ನಗರದ ವಿಕಾಸ್ ನಗರ ಪ್ರದೇಶದ ಸೆಕ್ಟರ್ 11ರಲ್ಲಿ ನಿರ್ಮಿಸಲಾದ ತಾತ್ಕಾಲಿಕ ಗುಡಿಸಲು ವಸತಿಗಳಲ್ಲಿ ಭಾರೀ ಅಗ್ನಿ ಅವಘಡದಲ್ಲಿ ಒಬ್ಬ ಬಾಲಕಿ ಮತ್ತು ಆಕೆಯ 2 ತಿಂಗಳ ಸಹೋದರಿ ಮೃತಪಟ್ಟ ಹೃದಯ ವಿದ್ರಾವಕ ಘಟನೆ ಸಂಭವಿಸಿದೆ. ಅಗ್ನಿ ದುರಂತದಲ್ಲಿ ಸುಮಾರು 280ಕ್ಕೂ ಹೆಚ್ಚು ಗುಡಿಸಲುಗಳು ಸಂಪೂರ್ಣ ಸುಟ್ಟು ಭಸ್ಮವಾಗಿವೆ. ಸಾವಿರಕ್ಕೂ ಹೆಚ್ಚು ಮಂದಿ ದುರಂತದಿಂದ ನಿರಾಶ್ರಿತರಾಗಿದ್ದಾರೆ.

ಮುಸಲ್ಮಾನ ಸ್ತ್ರೀಯರಿಗೆ ಸಮಾನ ಹಕ್ಕಿಗೆ ಮನವಿ

ಹೊಸದಿಲ್ಲಿ: ದೇಶದಲ್ಲಿ ಏಕಸಮಾನ ನಾಗರಿಕ ಸಂಹಿತೆ (ಏನಾಸಂ) ಜಾರಿಯು 'ಸಂವಿಧಾನಿಕ ಗುರಿ' ಎಂದು ಅಭಿಪ್ರಾಯಪಟ್ಟ ಸುಪ್ರೀಂಕೋರ್ಟ್, ಮುಸ್ಲಿಂ ವೈಯಕ್ತಿಕ ಕಾನೂನಿನ ಕೆಲವು ವಿಧಿಗಳು ಮಹಿಳೆಯರ ವಿರುದ್ಧ ಭೇದಭಾವ ನಡೆಸುತ್ತಿವೆ ಎಂಬ ಆರೋಪದಡಿ ಸಲ್ಲಿಸಲಾದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ವಿಚಾರಣೆಗೊಳಪಡಿಸಲು ಗುರುವಾರ ಒಪ್ಪಿಗೆ ನೀಡಿದೆ. ಮುಖ್ಯ ನ್ಯಾ.ಸೂರ್ಯಕಾಂತ್ ಹಾಗೂ ನ್ಯಾಯಮೂರ್ತಿಗಳಾದ ಜೋಯ್ಮಾಲ್ಯ ಬಾಗ್ಚಿ ಮತ್ತು ವಿಪುಲ್ ಎಂ. ಪಂಚೋಲ್ ಒಳಗೊಂಡ ಪೀಠ, ಅಲ್ಪಸಂಖ್ಯಾತ ವ್ಯವಹಾರಗಳ ಕೇಂದ್ರ ಸಚಿವಾಲಯದಿಂದ ಪ್ರತಿಕ್ರಿಯೆ ಕೇಳಿದೆ. ಈ ಅರ್ಜಿಯನ್ನು ಪೌಲೋಮಿ ಪವಿನಿ ಶುಕ್ಲಾ ಮತ್ತು ನ್ಯಾಯಕಾರಿ ಮಹಿಳಾ ಪ್ರತಿಷ್ಠಾನ ಸಲ್ಲಿಸಿವೆ. ಅರ್ಜಿದಾರರ ಪರವಾಗಿ ವಕೀಲ ಪ್ರಶಾಂತ್ ಭೂಷಣ್ ವಾದ ಮಂಡಿಸಿ, 1937ರ ಶರಿಯತ್ ಅನ್ವಯ ಕಾನೂನಿನ ಕೆಲವು ವಿಧಿಗಳು ಮಹಿಳೆಯರಿಗೆ ಆಸ್ತಿ ಹಕ್ಕುಗಳಲ್ಲಿ ಸಮಾನತೆ ನೀಡುವುದಿಲ್ಲ ಎಂದು ಹೇಳಿದರು. ಮಹಿಳೆಯರಿಗೆ ಪುರುಷರಿಗಿಂತ ಅರ್ಧ ಅಥವಾ ಅದಕ್ಕಿಂತ ಕಡಿಮೆ ಪಾಲು ನೀಡುವುದು ಸ್ಪಷ್ಟವಾದ ಭೇದಭಾವ ಎಂದೂ ಅವರು ವಾದಿಸಿದರು. ಇದಲ್ಲದೆ, ವಾರಸತ್ವದ ವಿಷಯಗಳು ನಾಗರಿಕ ಸ್ವಭಾವದವಾಗಿದ್ದು, ಅವು ಧರ್ಮದ 'ಅತ್ಯಾವಶ್ಯಕ ಆಚರಣೆ'ಗಳಾಗುವುದಿಲ್ಲ ಎಂದು ಅವರು ತಿಳಿಸಿದರು. ಆದ್ದರಿಂದ, ಇವುಗಳಿಗೆ ಸಂವಿಧಾನದ ಕಲಂ 25 ಅಡಿಯಲ್ಲಿ ರಕ್ಷಣೆಯಿಲ್ಲ ಎಂದು ಹೇಳಿದರು. ಆದರೆ ನ್ಯಾಯಾಲಯವು ಈ ವಿಚಾರದಲ್ಲಿ ನ್ಯಾಯಾಂಗ ಅತಿಕ್ರಮಣದ ಬಗ್ಗೆ ಎಚ್ಚರಿಕೆ ವ್ಯಕ್ತಪಡಿಸಿದೆ.

ಉಕ್ರೇನ್ ಮೇಲೆ ರಷ್ಯಾ ದಾಳಿ: 16 ಮಂದಿ ಸಾವು

ಕೀವ್: ಉಕ್ರೇನ್‌ನ ನಾಗರಿಕ ಪ್ರದೇಶಗಳ ಮೇಲೆ ರಷ್ಯಾ ಹಲವು ಗಂಟೆಗಳ ಕಾಲ ಡ್ರೋನ್ ಮತ್ತು ಕ್ಷಿಪಣಿ ದಾಳಿ ನಡೆಸಿದ್ದು, ಕನಿಷ್ಠ 16 ಮಂದಿ ಬಲಿಯಾಗಿದ್ದಾರೆ. 80ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ಗುರುವಾರ ತಿಳಿಸಿದ್ದಾರೆ. ದಾಳಿಗೆ ಭಯಭೀತರಾದ ಉಕ್ರೇನಿಯನ್ನರು ತಮ್ಮ ಮನೆಗಳಲ್ಲೇ ಅಡಗಿಕೊಂಡಿದ್ದರೆಂದು ವರದಿಯಾಗಿದೆ. ಸುಮಾರು 700 ಡ್ರೋನ್‌ಗಳು ಮತ್ತು ಡಜನ್‌ಗಟ್ಟಲೆ ಖಂಡಾಂತರ ಹಾಗೂ ಕ್ರೂಸ್ ಕ್ಷಿಪಣಿಗಳನ್ನು ರಷ್ಯಾ ಉಡಾಯಿಸಿದ್ದು, ಮುಖ್ಯವಾಗಿ ನಾಗರಿಕ ಪ್ರದೇಶಗಳನ್ನು ಗುರಿಯಾಗಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಇದು ಕಳೆದ ಎರಡು ವಾರಗಳಲ್ಲಿ ನಡೆದ ಅತಿ ದೊಡ್ಡ ವಾಯು ದಾಳಿ ಎನ್ನಲಾಗಿದೆ. ನಾಲ್ಕು ವರ್ಷಗಳ ಹಿಂದಿನಿಂದ ಉಕ್ರೇನ್ ಮೇಲೆ ದಂಡೆತ್ತಿ ಆಕ್ರಮಣಕಾರಿ ದಾಳಿ ಆರಂಭಿಸಿದಾಗಿನಿಂದಲೂ ರಷ್ಯಾ ನಾಗರಿಕ ಪ್ರದೇಶಗಳ ಮೇಲೆ ನಿರಂತರ ದಾಳಿ ನಡೆಸುತ್ತಲೇ ಬಂದಿದೆ ಎಂದು ಉಕ್ರೇನ್ ಅಧಿಕಾರಿಗಳು ಆರೋಪಿಸಿದ್ದಾರೆ. ವಿಶ್ವಸಂಸ್ಥೆಯ ಪ್ರಕಾರ, ಈ ದಾಳಿಗಳಲ್ಲಿ ಈಗಾಗಲೇ 15,000ಕ್ಕೂ ಹೆಚ್ಚು ಉಕ್ರೇನ್ ನಾಗರಿಕರು ಮೃತಪಟ್ಟಿದ್ದಾರೆ.

ದೇಶದ ವಾಯು ರಕ್ಷಣಾ ವ್ಯವಸ್ಥೆಯನ್ನು ಬಲಪಡಿಸುವ ಉದ್ದೇಶದಿಂದ ಉಕ್ರೇನ್ ಅಧ್ಯಕ್ಷ ವ್ಲಾಡಿಮಿರ್ ಝೆಲೆನ್ಸ್ಕಿ ಜರ್ಮನಿ, ನಾರ್ವೆ ಮತ್ತು ಇಟಲಿಗೆ 48 ಗಂಟೆಗಳ ಪ್ರವಾಸ ಕೈಗೊಂಡ ಸಮಯದಲ್ಲೇ ರಷ್ಯಾ ದಾಳಿ ನಡೆಸಿದೆ.

ರಾಜ್ಯಸಭಾ ಸದಸ್ಯರಾಗಿ ನಿತಿನ್ ಪ್ರಮಾಣ ವಚನ

ಹೊಸದಿಲ್ಲಿ: ರಾಜ್ಯಸಭೆಗೆ ಹೊಸದಾಗಿ ಆಯ್ಕೆಯಾದ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನವೀನ್, ಕೇಂದ್ರ ಸಚಿವ ರಾಮನಾಥ್ ಠಾಕೂರ್, ಹಿರಿಯ ಕಾಂಗ್ರೆಸ್ ನಾಯಕ ಅಭಿಷೇಕ್ ಸಿಂಘ್ವಿ ಹಾಗೂ ಇತರ 13 ಸಂಸದರು ಗುರುವಾರ ಪ್ರಮಾಣ ವಚನ ಸ್ವೀಕರಿಸಿದರು. ಉಪ ರಾಷ್ಟ್ರಪತಿ ಹಾಗೂ ರಾಜ್ಯಸಭೆಯ ಅಧ್ಯಕ್ಷ ಸಿ.ಪಿ.ರಾಧಾಕೃಷ್ಣನ್ ರಾಜ್ಯಸಭೆಯ 16 ಹೊಸ ಅಥವಾ ಮರು ಚುನಾಯಿತ ಸದಸ್ಯರಿಗೆ ಪ್ರತಿಜ್ಞಾವಿಧಿ ಬೋಧಿಸಿದರು. ಹೊಸ ಸದಸ್ಯರು ಬಿಹಾರ, ಅಸ್ಸಾಂ, ಹರ್ಯಾಣ, ಹಿಮಾಚಲ ಪ್ರದೇಶ, ಮಹಾರಾಷ್ಟ್ರ, ಒಡಿಶ ಮತ್ತು ತೆಲಂಗಾಣಗಳನ್ನು ಪ್ರತಿನಿಧಿಸುತ್ತಿದ್ದಾರೆ. ಬಿಜೆಪಿಯ 8 ಸಂಸದರು, ಬಿಜೆಪಿ ಮಿತ್ರಪಕ್ಷಗಳ ಮೂವರು ಸಂಸದರು ಮತ್ತು ಕಾಂಗ್ರೆಸ್‌ನ 5 ಸಂಸದರು ಪ್ರಮಾಣವಚನ ಸ್ವೀಕರಿಸಿದ್ದಾರೆ. ಬಿಜೆಪಿ ರಾಷ್ಟ್ರೀಯ ಅಧ್ಯಕ್ಷರಾಗಿ ಆಯ್ಕೆಯಾದ ನಂತರ ಬಿಹಾರ ವಿಧಾನಸಭಾ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದ್ದ ನವೀನ್ ರಾಜ್ಯಸಭೆಗೆ ಆಯ್ಕೆಯಾಗಿದ್ದಾರೆ. ಇವರು ಪ್ರಚಂಡ ಕರತಾಡನ ಮಧ್ಯೆ ಹಿಂದಿಯಲ್ಲಿ ಪ್ರಮಾಣ ವಚನ ಸ್ವೀಕರಿಸಿದರು. ರಾಜ್ಯಸಭೆಗೆ ಬಿಹಾರದಿಂದ ಪುನರಾಯ್ಕೆಯಾಗಿರುವ ಕೇಂದ್ರ ಸಚಿವ ರಾಮ್‌ನಾಥ್ ಠಾಕೂರ್ ಕೂಡ ನವೀನ್ ಜತೆ ಪ್ರಮಾಣ ವಚನ ಸ್ವೀಕರಿಸಿದರು. ಪ್ರಮಾಣವಚನ ಸ್ವೀಕರಿಸಿದ ಉಪೇಂದ್ರ ಕುಶ್ವಾರಾ (ಆರ್‌ಎಲ್‌ಎಂ), ಶಿವೇಶ್ ಕುಮಾರ್(ಬಿಜೆಪಿ) ಕೂಡ ಬಿಹಾರವನ್ನು ಪ್ರತಿನಿಧಿಸುವವರು. ತೆರಾಶ್ ಗೋವಲ್ಲಾ (ಬಿಜೆಪಿ) ಜೋಗನ್ ಮೋಹನ್ (ಬಿಜೆಪಿ), ಪ್ರಮೋದ್ ಬೋರೋ(ಯುಪಿಪಿ-ಎಲ್) ಅಸ್ಸಾಂ ಅನ್ನು ಪ್ರತಿನಿಧಿಸುತ್ತಿರುವ ರಾಜ್ಯಸಭಾ ಸಂಸದರು.

ಮಹಿಳಾ ಕಲ್ಯಾಣಕ್ಕೆ ವಿಜಯ್ ಆದ್ಯತೆ

ಚೆನ್ನೈ: 60 ವರ್ಷದೊಳಗಿನ ಮಹಿಳೆಯರಿಗೆ ತಿಂಗಳಿಗೆ ರೂ.2500 ಆರ್ಥಿಕ ನೆರವು, ಮದುವೆಗೆ 8 ಗ್ರಾಂ. ಚಿನ್ನದ ಉಡುಗೊರೆ ಸಹಿತ ಮಹಿಳಾ ಕಲ್ಯಾಣಕ್ಕೆ ತುಂಬು ಆದ್ಯತೆಯಿರುವಂತಹ ಚುನಾವಣಾ ಪ್ರಣಾಳಿಕೆಯನ್ನು ತಮಿಳಗ ವೆಟ್ರಿ ಕಳಗಂ (ಟಿವಿಕೆ) ನಾಯಕ ದಳಪತಿ ವಿಜಯ್ ಗುರುವಾರ ಪ್ರಕಟಿಸಿದ್ದಾರೆ. ಬಡ ವಧುವಿಗೆ ಬಂಗಾರ ಜತೆ ಉತ್ತಮ ಗುಣಮಟ್ಟದ ರೇಷ್ಮೆ ಸೀರೆ, ಮಹಿಳಾ ನೇತೃತ್ವದ ಎಸ್‌ಎಚ್‌ಜಿಗಳಿಗೆ 5 ಲಕ್ಷ ರೂ.ವರೆಗೆ ಬಡ್ಡಿ ಮುಕ್ತ ಸಾಲ ಸೌಲಭ್ಯದ ಆಶ್ವಾಸನೆಯೂ ಪ್ರಣಾಳಿಕೆಯಲ್ಲಿದೆ. ಮಾತ್ರವಲ್ಲ, ಒಂದು ವೇಳೆ ಅಧಿಕಾರಕ್ಕೆ ಬಂದಲ್ಲಿ ಭ್ರಷ್ಟಾಚಾರ ಮುಕ್ತ ಉತ್ತಮ ಆಡಳಿತ ನೀಡುವ ಭರವಸೆಯನ್ನೂ ವಿಜಯ್ ನೀಡಿದ್ದಾರೆ.

ಶಿಕ್ಷಣಕ್ಕೆ ಆದ್ಯತೆ: ಪ್ರಣಾಳಿಕೆಯಲ್ಲಿ ಶಿಕ್ಷಣಕ್ಕೂ ಆದ್ಯತೆ ನೀಡಲಾಗಿದೆ. ಮಕ್ಕಳು ಅರ್ಧದಲ್ಲಿ ವ್ಯಾಸಂಗ ಬಿಡುವುದನ್ನು ತಪ್ಪಿಸಲು ಸರ್ಕಾರಿ ಶಾಲೆ ಅಥವಾ ರಾಜ್ಯ ಸರ್ಕಾರದ ಅನುದಾನಿತ ಶಾಲೆಗಳಲ್ಲಿ ಕಲಿಯುವ ಮಕ್ಕಳ ಪೋಷಕರಿಗೆ ವಾರ್ಷಿಕ 15 ಸಾವಿರ ರೂ. ಆರ್ಥಿಕ ನೆರವು ಘೋಷಿಸಲಾಗಿದೆ. ತಮಿಳುನಾಡಿನ ದಂತಕಥೆ ಕಾಮರಾಜರ್ ಹೆಸರಲ್ಲಿ 100 ವಿಶೇಷ ವಸತಿ ಶಾಲೆಗಳನ್ನು ತೆರೆಯಲಾಗುವುದು. ಉನ್ನತ ಶಿಕ್ಷಣಕ್ಕೆ 20 ಲಕ್ಷ ರೂ.ವರೆಗೆ ಸಾಲ ಸೌಲಭ್ಯ, ಎಐ ಖಾತೆ, ಎಐ ವಿವಿ ಮತ್ತು ಎಐ ನಗರ ನಿರ್ಮಾಣದ ಭರವಸೆಯನ್ನೂ ಪ್ರಣಾಳಿಕೆಯಲ್ಲಿ ಟಿವಿಕೆ ನೀಡಿದೆ.

ಮುಸಲ್ಮಾನ ಮಹಿಳೆಯರಿಗೆ ಧರ್ಮಾಧಾರಿತ ಮೀಸಲಾತಿ ಇಲ್ಲ: ಅಮಿತ್ ಶಾ

ಧರ್ಮಾಧಾರಿತ ಮೀಸಲಾತಿ ಅಸಾಂವಿಧಾನಿಕ



ಹೊಸದಿಲ್ಲಿ : ಧರ್ಮದ ಆಧಾರದಲ್ಲಿ ಮುಸಲ್ಮಾನರಿಗೆ ಮೀಸಲಾತಿ ನೀಡುವುದಿಲ್ಲ, ಇಂತಹ ಮೀಸಲಾತಿ ಅಥವಾ ಕೋಟಾಗಳು ಅಸಾಂವಿಧಾನಿಕ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದ್ದಾರೆ. ಈಗಾಗಲೆ ಪ್ರಗತಿಯಲ್ಲಿರುವ ಜನಗಣತಿಯೊಂದಿಗೆ ಜಾತಿ ಗಣತಿ ಮತ್ತು ಜನಸಂಖ್ಯಾ ಎಣಿಕೆಯನ್ನು ಮಾಡಲಾಗುವುದು ಎಂದು ಸಚಿವರು ಮಾಹಿತಿ ನೀಡಿದರು. ಮಹಿಳಾ ಮೀಸಲಾತಿ ಕಾಯ್ದೆಗೆ ತಿದ್ದುಪಡಿ ಮತ್ತು ಕ್ಷೇತ್ರ ಮರುವಿಂಗಡಣೆ ಆಯೋಗ ರಚನೆಗಾಗಿ ಲೋಕಸಭೆಯಲ್ಲಿ ಮಂಡಿಸಲಾದ ಮೂರು ಮಸೂದೆಗಳ ಮಂಡನೆಗೆ ಮುನ್ನ ಬರೋಬ್ಬರಿ 40 ನಿಮಿಷ ಕಾಲ ತೀವ್ರತರ ಚರ್ಚೆ ನಡೆದಿದ್ದು, ಚರ್ಚೆ ವೇಳೆ ಸಚಿವ ಶಾ ಈ ರೀತಿ ಸ್ಪಷ್ಟವಾಗಿ ಅಭಿಮತ ವ್ಯಕ್ತಪಡಿಸಿದರು.

ಧರ್ಮಾಧಾರಿತ ಮೀಸಲಾತಿ ಇಲ್ಲ: ಮುಸಲ್ಮಾನ ಮಹಿಳೆಯರಿಗೆ ಧರ್ಮದ ಆಧಾರದಲ್ಲಿ ಮೀಸಲಾತಿ ನೀಡೋ ವಿಚಾರ ಇಲ್ಲವೇ ಇಲ್ಲ, ಧರ್ಮದ ಆಧಾರದಲ್ಲಿ ಮೀಸಲಾತಿಗೆ ನಮ್ಮ ಘನ ಸಂವಿಧಾನದಲ್ಲಿ ಅವಕಾಶ ಕೂಡ ಇಲ್ಲ, ಧರ್ಮದ ಆಧಾರದಲ್ಲಿ ಮುಸಲ್ಮಾನರಿಗೆ ಮೀಸಲಾತಿ ಕಲ್ಪಿಸಲಾಗದು ಎಂಬುದು ನಮ್ಮ ಸರಕಾರದ ಧೋರಣೆ. ಇಂತಹ ಮೀಸಲಾತಿ ಸಂವಿಧಾನಬಾಹಿರ ಎಂದು ಸಚಿವ ಶಾ, ಈ ವಿಚಾರದಲ್ಲಿ ಸಮಾಜವಾದಿ ಪಕ್ಷದ ಅಖಿಲೇಶ್ ಯಾದವ್ ಮತ್ತು ಧರ್ಮೇಂದ್ರ ಯಾದವ್ ವಾದಕ್ಕೆ ತೀಕ್ಷ್ಣ ತಿರುಗೇಟು ನೀಡಿದರು.

ಸರಕಾರ ಈಗಾಗಲೇ ತೀರ್ಮಾನ ತಳೆದಿದೆ: ಜಾತಿ ಗಣತಿ ನಡೆಸಬೇಕೆಂಬ ಬೇಡಿಕೆಯನ್ನು ನಾವು ಮುಂದಿಡುತ್ತೇವೆಂದು ಸಮಾಜವಾದಿ ಪಕ್ಷದವರು ಹೇಳುತ್ತಾರೆ. ಆದರೆ ವಾಸ್ತವದಲ್ಲಿ ಜಾತಿಗಣತಿ ಬಗ್ಗೆ ನಮ್ಮ ಸರಕಾರ ಈಗಾಗಲೆ ತೀರ್ಮಾನ ಕೈಗೊಂಡಾಗಿದೆ. ಜನಸಂಖ್ಯಾ ಗಣತಿ ಜತೆ ಜಾತಿ ಗಣತಿ ನಡೆಸಲಾಗುವುದು. ಪ್ರಸಕ್ತ ಕುಟುಂಬಗಳು ಅಥವಾ ಮನೆಗಳ ಗಣತಿ ನಡೆದಿದೆ ಮತ್ತು ಮನೆಗಳಿಗೆ ಯಾವುದೇ ಜಾತಿ ಇಲ್ಲ, ಸಮಾಜವಾದಿ ಪಕ್ಷಕ್ಕೆ ಅದರದೇ ಮಾರ್ಗವಿದ್ದಲ್ಲಿ ಮನೆಗಳ ಅಥವಾ ಕುಟುಂಬಗಳ ಜಾತಿಯನ್ನು ತರ್ಕಿಸುವರು ಎಂದು ಸಚಿವ ಶಾ ಟೀಕಿಸಿದರು.

ನಮ್ಮದೇನೂ ಅಭ್ಯಂತರವಿಲ್ಲ: ಸಮಾಜವಾದಿ ಪಕ್ಷ ತನ್ನೆಲ್ಲಾ ಟಿಕೆಟ್‌ಗಳನ್ನು ಮುಸಲ್ಮಾನ ಮಹಿಳೆಯರಿಗೆ ಕೊಡುವುದಿದ್ದಲ್ಲಿ ನಮ್ಮದೇನೂ ಅಭ್ಯಂತರವಿಲ್ಲವೆಂದ ಸಚಿವರು , ಜನಸಂಖ್ಯಾ ಎಣಿಕೆ ಸಂದರ್ಭ ಜಾತಿ ಗಣತಿಗೂ ಅಗತ್ಯ ಪೂರಕ ನಿಯಮಾವಳಿಗಳನ್ನು ಗಣತಿ ಅಧಿಕಾರಿಗಳು ಪ್ರತ್ಯೇಕ ಜೋಡಿಸಿಕೊಂಡಿರುತ್ತಾರೆ. ವೈಯ್ಯಕ್ತಿಕ ವಾಗಿ ತಾನು ಕೂಡ ಇದನ್ನು ಅಪೇಕ್ಷಿಸಿದ್ದೇನೆ. ಒಟ್ಟಿನಲ್ಲಿ ಜಾತಿ ಗಣತಿ ಜತೆ ಜನಗಣತಿ ನಡೆಯಲಿದೆ ಎಂದು ಸ್ಪಷ್ಟವಾಗಿ ಹೇಳುತ್ತೇನೆ ಎಂದರು. ಜನಗಣತಿ 2027ರಡಿ ಮನೆಗಳ ಗಣತಿ ಏ.1ರಿಂದಲೆ ಶುರುವಾಗಿದೆ. ಮುಂದಿನ ಜನಗಣತಿಯು ಜಾತಿ ಗಣತಿಯನ್ನೂ ಒಳಗೊಳ್ಳಬೇಕೆಂದು ಪ್ರಧಾನಿ ನರೇಂದ್ರ ಮೋದಿ ನೇತೃತ್ವದ, ರಾಜಕೀಯ ವ್ಯವಹಾರಗಳ ಸಂಪುಟ ಸಮಿತಿ ಕಳೆದ ವರ್ಷ ಏಪ್ರಿಲ್ 30ರಂದು ನಿರ್ಧರಿಸಿತ್ತು. ಸ್ವಾತಂತ್ರ್ಯಾನಂತರ ನಡೆದಿರುವ ಒಂದೇ ಒಂದು ಜನಗಣತಿ ಕೂಡ ಜಾತಿ ಗಣತಿಯನ್ನು ಒಳಗೊಂಡಿಲ್ಲ.

ನಾಸಿಕ್ ಘಟನೆ ಹಿನ್ನೆಲೆಯಲ್ಲಿ ಕೋರಿಕೆ | ಸುಪ್ರೀಂಗೆ ಸಲ್ಲಿಕೆಯಾಗಿದೆ ಅರ್ಜಿ

ಬಲವಂತದ ಮತಾಂತರ ಭಯೋತ್ಪಾದನೆಗೆ ಸಮ?





ಹೊಸದಿಲ್ಲಿ: ನಾಸಿಕ್‌ನ ಬಹುರಾಷ್ಟ್ರೀಯ ಕಂಪನಿಯಲ್ಲಿ ಹೊರಬಿದ್ದ ಧಾರ್ಮಿಕ ಮತಾಂತರ ಮತ್ತು ಲೈಂಗಿಕ ಕಿರುಕುಳ ಆರೋಪಗಳು ದೇಶವ್ಯಾಪಿ ಚರ್ಚೆಗೆಗ್ರಾಸವಾಗಿರುವಂತೆಯೇ, ಬಲವಂತ ಹಾಗೂ ಮೋಸದ ಧಾರ್ಮಿಕ ಮತಾಂತರವನ್ನು ನೇರವಾಗಿ ಭಯೋತ್ಪಾದಕ ಕೃತ್ಯವೆಂದು ಘೋಷಿಸುವಂತೆ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಲಾಗಿದೆ.

ಟಿಸಿಎಸ್ ನಾಸಿಕ್ ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದ ಎಂಟು ಮಹಿಳೆಯರು ಲೈಂಗಿಕ ಕಿರುಕುಳದ ಜೊತೆಗೆ ಬಲವಂತ ಮತಾಂತರ ಆರೋಪ ಮಾಡಿರುವ ಘಟನೆ ಈ ಅರ್ಜಿಗೆ ನೆಲೆ ನೀಡಿದೆ. ಹಿರಿಯ ವಕೀಲ ಅಶ್ವಿನಿ ಕುಮಾರ್ ಉಪಾಧ್ಯಾಯ ಸಲ್ಲಿಸಿರುವ ಅರ್ಜಿಯಲ್ಲಿ, 'ಮೋಸದ ಧಾರ್ಮಿಕ ಮತಾಂತರವು ಕೇವಲ ಧಾರ್ಮಿಕ ವಿಷಯವಲ್ಲ; ಅದು ರಾಷ್ಟ್ರದ ಪ್ರಭುತ್ವ, ಧರ್ಮನಿರಪೇಕ್ಷತೆ, ಪ್ರಜಾಪ್ರಭುತ್ವ ಮತ್ತು ಸ್ವಾತಂತ್ರ್ಯಕ್ಕೆ ನೇರ ಸವಾಲು' ಎಂದು ಬಣ್ಣಿಸಲಾಗಿದೆ.

ಅರ್ಜಿಯ ಪ್ರಕಾರ, ಸಂಘಟಿತವಾಗಿ, ಒತ್ತಾಯಪೂರ್ವಕವಾಗಿ ನಡೆಯುವ ಮತಾಂತರ ಅಭಿಯಾನಗಳು ಭಾರತೀಯ ನ್ಯಾಯ ಸಂಹಿತೆ (ಬಿಎನ್‌ಎಸ್) 2023ರ ಸೆಕ್ಷನ್ 113 ಹಾಗೂ

» ಉಗ್ರ ಕೃತ್ಯವೆಂದೇ ಪರಿಗಣಿಸಲು ಮನವಿ

ಯುಎಪಿಎ ಕಾಯ್ದೆಯ ಸೆಕ್ಷನ್ 15 ಅಡಿಯಲ್ಲಿ 'ಭಯೋತ್ಪಾದಕ ಕೃತ್ಯ'ಗಳ ವ್ಯಾಪ್ತಿಗೆ ಬರುತ್ತವೆ. ವಿದೇಶಿ ಶಕ್ತಿಗಳ ನೆರವಿನಿಂದ ನಡೆಯುವ ಈ ಸಂಚುಗಳು ದೇಶದ ಜನಸಾಂಖ್ಯಿಕ ಸಮತೋಲನವೇ ಬದಲಿಸುವ ಉದ್ದೇಶ ಹೊಂದಿದ್ದು, ಏಕತೆ ಮತ್ತು ಭದ್ರತೆಗೆ ಗಂಭೀರ ಧಕ್ಕೆ ಉಂಟುಮಾಡುತ್ತವೆ ಎಂದು ಅರ್ಜಿಯಲ್ಲಿ ಆರೋಪಿಸಲಾಗಿದೆ.

ಇದಲ್ಲದೆ, ಧಾರ್ಮಿಕ ಮತಾಂತರ ಪ್ರಕರಣಗಳಿಗೆ ವಿಶೇಷ ನ್ಯಾಯಾಲಯಗಳನ್ನು ಸ್ಥಾಪಿಸುವಂತೆ ಹಾಗೂ ಇಂತಹ ಪ್ರಕರಣಗಳಲ್ಲಿ ಶಿಕ್ಷೆಯನ್ನು ಸತತ ಶಿಕ್ಷೆ ರೂಪದಲ್ಲಿ ವಿಧಿಸುವಂತೆ ಕೋರ್ಟ್‌ಗೆ ಮನವಿ ಮಾಡಲಾಗಿದೆ.

ಹಾಗೆಯೇ 'ಧರ್ಮ ಸ್ವಾತಂತ್ರ್ಯ ಎಂದರೆ ಬಲವಂತ, ಮೋಸ ಅಥವಾ ಒತ್ತಾಯದ ಮೂಲಕ ಮತಾಂತರಗೊಳಿಸುವ ಹಕ್ಕು ಅಲ್ಲ' ಎಂದು ಸ್ಪಷ್ಟಪಡಿಸಲಾಗಿದೆ. ಸಂವಿಧಾನದ 25ನೇ ವಿಧಿ ನೀಡಿರುವ ಧರ್ಮಾಚರಣೆಯ ಹಕ್ಕು ಸಾರ್ವಜನಿಕ ಸುವ್ಯವಸ್ಥೆ, ಆರೋಗ್ಯ ಮತ್ತು ನೈತಿಕತೆಗಳಿಗೆ ಒಳಪಟ್ಟಿದ್ದು, ಅದು ನಿರ್ಬಂಧರಹಿತವಲ್ಲ ಎಂದು ವಾದಿಸಲಾಗಿದೆ.

ದುರುದ್ದೇಶದ ' ಮತಾಂತರ ತಡೆಗೆ ಕಠಿಣ ಕ್ರಮ ಕೈಗೊಳ್ಳುವಂತೆ ಕೇಂದ್ರ ಮತ್ತು ರಾಜ್ಯಗಳಿಗೆ ನಿರ್ದೇಶನ ನೀಡುವಂತೆ ಕೇಳಿಕೊಂಡಿರುವ ಈ ಅರ್ಜಿ, ಈಗ ಸುಪ್ರೀಂ ಕೋರ್ಟ್‌ನ ಮುಂದೆ ಮಹತ್ವದ ಸಂವಿಧಾನಾತ್ಮಕ ಚರ್ಚೆಗೆ ವೇದಿಕೆ ಸಿದ್ಧಪಡಿಸಿದೆ.

ಕಿರುಸುದ್ದಿ

ಮಾರುತಿ ರೆಸಿಡೆನ್ಶಿಯಲ್ ಸ್ಕೂಲ್: ಶೇ.100ರಷ್ಟು ಫಲಿತಾಂಶ



◆**ಹೊನ್ನಾವರ:** ಮಾರುತಿ ರೆಸಿಡೆನ್ಶಿಯಲ್ ಸ್ಕೂಲ್ ಮತ್ತು ಪಿಯು ಕಾಲೇಜ್ ಬಂಗಾರಮಕ್ಕಿಯ ವಿದ್ಯಾರ್ಥಿಗಳು 2026ರ ಸಿಬಿಎಸ್‌ಇ 10ನೇ ತರಗತಿ ಪರೀಕ್ಷೆಯಲ್ಲಿ ಶೇ.100ರಷ್ಟು ಫಲಿತಾಂಶ ದಾಖಲಿಸಿ ಉತ್ತಮ ಸಾಧನೆ ಮಾಡಿ ಸಂಸ್ಥೆಗೆ ಕೀರ್ತಿ ತಂದಿದ್ದಾರೆ. ನಕುಲ್ ರಘುವೀರ ನಾಯ್ಕ ಶೇ.94.6ರಷ್ಟು ಫಲಿತಾಂಶ ದೊಂದಿಗೆ ಶಾಲೆಗೆ ಪ್ರಥಮ ಸ್ಥಾನ, ಶ್ರೇಯಸ್ ಸುರೇಶ ನಾಯ್ಕ ಶೇ.91.2ರಷ್ಟು ಫಲಿತಾಂಶ ದೊಂದಿಗೆ ಶಾಲೆಗೆ ದ್ವಿತೀಯ ಹಾಗೂ ಶೇ. 85.6ರಷ್ಟು ಫಲಿತಾಂಶ ದೊಂದಿಗೆ ಪ್ರತೋಷ ದಯಾನಂದ ನಾಯ್ಕ ಮತ್ತು ರಾಕೇಶ ಮಂಜುನಾಥ ಭಟ್ ಇವರು ಜಂಟಿಯಾಗಿ ಶಾಲೆಗೆ ತೃತೀಯ ಸ್ಥಾನ ಪಡೆದುಕೊಂಡಿದ್ದಾರೆ. ವಿಷಯವಾರು, ನಕುಲ್ ರಘುವೀರ ನಾಯ್ಕ ಇವನು ಇಂಗ್ಲೀಷ ನಲ್ಲಿ 99 ಅಂಕ, ಹಿಂದಿಯಲ್ಲಿ 98 ಅಂಕಗಳು, ಗಣಿತದಲ್ಲಿ 86 ಅಂಕಗಳು ಹಾಗೂ ವಿಜ್ಞಾನ ವಿಷಯದಲ್ಲಿ 97 ಅಂಕಗಳನ್ನು ಪಡೆದಿದ್ದು, ಸಮಾಜ ವಿಜ್ಞಾನದಲ್ಲಿ ರಾಕೇಶ ಮಂಜುನಾಥ ಭಟ್ 97 ಅಂಕ ಹಾಗೂ ಶಿವಾನಿ ಪ್ರಶಾಂತ ಶೆಟ್ಟಿ ಕನ್ನಡದಲ್ಲಿ 99 ಅಂಕ ಪಡೆಯುವ ಮೂಲಕ ಉತ್ತಮ ಸಾಧನೆ ಮಾಡಿದ್ದಾರೆ. ಶೇಕಡಾ 100ರಷ್ಟು ಫಲಿತಾಂಶ ದಾಖಲಿಸಿ ಅತ್ಯುತ್ತಮ ಸಾಧನೆ ಮಾಡಿದ ಎಲ್ಲಾ ವಿದ್ಯಾರ್ಥಿಗಳಿಗೆ ಶಿಕ್ಷಕ ಮತ್ತು ಸಿಬ್ಬಂದಿಗೆ ಶ್ರೀ ಕ್ಷೇತ್ರದ ಧರ್ಮಾಧಿಕಾರಿ ಪರಮಪೂಜ್ಯ ಮಾರುತಿ ಗುರೂಜಿ, ಕಾರ್ಯದರ್ಶಿ ಹಾಗೂ ಶಾಲೆಯ ಆಡಳಿತ ಮಂಡಳಿ ಮತ್ತು ಪೋಷಕ ಶಿಕ್ಷಕರ ಸಂಘದ ಸದಸ್ಯರು ಹಾಗೂ ಪ್ರಾಂಶುಪಾಲರು ಅಭಿನಂದಿಸಿದ್ದಾರೆ.

ನಾಳೆ ಗ್ರಾಹಕರ ಸಂವಾದ ಸಭೆ

◆**ಕಾರವಾರ:** ಕಾರವಾರ ಕಾರ್ಯ ಮತ್ತು ಪಾಲನಾ ಉಪ-ವಿಭಾಗ ಕಚೇರಿಯಲ್ಲಿ ಏ.18ರಂದು ಮಧ್ಯಾಹ್ನ 3.30 ರಿಂದ ಸಂಜೆ 5.30 ಗಂಟೆಯವರೆಗೆ ಗ್ರಾಹಕರ ಸಂವಾದ ಸಭೆ ಹಮ್ಮಿಕೊಳ್ಳಲಾಗಿದೆ. ಗ್ರಾಹಕರು ತಮ್ಮ ವಿದ್ಯುತ್ ಸಂಬಂಧಿತ ಸಮಸ್ಯೆ ಗಳೇನಾದರೂ ಇದ್ದಲ್ಲಿ ಸಭೆಗೆ ಹಾಜರಾಗಿ ತಮ್ಮ ಕುಂದು ಕೊರತೆಗಳ ಅಹವಾಲುಗಳನ್ನು ನೀಡುವಂತೆ ಕಾರವಾರ ಕಾರ್ಯ ಪಾಲನಾ ಮತ್ತು ಉಪವಿಭಾಗದ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್‌ರವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ವಿದ್ಯುತ್ ವ್ಯತ್ಯಯ

◆**ಕಾರವಾರ:** ಕಾರವಾರ ಉಪ ವಿಭಾಗದ ವ್ಯಾಪ್ತಿಯಲ್ಲಿ ಹೆಚ್.ಟಿ ವಾಹಕ ಬದಲಾವಣೆ ಕಾಮಗಾರಿ ಇರುವುದರಿಂದ ಏ.17ರಂದು ಬೆಳಗ್ಗೆ 10 ರಿಂದ ಸಂಜೆ 6 ಗಂಟೆಯವರೆಗೆ ಶಿರವಾಡ ಫೀಡರಿನ ವಿವಿಧ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲ್ಲಿದ್ದು, ಗ್ರಾಹಕರು ಸಹಕರಿಸುವಂತೆ ಕಾರವಾರ ಹೆಸ್ಕಾಂ, ಕಾರ್ಯ ಮತ್ತು ಪಾಲನಾ ಉಪ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ ರವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬೈಕ್ ಕಳ್ಳತನ

◆**ಹಾವೇರಿ:** ಸ್ಥಳೀಯ ನಾಗೇಂದ್ರನಮಟ್ಟಿಯ ಶಾಂತಿನಗರದಲ್ಲಿ ಮನೆಯೊಂದರ ಕಾಂಪೌಂಡ್ ಬಳಿ ನಿಲ್ಲಿಸಿದ್ದ ಬೈಕ್‌ನ್ನು ಕಳ್ಳರು ಕಳ್ಳತನ ಮಾಡಿಕೊಂಡು ಹೋಗಿದ್ದಾರೆ. ತಾಲೂಕಿನ ಆಗಡಿ ಗ್ರಾಮದ ಸುದೀಪ ಅಶೋಕ ಹೆಸರೂರ ಎಂಬಾತನ ಸುಮಾರು 40 ಸಾವಿರ ರೂ.ಕಿಮ್ಮತ್ತಿನ ಬೈಕ್‌ನ್ನು ಮನೆಯೊಂದರ ಕಾಂಪೌಂಡ್‌ನಲ್ಲಿ ನಿಲ್ಲಿಸಿದ್ದಾಗ ಈ ಘಟನೆ ನಡೆದಿದೆ. ಕಳ್ಳರು ಮನೆಯಲ್ಲಿ ಯಾರಿಗೂ ಗೊತ್ತಾಗದಂತೆ ಕಳ್ಳತನ ಮಾಡಿಕೊಂಡು ಹೋಗಿದ್ದಾರೆ ಎಂದು ಸುದೀಪನ ತಂದೆ ಅಶೋಕ ಹೆಸರೇರ್ ದೂರು ದಾಖಲಿಸಿದ್ದಾರೆ. ಹಾವೇರಿ ಶಹರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕೂಡಲೇ ಸಭೆ ನಡೆಸಲು ಹೋರಾಟ ಸಮಿತಿ ಆಗ್ರಹ
ಪಂಪ ಪ್ರಶಸ್ತಿ ಬೆಂಗಳೂರಿನಲ್ಲಿ ನೀಡುವ ಹುನ್ನಾರ

◆**ಬನವಾಸಿ:** ಕನ್ನಡ ರಾಜ್ಯದ ಹೆಮ್ಮೆಯ ಪ್ರತೀಕ, ನಾಡಿನ ಪ್ರತಿಷ್ಠೆಯ ಉತ್ಸವ ಬನವಾಸಿ ಕದಂಬೋತ್ಸವ ಆಚರಣೆಗೆ ದಿನಾಂಕ ನಿಗದಿ ಮಾಡದೆ ಪಂಪ ಪ್ರಶಸ್ತಿ ಆಯ್ಕೆ ಮಾಡಿ ಬೆಂಗಳೂರಿನಲ್ಲಿಯೇ ಪ್ರತಿಷ್ಠಿತ ಪಂಪ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ನಡೆಸುವ ಹುನ್ನಾರ ರಾಜ್ಯ ಸರ್ಕಾರ ಮಾಡಿದಂತಿದ್ದು, ಅದಕ್ಕೆ ಬನವಾಸಿ ನೂತನ ತಾಲೂಕು ರಚನೆ ಹೋರಾಟ ಸಮಿತಿ ತೀವ್ರ ಆಕ್ರೋಶ ವ್ಯಕ್ತ ಪಡಿಸಿದ್ದು, ಈ ಕೂಡಲೇ ಸಭೆ ನಡೆಸಿ ಅಧಿಕೃತ ದಿನಾಂಕ ನಿಗದಿ ಮಾಡುವಂತೆ ಕರ್ನಾಟಕ ರಾಜ್ಯ ಸರ್ಕಾರವನ್ನು ಆಗ್ರಹಿಸಿದೆ.

ಹೋರಾಟ ಸಮಿತಿ ಅಧ್ಯಕ್ಷ ಉದಯಕುಮಾರ್ ಕಾನಳ್ಳಿ, ಗೌರವಾಧ್ಯಕ್ಷ ಸಿ.ಎಫ್.ನಾಯಕ ಮಾಳಂಜಿ, ಕಾರ್ಯದರ್ಶಿ ವಿಶ್ವನಾಥ್ ವಡೆಯರ್ ಜಂಟಿ ಹೇಳಿಕೆಯಲ್ಲಿ ಈ ಆಗ್ರಹ ವನ್ನು ಮಾಡಿದ್ದು, ಸರ್ಕಾರದ ನೀತಿಯನ್ನು ಬಲವಾಗಿ ವಿರೋಧಿಸಿದೆ. ಈ ಬಾರಿಯ ಪ್ರತಿಷ್ಠಿತ ಪಂಪ ಪ್ರಶಸ್ತಿಗೆ ಭಾಜನ ರಾದ ಅತ್ಯುತ್ತಮ ಖ್ಯಾತ ಸಾಹಿತಿಗಳಾದ ಶ್ರೀ ದೇವನೂರು ಮಹಾದೇವ ಅವರನ್ನು ಹೃತ್ಪೂರ್ವಕವಾಗಿ ಅಭಿನಂದಿಸಿದ ಹೋರಾಟ ಸಮಿತಿ ಅವರಲ್ಲಿ ವಿಶೇಷ ವಿನಂತಿ ಕೂಡ ಮಾಡಿದೆ. ಶ್ರೀ ದೇವನೂರು ಮಹಾದೇವ ಅವರು ಕನ್ನಡದ ಕೀರ್ತಿ ಕಳಸ, ಕನ್ನಡ ಭಾಷೆಯ ಉಗಮ ಸ್ಥಾನ ಬನವಾಸಿ ಕದಂಬೋತ್ಸವದಲ್ಲಿಯೇ ಪ್ರಶಸ್ತಿ ಸ್ವೀಕರಿಸಬೇಕು, ಆ ಮೂಲಕ ಕನ್ನಡದ ಅಸ್ಮಿತೆ ಕಾಪಾಡಬೇಕು ಎಂದು ವಿನಂತಿಸುತ್ತಾ, ಬನವಾಸಿಯಲ್ಲಿ ಕದಂಬೋತ್ಸವ ನಡೆಸುವಂತೆ ಸರ್ಕಾರವನ್ನು ಆಗ್ರಹಿಸಬೇಕು ಎಂದೂ ವಿನಂತಿ ಮಾಡಿದೆ.



ವಿಷಯ ಪ್ರಸ್ತಾಪವಾಗಲಿ

ಸಾವಿರಾರು ವರ್ಷ ಇತಿಹಾಸ ಇರುವ ಮಧುಕೇಶ್ವರ ದೇವಸ್ಥಾನ ಸೋರುತ್ತಿರುವ ವಿಷಯ ಇವತ್ತು ಜಗತ್ತಿಗೆ ತಿಳಿದಿರುವ ವಿಷಯ ಎನ್ನುವ ಸಮಿತಿ ಕಾರ್ಯದರ್ಶಿ ವಿಶ್ವನಾಥ್ ವಡೆಯರ್ ಬನವಾಸಿ ಕದಂಬೋತ್ಸವ ಸಭೆಯಲ್ಲಿ ದೇವಸ್ಥಾನ ವಿಷಯ ಪ್ರಸ್ತಾಪವಾಗಲಿ.

ಇತ್ತೀಚಿನ ದಿನಗಳಲ್ಲಿ ಬನವಾಸಿ ಕದಂಬೋತ್ಸವಕ್ಕೆ ಭಾರೀ ಕಡೆಗಣನೆ ಮಾಡಲಾಗುತ್ತಿದೆ, ಬೇರೆಡೆ ಎಲ್ಲಾ ರೀತಿಯ ಉತ್ಸವ ನಡೆಯುತ್ತಿವೆ, ಕನ್ನಡದ ಪ್ರಥಮ ರಾಜಧಾನಿಗೆ ಈ ಕಡೆಗಣನೆ ಕನ್ನಡಿಗರಿಗೆ ಮಾಡುವ ಅಪಮಾನ ವಾಗಿದ್ದು ರಾಜ್ಯದ ಎಲ್ಲ ಕನ್ನಡ ಪರ ಸಂಘಟನೆಗಳು ರಾಜ್ಯಾದ್ಯಂತ ಹೋರಾಟ ನಡೆಸಿ ಇದನ್ನು ವಿರೋಧಿಸಬೇಕು ಎಂದು ಕರೆ ನೀಡಿದ್ದಾರೆ.

> ಕದಂಬೋತ್ಸವ ಇಲ್ಲದ ಪಂಪ ಪ್ರಶಸ್ತಿ ಪ್ರದಾನ ಹಾಗೂ ಪಂಪ ಪ್ರಶಸ್ತಿ ಇಲ್ಲದ ಕದಂಬೋತ್ಸವ ಆಚರಣೆ ಎರಡು ಕೂಡ ಕನ್ನಡ ನಾಡಿಗೆ ಮಾಡುವ ಅವಮಾನ.
> ■ ಉದಯಕುಮಾರ್ ಕಾನಳ್ಳಿ, ಹೋರಾಟ ಸಮಿತಿ ಅಧ್ಯಕ್ಷ

ನಾಡಿನ ಪ್ರತಿಷ್ಠೆಯ ಕದಂಬೋತ್ಸವದಲ್ಲಿ ಕೊಡಮಾಡುವ ಪ್ರತಿಷ್ಠಿತ ಪಂಪ ಪ್ರಶಸ್ತಿ ಆಯ್ಕೆ ಸಮಿತಿಯಲ್ಲಿ ಸ್ಥಳೀಯ ಶಾಸಕರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರು ಇವರನ್ನು ಸೇರಿಸಿ ಅವರ ಎದುರಿಗೆ ಪ್ರಶಸ್ತಿ ಆಯ್ಕೆ ಆದರೆ ಕದಂಬೋತ್ಸವ ವಿಚಾರ ಪ್ರಸ್ತಾಪ ಕೂಡ ಆಗುತ್ತದೆ ಎಂದು ಸಮಿತಿ ಗೌರವಾಧ್ಯಕ್ಷ ಸಿ.ಎಫ್.ನಾಯಕ ಮಾಳಂಜಿ ಹೇಳಿದ್ದಾರೆ.

ಕಾರ್ಯಕ್ರಮ ಮುತುವರ್ಜಿ ವಹಿಸುತ್ತಿರುವ ಶಾಸಕರು ಶಿವರಾಮ ಹೆಬ್ಬಾರ ಅವರು ಮತ್ತು ಜಿಲ್ಲಾ ಉಸ್ತುವಾರಿ ಸಚಿವರು ಮಂಕಾಳು.ಎಸ್. ವೈದ್ಯ ಅವರ ಬನವಾಸಿ ಮೇಲಿನ ಕಾಳಜಿ ನಾವು ಕೊಂಡಾಡುತ್ತೇವೆ. ಒಟ್ಟಾರೆ ರಾಜ್ಯದ ಕನ್ನಡ ಪರ ಸಂಘಟನೆಗಳು , ಪಂಪ ಪ್ರಶಸ್ತಿ ಪಡೆದ ಮಹಾನ್ ಸಾಹಿತಿಗಳು ಬನವಾಸಿ ನಾಡಿನ ಪ್ರತಿಷ್ಠೆಯ ಕದಂಬೋತ್ಸವದ ಬಗ್ಗೆ ಸರ್ಕಾರದ ಮನವೊಲಿಸಲು ಪ್ರಯತ್ನ ಮಾಡಬೇಕು, ಜಿಲ್ಲಾಡಳಿತ ಈ ಕುರಿತು ಸರ್ಕಾರದೊಂದಿಗೆ ಚರ್ಚೆ ನಡೆಸಿ, ರಾಜಕೀಯ ಪ್ರಭುಗಳು ಎಚ್ಚೆತ್ತು ಈ ಬಗ್ಗೆ ಚರ್ಚೆ ಮಾಡಲಿ ಎಂದು ಹೋರಾಟ ಸಮಿತಿ ಆಗ್ರಹಿಸಿದೆ.

ಕಾಂಗ್ರೆಸ್‌ನಿಂದ ಕೀಳು ಮಟ್ಟದ ರಾಜಕಾರಣ: ಸದಾನಂದ ಭಟ್

◆**ಶಿರಸಿ:** ಜಿಲ್ಲೆಯ ಪರಿಸರಕ್ಕೆ ಮಾರಕವಾಗಿರುವ ಶರಾವತಿ ಪಂಪ್ಡ್ ಸ್ಟೋರೇಜ್ ಹಾಗೂ ಬೇಡ್ತಿ-ವರದಾ ನದಿ ಜೋಡಣೆ ಯೋಜನೆಗಳ ವಿಚಾರದಲ್ಲಿ ರಾಜ್ಯ ಕಾಂಗ್ರೆಸ್ ಸರ್ಕಾರವು ಜಿಲ್ಲೆಯ ಜನರ ಕಣ್ಣಿಗೆ ಮಣ್ಣೆರಚುವ ಕೀಳುಮಟ್ಟದ ರಾಜಕಾರಣ ಮಾಡುತ್ತಿದೆ ಎಂದು ಬಿಜೆಪಿ ಜಿಲ್ಲಾ ವಕ್ತಾರ ಸದಾನಂದ ಭಟ್ ಕಿಡಿಕಾರಿದ್ದಾರೆ.



ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಮಗುವನ್ನು ಚಿವುಟಿ ತೊಟ್ಟಿಲು ತೂಗುವ ಕೆಲಸವನ್ನು ಸರ್ಕಾರ ಮಾಡುತ್ತಿದೆ ಎಂದು ಟೀಕಿಸಿದ್ದಾರೆ. ಇಷ್ಟು ದಿನ ಈ ಯೋಜನೆಗಳನ್ನು ಬಿಜೆಪಿ ರೂಪಿಸಿದೆ ಎಂದು ಬೊಬ್ಬೆ ಹೊಡೆಯುತ್ತಿದ್ದ ಜಿಲ್ಲೆಯ ಉಸ್ತುವಾರಿ ಸಚಿವರು ಮತ್ತು ಕಾಂಗ್ರೆಸ್ ಶಾಸಕರು ಈಗ ಅಕ್ಷರಶಃ ಬೆತ್ತಲಾಗಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯನವರು ಪ್ರಧಾನಿ ಮೋದಿ ಅವರಿಗೆ ಸಲ್ಲಿಸಿದ ಮನವಿಯಲ್ಲಿ ಈ ಎರಡೂ ಯೋಜನೆಗಳನ್ನು ವಿಶೇಷ ಆದ್ಯತೆಯ ಮೇಲೆ ಜಾರಿಗೊಳಿಸಬೇಕೆಂದು ಒತ್ತಾಯಿಸಿದ್ದಾರೆ. ಜಿಲ್ಲೆಯ ಜನರ ಮುಂದೆ ಯೋಜನೆಗೆ ವಿರೋಧವಿದೆ ಎಂದು ಸುಳ್ಳು ಹೇಳುವ ಇವರು, ದೆಹಲಿಯಲ್ಲಿ ಯೋಜನೆಗಾಗಿ ಪಟ್ಟು ಹಿಡಿಯುತ್ತಿರುವುದು ಜಿಲ್ಲೆಗೆ ಮಾಡಿದ ದ್ರೋಹ ಎಂದು ಭಟ್ ಕಿಡಿಕಾರಿದರು.

ಈ ಹಿಂದೆ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಕಾರವಾರದಲ್ಲಿ ಬಹಿರಂಗವಾಗಿಯೇ ಈ ಯೋಜನೆಗಳನ್ನು ಜಾರಿಗೊಳಿಸಿಯೇ ಸಿದ್ಧ ಎಂದು ಗುಡುಗಿದ್ದರು. ಜಿಲ್ಲೆಯ ಜನರ ತೀವ್ರ ವಿರೋಧದ ಬಗ್ಗೆ ಸರ್ಕಾರಕ್ಕೆ ಸ್ಪಷ್ಟ ಮಾಹಿತಿಯಿದ್ದರೂ, ನೈಸರ್ಗಿಕ ಸಂಪತ್ತು ನಾಶ ಮಾಡುವ ಇಂತಹ ಯೋಜನೆಗಳಿಗೆ ಅನುಮತಿ ನೀಡುವಂತೆ ಕೇಂದ್ರವನ್ನು ಒತ್ತಾಯಿಸುತ್ತಿರುವ ರಾಜ್ಯ ಸರ್ಕಾರದ ನಿಲುವು ಸರಿಯಲ್ಲ ಎಂದು ಅವರು ಆಕ್ಷೇಪ ವ್ಯಕ್ತಪಡಿಸಿದರು.

ಬಿಜೆಪಿಯು ಜಾತಿಯ ಆಧಾರದಲ್ಲಿ ಜನರನ್ನು ಶೋಷಿಸುತ್ತಿದೆ ಎಂಬ ಕಾಂಗ್ರೆಸ್ ನಾಯಕರ ಹೇಳಿಕೆಗಳು ಅವರ ಹತಾಶೆಯನ್ನು ತೋರಿಸುತ್ತವೆ. ಹಿಂದೂ ಕಾರ್ಯಕರ್ತರ ಮೇಲೆ ಕಾಂಗ್ರೆಸ್ ದಾಖಲಿಸಿದ್ದ ಸುಳ್ಳು ಮೊಕದ್ದಮೆಗಳನ್ನು ಬಿಜೆಪಿ ಸರ್ಕಾರ ಹಿಂತೆಗೆದುಕೊಂಡು ನ್ಯಾಯ ಒದಗಿಸಿತ್ತು. ಸಂಕಷ್ಟದಲ್ಲಿರುವ ತನ್ನ ಕಾರ್ಯಕರ್ತರ ಜೊತೆಗೆ ಬಿಜೆಪಿ ಸದಾ ಇರುತ್ತದೆ ಎಂಬುದು ಕಾಂಗ್ರೆಸ್‌ಗೆ ನೆನಪಿರಲಿ ಎಂದು ಅವರು ತಿರುಗೇಟು ನೀಡಿದರು.

ಆರ್‌ಎಸ್‌ಎಸ್ ಮತ್ತು ಬಿಜೆಪಿಯ ವಿರುದ್ಧ ದ್ವೇಷಪೂರಿತ ಮಾತುಗಳನ್ನು ಆಡುವುದನ್ನು ಬಿಟ್ಟು, ಜಿಲ್ಲೆಯ ಹಿತಾಸಕ್ತಿ ಕಾಪಾಡುವಂತೆ ಮುಖ್ಯಮಂತ್ರಿಗಳ ಮೇಲೆ ಒತ್ತಡ ಹೇರುವ ಧೈರ್ಯವನ್ನು ಜಿಲ್ಲಾ ಕಾಂಗ್ರೆಸ್ ನಾಯಕರು ತೋರಿಸಲಿ. ಅಭಿವೃದ್ಧಿಯ ಹೆಸರಿನಲ್ಲಿ ಜಿಲ್ಲೆಯ ಸರ್ವನಾಶಕ್ಕೆ ಮುಂದಾಗಿರುವ ಸರ್ಕಾರದ ನಾಟಕಕ್ಕೆ ಮುಂದಿನ ದಿನಗಳಲ್ಲಿ ಜಿಲ್ಲೆಯ ಜನತೆ ತಕ್ಕ ಶಾಸ್ತಿ ಮಾಡಲಿದ್ದಾರೆ ಎಂದು ಸದಾನಂದ ಭಟ್ ಪ್ರಕಟಣೆಯಲ್ಲಿ ಎಚ್ಚರಿಸಿದ್ದಾರೆ.

ಹಿತ್ತಲಕೆರೆಗೆ ತಡೆಗೋಡೆ ನಿರ್ಮಿಸಲು ಒತ್ತಾಯ



◆**ಮುಂಡಗೋಡ:** ತಾಲೂಕಿನ ಚವಡಳ್ಳಿ ಗ್ರಾಪಂ ವ್ಯಾಪ್ತಿಯ ಲಕ್ಕೊಳ್ಳಿ ಗ್ರಾಮದ ಹಿತ್ತಲಕೆರೆಗೆ ತಡೆಗೋಡೆ ನಿರ್ಮಿಸುವಂತೆ ಗ್ರಾಮಸ್ಥರು ಆಗ್ರಹಿಸಿದ್ದಾರೆ.

ಗ್ರಾಮದ ಸಮೀಪದ ಹಿತ್ತಲಕೆರೆಗೆ ಯಾವುದೇ ತಡೆಗೋಡೆ ಇಲ್ಲದ ಕಾರಣ ಯುವಕರು, ಮಕ್ಕಳು ತಿಳಿಯದೆ ಕೆರೆಗೆ ಇಳಿದು ಜೀವಹಾನಿ ಮಾಡಿಕೊಳ್ಳುವ ಸಾಧ್ಯತೆಯಿದೆ ಎಂದು ಗ್ರಾಮಸ್ಥರು ಆತಂಕ ವ್ಯಕ್ತಪಡಿಸಿದ್ದಾರೆ.

ಕೆರೆಗೆ ತಡೆಗೋಡೆ ನಿರ್ಮಿಸುವಂತೆ ಗ್ರಾಪಂ ಸಭೆಯಲ್ಲಿಯೂ ಠರಾವು ಮಾಡಲಾಗಿದ್ದು, ಹಲವು ತಿಂಗಳು ಕಳೆದರೂ ಯಾವುದೇ ಕ್ರಮವಾಗಿಲ್ಲ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗೆ ಕರೆ ಮಾಡಿದರೆ ಸ್ಪಂದಿಸುತ್ತಿಲ್ಲ, ಈ ಕುರಿತು ಮೇಲಾಧಿಕಾರಿಗಳಿಗೂ ಗಮನಕ್ಕೂ ತರಲಾಗಿದೆ. ಹಿತ್ತಲಕೆರೆಗೆ ಯಾವುದೇ ಸುರಕ್ಷತಾ ಕ್ರಮಗಳನ್ನು ಸಂಬಂಧಿಸಿ ಅಧಿಕಾರಿಗಳು ಇದುವರೆಗೂ ತೆಗೆದುಕೊಂಡಿಲ್ಲ, ಮಳೆಗಾಲದಲ್ಲಿ ರಸ್ತೆ ಅಂಚಿನವರೆಗೂ ನೀರು ಬರುತ್ತದೆ. ಶಾಲೆ ಬಿಟ್ಟ ನಂತರ ಮಕ್ಕಳು ಕೆರೆಯತ್ತ ಧಾವಿಸುತ್ತಾರೆ. ಮಕ್ಕಳ ಜೀವಕ್ಕೆ ಅಪಾಯವಾಗುವ ಆತಂಕವಿದೆ. ಕೂಡಲೇ ಕ್ರಮ ಕೈಗೊಳ್ಳದಿದ್ದರೆ ಪ್ರತಿಭಟನೆ ನಡೆಸಲಾಗುವುದು ಎಂದು ಗ್ರಾಮಸ್ಥರಾದ ಮನ್ಸೂರಲಿ ಲತಿಪಾನವರ, ಅರ್ಜುನ ಭೋವಿವಡ್ಡರ, ಚಂದ್ರು ವಾಲ್ಮೀಕಿ, ಪರಮೇಶ್ವರ ಪಾಟೀಲ, ರಮೇಶ ಭೋವಿವಡ್ಡರ, ಸಂಜು ದೇಸಳ್ಳಿ ಎಚ್ಚರಿಸಿದರು.

ಮೊನ್ನೆ ಹಿತ್ತಲಕೆರೆಯ ನೀರಿನಲ್ಲಿ ದೊಡ್ಡ ಅನಾಹುತವೇ ಸಂಭವಿಸುವ ಸಾಧ್ಯತೆ ಇತ್ತು. ಏಳೆಂಟು ಮಕ್ಕಳು ಕೆರೆಯ ಬಳಿ ಬಂದು ನೀರಿನಲ್ಲಿ ಆಟವಾಡುತ್ತಿದ್ದರು ಆ ವೇಳೆ ನಾನು ಹೋಗಿ ಮಕ್ಕಳಿಗೆ ಗದರಿಸಿ ಕಳಸಿದೆ. ಅಕಸ್ಮಾತ್ ನಾನು ಹೋದೆ. ಇದೊಂದು ಅಪಾಯದ ಸ್ಥಳ ಎಂದರು ತಪ್ಪಾಗಲಾಗದು. ತಡೆಗೋಡೆ ನಿರ್ಮಿಸುವಂತೆ ಒತ್ತಾಯಿಸಿದರು. ಅಧಿಕಾರಿಗಳು ಸ್ಪಂದಿಸುತ್ತಿಲ್ಲ ಎಂದು ಮನ್ಸೂರಲಿ ಲತೀಪಾನವರ ಬೇಸರ ವ್ಯಕ್ತಪಡಿಸಿದರು.

ಶಾಂತಿನಿಕೇತನ ವಿದ್ಯಾರ್ಥಿಗಳ ಗ್ರ್ಯಾಜುಯೆಷನ್ ಡೇ

◆**ಅಂಕೋಲಾ:** ತಾಲೂಕಿನಪ್ರತಿಷ್ಠಿತ ಶಿಕ್ಷಣ ಸಂಸ್ಥೆಯಾದ ಶಾಂತಿನಿಕೇತನ ಪೂರ್ವ ಪ್ರಾಥಮಿಕ ಶಾಲೆಯಲ್ಲಿ ಯು.ಕೆ.ಜಿ ವಿದ್ಯಾಭ್ಯಾಸ ಮುಗಿಸಿದ ವಿದ್ಯಾರ್ಥಿಗಳಿಗೆ ಗ್ರ್ಯಾಜುಯೆಷನ್ ಡೇ ಎಂಬ ವಿನೂತನ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು.

ಕಾರ್ಯಕ್ರಮವನ್ನು ನಾರಾಯಣ ನಾಯಕ, ಮಾಜಿ ಗ್ರಾಪಂ ಸದಸ್ಯರು,ವಂದಿಗೆ ಕಾರ್ಯಕ್ರಮ ಉದ್ಘಾಟಿಸಿದರು.

ಅಂಕೋಲಾದಲ್ಲಿ ಕಳೆದ 10 ವರ್ಷಗಳಿಂದ ಪೂರ್ವ ಪ್ರಾಥಮಿಕ ಶಾಲೆಯನ್ನು ವಿನೂತನ ರೀತಿಯಲ್ಲಿ ಯಶಸ್ವಿಯಾಗಿ ನಡೆಸಿಕೊಂಡು ಬಂದ ಶಾಂತಿನಿಕೇತನ ಟ್ರಸ್ಟ್ ಅಂಕೋಲಾ ತಾಲೂಕಿಗೆ ಹೆಮ್ಮೆಯಾಗಿದೆ ಎಂದು ನಾರಾಯಣ ನಾಯಕ ಅಭಿಪ್ರಾಯ ವ್ಯಕ್ತಪಡಿಸಿದರು. ಮುಖ್ಯ ಅಥಿತಿಗಳಾಗಿ ಆಗಮಿಸಿದ ಪತ್ರಕರ್ತ ವಾಸುದೇವ ಗುನಗಾ ಮಾತನಾಡಿ, ಶಾಲೆಯಲ್ಲಿ ಪುಟಾಣಿ ಮಕ್ಕಳ ವ್ಯಕ್ತಿತ್ವ ವಿಕಸನಕ್ಕೆ ಬೇಕಾದ ರೀತಿಯಲ್ಲಿ ಶಿಕ್ಷಣ ನೀಡುತ್ತಾ ಬಂದಿರುತ್ತಾರೆ ಎಂದರು. ಇನ್ನೋರ್ವ ಅಥಿತಿ ಡಾ.ದೀಪಕ್ ದುಗ್ಗಾಣಿ, ಶಾಂತಿನಿಕೇತನ ಟ್ರಸ್ಟ್‌ನ ನಿರ್ದೇಶಕರಾದ ಡಾ.ಸಂಜು ನಾಯಕ ಮಾತನಾಡಿದರು.



ಈ ಕಾರ್ಯಕ್ರಮದಲ್ಲಿ ತಮ್ಮ ಅನಿಸಿಕೆಗಳನ್ನು ಹಂಚಿಕೊಂಡ ಪಾಲಕರು ತಮ್ಮ ಮಕ್ಕಳಿಗೆ ತಾವು ಸರಿಯಾದ ಶಾಲೆಯನ್ನೇ ಆಯ್ಕೆ ಮಾಡಿದ್ದೇವು, ತಮ್ಮ ಮಗುವಿನ ವೈಯಕ್ತಿಕ ಪ್ರಗತಿ ನಮ್ಮಲ್ಲಿ ಶಾಲೆಯ ಬಗ್ಗೆ ಹೆಮ್ಮೆ ತೋರಿಸಿದೆ ಎಂದರು. ಶಿಕ್ಷಕಿ ಶ್ರದ್ಧಾ ಆಚಾರ್ಯ ನಿರೂಪಣೆ ಶೀತಲ್ ನಾಯ್ಕ್, ವಂದನಾರ್ಪಣೆ ಮಮತಾ ನಾಯ್ಕ, ಸ್ವಾಗತ ಶಿಕ್ಷಕಿ ಮೈತ್ರಿ ಭಟ್ ಹಾಗೂ ಎಲ್ಲಾ ಸಹಾಯಕ ಸಿಬ್ಬಂದಿ ಉಪಸ್ಥಿತರಿದ್ದರು.

ಆರೋಪಿಗಳ ವಿರುದ್ಧ ಕ್ರಮ ಕೈಗೊಳ್ಳಲು ಒತ್ತಾಯ

◆**ಹಳಿಯಾಳ:** ಹುಬ್ಬಳ್ಳಿಯ ಫಿಟ್ನೆಸ್ ಜಿಮ್‌ನಲ್ಲಿ ನಡೆದಿರುವ ಸಂಘಟಿತ ಲೈಂಗಿಕ ಶೋಷಣೆ ಪ್ರಕರಣದ ವಿರುದ್ಧ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ಹಿಂದೂರಾಷ್ಟ್ರ ಸಮನ್ವಯ ಸಮಿತಿಯವರು ಹಳಿಯಾಳದಲ್ಲಿ ತಹಶೀಲ್ದಾರರಿಗೆ ಮನವಿ ಸಲ್ಲಿಸಿದರು.



ಸಮೀರ್ ಮುಲ್ಲಾ ಮತ್ತು ತೈಸೀಮ್ ಮುಲ್ಲಾ ಪ್ರಮುಖ ಆರೋಪಿಗ ಳಾಗಿದ್ದು, ಯುವತಿಯರನ್ನು ಪರಿಚಯದ ಮೂಲಕ ಸೆಳೆದು ಶೋಷಣೆ ನಡೆಸಲಾಗಿದೆ. ಪಾನೀಯಗಳಲ್ಲಿ ಮದ್ದು ಬೆರೆಸಿ ಅತ್ಯಾಚಾರ ನಡೆಸಿ, ಖಾಸಗಿ ಫೋಟೋ ಮತ್ತು ವೀಡಿಯೊಗಳನ್ನು ದಾಖಲಿಸಿ ಅವುಗಳ ಮೂಲಕ ಬ್ಲ್ಯಾಕ್‌ಮೇಲ್ ಹಾಗೂ ಮತಾಂತರಕ್ಕೆ ಒತ್ತಾಯ ಮಾಡಲಾಗಿದೆ.

ಪೊಲೀಸರ ತನಿಖೆಯಲ್ಲಿ ಆರೋಪಿಯ ಮೊಬೈಲ್‌ನಲ್ಲಿ ಹಲವು ಅರೆನಗ್ನ ಚಿತ್ರಗಳು ಪತ್ತೆಯಾಗಿದ್ದು, ಕೆಲ ಪೀಡಿತರು ಮುಂದೆ ಬಂದು ದೂರು ನೀಡಿದ್ದು, ಒಬ್ಬ ಮಹಿಳೆ ತನ್ನ ಖಾಸಗಿ ವಿಡಿಯೋ ಆಧರಿಸಿ ಹಣ ವಸೂಲಿ ಮಾಡಲಾಗಿದೆ ಎಂದು ಹೇಳಿಕೆ ನೀಡಿದ್ದಾಳೆ.

ಮಹಿಳೆಯರ ಮೇಲೆ ಲೈಂಗಿಕ ಕಿರುಕುಳ, ಬ್ಲ್ಯಾಕ್‌ಮೇಲ್ ಮತ್ತು ಮೋಸದ ಪ್ರಕರಣಗಳು ಹೆಚ್ಚುತ್ತಿರುವ ಹಿನ್ನೆಲೆ ತಕ್ಷಣ ಕ್ರಮ ಕೈಗೊಳ್ಳಬೇಕು.ವಿಶೇಷ ತನಿಖಾ ದಳ ರಚಿಸುವುದು, ಸಂಬಂಧಿತ ಜಿಮ್‌ಗಳನ್ನು ಸೀಲ್ ಮಾಡುವುದು, ಎಲ್ಲಾ ಜಿಮ್ ಸಿಬ್ಬಂದಿಗೆ ಪೊಲೀಸ್ ಪರಿಶೀಲನೆ ಕಡ್ಡಾಯಗೊಳಿಸುವುದು, ಮಹಿಳಾ ಸುರಕ್ಷತಾ ಕ್ರಮಗಳನ್ನು ಬಲಪಡಿಸುವುದು ಜೊತೆಗೆ ಪೀಡಿತರ ಗೌಪ್ಯತೆ ಕಾಪಾಡಿ ಅವರಿಗೆ ಅಗತ್ಯ ರಕ್ಷಣೆ ಒದಗಿಸುವಂತೆ ಆಗ್ರಹಿಸಲಾಗಿದೆ.

ಈ ಸಂದರ್ಭದಲ್ಲಿ ಸುಧಾ ಶೆಟ್ಟಿ, ಗಣೇಶ ಕುಂದೇಕರ್, ಗಜಾನನ ಪಾಲ್ಕರ್, ವಿನೋದ ಘೀಂಡೆ, ನೀಲಕಂಠ ತೇಲಿ, ಮಂಜು ಗಾಡಿ, ಶಂಕರ ರೇಣಕೆ, ಅಮಿತ ಗೊಂದಳಿ, ಜಿ.ಡಿ. ಗಂಗಾಧರ, ಶಿವಾನಂದ ಶೆಟ್ಟರ, ಪೂಜಾ ಧೂಳಿ, ಪದ್ಮಾ ಧೂಳಿ, ವಿಠೋಬಾ ಮಾಲ್ಸೆಕರ ಹಾಗೂ ಇತರರು ಇದ್ದರು.

ಜನಮನ ರಂಜಿಸಿದ ಚಂದ್ರಹಾಸ ಚರಿತ್ರೆ

◆**ಅಂಕೋಲಾ:** ತಾಲೂಕಿನ ಕುಂಬಾರಕೇರಿಯ ಪುರಾತನ ಪ್ರಸಿದ್ಧ ಶ್ರೀಕದಂಬೇಶ್ವರ ದೇವಾಲಯದ ವಾರ್ಷಿಕ ವರ್ಧಂತಿ ಉತ್ಸವದ ಪ್ರಯುಕ್ತ ನಡೆದ ಚಂದ್ರಹಾಸ ಚರಿತ್ರೆ, ಪೌರಾಣಿಕ ಯಕ್ಷಗಾನ ಜನಮನ ರಂಜಿಸಿತು.

ಹಿಮ್ಮೇಳದಲ್ಲಿ ಶಂಕರ ಭಟ್ಟ ಬ್ರಹ್ಮೂರು ಅವರ ತಂಡ ಯಕ್ಷಗಾನದ ಸಾಂಪ್ರದಾಯಿಕ ಶೈಲಿಯ ಹಾಡುಗಾರಿಕೆ ಚಂಡೆ ಮದ್ದಲೆಗಳ ಸಮ್ಮಿಲನದೊಂದಿಗೆ ಗಾನಸುಧೆ ಹರಿಸಿದರು. ಮುಮ್ಮೇಳದಲ್ಲಿ ಖ್ಯಾತ ಕಲಾವಿದ ಸುಬ್ರಹ್ಮಣ್ಯ ಚಿಟ್ಟಾಣಿ ಅವರು ಮಹಾಮಂತ್ರಿ ದುಷ್ಟಬುದ್ಧಿಯಾಗಿ ರೌದ್ರ ರಸದ ಅಭಿನಯ ಕುಣಿತ ಹಾವಭಾವಗಳ ಮೂಲಕ ತಂದೆ ಚಿಟ್ಟಾಣಿ ರಾಮಚಂದ್ರ ಹೆಗಡೆ ಅವರ ದುಷ್ಟಬುದ್ಧಿಯ ವೇಷವನ್ನು ನೆನಪಿಸಿದರು.

ಚಂದ್ರಹಾಸನಾಗಿ ಅಂಕೋಲೆಯ ಉದಯೋನ್ಮುಖ ಕಲಾವಿದ ವೀರೇಂದ್ರ ಆಗೇರ ವಂದಿಗೆ ತಮ್ಮ ಚುರುಕಿನ ಕುಣಿತದ ಮೂಲಕ ಗಮನ ಸೆಳೆದರೆ ಗುರು ಭಟ್ಟ ಅವರ ಮದನ, ರಾಜು ಅಮದಳ್ಳಿ ಅವರ ಕುಳಿಂದ, ಸಂತೋಷ ಹೆಮ್ಮಾಡಿ ಅವರ ವಿಷಯೆ ಪಾತ್ರ, ಉತ್ತಮವಾಗಿ ಮೂಡಿಬಂತು.

ನಾಗೇಂದ್ರ ಮೂರೂರು ಅವರು ದೂತ ಮತ್ತು ಬ್ರಾಹ್ಮಣ ವೇಷದ ಮೂಲಕ ಹಾಸ್ಯದ ಹೊನಲು ಹರಿಸಿದರೆ ಕುಂಬಾರಕೇರಿಯ ರಂಗಭೂಮಿ ಕಲಾವಿದ ರಾಮಾ ನಾಯ್ಕ ಕಟುಕನಾಗಿ ಉತ್ತಮ ನಿರ್ವಹಣೆ ತೋರಿದರು. ದರ್ಶನ ನೀಡುವ ಶ್ರೀಕಾಳಿಕಾ ದೇವಿಯಾಗಿ ಕುಂಬಾರಕೇರಿಯ ಪುಟಾಣಿ ಕಲಾವಿದೆ ರೋಶನಿ ನಾಗೇಂದ್ರ ನಾಯ್ಕ ತಮ್ಮ ಪ್ರಥಮ ಪ್ರಯತ್ನದಲ್ಲೇ ಸನ್ನಿವೇಶಕ್ಕೆ ಪೂರಕವಾಗಿ ಸ್ಪಷ್ಟವಾದ ಸಂಭಾಷಣೆಯ ಮೂಲಕ ಹಿರಿಯ ಕಲಾವಿದರು ಮತ್ತು ಪ್ರೇಕ್ಷಕರ ಮೆಚ್ಚುಗೆ ಪಡೆದರು. ತೆರೆಯ ಹಿಂದೆ ಪ್ರಸಾದನ ಮೇಕಪ್ ಕಲಾವಿದರಾಗಿ ಚಂದು ನಾಯ್ಕ ರಥಬೀದಿ ಅವರು ಸಹಕರಿಸಿದರು.



ದೇವರ ವರ್ಧಂತಿ ಉತ್ಸವದ ಪ್ರಯುಕ್ತ ದೇವಾಲಯದ ಪ್ರಧಾನ ಅರ್ಚಕ ಅವಿನಾಶ ಜೋಷಿ ಅವರ ನೇತೃತ್ವದಲ್ಲಿ ನವಗ್ರಹ ಹೋಮ, ಕಲಾಹೋಮ ಮೊದಲಾದ ಧಾರ್ಮಿಕ ಕಾರ್ಯಕ್ರಮಗಳು ಮಧ್ಯಾಹ್ನ ದೇವರ ಮಹಾಪೂಜೆ ಸಾರ್ವಜನಿಕ ಅನ್ನ ಸಂತರ್ಪಣೆ ನಡೆಯಿತು. ಸುತ್ತ ಮುತ್ತಲಿನ ಸಾವಿರಾರು ಜನ ಭಕ್ತರು ಆಗಮಿಸಿ ದೇವರ ಅನ್ನ ಪ್ರಸಾದ ಸ್ವೀಕರಿಸಿದರು. ಲಕ್ಷ್ಮೇಶ್ವರ, ಕುಂಬಾಕೇರಿ ಸುತ್ತ ಮುತ್ತಲಿನ ಸ್ಥಳೀಯರು ಸ್ವಯಂ ಸೇವಕರಾಗಿ ಸೇವೆ ಸಲ್ಲಿಸಿದರು.

ಪಕ್ಷೇತರನಾಗಿ ಸ್ಪರ್ಧೆ: ಸುಧೀಂದ್ರ ದೇಶಪಾಂಡೆ

◆**ಶಿರಸಿ:** ಕರ್ನಾಟಕ ಪಶ್ಚಿಮ ಪದವೀಧರರ ಕ್ಷೇತ್ರದಿಂದ ಈ ಬಾರಿ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸುವುದು ಖಚಿತ ಎಂದು ಕ.ವಿ.ವಿ ಮಾಜಿ ಸಿಂಡಿಕೇಟ್ ಸದಸ್ಯ ಹಾಗೂ ಬಿಜೆಪಿ ಶಿಕ್ಷಣ ಪ್ರಕೋಷ್ಠದ ರಾಜ್ಯ ಸಮಿತಿ ಸದಸ್ಯ ಸುಧೀಂದ್ರ ದೇಶಪಾಂಡೆ ಘೋಷಿಸಿದ್ದಾರೆ.

ನಗರದ ಮಧುವನ ಹಾಲ್‌ನಲ್ಲಿ ಗುರುವಾರ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಪದವೀಧರರ ಸಮಸ್ಯೆಗಳಿಗೆ ಸ್ಪಂದಿಸಲು ಕಳೆದ ಐದು ವರ್ಷಗಳಿಂದ ಸಿದ್ಧತೆ ನಡೆಸುತ್ತಿದ್ದೇನೆ. ಈ ಬಾರಿ ಹೊಸ ಮುಖಗಳಿಗೆ ಹಾಗೂ ಸಂಘ ಪರಿವಾರದ ಹಿನ್ನೆಲೆಯುಳ್ಳವರಿಗೆ ಟಿಕೆಟ್ ನೀಡಬೇಕೆಂದು ಪಕ್ಷದ ಹಿರಿಯ ನಾಯಕರಲ್ಲಿ ವಿನಂತಿಸಿದ್ದೆವು. ಆದರೆ, ಕೊನೆ ಕ್ಷಣದಲ್ಲಿ ಬಿಜೆಪಿಯಿಂದ ಟಿಕೆಟ್ ತಪ್ಪಿದ್ದರೂ ಸಹ, ಪದವೀಧರರ ಹಿತದೃಷ್ಟಿಯಿಂದ ಚುನಾವಣಾ ಕಣಕ್ಕಿಳಿಯಲು ನಿರ್ಧರಿಸಿದ್ದೇನೆ ಎಂದು ತಿಳಿಸಿದರು.



ಕಳೆದ 35 ವರ್ಷಗಳಿಂದ ಸಂಘಟನೆಯಲ್ಲಿ ನಿಷ್ಠಾವಂತ ಕಾರ್ಯಕರ್ತನಾಗಿ ದುಡಿದಿದ್ದೇನೆ. 2022ರಲ್ಲಿಯೇ ಸ್ಪರ್ಧೆಗೆ ಇಚ್ಛಿಸಿದ್ದರೂ ರಾಜಕೀಯ ಬೆಳವಣಿಗೆಯಿಂದ ಅವಕಾಶ ಸಿಕ್ಕಿರಲಿಲ್ಲ. ನಾನು ಬಿಜೆಪಿ ಬಂಡಾಯ ಅಭ್ಯರ್ಥಿಯಲ್ಲ, ಬಿಜೆಪಿಯಲ್ಲೇ ಇದ್ದು ಕಾಂಗ್ರೆಸ್ ವಿರುದ್ಧ ಸ್ಪರ್ಧಿಸುತ್ತಿದ್ದೇನೆ ಎಂದು ಅವರು ಸ್ಪಷ್ಟಪಡಿಸಿದರು.

ತಮ್ಮ ಆದ್ಯತೆಗಳ ಬಗ್ಗೆ ಮಾತನಾಡಿದ ಅವರು, ಸರ್ಕಾರಿ ಉರ್ದು ಶಾಲೆಗಳ ಮಾದರಿಯಲ್ಲಿ ಸಂಸ್ಕೃತ ಶಾಲೆಗಳಿಗೂ ಪ್ರೋತ್ಸಾಹ ಸಿಗಬೇಕು. ಉತ್ತರ ಕನ್ನಡ ಜಿಲ್ಲೆಯಲ್ಲಿ ಆಯುರ್ವೇದ ವಿಶ್ವವಿದ್ಯಾಲಯ ಸ್ಥಾಪನೆಯಾಗಬೇಕು ಹಾಗೂ ಹಿರಿಯ ನಾಗರಿಕರ ಸಬಲೀಕರಣಕ್ಕೆ ಒತ್ತು ನೀಡುವ ರಾಜಕಾರಣ ಮಾಡುವುದು ನನ್ನ ಗುರಿಯಾಗಿದೆ ಎಂದರು. ರಾಜ್ಯದ ಸಿದ್ದರಾಮಯ್ಯ ಸರ್ಕಾರವು ಆರ್ಥಿಕವಾಗಿ ದಿವಾಳಿಯಾಗಿದ್ದು, ಗ್ಯಾರಂಟಿ ಯೋಜನೆಗಳು ಕೇವಲ ಪ್ರಚಾರಕ್ಕೆ ಸೀಮಿತವಾಗಿವೆ ಎಂದು ಟೀಕಿಸಿದರು. ಪತ್ರಿಕಾಗೋಷ್ಠಿಯಲ್ಲಿ ಪ್ರಮುಖರಾದ ಡಿ.ಎಸ್. ಹೆಗಡೆ, ರಾಮಕೃಷ್ಣ ಭಟ್ ತದ್ದಲಸೆ ಉಪಸ್ಥಿತರಿದ್ದರು.

ರೈತನ ಎರಡು ಎಕರೆ ಜಮೀನು ಅತಿಕ್ರಮಣ
ಮುಸ್ಲಿಂರ ಸ್ಮಶಾನ ಭೂಮಿಯಾಗಿ ಬಳಕೆ: ಆಕ್ರೋಶ

◆**ಅಂಕೋಲಾ:** ತಾಲೂಕಿನ ಬೊಬ್ರವಾಡ ಗ್ರಾಮದಲ್ಲಿ ರೈತ ಕುಟುಂಬಕ್ಕೆ ಸೇರಿರುವ ಎರಡು ಎಕರೆ ಜಮೀನನ್ನು ಅತಿಕ್ರಮಣ ಮಾಡಿ ಮುಸ್ಲಿಂ ಸ್ಮಶಾನ ಭೂಮಿಯಾಗಿ ಬಳಕೆ ಮಾಡಲಾಗುತ್ತಿದೆ ಎಂದು ರೈತರ ಕುಟುಂಬದ ಜೊತೆಗೆ ಶ್ರೀರಾಮ ಸೇನೆಯ ಮುಖಂಡ ಪ್ರಮೋದ ಮುತಾಲಿಕ್ ಮತ್ತು ಹಿಂದೂ ಸಂಘಟನೆಗಳು ಆರೋಪ

ಮಾಡಿರುವ ಜಮೀನಿನಲ್ಲಿ ಮುಸ್ಲಿಂ ಸಮುದಾಯದ ಮೃತ ವ್ಯಕ್ತಿಯ ಅಂತಿಮ ಕಾರ್ಯ ನಡೆಸಲು ಸಿದ್ಧತೆ ನಡೆಸಿರುವುದಕ್ಕೆ ಜಮೀನಿನ ಹಕ್ಕುದಾರರು ಎಂದುಕೊಳ್ಳುವ ನಾಯ್ಕ ರೈತ ಕುಟುಂಬದವರಿಂದ ವಿರೋಧ ವ್ಯಕ್ತವಾಗಿದ್ದು, ಕೆಲ ಕಾಲ ಉದ್ವಿಗ್ನ ವಾತಾವರಣಕ್ಕೆ ಕಾರಣವಾಗಿದ್ದರಿಂದ ಕೊನೆಗೂ ಬಿಗಿ ಪೊಲೀಸ್ ಬಂದೋಬಸ್ತಿನಲ್ಲಿ ದಫನ್ ಕಾರ್ಯ ನಡೆಸಲಾಯಿತು.

ಪುರಸಭೆ ವ್ಯಾಪ್ತಿಯ ಗೇರುಕೊಪ್ಪ ಬಳಿಯ ಐದು ಎಕರೆ ಜಮೀನು ಭೂನ್ಯಾಯ ಮಂಡಳಿಯಿಂದ ರೈತ ಕುಟುಂಬಕ್ಕೆ ಸೇರಿದೆ ಎಂದು ಆದೇಶವಾಗಿದೆ ಜಮೀನಿನಲ್ಲಿ ಗೇಣಿದಾರರಾಗಿ ಸಾಗುವಳಿ ವಹಿವಾಟು ನಡೆಸುತ್ತಿದ್ದ ಗೇಣಿದಾರ ನಾಯ್ಕ ಕುಟುಂಬದವರು 1973 ರಲ್ಲಿ 1973 ರಲ್ಲಿ ನಮೂನೆ 7 ಭರ್ತಿ ಮಾಡಿ ಭೂ ನ್ಯಾಯ ಮಂಡಳಿಗೆ ಸಲ್ಲಿಸಿದ್ದು ರೈತರ ಹಕ್ಕಿನ ಜಮೀನಿನಲ್ಲಿ ಅಂಜುಮನ್ ಇಸ್ಲಾಂ ಸಂಸ್ಥೆ ಎರಡು ಎಕರೆ ಅತಿಕ್ರಮಣ ಮಾಡಿದ್ದು ಸ್ಮಶಾನದ ಉದ್ದೇಶಕ್ಕೆ ಜಮೀನಿನ ಬಳಕೆ ಮಾಡಲಾಗುತ್ತಿದೆ ಮುಸ್ಲಿಂ ಸಮುದಾಯದ ಧಫನ್ ಕಾರ್ಯಕ್ಕೆ ಮೀಸಲಾಗಿರುವ ಜಮೀನು ಇದ್ದರೂ ಸಹ ಉದ್ದೇಶ ಪೂರ್ವಕ ರೈತರ ಜಮೀನಿನ ಕಬಳಿಕೆ ಮಾಡಲಾಗಿದ್ದು 15 ದಿನಗಳ ಅವಧಿಯಲ್ಲಿ ತೆರುವು ಮಾಡದಿದ್ದರೆ ತಾವೇ ತೆರುವುಗೊಳಿಸುವ ಕೆಲಸ ಮಾಡಬೇಕಾಗುತ್ತದೆ ಎಂದು ಶ್ರೀರಾಮ ಸೇನೆಯ ಮುಖಂಡ ಪ್ರಮೋದ ಮುತಾಲಿಕ್ ಪತ್ರಿಕಾ ಗೋಷ್ಠಿಯ ಮೂಲಕ ಗಡುವು ನೀಡಿದ್ದರು.



ಗುರುವಾರ ಮುಸ್ಲಿಂ ಸಮುದಾಯದ ಪ್ರಮುಖ ವ್ಯಕ್ತಿಯೊಬ್ಬರು ಮೃತಪಟ್ಟ ಹಿನ್ನೆಲೆಯಲ್ಲಿ ಆದೇ ಸ್ಥಳದಲ್ಲಿ ಧಫನ್ ಕಾರ್ಯಕ್ಕೆ ಸಿದ್ಧತೆ ನಡೆಸಿದ್ದು ಜಮೀನಿಗೆ ಸಂಬಂಧಿಸಿದಂತೆ ಉಪ ವಿಭಾಗಾಧಿಕಾರಿಗಳ ನ್ಯಾಯಾಲಯದ ತೀರ್ಪು ಬರಬೇಕಿದ್ದು ಇದೇ ತಿಂಗಳಲ್ಲಿ ಆ ಸಂಬಂಧಿಸಿದ ವಿಚಾರಣೆ ನಡೆಯದಿದೆ ಹೀಗಿರುವಾಗ ಜಮೀನಿನಲ್ಲಿ ಧಫನ್ ನಡೆಸಲು ಬಿಡುವುದಿಲ್ಲ ಎಂದು ರೈತ ಕುಟುಂಬಕ್ಕೆ ಸಂಬಂಧಿಸಿದವರು ಆಕ್ಷೇಪ ವ್ಯಕ್ತಪಡಿಸಿದ್ದು ಆದೇ ಜಮೀನನ್ನು ದಫನ್ ಉದ್ದೇಶಕ್ಕೆ ಬಳಸಲು ವಕ್ಪ್ ಬೋರ್ಡಿನ ಆದೇಶವಿದ್ದು ಅಲ್ಲೇ ಅಂತಿಮ ಕ್ರಿಯೆ ನಡೆಸುವುದಾಗಿ ಮೃತ ವ್ಯಕ್ತಿಯ ಸಮುದಾಯ ವಾದಿಸಿದ್ದು, ಇದರಿಂದ ಸ್ಥಳದಲ್ಲಿ ಬಿಗುವಿನ ವಾತಾವರಣ ನಿರ್ಮಾಣವಾಯಿತು. ಡಿ.ವೈ.ಎಸ್.ಪಿ ಗಿರೀಶ, ಪಿ.ಎಸ್.ಐ ಗುರುನಾಥ ಹಾದಿಮನಿ ಸ್ಥಳಕ್ಕೆ ಆಗಮಿಸಿ ಎರಡೂ ಕಡೆಯ ಜನರೊಂದಿಗೆ ಮಾತುಕತೆ ನಡೆಸಿದ್ದು, ಪೊಲೀಸ್ ಬಂದೋಬಸ್ತಿನಲ್ಲಿ ದಫನ್ ಕಾರ್ಯ ನಡೆಸಲಾಯಿತು.

ಹೆಚ್ಚು ಲಾಭ ತರುವ ಬೆಳೆ ಕಾಫಿ: ಶಂಭುಲಿಂಗ ಹೆಗಡೆ

◆**ಯಲ್ಲಾಪುರ:** ನಾವು ರೈತರು ಬೆಳೆದ ಬೆಳೆಗಳಿಗೆ ಉಳಿದ ಸಂಸ್ಥೆಗಳು ಕೊಡುವುದಕ್ಕಿಂತ ಹೆಚ್ಚು ಬೆಲೆ ಕೊಟ್ಟು ಖರೀದಿಸುತ್ತಿದ್ದೇವೆ. ದೊಡ್ಡದೊಡ್ಡ ಸಂಸ್ಥೆಗಳು ಇಲ್ಲಿ ಇದ್ದರೂ ಕೂಡ, ರೈತರು ಸಂಕಷ್ಟದಲ್ಲಿದ್ದಾಗ ಕೆಲವು ಸಲ ಕೈ ಹಿಡಿದು ಮೇಲೆತ್ತಲು ಆಗಲಿಲ್ಲ, ಹಾಗಾಗಿ ರೈತರು ಮುಂದಿನ ದಿನಗಳಲ್ಲಿ ಅಡಿಕೆಯೊಂದಿಗೆ ಉಪ ಉತ್ಪನ್ನಗಳನ್ನು ಬೆಳೆಯುವತ್ತ ಹೆಚ್ಚಿನ ಒಲವು ತೋರಬೇಕು ಎಂದು ಶಿರಸಿಯ ಕದಂಬ ಮಾರ್ಕೆಟಿಂಗ್ ಸಂಸ್ಥೆ ಅಧ್ಯಕ್ಷ ಶಂಭುಲಿಂಗ ಹೆಗಡೆ ಹೇಳಿದರು.

ಗುರುವಾರ ಉಮ್ಮಚ್ಗಿ ಸಂಘದ ಸಭಾಭವನದಲ್ಲಿ ವ್ಯವಸಾಯ ಸೇವಾ ಸಹಕಾರಿ ಸಂಘ ಹಾಗೂ ಕದಂಬ ಮಾರ್ಕೆಟಿಂಗ್ ಸೌಹಾರ್ದ ಸಹಕಾರಿ ನಿ., ಶಿರಸಿ ಇವರ ಸಂಯುಕ್ತ ಆಶ್ರಯದಲ್ಲಿ ನಡೆದ 'ಅಡಿಕೆ ಸಮೃದ್ಧಿಗಾಗಿ ಅಂತರ ಬೆಳೆಯಾಗಿ ಕಾಫಿ ಎಂಬ ಮಾಹಿತಿ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿ, ಕಾಫಿ ರೈತರಿಗೆ ಅತಿ ಹೆಚ್ಚು ಲಾಭ ತರುವ ಬೆಳೆಯೂ ಆಗಿದೆ ಎಂದರು. ಕದಂಬದ ನಿರ್ದೇಶಕ ವಿಶ್ವೇಶ್ವರ ಭಟ್ಟ ಪ್ರಾಸ್ತಾವಿಕ ಮಾತನಾಡಿದರು.



ಪ್ರಗತಿಪರ ಕೃಷಿಕ ಸೀತಾರಾಮ ಹೆಗಡೆ ನೀರ್ನಳ್ಳಿ ಮಾತನಾಡಿ, ಕಾಫಿ ನಮಗೆ ಫಲ ಕೊಡುವ ಮೂಲಕ ಉತ್ತಮ ಆದಾಯ ಕೊಡುವುದರೊಂದಿಗೆ ಎಲೆಗಳನ್ನು ಉದುರಿಸುವುದರೊಂದಿಗೆ ನಮ್ಮ ಅಡಿಕೆ ತೋಟಕ್ಕೆ ಮುಚ್ಚಿಗೆಯನ್ನು ಮಾಡುವ ಕೆಲಸವನ್ನೂ ಮಾಡಿ ಅಡಿಕೆಯ ಉತ್ಪನ್ನ ಹೆಚ್ಚಿಸುವ ಕೆಲಸವನ್ನೂ ಮಾಡುತ್ತದೆ ಎಂದರು.

ಕೆಡಿಸಿಸಿ ಬ್ಯಾಂಕ್ ನಿರ್ದೇಶಕ ರವಿ ಹೆಗಡೆ ಹುಳಗೋಳ, ಹಾಸನದ ಭಾರತೀಯ ಕಾಫಿ ಮಂಡಳಿಯ ಜಂಟಿ ನಿರ್ದೇಶಕ ನವೀನ್ ಕುಮಾರ್, ಮೂಡಿಗೆರೆ ಗೌಡಳ್ಳಿಯ ಪ್ರಗತಿಪರ ಕೃಷಿಕ ಜಿ.ಎಂ.ಲಕ್ಷ್ಮಣ ಗೌಡ, ಚಿಕ್ಕಮಗಳೂರು ಭಾರತೀಯ ಕಾಫಿ ಮಂಡಳಿ ಉಪ ನಿರ್ದೇಶಕ ವೆಂಕಟರೆಡ್ಡಿ ವಾಯ್.ಬಿ.ಮಾತನಾಡಿದರು.

ವ್ಯವಸಾಯ ಸೇವಾ ಸಹಕಾರಿ ಸಂಘ ಉಮ್ಮಚ್ಗಿಯ ಅಧ್ಯಕ್ಷ ಎಂ.ಜಿ.ಭಟ್ಟ ಸಂಕದಗುಂಡಿ ಅಧ್ಯಕ್ಷತೆವಹಿಸಿ ಮಾತನಾಡಿದರು.

ಭಾರತೀಯಕಾಫಿಮಂಡಳಿಕೊಪ್ಪದ ಹಿರಿಯ ಸಂಪರ್ಕಾಧಿಕಾರಿಗಳು ಮತ್ತು ವಿಜ್ಞಾನಿಗಳಾದ ಮುಖಾರಿಬ್ ಡಿ.ಎಸ್.ಕಾಫಿ ಬೆಳೆಯ ಬಗ್ಗೆ ಮಾಹಿತಿ ನೀಡುವುದರೊಂದಿಗೆ ರೈತರೊಂದಿಗೆ ಸಂವಾದ ಕಾರ್ಯವನ್ನು ಮಾಡಿದರು. ಜಿಲ್ಲೆಯ ರೈತರ ಅನುಕೂಲಕ್ಕಾಗಿ ಶಿರಸಿಯಲ್ಲಿ ಕಾಫಿ ಮಂಡಳಿಯ ಆಫೀಸನ್ನು ತೆರೆಯುವಂತೆ ರೈತರು ಒಕ್ಕೊರಲಿನ ಒತ್ತಾಯ ಮಾಡಿದರು. ವಿ.ಎಸ್.ಎಸ್. ಕಾರ್ಯದರ್ಶಿ ನಾಗೇಂದ್ರ ಗೌಡ ಮತ್ತು ಸಂಘದ ಕಮಿಟಿ ಸದಸ್ಯರು ಉಪಸ್ಥಿತರಿದ್ದರು.

ಎಂ.ಜಿ. ಭಟ್ಟ ಸ್ವಾಗತಿಸಿದರು, ಕದಂಬದ ವಿಕಾಸ ಹೆಗಡೆ ಮಾವಿನಕೊಪ್ಪ ನಿರ್ವಹಿಸಿದರು.ಉದಯ ಭಟ್ಟ ಕಲ್ಲಳ್ಳಿ ವಂದಿಸಿದರು.

ನಂತರ ಪ್ರಗತಿಪರ ಕಾಫಿ ಬೆಳೆಗಾರ ಶ್ರೀಧರ ಭಟ್ಟ ಹೊಸ್ಮನೆಯವರ ತೋಟದಲ್ಲಿ ಕ್ಷೇತ್ರ ಭೇಟಿ ಕಾರ್ಯ ನಡೆಯಿತು.

ಎಫ್. ಡಿ. ಪಿ. ನಂ. 07/2025
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಹಾವೇರಿ ಇವರ ನ್ಯಾಯಾಲಯದಲ್ಲಿ

ಅರ್ಜಿದಾರರು : ಶ್ರೀಮತಿ ಅನಸೂಯಾಬಾಯಿ ಕೋಂ. ಭೀಮಪ್ಪ ಮಿರಗಾಣಿ, ಸಾ॥ ಕರ್ಜಗಿ, ತಾ॥ ಹಾವೇರಿ ಹಾಗೂ ವಗೈರೆರು.

ವಿರುದ್ಧ

ಎದುರುದಾರರು: 2) ಶ್ರೀಮತಿ, ಲಲಿತಾ ಕೋಂ. ಪ್ರವೀಣ ಜಾಧವ, ಸಾ॥ ಸಿದ್ಧಾರೂಢ ಮಠದ ಹತ್ತಿರ, ಅರವಿಂದ ನಗರ, ಹುಬ್ಬಳ್ಳಿ, ಜಿ॥ ಧಾರವಾಡ ಹಾಗೂ ವಗೈರೆರು.

ಇಸ್ತಿಹಾರ

ಮೇಲ್ಕಾಣಿಸಿದ ಅರ್ಜಿದಾರರು ಮಾನ್ಯ ಪ್ರಧಾನ ದಿವಾಣಿ ನ್ಯಾಯಾಧೀಶರು, ಹಾವೇರಿ ಇವರ ನ್ಯಾಯಾಲಯದಲ್ಲಿ ಮೇಲ್ಕಾಣಿಸಿದ ಪ್ರಕರಣವನ್ನು ಅಸಲು ದಾವಾ ನಂ. 54/2021 ರಲ್ಲಿ ದಿನಾಂಕ: 27-02-2025 ರಂದು ಆದಂತ ಪ್ರಿಲಿಮಿನರಿ ಡಿಕ್ರಿ ಮೇಲಿಂದ ಫೈನಲ್ ಡಿಕ್ರಿ ಪಡೆಯುವ ಕುರಿತು ಮೇಲ್ಕಾಣಿಸಿದ ನಿಮ್ಮ ಹಾಗೂ ವಗೈರೆರ ವಿರುದ್ಧ ದಾಖಲಿಸಿದ್ದು ಇರುತ್ತದೆ. ನಿಮಗೆ ಸದರ ಪ್ರಕರಣದಲ್ಲಿ ಅನೇಕ ಸಾರೆ ನೋಟೀಸುಗಳನ್ನು ಕಳುಹಿಸಿದ್ದು, ನೀವು ದುರುದ್ದೇಶಪೂರ್ವಕವಾಗಿ ನೋಟೀಸುಗಳನ್ನು ಪಡೆಯದೇ ವಿಳಂಭ ನೀತಿಯನ್ನು ಅನುಸರಿಸುತ್ತಿರುವುದು ಕಂಡು ಬಂದಿರುತ್ತದೆ.

ಕಾರಣ ಸದರಿ ಪ್ರಕರಣದ ಬಗ್ಗೆ ಈ ನೋಟೀಸನ್ನು ದಿನಪತ್ರಿಕೆಯ ಮುಖಾಂತರ ಪ್ರಕಟಿಸಿದ್ದು, ನೀವು ದಿನಾಂಕ: 06-06-2026 ರಂದು ಮುಂಜಾನೆ 11-00 ಗಂಟೆಗೆ ಖುದ್ದಾಗಿ ಆಗಲಿ ಅಥವಾ ತಮ್ಮಿಂದ ಅಧಿಕಾರ ಪಡೆದಂತಹ ನ್ಯಾಯವಾದಿಗಳ ಮುಖಾಂತರವಾಗಲಿ ಮಾನ್ಯ ನ್ಯಾಯಾಲಯದಲ್ಲಿ ಹಾಜರ ಇರತಕ್ಕದ್ದು, ಒಂದು ವೇಳೆ ಹಾಜರಾಗದೇ ಇದ್ದಲ್ಲಿ ಪ್ರಕರಣವನ್ನು ಏಕತರ್ಫೀಯಿಂದ ನಿರ್ಧರಿಸಲಾಗುವದು.

ಸ್ಥಳ: ಹಾವೇರಿ
ದಿನಾಂಕ : 16-04-2026

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/- ಶಿರಸ್ತೇದಾರ
ಹಾವೇರಿ ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಸಿ.ಜೆ.ಎಮ್ ನ್ಯಾಯಾಲಯ ಹಾವೇರಿ
ಸಹಿ/- (ಸಿ. ಎಚ್. ಗುಡಗೂರ)
ಅರ್ಜಿದಾರರ ಪರ ವಕೀಲರು.

O.S. No. 359/2024
IN THE COURT OF THE PRINCIPAL SR. CIVIL JUDGE, HUBBALLI.

Plaintiffs : 1) Sri Ningappa s/o Basappa Hubballi and others

V/s.

Defendants : 1) Sri Siddappa S/o Shankrappa Hubballi and others,

CITATION

To, **Defendant No. 15. Sri Manjunath S/o Basappa Hubballi,** Age: 40 years, Occ: Agriculture, R/o Rayanal Village Hubballi.
17) Sri Prakash S/o Basappa Hubballi, Age: 28 years, Occ: Agriculture, R/o. Rayanal Village Hubballi

It is hereby to inform you that above said suit has been filed by plaintiffs against you and others.

If you are having any objections or claims against the plaintiffs, You are here by directed to appear and contest the matter personally or by duly informed advocate before this Court on 08-06-2026 at 11 AM sharp.

If not matter will be proceeded with and Judgment will be passed, without further notice in the matter.

Given under my hand with seal of this Court on this16-04-2026 at Hubballi.

(COURT SEAL) By order of the Court
Sd/- Sheristedar, Principal Sr. Civil Judge, Hubballi

Hubballi
16-04-2026
Krishna H. Hegade
Advocate for Plaintiffs

CHANGE OF NAME

I, **SANJANA BASAVARAJ TUMMINAKATTI** (Old Name) Resident of # 194 Omkar Chikitsalaya Gokul Road, Kotiling Nagar, Udyamnagar Hubli, Dharwad, Karnataka 580030 have changed my name as **SANJANA TUMMINAKATTI** (New Name) henceforth I will be called and recognized by new name for all future purposes, dated: 16/04/2026.

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸ ಪೂರ್ಣವೇ ಆದರೂ ಅವುಗಳಲ್ಲಿ ಕೊಡುವ ಮಾಹಿತಿ, ಗುಣಮಟ್ಟ ಮುಂತಾದವುಗಳ ಕುರಿತು ಸಾರ್ವಜನಿಕರು ಜಾಹೀರಾತು ನೀಡಿದವರೊಡನೆ ವ್ಯವಹರಿಸಬೇಕು. ಇದಕ್ಕೆ ಪತ್ರಿಕೆ ಜವಾಬ್ದಾರಿ ಇಲ್ಲಾ.

ಜಾಹೀರಾತು ವ್ಯವಸ್ಥಾಪಕರು

CHANGE OF NAME

I, **RASTRA PATI VERMA** (Old Name) Resident of #3/1, Chunchaghatta Main Road, Ganapatipura, Bangalore South, Doddakallasandra, Bangalore, Karnataka 560062, have changed my name as **RASHTPATI VERMA** (New Name) henceforth I will be called and recognized by new name for all future purposes, dated: 16/04/2026.

CHANGE OF NAME

I, **PRABHUGOUDA** (Old Name) Resident of Tilgul, Sindgi Kalkeri, District: Vijayapura, State: Karnataka, Pin Code: 586118, have changed my name as **PRABHUGOUDA MADAGI** (New Name) henceforth I will be called and recognized by new name for all future purposes, dated: 16/04/2026.

CHANGE OF NAME

I, **PARWATI BYAKOD D/O. REVANNA BYAKOD** (Old Name) Residing At Sindagi, Shri Shantaveer Sadan, Shri Shanteshwar Nagar, Bandal Road Sindagi, Dist: Vijayapur have changed my name as **PARWATI BIRADAR** (New Name) for all purposes affidavit Dtd.: 03-05-2025 sworn before notary **D. S. Udayakar.**

CHANGE OF NAME

I, **ELIZABETH KUNDAR** (Old Name) Resident At Cristion Colony Housur Hubballi - 580029, in the Distret of Dharwad, in Karnataka State, have changed my name as **ELIZABETH ISAACK KUNDAR** (New Name) for all purposes affidavit Dtd.: 15-04-2026 sworn before notary **T. G. Balannavar.**

ಕರ್ನಾಟಕ ಸರ್ಕಾರ
(ಕರ್ನಾಟಕ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಹುಬ್ಬಳ್ಳಿ)

ನಿರ್ದೇಶಕರ ಕಾರ್ಯಾಲಯ
ಕರ್ನಾಟಕ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ ಹುಬ್ಬಳ್ಳಿ

ನಂ. ಕೆಎಂಸಿಆರ್ಐ/ನಿ.ಕಾ/ಟೆಂಡರ/2026-27/ ದಿನಾಂಕ: 15-04-2026

'ಇ' - ಟೆಂಡರ ಪ್ರಕಟಣೆ

ನಿರ್ದೇಶಕರು, ಕರ್ನಾಟಕ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ ಹುಬ್ಬಳ್ಳಿ ಇವರು ಕರ್ನಾಟಕ ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ (ಪಿಡಬ್ಲುಡಿ) ಯಲ್ಲಿ ಸೂಕ್ತ ದರ್ಜೆಯಲ್ಲಿ ಗುತ್ತಿಗೆದಾರರೆಂದು ನೋಂದಾಯಿಸಿದ ಗುತ್ತಿಗೆದಾರರಿಂದ ಈ ಕೆಳಗೆ ಕಾಣಿಸಿದ ಕಾಮಗಾರಿಗೆ "ಇ ಪ್ರೊಕ್ಯೂರಮೆಂಟ್" ಮುಖಾಂತರ ಪ್ರತ್ಯೇಕವಾಗಿ ಟೆಂಡರನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿ ಹೆಸರು	ಟೆಂಡರಗೆ ಇಟ್ಟ ಅಂದಾಜು ಮೊತ್ತ ರೂ.	ಟೆಂಡರ ಫಾರಂ ಬೆಲೆ ರೂ.	ಮುಂಗಡ ಠೇವಣಿ ಹಣ ರೂ.	ಕಾಲಮಿತಿ (ಮಳೆಗಾಲ ಸಹಿತ)	ಅರ್ಹ ಗುತ್ತಿಗೆದಾರರ ದರ್ಜೆ	ವರ್ಗ (Category)
1	ಕೆ.ಎಂ.ಸಿ.ಆರ್.ಐ ಆವರಣದಲ್ಲಿಯ ಮುಖ್ಯ ಆಸ್ಪತ್ರೆ ಕಟ್ಟಡದ ಎರಡನೇ ಮಹಡಿ (201-205) ಮತ್ತು ಮೂರನೇ ಮಹಡಿ (301-305) ವಾರ್ಡಗಳ ದುರಸ್ಥಿ ಮತ್ತು ನವೀಕರಣ ಕಾಮಗಾರಿ.	72,60,000.00	ಇ ಪೋರ್ಟಲ್ ಪ್ರಕಾರ	72,600.00	6 ತಿಂಗಳು	3ನೇ ದರ್ಜೆ ಹಾಗೂ ಮೇಲಿನ ದರ್ಜೆ	ಸಾಮಾನ್ಯ
2	ಕೆ.ಎಂ.ಸಿ.ಆರ್.ಐ ಆವರಣದಲ್ಲಿಯ ಮುಖ್ಯ ಕಾಲೇಜ ಕಟ್ಟಡದ ಹಿಂದೆ ಪೆವರ್ಸಗಳನ್ನು ಒದಗಿಸಿ, ಅಳವಡಿಸುವ ಕಾಮಗಾರಿ.	16,95,000.00	ಇ ಪೋರ್ಟಲ್ ಪ್ರಕಾರ	42,375.00	3 ತಿಂಗಳು	4ನೇ ದರ್ಜೆ ಹಾಗೂ ಮೇಲಿನ ದರ್ಜೆ	ಸಾಮಾನ್ಯ

ಗುತ್ತೇದಾರರು ಕರ್ನಾಟಕ ಸರ್ಕಾರದ "ಇ-ಪ್ರೊಕ್ಯೂರಮೆಂಟ್" ವೈಬ್‌ಸೈಟ್ನಲ್ಲಿ ಲಾಗಿನ್ ಆಗಿ ದಿನಾಂಕ: 16-04-2026 ರಿಂದ ಡೌನಲೋಡ್ ಮಾಡಿಕೊಳ್ಳಬಹುದು. ಕೆಟಿಟಿಪಿ ಕಾಯ್ದೆಯನ್ವಯ ಟೆಂಡರ ಜಾರಿಯಾಗುವುದು.

ಟೆಂಡರಗಳನ್ನು ಇ.ಎಂ.ಡಿ ಹಾಗೂ ಟೆಂಡರ ಶುಲ್ಕದೊಂದಿಗೆ (ವೈಬ್‌ಸೈಟ್ನಲ್ಲಿ ನಿಗದಿ ಮಾಡಿರುವ ಯಾವುದಾದರೂ ಒಂದು ಮಾದರಿಯಲ್ಲಿ ಆನ್ ಲೈನ್ ಪೇಮೆಂಟ್ ಮಾತ್ರ) "ಇ ಪ್ರೊಕ್ಯೂರಮೆಂಟ್" ವೈಬ್‌ಸೈಟ್ನಲ್ಲಿ https://kppp.karnataka.gov.in ಲಾಗಿನ್ ಆಗಿ ದಿನಾಂಕ: 24-04-2026 ಸಾಯಂಕಾಲ 5.00 ಗಂಟೆವರೆಗೆ ಸ್ವೀಕರಿಸಲಾಗುವುದು. ಯಾವುದೇ ಟೆಂಡರನ್ನು ಸ್ವೀಕರಿಸುವ, ಇಲ್ಲವೇ ಯಾವುದೇ ಅಥವಾ ಎಲ್ಲಾ ಟೆಂಡರಗಳನ್ನು ಯಾವುದೇ ಕಾರಣ ನೀಡದೆ ತಿರಸ್ಕರಿಸುವ ಅಧಿಕಾರವನ್ನು ಕೆಳಗೆ ಸಹಿ ಮಾಡಿದರುವ ಹೊಂದಿರುತ್ತಾರೆ.

ಕಾಮಗಾರಿ ಪಡೆಯಲು ಅರ್ಹತೆ ಷರತ್ತುಗಳು ಕಾಮಗಾರಿ ವಿವರ ಇತ್ಯಾದಿಗಳನ್ನು, ದಿನಾಂಕ: 16-04-2026 "ಇ ಪ್ರೊಕ್ಯೂರಮೆಂಟ್" ವೈಬ್‌ಸೈಟ್ನಿಂದ ಪಡೆಯಬಹುದು. 080-25501216/25501227.

ಸಹಿ/- ನಿರ್ದೇಶಕರು, ಕೆ.ಎಂ.ಸಿ.ಆರ್.ಐ, ಹುಬ್ಬಳ್ಳಿ

ಕರ್ನಾಟಕ ಸರ್ಕಾರ
ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ, ತಿ. ನರಸೀಪುರ
ತಾಲ್ಲೂಕು-571124 ದೂ.ಸಂ.: 08227-297267, -
Email: cdpotnpur@gmail.com

ಇ-ಪ್ರಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿ, ತಿ. ನರಸೀಪುರ ತಾಲ್ಲೂಕು, ಮೈಸೂರು ಜಿಲ್ಲೆ ಇಲ್ಲಿಗೆ ಬಾಹ್ಯಮೂಲದ ಆಧಾರದ ಮೇಲೆ ಡಿ.ಪಿ. ಆಕ್ಟ್ ಯೋಜನೆಗೆ ಓರ್ವ ಕಂಪ್ಯೂಟರ್ ಆಪರೇಟರ್, ಓರ್ವ ಮೆಸೆಂಜರ್ ರವರ ಸೇವೆ ಪಡೆಯಲು ನಿಯಮಾನುಸಾರ ದ್ವಿ-ಲಕೋಟೆ ಪದ್ಧತಿಯಲ್ಲಿ ಅರ್ಹ ಟೆಂಡರ್‌ದಾರರಿಂದ ಇ-ಪ್ರಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಸಲ್ಲಿಸಲು ದಿ: 02.05.2026ರ ಸಂಜೆ 4.00 ಗಂಟೆಯೊಳಗೆ ಆಸಕ್ತಿ ಇರುವ ಸಂಸ್ಥೆ/ವ್ಯಕ್ತಿ ಇವರು ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಯನ್ನು ಇ-ಪ್ರಕ್ಯೂರ್ ಮೆಂಟ್ ವೆಬ್ ಸೈಟ್ (https://kppp.karnataka.gov.in) ಹಾಗೂ ಕಛೇರಿ ವೇಳೆಯಲ್ಲಿ ದೂರವಾಣಿ: 08227-297267, ಮೊ:9731669565ಕ್ಕೆ ಸಂಪರ್ಕಿಸಬಹುದಾಗಿದೆ.

ಸಹಿ/- ಶಿಶು ಅಭಿವೃದ್ಧಿ ಯೋಜನಾಧಿಕಾರಿ, ತಿ. ನರಸೀಪುರ.
DIPR/DDMYS/61/KSMCA/46/2026-27

ಕರ್ನಾಟಕ ಸರ್ಕಾರ
ಕರ್ನಾಟಕ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಹುಬ್ಬಳ್ಳಿ-21
KARNATAKA MEDICAL COLLEGE AND RESEARCH INSTITUTE HUBBALLI - 21
Email: directorkimshubli@gmail.com Phone No: 0836-2373348
ಸಂ: ಕೆಎಂಸಿ&ಆರ್‌ಐ/ಮೂವಿ(6)/42/2026-27 ದಿನಾಂಕ: 16/04/2026

ಇ-ಟೆಂಡರ್ ಪ್ರಕಟಣೆ

(ಮಾನವ ಸಂಪನ್ಮೂಲ ಸೇವೆಗಳ ಟೆಂಡರ್)

1) ಇಂಡೆಂಟ್ ನಂ: **DME/2026-27/SE0718**

2026-27 ನೇ ಸಾಲಿಗಾಗಿ ಕೆಎಂಸಿ&ಆರ್‌ಐ ಹುಬ್ಬಳ್ಳಿಯಲ್ಲಿರುವ ಆಸ್ಪತ್ರೆ ಮತ್ತು ವಿವಿಧ ವಿಭಾಗಳಿಗೆ ಅಗತ್ಯವಿರುವ ವಿವಿಧ ತಂತ್ರಜ್ಞರ ಸೇವೆಗಳನ್ನು ಮಾನವ ಸಂಪನ್ಮೂಲ ಹೊರಗುತ್ತಿಗೆ ಆಧಾರದ ಮೇಲೆ ಪಡೆಯಲು ಪ್ಯಾಕೇಜ್-10ರ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಪ್ರತ್ಯೇಕ ಇ.ಎಂ.ಡಿ ಮೊತ್ತದೊಂದಿಗೆ ಈ ಟೆಂಡರ್ ದ್ವಿ-ಲಕೋಟೆ ಪದ್ಧತಿಯಲ್ಲಿ ಸಲ್ಲಿಸತಕ್ಕದ್ದು, ಟೆಂಡರ್ ಶುಲ್ಕ ಮತ್ತು ಇತ್ಯಾದಿ ವಿವರಗಳನ್ನು https://kppp.karnataka.gov.in ರಲ್ಲಿ ಪಡೆಯಬಹುದಾಗಿದೆ.

ಸಹಿ/- ನಿರ್ದೇಶಕರು,
ಕರ್ನಾಟಕ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಹುಬ್ಬಳ್ಳಿ.

ಕರ್ನಾಟಕ ಗೃಹ ಮಂಡಳಿ
Karnataka Housing Board
3ನೇ ಮಹಡಿ, ಕಾವೇರಿ ಭವನ, ಕೆ. ಜಿ. ರಸ್ತೆ, ಬೆಂಗಳೂರು-560009

ಟೆಂಡರ್ ಪ್ರಕಟಣೆ

(ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ ಮುಖಾಂತರ)

Notification No: KHB/CE/AEF/S&S/Hoovinahalli-Hassan/ KHB/2026-27/SE0378 Date: 16.04.2026

ಕರ್ನಾಟಕ ಗೃಹ ಮಂಡಳಿ ವತಿಯಿಂದ ಹಾಸನ ಜಿಲ್ಲೆ, ಹಾಸನ ತಾಲ್ಲೂಕು, ಕಸಬಾ ಹೋಬಳಿ ಹೂವಿನಹಳ್ಳಿ ಕಾವಲ್ ಮತ್ತು ಹೂವಿನಹಳ್ಳಿ ಗ್ರಾಮದಲ್ಲಿ 494 ಎಕರೆ 14.12 ಗುಂಟೆ ಜಮೀನಿನಲ್ಲಿ ಅಭಿವೃದ್ಧಿಪಡಿಸಲು ಉದ್ದೇಶಿಸಿರುವ ನಿವೇಶನ ಮತ್ತು ಸೇವೆಗಳ ಯೋಜನೆಯ ಕಾಮಗಾರಿಗೆ ವಾಸ್ತುಶಿಲ್ಪಿ ಸಂಸ್ಥೆ (AEF) ನೇಮಕಾತಿಗಾಗಿ KPP Portal ಮೂಲಕ ಟೆಂಡರ್ ಕರೆಯಲಾಗಿದೆ.

ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನಾಂಕ: 30.04.2026 ಸಂಜೆ 4.00 ಗಂಟೆಯವರೆಗೆ.

ಕಾಮಗಾರಿಗಳ ಬಗ್ಗೆ ಹಾಗೂ ಇನ್ನಿತರ ವಿವರಗಳನ್ನು ಈ ಕೆಳಕಂಡ ವಿಳಾಸದಲ್ಲಿ ಕಛೇರಿಯ ವೇಳೆಯಲ್ಲಿ ಪಡೆಯಬಹುದಾಗಿದೆ. ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ಕಾವೇರಿ ಭವನ, ಬೆಂಗಳೂರು. ದೂರವಾಣಿ: 080-22273511, website: https://kppp.karnataka.gov.in

ಸಹಿ/- ಕಾರ್ಯಪಾಲಕ ಅಭಿಯಂತರರು,
ಕರ್ನಾಟಕ ಗೃಹ ಮಂಡಳಿ, ಬೆಂಗಳೂರು
ವಾ.ಸಾ.ಸಂ.ಇ/ವಾಪ್ರ/210/ಆಕಾರ್/2026-27

ಕರ್ನಾಟಕ ಸರಕಾರ
ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ
ಯೋಜನಾ ಸಮನ್ವಯಾಧಿಕಾರಿಗಳ ಕಛೇರಿ, ಸಮಗ್ರ ಬುಡಕಟ್ಟು ಅಭಿವೃದ್ಧಿ ಯೋಜನೆ, ದಕ್ಷಿಣ ಕನ್ನಡ ಜಿಲ್ಲೆ, ಅಬ್ಬಕ್ಕ ನಗರ, ಕೊಟ್ಟಾರ, ಮಂಗಳೂರು-575006
ದೂರವಾಣಿ: 0824-2451269, 0824-2450114, Email: pcoitdp.dk@gmail.com
ಸಂಖ್ಯೆ:ಯೋಸಅ/ಶಿಕ್ಷಣ/ಆ.ಸಾ/ಸಿಆರ್-24/2025-26 ದಿನಾಂಕ: 13.04.2026

ಟೆಂಡರ್ ಪ್ರಕಟಣೆ-1

ದಕ್ಷಿಣ ಕನ್ನಡ ಜಿಲ್ಲೆಯ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯು ವತಿಯಿಂದ ಮಂಗಳೂರು, ತಾಲೂಕಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳು ಮತ್ತು ಮಹರ್ಷಿ ವಾಲ್ಮೀಕಿ ಆದಿವಾಸಿ ಬುಡಕಟ್ಟು ವಸತಿ ಶಾಲೆಗಳಿಗೆ ಆಹಾರ ಸಾಮಗ್ರಿಗಳನ್ನು ಸರಬರಾಜು ಮಾಡಲು ದ್ವಿ ಲಕೋಟೆ ಪದ್ಧತಿಯಲ್ಲಿ ಅಧಿಕೃತದಾರರಿಂದ ಕೆಪಿಪಿಪಿ ಪೋರ್ಟಲ್ https://kppp.karnataka.gov.in (DTWO/2026-27/IND0107) ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. ಷರತ್ತುಗಳು ಅನ್ವಯಿಸುತ್ತವೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:14.05.2026 ಸಂಜೆ: 5.30 ಗಂಟೆ ಆಗಿರುತ್ತದೆ. ಹೆಚ್ಚಿನ ಮಾಹಿತಿಯನ್ನು https://kppp.karnataka.gov.inನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು ಅಥವಾ ಯೋಜನಾ ಸಮನ್ವಯಾಧಿಕಾರಿ, ಸಮಗ್ರ ಬುಡಕಟ್ಟು ಅಭಿವೃದ್ಧಿ ಯೋಜನೆ, ದಕ್ಷಿಣ ಕನ್ನಡ ಜಿಲ್ಲೆ ದೂರವಾಣಿ ಸಂಖ್ಯೆ (0824) - 2451269 ಇವರನ್ನು ಸಂಪರ್ಕಿಸಬಹುದು.

ಸಹಿ/- ಯೋಜನಾ ಸಮನ್ವಯಾಧಿಕಾರಿ,
ಸಮಗ್ರ ಬುಡಕಟ್ಟು ಅಭಿವೃದ್ಧಿ ಯೋಜನೆ, ದಕ್ಷಿಣ ಕನ್ನಡ ಜಿಲ್ಲೆ
DIPR/DK/MPL/70/26-27

ಕರ್ನಾಟಕ ಸರಕಾರ
ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು,
ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಗದಗ, ಇವರ ಕಾರ್ಯಾಲಯ
ದೂರವಾಣಿ : 08372-250758 ಇ-ಮೇಲ್ : dcpogadag@gmail.com
ಸಂ:ಜಿಮರಅ/ಜಿಮರಘ/ಗ/ಪ್ರ.ಕು/2026-27/41 ದಿನಾಂಕ : 15.04.2026

ಗಂಡು ಮಗುವಿನ ಪತ್ತೆ

ದಿನಾಂಕ:06-09-2022 ರಂದು ಕುರ್ತುಕೋಟಿ ಗ್ರಾಮದ ಸಾರ್ವಜನಿಕ ಹಿತಾಸಕ್ತಿ ಹೊಂದಿದ ವ್ಯಕ್ತಿಗಳು ಬಾಲಕ ಶ್ರೀಧರ ನಾಗೇಶ ಹರ್ಜಿ ಇವನನ್ನು ರಕ್ಷಿಸಿ ರಕ್ಷಣೆ-ಪೋಷಣೆಗಾಗಿ ಮಕ್ಕಳ ಕಲ್ಯಾಣ ಸಮಿತಿ ಗದಗ ಇಲ್ಲಿಗೆ ಹಾಜರುಪಡಿಸಿದ್ದು, ಅದರಂತೆ ಬಾಲಕನ ರಕ್ಷಣೆ-ಪೋಷಣೆಗಾಗಿ ಮಾನ್ಯ ಅಧ್ಯಕ್ಷರು ಮಕ್ಕಳ ಕಲ್ಯಾಣ



ಸಮಿತಿಯವರ ಆದೇಶದಂತೆ ಬಾಲಕರ ಸರಕಾರಿ ಬಾಲಮಂದಿರದಲ್ಲಿ ದಾಖಲಿಸಿಕೊಳ್ಳಲಾಯಿತು. ಬಾಲಕನ ತಾಯಿ ತೀರಿಕೊಂಡಿದ್ದು, ತಂದೆಯು ಇನ್ನೊಬ್ಬ ಮಹಿಳೆಯೊಂದಿಗೆ ಮದುವೆಯಾಗಿ ಬಾಲಕನನ್ನು ಕುರ್ತುಕೋಟಿ ಗ್ರಾಮದಲ್ಲಿ ರಾತ್ರೋರಾತ್ರಿ ಬಿಟ್ಟು ಹೋಗಿರುತ್ತಾರೆ. ಬಾಲಕನ ಪುನರ್ವಸತಿ ಕಲ್ಪಿಸುವುದು ಅವಶ್ಯಕವಾಗಿದ್ದರಿಂದ ಇವರು ಬಾಲಕನ ಪಾಲಕರ/ಪೋಷಕರ ಪತ್ತೆಗಾಗಿ ಪತ್ರಿಕಾ ಪ್ರಕಟಣೆ ಹೊರಡಿಸಲು ಹಾಗೂ ಮಗುವನ್ನು ಕಾನೂನು ಬದ್ಧ ದತ್ತು ಪ್ರಕ್ರಿಯೆಗೆ ಒಳಪಡಿಸಲು ಈ ಮೂಲಕ ಮಗುವನ್ನು ಕುಟುಂಬ ವ್ಯವಸ್ಥೆಯಲ್ಲಿ ಪುನರ್ವಸತಿಗೊಳಿಸಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ಜೈವಿಕ ಪಾಲಕರ ಪತ್ತೆಗಾಗಿ ಪತ್ರಿಕಾ ಪ್ರಕಟಣೆ ಹೊರಡಿಸಲಾಗಿದ್ದು, ಸದರಿ ಬಾಲಕನಿಗೆ ಸಂಬಂಧಿಸಿದವರು ಸೂಕ್ತ ದಾಖಲೆಗಳೊಂದಿಗೆ 30 ದಿನಗಳೊಳಗಾಗಿ ಮಕ್ಕಳ ಕಲ್ಯಾಣ ಸಮಿತಿ, ಗದಗ ಅಥವಾ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳ ಕಛೇರಿ ರೂ ನಂ-225 ಜಿಲ್ಲಾಡಳಿತ ಭವನ, ಗದಗ ಈ ವಿಳಾಸದಲ್ಲಿ ಸಂಪರ್ಕಿಸಲು ಕೋರಲಾಗಿದೆ.

ಸಹಿ/- ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು,
ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಗದಗ
ವಾಸಾಸಂಇ/ಗದಗ/ಕೆಎಸ್‌ಎಂಸಿಎ/27/2026-27

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರಕಾರದ ಒಂದು ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರ ಕಚೇರಿ, ಕೃಭಾಜನಿನಿ ಎಸ್.ಬಿ.ಸಿ ಪಾ&ಪೋ ವಿಭಾಗ,
ಭಿಮರಾಯನಗುಡಿ-585287 ತಾ: ಶಹಾಪೂರಜಿ: ಯದಗಿರಿ. email:kbjnleesbc@gmail.com
ಸಂ.ಕೃಭಾಜನಿನಿ/ಕಾನಿ/ಎಸ್.ಬಿ.ಸಿ/ಟಿ.ಎನ್.ಡಿ/ಯೋಶಾ/2026-27/21 ದಿನಾಂಕ:10.04.2026

ಟೆಂಡರ್ ಪ್ರಕಟಣೆ

(ಇ-ಪ್ರೋಕ್ಯೂರ್‌ಮೆಂಟ್ ಮುಖಾಂತರ ಮಾತ್ರ)

ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣಾ ಭಾಗ್ಯ ಜಲ ನಿಗಮ (ನಿಯಮಿತ), ಬೆಂಗಳೂರು ಇವರ ಪರವಾಗಿ ಈ ಕೆಳ ಸಹಿದಾರರಿಂದ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಲ್ಪಟ್ಟ ಸಿವಿಲ್ ಒಂದನೇದರ್ಜೆ ಹಾಗೂ ಮೇಲ್ಪಟ್ಟಗುತ್ತಿಗೆದಾರರಿಂದ "Survey, Investigation, Design, Supply, Erection, Testing and Commissioning of required Number of Vertical Turbine Pumps coupled to HT Motor for providing Irrigation facility to Suffering atchkat 2847 Ha. of Lateral No.27 to 32 of Dy.No.6 of Shahapur Branch Canal from Karnal Nala under Karnal LIS in Shorapur Taluk Yadagir District Viz., Construction of Diversion Weir, Intake Fore-bay, Jackwell Cum Pump House, Manifold along With Electrical Panel, Soft Starter, Capacitor, 11 KV Power Transformers, HT Bus Bar / Cabling, 11/6.6 KV Sub-Station, Power Line and 11 KV Terminal Bay, MS Rising Main, Valves and Construction of Delivery Chamber, ERM to Lateral 27 & 31 of Dy.No.6 (selected reach) Supply of Spare, Accessories and Tools Including Operation & Maintenance of the entire System for five years from the date of successful Commissioning of Karnal Lift Irrigation Scheme on Turnkey Basis".(Work indent no:KBJNL/2025-26/ LI/ WORK_INDENT2778)"ಎಂಬ ಕಾಮಗಾರಿಗೆ ದ್ವಿ-ಲಕೋಟೆ ಪದ್ಧತಿಯಲ್ಲಿ ಈ ಕೆಳಗೆ ತಿಳಿಸಿರುವಂತೆ ಕಾಮಗಾರಿಗೆ ಕರ್ನಾಟಕ ಪಬ್ಲಿಕ್ ಪೋರ್ಟಲ್‌ಮೂಲಕ ಅಹ್ವಾನಿಸಲಾಗಿದೆ.

1) **ಲಕೋಟೆ ಪದ್ಧತಿ:** ದ್ವಿ-ಲಕೋಟೆ **2) ಕಾಮಗಾರಿ ಅಂದಾಜು ಪತ್ರಿಕೆಯ ಸಂಖ್ಯೆ:** KBJNL/2025-26/LI/WORK_INDENT2775)" **3)ಟೆಂಡರ್ ಅರ್ಜಿ ಪ್ರಾರಂಭವಾಗುವ ದಿನಾಂಕ:** 14.04.2026 ರಿಂದ 12.05.2026 ಸಂಜೆ 5.00 ಗಂಟೆಯವರೆಗೆ **4) ಟೆಂಡರ್ ಕುರಿತು ಪ್ರಶ್ನೆಗಳನ್ನು ಸಲ್ಲಿಸುವ ಕೊನೆಯ ದಿನಾಂಕ:** 22.04.2026 ರಂದು ಸಂಜೆ 5.30 ಗಂಟೆಯವರೆಗೆ **5) ಪ್ರೀ-ಬಿಡ್ ಸಭೆ ಜರುಗುವ ದಿನಾಂಕ:** 23.04.2026 ರಂದು ಬೆಳಗ್ಗೆ 11.30 ಗಂಟೆಗೆ **6) ಟೆಂಡರ್ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ:** 12.05.2026 ರಂದು ಸಂಜೆ 5.00 ಗಂಟೆಯವರೆಗೆ **7) ತಾಂತ್ರಿಕ ಬಿಡ್‌ತೆರೆಯುವ ದಿನಾಂಕ:** 14.05.2026ರಂದು ಬೆಳಗ್ಗೆ 11.00ಗಂಟೆಗೆ **8) ಆರ್ಥಿಕ ಬಿಡ್ ತೆರೆಯುವ ದಿನಾಂಕ:** 18.05.2026 ರಂದು ಬೆಳಗ್ಗೆ 11.30ಗಂಟೆಗೆ (ತಾತ್ಕಾಲಿಕ)

ಎಲ್ಲಾ ಬಿಡ್‌ಗಳ ಟೆಂಡರ್‌ಗಳನ್ನು ಈ ಕೆಳಗೆ ಸಹಿ ಮಾಡಿದವರ ಕಛೇರಿಯಲ್ಲಿ ತೆರೆಯಲಾಗುವುದು. ಹೆಚ್ಚಿನ ಮಾಹಿತಿಗಳನ್ನು ಅಂತರ್ಜಾಲ ವಿಳಾಸ https://kppp.karnataka.gov.in ದಲ್ಲಿ ಅಥವಾ ಈ ಕೆಳಗೆ ಸಹಿದಾರರ ಕಛೇರಿಯಲ್ಲಿ ಕಛೇರಿ ವೇಳೆಯಲ್ಲಿ ಪಡೆಯಬಹುದು.

ಸಹಿ/- ಕಾರ್ಯಪಾಲಕಅಭಿಯಂತರು
ಕೃಭಾಜನಿನಿ, ಎಸ್.ಬಿ.ಸಿ ಪಾ&ಪೋ,ವಿಭಾಗ
ಭಿಮರಾಯನಗಯಡಿ
ವಾ.ಸಾ.ಸಂ.ಇ/ಯಾದಗಿರ/28/ಕೆ.ಎಸ್.ಎಂ.ಸಿ.&ಎ/2026-27

ಮಹಾನಗರ ಪಾಲಿಕೆ, ಕಲಬುರಗಿ
ದೂ.: 08472/ 278675 ಫ್ಯಾಕ್ಸ : 08472 / 260776 ಇ ಮೇಲ್- itstaff_ulb_gulbarga@yahoo.com
No: KMP/ELE/38/2025-26 ದಿನಾಂಕ: 07.04.2026

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಟೆಂಡರ್ ಪ್ರಕಟಣೆ ಸಂಖ್ಯೆ: 38/2025-26

1) ಕಾಮಗಾರಿಯ ವಿವರ : ಕರ್ನಾಟಕ ಸಾರ್ವಜನಿಕ ಸಂಗ್ರಹಣದಲ್ಲಿ ಪಾರದರ್ಶಕತೆ ನಿಯಮಗಳು 2000 ರಡಿಯಲ್ಲಿ ಕಲಬುರಗಿ ಮಹಾನಗರ ಪಾಲಿಕೆಯಿಂದ 2018-19ನೇ ಸಾಲಿನ ಎಸ್.ಎಫ್.ಸಿ. ವಿಶೇಷ ಅನುದಾನದಲ್ಲಿ ಅನುಮೋದನೆಗೊಂಡ 01 ಕಾಮಗಾರಿಗೆ ಹಾಗೂ ಮಹಾನಗರ ಪಾಲಿಕೆ ಅನುದಾನದಲ್ಲಿನ 01 Service tender ಕಾಮಗಾರಿಗೆ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಅಭಿವೃದ್ಧಿ ಕಾಮಗಾರಿಗಳಿಗೆ ಕೆ.ಟಿ.ಪಿ.ಪಿ ಪೋರ್ಟಲ್-2.0 ನಲ್ಲಿ ಕೆ.ಟಿ.ಪಿ.ಪಿ. ರ ಪ್ರಕಾರ ಕೆ.ಡಬ್ಲ್ಯೂ- 1 ಹಾಗೂ ಕೆ.ಸಿ.-6ರ ಮೂಲಕ 15 ದಿನಗಳ ಟೆಂಡರ್‌ನ್ನು ಆಮಂತ್ರಿಸಲಾಗಿದೆ. ಹೆಚ್ಚಿನ ವಿವರಗಳಿಗಾಗಿ ಅಥವಾ ಯಾವುದೇ ತರಹದ ಬದಲಾವಣೆಯನ್ನು www.kppp.karnataka.gov.in ಮುಖಾಂತರ ಪಡೆದುಕೊಳ್ಳಬಹುದು. 2) ಪ್ರತಿ ಕಾಮಗಾರಿ ಅಂದಾಜು ಕನಿಷ್ಠ ಮೊತ್ತ **ರೂ. 10.00 ಲಕ್ಷಗಳು, ಹಾಗೂ ಗರಿಷ್ಠ ಮೊತ್ತ ರೂ. 16.12 ಲಕ್ಷಗಳು,** 3) ಗುತ್ತಿಗೆದಾರರ ಅರ್ಹತೆ ವಿವರ: 4ನೇ ದರ್ಜೆ ಮತ್ತು ಹೆಚ್ಚು, 4) ಟೆಂಡರ ಅರ್ಜಿಯ ಬೆಲೆ ರೂ. ಕೆ.ಪಿ.ಪಿ.ಪಿ ಪ್ರೋರ್ಟಲ್-2.0 ನ ಪ್ರತಿ ಕಾಮಗಾರಿಗೆ ಮತ್ತು ಇ.ಎಂ.ಡಿ. ಕನಿಷ್ಠ ರೂ. 15,800.00 ಗಳು ಹಾಗೂ ಗರಿಷ್ಠ ರೂ. 40,300.00 ಗಳು, 5) ಬಿಡ್ ಸಲ್ಲಿಸುವ ಕೊನೆಯ ದಿನಾಂಕ: **23.04.2026 ರಂದು ಸಾಯಂಕಾಲ 4:30 ಗಂಟೆಗೆ.** 6) ತಾಂತ್ರಿಕ ಬಿಡ್ ತೆರೆಯುವ ಕೊನೆಯ ದಿನಾಂಕ: **24.04.2026 ರಂದು ಸಾಯಂಕಾಲ 04:35 ಗಂಟೆಗೆ.** 7) ಆರ್ಥಿಕ ಬಿಡ್ ತೆರೆಯುವ ದಿನಾಂಕ: **29.04.2026 ರಂದು ಬೆಳಿಗ್ಗೆ 11:30 ಗಂಟೆಗೆ** ನಿಗದಿಪಡಿಸಲಾಗಿದೆ. ಹೆಚ್ಚಿನ ವಿವರಗಳಿಗಾಗಿ www.kppp.karnataka.gov.in ಮುಖಾಂತರ ಪಡೆದುಕೊಳ್ಳಬಹುದು. 8) ಹೆಚ್ಚಿನ ವಿವರಗಳಿಗೆ : ಕಾರ್ಯಪಾಲಕ ಅಭಿಯಂತರರು, ಕಲಬುರಗಿ ಮಹಾನಗರ ಪಾಲಿಕೆ, ಕಲಬುರಗಿರವರನ್ನು ಸಂಪರ್ಕಿಸಬಹುದಾಗಿದೆ. 9) ಹೆಚ್ಚಿನ ಮಾಹಿತಿಯು ಪಾಲಿಕೆಯ ವೆಬ್ ಸೈಟ್‌ನಲ್ಲಿ ಲಭ್ಯವಿರುತ್ತದೆ **http://www.kalaburagicity.mrc.gov.in/**

Note: All subsequent corrigendum/amendment shall be published only on website and not in press. Hence, tenderers are advised to always be in touch with our said website until the tender is finally opened.

ಸಹಿ/- ಕಾರ್ಯಪಾಲಕ ಅಭಿಯಂತರರು,
ಕಲಬುರಗಿ ಮಹಾನಗರ ಪಾಲಿಕೆ, ಕಲಬುರಗಿ.
ವಾ.ಸಾ.ಸಂ.ಇ/ಕಲಬುರಗಿ/34/ಕೆ.ಎಸ್.ಎಂ.ಸಿ.&ಎ/2025-26

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ
(ಜಿಲ್ಲಾ ನಗರಾಭಿವೃದ್ಧಿ ಕೋಶ, ಚಿಕ್ಕಬಳ್ಳಾಪುರ)
E-Mail :- ka.chikkaballapur.dudc@gmail.com, Ph: 08156-277005
ಸಂ:ಜಿನಕೋ/ಚಿಕಿ(1)/ತಾಶಾ/ಅ.ನ-4/09/2026-27 ದಿನಾಂಕ:09.04.2026

ಟೆಂಡರ್ ಅಧಿಸೂಚನೆ

ಚಿಕ್ಕಬಳ್ಳಾಪುರ ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳ ಅಮೃತ ನಗರೋತ್ಥಾನ (ಮುನಿಸಿಪಾಲಿಟಿ)-4 ಯೋಜನೆಯಡಿ ಈ ಕೆಳಕಂಡ ವ್ಯಕ್ತಿ ಸಂಬಂಧಿತ ಕಾರ್ಯಕ್ರಮಗಳಿಗೆ ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಚಿಕ್ಕಬಳ್ಳಾಪುರ ಜಿಲ್ಲೆ ಇವರಿಂದ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. **ಕಾಮಗಾರಿಗಳ ವಿವರ:** (1) ಅಮೃತ್ ನಗರೋತ್ಥಾನ (ಮುನಿಸಿಪಾಲಿಟಿ) ಹಂತ-4 ರ ಯೋಜನೆಯಡಿ ಶಿಡ್ಲಘಟ್ಟ ನಗರಸಭೆಗೆ ವಿಶೇಷ ಚೇತನರಿಗೆ ವಿದ್ಯುತ್ ಟೈಲರಿಂಗ್ ಮಿಷನ್ ಖರೀದಿಸಿ ನೀಡುವುದು.(DMA/2025-26/IND5722/Call-2), **ಟೆಂಡರ್‌ಗಿಟ್ಟ ಮೊತ್ತ:** ರೂ. 4.99ಲಕ್ಷ, (2) ಅಮೃತ್ ನಗರೋತ್ಥಾನ (ಮುನಿಸಿಪಾಲಿಟಿ) ಹಂತ-4 ರ ಯೋಜನೆಯಡಿ ಗೌರಿಬಿದನೂರು ನಗರಸಭೆಗೆ ಪರಿಶಿಷ್ಟ ಜನಾಂಗದವರಿಗೆ ಗ್ಯಾಸ್ ಗೀಸರ್ ವ್ಯವಸ್ಥೆ ಕಲ್ಪಿಸುವುದು. (DMA/2025-26/IND5719/Call-2), **ಟೆಂಡರ್‌ಗಿಟ್ಟ ಮೊತ್ತ: ರೂ.** 20.97 (3) ಅಮೃತ್ ನಗರೋತ್ಥಾನ (ಮುನಿಸಿಪಾಲಿಟಿ) ಹಂತ-4 ರ ಯೋಜನೆಯಡಿ ಬಾಗೇಪಲ್ಲಿ ಪುರಸಭೆಯ ಪೌರಕಾರ್ಮಿಕರಿಗೆ ಶುದ್ಧ ಕುಡಿಯುವ ನೀರಿನ ಆರ್.ಓ. ಫಿಲ್ಟರ್‌ಗಳನ್ನು ವಿತರಿಸುವುದು. (DMA/2025-26/IND5720/Call-2), **ಟೆಂಡರ್‌ಗಿಟ್ಟ ಮೊತ್ತ: ರೂ.** 11.97 (4) ಅಮೃತ್ ನಗರೋತ್ಥಾನ (ಮುನಿಸಿಪಾಲಿಟಿ) ಹಂತ-4 ರ ಯೋಜನೆಯಡಿ ಬಾಗೇಪಲ್ಲಿ ಪುರಸಭೆಯ ವಿಶೇಷ ಚೇತನರಿಗೆ Ear Hearing Aid ಖರೀದಿಸುವುದು (DMA/2025-26/IND5650/Call-2), **ಟೆಂಡರ್‌ಗಿಟ್ಟ ಮೊತ್ತ: ರೂ.** 2.97. ಆಸಕ್ತಿಯುಳ್ಳ ಅರ್ಹ ಗುತ್ತಿಗೆದಾರರು ಇ-ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರಂ ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸುವುದು. ಗುತ್ತಿಗೆದಾರರು ಟೆಂಡರ್ ದಸ್ತಾವೇಜುಗಳನ್ನು ಇ-ಪ್ರೊಕ್ಯೂರ್‌ಮೆಂಟ್ ವೇದಿಕೆ **https://kppp.karnataka.gov.in** ನಿಂದ ಡೌನ್‌ಲೋಡ್ ಮಾಡಿಕೊಂಡು ವಿದ್ಯುನ್ಮಾನ ಮೂಲಕವೇ **https://kppp.karnataka.gov.in** ನಲ್ಲಿ ಸಲ್ಲಿಸುವುದು. ಟೆಂಡರ್ ಸಂಸ್ಕರಣಾ ಶುಲ್ಕವನ್ನು ಆನ್‌ಲೈನ್ ಮೂಲಕವೇ ಪಾವತಿಸತಕ್ಕದ್ದು. **(1)** ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 24.04.2026ರ ಸಂಜೆ 05.30 ಗಂಟೆಗೆ (2)** ಟೆಂಡರ್‌ಗಳ ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 28.04.2026 ರ ಪೂರ್ವಾಹ್ನ 11.00 ಗಂಟೆಗೆ. (3)** ಟೆಂಡರ್‌ಗಳ ಆರ್ಥಿಕ ಬಿಡ್ ತೆರೆಯುವ **ದಿನಾಂಕ: 04.05.2026 ರ ಬೆಳಗ್ಗೆ 11.00 ಗಂಟೆಗೆ** ಅಥವಾ ಮುಂದೆ ಸೂಚಿಸಿದ ದಿನದಂದು. ಟೆಂಡರ್ ಷರತ್ತುಗಳು ಮತ್ತು ಹೆಚ್ಚಿನ ಮಾಹಿತಿಗಳನ್ನು ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ ಇವರ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದೆ. ಟೆಂಡರ್‌ನ ವೇಳಾಪಟ್ಟಿ ಮತ್ತು ಷರತ್ತುಗಳ ಬದಲಾವಣೆ ಇದ್ದಲ್ಲಿ ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ಮಾತ್ರ ಅಧಿಸೂಚಿಸಲಾಗುವುದು, ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ.

ಸಹಿ/-ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಚಿಕ್ಕಬಳ್ಳಾಪುರ ಜಿಲ್ಲೆ
ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ:27/ಕೆಎಸ್‌ಎಂಸಿಎ/2026-27

ಪಟ್ಟಣ ಪಂಚಾಯತ ಕಾರ್ಯಾಲಯ, ಕುಕನೂರು
TOWN PANCHAYATH KUKANOOR
Tq: Yelburga Dist: Koppal Ph No:08534- 230845 Email ID : itstaff_ulb_kukanoor@yahoo.com
ಕ್ರ.ಸಂ:ಪ.ಪಂ.ಕಾ.ವಿ15ನೇ ಹಣಕಾಸು ಹಾಗೂ ಎಸ್.ಎಫ್.ಸಿ/2026-27 ದಿನಾಂಕ :15-04-2026

ಕೆ.ಪಿ.ಪಿ.ಪಿ ಅಲ್ಪಾವಧಿ ಟೆಂಡರ್ ಪ್ರಕಟಣೆ

(ಸ್ಟ್ಯಾಂಡರ್ಡ ಟೆಂಡರ ಪ್ರೊಕ್ಯೂರ್‌ಮೆಂಟ್ ಕೆ.ಡಬ್ಲ್ಯೂ-1 ನಿಬಂಧನೆಗಳಿಗೆ ಒಳಪಟ್ಟು ಟೆಂಡರ್ ಆಹ್ವಾನಿಸಲಾಗಿದೆ)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಮತ್ತು ಪಾರದರ್ಶಕತೆ ಅಧಿನಿಯಮ 2000 ರ ಪ್ರಕಾರ ಕುಕನೂರು ಪಟ್ಟಣ ಪಂಚಾಯತ ವ್ಯಾಪ್ತಿಯ ಎಸ್.ಎಫ್.ಸಿ ಕುಡಿಯುವ ನೀರು ಮತ್ತು 15ನೇ ಹಣಕಾಸು ಯೋಜನೆ ಮತ್ತು ಎಸ್.ಎಫ್.ಸಿ ಮುಕ್ತ ನಿಧಿ ಎಸ್.ಸಿ.ಎಸ್.ಪಿ ಮತ್ತು ಪ.ಪಂ ನಿಧಿ 2026-27 ನೇ ಸಾಲಿನ ಯೋಜನೆಗಳ ಅನುದಾನದ ಅಡಿಯಲ್ಲಿ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ದ್ವೀ ಲಕೋಟೆ ಪದ್ಧತಿಯಲ್ಲಿ ಈ ಕೆಳಗೆ ನಮೂದಿಸಿದ ಕಾಮಗಾರಿಗಳಿಗೆ ಕೆ.ಪಿ.ಪಿ.ಪಿ ಪೋರ್ಟಲ್‌ನಲ್ಲಿ ನೊಂದಾಯಿಸಲ್ಪಟ್ಟ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಕೆ.ಪಿ.ಪಿ.ಪಿ ಟೆಂಡರ್ ದಾಖಲೆಗಳಿಗಾಗಿ ಇಲಾಖಾ ವೆಬ್‌ಸೈಟ್ http://kppp.karnataka.gov.in ರ ಮೂಲಕ ಕೆಳಗೆ ನಮೂದಿಸಿರುವ ದಿನಾಂಕದಂದು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವುದು. ಟೆಂಡರ ಫಾರಂಗಳನ್ನು ಪಡೆಯುವುದು, ಭರ್ತಿ ಮಾಡುವುದು ಮತ್ತು ಸಲ್ಲಿಸುವುದು ವೆಬ್‌ಸೈಟ್ ಮುಖಾಂತರ ಮಾತ್ರ. ಈ ಕಛೇರಿಯಲ್ಲಿ ಯಾವುದೇ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.

ಈ ಕೆಳಕಂಡ ಕಾಮಗಾರಿಗಳಿಗೆ ಕೆ.ಪಿ.ಪಿ.ಪಿ ಪೋರ್ಟಲ್ ಮೂಲಕ ದಿನಾಂಕ: **15-04-2026** ರಿಂದ ವಿಕ್ಷಿಸಬಹುದು ಹಾಗೂ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ: **30-04-2026** ರ ಸಾಯಂಕಾಲ 5:30 ಗಂಟೆಗೆ ಮತ್ತು ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **02-05-2026** ರ ಮುಂಜಾನೆ 11:00 ಗಂಟೆಗೆ ಅಥವಾ ನಂತರದ ದಿನಗಳಲ್ಲಿ ಮತ್ತು ಅರ್ಥಿಕ ಬಿಡ್ ತೆರೆಯುವ ದಿನಾಂಕ: **06-05-2026** ಅಥವಾ ನಂತರದ ದಿನಗಳಲ್ಲಿ ತೆರಯಲಾಗುವುದು.

(ದರಖಾಸ್ತು ಮಂಜೂರು ಮಾಡುವ ಅಥವಾ ತಿರಸ್ಕರಿಸುವ ಅಧಿಕಾರಿವನ್ನು ಕೇಳಗೆ ಸಹಿ ಮಾಡಿದವರು ಕಾಯ್ದಿರಿಸಿಕೊಂಡಿರುತ್ತಾರೆ)

ಇಂಡೆಂಟ್ ಸಂಖ್ಯೆ: 1 DMA/2026-27/OW/WORK_INDENT57317 **ಟೆಂಡರ್‌ಗಿಟ್ಟ ಮೊತ್ತ (ಲಕ್ಷಗಳಲ್ಲಿ):** 14.99 **ಇ.ಎಮ್.ಡಿ ಮೊತ್ತ (ರೂ ಗಳಲ್ಲಿ):** 37,475.00 **ಗುತ್ತಿಗೆದಾರರ ವರ್ಗ:** 4ನೇ ದರ್ಜೆ ಹಾಗೂ ಮೇಲ್ಪಟ್ಟ ಗುತ್ತಿಗೇದಾರರು (ಸಾಮಾನ್ಯ)

2 DMA/2026-27/OW/WORK_INDENT57319 **ಟೆಂಡರ್‌ಗಿಟ್ಟ ಮೊತ್ತ (ಲಕ್ಷಗಳಲ್ಲಿ):** 18.00 **ಇ.ಎಮ್.ಡಿ ಮೊತ್ತ (ರೂ ಗಳಲ್ಲಿ):** 45,000.00 **ಗುತ್ತಿಗೆದಾರರ ವರ್ಗ:** 4ನೇ ದರ್ಜೆ ಹಾಗೂ ಮೇಲ್ಪಟ್ಟ ಗುತ್ತಿಗೇದಾರರು (ಸಾಮಾನ್ಯ)

3 DMA/2026-27/OW/WORK_INDENT57320 **ಟೆಂಡರ್‌ಗಿಟ್ಟ ಮೊತ್ತ (ಲಕ್ಷಗಳಲ್ಲಿ):** 10.83 **ಇ.ಎಮ್.ಡಿ ಮೊತ್ತ (ರೂ ಗಳಲ್ಲಿ):** 13,538.00 **ಗುತ್ತಿಗೆದಾರರ ವರ್ಗ:** 4ನೇ ದರ್ಜೆ ಹಾಗೂ ಮೇಲ್ಪಟ್ಟ ಗುತ್ತಿಗೇದಾರರು (ಪ.ಜಾತಿ)

4 DMA/2026-27/OW/WORK_INDENT57321 **ಟೆಂಡರ್‌ಗಿಟ್ಟ ಮೊತ್ತ (ಲಕ್ಷಗಳಲ್ಲಿ):** 3.00 **ಇ.ಎಮ್.ಡಿ ಮೊತ್ತ (ರೂ ಗಳಲ್ಲಿ):** 3,750.00 **ಗುತ್ತಿಗೆದಾರರ ವರ್ಗ:** 4ನೇ ದರ್ಜೆ ಹಾಗೂ ಮೇಲ್ಪಟ್ಟ ಗುತ್ತಿಗೇದಾರರು (ಕೆ-1)

5 DMA/2026-27/OW/WORK_INDENT57323 **ಟೆಂಡರ್‌ಗಿಟ್ಟ ಮೊತ್ತ (ಲಕ್ಷಗಳಲ್ಲಿ):** 16.05 **ಇ.ಎಮ್.ಡಿ ಮೊತ್ತ (ರೂ ಗಳಲ್ಲಿ):** 40,125.00 **ಗುತ್ತಿಗೆದಾರರ ವರ್ಗ:** 4ನೇ ದರ್ಜೆ ಹಾಗೂ ಮೇಲ್ಪಟ್ಟ ಗುತ್ತಿಗೇದಾರರು (ಸಾಮಾನ್ಯ)

6 DMA/2026-27/WS/WORK_INDENT57324 **ಟೆಂಡರ್‌ಗಿಟ್ಟ ಮೊತ್ತ (ಲಕ್ಷಗಳಲ್ಲಿ):** 5.28 **ಇ.ಎಮ್.ಡಿ ಮೊತ್ತ (ರೂ ಗಳಲ್ಲಿ):** 6,600.00 **ಗುತ್ತಿಗೆದಾರರ ವರ್ಗ:** 4ನೇ ದರ್ಜೆ ಹಾಗೂ ಮೇಲ್ಪಟ್ಟ ಗುತ್ತಿಗೇದಾರರು (ಪ.ಪಂಗಡ)

7 DMA/2026-27/WS/WORK_INDENT57325 **ಟೆಂಡರ್‌ಗಿಟ್ಟ ಮೊತ್ತ (ಲಕ್ಷಗಳಲ್ಲಿ):** 4.67 **ಇ.ಎಮ್.ಡಿ ಮೊತ್ತ (ರೂ ಗಳಲ್ಲಿ):** 5,838.00 **ಗುತ್ತಿಗೆದಾರರ ವರ್ಗ:** 4ನೇ ದರ್ಜೆ ಹಾಗೂ ಮೇಲ್ಪಟ್ಟ ಗುತ್ತಿಗೇದಾರರು (ಕೆ-2ಎ)

8 DMA/2026-27/EL/WORK_INDENT57327 **ಟೆಂಡರ್‌ಗಿಟ್ಟ ಮೊತ್ತ (ಲಕ್ಷಗಳಲ್ಲಿ):** 2.12 **ಇ.ಎಮ್.ಡಿ ಮೊತ್ತ (ರೂ ಗಳಲ್ಲಿ):** 5,300.00 **ಗುತ್ತಿಗೆದಾರರ ವರ್ಗ:** 4ನೇ ದರ್ಜೆ ಹಾಗೂ ಮೇಲ್ಪಟ್ಟ ಗುತ್ತಿಗೇದಾರರು (ಸಾಮಾನ್ಯ (ವಿದ್ಯುತ್ ಗುತ್ತಿಗೆದಾರರು

9 DMA/2026-27/INDENTSE6401/Call-2 **ಟೆಂಡರ್‌ಗಿಟ್ಟ ಮೊತ್ತ (ಲಕ್ಷಗಳಲ್ಲಿ):** 4.80 **ಇ.ಎಮ್.ಡಿ ಮೊತ್ತ (ರೂ ಗಳಲ್ಲಿ):** 12,000.00 **ಗುತ್ತಿಗೆದಾರರ ವರ್ಗ:** ಅಧಿಕೃತ ವಾಹನ ಪೂರೈಕೆದಾರು

ಸಹಿ/-(ಲೀಲಾವತಿ, ಪ ಮುಧೋಳ) ಅಧ್ಯಕ್ಷರು
ಪಟ್ಟಣ ಪಂಚಾಯತ ಕುಕನೂರು

ಸಹಿ/-(ನಾಗೇಶ) ಮುಖ್ಯಾಧಿಕಾರಿಗಳು,
ಪಟ್ಟಣ ಪಂಚಾಯತ ಕುಕನೂರ.

ಡಿಐಪಿಆರ್/ಕೊಪ್ಪಳ/29/ಕೆಎಸ್‌ಎಂಸಿಎ/2026-27

ಹುಬ್ಬಳ್ಳಿ ಇಂದಿನ ಉತ್ಪನ್ನವಾರು ದರ

ಉತ್ಪನ್ನಗಳು	₹ ಕನಿಷ್ಠ (ಕ್ವಿಂ)	₹ ಗರಿಷ್ಠ (ಕ್ವಿಂ)
ಆಲಸಂದೆ ಕಾಳು	3731	5121
ಕಡಲೆಬೇಳೆ	6551	6551
ಕಡಲೆಕಾಳು	1630	5659
ಉದ್ದಿನಬೇಳೆ	10500	11580
ಉದ್ದಿನಕಾಳು	1210	7362
ತೆಂಗಿನಕಾಯಿ	20000	47000
ಹತ್ತಿ	3500	3500
ಒಣ ಮೆಣಸಿನಕಾಯಿ	11299	27310
ಹೆಸರುಬೇಳೆ	9600	9600
ಬಟಾಣಿ	5401	8101
ಹೆಸರುಕಾಳು	1610	5439
ಜೋಳ	1511	4016
ಅರಳೆ	9500	9500
ಮೆಕ್ಕೆಜೋಳ	1650	1992
ಮಡಿಕೆ (ಮಟಕಿ)	6093	6093
ಸಾಸುವೆ	4602	7297
ಈರುಳ್ಳಿ	500	2100
ಆಲೂಗಡ್ಡೆ	1100	1600
ಅಕ್ಕಿ	2663	7868
ಕುಸುಬೆ	5601	5630
ಸೋಯಾಬಿನ್	5170	5610
ತೊಗರಿ	2029	4859
ಗೋಧಿ	1417	2239

ಧಾರವಾಡ: ನಗರದ ಕರ್ನಾಟಕ ವಿಶ್ವವಿದ್ಯಾಲಯ ವಿದ್ಯಾರ್ಥಿ ಕಲ್ಯಾಣ ವಿಭಾಗದ ನೂತನವಾಗಿ ನಿರ್ದೇಶಕರಾಗಿ ನೇಮಕಗೊಂಡ



ಡಾ.ಸಂಗಪ್ಪ ಚಲವಾದಿ ಅವರಿಗೆ ನಿರ್ಗಮಿತ ನಿರ್ದೇಶಕ ಡಾ.ಎಸ್.ಕೆ ಪವಾರ ಅಧಿಕಾರ ಹಸ್ತಾಂತರಿಸಿದರು.

ಎಲ್‌ಇಡಿ ವಿದ್ಯುತ್ ದೀಪಗಳ ಅಳವಡಿಕೆ ಕಾರ್ಯಾರಂಭ

ಹುಬ್ಬಳ್ಳಿ: ಬಹುನಿರೀಕ್ಷಿತ ಎಲ್‌ಇಡಿ(ಲೈಟ್ ಎಮಿಟಿಂಗ್ ಡಿಯೊಡ್) ವಿದ್ಯುತ್ ದೀಪಗಳ ಅಳವಡಿಕೆ ಯೋಜನೆಗೆ ಕಾರ್ಯ ಆರಂಭವಾಗಿದ್ದು, ಶೀಘ್ರದಲ್ಲಿ ಹು-ಧಾ ಅವಳಿನಗರಗಳು ಬೆಳಗಲಿವೆ.

ತುಮಕೂರಿನ ಮಂಜುನಾಥ್ ಎಲೆಕ್ಟ್ರಿಕಲ್ ಕಂಪನಿಗೆ ಟೆಂಡರ್ ನೀಡಲಾಗಿದ್ದು, ಸುಮಾರು 93 ಕೋಟಿ ವೆಚ್ಚದಲ್ಲಿ ಸಾರ್ವಜನಿಕ, ಖಾಸಗಿ ಸಹಭಾಗಿತ್ವದಲ್ಲಿ (ಪಿಪಿಪಿ) ಅನುಷ್ಠಾನಗೊಳಿಸಲಾಗುತ್ತಿದೆ. ಟೆಂಡರ್ ಪಡೆದ ಕಂಪನಿಗೆ 8 ತಿಂಗಳ ಗುರಿ ನೀಡಲಾಗಿದ್ದು, ಕಾಮಗಾರಿ ಮುಗಿಸಿ, ನಂತರ ಏಳು ವರ್ಷ ಟೆಂಡರ್ ಪಡೆದ ಕಂಪನಿಯೇ ನಿರ್ವಹಣೆ ಮಾಡಲಿದೆ.

ಎಲ್‌ಇಡಿ ಯೋಜನೆಯಡಿ ಸುಮಾರು 75 ಸಾವಿರ ದೀಪಗಳನ್ನು ಅವಳವಡಿಸಲು ನಿರ್ಧರಿಸಲಾಗಿದೆ. ಈಗಾಗಲೇ 18 ಸಾವಿರ ಎಲ್‌ಇಡಿ ದೀಪಗಳಿದ್ದು, ಅವುಗಳನ್ನು ಬದಲಿಸುವುದಿಲ್ಲ, ಉಳಿದಂತೆ 46 ಸಾವಿರ ಸಾಂಪ್ರದಾಯಿಕ ದೀಪಗಳನ್ನು ಬದಲಿಸಲಾಗುತ್ತದೆ. ಅಲ್ಲದೆ, ಅಗತ್ಯ ಇರುವ ಕಡೆ 11 ಸಾವಿರ ದೀಪಗಳನ್ನು ಅಳವಡಿಸಲಾಗುವುದು ಎಂದು ಪಾಲಿಕೆಯ ವಿದ್ಯುತ್ ವಿಭಾಗದ ಕಾರ್ಯನಿರ್ವಾಹಕ ಎಂಜಿನಿಯರ್ ಗವಿಸಿದ್ದಯ್ಯ ವಿ.ಎಚ್. ತಿಳಿಸಿದರು.

ದೀಪ ಅಳವಡಿಸಲು ಕಾರ್ಯ ಆರಂಭ ಮಾಡಿದ ಕಂಪನಿ ಸದ್ಯ ಒಂದೊಂದೇ ವಲಯಗಳನ್ನು ಆಯ್ಕೆ ಮಾಡಿಕೊಂಡು ಬಲ್ಬ್ ಅಳವಡಿಸುತ್ತಿದೆ. ರಸ್ತೆಯ ಅಗಲ, ದಟ್ಟಣೆ ಆಧರಿಸಿ ಕೆಲವು ಹೆಚ್ಚು ವೋಲ್ಟ್‌ನ ಬಲ್ಬ್ ಅಳವಡಿಕೆ ಮಾಡಲು ಹೇಳಲಾಗಿದೆ ಎಂದು ಹೇಳಿದರು. ಒಟ್ಟು 160 ಹೈಮಾಸ್ಟ್ ಕಂಬಗಳು ಅವಳಿನಗರದಲ್ಲಿ ಇವೆ. ಅಲ್ಲಿ ಎಲ್‌ಇಡಿ ದೀಪಗಳಿದ್ದರೆ ಬದಲಿಸುವುದಿಲ್ಲ, ಇಲ್ಲದಿದ್ದರೆ 100 ರಿಂದ 200 ವೋಲ್ಟ್‌ನ ಎಲ್‌ಇಡಿ ಫ್ಲಡ್‌ಲೈಟ್ ಅಳವಡಿಸಲಾಗುವುದು. ಕೆಲವು ಕಡೆ ಕಂಬದಿಂದ ಕಂಬಗಳ ನಡುವೆ ಹೆಚ್ಚು ಅಂತರ ಇರುವುದರಿಂದ ಬೆಳಕು ಸಾಕಾಗುವುದಿಲ್ಲ, ಅಂತಹ ಕಡೆ ಬಲ್ಬ್ ಅಳವಡಿಸಲು, ಇನ್ನಿತರ ಕಾಮಗಾರಿಗಾಗಿ 10 ಕೋಟಿಯನ್ನು ಮೀಸಲಿಡಲಾಗಿದೆ ಎಂದು ತಿಳಿಸಿದರು.



> ಎಲ್‌ಇಡಿ ದೀಪಗಳ ಅಳವಡಿಕೆ ಕಾರ್ಯ ಆರಂಭವಾಗಿದ್ದು, ವಿದ್ಯುತ್ ವೆಚ್ಚದಲ್ಲಿ ಉಳಿತಾಯ ಮಾಡಬಹುದು. ರಸ್ತೆಗಳ ಸುರಕ್ಷತೆಗೆ ಬಹಳ ಅನುಕೂಲವಾಗಲಿದೆ.
> ■ **ರುದ್ರೇಶ ಘಾಳಿ, ಆಯುಕ್ತ, ಹು-ಧಾ ಮಹಾನಗರ ಪಾಲಿಕೆ**

> ನಗರದಲ್ಲಿ ಕೆಲವು ಪ್ರದೇಶಗಳಲ್ಲಿ ವಿದ್ಯುತ್ ದೀಪಗಳಿಲ್ಲ. ಅಂತಹ ಪ್ರದೇಶಗಳ ಗುರುತಿಸಿ ಪಾಲಿಕೆ ವಿದ್ಯುತ್ ದೀಪಗಳ ಅಳವಡಿಸಲು ಕ್ರಮ ವಹಿಸಬೇಕು.
> ■ **ಅಕ್ಷಯ ಪಾಟೀಲ, ಕೇಶ್ವಾಪುರ ನಿವಾಸಿ**

ಯೋಜನೆಉದ್ದೇಶ: ಎಲ್‌ಇಡಿ ಯೋಜನೆಯಿಂದ ನಗರದ ರಸ್ತೆಗಳಲ್ಲಿ ಸುರಕ್ಷತೆ ಹೆಚ್ಚಿಸುವುದಲ್ಲದೆ, ಸೆಂಟ್ರಲ್ ಕಂಟ್ರೋಲ್ ಮಾನಿಟರಿಂಗ್ ಸಿಸ್ಟಮ್ ಮೂಲಕ ಬೀದಿ ದೀಪಗಳ ಮೇಲೆ ನಿಗಾ ಇಡಲು ಸಹಕಾರಿಯಾಗಲಿದೆ. ಪ್ರತಿ ತಿಂಗಳು ಪಾಲಿಕೆಯಿಂದ 2ಕೋಟಿ ವಿದ್ಯುತ್ ಶುಲ್ಕ ಪಾವತಿಸಲಾಗುತ್ತಿತ್ತು. ಎಲ್‌ಇಡಿ ದೀಪ ಅಳವಡಿಸುವುದರಿಂದ ಶೇ. 47 ರಷ್ಟು ಉಳಿತಾಯವಾಗಲಿದೆ. ಅದು ವಾರ್ಷಿಕವಾಗಿ 12 ಕೋಟಿ ಉಳಿತಾಯವಾಗಲಿದೆ. ವಿದ್ಯುತ್ ಶುಲ್ಕ ಹೊರತುಪಡಿಸಿ ವಾರ್ಷಿಕ 3 ಕೋಟಿ ನಿರ್ವಹಣೆಗೆ ವೆಚ್ಚವಾಗುತ್ತಿತ್ತು. ಟೆಂಡರ್ ಪಡೆದ ಕಂಪನಿಯೇ ನಿರ್ವಹಣೆ ಮಾಡುವುದರಿಂದ ಅದು ಉಳಿಯಲಿದೆ ಎಂದು ತಿಳಿಸಿದರು.

ಪ್ರಾಯೋಗಿಕ ಅಳವಡಿಕೆ ಯಶಸ್ವಿ

ಅವಳಿ ನಗರದಲ್ಲಿ ಪ್ರಾಯೋಗಿಕವಾಗಿ 1,500 ಎಲ್‌ಇಡಿ ದೀಪಗಳನ್ನು ಅಳವಡಿಸಲಾಗಿತ್ತು. ಲಕ್ಸ್ ಲೆವೆಲ್ ಮೀಟರ್ ಅನ್ವಯ (ವಿದ್ಯುತ್ ಕಂಬದಿಂದ ರಸ್ತೆಗೆ ಬೀಳುವ ದೀಪದ ಬೆಳಕಿನ ಪ್ರಕಾಶಮಾನ) ಪರಿಶೀಲಿಸಿ, ಅಗತ್ಯ ಇರುವ ಕಡೆ 25 ವೋಲ್ಟ್ ನಿಂದ 200 ವೋಲ್ಟ್‌ನ ಬಲ್ಬ್ ಅಳವಡಿಕೆಗೆ ಸೂಚಿಸಲಾಗಿದೆ. ಈ ಯೋಜನೆ ಹೊರತುಪಡಿಸಿ ಗೋಕುಲ ರಸ್ತೆಯಲ್ಲಿ 15ನೇ ಹಣಕಾಸು ಯೋಜನೆ ಅಡಿ ಸುಮಾರು 365 ಎಲ್‌ಇಡಿ ದೀಪಗಳನ್ನು ಅಳವಡಿಸಿ, ಸೌಂದರ್ಯೀಕರಣಕ್ಕಾಗಿ ಕ್ರಮ ಕೈಗೊಳ್ಳಲಾಗುತ್ತಿದ ಎಂದು ಪಾಲಿಕೆಯ ವಿದ್ಯುತ್ ವಿಭಾಗದ ಕಾರ್ಯನಿರ್ವಾಹಕ ಎಂಜಿನಿಯರ್ ಗವಿಸಿದ್ದಯ್ಯ ವಿ.ಎಚ್ ತಿಳಿಸಿದರು.

ಪ್ರಯಾಣಿಕರ ಬೇಡಿಕೆಗೆ ತಕ್ಕಂತೆ ರೈಲು ಸೌಲಭ್ಯ ಒದಗಿಸಿ



ಹುಬ್ಬಳ್ಳಿ: ಬೆಂಗಳೂರು-ಮೈಸೂರು-ಹುಬ್ಬಳ್ಳಿ ವಲಯದಿಂದ ವರ್ಷವಿಡೀ ರಾಜಸ್ಥಾನ ಮತ್ತು ಗುಜರಾತ್‌ಗೆ ಹೋಗುವ ಸಂಖ್ಯೆ ಹೆಚ್ಚಾಗಿದ್ದು, ಪ್ರಯಾಣಿಕರ ಬೇಡಿಕೆಗೆ ತಕ್ಕಂತೆ ಹೆಚ್ಚಿನ ರೈಲಿನ ಸೌಲಭ್ಯ ಒದಗಿಸಬೇಕು ಎಂದು ಯಾತ್ರಿ ಹಿತಾರ್ಥ್ ಸಂಘರ್ಷ್ ಸಮಿತಿ ಸದಸ್ಯರು ನೈರುತ್ಯ ರೈಲ್ವೆ ಪ್ರಧಾನ ವ್ಯವಸ್ಥಾಪಕ ಪಿ.ಅನಂತ ಅವರಿಗೆ ಭೇಟಿ ಮಾಡಿ ಮನವಿ ಸಲ್ಲಿಸಿದೆ.

ಹುಬ್ಬಳ್ಳಿಯಿಂದ ಜೋಧಪುರಕ್ಕೆ ದೈನಂದಿನ ರೈಲು ಜಾಲೋರ್ ಮೂಲಕ ಇಂದಿನ ಅತ್ಯಂತ ಅಗತ್ಯವಾಗಿದೆ. ಬೆಂಗಳೂರಿನಿಂದ ಪ್ರಾರಂಭವಾಗುವ ರೈಲು ಸಂಪೂರ್ಣವಾಗಿ ಬುಕ್ ಆಗಿರುವುದರಿಂದ ಈ ಮಾರ್ಗದ 50 ಸ್ಥಳಗಳ ಪ್ರಯಾಣಿಕರಿಗೆ ವಸತಿ ಸೌಲಭ್ಯ ಸಿಗುತ್ತಿಲ್ಲ. ಹುಬ್ಬಳ್ಳಿಯಿಂದ ಅಹಮದಾಬಾದ್‌ಗೆ ರೈಲು ಓಡಿಸಿ, ಹುಬ್ಬಳ್ಳಿ-ಅಜ್ಮೀರ್ ರೈಲು ಆರಂಭಿಸಿ, ಕೊಲ್ಹಾಪುರ-ತಿರುಪತಿ ಹರಿಪ್ರಿಯಾ ರೈಲು ಸುಲಭವಾಗಿ ಲಭ್ಯವಿಲ್ಲದ ಕಾರಣ ತಿರುಪತಿಗೆ ಹೊಸ ರೈಲಿನ ತುರ್ತು ಅವಶ್ಯಕತೆಯಿದೆ ಎಂದು ಆಗ್ರಹಿಸಿದ್ದಾರೆ.

ಗುಜರಾತ್‌ನ ಪ್ರಸಿದ್ಧ ದೇವಾಲಯ ಪಲಿತಾನಕ್ಕೆ ಪ್ರಯಾಣಕ್ಕೆ ಬೇಡಿಕೆ ಇದೆ. ದಯವಿಟ್ಟು ಭಾವನಗರಕ್ಕೆ ವಾರಕ್ಕೆ ಎರಡು ಬಾರಿ ರೈಲು ಓಡಿಸಿ, ಹುಬ್ಬಳ್ಳಿಯಿಂದ ಮಿರಾಜ್-ಬಿಕಾನೇರ್ ರೈಲು 20475/76 ವಾರಕ್ಕೆ ಎರಡು ಬಾರಿ ಓಡಿಸಲು ಸೇರಿದಂತೆ ಹಲವು ಬೇಡಿಕೆ ಈಡೇರಿಸಲು ಆಗ್ರಹಿಸಿದರು.

ನಿಯೋಗದಲ್ಲಿ ಸುಭಾಸಸಿಂಗ ಜಮಾದಾರ, ದೂದಾರಾಮ ಚೌಧರಿ, ಅಮೃತ ಜೈನ, ಉತ್ತಮ ಉಸಾಧಿಯಾ, ಮಹೇಂದ್ರ ಪಾಲ್ಗೋತಾ, ಸತೀಶ ಮಾಲಿ, ಬಾಬುಲಾಲ ಜೈನ, ಪರಭತಸಿಂಗ ಇದ್ದರು.

ಟೌನ್ ಪೋಸ್ಟ್ ಕಚೇರಿ ವಿಲೀನಕ್ಕೆ ವಿರೋಧ



ರಾಮದುರ್ಗ: ಸುಮಾರು 20 ವರ್ಷಗಳಿಂದಲೂ ತೇರ ಬಜಾರಿನಲ್ಲಿ ಸಾರ್ವಜನಿಕರ ಸೇವೆಯಲ್ಲಿ ತೊಡಗಿಕೊಂಡಿದ್ದ ಟೌನ್ ಪೋಸ್ಟ್ ಕಚೇರಿಯನ್ನು ಪ್ರಧಾನ ಅಂಚೆ ಕಚೇರಿಯಲ್ಲಿ ವಿಲೀನಗೊಳಿಸುವ ಕ್ರಮವನ್ನು ವಿರೋಧಿಸಿ ವಿಜಯ ಸೇನೆಯ ಪದಾಧಿಕಾರಿಗಳು ಹೆಡ್ ಪೋಸ್ಟ್ ಆಫೀಸಿನ ಮುಂಭಾಗದಲ್ಲಿ ಗುರುವಾರದಿಂದ ಅನಿರ್ದಿಷ್ಟ ಧರಣಿ ಆರಂಭಿಸಿದರು.

ಕೆಲ ಹೊತ್ತು ಅಂಚೆ ಕಚೇರಿಯ ಮುಂಭಾಗದಲ್ಲಿ ಧರಣಿ ನಡೆಸಿದ ಅವರು, ಟೌನ್ ಪೋಸ್ಟ್ ಆಫೀಸಿನ ಆರಂಭಗೊಳಿಸುವ ತನಕ ಪ್ರಧಾನ ಅಂಚೆ ಕಚೇರಿಯ ಕಾರ್ಯಕಲಾಪಗಳನ್ನು ಬಂದ್ ಮಾಡಲು ಪೋಸ್ಟ್ ಒಳಗೆ ತೆರಳಿ ಕೆಲಸ ಕಾರ್ಯಗಳಿಗೆ ಅಡೆತಡೆ ಮಾಡಿದರು. ಈ ವೇಳೆ ಪೋಸ್ಟ್ ಆಫೀಸಿನ ಸಿಬ್ಬಂದಿ ಮತ್ತು ಹೋರಾಟಗಾರರ ನಡುವೆ ಮಾತಿನ ಚಕಮಕಿ ನಡೆಯಿತು. ನಂತರ ಪೊಲೀಸರು ಆಗಮಿಸಿದ ನಂತರ ಹೊರ ಬಂದ ವಿಜಯ ಸೇನೆ ಹುಡುಗರು ಮತ್ತೇ ಧರಣಿ ಆರಂಭಿಸಿದರು.

ಸುಮಾರು 20 ವರ್ಷಗಳ ಮುಂಚೆಯೇ ಆರಂಭಗೊಂಡಿರುವ ಟೌನ್ ಪೋಸ್ಟ್ ಆಫೀಸಿನಲ್ಲಿ ಅಂದಾಜು 1,800 ವಿವಿಧ ಖಾತೆಗಳಿವೆ. ಪಟ್ಟಣದ ಆ ಪ್ರದೇಶದ ಜನರಷ್ಟೆ ಅಲ್ಲದೇ ದೊಡಮಂಗಡಿ, ಚಿಂಚಖಂಡಿ, ರಂಕಲಕೊಪ್ಪ, ತೊರಗಲ್ ತಾಂಡಾ, ಘಟಕನೂರು ಗ್ರಾಮಗಳ ವಿವಿಧ ಫಲಾನುಭವಿಗಳು ಅಂಚೆಯ ಸೇವೆ ಪಡೆದುಕೊಳ್ಳುತ್ತಿದ್ದಾರೆ. ಆದರೆ, ಕೇಂದ್ರ ಸರ್ಕಾರ ಏಕಾಏಕಿ ಪ್ರಧಾನ ಅಂಚೆ ಕಚೇರಿಯಿಂದ ಒಂದು ಕಿ.ಮೀ ಅಂತರದೊಳಗಿನ ಎಲ್ಲ ಅಂಚೆ ಸೇವೆಗಳನ್ನು ಪ್ರಧಾನ ಅಂಚೆ ಕಚೇರಿಗೆ ವಿಲೀನಗೊಳಿಸುವ ನಿರ್ಧಾರದಿಂದ ಅಲ್ಲಿನ ಜನರು ಆಕ್ರೋಶಗೊಂಡಿದ್ದಾರೆ.

ವಿಧವಾ ವೇತನ, ವೃದ್ಧಾಪ್ಯ ವೇತನ, ಠೇವಣಿ ಖಾತೆ, ಚಾಲ್ತಿ ಖಾತೆ, ಸೇವಿಂಗ್ ಖಾತೆ ಸೇರಿದಂತೆ ಹತ್ತಾರು ಸೇವೆಗಳನ್ನು ಸಮೀಪದಲ್ಲೇ ಪಡೆಯಲು ವೃದ್ಧರು, ಮಕ್ಕಳು, ವಿಕಲಚೇತನರು ಬರುತ್ತಿದ್ದರು. ಆದರೆ ಅಂಚೆ ಕಚೇರಿ ವಿಲೀನಗೊಂಡ ಪ್ರಯುಕ್ತ ವೃದ್ಧರು, ಮಕ್ಕಳು, ವಿಕಲಚೇತನರು, ರೋಗಿಗಳಿಗೂ ತೀವ್ರ ತೊಂದರೆಯಾಗುತ್ತದೆ. ಪ್ರಧಾನ ಅಂಚೆ ಕಚೇರಿಗೂ ಹೆಚ್ಚಿನ ಒತ್ತಡವೂ ಬೀಳಲಿದೆ. ಇದರಿಂದ ಅಲ್ಲಿನ ಸೇವೆಗಳಿಗೆ ಸರತಿ ಸಾಲಿನಲ್ಲಿ ಗಂಟೆಗಟ್ಟಲೇ ಕಾದು ನಿಲ್ಲಬೇಕಾಗುತ್ತದೆ ಎಂದು ದೂರಿದರು.

ವಿಜಯ ಸೇನೆಯ ಸಂಸ್ಥಾಪಕ ವಿಜಯ ನಾಯ್ಕ, ತಾಲೂಕು ಅಧ್ಯಕ್ಷ ಮಾರುತಿ ಮಾದರ, ಕರವೇ ಅಧ್ಯಕ್ಷ ವಿನಯ ಚಂದರಗಿ, ಪ್ರಶಾಂತ ಅಂಗಡಿ, ರೇಣುಕಾ ಅಮರಹಳ್ಳಿ, ಲಕ್ಷ್ಮೀ ಶೆಟ್ಟರ, ಮಂಗಳಾ ಗಣಮುಖಿ ಇತರರು ಪ್ರತಿಭಟನೆಯ ನೇತೃತ್ವ ವಹಿಸಿದ್ದರು.

ಉಚಿತ ಲಸಿಕಾ ಅಭಿಯಾನ: ಡಾ.ಔದ್ರಾಮ

ವಿಜಯಪುರ: ಏ.23ರಿಂದ ಮೇ 22 ರವರೆಗೆ ಜಿಲ್ಲೆಯಲ್ಲಿ 9ನೇ ಸುತ್ತಿನ ಕಾಲು ಬಾಯಿ ರೋಗದ ಉಚಿತ ಲಸಿಕಾ ಅಭಿಯಾನ ಹಮ್ಮಿಕೊಳ್ಳಲಾಗಿದೆ ಎಂದು ಅಪರ ಜಿಲ್ಲಾಧಿಕಾರಿ ಡಾ. ಔದ್ರಾಮ ಹೇಳಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಗುರುವಾರ ಹಮ್ಮಿಕೊಂಡ 2025-26ನೇ ಸಾಲಿನ ರಾಷ್ಟ್ರೀಯ ಜಾನುವಾರು ರೋಗಗಳ ನಿಯಂತ್ರಣ ಕಾರ್ಯಕ್ರಮ ಯೋಜನೆಯಡಿ 9ನೇ ಸುತ್ತಿನ ಕಾಲುಬಾಯಿ ಜ್ವರ ರೋಗದ ಲಸಿಕಾ ಕಾರ್ಯಕ್ರಮದ ಜಿಲ್ಲಾ ನಿರ್ವಹಣಾ ಸಮಿತಿ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.



ಜಾನುವಾರುಗಳಿಗೆ ಆರೋಗ್ಯ ಸಮಸ್ಯೆ ಉಂಟಾದಲ್ಲಿ 1962 ಪಶು ಸಹಾಯವಾಣಿಗೆ ಕರೆ ಮಾಡಿ ಉಚಿತ ಆಂಬ್ಯುಲೆನ್ಸ್ ಸೇವೆ ಪಡೆದುಕೊಳ್ಳಬಹುದಾಗಿದೆ. ಕಾಲು ಬಾಯಿ ರೋಗವು ಎತ್ತು, ಹೋರಿ, ಹಸು ಹಾಗೂ ಎಮ್ಮೆ ಉಂಟಾದರೆ ಆರ್ಥಿಕ ನಷ್ಟ ಉಂಟಾಗುತ್ತದೆ. ಅಲ್ಲದೆ ರೋಗದಿಂದ ಗುಣಮುಖವಾದ ಜಾನುವಾರುಗಳಿಗೆ ಗರ್ಭಕಟ್ಟುವಿಕೆಯಲ್ಲಿ ವಿಳಂಬ ಉಂಟಾಗುತ್ತದೆ. ಜೊತೆಗೆ ಹಾಲಿನ ಇಳುವರಿ ಕಡಿಮೆಯಾಗುವ ಸಾಧ್ಯತೆಯಿದೆ. 3 ತಿಂಗಳ ಮೇಲ್ಪಟ್ಟ ಎಲ್ಲ ಜಾನುವಾರುಗಳಿಗೆ ಲಸಿಕೆ ಹಾಕುವುದು ಅಗತ್ಯವಿದೆ ಎಂದರು. ಪಶುಸಂಗೋಪನಾ ಇಲಾಖೆಯ ಉಪನಿರ್ದೇಶಕ ಡಾ. ರೇವಣಸಿದ್ದಪ್ಪ ಪದರಾ, ಜಿಲ್ಲಾ ಮಟ್ಟದ ಅಧಿಕಾರಿಗಳು ಮತ್ತು ಪಶುಸಂಗೋಪನಾ ಇಲಾಖೆಯ ಉಪ ನಿರ್ದೇಶಕರು ಮತ್ತು ಮುಖ್ಯ ಪಶುವೈದ್ಯಾಧಿಕಾರಿಗಳು ಇದ್ದರು.



ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ಆರ್‌ಸಿಬಿ	5	4	1	0	8	+1.503
ರಾಜಸ್ಥಾನ	5	4	1	0	8	+0.889
ಪಂಜಾಬ್	4	3	0	1	7	+0.720
ಹೈದರಾಬಾದ್	5	2	3	0	4	+0.576
ದಿಲ್ಲಿ	4	2	2	0	4	+0.322
ಗುಜರಾತ್	4	2	2	0	4	-0.029
ಲಖನೌ	5	2	3	0	4	-0.804
ಚೆನ್ನೈ	5	2	3	0	4	-0.846
ಮುಂಬೈ	4	1	3	0	2	-0.772
ಕೆಕೆಆರ್	5	0	4	1	1	-1.383

ಪಂಜಾಬ್‌ಗೆ 197 ರನ್‌ಗಳ ಗುರಿ | ನಮನ್ ಅರ್ಧಶತಕ | ಅರ್ಶದೀಪ್‌ಗೆ 3 ವಿಕೆಟ್

ಮುಂಬೈಗೆ ಡಿಕಾಕ್ ಶತಕದ ಆಸರೆ

ಮುಂಬೈ: ಕ್ವಿಂಟನ್ ಡಿಕಾಕ್ ಅವರ ಸಮಯೋಚಿಕ ಬ್ಯಾಟಿಂಗ್‌ಗೆ ಪಂಜಾಬ್ ತಂಡ ತತ್ತರಿಸಿದ್ದು, ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯ ಪಂದ್ಯದಲ್ಲಿ ಮುಂಬೈ ಇಂಡಿಯನ್ಸ್ ದೊಡ್ಡ ಸ್ಕೋರ್ ನಿರ್ಮಿಸಿತು.

ರೋಹಿತ್ ಇಲ್ಲದೆ ಕಣಕ್ಕಿಳಿದ ಮುಂಬೈಗೆ ಆಘಾತ ಎದುರಾದರೂ ಡಿಕಾಕ್ ಹಾಗೂ ನಮನ್ ಅತ್ಯುತ್ತಮ ಬ್ಯಾಟಿಂಗ್ ಮಾಡಿದರು. ಇವರಿಬ್ಬರ ಆಸರೆ ಪಡೆದ ಮುಂಬೈ ಇಂಡಿಯನ್ಸ್ ಆರ್‌ಸಿಬಿ ವಿರುದ್ಧ ಕುಸಿತ ಕಂಡ ನಂತರ ಉತ್ತಮ ಸ್ಕೋರ್ ನಿರ್ಮಿಸಿತು. ಬ್ಯಾಟಿಂಗ್ ಆಹ್ವಾನ ಪಡೆದ ಹಾರ್ದಿಕ್ ಪಡೆ 195 ರನ್ ಗಳಿಸಿತು. ಪಂಜಾಬ್ 6 ವಿಕೆಟ್ ಪಡೆದುಕೊಂಡಿತು.

ರೋಹಿತ್ ಬದಲಿಗೆ ಕಣಕ್ಕಿಳಿದ ಡಿಕಾಕ್ 112(60ಎ, 8 ಬೌ, 7ಸಿ) ಇನ್ನಿಂಗ್ಸ್‌ನ ಹೀರೋ. ಇನ್ನಿಂಗ್ಸ್‌ನ ಅರ್ಧ ಓವರ್‌ಗಳ ವರೆಗೆ ಬ್ಯಾಟಿಂಗ್ ಮಾಡಿದ ಅವರು, ಪಂಜಾಬ್ ಪಡೆಯನ್ನು ದಂಡಿಸಿದರು. ಕೊನೆಯ ಬಾಲ್‌ವರೆಗೂ ಬ್ಯಾಟಿಂಗ್ ಮಾಡಿ ಸ್ಕೋರ್ ಹಿಗ್ಗಿಸಿದರು. ನಮನ್ ಕೂಡ ಅರ್ಧಶತಕ ಬಾರಿಸಿ ಮಿಂಚಿದರು.



ಆರಂಭಿಕ ಆಘಾತ: ಅಸಲಿಗೆ ಮುಂಬೈ ಇಂಡಿಯನ್ಸ್ ನಿರೀಕ್ಷಿತ ಆರಂಭ ಪಡೆದಿರಲಿಲ್ಲ. ಮೊದಲನೇ ಓವರ್‌ನಲ್ಲಿ ಕೇವಲ ಒಂದು ರನ್ ಮಾತ್ರ ಬಂದಿತ್ತು. ಎರಡನೇ ಓವರ್‌ನಲ್ಲಿ ಡಿಕಾಕ್ ಬೌಂಡರಿ ಬಾರಿಸಿದರು. ಅತ್ತ 2 ರನ್ ಮಾತ್ರ ಗಳಿಸಿದ್ದ ರಿಕೆಲ್ಟನ್ ಮೂರನೇ ಓವರ್‌ನಲ್ಲಿ ಕ್ಯಾಚ್ ಆದರು. ಮುಂದಿನ ಎಸೆತದಲ್ಲೇ ಸೂರ್ಯ ವಿಕೆಟ್ ಕೂಡ ಪಡೆದುಬಿಟ್ಟರು ವೇಗಿ ಅರ್ಶದೀಪ್ ಸಿಂಗ್. ಅಲ್ಲಿಗೆ 12 ರನ್ ಮಾತ್ರಕ್ಕೆ 2 ವಿಕೆಟ್ ಕಳೆದುಕೊಂಡು ಭಾರೀ ಸಂಕಷ್ಟದಲ್ಲಿದ್ದ ಮುಂಬೈ ನಮನ್ ಧಿರ್ ಅವರನ್ನು ನಾಲ್ಕನೇ ಕ್ರಮಾಂಕಕ್ಕೆ ಬಡ್ತಿ ನೀಡಿತು. ಬಂದ ತಕ್ಷಣವೇ ಕ್ಯಾಚ್ ಕೊಟ್ಟಿದ್ದ ಅವರು ಯಜುವೇಂದ್ರ ಚಾಹಲ್ ಅವರಿಂದ ಜೀವದಾನ ಪಡೆದರು. ಡಿಕಾಕ್ ಅವರನ್ನು ರನ್‌ಔಟ್ ಮಾಡುವ ಅವಕಾಶವೂ ಪಂಜಾಬ್ ಕಳೆದುಕೊಂಡಿತು. ದೊಡ್ಡ ಹೊಡೆತಕ್ಕೆ ಮುಂದಾಗ ಇವರಿಬ್ಬರು ವಿಕೆಟ್ ಉಳಿಸಿಕೊಳ್ಳುವ ಕೆಲಸಕ್ಕೆ ಬಿದ್ದರು. ಆದಾಗ್ಯೂ ಡಿಕಾಕ್ ತಮ್ಮ ವಿಸ್ಮಯಕಾರಿ ಹೊಡೆತಗಳ ಮೂಲಕ ಮಿಂಚಿದರು. ಅಲ್ಲಿಗೆ ಪವರ್‌ಪ್ಲೇ ಮುಕ್ತಾಯಗೊಂಡಿತು. ಮುಂಬೈ 48 ರನ್‌ಗಳಿಸಿತು.

ಡಿಕಾಕ್ ಶತಕ: ಪಂಜಾಬ್‌ಗೆ ಡಿಕಾಕ್ ಅವರನ್ನು ಕಟ್ಟಿಹಾಕಲು ಸಾಧ್ಯವೇ ಆಗಲಿಲ್ಲ, ಬಂದ ಬೌಲರ್‌ಗಳನ್ನೆಲ್ಲಾ ಅವರು ಮನ ಬಂದಂತೆ ದಂಡಿಸಿದರು. ಪ್ರಮುಖ ಬೌಲರ್‌ಗಳ ಬೆಂಡೆತ್ತಿದರು. ರೋಹಿತ್ ಶರ್ಮ ಅವರ ಬದಲಿಗೆ ತಂಡಕ್ಕೆ ಬಂದ ಅವರು ಭರ್ಜರಿ ಶತಕ ಬಾರಿಸಿದರು. ಒಟ್ಟು 60 ಎಸೆತದಲ್ಲಿ ಅವರು ಔಟಾಗದೆ 112 ರನ್‌ಗಳಿಸಿದರು. ಇನ್ನು ಡೆತ್ ಓವರ್‌ನಲ್ಲೂ ಅವರಬ್ಬರ ಮುಂದುವರಿಯಿತು. ತಿಲಕ್ ಕೂಡ ಎರಡು ಬೌಂಡರಿ ಬಾರಿಸಿದರು. ಮುಂಬೈ ಡೆತ್ ಓವರ್‌ಗಳಲ್ಲಿ 35 ರನ್ ಗಳಿಸಿ 3 ವಿಕೆಟ್ ಕಳೆದುಕೊಂಡಿತು.

ನಮನ್-ಡಿಕಾಕ್ ಜೊತೆಯಾಟ

ಮಧ್ಯಮ ಓವರ್‌ಗಳಲ್ಲಿ ಅಬ್ಬರದ ಬ್ಯಾಟಿಂಗ್ ಮಾಡಿದ ನಮನ್ ಹಾಗೂ ಡಿಕಾಕ್ ಜೋಡಿ ಪಂಜಾಬ್ ಬೌಲರ್‌ಗಳ ಮೇಲೆ ಮರುಪ್ರಹಾರ ಶುರು ಮಾಡಿದರು. ಕ್ಲಾಸಿಕಲ್ ಬೌಂಡರಿಗಳೊಂದಿಗೆ ಬಾನಿನೆತ್ತರದ ಸಿಕ್ಸರ್‌ಗಳನ್ನು ಬಾರಿಸಿದ ಡಿಕಾಕ್ ಪಂದ್ಯದ ಗತಿ ಬದಲಾಯಿಸಿದರು. ಅವರಿಗೆ ನಮನ್ ಅಷ್ಟೇ ಅಚ್ಚುಕಟ್ಟಾದ ಸಾಥ್ ಕೊಟ್ಟರು. ಕ್ಯಾಚ್ ಮತ್ತು ರನ್‌ಔಟ್ ಮಿಸ್ ಮಾಡಿದ್ದ ಪಂಜಾಬ್ ತಕ್ಕ ಬೆಲೆ ಕಟ್ಟಿತು. 30 ಬಾಲ್‌ಗಳಲ್ಲಿ ಅರ್ಧಶತಕ ಬಾರಿಸಿದ ಡಿಕಾಕ್ ಮುಂದೆ ತೀರಾ ಸ್ಫೋಟಕ ಬ್ಯಾಟಿಂಗ್ ಶುರು ಮಾಡಿದರು. ಅತ್ತ ನಮನ್ ಕೂಡ ಅಬ್ಬರಿಸಿದರು. ಯಾವ ಕ್ಯಾಚ್ ಬಿಟ್ಟ ಚಾಹಲ್ ಅವರನ್ನೇ ದಂಡಿಸಿದರು. ಅವರೂ 30 ಬಾಲ್‌ಗಳಲ್ಲಿ ಅರ್ಧ ಶತಕ ಬಾರಿಸಿದರು. ಇನ್ನೇನು ಪಂಜಾಬ್ ತಂಡವನ್ನು ದಂಡಿಸುತ್ತಾ ಮೆರೆದಾಡುತ್ತಿದ್ದ ಮುಂಬೈಗೆ ಶಶಾಂಕ್ ಸಿಂಗ್ ಆಘಾತ ನೀಡಲು ಬಂದರು. 14ನೇ ಓವರ್‌ನಲ್ಲಿ ನಮನ್ 50 ರನ್‌ಗೆ ವಿಕೆಟ್ ಒಪ್ಪಿಸಿದರು. ಅವರ 31 ಬಾಲ್‌ಗಳ ಇನ್ನಿಂಗ್ಸ್‌ನಲ್ಲಿ 3 ಸಿಕ್ಸರ್, 3 ಬೌಂಡರಿ ಸೇರಿವೆ. ಮಧ್ಯಮ ಓವರ್‌ಗಳಲ್ಲಿ (7-15) ಮುಂಬೈ 1 ವಿಕೆಟ್ ಕಳೆದುಕೊಂಡು 112 ರನ್‌ಬಾರಿಸಿತು. ಡೆತ್ ಓವರ್‌ನಲ್ಲಿ ಮುಂಬೈ ಅಂದುಕೊಂಡ ಸ್ಕೋರ್ ಮಾಡಲಾಗಲಿಲ್ಲ, ಹಾರ್ದಿಕ್ ಪಾಂಡ್ಯ ಸ್ಫೋಟಕ ಸಿಕ್ಸರ್ ಬಾರಿಸಿ ಅಬ್ಬರಿಸುವ ಹೊತ್ತಲ್ಲೇ ಶ್ರೇಯಸ್ ಅಯ್ಯರ್ ಅವರ ವಿಸ್ಮಯ ಕ್ಯಾಚ್‌ಗೆ ವಿಕೆಟ್ ಕೊಟ್ಟರು. ಅಲ್ಲಿಂದಲೇ ಡೆತ್ ಓವರ್‌ನಲ್ಲಿ ಕಂಬ್ಯಾಕ್ ಮಾಡಿತು ಪಂಜಾಬ್.

ಕಿರುಸುದ್ದಿ

ಸ್ಕ್ವಾಷ್: ಜೋಶ್ನಾ, ಚೋಟ್ರಾನಿ ಮುನ್ನಡೆ

ಹೊಸದಿಲ್ಲಿ: ಹ್ಯಾಂಬರ್ಗ್ ಓಪನ್ ಸ್ಕ್ವಾಷ್‌ನಲ್ಲಿ ಅನುಭವಿ ಆಟಗಾರ್ತಿ ಜೋಶ್ನಾ ಚಿನಪ್ಪ ಮತ್ತು ವೀರ್ ಚೋಟ್ರಾನಿ ಮುನ್ನಡೆದರೆ, ಭರವಸೆ ಆಟಗಾರ ವೆಲವನ್ ಸೆಂಥಿಲ್‌ಕುಮಾರ್ ಮತ್ತು ತನ್ವಿ ಖನ್ನಾ ಆರಂಭಿಕ ಸುತ್ತಿನಲ್ಲಿ ಸೋತರು. ವಿಶ್ವದ ಮಾಜಿ ಮಹಿಳಾ ನಂ. 10 ಜೋಶ್ನಾ ಸ್ಥಳೀಯ ಪ್ರತಿಸ್ಪರ್ಧಿ ಸಾಸ್ಕಿಯಾ ಬೀನ್ ಹಾರ್ಡ್ ಅವರನ್ನು 11-4, 11-5, 11-4 ಅಂತರದಿಂದ ಸೋಲಿಸಿದರೆ, ಪುರುಷರ ವಿಶ್ವದ ನಂ. 47 ಚೋಟ್ರಾನಿ ಪಿಎಸ್‌ಎ ಕಂಚಿನ ಮಟ್ಟದ ಸ್ಪರ್ಧೆಯಲ್ಲಿ ಸ್ಪೇನ್‌ನ ಇವಾನ್ ಪೆರೆಜ್ ಅವರನ್ನು 11-8, 11-9, 11-8 ಅಂತರದಿಂದ ಸೋಲಿಸಿದರು. ಈ ವಾರ ವಿಶ್ವ ಶ್ರೇಯಾಂಕ 22ಕ್ಕೆ ಏರಿದ ಪುರುಷರ ಐದನೇ ಶ್ರೇಯಾಂಕಿತ ಅಭಯ್ ಸಿಂಗ್ ಮತ್ತು ಏಳನೇ ಶ್ರೇಯಾಂಕಿತ ರಮಿತ್ ಟಂಡನ್ ಮೊದಲ ಸುತ್ತಿನಲ್ಲಿ ಬೈ ಪಡೆದರು.

ಪಿಕಲ್‌ಬಾಲ್: ಭಾರತಕ್ಕೆ ಪದಕ

ಹೊಸದಿಲ್ಲಿ: ಫ್ಲೋರಿಡಾದ ನೇಪಲ್ಸ್‌ನಲ್ಲಿ ನಡೆದ ಯುಎಸ್ ಓಪನ್ ಪಿಕಲ್‌ಬಾಲ್ ಚಾಂಪಿಯನ್‌ಶಿಪ್‌ನ ಪುರುಷರ ಡಬಲ್ಸ್ 5.0 ಸ್ಪರ್ಧೆಯಲ್ಲಿ ಅರ್ಜುನ್ ಸಿಂಗ್, ಆದಿತ್ಯ ಸಿಂಗ್ ಅವರೊಂದಿಗೆ ಸೇರಿ ಜೆ. ಮಿಯೋಡ್ ಮತ್ತು ಡಬ್ಲ್ಯೂ. ಲಿನ್ ಅವರನ್ನು 9-11, 11-2, 11-7 ಸೆಟ್‌ಗಳಿಂದ ಸೋಲಿಸುವ ಮೂಲಕ ಪ್ರಶಸ್ತಿ ಗೆದ್ದರು. ಪಂತ್ ಥಕ್ಕರ್ ಮತ್ತು ಅಥರ್ವ ಶೇತ್ 4.5 ಪುರುಷರ ಡಬಲ್ಸ್ ವಿಭಾಗದಲ್ಲಿ ಕಯಾನ್ ಅಪ್ಪೆಲ್ ಮತ್ತು ಮೈಕೆಲ್ ವ್ಯಾನ್ ಡ್ಯುಸೆನ್ ವಿರುದ್ಧ 8-11, 9-11 ಸೆಟ್‌ಗಳಿಂದ ಸೋತ ನಂತರ ಬೆಳ್ಳಿ ಪದಕ ಗೆದ್ದರು. ಇದು ಟೂರ್ನಿಯಲ್ಲಿ ಅರ್ಜುನ್ ಅವರ ಮೂರನೇ ಚಿನ್ನ ಮತ್ತು ಅವರ ಸಹೋದರ ಆದಿತ್ಯ ಅವರೊಂದಿಗೆ ಅವರ ಎರಡನೇ ಚಿನ್ನ. ಈ ಹಿಂದೆ ಅವರು ಟೂರ್ನಿಯಲ್ಲಿ ಖ18 ಬಾಲಕರ ಡಬಲ್ಸ್ ಪ್ರಶಸ್ತಿಯನ್ನು ಗೆದ್ದಿದ್ದರು.

ಫ್ರೆಂಚ್ ಓಪನ್ ಬಹುಮಾನ ಹೆಚ್ಚಳ

ಹೊಸದಿಲ್ಲಿ: ಟೆನಿಸ್ ಲೋಕದ ಪ್ರಮುಖ ಗ್ರ್ಯಾಂಡ್ ಸ್ಲಾಮ್ ಅನ್ನಿಸಿಕೊಳ್ಳುವ ಫ್ರೆಂಚ್ ಓಪನ್ ಪಂದ್ಯಾವಳಿಯ ಬಹುಮಾನವನ್ನು ಶೇ. 9.5ರಷ್ಟು ಹೆಚ್ಚಿಸಲಾಗಿದೆ ಎಂದು ಆಯೋಜಕರು ತಿಳಿಸಿದ್ದಾರೆ. ಗುರುವಾರ ಹೊರಡಿಸಲಾಗಿರುವ ಪ್ರಕಟಣೆಯಲ್ಲಿ ಮೊತ್ತವನ್ನು 61.7 ಮಿಲಿಯನ್ ಯೂರೋಗೆ ಹೆಚ್ಚಿಸಲಾಗಿದೆ. ಇದು 2025ರ ಬಹುಮಾನಕ್ಕೆ ಹೋಲಿಸಿದರೆ 5.4 ಮಿಲಿಯನ್ ಹೆಚ್ಚಾಗಿದೆ. ಕೂಟದ ಪ್ರತಿ ಹಂತಕ್ಕೂ ತಲಪುವ ಆಟಗಾರರಿಗೆ ಬಹುಮಾನ ಹೆಚ್ಚಿಸಲಾಗಿದೆ. ಅಂದರೆ ಇದು ಚಾಂಪಿಯನ್‌ಗಳಿಗೆ ಮಾತ್ರ ಸೀಮಿತವಾಗಿಲ್ಲ ಬದಲಾಗಿ ಭಾಗವಹಿಸುವ ಎಲ್ಲಾ ಕ್ರೀಡಾಪಟುಗಳಿಗೂ ಹೆಚ್ಚಿನ ಬಹುಮಾನ ಸಿಗಲಿದೆ. ಮೂರು ಗ್ರ್ಯಾಂಡ್‌ಸ್ಲಾಮ್‌ಗಳಲ್ಲಿ ಬಹುಮಾನ ಹೆಚ್ಚಿದರೂ ಫ್ರೆಂಚ್ ಓಪನ್‌ನಲ್ಲಿ ಮಾತ್ರ ಹೆಚ್ಚಿರಲಿಲ್ಲ. ಹೀಗಿರುವಾಗ ಆಯೋಜಕರು ಈ ನಿರ್ಧಾರ ಕೈಗೊಂಡಿದ್ದಾರೆ ಎನ್ನಲಾಗಿದೆ. ಗ್ರ್ಯಾಂಡ್‌ಸ್ಲಾಮ್ ವಿಚಾರಕ್ಕೆ ಬಂದರೆ ವಿಂಬಲ್ಡನ್ ಅತಿ ಕಡಿಮೆ ಬಹುಮಾನ ಹೊಂದಿದ ಕೂಟ. ಯುಎಸ್ ಓಪನ್‌ನ ಒಟ್ಟು ಬಹುಮಾನ 90 ಮಿಲಿಯನ್ ಡಾಲರ್ ಕೊಟ್ಟರೆ, ಆಸ್ಟ್ರೇಲಿಯಾ 79.92 ಮಿಲಿಯನ್ ಡಾಲರ್ ಬಹುಮಾನ ನೀಡಿದೆ.

ವೈಶಾಲಿಗೆ ಒಲಿದ ಕ್ಯಾಂಡಿಡೇಟ್ಸ್ ಪಟ್ಟ



ಸಾಧನೆ ಮಾಡಿದ ಎರಡನೇ ಭಾರತ ಮಹಿಳೆ

ಹೊಸದಿಲ್ಲಿ: ಚೆಸ್ ಕ್ರೀಡಾ ಕ್ಷೇತ್ರದಲ್ಲಿ ಭಾರತದ ಪಾರುಪತ್ಯ ಮುಂದುವರಿದಿದೆ. ಕಳೆದ ವರ್ಷ ಡಿ. ಗುಕೇಶ್ ವಿಶ್ವಚಾಂಪಿಯನ್ ಶಿಪ್ ಪಟ್ಟ ಗೆದ್ದ ನಂತರ ಇದೀಗ ಮಹಿಳೆಯರ ವಿಭಾಗದ ಫಿಡೆ ಕ್ಯಾಂಡಿಡೇಟ್ಸ್ ಚಾಂಪಿಯನ್‌ಶಿಪ್ ಪಂದ್ಯಾವಳಿಯಲ್ಲಿ ಆರ್. ವೈಶಾಲಿ ವಿಜಯಶಾಲಿಯಾಗಿದ್ದಾರೆ. ಇದರೊಂದಿಗೆ ವಿಶ್ವ ಚಾಂಪಿಯನ್ ಆಗುವುದಕ್ಕೆ ದಾಪುಗಾಲು ಹಾಕಿರುವ ಅವರು, ಈ ಸಾಧನೆ ಮಾಡಿರುವ ಮೊದಲ ಭಾರತೀಯೆ ಎನ್ನಿಸಿಕೊಂಡಿದ್ದಾರೆ. ಪುರುಷರ ಪಂದ್ಯಾವಳಿಯಲ್ಲಿ ಪ್ರಜ್ಞಾನಂದ ಸೇರಿದಂತೆ ಪ್ರಮುಖ ಆಟಗಾರರು ಹಿನ್ನಡೆ ಅನುಭವಿಸಿದ ನಂತರ ಭಾರತದ ಏಕೈಕ ನಿರೀಕ್ಷೆಯಾಗಿ ಗ್ರ್ಯಾಂಡ್‌ಮಾಸ್ಟರ್ ಆರ್.ವೈಶಾಲಿ ಉಳಿದಿದ್ದರು. ವಿಶ್ವದ ಅಗ್ರ ಶ್ರೇಯಾಂಕಿತ ಚೆಸ್ ಪಟುಗಳನ್ನು ಎದುರಿಸಿದ್ದ ಅವರು ಮೊದಲಿನಿಂದಲೂ ಪ್ರಾಬಲ್ಯ ಸಾಧಿಸುತ್ತಾ ಬಂದರು. ಕ್ಯಾಂಡಿಡೇಟ್ಸ್ ಗೆದ್ದ ಮೊದಲ ಭಾರತೀಯ ಮಹಿಳೆ ಎಂಬ ಹೆಗ್ಗಳಿಕೆ ಪಡೆದಿರುವ ಅವರು, ಅಂತಿಮ ಸುತ್ತಿನಲ್ಲಿ ರಷ್ಯಾದ ಕ್ಯಾತರಿನಾ ಲಾಗ್ನೊ ಅವರನ್ನು ಸೋಲಿಸಿ ಈ ಸಾಧನೆಗೈದರು. ಇನ್ನು ಮಹಿಳಾ ವಿಶ್ವ ಚಾಂಪಿಯನ್ ಶಿಪ್ ಕಿರೀಟಕ್ಕಾಗಿ ಜು ವೆಂಜುನ್ ವಿರುದ್ಧ ಹೋರಾಡಲಿದ್ದಾರೆ. ಬುಧವಾರದ ಅಂತಿಮ ಸುತ್ತಿನ ಗೆಲುವಿನ ನಂತರ 8.5 ಅಂಕ ಗಳಿಸಿದ ವೈಶಾಲಿ ಅರ್ಧ ಪಾಯಿಂಟ್ ಅಂತರದಿಂದ ಒಂಟಿಯಾಗಿ ಅಗ್ರಸ್ಥಾನ ಪಡೆದರು. ಕಜಾಕಸ್ತಾನದ ಬಿಬಿಸಾರ ಅಸೌಬಯೇವಾ (8) ಎರಡನೇ ಸ್ಥಾನ ಪಡೆದರು. ಅವರು ಅಂತಿಮ ಸುತ್ತಿನಲ್ಲಿ ಭಾರತದ ದಿವ್ಯಾ ದೇಶಮುಖ್ (5.5) ವಿರುದ್ಧ ಡ್ರಾ ಮಾಡಿಕೊಂಡರು.

ಗ್ರ್ಯಾಂಡ್‌ಮಾಸ್ಟರ್ ಪಟ್ಟ ಪಡೆದ ವರ್ಷಗಳು

ಪಟ್ಟ	ವರ್ಷ
ಮಹಿಳಾ ಗ್ರ್ಯಾಂಡ್‌ಮಾಸ್ಟರ್	2013
ಮಹಿಳಾ ಇಂಟರ್‌ನ್ಯಾಷನಲ್ ಮಾಸ್ಟರ್	2016
ಮಹಿಳಾ ಗ್ರ್ಯಾಂಡ್‌ಮಾಸ್ಟರ್	2018
ಇಂಟರ್‌ನ್ಯಾಷನಲ್ ಮಾಸ್ಟರ್	2021
ಗ್ರ್ಯಾಂಡ್ ಮಾಸ್ಟರ್	2024

ನನ್ನ ಕನಸು ನನಸಾಗಿದೆ. ಪಂದ್ಯಾವಳಿಯ ಪ್ರಮುಖ ಪಂದ್ಯದಲ್ಲಿ ನಾನು ಝು ಜಿನರ್ ಅವರ ವಿರುದ್ಧ ಸೋತಾಗ ಒತ್ತಡವಿತ್ತು. ಆದರೆ ನಾನು ನನ್ನ ಆಟದ ಮೇಲೆ ಗಮನ ಹರಿಸಿ ಕೊನೆಯ ಸುತ್ತುಗಳಲ್ಲಿ ಉತ್ತಮ ಪ್ರದರ್ಶನ ನೀಡಿರುವುದು ನನಗೆ ಸಂತಸ ತಂದಿದೆ. ನಾನು ನನ್ನ ಬೆಸ್ಟ್ ಆಟವಾಡಿದ್ದೇನೆ, ಮುಂದಿನ ಗುರಿ ವಿಶ್ವ ಚಾಂಪಿಯನ್‌ಶಿಪ್.

■ ಆರ್. ವೈಶಾಲಿ, ಕ್ಯಾಂಡಿಡೇಟ್ಸ್ ಚಾಂಪಿಯನ್

- ಕ್ಯಾತರಿನಾ ಲಾಗ್ನೊ ಸೋಲಿಸಿದ ಗ್ರ್ಯಾಂಡ್‌ಮಾಸ್ಟರ್
- ವಿಶ್ವಚಾಂಪಿಯನ್‌ಶಿಪ್‌ಗೆ ಅರ್ಹ
- ಉನ್ನತ ಪಂದ್ಯಾವಳಿಯಲ್ಲಿ ಚೀನಾದ ಜು ವೆಂಜುನ್ ಎದುರಾಳಿ

15 ವರ್ಷಗಳ ಬಳಿಕ ಇತಿಹಾಸ

ವೈಶಾಲಿ ಮಹಿಳಾ ವಿಶ್ವ ಚಾಂಪಿಯನ್‌ಶಿಪ್ ಪ್ರಶಸ್ತಿಗಾಗಿ ಹೋರಾಡಿದ ಎರಡನೇ ಭಾರತೀಯ ಮಹಿಳೆ ಮತ್ತು 15 ವರ್ಷಗಳ ನಂತರ ಈ ಟೂರ್ನಿಯಲ್ಲಿ ಪಾಲ್ಗೊಳ್ಳುತ್ತಿರುವ ಮೊದಲಿಗರು ಅನ್ನಿಸಿಕೊಂಡರು. ಕೊನೆರು ಹಂಪಿ ಈ ಸಾಧನೆ ಮಾಡಿದ ಮೊದಲ ಭಾರತೀಯ ಮಹಿಳೆಯಾಗಿದ್ದಾರೆ. ಅವರು 2011ರಲ್ಲಿ ಅಲ್ಬೇನಿಯಾದ ಟಿರಾನಾದಲ್ಲಿ ಹೌ ಯಿಫಾನ್ ಅವರನ್ನು ಎದುರಿಸಿದ್ದರು. ಇತ್ತ ಸವಾಲಿಗೆ ಸಿದ್ಧವಾಗುತ್ತಿರುವ ವೈಶಾಲಿಗೆ ಕ್ಯಾಂಡಿಡೇಟ್ಸ್ ಗೆಲುವು ಕಳೆದ ಮೂರು ವರ್ಷಗಳಲ್ಲಿ ವೈಶಾಲಿ ಗೆದ್ದ ಮೂರನೇ ದೊಡ್ಡ ಪ್ರಶಸ್ತಿಯಾಗಿದೆ. 24 ವರ್ಷದ ಅವರು ಎರಡು ಬಾರಿ ಫಿಡೆ ಗ್ರ್ಯಾಂಡ್ ಸ್ವಿಸ್ ಪಂದ್ಯಾವಳಿಯನ್ನು ಗೆದ್ದಿದ್ದಾರೆ. ಮತ್ತು 2024 ರಲ್ಲಿ ಮಹಿಳಾ ಒಲಿಂಪಿಯಾಡ್ ವಿಜಯದ ಭಾಗವಾಗಿದ್ದರು.

ವೈಶಾಲಿ ಸಾಧನೆಗಾಥೆ

ಪುರುಷರ ಗ್ರ್ಯಾಂಡ್‌ಮಾಸ್ಟರ್ ಆರ್. ಪ್ರಜ್ಞಾನಂದ ಅವರ ಸಹೋದರಿ ಆರ. ವೈಶಾಲಿ, ಭಾರತದ ಪ್ರಮುಖ ಚೆಸ್ ಆಟಗಾರರಲ್ಲಿ ಒಬ್ಬರು. ಸ್ವಿಸ್ ಚಾಂಪಿಯನ್‌ಶಿಪ್, ಒಲಿಂಪಿಯಾಡ್ ಸೇರಿದಂತೆ ವಿವಿಧ ಟೂರ್ನಿಗಳಲ್ಲಿ ಐತಿಹಾಸಿಕ ಸಾಧನೆ ಮಾಡಿದ್ದಾರೆ. ಮೂಲತಃ ತಮಿಳುನಾಡಿನವರಾದ ಅವರು, ಬಾಲ್ಯದಿಂದಲೇ ಚೆಸ್‌ನಲ್ಲಿ ಆಸಕ್ತರಾಗಿದ್ದರು. ತಮ್ಮನ ಚೆಸ್ ಆಟದೊಂದಿಗೆ ಅಭ್ಯಾಸಕ್ಕಿಳಿದ ಅವರು, ಮುಂದೊಂದು ದಿನ ವೃತ್ತಿಜೀವನವಾಗಿ ಆಯ್ಕೆ ಮಾಡಿಕೊಂಡರು. 2012ರಿಂದ 2015ರವರೆಗೆ ಭಾರತದಲ್ಲಿ ಛಾಪು ಮೂಡಿಸಿದರು. ಮೊದಲಿಗೆ ಮಹಿಳಾ ಗ್ರ್ಯಾಂಡ್‌ಮಾಸ್ಟರ್ ಎಂಬ ಪಟ್ಟ ಪಡೆದಿದ್ದ ಅವರು 2024ರಲ್ಲಿ ಗ್ರ್ಯಾಂಡ್‌ಮಾಸ್ಟರ್ ಎಂಬ ಪಟ್ಟವೂ ಪಡೆದರು. ಗ್ರ್ಯಾಂಡ್‌ಮಾಸ್ಟರ್ ಪಟ್ಟ ಪಡೆದ ನಂತರದಿಂದ ವೈಶಾಲಿ ಚೆಸ್ ಅಂಗಳದಲ್ಲಿ ದಾಖಲೆಗಳನ್ನು ಮಾಡುತ್ತಲೇ ಬಂದಿದ್ದಾರೆ. ಬಹುತೇಕ ಎಲ್ಲಾ ಪ್ರಮುಖ ಅಂತಾರಾಷ್ಟ್ರೀಯ ಪಂದ್ಯಾವಳಿಗಳಲ್ಲಿ ಭಾರತವನ್ನು ಪ್ರತಿನಿಧಿಸಿದ್ದಾರೆ.



ಯಾರ್ಯಾರು ಚಾಂಪಿಯನ್ಸ್

ರಷ್ಯಾದ ಅಲೆಕ್ಸಾಂಡ್ರಾ ಗೊರ್ಯಾಚ್ಕಿನಾ ಮತ್ತು ಚೀನಾದ ಝು ಜಿನೆರ್ (ತಲಾ 7.5) ಅವರು ಮೂರನೇ ಸ್ಥಾನ ಹಂಚಿಕೊಂಡರು. ಓಪನ್ ವಿಭಾಗದಲ್ಲಿ ಉಜ್ಬೇಕಿಸ್ತಾನದ ಜಾವೊಖಿರ್ ಸಿಂದರೋವ್ (10 ಪಾಯಿಂಟ್ಸ್) ಒಂದು ಸುತ್ತು ಮೊದಲೇ ಚಾಂಪಿಯನ್ ಆಗಿದ್ದು, ಅವರು ಕೊನೆಯ ಸುತ್ತಿನಲ್ಲಿ ಚೀನಾದ ವೀ ಯಿ (7) ಜೊತೆ ಡ್ರಾ ಮಾಡಿಕೊಂಡರು. ಪ್ರಜ್ಞಾನಂದ (6) ಕೊನೆಯ ಸುತ್ತಿನಲ್ಲಿ ಅಮೆರಿಕದ ಹಿಕಾರು ನಕಾಮುರ (6.5) ಜೊತೆ ಡ್ರಾ ಮಾಡಿಕೊಂಡರು. ಜರ್ಮನಿಯ ಮಥಾಯಸ್ ಬ್ಲೂಬಾಮ್ (7) ಅವರನ್ನು ಸೋಲಿಸಿದ ನೆದರ್ಲೆಂಡ್ಸ್‌ನ ಅನಿಶ್ ಗಿರಿ (8.5) ಎರಡನೇ ಸ್ಥಾನ ಪಡೆದರು.

ಫ್ರಾಂಚೈಸಿಗಳಿಗೆ ನಿಲ್ಲದ ಗಾಯದ ಚಿಂತೆ

ಐಪಿಎಲ್: ಖಲೀಲ್, ಪೇನ್ ಹೊರಕ್ಕೆ

ಹೈದರಾಬಾದ್: ಗೆಲುವಿನ ಹಳಿಗೆ ಮರಳಿದ ಖುಷಿಯಲ್ಲಿದ್ದ ಚೆನ್ನೈ ಸೂಪರ್ ಕಿಂಗ್ಸ್ ತಂಡಕ್ಕೆ ಆಘಾತ ಎದುರಾಗಿದ್ದು, ತಂಡದ ಪ್ರಮುಖ ವೇಗಿ ಖಲೀಲ್ ಅಹ್ಮದ್ ಗಾಯದ ಕಾರಣದಿಂದಾಗಿ ಪ್ರತಿಷ್ಠಿತ ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯಿಂದ ಹೊರಬಿದ್ದರು.





ಕೋಲ್ಕತ್ತಾ ನೈಟ್ ರೈಡರ್ಸ್ ವಿರುದ್ಧ ನಡೆದ ಪಂದ್ಯದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಅವರು, ಅದೇ ಪಂದ್ಯದ ತಮ್ಮ ಕೋಟಾದ ಕೊನೆಯ ಓವರ್ ಮಾಡುವ ವೇಳೆ ಗಾಯಗೊಂಡಿದ್ದರು. ಕ್ವಾಡ್ರೈಸ್ಪ್ ಗಾಯದಿಂದ ಹೊರನಡೆದ ಅವರು ಉಳಿದ ಭಾಗದ ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯಿಂದಲೇ ಹೊರನಡೆದಿದ್ದಾರೆಂದು ಫ್ರಾಂಚೈಸಿ ಅಧಿಕೃತವಾಗಿ ತಿಳಿಸಿದೆ. ಗುರುವಾರದಂದು ಮಾಧ್ಯಮಗೋಷ್ಠಿಯಲ್ಲಿ ಚೆನ್ನೈ, ಖಲೀಲ್ ಅಹ್ಮದ್ ಅವರಿಗೆ ಗಾಯವಾಗಿದೆ. ಚೇತರಿಸಿಕೊಳ್ಳಲು ಸುಮಾರು 12 ವಾರಗಳ ಅವಶ್ಯಕತೆಯಿದೆ ಹೀಗಾಗಿ ಅವರು ಮುಂದಿನ ಭಾಗದಲ್ಲಿ ತಂಡದಲ್ಲಿರುವುದಿಲ್ಲ ಎಂದು ತಿಳಿಸಿದೆ. ಈಗಾಗಲೆ ನಾಥನ್ ಎಲ್ಲಿಸ್ ಗಾಯದಿಂದ ಹೊರನಡೆದಿದ್ದಾರೆ. ಚೆನ್ನೈ ತಂಡದ ಬೌಲಿಂಗ್ ಮೇಲೆ ಪರಿಣಾಮಕಾರಿ ಒತ್ತಡ ಬೀಳಲಿದೆ. ಬದಲಿ ಆಟಗಾರರನ್ನು ಆಯ್ಕೆ ಮಾಡಿಕೊಳ್ಳುವ ಬಗ್ಗೆ ಯಾವುದೇ ಹೇಳಿಕೆ ಚೆನ್ನೈ ಸೂಪರ್ ಕಿಂಗ್ಸ್ ತಂಡ ತಿಳಿಸಿಲ್ಲ.

ಹೈದರಾಬಾದ್‌ಗೆ ಧೋನಿ

ತಂಡದ ಪ್ರಮುಖ ಆಟಗಾರ ಮಹೇಂದ್ರ ಸಿಂಗ್ ಧೋನಿ ಚೆನ್ನೈ ತಂಡದೊಂದಿಗೆ ಹೈದರಾಬಾದ್‌ಗೆ ತೆರಳಿದ್ದಾರೆ. ಕಾಲ್ಫ್ ಸ್ಟ್ರೈನ್‌ನಿಂದ ಬಳಲುತ್ತಿದ್ದ ಧೋನಿ ಕಳೆದ ಪಂದ್ಯಗಳಲ್ಲಿ ಆಡಿರಲೇ ಇಲ್ಲ. ಸಂಜು ಸ್ಯಾಮ್ಸನ್ ವಿಕೆಟ್ ಕೀಪಿಂಗ್ ಮಾಡಿದ್ದರು. ಈ ಹಿಂದಿನ ಪಂದ್ಯದ ನಂತರ ಮುಖ್ಯ ಕೋಚ್ ಧೋನಿ ಆಡುವ ಬಗ್ಗೆ ಮಾತನಾಡಿದ್ದರು. ಶನಿವಾರದ ಪಂದ್ಯಕ್ಕಾಗಿ ಚೆನ್ನೈ ಸೂಪರ್ ಕಿಂಗ್ಸ್ ಹೈದರಾಬಾದ್‌ಗೆ ತೆರಳಿದ್ದು ಬಸ್ಸಿನಲ್ಲಿ ಧೋನಿ ಕಾಣಿಸಿಕೊಂಡಿದ್ದಾರೆ.

ಡೆವಿಡ್ ಪೇನ್ ಹೊರಕ್ಕೆ

ಇತ್ತ ಸನ್‌ರೈಸರ್ಸ್ ಹೈದರಾಬಾದ್ ತಂಡದಿಂದ ಡೆವಿಡ್ ಪೇನ್ ಹೊರಬಿದ್ದರು. ತಂಡದ ವೇಗಿಗಳ ಪಡೆಯ ಪ್ರಮುಖ ಬೌಲರ್‌ಗಳಲ್ಲಿ ಒಬ್ಬರಾಗಿದ್ದ ಅವರು, ಕೈಗೆ ಆದ ಬಲವಾದ ಗಾಯದಿಂದ ಹೊರನಡೆದಿದ್ದಾರೆಂದ ಫ್ರಾಂಚೈಸಿ ಗುರುವಾರ ತಿಳಿಸಿದೆ. ಹಿಂದಿನ ಪಂದ್ಯಗಳಲ್ಲಿ ಅವರು ಆರ್‌ಸಿಬಿ ಹಾಗೂ ಕೆಕೆಆರ್ ವಿರುದ್ಧ ಕಣಕ್ಕಿಳಿದಿದ್ದರು.

ಗುಜರಾತ್‌ಗೆ ಗೆಲುವಿನ ಗುರಿ

ಅಹಮದಾಬಾದ್: ಸೋಲಿನ ಸುಳಿಯಲ್ಲಿ ಸಿಲುಕಿಕೊಂಡಿರುವ ಕೋಲ್ಕತ್ತಾ ನೈಟ್ ರೈಡರ್ಸ್ ತಂಡವು ಶುಕ್ರವಾರ ನಡೆಯಲಿರುವ ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯ ಪಂದ್ಯದಲ್ಲಿ ಗುಜರಾತ್ ಟೈಟಾನ್ಸ್ ತಂಡವನ್ನು ಎದುರಿಸಲಿದೆ.

ಗೆಲುವುಗಳೊಂದಿಗೆ ಮಿಂಚುತ್ತಿರುವ ಗುಜರಾತ್ ತನ್ನ ತವರು ಪಂದ್ಯದಲ್ಲಿ ನಾಗಾಲೋಟ ಮುಂದುವರಿಸುವ ಹಂಬಲದಲ್ಲಿದ್ದು, ಗಿಲ್ ಪಡೆ ಸವಾಲಿಗೆ ಸಜ್ಜಾಗಿ ನಿಂತಿದೆ. ಚೆನ್ನೈ ವಿರುದ್ಧ ನಡೆದಿದ್ದ ಪಂದ್ಯದಲ್ಲಿ ಕೆಕೆಆರ್ ಮತ್ತೊಮ್ಮೆ ಹೀನಾಯವಾಗಿ ಸೋತಿತ್ತು. ಇತ್ತ ಗುಜರಾತ್ ಟೈಟಾನ್ಸ್ ಲಖನೌ ಸೂಪರ್ ಜೇಂಟ್ಸ್ ತಂಡದ ವಿರುದ್ಧ ಸುಲಭ ಜಯ ಸಾಧಿಸಿತ್ತು. ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಪಂದ್ಯ ನಡೆಯಲಿದ್ದು ರನ್ ಹೊಳೆ ಹರಿಯುವ ಸಾಧ್ಯತೆ ಇದೆ ಎನ್ನಬಹುದು.

ಕುಸಿದ ಕೆಕೆಆರ್‌ಗೆ ಚಿಂತೆ: ಅನುಭವದ ಬೌಲಿಂಗ್ ಪಡೆ ಇಲ್ಲ. ಇದ್ದವರು ಮಿಂಚಿದರೂ ಬ್ಯಾಟಿಂಗ್‌ನಲ್ಲಿ ಹಿನ್ನಡೆ ಅನುಭವಿಸುತ್ತಿದೆ. ವೇಗಿಗಳಾದ ಪಥಿರಾಣ, ಹರ್ಷಿತ್ ರಾಣಾ ಮತ್ತು ಆಕಾಶ್‌ದೀಪ್ ಕೈಕೊಟ್ಟಿರುವುದು ತಂಡಕ್ಕೆ ದೊಡ್ಡ ಹಿನ್ನಡೆ ತಂದಿದೆ. ಸ್ಪಿನ್ನರ್‌ಗಳಾದ ಸುನಿಲ್ ನರೈನ್ ಮತ್ತು ವರುಣ್ ಚಕ್ರವರ್ತಿ ಕೂಡ ಅಲ್ಪ ದುಬಾರಿಯಾಗಿದ್ದಾರೆ. ಅಂಕುಲ್ ರಾಯ್ ಒಬ್ಬರೇ ವಿಕೆಟ್ ಕಿತ್ತವರು. ಇತ್ತ ಬ್ಯಾಟಿಂಗ್‌ನಲ್ಲಿ ಫಿನ್ ಆಲೆನ್ ಲಯದ ಹುಡುಕಾಟದಲ್ಲಿದ್ದಾರೆ. ನರೈನ್ ಮತ್ತೊಮ್ಮೆ ಆರಂಭಿಕರಾಗಿ ಕಾಣಿಸಿಕೊಂಡಿದ್ದರೂ ಕಳೆದ ಪಂದ್ಯದಲ್ಲಿ ನಿರೀಕ್ಷಿತ ಫಲಿತಾಂಶ ಕೊಟ್ಟಿಲ್ಲ. ಅಜಿಂಕ್ಯಾ



ರಹಾನೆ ಉತ್ತಮ ಬ್ಯಾಟಿಂಗ್ ಮಾಡಿದ್ದಾರೆ. ಇತ್ತ ರಿಂಕು ಸಿಂಗ್, ರಮಣದೀಪ್ ಲಯಕ್ಕೆ ಬರಬೇಕಿದೆ.


ಗುಜರಾತ್‌ಗೆ ವಿಶ್ವಾಸ: ಜಾಸ್ ಬಟ್ಲರ್ ತಮ್ಮ ನೈಜ ಲಯಕ್ಕೆ ಮರಳಿದ್ದು ತಂಡದ ವಿಶ್ವಾಸವನ್ನೇ ಹೆಚ್ಚಿಸಿದೆ. ಗಿಲ್ ಕೂಡ ಉತ್ತಮ ಬ್ಯಾಟಿಂಗ್ ಮಾಡಿದ್ದಾರೆ. ಹಿಂದಿನ ಪಂದ್ಯಗಳಲ್ಲಿ ಅವರು ಮಿಂಚಿದ್ದು ಬ್ಯಾಟಿಂಗ್ ಪಡೆಗೆ ಬಲ ತಂದಿದೆ. ಮಧ್ಯಮ ಕ್ರಮಾಂಕದಲ್ಲಿ ಸ್ಫೋಟಕ ಬ್ಯಾಟರ್ ಫಿಲಿಪ್ಸ್, ಟೇವಾಟಿಯಾ ಸೇರಿದಂತೆ ಪ್ರಮುಖರು ಲಯಕ್ಕೆ ಬರಬೇಕಿದೆ. ಬೌಲಿಂಗ್ ವಿಚಾರಕ್ಕೆ ಬಂದರೆ ಪ್ರಸಿದ್ಧ ಕೃಷ್ಣ ಅತ್ಯುತ್ತಮ ಪ್ರದರ್ಶನ ನೀಡಿದ್ದಾರೆ. ಹಿಂದಿನ ಪಂದ್ಯಗಳಲ್ಲಿ ಕರಾರುವಾಕ್ ಬೌಲಿಂಗ್ ದಾಳಿಗೆ ರಬಾಡ ಸೇರಿದಂತೆ ಪ್ರಮುಖ ವೇಗಿಗಳ ಸಾಥ್ ಸಿಕ್ಕಿದೆ. ಸ್ಪಿನ್ ವಿಭಾಗದಲ್ಲಿ ರಶೀದ್ ಖಾನ್ ಲಯಕ್ಕೆ ಮರಳಿದ್ದಾರೆ.

ಬೆಂಗಳೂರಿನಲ್ಲಿ ನಡೆದ ಕೂಟದಲ್ಲಿ ಸ್ಫೂರ್ತಿದಾಯಕ ಸಾಧನೆ

ಹೈರಾಕ್ಸ್‌ನಲ್ಲಿ ವಿಶೇಷ ಕ್ರೀಡಾಪಟುಗಳ ಸಾಧನೆ

ಬೆಂಗಳೂರು: ಬೆಂಗಳೂರು ಅಂತಾರಾಷ್ಟ್ರೀಯ ಪ್ರದರ್ಶನ ಕೇಂದ್ರದಲ್ಲಿ ಇತ್ತೀಚೆಗೆ ನಡೆದ ಅಲ್ಟ್ರಾಹ್ಯೂಮನ್ ಹೈರಾಕ್ಸ್ ಸ್ಪರ್ಧೆಯಲ್ಲಿ ಅಡಾಪ್ಟಿವ್' ವಿಭಾಗದ ವಿಶೇಷ ಸಾಮರ್ಥ್ಯದ ಕ್ರೀಡಾಪಟುಗಳು ಅತ್ಯಂತ ಪ್ರೇರಣಾದಾಯಕ ಪ್ರದರ್ಶನ ನೀಡಿದರು.

ಈ ವಿಭಾಗದಲ್ಲಿ ಪ್ರಮುಖವಾಗಿ ಗಮನ ಸೆಳೆದವರು ಶಾಲಿನಿ ಸರಸ್ವತಿ. ನಾಲ್ಕು ಅಂಗಗಳನ್ನು ಕಳೆದುಕೊಂಡಿದ್ದರೂ ತಮ್ಮ ಹೋರಾಟ ಮನೋಭಾವದಿಂದ ಅವರು ಕ್ರೀಡೆಯಲ್ಲಿ ಹೊಸ ದಿಕ್ಕು ತೋರಿಸಿದ್ದಾರೆ. 2012ರಲ್ಲಿ ಅಪರೂಪದ ಬ್ಯಾಕ್ಟೀರಿಯಾ ಸೋಂಕಿನಿಂದಾಗಿ ಅವರು ತಮ್ಮ ನಾಲ್ಕು ಅಂಗಗಳನ್ನು ಕಳೆದುಕೊಂಡರು. ಆದರೂ ಅವರು ಹಿಂಜರಿಯದೆ 2021ರಲ್ಲಿ ಚಿನ್ನ ಮತ್ತು 2022ರಲ್ಲಿ ಬೆಳ್ಳಿ ಪದಕವನ್ನು ರಾಷ್ಟ್ರೀಯ ಪ್ಯಾರಾ ಗೇಮ್ಸ್‌ನಲ್ಲಿ 100 ಮೀ ಓಟದಲ್ಲಿ ಗೆದ್ದಿದ್ದಾರೆ. 2023ರ ಹ್ಯಾಂಗ್‌ಝೌ ಏಷ್ಯನ್ ಗೇಮ್ಸ್‌ನಲ್ಲಿ ಭಾರತವನ್ನು ಪ್ರತಿನಿಧಿಸಿರುವ ಅವರು ಟಿ62 ವಿಭಾಗದಲ್ಲಿ ಏಷ್ಯಾ ದಾಖಲೆ ಹೊಂದಿದ್ದಾರೆ.




ಪ್ರೊಫೆಷನಲ್ ಅಥ್ಲೆಟಿಕ್ಸ್‌ನಿಂದ ನಿವೃತ್ತಿಯಾದ ಬಳಿಕ ಹೈರಾಕ್ಸ್ ಸ್ಪರ್ಧೆಯನ್ನು ತಮ್ಮ ಹೊಸ ಗುರಿಯನ್ನಾಗಿ ಮಾಡಿಕೊಂಡಿರುವ ಅವರು, ಇದು ಸಹನಶಕ್ತಿ ಮತ್ತು ಶಕ್ತಿಯ ಉತ್ತಮ ಸಂಯೋಜನೆ ಎಂದು ಹೇಳಿದ್ದಾರೆ. ಸ್ಪರ್ಧೆಯ ಅನುಭವದ ಬಗ್ಗೆ ಮಾತನಾಡಿದ ಅವರು, ವಾಲ್ ಬಾಲ್ಸ್ ಬಹಳ ಕಷ್ಟವಾಗಿತ್ತು, ಆದರೆ ಪ್ರೇಕ್ಷಕರ ಪ್ರೋತ್ಸಾಹವೇ ನನಗೆ ಶಕ್ತಿ ನೀಡಿತು, ಎಂದು ಹೇಳಿದರು.

ಇನ್ನೊಬ್ಬ ಕ್ರೀಡಾಪಟು ವೀನಿತಾ ಜಾನ್ಸನ್ ಪುಣೆಯಿಂದ ಆಗಮಿಸಿದ್ದು, ಪಾದ ಸಮಸ್ಯೆ ಇದ್ದರೂ ತಮ್ಮ ಜೀವನವನ್ನು ಫಿಟ್ನೆಸ್‌ಗೆ ಅರ್ಪಿಸಿದ್ದಾರೆ. ಈ ವಿಭಾಗದಲ್ಲಿ ಸ್ಪರ್ಧಿಸುವುದು ನನಗೆ ಬಹಳ ಸಂತೋಷ ತಂದಿತು. ಜನರ ಪ್ರೋತ್ಸಾಹ ಸ್ಪರ್ಧೆಯನ್ನು ಹಬ್ಬದಂತಾಗಿಸಿತು, ಎಂದು ಅವರು ಹೇಳಿದರು. ಮುಂಬೈ ಇಂಜಿನಿಯರ್ ರಿಷಿ ವಾಖಾರಿಯಾ ಕೂಡ ಗಮನ ಸೆಳೆದರು. ಜನ್ಮತಃ ಶ್ರವಣ ದೋಷ ಹೊಂದಿದ್ದರೂ, ಕೊಕ್ಲಿಯರ್ ಇಂಪ್ಲಾಂಟ್ ಸಹಾಯದಿಂದ ಅವರು ಸಾಮಾನ್ಯ ಜೀವನ ನಡೆಸುತ್ತಿದ್ದಾರೆ. ಹೈರಾಕ್ಸ್ ನನ್ನಿಗೆ ಕೇವಲ ಫಿಟ್ನೆಸ್ ಸ್ಪರ್ಧೆಯಲ್ಲ, ಅದು ಆತ್ಮಸ್ಥೈರ್ಯ ಮತ್ತು ನಿಯಮಿತ ತರಬೇತಿಯ ಪ್ರತಿಬಿಂಬ. ನನ್ನ ಭಾಗವಹಿಸುವಿಕೆ ಇತರರಿಗೆ ಪ್ರೇರಣೆಯಾಗಬೇಕು, ಎಂದು ರಿಷಿ ಹೇಳಿದರು.

ಪದಬಂಧ 5956

ರಾಜಾ ಸಂಗಮೇಶ ಹಿರೇಮಠ



ಎಡದಿಂದ ಬಲಕ್ಕೆ
5.ಮಾನಸಿಕ ಶಕ್ತಿಯನ್ನು ಹೀಗೆನ್ನುತ್ತೇವೆ (4)
6.ಹತ-ನಗೆ ಇರುವ ದ್ವೇಷ (4)
7.ಮಾರನಿಲ್ಲಿ ತಿರುಗಿ ಕುಳಿತಿದ್ದಾನೆ (3)
8.ತಟದ ನಡುವೆ ಮಾಡಿದ ಮೋಸ (4)
10.ಮರ, ಮತ್ತದರ ಮೇಲೆ ಬೆಳೆದ ಬಳ್ಳಿ (4)
12.ಶ್ರೇಷ್ಠ ಅರಸನೀತ (4)
14.ದಾಳದ ನಡುವೆ ಈ ಹೂವು ಅಡಗಿದೆ (4)
15.ಏಳು ಕಲ್ಲುಗಳನ್ನಿಟ್ಟು ಚೆಂಡಿನಿಂದ ಹೊಡೆವ ಆಟ (3)
16.ಎಣೆಯಿಲ್ಲದ್ದು-ಹೋಲಿಕೆಗೆ ಮೀರಿದ್ದು (4)
17.ಹೂಕುಂಡವಲ್ಲ, ಯಜ್ಞಕ್ಕಾಗಿ ಇರುವಂತಹುದು (4)

ಮೇಲಿನಿಂದ ಕೆಳಕ್ಕೆ
1.ಜೀವಿ ವಾಸಿಸುವ ಸ್ಥಳ-ಮನೆ (2)
2.ಚಿಕ್ಕಪ್ರಾಯದ ಅಭಿನಯಗಾರ (4)
3.ಎಲ್ಲರೂ ಒಂದೇ ರೀತಿಯ ನಿರ್ಧಾರಕ್ಕೆ ಬರುವುದು (4)
4.ಅನುಭವ-ಶಿಕ್ಷಣದಿಂದ ಪಡೆದ ಶಕ್ತಿ (2)
9.ಪ್ರಧಾನಮಂತ್ರಿ ಕಡೆಯಲ್ಲಿ ದೀರ್ಘವಾಗಿದ್ದಾನೆ (3)
11.ಲೇಪಿಸು-ಬಳಿಯುವಿಕೆ ತಲೆಕೆಳಗಾಗಿದೆ (3)
13.ನೀರಿನಿಂದ ಆವೃತವಾದ ಸ್ಥಿತಿಯಿದು (4)
14.ಹಾದಿಯಲ್ಲಿ ಸಾಗುವವನು-ಪ್ರಯಾಣಿಕ (4)
16.ಬಲವಂತವಾಗಿ ಒಡ್ಡುವ ಪ್ರತಿರೋಧ (2)
18.ವಿಳಂಬವಿಲ್ಲಿ ತಲೆಕೆಳಗಾಗಿದೆ (2)

5955 ಉತ್ತರ

ಎಡದಿಂದ ಬಲಕ್ಕೆ:
1.ರಾವಣ 3.ಕೊಂಕಣ
7.ರಾಜೀವ 8.ಅವಿರತ
10.ತಾರುಮಾರು
12.ಪರಶಿವ 15.ನಾಗರಿಕ
17.ಸಂದೇಹ 18.ಅಂಗಡಿ
19.ಮಾಳವ

ಮೇಲಿನಿಂದ ಕೆಳಕ್ಕೆ :
2.ವನದೇವಿ 4.ಕರಿನೀರು
5.ಪರಾತ 6.ತವರು
9.ಶಿಖರ 11.ಮಾದರಿ
13.ರಣರಂಗ 14.ವಸಂತ
15.ಕಹಳೆ 16.ಗಟ್ಟಿಮೇಳ

ಕಿರುಸುದ್ದಿ

ಹೋಟೆಲ್ ಕಾರ್ಮಿಕರಿಂದ ದೂರು

ಕುಷ್ಟಗಿ: ಪಟ್ಟಣದ ಪೊಲೀಸ್ ಠಾಣೆಯ ಎದುರಗಡೆ ಇರುವ ಎಸ್. ಎಲ್.ವಿ ಹೋಟೆಲ್‌ನ ಮಾಲಿಕತ್ವದ ಬಾಡಿಗೆದಾರ ರಾಘವೇಂದ್ರ ಕುಲಕರ್ಣಿ ಯವರು ಪ್ರತಿ ತಿಂಗಳು ಮಾಸಿಕ ಬಾಡಿಗೆ ನೀಡಿದರೂ ಸಹ ಅಡವಿಚಾರರವರು ಹೋಟೆಲ್‌ನಲ್ಲಿ ಕೆಲಸ ಮಾಡುವವರಿಗೆ ಕಿರಿಕಿರಿ ಮಾಡುತಿದ್ದಾನೆ ಎಂದು ಹೋಟೆಲ್ ಕಾರ್ಮಿಕರು ದೂರು ನೀಡಿದ್ದಾರೆ. ಪಟ್ಟಣದ ಪೊಲೀಸ್ ಠಾಣೆಯ ಎದುರಗಡೆ ಇರುವ ಎಸ್.ಎಲ್. ವಿ ಹೋಟೆಲ್‌ನ ಮಾಲಿಕತ್ವದ ಬಾಡಿಗೆದಾರ ರಾಘವೇಂದ್ರ ಕುಲಕರ್ಣಿಯವರು ಪ್ರತಿ ತಿಂಗಳು ಮಾಸಿಕ ಬಾಡಿಗೆ ನೀಡಿದರೂ ಸಹ ಹೋಟೆಲ್ ನಲ್ಲಿ ಕೆಲಸ ಮಾಡುವ ಕಾರ್ಮಿಕರಾದ ಶಾಂತಮ್ಮ ನೀಡಶೇಸಿ ಹಾಗೂ ಗೀತಾ ಸೂಡಿಯವರ ಮೇಲೆ ಭಾನುವಾರ ಅಡವಿಚಾರ್, ವಿಜಯಲಕ್ಷ್ಮೀ, ಚಂದ್ರಕಾಂತ ಬಾರಕೇರ್ ಬಂದು ಹೊಡೆಬಡೆ ಮಾಡಿದ್ದಾರೆ ಎಂದು ಹೋಟೆಲ್ ಕಾರ್ಮಿಕರಾದ ಶಾಂತಮ್ಮ ಹಾಗೂ ಗೀತಾ ನೀಡಿದ ದೂರಿನ್ವಯ ಕುಷ್ಟಗಿ ಪೊಲೀಸ್ ಠಾಣೆಯಲ್ಲಿ ಮಂಗಳವಾರ ಪ್ರಕರಣ ದಾಖಲಾಗಿದೆ.

ಕ್ಯಾಂಟರ್ ವಾಹನ ಹಾಯ್ದು ಪಾದಚಾರಿ ಸಾವು

ಧಾರವಾಡ: ಕ್ಯಾಂಟರ್ ವಾಹನ ಹಾಯ್ದ ಪರಿಣಾಮ ಪಾದಚಾರಿ ಮೃತಪಟ್ಟ ಘಟನೆ ನಗರದ ನಾಯಕನ ಅಡ್ಡಾ ಕ್ರಾಸ್ ಹತ್ತಿರದ ನರೇಗಲ್ ಪೆಟ್ರೋಲ್ ಪಂಪ್ ಬಳಿ ಗುರುವಾರ ನಡೆದಿದೆ. ಧಾರವಾಡ ಆತ್ಮನಂದ ನಗರದ ನಿವಾಸಿ ಅಶೋಕ ಫಕೀರಪ್ಪ ಚಿಂತಾಮಣಿ (34) ಮೃತಪಟ್ಟ ಪಾದಾಚಾರಿ ಎಂದು ತಿಳಿದು ಬಂದಿದೆ. ಖಾನಾಪೂರ ತಾಲೂಕಿನ ಗೋಳಿಹಳ್ಳಿ ಗ್ರಾಮದ ಆರೋಪಿಯಾದ ರಾಜು ಬಸಪ್ಪ ತಳವಾರ ನಿರ್ಲಕ್ಷ್ಯದಿಂದ ಕ್ಯಾಂಟರ್ ವಾಹನ ಚಲಾಯಿಸಿದ ಪರಿಣಾಮ ಈ ದುರ್ಘಟನೆ ನಡೆದಿದೆ. ಮೃತಪಟ್ಟ ಅಶೋಕ ತಂದೆ ನೀಡಿದ ದೂರಿನ ಮೇರೆಗೆ ಸಂಚಾರಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ಮುಂದುವರಿದಿದೆ.

ಹಲ್ಲೆ: ದೂರು ದಾಖಲು

ಬೆಳಗಾವಿ: ಕೊಲೆ ಪ್ರಕರಣದಲ್ಲಿ ದೋಷಿ ಎಂದು ತೀರ್ಪು ಬಂದ ಬೆನ್ನಲ್ಲೇ ಬೆಳಗಾವಿ ತಾಲೂಕಿನ ಮುತ್ಯಾನಟ್ಟಿ ಮೂಲದ ಅಪರಾಧಿಗಳನ್ನು ನ್ಯಾಯಾಲಯದಿಂದ ಹಿಂಡಲಗಾ ಜೈಲಿಗೆ ಕರೆದೊಯ್ಯಲಾಗುತ್ತಿತ್ತು. ಈ ವೇಳೆ ಅವರ ದೃಶ್ಯ ಸೆರೆ ಹಿಡಿಯಲು ಮುಂದಾದ ಟಿವಿ ಕ್ಯಾಮೆರಾಮನ್‌ಗಳ ಮೇಲೆ ಅಪರಾಧಿಗಳು ಹಲ್ಲೆಗೆ ಯತ್ನಿಸಿದ್ದಾರೆ. ಈ ಘಟನೆ ಮಾಧ್ಯಮ ವಲಯದಲ್ಲಿ ತೀವ್ರ ಆಕ್ರೋಶಕ್ಕೆ ಕಾರಣ ಆಗುತ್ತಿದ್ದಂತೆ ನಾಲ್ವರು ಅಪರಾಧಿಗಳ ವಿರುದ್ಧ ಎಫ್‌ಐಆರ್ ದಾಖಲಾಗಿದೆ. ಪ್ರಕರಣದ ಒಂದರಲ್ಲಿ ನಾಲ್ವರು ಆರೋಪಿಗಳ ವಿರುದ್ಧ ದೋಷ ಸಾಬೀತಾಗಿದೆ ಎಂಬ ಮಾಹಿತಿ ಹೊರಬಿದ್ದ ತಕ್ಷಣವೇ, ನ್ಯಾಯಾಲಯ ಆವರಣದ ವಾತಾವರಣ ಉದ್ವಿಗ್ನಗೊಂಡಿತ್ತು. ಇದೇ ವೇಳೆ ದೃಶ್ಯ ಚಿತ್ರೀಕರಿಸುತ್ತಿದ್ದ ಕ್ಯಾಮೆರಾಮನ್‌ಗಳತ್ತ ರೇಗಿದ ಅಪರಾಧಿಗಳು, ಕ್ಯಾಮೆರಾವನ್ನು ತಳ್ಳಿ ಹಾಕಿ ಹಲ್ಲೆಗೆ ಯತ್ನಿಸಿದರು. ಅಲ್ಲದೇ, ಕರ್ತವ್ಯ ನಿರ್ವಹಿಸುತ್ತಿದ್ದ ಮಾಧ್ಯಮ ಪ್ರತಿನಿಧಿಗಳನ್ನು ಅಪರಾಧಿಗಳು ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾರೆ. ಶಿಕ್ಷೆಗೆ ಒಳಗಾದ ಅಪರಾಧಿಗಳನ್ನು ಪೊಲೀಸ್ ಭದ್ರತೆಯಲ್ಲಿ ಕರೆದೊಯ್ಯುವ ಸಂದರ್ಭದಲ್ಲೇ ಇಂತಹ ಕಾನೂನು ಬಾಹಿರ ವರ್ತನೆ ನಡೆದಿದ್ದನ್ನು ಬೆಳಗಾವಿಯ ಸಮಸ್ತ ಮಾಧ್ಯಮ ಬಳಗ ಖಂಡಿಸುತ್ತಿದ್ದಂತೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ. ವಿವಿಧ ಪ್ರಕರಣದ ಅಪರಾಧಿಗಳಾದ ಮುತ್ಯಾನಟ್ಟಿ ಮೂಲದ ಬಸವರಾಜ ದಡ್ಡಿ, ಬಸವಣ್ಣಿ ನಾಯಕ್, ನವೀನ್ ದಡ್ಡಿ ಹಾಗೂ ಲಕ್ಷ್ಮಣ ದಡ್ಡಿ ವಿರುದ್ಧ ಬೆಳಗಾವಿಯ ಮಾರ್ಕೆಟ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಯೋಧ ಸಾವು

ಕುಂದಗೋಳ: ತಾಲೂಕಿನ ಶಿರೂರ ಗ್ರಾಮದ ಹೆಮ್ಮೆಯ ಪುತ್ರ, ಗಡಿ ಭದ್ರತಾ ಪಡೆಯ (ಬಿಎಸ್ಎಫ್) ಯೋಧ ಸಂತೋಷ ರಾಮಪ್ಪ ಹೊನ್ನಪ್ಪನವರ (36) ಅವರು ಪಶ್ಚಿಮ ಬಂಗಾಳದ ಕೋಲ್ಕತ್ತಾದಲ್ಲಿ ಬುಧವಾರ ರಾತ್ರಿ ನಿಧನರಾಗಿದ್ದಾರೆ. ಕಳೆದ 14 ವರ್ಷಗಳಿಂದ ಭಾರತೀಯ ಸೇನೆಯಲ್ಲಿ ಸೇವೆ ಸಲ್ಲಿಸುತ್ತಿದ್ದ ಸಂತೋಷ ಅವರು, ದೇಶದ



ವಿವಿಧ ಗಡಿ ಭಾಗಗಳಲ್ಲಿ ಕರ್ತವ್ಯ ನಿರ್ವಹಿಸಿದ್ದರು. ಸದ್ಯ ಕೋಲ್ಕತ್ತಾದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅವರು, ನಿನ್ನೆ ರಾತ್ರಿ ಕೊನೆಯುಸಿರೆಳೆದಿದ್ದಾರೆ ಎಂಬ ಸುದ್ದಿ ತಿಳಿದು ಗ್ರಾಮಸ್ಥರು ಹಾಗೂ ಕುಟುಂಬದವರು ಆಘಾತಕ್ಕೊಳಗಾಗಿದ್ದಾರೆ. ಯೋಧನ ಪಾರ್ಥಿವ ಶರೀರವು ಶುಕ್ರವಾರ ಸ್ವಗ್ರಾಮ ಶಿರೂರಕ್ಕೆ ಆಗಮಿಸುವ ನಿರೀಕ್ಷೆಯಿದೆ. ಸಕಲ ಸರ್ಕಾರಿ ಹಾಗೂ ಮಿಲಿಟರಿ ಗೌರವಗಳೊಂದಿಗೆ ಅಂತ್ಯಕ್ರಿಯೆ ನೆರವೇರಲಿದೆ ಎಂದು ಮೂಲಗಳು ತಿಳಿಸಿವೆ. ಮೃತರು ತಂದೆ, ತಾಯಿ, ಪತ್ನಿ, ಓರ್ವ ಪುತ್ರಿಯನ್ನ ಅಗಲಿದ್ದಾರೆ.

ಶಾಶ್ವತ ಪರಿಹಾರಕ್ಕೆ ಇಚ್ಛಾಶಕ್ತಿಯ ಕೊರತೆ | ನೀರಿಗಾಗಿ ಜನ-ಜಾನುವಾರು ಹೈರಾಣ

ಬರಿದಾಗುತ್ತಿರುವ ಕೃಷ್ಣೆಯ ಒಡಲು

▸ ಗೋಪಾಲ ಪಾಟೀಲ



ದಿಗಂತ ವಿಶೇಷ

ಜಮಖಂಡಿ: ಬೇಸಿಗೆ ಆವರಿಸುತ್ತಿದ್ದಂತೆಯೇ ಕೃಷ್ಣೆಯ ಒಡಲು ಬರಿದಾಗುತ್ತಿದೆ. ತಾಲೂಕಿನ ಜೀವಜಲವಾಗಿರುವ ಈ ನದಿಗೆ ಶಾಶ್ವತ ಪರಿಹಾರ ಒದಗಿಸುವ ಇಚ್ಛಾಶಕ್ತಿಯ ಕೊರತೆ ಎದ್ದು ಕಾಣುತ್ತಿದೆ ಎಂಬುವುದು ನಾಗರಿಕರ ಆರೋಪ.

ಪ್ರತಿ ಬಾರಿ ಬೇಸಿಗೆಯಲ್ಲಿ ನದಿ ತೀರದ ಜನತೆಯ ಗೋಳು ಕೇಳುವವರೇ ಇಲ್ಲದಂತಾಗಿದೆ. ಯಾರೇ ಅಧಿಕಾರಕ್ಕೆ ಬಂದರೂ ಸಹ ಇತ್ತ ಕಡೆ ಗಮನ ಹರಿಸದಿರುವುದು ವಿಚಿತ್ರವಾದರೂ ಸತ್ಯ ಸಂಗತಿ. ಬೇಸಿಗೆ ಪ್ರಖರತೆಯಲ್ಲಿ ನೀರು ಭಾಷ್ಪೀಭವನವಾಗುತ್ತದೆ. ಇದ್ದ ಬೆಳೆಗಳು ಸಹ ಕೈ ಕೊಡುತ್ತಿವೆ. ಇಲ್ಲಿ ಹೆಚ್ಚಾಗಿ ವಾಣಿಜ್ಯ ಬೆಳೆಯಾದ ಕಬ್ಬನ್ನೇ ರೈತ ನೆಚ್ಚಿಕೊಂಡಿದ್ದಾನೆ. ಆದರೆ, ಬೇಸಿಗೆಯಲ್ಲಿ ನೀರಿಲ್ಲದಂತಾದಾಗ ಕಬ್ಬು ಒಣಗುತ್ತದೆ. ಅದನ್ನು, ಕಾಪಾಡಲು ರೈತ ಹೆಣಗಾಡುತ್ತಿದ್ದಾನೆ.

ಕಳೆದೆರಡು ತಿಂಗಳ ಹಿಂದೆ ಹಿಪ್ಪರಗಿ ಜಲಾಶಯದ ಕ್ರಸ್ಟ್‌ಗೇಟ್ ಮುರಿದು ಅಪಾರ ಪ್ರಮಾಣದ ನೀರು ಹರಿದು ಹೋಗಿದೆ. ಅದೇ ನೀರು ಬೇಸಿಗೆಯಲ್ಲಿದ್ದರೆ ಜಲಾಶಯದ ಕೆಳಗಡೆ ಅಲ್ಪವಾದರೂ ನೀರು ಲಭ್ಯವಾಗುತ್ತಿತ್ತು. ಈಗ ಅದೂ ಕೂಡಾ ಇಲ್ಲದಾಗಿದೆ.

ಈ ಬಾರಿಯೂ ಸಹ ತಾಲೂಕಿನ ಹಿಪ್ಪರಗಿ ಬ್ಯಾರೇಜ್ ಹತ್ತಿರ ನದಿಯು ಏಪ್ರಿಲ್ ಮೊದಲನೇ ವಾರದಲ್ಲಿಯೇ ಬತ್ತುವ ಹಂತದಲ್ಲಿದೆ. ಪ್ರಸ್ತುತ ಹಿಪ್ಪರಗಿ ಜಲಾಶಯದದಲ್ಲಿ ಸುಮಾರು 2 ಟಿಎಂಸಿಯಷ್ಟು ನೀರಿದೆ. ಆದರೆ, ಜಲಾಶಯದ ಕೆಳಹಂತದಲ್ಲಿ ನೀರು ಸಂಪೂರ್ಣವಾಗಿ ಬತ್ತಿದೆ. ಈಗ ಏಪ್ರಿಲ್ ಮಧ್ಯ ಭಾಗದಲ್ಲಿ ಈ ತೆರನಾಗಿದ್ದರೆ ಇನ್ನೂ ಬೇಸಿಗೆಯು

> **6 ಟಿಎಂಸಿ ಅಡಿ ನೀರು ಸಂಗ್ರಹಿಸುವ ಸಾಮರ್ಥ್ಯ ಹೊಂದಿದ ಹಿಪ್ಪರಗಿ ಬ್ಯಾರೇಜ್‌ನಲ್ಲಿ ಪ್ರಸ್ತುತ 2.2 ಟಿಎಂಸಿ ಅಡಿ ನೀರು ಮಾತ್ರ ಸಂಗ್ರಹವಿದೆ. ಬ್ಯಾರೇಜ್‌ನಿಂದ ಹೊರ ಹೋಗುವುದಿಲ್ಲ. ಈ ನೀರು ನಗರ ಪ್ರದೇಶಗಳ ಕುಡಿಯುವ ನೀರಿಗಾಗಿ ಸಾಲುತ್ತದೆ.**
>
> ■ **ವಿ.ಎಸ್. ನಾಯಿಕ, ಹಿಪ್ಪರಗಿ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ**

ಮುಗಿಯುವ ಹಂತದಲ್ಲಿ ಪರಿಸ್ಥಿತಿ ಏನಾಗಬಾರದು ಎನ್ನುವುದೇ ನದಿ ತೀರದ ಗ್ರಾಮಸ್ಥರ ಚಿಂತೆಯಾಗಿದೆ.

ಕಳೆದ ಬಹು ವರ್ಷಗಳಿಂದ ಕೃಷ್ಣೆಗಾಗಿ ಬೇಸಿಗೆಯಲ್ಲಿ ಅನೇಕ ಹೋರಾಟಗಳು ಆಗಿವೆ. ಬಂದ ಜಾಥಾಗಳು ಮಹಾರಾಷ್ಟ್ರಕ್ಕೆ ನಿಯೋಗಗಳು ಸಹ ಹೋಗಿ ಬಂದದ್ದು ಈಗ ಇತಿಹಾಸ. ಆದರೆ, ಫಲ ಮಾತ್ರ ಶೂನ್ಯವಾಗಿದೆ. ರಾಜ್ಯ ಸರ್ಕಾರ ಏಕೆ ಶಾಶ್ವತ ಪರಿಹಾರ ಕಂಡುಕೊಳ್ಳುವಲ್ಲಿ ವಿಫಲವಾಗುತ್ತಿದೆ. ಮಹಾರಾಷ್ಟ್ರದೊಂದಿಗೆ ನದಿ ನೀರು ಬಿಡುವಲ್ಲಿ ಏಕೆ ಒಡಂಬಡಿಕೆ ಮಾಡುತ್ತಿಲ್ಲ ಎನ್ನುವ ಚಿಂತೆ ಎಲ್ಲರನ್ನೂ ಕಾಡುತ್ತಿದೆ.

ನಮ್ಮ ರಾಜ್ಯ ನಾಯಕರಿಗೆ ಕಾವೇರಿಯದೊಂದೇ ಚಿಂತೆ. ಹೇಗೆ ತಮಿಳುನಾಡಿನವರು ನ್ಯಾಯಾಲಯದ ಮೆಟ್ಟಿಲೇರಿಯಾದರೂ ನೀರನ್ನು ಬಿಡಿಸಿಕೊಳ್ಳುತ್ತಾರೆಯೋ ಹಾಗೆ ಏಕೆ ರಾಜ್ಯದ ಅಧಿನಾಯಕರು ಕೃಷ್ಣೆಗೆ ಮಾಡುತ್ತಿಲ್ಲ ಎನ್ನುವುದು ಮಾತ್ರ ನಿಗೂಢವಾಗಿದೆ.

ಪ್ರಸ್ತುತ ಲೋಕ ಸಭಾ ಚುನಾವಣೆಯ ಹಿನ್ನೆಲೆಯಲ್ಲಿ ಎಲ್ಲ ಜನಪ್ರತಿನಿಧಿಗಳು ಚುನಾವಣಾ ಕಾರ್ಯತಂತ್ರದಲ್ಲಿ ಓಡಾಟ ಮಾಡುತ್ತಿರುತ್ತಾರೆ. ಇಂತಹ ಸಂದರ್ಭದಲ್ಲಿ ನಮ್ಮ ಗೋಳು ಕೇಳುವರಾರು ಎನ್ನುವ ಸ್ಥಿತಿ ಜನರದ್ದಾಗಿದೆ.

ಈಗಾಗಲೇ ಬಸ್ಕಿಂನಲ್ಲಿ ಕೃಷ್ಣೆಯ ನೀರು ಬಳಕೆಯಾಗದೇ ಸಮುದ್ರ ಪಾಲಾದರೂ ರಾಜ್ಯ ಸರ್ಕಾರವು ನೀರು ರಕ್ಷಣೆಯಲ್ಲಿ ಬಳಕೆಯಲ್ಲಿ ವಿಫಲವಾಗಿದೆ ಎಂದು ಜನತೆ ದೂರುವುದು ನಿವಾದ ಸಂಗತಿಯಾಗಿದೆ ಎಂದು ಪರಿಣಮಿಸುತ್ತದೆ. ಏನೇ ಆದರೂ ಸಹ ಮತ್ತೆ ಮಹಾರಾಷ್ಟ್ರದಿಂದ ನೀರು ಬಿಡಿಸಬೇಕಾಗಿದ್ದು ಅನಿವಾರ್ಯವಾಗಿದೆ.

ಸುತ್ತಲಿನ ನಾಲ್ಕು ಪಟ್ಟಣ ಮತ್ತು ನೂರಕ್ಕೂ ಹೆಚ್ಚು ಗ್ರಾಮಗಳು ನೀರಿಲ್ಲದೇ ಬಾಧಿತವಾಗುತ್ತವೆ. ಅದಕ್ಕಾಗಿ ಮತ್ತೆ ಕೃಷ್ಣೆಗೆ ನೀರು ಬಿಡಿಸುವುದು ಅನಿವಾರ್ಯವಾಗಿದೆ ಎನ್ನುವುದು ಜನರ ಆಶಯ.

ಜಗತ್ತಿಗೆ ಧರ್ಮವೇ ಆಧಾರ: ಶ್ರೀಗಳು

ಕಾರವಾರ: ಜಗತ್ತಿಗೆ ಧರ್ಮವೇ ಆಧಾರ. ಹಿಂದೂ ಧರ್ಮವು ಸನಾತನವಾಗಿದ್ದು, ಅನಾದಿ ಕಾಲದಿಂದ ಬಂದಿದೆ. ಇದರ ಆರಂಭ ಗೊತ್ತಿಲ್ಲ, ಒಬ್ಬ ವ್ಯಕ್ತಿಯ ಮತಿಯಿಂದ ಬಂದಿದ್ದು, ಮತ ಇದನ್ನು ಯಾರು ಯಾವಾಗ ಬೇಕಾದರೂಮಾಡಬಹುದು. ಆದರೆ ಧರ್ಮವನ್ನು ಸೃಷ್ಟಿಸಲು ಸಾಧ್ಯವಿಲ್ಲ ಎಂದು ಶೃಂಗೇರಿ ಶ್ರೀ ಶಾರದಾಪೀಠದ ಜಗದ್ಗುರು ಶಂಕರಾಚಾರ್ಯ ವಿಧುಶೇಖರ ಭಾರತೀ ಶ್ರೀಗಳು ಹೇಳಿದರು.



> **ಧರ್ಮವನ್ನು ರಕ್ಷಿಸುವವರನ್ನು ಧರ್ಮ ಅವರನ್ನು ರಕ್ಷಿಸುತ್ತದೆ. ಸುಖವನ್ನು ಕೊಡುವದು ಧರ್ಮ. ಕೆಲವರು ಧರ್ಮದ ವಿಚಾರವಾಗಿ ಹಲವು ರೀತಿಯಲ್ಲಿ ಹೇಳಬಹುದು. ಈ ಜಗತ್ತಿಗೆ ಧರ್ಮವೇ ಆಧಾರವಾಗಿದೆ. ಇದು ಸನಾತನ ಧರ್ಮ ಈ ವಾಸ್ತವಿಕ ವಿಚಾರವನ್ನು ತಿಳಿದು ಎಲ್ಲರೂ ನಡೆದುಕೊಳ್ಳಬೇಕು.**
>
> ■ **ಶಂಕರಾಚಾರ್ಯ ವಿಧುಶೇಖರ ಭಾರತೀ ಶ್ರೀಗಳು, ಶೃಂಗೇರಿ ಶ್ರೀ ಶಾರದಾಪೀಠದ ಜಗದ್ಗುರು.**

ಅವರು ಧರ್ಮವಿಜಯ ಯಾತ್ರೆಯ ಅಂಗವಾಗಿ ಕಾರವಾರದ ಮಾಲಾದೇವಿ ಮೈದಾನದಲ್ಲಿ ಗುರುವಂದನೆ ಸ್ವೀಕರಿಸಿ ಮಾತನಾಡಿ, ನಮ್ಮ ಹಿಂದೂ ಧರ್ಮ ಎಲ್ಲದಕ್ಕೂ ಶ್ರೇಷ್ಠವಾದುದು. ಧರ್ಮದ ಆಚರಣೆಯಿಂದ ಶ್ರೇಯಸ್ಸು ಆಗುತ್ತದೆ ಧರ್ಮವು ಕಣ್ಣಿಗೆ ಕಾಣದೆ ಜಗತ್ತನ್ನು ನಡೆಸುತ್ತಿದೆ.

ಉಚ್ಚನ್ಯಾಯಾಲಯದ ನಿವೃತ್ತ ನ್ಯಾಯಧೀಶ ಎಂ.ಜಿ.ಉಮಾ ಮಾತನಾಡಿ, ಶಂಕರರು ಸನಾತನ ಧರ್ಮ ಸ್ಥಾಪನೆಗಾಗಿ ದೇಶಾದ್ಯಂತ ಸಂಚರಿಸಿದವರು. ಸಮಾಜ ಒಂದಾಗಿ ಒಗ್ಗಟ್ಟಾಗಿ ಇರುವ ಸಂದರ್ಭ ಈಗ ಬಂದಿದೆ. ನಮ್ಮಲ್ಲಿ ಸಂಸ್ಕೃತಿ ಉಳಿಯಲು ಮಾತೆಯರೇ ಕಾರಣರಾಗಿದ್ದಾರೆ ಎಂದರು. ರಾಮಕೃಷ್ಣ ಆಶ್ರಮದ ಸ್ವಾಮಿ ಭವೇಶಾನಂದರು ಮಾತನಾಡಿ, ಶೃಂಗೇರಿ ಶ್ರೀಗಳ ಆಶೀರ್ವಾದ ನಮ್ಮೆಲ್ಲರ ಮೇಲಿರಲಿ ಎಂದರು.

ಮಾಜಿ ಶಾಸಕಿ ರೂಪಾಲಿ ನಾಯ್ಕ ಅವರು ಈ ಎಲ್ಲ ಕಾರ್ಯಕ್ರಮದ ಉಸ್ತುವಾರಿಯನ್ನು ವಹಿಸಿದ್ದರು. ಅವರ ಕುಟುಂಬದವರು ಶ್ರೀಗಳ ಪಾದಪೂಜೆ ನಡೆಸಿದರು. ಕಾರ್ಯಕ್ರಮಕ್ಕೂ ಪೂರ್ವದಲ್ಲಿ ಸುಮಂಗಲಿಯರು ಪೂರ್ಣಕುಂಭದೊಂದಿಗೆಶ್ರೀಗಳನ್ನು ಸ್ವಾಗತಿಸಿ ಭವ್ಯಮೆರವಣಿಗೆಯಲ್ಲಿ ಕಾರ್ಯಕ್ರಮದ ಸ್ಥಳಕ್ಕೆ ಕರೆತರಲಾಯಿತು. ಶಿವಮೂರ್ತಿ ಜೋಯಿಸಅಭಿನಂದನಪತ್ರ ಓದಿದರು. ಪದ್ಮಜಾಸಂಗಡಿಗರುಗುರುನಾಮಸ್ಮರಣೆ ಮಾಡಿದರು. ರವಿಶೆಟ್ಟಿ ಪ್ರಾಸ್ತಾವಿಕವಾಗಿ ಮಾತನಾಡಿದರು.

ಎಸ್ಸೆಸ್ಸೆಲ್ಸಿ ಸಿಬಿಎಸ್‌ಇ ಫಲಿತಾಂಶ ಪ್ರಕಟ

ಜೆಎಸ್ಸೆಸ್ ಶಾಲೆ ಅಮೋಘ ಸಾಧನೆ



ಧಾರವಾಡ: ಕಳೆದ 2025-26ನೇ ಸಾಲಿನ ಸಿಬಿಎಸ್‌ಇ ಎಸ್ಸೆಸ್ಸೆಲ್ಸಿ ಫಲಿತಾಂಶ ಪ್ರಕಟವಾಗಿದ್ದು, ಜನತಾ ಶಿಕ್ಷಣ ಸಮಿತಿಯ ಶ್ರೀ ಮಂಜುನಾಥೇಶ್ವರ ಸಿಬಿಎಸ್‌ಇ ಸ್ಕೂಲ್ ನೂರರಷ್ಟು ಫಲಿತಾಂಶ ದಾಖಲಿಸಿದೆ.

ಈ ಶಾಲೆ ಕಳೆದ 20 ವರ್ಷಗಳಿಂದ ನೂರರಷ್ಟು ಫಲಿತಾಂಶ ದಾಖಲಿಸುತ್ತಿದೆ. ಈ ಬಾರಿ ಪರೀಕ್ಷೆ ಬರೆದ 222 ವಿದ್ಯಾರ್ಥಿಗಳಲ್ಲಿ ಬರೋಬ್ಬರಿ 30 ವಿದ್ಯಾರ್ಥಿಗಳು ಶೇ.90ಕ್ಕಿಂತ ಹೆಚ್ಚಿನ ಅಂಕಗಳನ್ನು ಗಳಿಸಿದ್ದಾರೆ.

ಈ ಬಾರಿ ನಿಖಿಲ್ ಗೋಕರ್ಣ 500ಕ್ಕೆ 487 ಅಂಕ ಪಡೆದು, ಶಾಲೆಗೆ ಕೀರ್ತಿ ತಂದಿದ್ದಾನೆ. ಅಕ್ಷರ ನವಲಗುಂದ ಶೇ.97.2, ಅಭಿರೂಪ ಸಿಂಗನಾಥ ಶೇ.96, ಜೋಫಿಯಾ ಬೋರಗಿಸ್ ಶೇ.95.6, ತರುಣ ಯಾಲಕ್ಕಿಶೆಟ್ಟರ್ ಶೇ.95.4 ಅಂಕಗಳಿಸಿದ್ದಾರೆ. ಪಂಚಮಿ ಬಿ.ಆರ್.ಶೇ.95.2, ಚಾರವಿ ಶೆಟ್ಟಿ ಶೇ.95, ದಿಯಾ ಬೊಮ್ಮಕ್ಕನವರ ಶೇ.95, ಅಖಿಲಾ ಬೆನ್ನಾಲ್ ಶೇ.93.6, ಪ್ರಾಂಜಲ ಮೂಸಲೇಕರ್ ಶೇ.93.6, ಪ್ರತೀಕ್ಷಾ ಅನಗೌಡರ ಶೇ.93.6, ಜಿ.ಆರ್.ಸಾಯಿ ಸೃಜನ ಶೇ.92.8 ಅಂಕಗಳು ಪಡೆದಿದ್ದಾರೆ. ಅಂಕಿತ ಕುಸಗಲ್ ಶೇ.91.6, ಶ್ರೇಯಾ ಕುಲಕರ್ಣಿ ಶೇ.91.6, ಕೃತೀಶಾ ಕಬಾಡೆ ಶೇ.91.4, ಸಿಂಚನಾ ಹಿರೇಮಠ ಶೇ.91.2, ದಕ್ಷಾ ಸಿ ನವಿ ಶೇ.91, ಸಾತ್ವಿಕ್ ಪೂಜಾರ ಶೇ.90.8, ಶ್ರೀವತ್ಸ ಹಿರಗೌಡರ ಶೇ.90.6 ಅಂಕಗಳನ್ನು ಗಳಿಸಿದ್ದಾರೆ.

ಅಮೃತ ಮಾಗಡಿ ಶೇ.90.6, ಪೂರ್ವಾ ಶಾನಭಾಗ ಶೇ.90.6, ಆರ್ಯನ ಕರಮಾಡಿ ಶೇ.90.6, ವಿಜಯಲಕ್ಷ್ಮೀ ಶೇ.90.6, ಪ್ರಣವ ಬಂಡಿ ಶೇ.90.4, ಸೃಷ್ಟಿ ಬೆನಕಟ್ಟಿ ಶೇ.90.4, ವಿರಾಜ ಪಟ್ಟಣಶೆಟ್ಟಿ ಶೇ.90.2 ರಷ್ಟು ಅಂಕಗಳನ್ನು ಪಡೆದಿದ್ದಾರೆ. ಸಂಸ್ಥೆಯ ಕೀರ್ತಿ ಹೆಚ್ಚಿಸಿದ ಸಂಸ್ಥೆಯ ಕಾರ್ಯಾಧ್ಯಕ್ಷ ಡಾ. ಡಿ.ವೀರೇಂದ್ರ ಹೆಗ್ಗಡೆ, ಕಾರ್ಯದರ್ಶಿ ಡಾ.ಅಜಿತ ಪ್ರಸಾದ, ಆಡಳಿತಾಧಿಕಾರಿ ಅರಿಹಂತ ಪ್ರಸಾದ, ಶಾಲಾ ಪ್ರಾಚಾರ್ಯೆ ಸಾಧನಾ ಎಸ್, ಶಿಕ್ಷಕರು, ಸಿಬ್ಬಂದಿಗಳು ಹಾಗೂ ಪಾಲಕರು ಅಭಿನಂದಿಸಿದ್ದಾರೆ.

ಸರ್ಕಾರಿ ಗೌರವಗಳೊಂದಿಗೆ ಯೋಧನ ಅಂತ್ಯಕ್ರಿಯೆ

ಯಮಕನಮರಡಿ: ಯಮಕನಮರಡಿ ಕ್ಷೇತ್ರದ ಜಿನರಾಳ ಗ್ರಾಮದ ಹೆಮ್ಮೆಯ ಪುತ್ರ ಭಾರತೀಯ ಸೇನೆಯ ಸೈನಿಕ ಪ್ರದೀಪ ಲಖಮಗೌಡ ಪಾಟೀಲ ಅವರು ಸೇವೆಯಲ್ಲಿದ್ದಾಗ ಸಂಭವಿಸಿದ ಅಪಘಾತದಲ್ಲಿ ಮೃತಪಟ್ಟಿದ್ದಾರೆ. ಸ್ವ-ಗ್ರಾಮಕ್ಕೆ ಆಗಮಿಸಿದ ಅವರ ಯೋಧನ ಪಾರ್ಥಿವ ಶರೀರಕ್ಕೆ ಸರ್ಕಾರಿ ಗೌರವಗಳೊಂದಿಗೆ ಅಂತಿಮ ನಮನ ಸಲ್ಲಿಸಿದರು. ಕರ್ನಾಟಕ ರಾಜ್ಯ ಯುವ ಪ್ರಧಾನ ಕಾರ್ಯದರ್ಶಿಗಳು ಹಾಗೂ ಅಪೆಕ್ಸ್ ಮತ್ತು ಡಿಸಿಸಿ ಬ್ಯಾಂಕಿನ ನಿರ್ದೇಶಕ ರಾಹುಲ್ ಜಾರಕಿಹೊಳಿ, ದಂಡಾಧಿಕಾರಿ ಬಲರಾಮ ಕಟ್ಟಿಮನಿ, ಕಂದಾಯ ನಿರೀಕ್ಷಕ ಕಲಕಾಂಬಕರ, ಪೃಥ್ವಿ ಕತ್ತಿ, ಮಾರುತಿ ಅಷ್ಟಗಿ, ಬಸವರಾಜ ಹುಂದ್ರಿ, ತಾಲೂಕು ಹಾಗೂ ರೇವ್ಯೂನ್ಯು ಇಲಾಖೆ ಅಧಿಕಾರಿಗಳು, ಹಂಚಿನಾಳ ಗ್ರಾಮ ಪಂಚಾಯತಿ ಅಧ್ಯಕ್ಷರು, ಉಪಾಧ್ಯಕ್ಷರು, ಸರ್ವ ಸದಸ್ಯರು, ಹುಣಸಿಕೊಳ್ಳಮಠದ ಸಿದ್ಧಬಸವ ದೇವರು ಸೇರಿದಂತೆ ಅಪಾರ ಗಣ್ಯಮಾನ್ಯರು ವೀರ ಯೋಧನಿಗೆ ಅಂತಿಮ ನಮನ ಸಲ್ಲಿಸಿ ಕುಟುಂಬಸ್ಥರಿಗೆ ಸಾಂತ್ವನ ಹೇಳಿದರು.



ಬಿ.ಎಂ. ಪಾಟೀಲ ಪಬ್ಲಿಕ್ ಶಾಲೆ ನೂರಕ್ಕೆ 100 ಫಲಿತಾಂಶ

ವಿಜಯಪುರ: ಸಿಬಿಎಸ್‌ಇ 10ನೇ ತರಗತಿಯ ಫಲಿತಾಂಶ ಪ್ರಕಟವಾಗಿದ್ದು, ಬಿಎಲ್‌ಡಿಇ ಸಂಸ್ಥೆಯ ಬಿ.ಎಂ.ಪಾಟೀಲ ಪಬ್ಲಿಕ್ ಶಾಲೆಯು ಶೇ.100ರಷ್ಟು ಫಲಿತಾಂಶ ದಾಖಲಿಸಿದೆ.

ಶಾಲೆಯ ವಿದ್ಯಾರ್ಥಿನಿ ಅನುಪ್ರಿಯಾ ರಾಘವೇಂದ್ರ ಕುಲಕರ್ಣಿ ಶೇ. 97.80 ಅಂಕ ಗಳಿಸಿ ಶಾಲೆಗೆ (ಪ್ರಥಮ) ಸ್ಥಾನ ಗಳಿಸಿದರೆ, ಸಾನ್ವಿ ಬಸವರಾಜ ಯಲಿಗಾರ ಶೇ. 97.20 ಅಂಕ ಗಳಿಸಿ ಶಾಲೆಗೆ (ದ್ವಿತೀಯ) ಸ್ಥಾನ ಹಾಗೂ ನೇಹಾ ಗಿರೀಶ ಪಾಟೀಲ ಶೇ. 95.40 ಅಂಕ ಗಳಿಸಿ (ತೃತೀಯ) ಸ್ಥಾನ ಪಡೆದಿದ್ದಾಳೆ.



ಪರೀಕ್ಷೆಗೆ ಹಾಜರಾದ 94 ವಿದ್ಯಾರ್ಥಿಗಳಲ್ಲಿ ಎಲ್ಲರೂ ಪಾಸಾಗಿದ್ದು, ಶೇ. 75 ರಷ್ಟು ವಿದ್ಯಾರ್ಥಿಗಳು ಡಿಸ್ಟಿಂಕ್ಷನ್ ನಲ್ಲಿ ಪಾಸಾಗಿದ್ದಾರೆ. 21 ವಿದ್ಯಾರ್ಥಿಗಳು ಶೇ. 60 ರಿಂದ ಶೇ. 70 ರಷ್ಟು ಅಂಕ ಗಳಿಸಿದ್ದು, ಮೂರು ವಿದ್ಯಾರ್ಥಿಗಳು ದ್ವಿತೀಯ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ.

ಶಾಲೆಯ ಸಾಧನೆಗೆ ಬಿಎಲ್‌ಡಿಇ ಸಂಸ್ಥೆಯ ಅಧ್ಯಕ್ಷ ಎಂ.ಬಿ. ಪಾಟೀಲ, ಪ್ರಧಾನ ಕಾರ್ಯದರ್ಶಿ ಸುನೀಲಗೌಡ ಪಾಟೀಲ ಸಂತಸ ವ್ಯಕ್ತಪಡಿಸಿದ್ದು, ವಿದ್ಯಾರ್ಥಿಗಳ ಮುಂದಿನ ಶೈಕ್ಷಣಿಕ್ಕೆ ಶುಭ ಹಾರೈಸಿದ್ದಾರೆ.

ಅದೇ ರೀತಿ ವಿದ್ಯಾರ್ಥಿಗಳ ಸಾಧನೆಗೆ ಶಾಲೆಯ ಪ್ರಾಚಾರ್ಯ ಡಾ. ಶೈಜೂ ನಾಯರ, ಹಿರಿಯ ಕಾರ್ಯಸಂಯೋಜಕಿ ದೀಪಾ ಜಂಬೂರೆ, ಶಾಲಾ ಬೋಧಕ ಹಾಗೂ ಬೋಧಕರ ಹೊರತಾದ ಸಿಬ್ಬಂದಿ ಅಭಿನಂದಿಸಿದ್ದಾರೆ.

ಸುಮಂತ ದಾನಿ ಪ್ರಥಮ, ಪವಿತ್ರಾ ಹಿರೇಮಠ ದ್ವಿತೀಯ

ಬೀಳಗಿ: ತಾಲೂಕಿನ ಅನಗವಾಡಿ ಗ್ರಾಮದ ಶ್ರೀ ಬನಶಂಕರಿದೇವಿ ವಿದ್ಯಾ ಸಂಸ್ಥೆಯ ಬಿ.ಎನ್.ಖೋತ ಅಂತಾರಾಷ್ಟ್ರೀಯ ಪಬ್ಲಿಕ್ ಶಾಲೆ 2025-26ನೇ ಸಾಲಿನ ಸಿ.ಬಿ.ಎಸ್.ಇ 10ನೇ ತರಗತಿ ಮಕ್ಕಳ ವಾರ್ಷಿಕ ಪರೀಕ್ಷೆಯ ಫಲಿತಾಂಶ ನೂರಕ್ಕೆ ನೂರರಷ್ಟಾಗಿದ್ದು, ಎಲ್ಲ 106 ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುತ್ತಾರೆಂದು ಪ್ರಾಚಾರ್ಯ ಸುರೇಶ ಹವಾಲ್ದಾರ ತಿಳಿಸಿದ್ದಾರೆ.

ಸುಮಂತ ದಾನಿ 500ಕ್ಕೆ 439 (87.80%) ಅಂಕಗಳನ್ನು ಪಡೆದು ಶಾಲೆಗೆ ಪ್ರಥಮ ಸ್ಥಾನ, ಪವಿತ್ರಾ ಹಿರೇಮಠ 500ಕ್ಕೆ 433 (86.60%) ದ್ವಿತೀಯ ಸ್ಥಾನ, ಶಿವಶಂಕರ ಅಂಗಡಿ 500ಕ್ಕೆ 429 (85.80%) ತೃತೀಯ ಸ್ಥಾನ ಪಡೆದಿದ್ದಾರೆ.



ವಿದ್ಯಾರ್ಥಿಗಳ ಸಾಧನೆಗೆ ಸಂಸ್ಥೆಯ ಅಧ್ಯಕ್ಷ ಬಸವರಾಜ ಬ.ಖೋತ, ಆಡಳಿತ ಮಂಡಳಿಯ ಸದಸ್ಯರಾದ ಶೋಭಾ ಖೋತ, ವಿಜಯ ಖೋತ, ವಿಕ್ರಮ ಖೋತ ಹಾಗೂ ಸರ್ವ ಪದಾಧಿಕಾರಿಗಳು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.ಮತ್ತು ಶಿಕ್ಷಕರು ಹಾಗೂ ಬೋಧಕೇತರ ಸಿಬ್ಬಂದಿ ವಿದ್ಯಾರ್ಥಿಗಳ ಸಾಧನೆಗೆ ಹರ್ಷ ವ್ಯಕ್ತ ಶುಭ ಕೋರಿ ಅಭಿನಂದನೆ ಸಲ್ಲಿಸಿದ್ದಾರೆ.

ವಂದೇ ಭಾರತ್ ಸ್ಲೀಪರ್ ರೈಲು ಸಂಚಾರ ಆರಂಭಿಸಿ

ಹುಬ್ಬಳ್ಳಿ: ಸಾಂಗಲಿ-ಬೆಳಗಾವಿ-ಹುಬ್ಬಳ್ಳಿ-ತುಮಕೂರ ಮಾರ್ಗದ ಮೂಲಕ ಮುಂಬೈ ಹಾಗೂ ಬೆಂಗಳೂರು ವಂದೇ ಭಾರತ್ ಸ್ಲೀಪರ್ ರೈಲು ಸಂಚಾರ ಆರಂಭಿಸಬೇಕು ಎಂದು ದಕ್ಷಿಣ ಪಶ್ಚಿಮ ರೈಲ್ವೆ ವಲಯ ರೈಲು ಬಳಕೆದಾರರ ಸಲಹಾ ಸಮಿತಿ ಸದಸ್ಯ ಮಹೇಂದ್ರ ಸಿಂಘಿ ಕೇಂದ್ರ ರೈಲ್ವೆ ಸಚಿವ ಅಶ್ವಿನ ವೈಷ್ಣವ್ ಅವರಿಗೆ ಮನವಿ ಸಲ್ಲಿಸಿದ್ದಾರೆ.

ಪುಣೆ-ಸಾಂಗಲಿ-ಬೆಳಗಾವಿ-ಹುಬ್ಬಳ್ಳಿ-ತುಮಕೂರು ಮಾರ್ಗವು ಇತ್ತೀಚೆಗೆ ಡಬ್ಲಿಂಗ್ ಹಾಗೂ ವಿದ್ಯುತೀಕರಣಗೊಂಡಿದ್ದರೂ ಈ ಮಾರ್ಗದಲ್ಲಿ ದಿನಕ್ಕೆ ಕೇವಲ ಸುಮಾರು 15 ರೈಲುಗಳು ಮಾತ್ರ ಸಂಚರಿಸುತ್ತಿವೆ. ಇನ್ನೊಂದೆಡೆ, ಸೋಲಾಪುರ-ಗುಂತಕಲ್-ಧರ್ಮವರಂ ಮಾರ್ಗದಲ್ಲಿ 150ಕ್ಕೂ ಹೆಚ್ಚು ರೈಲುಗಳು ಸಂಚರಿಸುತ್ತಿದ್ದು, ಹೊಸ ರೈಲು ಸೇವೆಗಳನ್ನೂ ಅದೇ ಮಾರ್ಗಕ್ಕೆ ಸೀಮಿತಗೊಳಿಸಲಾಗುತ್ತಿದೆ. ಸಾಂಗಲಿ, ಕಿರ್ಲೋಸ್ಕರವಾಡಿ, ಬೆಳಗಾವಿ, ಹುಬ್ಬಳ್ಳಿ-ಧಾರವಾಡ, ಅರಸಿಕೇರಿ, ಶ್ರವಣಬೆಳಗೊಳ ಮತ್ತು ತುಮಕೂರು ಮುಂತಾದ ಪ್ರಮುಖ ಕೈಗಾರಿಕಾ ಹಾಗೂ ಆರ್ಥಿಕ ನಗರಗಳಿಗೆ ಪ್ರೀಮಿಯಂ ರೈಲು ಸಂಪರ್ಕದ ಅಗತ್ಯತೆ ಹೆಚ್ಚಿದೆ. ಈ ನಗರಗಳಿಗೆ ವಂದೇ ಭಾರತ್ ಸೇವೆ ಲಭ್ಯವಿಲ್ಲದಿರುವುದು ಜನರಲ್ಲಿ ಅಸಮಾಧಾನಕ್ಕೆ ಕಾರಣವಾಗಿದೆ. ಪ್ರಸ್ತಾವಿತ ಮಾರ್ಗದಲ್ಲಿ ಕೇವಲ ಸುಮಾರು 55 ಕಿಮೀ ದೂರ ವ್ಯತ್ಯಾಸವಿದ್ದರೂ, ಸಾಮಾಜಿಕ ಹಾಗೂ ಆರ್ಥಿಕ ದೃಷ್ಟಿಯಿಂದ ಸಂಗಲಿ-ಹುಬ್ಬಳ್ಳಿ ಮಾರ್ಗಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡಬೇಕು ಎಂದು ಒತ್ತಾಯಿಸಿದ್ದಾರೆ. ಈ ಹಿನ್ನಲೆದಲ್ಲಿ ಸಮತೋಲನಿತ ಪ್ರಾದೇಶಿಕ ಅಭಿವೃದ್ಧಿ ಹಾಗೂ ಸಾರ್ವಜನಿಕ ಸೌಲಭ್ಯವನ್ನು ಗಮನದಲ್ಲಿಟ್ಟುಕೊಂಡು, ಮುಂಬೈ-ಬೆಂಗಳೂರು ವಂದೇ ಭಾರತ್ ಸ್ಲೀಪರ್ ರೈಲನ್ನು ಸಂಗಲಿ ಬೆಳಗಾವಿ-ಹುಬ್ಬಳ್ಳಿ-ತುಮಕೂರು ಮಾರ್ಗದ ಮೂಲಕವೇ ಸಂಚರಿಸಲು ಕ್ರಮ ಕೈಗೊಳ್ಳಬೇಕೆಂದು ಮನವಿ ಮಾಡಲಾಗಿದೆ.

ಶಾರದ ಇಂಟರ್ ನ್ಯಾಷನಲ್ ಶಾಲೆ ಉತ್ತಮ ಸಾಧನೆ



ಕೊಪ್ಪಳ: ಶ್ರೀ ಶಾರದಾ ಇಂಟರ್ ನ್ಯಾಶನಲ್ ಶಾಲೆಯ ವಿದ್ಯಾರ್ಥಿಗಳು ಪ್ರಸ್ತುತ ಸಾಲಿನ ಸಿ.ಬಿ.ಎಸ್.ಇ. 10ನೇ ತರಗತಿ ಪರೀಕ್ಷೆಯಲ್ಲಿ ಅತ್ಯುನ್ನತ ಶ್ರೇಣಿಯಲ್ಲಿ ಫಲಿತಾಂಶ ಪಡೆದು ಹೊಸ ಮೈಲಿಗಲ್ಲನ್ನು ಸಾಧಿಸಿದ್ದಾರೆ.

ಜಸ್ಮಿತಾ ವರ್ಮಾ ಎಂ. 491/500 (98.2%), ಶ್ರಾವಣಿ ಗೊಗ್ಗರಿ 491/500 (98.2%), ಶ್ರೇಯಾ ಸಜ್ಜನ್ 472/500 (94.4%), ನೇಹಾ ಪೀರಾಪುರ 473/500 (94.6%), ಮಮತಾ 470/500 (94%) ಉತ್ತಮ ಫಲಿತಾಂಶ ತೆಗೆದುಕೊಂಡಿದ್ದಾರೆ.

ಶಾಲೆಯು ಉತ್ತರ ಕರ್ನಾಟಕದ ಭಾಗದ ವಿದ್ಯಾರ್ಥಿಗಳಿಗೆ ಉತ್ತಮ ಶೈಕ್ಷಣಿಕ ಸೌಲಭ್ಯವನ್ನು ಒದಗಿಸಿ, ಪಠ್ಯ ಹಾಗೂ ಪಠ್ಯೇತರ ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳನ್ನು ತೊಡಗಿಸಿಕೊಳ್ಳುವಂತೆ ಮಾಡುತ್ತಿದೆ. ಅಂತೆಯೇ ಈ ಬಾರಿಯ ಸಿ.ಬಿ.ಎಸ್ .ಇ. ಫಲಿತಾಂಶವು ಶಾಲೆಯ ಗುಣಮಟ್ಟವನ್ನು ಎತ್ತಿ ಹಿಡಿದಿದೆ.

ಸಾಧನೆಗೆ ಕಾರಣವಾದ ವಿದ್ಯಾರ್ಥಿಗಳನ್ನು ಶ್ರೀ ಶಾರದಾ ಫೌಂಡೇಶನ್ ಟ್ರಸ್ಟ್ ಅಧ್ಯಕ್ಷ ವಿ.ಆರ್.ಪಾಟೀಲ, ಕಾರ್ಯದರ್ಶಿ ಎಸ್.ಆರ್.ಪಾಟೀಲ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಲೈನ್‌ಮ್ಯಾನ್‌ಗಳಿಂದ ರಾಷ್ಟ್ರೀಯ ಪಕ್ಷಿಯ ಅಂತ್ಯಸಂಸ್ಕಾರ

ರಾಣೇಬೆನ್ನೂರ: ಲೈನ್‌ಮ್ಯಾನ್‌ಗಳಿಬ್ಬರು ರಾಷ್ಟ್ರೀಯ ಪಕ್ಷಿಯನ್ನು ಭಾರತೀಯ ಸಂಪ್ರದಾಯವಾಗಿ ಅಂತ್ಯ ಸಂಸ್ಕಾರ ಮಾಡಿ ಮಾನವೀಯತೆ ಮೆರೆದ ಘಟನೆ ತಾಲೂಕಿನ ನೂಕಾಪುರ ಸಮೀಪದ ಹೊನ್ನನಾಗದೇವತೆ ದೇವಸ್ಥಾನದ ಬಳಿ ಗುರುವಾರ ಸಂಜೆ ನಡೆದಿದೆ.



ದೇವಸ್ಥಾನದ ಎದುರಿಗೆ ಜಮೀನೊಂದರ ಜೋಡು ವಿದ್ಯುತ್ ಕಂಬಕ್ಕೆ ತಗುಲಿ ಕಂಬದ ಮೇಲೆಯೆ ರಾಷ್ಟ್ರೀಯ ಪಕ್ಷಿ ನವಿಲು ಸಾವನ್ನಪ್ಪಿದೆ. ಇದರಿಂದಾಗಿ ಲೈನ್ ಟ್ರಿಪ್ ಆಗುವ ವಿಚಾರವಾಗಿ ಲೈನ್ ತೊಂದರೆ ಬಗ್ಗೆ ಲೈನ್‌ಮ್ಯಾನಗಳಾದ ಸಂಗಮೇಶ ಕೋಟಿಕಲ್ ಹಾಗೂ ಚೇತನ್ ಬಳ್ಳಾರಿ ಲೈನ್ ಫಾಲ್ಟ್ ನೋಡುವಾಗ ನವೀಲು ವಿದ್ಯುತ್‌ಗೆ ತಗುಲಿ ಮೃತಪಟ್ಟಿರುವುದು ಕಂಡುಬಂದಿದೆ.

ತಕ್ಷಣವೆ ಲೈನ್‌ಮ್ಯಾನಗಳಿಬ್ಬರೂ ನವಿಲನ್ನು ವಿದ್ಯುತ್ ಕಂಬದಿಂದ ಕಳೆಗಿಳಿಸಿ ಪಕ್ಕದಲ್ಲಿರುವ ಜಮೀನೊಂದರಲ್ಲಿ ತಾವೇ ಸ್ವತಹ ಗುದ್ದಲಿ ಹಾಗೂ ಶಲಕಿಯ ಮುಖಾಂತರ ತೆಗ್ಗು ತೋಡಿ ಗ್ರಾಮಸ್ಥರ ಸಹಕಾರದಿಂದ ರಾಷ್ಟ್ರೀಯ ಪಕ್ಷಿಗೆ ಪೂಜೆ ಪುನಸ್ಕಾರ ಸಲ್ಲಿಸಿ ಅಂತ್ಯಕ್ರಿಯೆ ಮಾಡುವುದಷ್ಟೇಯಲ್ಲದೆ ಇಬ್ಬರೂ ಲೈನ್ ಮ್ಯಾನ್‌ಗಳು ಭಾವುಕರಾದರು. ಒಟ್ಟನಲ್ಲಿ ಮತ್ತೊಬ್ಬರಾಗಿದ್ದರೆ ಅದೇ ಪಕ್ಷಿಯನ್ನು ಅನಾಥವಾಗಿ ಬೀಸಾಕಿ ಹೋಗುತ್ತಿದ್ದರು. ಆದರೆ, ಈ ಲೈನ್‌ಮ್ಯಾನಗಳಿಬ್ಬರೂ ನವಿಲಿಗೆ ಪೂಜೆ ಪುನಸ್ಕಾರ ಮಾಡಿ ಅಂತ್ಯಕ್ರಿಯೆ ಮಾಡಿದ್ದು ನಿಜಕ್ಕೂ ರಾಷ್ಟ್ರೀಯ ಪಕ್ಷಿಗೆ ಅಂತಿಮ ನಮನ ಸಲ್ಲಿಸಿದಂತಾಗಿದೆ. ಇವ ಕಾರ್ಯಕ್ಕೆ ಇಡೀ ಗ್ರಾಮವೇ ಶ್ಲಾಘನೀಯ ಜೊತೆಗೆ ಇವರ ಪ್ರಾಮಾಣಿಕ ಕಾರ್ಯವೈಖರಿಗೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಈ ಸಂದರ್ಭದಲ್ಲಿ ಶಂಕರ್ ಚೌವ್ಹಾಣ, ಅರುಣ ರಾಠೋಡ, ಚೇತನ್ ರಾಠೋಡ, ವಾಲಪ್ಪ ಕೇತಾವತ್, ಗುಡ್ಡಪ್ಪ ಮರಡೇರ ಸೇರಿದಂತೆ ಮತ್ತಿತರರು ಇದ್ದರು.

ತಂದೆಯಿಂದ ಮಗನ ಕೊಲೆಗೆ ಯತ್ನ

ಹುಬ್ಬಳ್ಳಿ: ಆಸ್ತಿಯ ಸಲುವಾಗಿ ತಂದೆ ಕಂದ್ಲಿಯಿಂದ ಮಗನಿಗೆ ಹೊಡೆದು ಕೊಲೆ ಮಾಡಲು ಯತ್ನಿಸಿದ ಘಟನೆ ತಾಲೂಕಿನ ಅದರಗುಂಚಿ ಗ್ರಾಮದಲ್ಲಿ ನಡೆದಿದೆ. ಗ್ರಾಮದ ಮಹಾತೇಶ ಸುಂಕದ(22)ಎಂಬುವರಿಗೆ ಆತನ ತಂದೆ ಯಲ್ಲಪ್ಪ ಸುಂಕದ(53)ಹಲ್ಲೆ ನಡೆಸಿದ್ದಾರೆ. ಹಲ್ಲೆ ನಡೆಸಿ ಯಲ್ಲಪನಿಗೆ ಇಬ್ಬರು ಪತ್ನಿಯರಿದ್ದು, ಅವನೊಂದಿಗೆ ಜೀವನ ನಡೆಸಲಾಗದೆ ಬೇರೆ ಮನೆಯಲ್ಲಿ ವಾಸವಾಗಿದ್ದಾರೆ. ಪತ್ನಿ ಜೀವನಾಂಶ ನೀಡಲು ನ್ಯಾಯಾಲಯಕ್ಕೆ ಮೊರೆ ಹೋಗಿದ್ದಕ್ಕೆ, ಸಿಟ್ಟಾದ ಯಲ್ಲಪ್ಪ ಅವರ ಮನೆಗೆ ನುಗ್ಗಿ, ಮನ ಮೇಲೆ ಕಂದ್ಲಿಯಿಂದ ಹಲ್ಲೆ ನಡೆಸಿದ್ದಾರೆ. ಈ ವೇಳ ಮಗ ಮಹಾತೇಶ ಕೈಗೆ ಹಾಗೂ ಹೊಟ್ಟೆಯ ಗಂಭೀರ ಗಾಯವಾಗಿದ್ದು, ನಗರದ ಕೆಎಂಸಿಆರ್‌ಐ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಈ ಕುರಿತು ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.


ಗಾಂಜಾ ಸಾಗಾಟ: ಓರ್ವನ ಬಂಧನ

ಹುಬ್ಬಳ್ಳಿ: ಅಕ್ರಮವಾಗಿ ಗಾಂಜಾ ಸಾಗಿಸುತ್ತಿದ್ದ ಆರೋಪಿಯನ್ನು ಬಂಧಿಸಿ ಕೇಶ್ವಾಪುರ ಪೊಲೀಸರು ಆತನಿಂದ 1.78 ಲಕ್ಷ ರೂ. ಮೌಲ್ಯದ 2.968 ಗ್ರಾಂ. ಗಾಂಜಾ ವಶಕ್ಕೆ ಪಡೆದಿದ್ದಾರೆ. ಅವಿನಾಶ ಕಂಜರಭಾಟ್ ಬಂಧಿತ ಆರೋಪಿ. ಆತನ ಗಾಂಜಾ ಸಾಗಿಸಲು ಸಂಚು ರೂಪಿಸಿದ್ದ. ಪೊಲೀಸರು ಪೆಟ್ರೋಲಿಂಗ್ ಮಾಡುವಾಗ ಸಿಕ್ಕಿ ಬಿದ್ದಿದ್ದಾರೆ. ಆತನನ್ನು ಬಂಧಿಸಿದ್ದಾರೆ. ಕೇಶ್ವಾಪುರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ತಂತ್ರಜ್ಞಾನದಿಂದ ಗ್ರಂಥಾಲಯಗಳ ಪರಿವರ್ತನೆ

ಧಾರವಾಡ: ಕೃತಕ ಬುದ್ಧಿಮತ್ತೆ ಯುಗದಲ್ಲಿ ಪುಸ್ತಕದಿಂದ ಮಾಹಿತಿ ಒದಗಿಸುವಲ್ಲಿ ತಂತ್ರಜ್ಞಾನ ಬದಲಾವಣೆ ಕಂಡಿದೆ. ಗ್ರಂಥಾಲಯಗಳ ಪರಿರ್ವನೆಗೂ ತಂತ್ರಜ್ಞಾನ ಸಹಕಾರಿ ಎಂದು ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿ ಡಾ.ಎ.ಎಂ.ಖಾನ್ ಹೇಳಿದರು.

ಇಲ್ಲಿನ ಕವಿವಿಯ ಸುವರ್ಣ ಮಹೋತ್ಸವ ಭವನದಲ್ಲಿ ನಡೆದ 'ಡಿಜಿಟಲ್,ಕೃತಕಬುದ್ಧಿಮತ್ತೆ' ಜಗತ್ತಿನಲ್ಲಿ ಸಾಂಪ್ರದಾಯಿಕ ವರ್ಗೀಕರಣ, ಕ್ಯಾಟಲಾಗ್ ಪದ್ಧತಿಯಡಿ ಜ್ಞಾನ ಸಂಘಟನೆಯತ್ತ ಮುನ್ನಡೆಯುವಿಕೆ; ಭವಿಷ್ಯದ ದೃಷ್ಟಿಕೋನ ಸಮ್ಮೇಳನದಲ್ಲಿ ಮಾತನಾಡಿದರು. ಗ್ರಂಥಾಲಯಗಳಲ್ಲಿ ಮಾಹಿತಿ ಪಡೆಯುವಲ್ಲಿ ಹಳೆಯ ವಿಧಾನ ಬಳಸಲಾಗುತ್ತಿದ್ದು, ಇಂದು ಎಲ್ಲ ಗ್ರಂಥ, ಪುಸ್ತಕ, ಸಂಶೋಧನಾ ಗ್ರಂಥಗಳು ಡಿಜಿಟಲಿಕರಣ ಕೂಡ ಆಗಿವೆ. ಭಾರತೀಯ ಜ್ಞಾನ ನಿರ್ವಹಣೆಗೆ ಹೊಸ ತಂತ್ರಜ್ಞಾನದ ಅನ್ವೇಷಣೆ ಅಗತ್ಯ ಎಂದರು.



> **ಡಿಜಿಟಲೀಕರಣಕ್ಕೆ ಅನುಕೂಲ**
>
> ಗ್ರಂಥಾಲಯದ ವೃತ್ತಪರತೆ ಹೆಚ್ಚಿಸಲು ಕೃತಕ ಬುದ್ಧಿಮತ್ತೆ ಹೆಚ್ಚು ಸಹಕಾರಿ. ಈ ತಂತ್ರಜ್ಞಾನ ಗ್ರಂಥಾಲಯಗಳ ಡಿಜಿಟಲೀಕರಣಕ್ಕೆ ಅನುಕೂಲವಾಗಿರುವುದಾಗಿ ಬೆಂಗಳೂರು ಬಸವ ಅಂತಾರಾಷ್ಟ್ರೀಯ ಮಾಹಿತಿ ಕೇಂದ್ರದ ಮಹಾನಿರ್ದೇಶಕ ಪ್ರೊ.ಎಂ.ಎಂ. ಕೂಗನೂರಮಠ ಅಭಿಪ್ರಾಯಪಟ್ಟಿದ್ದು, ಗ್ರಂಥಾಲಯ ಮಾಹಿತಿ ವಿಜ್ಞಾನದ ಪಠ್ಯಕ್ರಮ ರಚಿಸಿ, ಹೊರ ರಾಜ್ಯಕ್ಕೂ ಗ್ರಂಥಾಲಯ ಮಾಹಿತಿ ವಿಜ್ಞಾನ ಪರಿಚಯಿಸಿದ ಕೀರ್ತಿ ಪ್ರೊ.ಎಂ.ಆರ್.ಕುಂಬಾರ ಅವರಿಗೆ ಸಲ್ಲುತ್ತಿದೆ ಎಂಬುದು ಕೂಗನೂರಮಠ ಅಂಬೋಣ.

ಇಂದು ಅಗಾಧಜ್ಞಾನಮತ್ತು ಮಾಹಿತಿ ನಿರ್ವಹಣೆ ದೊಡ್ಡ ಸವಾಲು. ಆದರೂ, ಬೆರಳ ತುದಿಯಲ್ಲಿ ಮಾಹಿತಿ ಪಡೆಯಲು ನವೀನ ತಂತ್ರಜ್ಞಾನ ಹೆಚ್ಚು ಅನುಕೂಲ ಕಲ್ಪಿಸಿದೆ. ಈ ತಂತ್ರಜ್ಞಾನದಿಂದ ಮಾಹಿತಿ ಬಹು ಸುಲಭವಾಗಿ ಲಭಿಸುತ್ತಿದೆ ಎಂದು ಹೇಳಿದರು.

ನಿವೃತ್ತ ಪ್ರಾಧ್ಯಾಪಕ ಪ್ರೊ.ಸಿ.ಆರ್. ಕರಿಸಿದ್ದಪ್ಪ ಮಾತನಾಡಿ, ಗ್ರಂಥಾಲಯ ವಿಜ್ಞಾನ ಜಾಗತಿಕ ವಿಷಯವಾಗಿದೆ. ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ಶಿಕ್ಷಣ ಬೆಳವಣಿಗೆ ಹೊಂದುವಲ್ಲಿ ಪ್ರೊ. ಎಂ.ಆರ್.ಕುಂಬಾರರ ದೂರದೃಷ್ಟಿಯೇ ಕಾರಣ ಎಂದರು. ಕವಿವಿಯ ಗ್ರಂಥಾಲಯ ಮಾಹಿತಿ ವಿಜ್ಞಾನ ವಿಭಾಗದ ನಿವೃತ್ತ ಪ್ರಧ್ಯಾಪಕ ಪ್ರೊ. ಎಸ್.ಎಂ.ಸಂಗಮ ಮಾತನಾಡಿ, ಪ್ರೊ. ಎಂ.ಆರ್.ಕುಂಬಾರ ಮಾನವೀಯ ಮೌಲ್ಯಗಳ ಗಣಿ. ಉತ್ತಮ ಸ್ನೇಹಿ ಜೀವಿ. ಕವಿವಿಗೆ ನೀಡಿದ ಅವರ ಕೊಡುಗೆ ಸ್ಮರಿಸಿದರು. ಪ್ರೊ.ಎಂ.ಆರ್. ಕುಂಬಾರ ಅವರ ಕುರಿತು ಎರಡು ಗ್ರಂಥ ಬಿಡುಗಡೆಗೊಂಡವು. ಗ್ರಂಥಾಲಯ ವಿಜ್ಞಾನಿ ಪ್ರೊ.ಸಿ.ಸದಾಶಿವ ಮೂರ್ತಿ, ಡಾ.ಎಸ್.ಆರ್.ಗುಂಜಾಳ ಅವರನ್ನು ಸನ್ಮಾನಿಸಲಾಯಿತು. ದಾವಣಗೇರಿ ವಿವಿ ಕುಲಪತಿ ಡಾ.ಬಿ.ಡಿ.ಕುಂಬಾರ ಅಧ್ಯಕ್ಷತೆ ವಹಿಸಿದ್ದರು.

ಗ್ರಂಥಾಲಯ ವಿಭಾಗದ ಮುಖ್ಯಸ್ಥ ಪ್ರೊ.ಸಿ.ಕೃಷ್ಣಮೂರ್ತಿ, ಪ್ರೊ. ರಮೇಶಬಾಬು, ಡಾ.ಆರ್.ಆರ್ .ನಾಯಕ, ಡಾ.ಗುರುರಾಜ ಹಡಗಲಿ, ಡಾ.ಅನಿಲ ತಳವಾರ, ಪ್ರೊ.ಬಿ.ಎಸ್. ಮಾಳವಾಡ, ಡಾ.ಈಶಪ್ಪ ಕೊಡ್ಲಿ, ಪ್ರೊ. ಮಹೇಶ ಹೊರಕೇರಿ ಅನೇಕರು ಇದ್ದರು.

ಕಿರುಸುದ್ದಿ

ಪ್ರವಚನ ಮಾಲಿಕೆ ಇಂದು

ಗದಗ: ಇಲ್ಲಿನ ವಿವೇಕಾನಂದ ನಗರದ ಕಾಶೀ ವಿಶ್ವನಾಥ ದೇವಸ್ಥಾನದ ಸ್ವಾಮಿ ವಿವೇಕಾನಂದ ಸಾಂಸ್ಕೃತಿಕ ಭವನದಲ್ಲಿ ಏ.17 ರಂದು ಸಂಜೆ 6.30ಕ್ಕೆ ಸ್ವಾಮಿ ವಿವೇಕಾನಂದ ಸಾಂಸ್ಕೃತಿಕ ಸಮಿತಿಯಿಂದ 57ನೇ ಜೀವನ ದರ್ಶನ ಪ್ರವಚನ ಮಾಲಿಕೆ ಹಾಗೂ ಕಾಶಿ ವಿಶ್ವನಾಥನ ಪಾಲಕಿ ಸೇವೆ ಜರುಗಲಿದೆ. ಸಾನ್ನಿಧ್ಯ ಗುಳೇದಗುಡ್ಡದ ಒಪ್ಪತ್ತೇಶ್ವರ ಸಂಸ್ಥಾನಮಠದ ಅಭಿನವ ಒಪ್ಪತ್ತೇಶ್ವರ ಸ್ವಾಮೀಜಿ ವಹಿಸುವರು. ಅಧ್ಯಕ್ಷತೆ ಸ್ವಾಮಿ ವಿವೇಕಾನಂದ ಸಾಂಸ್ಕೃತಿಕ ಸಮಿತಿಯ ಅಧ್ಯಕ್ಷ ಎ.ಟಿ.ನರೇಗಲ್ಲ ವಹಿಸುವರು. ಸಮಿತಿಯ ಗೌರವಾಧ್ಯಕ್ಷ ಜಿ.ಜಿ.ಕುಲಕರ್ಣಿ, ಉಪಾಧ್ಯಕ್ಷ ಆರ್.ಆರ್.ಕಾಶಪ್ಪನವರ ಉಪಸ್ಥಿತರಿರುವರು ಎಂದು ಸಮಿತಿಯ ಕಾರ್ಯದರ್ಶಿ ಕೆ.ಪಿ.ಗುಳಗೌಡರ ತಿಳಿಸಿದ್ದಾರೆ.

ಇಂದು ದತ್ತಿ ಉಪನ್ಯಾಸ

ಗದಗ: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ಏ.17 ರಂದು ಬೆಳಗ್ಗೆ 10.30ಕ್ಕೆ ಜಗದ್ಗುರು ಪಂಚಾಚಾರ್ಯ ಶಿಕ್ಷಣ ಮಹಾವಿದ್ಯಾಲಯದಲ್ಲಿ ಸ್ವಾತಂತ್ರ್ಯಯೋಧ ಆಳವಂಡಿ ಶಿವಮೂರ್ತಿಸ್ವಾಮಿಗಳ ಸ್ಮರಣಾರ್ಥ ದತ್ತಿ ಉಪನ್ಯಾಸ ಕಾರ್ಯಕ್ರಮ ಏರ್ಪಡಿಸಲಾಗಿದೆ. ಕರ್ನಾಟಕ ಏಕೀಕರಣ ಚಳವಳಿ ಮತ್ತು ಆಳವಂಡಿ ಶಿವಮೂರ್ತಿಸ್ವಾಮಿಗಳು ವಿಷಯವಾಗಿ ಅನ್ನದಾನಿ ಹಿರೇಮಠ ಮಾತನಾಡುವರು. ಅಧ್ಯಕ್ಷತೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ವಿವೇಕಾನಂದಗೌಡ ಪಾಟೀಲ ವಹಿಸುವರು. ವಿಜಯಲಕ್ಷ್ಮೀ ಕಟ್ಟಿಮನಿ ಆಗಮಿಸುವರು. ಡಾ.ಬಿ.ಬಿ.ಹೊಳಗುಂದಿ ಉಪಸ್ಥಿತರಿರುವರು ಎಂದು ಕಿಶೋರಬಾಬು ನಾಗರಕಟ್ಟಿ, ದತ್ತಪ್ರಸನ್ನ ಪಾಟೀಲ, ಡಿ.ಎಸ್.ಬಾಪುರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪಲ್ಲಕ್ಕಿ ಸೇವೆ ಇಂದು

ಗದಗ: ಬೆಟಗೇರಿಯ ಹಳೇಬನಶಂಕರಿದೇವಿ ದೇವಸ್ಥಾನದಲ್ಲಿ ಏ.17 ರಂದು ಸಂಜೆ 6ಕ್ಕೆ ದೇವಾಂಗ ಮಹಿಳಾ ಮಂಡಳ ಸದಸ್ಯರಿಂದ ಲಲಿತ ಸಹಸ್ರ ನಾಮಾವಳಿ, ಭಜನೆ, ಬನಶಂಕರಿದೇವಿಯ ಪಲ್ಲಕ್ಕಿ ಉತ್ಸವ ಜರುಗಲಿದೆ. ಪಲ್ಲಕ್ಕಿ ಉತ್ಸವದ ಪ್ರಸಾದ ಸೇವೆ ಚೇತನ್ ಕೋಚಿ ಹಾಗೂ ಕುಟುಂಬ ವರ್ಗದವರು ವಹಿಸಿಕೊಂಡಿದ್ದಾರೆ. ದೇವಾಂಗ ಸಮಾಜ ಬಾಂಧವರು ಭಕ್ತರು ಹಾಗೂ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಶ್ರೀದೇವಿ ಕೃಪೆಗೆ ಪಾತ್ರರಾಗಬೇಕೆಂದು ಹಳೇಬನಶಂಕರಿದೇವಿ ದೇವಸ್ಥಾನ ಟ್ರಸ್ಟ್ ಕಮಿಟಿ ಪದಾಧಿಕಾರಿಗಳು ತಿಳಿಸಿದ್ದಾರೆ.

ಮೇ 1ರಂದು ಶಿವದೀಕ್ಷೆ

ಗದಗ: ಪಂಚವಟಿ ಧಾರ್ಮಿಕ ಗುರುಕುಲ ಜನಕಲ್ಯಾಣ ಟ್ರಸ್ಟ್ ಹಾಗೂ ಅಖಿಲ ಭಾರತ ಜಂಗಮ ಸೇವಾ ಸಮಿತಿ ವತಿಯಿಂದ ಮೇ 1ರಂದು ಜಂಗಮ ವಟುಗಳಿಗೆ ಶಿವದೀಕ್ಷೆ, ಅಯ್ಯಾಚಾರ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ವೀರಭದ್ರ ಶಿವಾಚಾರ್ಯ ಸ್ವಾಮೀಜಿ ತಿಳಿಸಿದರು.

ನಗರದ ಪತ್ರಿಕಾಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ನರಸಾಪುರದ ತಪೋವನದಲ್ಲಿ ಮಕ್ಕಳಿಗೆ 30 ದಿನಗಳ ಉಚಿತ ಸಂಸ್ಕಾರ ಮತ್ತು ಯೋಗ ಶಿಬಿರ ಹಮ್ಮಿಕೊಳ್ಳಲಾಗಿದ್ದು, ಇದರ ಸಮಾರೋಪ ಸಮಾರಂಭದ ಅಂಗವಾಗಿ 'ಜಂಗಮ ವಟುಗಳಿಗೆ ಶಿವದೀಕ್ಷೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ' ಎಂದರು. ಸೊರಟೂರು ಶ್ರೀಗಳು, ಮಣಿಪುರ ಶಿವಯೋಗಿ ಸ್ವಾಮೀಜಿ ಸೇರಿದಂತೆ ಹಲವು ಮಠಗಳ ಸ್ವಾಮೀಜಿಗಳು ಶಿವದೀಕ್ಷೆ ಕಾರ್ಯಕ್ರಮದಲ್ಲಿ ಭಾಗವಹಿಸುವರು. ಮೇ 1ರಂದು 50 ಮಂದಿಗೆ ಶಿವದೀಕ್ಷೆ ನೀಡಲಾಗುವುದು. ಏ.26ರವರೆಗೆ ನೋಂದಣಿ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ ಎಂದು ತಿಳಿಸಿದರು.

ಅಖಿಲ ಭಾರತ ಜಂಗಮ ಸೇವಾ ಸಮಿತಿಯ ಪದಾಧಿಕಾರಿಗಳಾದ ಕುಮಾರ ಸ್ವಾಮಿ ಹಿರೇಮಠ, ವೀರಯ್ಯ ಹೊಸಮಠ, ಸಂಗಮ್ಮ, ಮಂಜುನಾಥ, ಫಕೀರ ಹಿರೇಮಠ, ಕುಮಾರ ಸೇರಿದಂತೆ ಹಲವರು ಇದ್ದರು.

ಗದಗ ಮಾರುಕಟ್ಟೆ ಧಾರಣೆ (ಕ್ವಿಂಟಲ್)

ಗೆಜ್ಜೆ ಶೇಂಗಾ	2510-6690
ಅಜವಾನ	7269-9629
ಅಲಸಂದಿ	3277-5969
ಕಡಲೆ	2612-5469
ಉದ್ದು	3312-3312
ಆಲಿ	7800-7800
ಹತ್ತಿ ಹೈಬ್ರಿಡ್	7650-7700
ಹೆಸರು	1059-9477
ಹುರಳಿ	2865-5364
ಜೋಳ	1689-4463
ಗೋವಿಜೋಳ	1625-1851
ಸಾಸವಿ	4069-4069
ಕುಸಬಿ	4679-5609
ಸೂರ್ಯಕಾಂತಿ	5372-5962
ತೊಗರಿ	4444-5047
ಗೋಧಿ	1561-5209



ಗದಗ: ತಾಲೂಕಿನ ಕಳಸಾಪೂರ ಗ್ರಾಮದ ಬಸವ ಕೇಂದ್ರದಲ್ಲಿ 1,607ನೇ ವಾರದ ಶಿವಾನುಭವ ಕಾರ್ಯಕ್ರಮ ನಡೆಯಿತು. ಬಸವ ಕೇಂದ್ರದ ಕಾರ್ಯಾಧ್ಯಕ್ಷ ಮಲ್ಲಿಕಾರ್ಜುನ ಖಂಡಮ್ಮನವರ ಮಾತನಾಡಿ, ವ್ಯಕ್ತಿತ್ವ ವಿಕಸನದಲ್ಲಿ ಶರಣರ ಪಾತ್ರ ಬಹುಮುಖ್ಯವಾಗಿದೆ ಎಂದರು. ಮಂಜನಗೌಡ ರಾಮನಗೌಡ್ರ, ಶಿಲ್ಪಾ ಖಂಡಮ್ಮನವರ, ಜಯಶ್ರೀ ಖಂಡಮ್ಮನವರ, ಸವಿತಾ ಖಂಡಮ್ಮನವರ, ಸಂಗಮೇಶ ಖಂಡಮ್ಮನವರ, ವಿಜಯಲಕ್ಷ್ಮೀ ಓಲೇಕಾರ, ವಿಜಯಲಕ್ಷ್ಮೀ ತಳವಾರ ಇದ್ದರು.

ವೈಜ್ಞಾನಿಕ ಮನೋಭಾವ ವೃದ್ಧಿಸಲಿ: ಬುರಡಿ

ಗದಗ: ಬೇಸಿಗೆಯ ಈ ರಜೆಯು ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಮನೋಭಾವ, ಬೌದ್ಧಿಕ ವಿಕಸನ, ಸೃಜನಶೀಲತೆ ಹಾಗೂ ಕೌಶಲ್ಯವನ್ನು ವೃದ್ಧಿಸುವಂತಾಗಲಿ ಎಂದು ಜಿಲ್ಲಾ ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಆರ್.ಎಸ್.ಬುರಡಿ ಹೇಳಿದರು.

ಬೆಟಗೇರಿಯ ಖಗೋಳ ತಾರಾಲಯದಲ್ಲಿ ಭಾರತೀಯ ವೈದ್ಯಕೀಯ ಸಂಘ (ಐಎಂಎ) ಗದಗ ಶಾಖೆ ತನ್ನ ಶತಮಾನೋತ್ಸವದ ಅಂಗವಾಗಿ ಜಿಲ್ಲಾ ಪಂಚಾಯತ್, ಜಿಲ್ಲಾ ಶಾಲಾ ಶಿಕ್ಷಣ ಇಲಾಖೆ, ಗದಗ-ಬೆಟಗೇರಿ ಲಯನ್ಸ್ ಕ್ಲಬ್ ಸಂಯುಕ್ತ ಆಶ್ರಯದಲ್ಲಿ ಶಾಲಾ ವಿದ್ಯಾರ್ಥಿಗಳಿಗಾಗಿ ವಿನೂತನ ಹಾಗೂ ಪ್ರಯೋಜನಕಾರಿ ವಿಸ್ಮಯ ಬೇಸಿಗೆ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದರು.

ಐಎಂಎ ಅಧ್ಯಕ್ಷ ಡಾ. ಶ್ರೀಧರ ಕುರಡಗಿ ಮಾತನಾಡಿ, ಐಎಂಎ ಶತಮಾನೋತ್ಸವದ ಸಂಭ್ರಮವನ್ನು ಸಮಾಜಮುಖಿ, ಜನಮುಖಿ ಕಾರ್ಯಕ್ರಮಗಳನ್ನು ಈ ವರ್ಷದಾದ್ಯಂತ ಹಮ್ಮಿಕೊಂಡಿದೆ. ಸಾಮಾಜಿಕ ಕಳಕಳಿಯೊಂದಿಗೆ ಗ್ರಾಮೀಣ ಪ್ರದೇಶದಲ್ಲಿ ಆರೋಗ್ಯ ತಪಾಸಣೆ, ವಿದ್ಯಾರ್ಥಿಗಳ ಶೈಕ್ಷಣಿಕ ಗುಣಮಟ್ಟ ಸುಧಾರಣೆಗೆ ಕೈಜೋಡಿಸುವಿಕೆ ಹೀಗೆ ಮುಂತಾದ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ ಎಂದರು.

ಐಎಂಎ ಶತಮಾನೋತ್ಸವ ಸಮಿತಿಯ ಅಧ್ಯಕ್ಷ ಡಾ.ಎಸ್.ಆರ್.ನಾಗನೂರ, ಲಾಯನ್ಸ್ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಆನಂದ ಪೊತ್ನೀಸ್, ಗದಗ-ಬೆಟಗೇರಿ ಲಾಯನ್ಸ್ ಕ್ಲಬ್ ಅಧ್ಯಕ್ಷ ರಾಜು ವೇರ್ಣೇಕರ, ಬಿಂಕದಕಟ್ಟಿ ಪ್ರಾಣಿಸಂಗ್ರಹಾಲಯದ ಉಸ್ತುವಾರಿ ಅಧಿಕಾರಿ ರಾಮಪ್ಪ ಪೂಜಾರ, ಎಂ.ಎಚ್.ಕಂಬಳಿ, ಶಿವಕುಮಾರ ಕುರಿ ಉಪಸ್ಥಿತರಿದ್ದರು. ಸರೋಜಿನಿ ಬಂಡಿವಡ್ಡರ ಪ್ರಾರ್ಥಿಸಿದರು. ಎಸ್.ಪಿ.ಪ್ರಭಯ್ಯನಮಠ ಸ್ವಾಗತಿಸಿದರು. ಮೊಹ್ಮದ್‌ಶಫಿ ಯರಗುಡಿ ನಿರೂಪಿಸಿದರು. ಎಂ.ಎಚ್. ಸವದತ್ತಿ ವಂದಿಸಿದರು.



ಗದಗ: ಬೆಟಗೇರಿಯ ಖಗೋಳ ತಾರಾಲಯದಲ್ಲಿ ಭಾರತೀಯ ವೈದ್ಯಕೀಯ ಸಂಘ (ಐಎಂಎ) ಗದಗ ಶಾಖೆ ತನ್ನ ಶತಮಾನೋತ್ಸವದ ಅಂಗವಾಗಿ ಜಿಲ್ಲಾ ಪಂಚಾಯತ್, ಜಿಲ್ಲಾ ಶಾಲಾ ಶಿಕ್ಷಣ ಇಲಾಖೆ, ಗದಗ-ಬೆಟಗೇರಿ ಲಯನ್ಸ್ ಕ್ಲಬ್ ಸಂಯುಕ್ತ ಆಶ್ರಯದಲ್ಲಿ ಶಾಲಾ ವಿದ್ಯಾರ್ಥಿಗಳಿಗಾಗಿ ವಿನೂತನ ಹಾಗೂ ಪ್ರಯೋಜನಕಾರಿ ವಿಸ್ಮಯ ಬೇಸಿಗೆ ಶಿಬಿರವನ್ನು ಜಿಲ್ಲಾ ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಆರ್.ಎಸ್.ಬುರಡಿ ಉದ್ಘಾಟಿಸಿದರು.

ಜಿಪಂ ಮುಖ್ಯ ಯೋಜನಾಧಿಕಾರಿ ಎ.ಎ. ಕಂಬಾಳಿಮಠ ಸೂಚನೆ

ಶಾಲಾಭಿವೃದ್ಧಿಗೆ ಉತ್ತಮ ಯೋಜನೆ ರೂಪಿಸಿ

ಶಿರಹಟ್ಟಿ : ಸರ್ಕಾರಿ ಶಾಲೆಗಳ ಅಭಿವೃದ್ಧಿಗೆ 20.50 ಲಕ್ಷ ಅನುದಾನ ಮಂಜೂರಾಗಿದ್ದು, ಶಿಕ್ಷಣಾಧಿಕಾರಿಗಳು ಏಪ್ರಿಲ್ ಅಂತ್ಯದೊಳಗೆ ಶಿಥಿಲಗೊಂಡ ಶಾಲಾ ಕೊಠಡಿ ಗುರುತಿಸಿ ಕ್ರಿಯಾಯೋಜನೆ ರೂಪಿಸಿಕೊಡಬೇಕು ಎಂದು ಜಿಪಂ ಮುಖ್ಯ ಯೋಜನಾಧಿಕಾರಿ ಎ.ಎ. ಕಂಬಾಳಿಮಠ ಸೂಚಿಸಿದರು.



ಸ್ಥಳೀಯ ತಾಪಂ ಸಾಮರ್ಥ್ಯ ಸೌಧದಲ್ಲಿ ಗುರುವಾರ ನಡೆದ ಕೆಡಿಪಿ ಮಾಸಿಕ ಪ್ರಗತಿ ಪರಿಶೀಲನಾ ಸಭೆಯಲ್ಲಿ ಇಲಾಖೆವಾರು ಚರ್ಚೆ ವೇಳೆ ಮಾತನಾಡಿದರು. ತಾಲೂಕಿನ ಎಲ್ಲಾ ಶಾಲೆಯ ಶಿಥಿಲಗೊಂಡ ಕೊಠಡಿಗಳನ್ನು ಗುರುತಿಸಿ ಮೇ ತಿಂಗಳಲ್ಲಿ ಕ್ರಿಯಾಯೋಜನೆಗೆ ಅನುಮೋದನೆ ಪಡೆದು ಅಭಿವೃದ್ಧಿ ಕಾರ್ಯಕ್ಕೆ ಮುಂದಾಗಬೇಕು. ಯಾವುದೇ ಕಾರಣಕ್ಕೂ ಅಭಿವೃದ್ಧಿಗೆ ಬಂದ ಅನುದಾನ ಲ್ಯಾಪ್ಸ್ ಮಾಡದೇ ಅಭಿವೃದ್ಧಿಗೆ ಸದ್ಬಳಕೆಯಾಗಬೇಕು ಎಂದು ತಿಳಿಸಿದರು.

ಶಿಕ್ಷಣದ ಗುಣಮಟ್ಟ ಇನ್ನಷ್ಟು ಸುಧಾರಿಸಬೇಕು. ಈ ಬಾರಿಯ ಪಿಯುಸಿ ಫಲಿತಾಂಶ ನೋಡಿದರೆ ಅಧಿಕಾರಿಗಳಿಗೆ ಎಲ್ಲವೂ ಅರ್ಥವಾಗುತ್ತದೆ. ಶಾಲೆ ಬಿಟ್ಟ ಮಕ್ಕಳನ್ನು ಮರಳಿ ಶಾಲೆಗೆ ಕರೆತರುವ ಕೆಲಸವಾಗಬೇಕು. ಕೇವಲ ಎಸ್ಎಸ್ಎಲ್‌ಸಿ ವಿದ್ಯಾರ್ಥಿಗಳಿಗೆ ಓದುವಂತೆ ಪ್ರೇರೇಪಿಸಿದರೆ ಸಾಲದು 8,9ನೇ ತರಗತಿ ಮಕ್ಕಳಿಗೂ ನಿರಂತರ ಅಭ್ಯಾಸ ಮಾಡುವಂತೆ ಪ್ರೇರೇಪಿಸಬೇಕು. ಅಂದಾಗ ಶೈಕ್ಷಣಿಕ ಪ್ರಗತಿ ಸಾಸಲು ಸಾಧ್ಯ ಎಂದರು.

ತಾಲೂಕಿನಲ್ಲಿ ತಾಪಮಾನ ದಿನೇ ದಿನೆ ಹೆಚ್ಚಾಗುತ್ತಿದೆ. ಅಂಗನವಾಡಿ ಮಕ್ಕಳಿಗೆ ಶುದ್ಧ ಕುಡಿಯುವ ನೀರು ಪೂರೈಸಬೇಕು. ನೀರಿನ ಟ್ಯಾಂಕ್ ಸ್ವಚ್ಛತೆಗೆ ಆದ್ಯತೆ ನೀಡಿ, ಸಮರ್ಪಕ ವಿದ್ಯುತ್, ಪೈಪ್ ಲೈನ್ ಸಂಪರ್ಕ ಮತ್ತು ನೀರಿನ ಯಂತ್ರಗಳು ಯಾವ ಸ್ಥಿತಿಯಲ್ಲಿ ಅದಾವು ಎಂಬುದನ್ನು ಅಧಿಕಾರಿಗಳು ಗಮನಿಸಬೇಕು. ಮುಗ್ಧ ಮಕ್ಕಳಿಗೆ ಯಾವುದೇ ರೀತಿ ಸಮಸ್ಯೆಯಾಗಬಾರದು ಎಂದು ಸಿಡಿಪಿಓ ಮೃತ್ಯುಂಜಯ್ಯ ಗುಡ್ಡದಾನವೇರಿ ಅವರಿಗೆ ಸೂಚನೆ ನೀಡಿದರು.

ರೇಷ್ಮೆ ಗೂಡು ಮಾರಾಟದಲ್ಲಿ ರಾಮನಗರ ಬಿಟ್ಟರೆ ಶಿರಹಟ್ಟಿ ಮಾರುಕಟ್ಟೆಯಲ್ಲಿ ಅತೀ ಹೆಚ್ಚು ರೇಷ್ಮೆಗೂಡಿನ ವ್ಯಾಪಾರ-ವಹಿವಾಟು ನಡೆಯುತ್ತಿತ್ತು ಎಂಬ ಹೆಗ್ಗಳಿಕೆಗೆ ಪಾತ್ರವಾಗಿತ್ತು. ಆದರೆ ರೇಷ್ಮೆ ಇಲಾಖೆ ಅಧಿಕಾರಿಗಳ ಬೇಜವಾಬ್ದಾರಿ ಹಾಗೂ ರೇಷ್ಮೆ ಖರೀದಿದಾರರ ಒಳ ಒಪ್ಪಂದದಿಂದ ರೇಷ್ಮೆ ಗೂಡಿಗೆ ಯೋಗ್ಯ ಬೆಲೆ ಸಿಗುವುದಿಲ್ಲ ಎಂಬ ಕಾರಣಕ್ಕಾಗಿ ರೇಷ್ಮೆ ಮಾರುಕಟ್ಟೆ ಬಂದಾಗಿದೆ ಎನ್ನುವ ಮಾತುಗಳು ರೈತರಿಂದ ಕೇಳಿಬರುತ್ತಿವೆ. ಈ ಕುರಿತು ಪರಿಶೀಲನೆ ಮಾಡಬೇಕು ಎಂದು ತಿಳಿಸಿದರು.

ಈ ವೇಳೆ ತಾಪಂ ಇಓ ರಾಮಣ್ಣ ದೊಡ್ಡಮನಿ, ಹನುಮೇಶ ಕೊಂಡಿಕೊಪ್ಪ, ಶಿಕ್ಷಣ ಇಲಾಖೆಯ ರಾಮಚಂದ್ರಪ್ಪ ಪವಾರ, ಆರೋಗ್ಯಾಧಿಕಾರಿ ಸುಭಾಸ ದೈಗೊಂಡ ಸೇರಿದಂತೆ ತಾಲೂಕು ಮಟ್ಟದ ವಿವಿಧ ಇಲಾಖೆ ಅಧಿಕಾರಿಗಳು ಇದ್ದರು.

ಬಿತ್ತನೆ ವೇಳೆ ಬೀಜ ಗೊಬ್ಬರದ ಅಭಾವ ಸಲ್ಲ

ಪ್ರಸಕ್ತ ಸಾಲಿನ ಮುಂಗಾರು ಹಂಗಾಮು ಪ್ರಾರಂಭವಾಗಿದ್ದು, ಕೃಷಿ ಇಲಾಖೆ ಅಧಿಕಾರಿಗಳು ಮುಂಗಾರಿನಲ್ಲಿ ಬಿತ್ತನೆ ಮಾಡುವ ಬೀಜ ರಸಗೊಬ್ಬರದ ದಾಸ್ತಾನು ಮಾಡಿಕೊಳ್ಳಬೇಕು. ಬಿತ್ತನೆ ಸಮಯದಲ್ಲಿ ರೈತರಿಗೆ ಬೀಜ ಗೊಬ್ಬರದ ಅಭಾವ ಸೃಷ್ಟಿಯಾಗಬಾರದು. ಮುಂಜಾಗ್ರತವಾಗಿ ಸಮರ್ಪಕ ಬೀಜಗೊಬ್ಬರ ಸಂಗ್ರಹಿಸಲು ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ತಾಲೂಕ ಸಹಾಯಕ ಕೃಷಿ ನಿರ್ದೇಶಕ ಶಿವಕುಮಾರ ಕಾಶಪ್ಪನವರ ಅವರಿಗೆ ಎ.ಎ. ಕಂಬಾಳಿಮಠ ತಿಳಿಸಿದರು. ಈ ಕುರಿತು ಕೃಷಿ ಅಧಿಕಾರಿ ಪ್ರತಿಕ್ರಿಯಿಸಿ, ಮುಂಗಾರು ಪೂರ್ವದಲ್ಲಿಯೇ ರೈತರು ರಸಗೊಬ್ಬರ ದಾಸ್ತಾನು ಮಾಡಿಕೊಂಡಿದ್ದು, ಬೀಜ ರೈತರ ಬೇಡಿಕೆಯಂತೆ ದಾಸ್ತಾನಿದೆ. ಯಾವುದೇ ಸಮಸ್ಯೆಯಾಗದಂತೆ ಕ್ರಮ ಕೈಗೊಳ್ಳಲಾಗುವುದು ಎಂದರು.

ಮಾಗಿ ಉಳುಮೆಯಲ್ಲಿ ತಲ್ಲೀನರಾದ ರೈತರು

ಲಕ್ಷ್ಮೇಶ್ವರ: ರೈತ ಸಮುದಾಯ ಮುಂಗಾರು ಹಂಗಾಮಿಗೆ ಭೂಮಿಯನ್ನು ಹದಗೊಳಿಸುವ ಸಾಂಪ್ರದಾಯಿಕ ಮಾಗಿ ಉಳುಮೆಯನ್ನು ಕೈಗೊಂಡಿರುವ ದೃಶ್ಯ ಎಲ್ಲೆಡೆ ಕಂಡು ಬರುತ್ತಿದೆ.

ರೈತರು ಭೂಮಿ ಹದಗೊಳಿಸುವ ಕಾರ್ಯದಲ್ಲಿ ತಲ್ಲೀನರಾದ್ದಾರೆ. ಯುಗಾದಿ ಹಬ್ಬದ ದಿನವೇ ಭೂಮಿತಾಯಿಗೆ ಪೂಜೆ ಸಲ್ಲಿಸಿ ಮಾಗಿ ಉಳುಮೆ ಪ್ರಾರಂಭಿಸುತ್ತಾರೆ. ಸದ್ಯ ಎಲ್ಲೆಡೆ ರೈತರು ಹೊಟ್ಟು-ಸೊಪ್ಪಿಯ ಬಣವೆ ನಿರ್ಮಿಸುವುದು. ಜಮೀನಿಗೆ ಕೊಟ್ಟಿಗೆ ಗೊಬ್ಬರ ಹರಡುವುದು, ಟ್ರ್ಯಾಕ್ಟರ್ ಮೂಲಕ ಜಮೀನುಗಳಲ್ಲಿ ರಂಟೆ, ಕುಂಟೆ ಹೊಡೆಯುವುದು, ಕಟಗಿ, ಕಲ್ಲು, ಕಸ ಆರಿಸಿ ಸ್ವಚ್ಛಗೊಳಿಸುವುದು, ಕುರಿ ನಿಲ್ಲಿಸುವುದು, ಬದುವು ನಿರ್ಮಾಣ ಸೇರಿ ಭೂಮಿ ಸಿದ್ಧಪಡಿಸುವತ್ತ ಚಿತ್ತ ನೆಟ್ಟಿದ್ದಾರೆ. ಮತ್ತೊಂದೆಡೆ ಮುಂಗಾರು ಬಿತ್ತನೆಗೆ ಅವಶ್ಯವಾಗಿರುವ ಬೀಜ-ಗೊಬ್ಬರಗಳ ಸಂಗ್ರಹ, ಎತ್ತುಗಳ ಖರೀದಿ ಕಾರ್ಯದಲ್ಲಿ ತೊಡಗಿದ್ದಾರೆ.

ಕೃಷಿ ಇಲಾಖೆ ಮಾಹಿತಿ ಪ್ರಕಾರ ತಾಲೂಕಿನಲ್ಲಿ ನೀರಾವರಿ ಜಮೀನು 7000 ಹೆಕ್ಟೇರ್ ಮತ್ತು ಖುಷ್ಕಿ ಜಮೀನು 62600 ಹೆಕ್ಟೇರ್ ಸೇರಿ ಒಟ್ಟು 69600 ಹೆಕ್ಟೇರ್ ಉಳುಮೆ ಕ್ಷೇತ್ರವಿದೆ. ಗೋವಿನಜೋಳ, ಬಿ.ಟಿ ಹತ್ತಿ, ಶೇಂಗಾ, ಹೆಸರು, ಉಳ್ಳಾಗಡ್ಡಿ ತಾಲೂಕಿನಲ್ಲಿ ಪ್ರಮುಖ ಬೆಳೆಯಾಗಿವೆ. ಕೃಷಿ ಕಾರ್ಮಿಕರ ಸಮಸ್ಯೆಯಿಂದ ಪಾರಾಗಲು ಯಂತ್ರೋಪಕರಣ ಆಧಾರಿತ ಬೆಳೆಯತ್ತ ರೈತರು ಚಿತ್ತ ಹರಿಸಿದ್ದಾರೆ. ಸದ್ಯ ಬಿಸಿ ಬೇಗೆಯಿಂದ ಬೆಳಗಿನ ಜಾವ, ಸಂಜೆ, ರಾತ್ರಿ ರಂಟೆ ಹೊಡುವ ಕಾರ್ಯ ಮಾಡುತ್ತಿದ್ದಾರೆ. ಕಾದು ಕಬ್ಬಿಣದಂತಾಗಿರುವ ಭೂಮಿಯಲ್ಲಿ ರಂಟೆ(ನೇಗಿಲು) ಹೊಡೆಯಲು ಸಾಧ್ಯವಾಗುತ್ತಿಲ್ಲ, ಕಳೆದ ತಿಂಗಳು ಕೆಲವೆಡೆ ಸುರಿದ ಮುಂಗಾರು ಪೂರ್ವ ಮಳೆಯಿಂದ ಈ ವರ್ಷ ರಂಟೆ ಹೊಡೆಯಲು, ಹರಗಲು ಒಂದಷ್ಟು ಹದವಾಗಿದೆ. ಎತ್ತುಗಳ ದರ ಲಕ್ಷ ರೂ. ಆಸುಪಾಸು ಇರುವುದರಿಂದ ಮಾಗಿ ಉಳುಮೆಗಾಗಿ ರೈತರು ಟ್ರ್ಯಾಕ್ಟರ್ ಅವಲಂಬಿಸಿದ್ದಾರೆ. ಅಲ್ಲದೇ ಟ್ರ್ಯಾಕ್ಟರ್‌ನಿಂದ ಆಳವಾದ ಉಳುಮೆ ಆಗುತ್ತದೆ ಎಂಬ ಕಾರಣದಿಂದಲೂ ಬೇಡಿಕೆ ಹೆಚ್ಚಿದೆ. ಸದ್ಯ ರಂಟೆ ಹೊಡೆಯಲು ಪ್ರತಿ ಎಕರೆಗೆ ಸಾಮಾನ್ಯ ರಂಟೆ 2000 ರೂ. ಪಲ್ಟಿರಂಟೆ 2500 ರೂ. ದಾಟಿದೆ. ಹರಗಲು 1000 ರೂ., ದಿಂಡು ಹೊಡೆಯಲು 800 ರೂ. ಸ್ಪರ್ಧಾತ್ಮಕ ದರವಿದೆ. ಆದರೆ ಡಿಸೈಲ್, ಚಾಲಕರ ಸಂಬಳ ಹೆಚ್ಚಾಗಿದ್ದು ಈ ದರಕ್ಕೆ ಬಾಡಿಗೆ ಹೊಡೆದರೆ ಲಾಭವಾಗುವುದಿಲ್ಲ ಎಂಬುದು ಟ್ರ್ಯಾಕ್ಟರ್ ಮಾಲೀಕರ ಅಳಲು. ಲಕ್ಷ್ಮೇಶ್ವರ ಭಾಗದಲ್ಲಿ 1 ಎಕರೆ ಮಸಾರಿ(ಕೆಂಪು) ಜಮೀನಿಗೆ ಲಾವಣಿ 2-3 ಸಾವಿರ ಕೊಟ್ಟರೆ ಹೆಚ್ಚೆನ್ನುವಂತಿತ್ತು. ಈಗ ಎಕರೆಗೆ 5-6 ಸಾವಿರಕ್ಕೆ ಏರಿಕೆಯಾಗಿದೆ. ಇನ್ನು ಕಪ್ಪು ಮಣ್ಣಿನ ಜಮೀನಿಗಂತೂ ಬಂಗಾರದ ಬೆಲೆಯೇ ಬಂದಿದೆ. ಎಕರೆಗೆ 5-8 ಸಾವಿರ ರೂ ಇದ್ದ ಕಪ್ಪು(ಯರಿ) ಮಣ್ಣಿನ ಜಮೀನಿಗೆ ಈ ವರ್ಷ 15-20 ಸಾವಿರ ರೂ ಹೆಚ್ಚಳವಾಗಿದೆ.



> ತಾಲೂಕಿನಲ್ಲಿ ಪ್ರಮುಖ ಬೆಳೆಗಳ ಬಿತ್ತನೆ ಕ್ಷೇತ್ರ, ಅವಶ್ಯಕ ಬೀಜ, ಗೊಬ್ಬರ, ಇತರೇ ಕೃಷಿ ಸಾಮಗ್ರಿಗಳ ಬೇಡಿಕೆಯ ಅಂದಾಜು ಪಟ್ಟಿ ಸಿದ್ಧಪಡಿಸಿ ಹಿರಿಯ ಅಧಿಕಾರಿಗಳಿಗೆ ಸಲ್ಲಿಸುವ ಕಾರ್ಯ ಮಾಡಲಾಗುವುದು.
>
> ■ ಚಂದ್ರಶೇಖರ ನರಸಮ್ಮನವರ, ಕೃಷಿ ಅಧಿಕಾರಿ, ಲಕ್ಷ್ಮೇಶ್ವರ

ಹೆಚ್ಚುವರಿ ಡಯಾಲಿಸಿಸ್ ಘಟಕ ಆರಂಭಿಸಲು ಆಗ್ರಹ

ನರಗುಂದ: ಪಟ್ಟಣದ ಭಾಸ್ಕರರಾವ್ ಭಾವೆ ತಾಲೂಕು ಸರ್ಕಾರಿ ಆಸ್ಪತ್ರೆಯಲ್ಲಿ ಹೆಚ್ಚುವರಿ ಡಯಾಲಿಸಿಸ್ ಘಟಕ ಆರಂಭಿಸುವಂತೆ ಆಗ್ರಹಿಸಿ ಗುರುವಾರ ಮೂತ್ರಪಿಂಡದ ರೋಗಿಗಳು ಧರಣಿ ನಡೆಸಿದರು.

ಇರುವ ಎರಡು ಡಯಾಲಿಸಿಸ್ ಘಟಕಗಳಿಗೆ 17 ರೋಗಿಗಳು ಇದ್ದೇವೆ. ವಾರಕ್ಕೆ ಎರಡು ಅಥವಾ ಮೂರ ಸಲ ಡಯಾಲಿಸಿಸ್‌ಗೆ ಒಳಗಾಗಬೇಕಾಗಿದೆ. ಆದರೆ ಅದು ಸಕಾಲಕ್ಕೆ ದೊರೆಯುತ್ತಿಲ್ಲ, ಆದ್ದರಿಂದ ಹೆಚ್ಚುವರಿ ಘಟಕ ಆರಂಭಿಸಬೇಕು. ಈಗಾಗಲೇ ಹಲವಾರು ಸಲ ಮನವಿ ನೀಡಿದರೂ ಪ್ರಯೋಜವಾಗಿಲ್ಲ ಎಂದು ಧರಣಿ ನಿರತ ರೋಗಿಗಳು ಆರೋಪಿಸಿದರು. ಈಗಾಗಲೇ ಆಸ್ಪತ್ರೆಯಲ್ಲಿ ಎರಡೇ ಡಯಾಲಿಸಿಸ್ ಘಟಕಗಳು ಇದ್ದು,17 ರೋಗಿಗಳು ಇದ್ದಾರೆ. ನಿರಂತರ ಯಂತ್ರಗಳು ಡಯಾಲಿಸಿಸ್ ಮಾಡಬೇಕಾದ ಅನಿವಾರ್ಯತೆ ಇದೆ. ಬೆಳಗ್ಗೆ 6 ಗಂಟೆಗೆ ಆರಂಭವಾದರೆ ಮೂರು ಪಾಳೆಯಗಳಲ್ಲಿ ಸಂಜೆ 6 ಗಂಟೆಯವರೆಗೂ ನಡೆಯುತ್ತದೆ. ಆದರೆ ಮೂರೇ ಪಾಳೆಯಗಳಲ್ಲಿ ಎಲ್ಲ 17 ರೋಗಿಗಳಿಗೆ ಡಯಾಲಿಸಿಸ್ ಸಾಧ್ಯವಿಲ್ಲ, ಆದ್ದರಿಂದ ವೈದ್ಯರು ನಾಲ್ಕನೇಯ ಪಾಳೆಯದಲ್ಲಿ ಡಯಾಲಿಸಿಸ್ ಮಾಡಿಸಿಕೊಳ್ಳಿ, ನಾವು ಸೇವೆ ನೀಡಲು ಸಿದ್ದರಿದ್ದೇವೆ ಎನ್ನುತ್ತಾರೆ. ಆದರೆ ರಾತ್ರಿ 6 ಗಂಟೆ ನಂತರ ಡಯಾಲಿಸಿಸ್ ಮಾಡಿಸಿಕೊಂಡು ಮನೆಗೆ, ಬೇರೆ ಊರುಗಳಿಗೆ ನಾವು ತೆರಳುವುದು ಹೇಗೆ?, ಇದು ಅಸಾಧ್ಯ. ಜೊತೆಗೆ ವಯಸಾದ, ಗಂಭೀರವಾದ ಕಾಯಿಲೆ ಹೊಂದಿದವರಿದ್ದೇವೆ. ನಾಲ್ಕನೇ ಪಾಳೆಯದಲ್ಲಿ ಚಿಕಿತ್ಸೆ ಹೊಂದಲು ಸಾಧ್ಯವಿಲ್ಲ, ಆದ್ದರಿಂದ ಇರುವ ಎರಡು ಯಂತ್ರಗಳು ಸಾಕಾಗದು. ಒಂದು ವೇಳೆ ತಾಂತ್ರಿಕ ಸಮಸ್ಯೆ ಉಂಟಾದರೆ ಬೇರೆ ಯಂತ್ರಗಳು ಇಲ್ಲ, ಆದ್ದರಿಂದ ಹೆಚ್ಚುವರಿ ಎರಡು ಡಯಾಲಿಸಿಸ್ ಘಟಕಗಳನ್ನು ಆರಂಭ ಮಾಡಬೇಕೆಂದು ಆಗ್ರಹಿಸಿದರು. ಮನವಿ ಸ್ವೀಕರಿಸಿ ಮಾತನಾಡಿದ ಡಾ.ಜಡೇಶ ಭದ್ರಗೌಡ್ರ ಅವರು ಎರಡು ಡಯಾಲಿಸಿಸ್ ಘಟಕಗಳಿವೆ. ಆದರೆ ನಮ್ಮಲ್ಲಿ ಈಗಾಗಲೇ 17 ರೋಗಿಗಳು ಇದ್ದಾರೆ. 6 ರೋಗಿಗಳು ವೇಟಿಂಗನಲ್ಲಿ ಇದ್ದಾರೆ. ಇವರೆಲ್ಲರಿಗೂ ನಿಯಮಿತವಾಗಿ ಡಯಾಲಿಸಿಸ್ ಸೇವೆ ನೀಡಲಾಗುತ್ತಿದೆ. ಆದರೆ ನಿರಂತರ ಮೂರು ಪಾಳೆಯಗಳಲ್ಲಿ ಯಂತ್ರಗಳು ಹಾಗೂ ಮೂರು ಸಿಬ್ಬಂದಿ ಸೇವೆ ನಡೆಯುತ್ತಿದೆ. ತಾಲೂಕು ಕೇಂದ್ರಗಳಲ್ಲಿ ಸುಸಜ್ಜಿತ ಘಟಕ ನಮ್ಮ ಆಸ್ಪತ್ರೆಯಲ್ಲಿ ಮಾತ್ರ ಇದೆ. ಆದ್ದರಿಂದ ನಮ್ಮ ತಾಲೂಕಿನ ಜೊತೆಗೆ ಬೇರೆ ತಾಲೂಕಿನ ರೋಗಿಗಳು ಇಲ್ಲಿ ಬರುತ್ತಿದ್ದಾರೆ. ಇದರಿಂದ ಮೂರು (ಸರತಿ)ಪಾಳೆಯದಿಂದ ನಾಲ್ಕನೇ ಪಾಳೆಯಕ್ಕೂ ಹೆಚ್ಚಿಸಲಾಗಿದೆ. ಇರುವ ಯಂತ್ರಗಳಲ್ಲಿ ಇದು ಸಾಕಾಗದು. ಆದ್ದರಿಂದ ಹೆಚ್ಚುವರಿ ಘಟಕಕ್ಕೆ ಜಿಲ್ಲಾ ಹಾಗೂ ರಾಜ್ಯ ಆರೋಗ್ಯ ಇಲಾಖೆಗೆ, ಶಾಸಕರಿಗೂ ಮನವಿ ಮಾಡಲಾಗಿದೆ. ಯಂತ್ರಗಳು ಬರುವವರೆಗೆ ನಾಲ್ಕನೇ ಪಾಳೆ ನಡೆಸುವಂತೆ ಆರೋಗ್ಯ ಇಲಾಖೆ ಸೂಚಿಸಿದೆ. ಡಿಸೆಬರ್‌ನಲ್ಲಿ ಆಸ್ಪತ್ರೆಗೆ ಬಂದು ಪರಿಶೀಲನೆ ಮಾಡಿ ತೆರಳಿದ್ದು, ನಾಲ್ಕನೇ ಪಾಳೆಯಕ್ಕೆ ಸಿಬ್ಬಂದಿ ನೀಡಿದ್ದಾರೆ. ರೋಗಿಗಳಿಗೆ ತೊಂದರೆ ಯಾಗದಂತೆ ಕಾರ್ಯ ನಿರ್ವಹಿಸಲಾಗುತ್ತಿದೆ. ಶಾಸಕರು ತಮ್ಮ ಅನುದಾನದಲ್ಲಿ ಡಯಾಲಿಸಿಸ್ ಯಂತ್ರ ಒದಗಿಸುವುದಾಗಿ ಹೇಳಿದ್ದಾರೆ. ಶೀಘ್ರ ಬಂದು ಮತ್ತೊಂದು ಘಟಕ ಶೀಘ್ರ ಆರಂಭವಾಗುತ್ತದೆ. ಆದರೆ ಇರುವ ಯಂತ್ರಗಳಲ್ಲಿ ಸಮರ್ಪಕ ಸೇವೆ ನೀಡುತ್ತಿದ್ದೇವೆ ಎಂದರು.



ಬೆಳೆವಿಮೆ ಪರಿಹಾರ ನೀಡಲು ಆಗ್ರಹ



ಗದಗ: ಪ್ರಧಾನಮಂತ್ರಿ ಫಸಲ್ ಭೀಮಾ ಯೋಜನೆಯ ಬೆಳೆವಿಮಾ ಪರಿಹಾರ ಹಾಗೂ ಬೆಳೆವಿಮೆ ನೀಡುವಂತೆ ಆಗ್ರಹಿಸಿ ಕರ್ನಾಟಕ ರಾಜ್ಯ ಬೆಳೆವಿಮಾ ಹೋರಾಟ ಸಮಿತಿ ಹಾಗೂ ವಿವಿಧ ರೈತ ಸಂಘಟನೆಗಳ ನೇತೃತ್ವದಲ್ಲಿ ಗುರುವಾರ ನೂರಾರು ರೈತರು ಪ್ರತಿಭಟನೆ ನಡೆಸಿ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿದರು.

ರಾಜ್ಯ ಬೆಳೆವಿಮಾ ಹೋರಾಟ ಸಮಿತಿಯ ರಾಜ್ಯಾಧ್ಯಕ್ಷ ಪರಮೇಶ್ವರಪ್ಪ ಜಂತ್ಲಿ ಮಾತನಾಡಿ, ಜಿಲ್ಲೆಯಲ್ಲಿ ಕೆಂಪು ಮೆಣಸಿನಕಾಯಿ, ಈರುಳ್ಳಿ, ಹೆಸರು, ಶೇಂಗಾ, ಗೋವಿನಜೋಳ ಸೇರಿದಂತೆ ಮುಂತಾದ ಮುಂಗಾರು ಬೆಳೆಗಳಲ್ಲಿ ಪ್ರಧಾನಮಂತ್ರಿ ಫಸಲ್ ಭೀಮಾ ಯೋಜನೆಯಡಿ ಲಕ್ಷಾಂತರ ರೈತರು ಬೆಳೆ ವಿಮೆ ಪಾವತಿಸಿದ್ದು, ಇಲ್ಲಿಯವರೆಗೂ ವಿಮಾ ಕಂಪನಿಯ ಮಧ್ಯಂತರ ಪರಿಹಾರ ಮರೀಚಿಕೆಯಾಗಿದೆ. ಓರಿಯಂಟಲ್ ವಿಮಾ ಕಂಪನಿ ಜಿಲ್ಲೆಯ ರೈತರಿಗೂ ಮತ್ತು ಸರ್ಕಾರಕ್ಕೂ ಮೋಸ ಮಾಡುತ್ತಿದ್ದು, ಮಧ್ಯಂತರ ಸ್ಥಳೀಯ ಗಂಡಾಂತರ ಪರಿಹಾರ ರೈತರ ಖಾತೆಗೆ ಹಾಕದೇ ಕುಂಟ ನೆಪ ಹೇಳುತ್ತಾ ದಿನಗಳನ್ನು ಮುಂದೆ ಹಾಕುತ್ತಿದ್ದಾರೆ. ಒಂದು ವಾರದೊಳಗಾಗಿ ಓರಿಯಂಟಲ್ ವಿಮಾ ಕಂಪನಿಗೆ ಬೆಳೆವಿಮೆ ಹಣ ರೈತರ ಖಾತೆಗೆ ಜಮೆ ಮಾಡುವಂತೆ ಆದೇಶ ಮಾಡದಿದ್ದರೆ ಜಿಲ್ಲೆಯ ರೈತರು ಜಿಲ್ಲಾಧಿಕಾರಿಗಳ ಕಾರ್ಯಾಲಯದ ಮುಂದೆ ಅನಿರ್ದಿಷ್ಟಾವಧಿ ವರೆಗೆ ಸತ್ಯಾಗ್ರಹ ಮಾಡಲಾಗುವುದು ಎಂದು ಎಚ್ಚರಿಕೆ ನೀಡಿದರು.

ರಾಜ್ಯ ಉಪಾಧ್ಯಕ್ಷ ಹನುಮರಡ್ಡಿ ಮೊರಬರಡ್ಡಿ, ರಾಜ್ಯ ಕಾರ್ಯದರ್ಶಿ ಎಫ್.ಎಸ್.ಪಾಟೀಲ, ಉಮೇಶ ಲಿಂಗರಡ್ಡಿ, ಬೂದೇಶ ಮೈಲಾರ, ಜಿಲ್ಲಾಧ್ಯಕ್ಷ ರುದ್ರಯ್ಯ ಹಿರೇಮಠ, ಅಶೋಕ ಬಶೆಟ್ಟಿ, ಸತೀಶ ಗಿಡ್ಡಹನುಮಣ್ಣವರ, ಸೋಮನಗೌಡ್ರ ಪಾಟೀಲ, ಗೋವಿಂದರಡ್ಡಿ ಕೊಣ್ಣೂರ, ಕಿರಣ ಪವಾರ, ಜಗದೀಶ ಕೊಣ್ಣೂರ, ಈರಣ್ಣ ಬಂಡಿಹಾಳ, ಈರಪ್ಪ ಹಳ್ಳಿ, ಸಿದ್ದು ಯಾಳವಾಡ, ಮಲ್ಲನಗೌಡ ಪಾಟೀಲ, ಪ್ರಕಾಶ ರೆಡಿಯಪ್ಪನವರ, ಕೊಟ್ರಯ್ಯ ಕಟ್ಟಿಮನಿ, ಸತೀಶಕುಮಾರ ಸಲಗಾರ, ಹುಚ್ಚಪ್ಪ ಗುರಿಕಾರ, ಮಂಜು ಸಿದ್ದನಗೌಡ, ಅಶೋಕಕುಮಾರ ಇತರರಿದ್ದರು.

ಉಚಿತ ಖಗೋಳ ವೀಕ್ಷಣೆಗೆ ಅವಕಾಶ

ಗದಗ: ಐಎಂಎ ಶತಮಾನೋತ್ಸವದ ಪ್ರಯುಕ್ತ ಮಕ್ಕಳಿಗೆ ಉಚಿತ ಖಗೋಳ ವೀಕ್ಷಣೆಗೆ ಮೇ 3ರವರೆಗೆ ಅವಕಾಶ ಕಲ್ಪಿಸಲಾಗಿದೆ. ತಾರಾಲಯ ವೀಕ್ಷಣೆಯು ಬ್ರಹ್ಮಾಂಡದ ವೈಜ್ಞಾನಿಕ ಅರಿವು ಮೂಡಿಸುವಲ್ಲಿ ಪ್ರಮುಖ ಪಾತ್ರ ವಹಿಸಲಿದೆ ಎಂದು ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಆರ್.ಎಸ್.ಬುರುಡಿ ತಿಳಿಸಿದರು.

ಬೆಟಗೇರಿಯ ತಾರಾಲಯದಲ್ಲಿ ಜಿಲ್ಲಾ ಪಂಚಾಯತ್, ಶಾಲಾ ಶಿಕ್ಷಣ ಇಲಾಖೆ ಐಎಂಎ ಸಂಸ್ಥೆಯ ಶತಮಾನೋತ್ಸವ ಪ್ರಯುಕ್ತ ಮಕ್ಕಳಿಗೆ ಖಗೋಳ ವೀಕ್ಷಣೆ ವಿಸ್ಮಯ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. 60 ನಿಮಿಷಗಳ ಬಾಹ್ಯಾಕಾಶದ ವೀಕ್ಷಣೆಯು ವಾರದ ಪ್ರತಿ ಸೋಮವಾರ ಹಾಗೂ ಮೇ 1 ಕಾರ್ಮಿಕ ದಿನಾಚರಣೆ ಪ್ರಯುಕ್ತ ರಜೆ ಇದ್ದು ಉಳಿದ ದಿನಗಳಂದು ಭಾನುವಾರ ಸೇರಿದಂತೆ ಬೆಳಗ್ಗೆ 9.30 ರಿಂದ ಸಂಜೆ 4.30 ರವರೆಗೆ ಐದು ಪ್ರದರ್ಶನಗಳು ಜರುಗಲಿವೆ. 1 ನೇ ಪ್ರದರ್ಶನ ಬೆಳಗ್ಗೆ 9.30 ರಿಂದ 10.45ಗೆ; 2 ನೇ ಪ್ರದರ್ಶನ ಮಧ್ಯಾಹ್ನ 11 ರಿಂದ ಮಧ್ಯಾಹ್ನ 12ರವರೆಗೆ, 3ನೇ ಪ್ರದರ್ಶನ ಮಧ್ಯಾಹ್ನ 12.15 ರಿಂದ 1.15 ರವರೆಗೆ, 4ನೇ ಪ್ರದರ್ಶನ ಮಧ್ಯಾಹ್ನ 2.15 ರಿಂದ 3.15 ರವರೆಗೆ, 5ನೇ ಪ್ರದರ್ಶನ ಮಧ್ಯಾಹ್ನ 3.30 ಗಂಟೆಯಿಂದ 4.30 ಗಂಟೆಯವರೆಗೆ ಜರುಗಲಿವೆ ಎಂದರು.

ಲಾಯನ್ಸ್ ಕ್ಲಬ್ ದವರು ಮಕ್ಕಳಿಗಾಗಿ 2 ಬಸ್‌ಗಳ ವ್ಯವಸ್ಥೆ ಕಲ್ಪಿಸಿದ್ದು ಮಕ್ಕಳು ತಾರಾಲಯದಿಂದ ಮೃಗಾಲಯಕ್ಕೆ ಬಂದು ಉಚಿತವಾಗಿ ಮೃಗಾಲಯದ ವೀಕ್ಷಣೆ ಮಾಡಬಹುದು. ಎಸ್ಎಸ್ಎಲ್‌ಸಿಯಲ್ಲಿ ತಾಲೂಕಾವಾರು ಪ್ರಥಮ ಸ್ಥಾನ ಪಡೆದ ವಿದ್ಯಾರ್ಥಿಗೆ 10,000, ದ್ವಿತೀಯ ಸ್ಥಾನ ಪಡೆದವರಿಗೆ 5 ಸಾವಿರ, ತೃತೀಯ ಸ್ಥಾನ ಪಡೆದ ವಿದ್ಯಾರ್ಥಿಗಳಿಗೆ 3 ಸಾವಿರ ರೂ.ಗಳ ಪ್ರೋತ್ಸಾಹಧನ ನೀಡಲಿದ್ದಾರೆ ಎಂದರು.

ಐಎಂಎ ಅಧ್ಯಕ್ಷ ಶ್ರೀಧರ್ ಕುರಡಗಿ ಮಾತನಾಡಿ, ವಿಸ್ಮಯ ಕಾರ್ಯಕ್ರಮದಡಿ ತಾರಾಲಯ ವೀಕ್ಷಣೆಯಿಂದ ಮಕ್ಕಳಲ್ಲಿ ನಕ್ಷತ್ರಗಳು, ಗ್ರಹಗಳು, ಉಪಗ್ರಹಗಳು ಹಾಗೂ ಬ್ರಹ್ಮಾಂಡದ ರಹಸ್ಯಗಳ ಬಗ್ಗೆ ಕುತೂಹಲ ಹೆಚ್ಚುತ್ತದೆ. ಈ ಕುತೂಹಲವೇ ಅವರನ್ನು ಪ್ರಶ್ನಿಸಲು, ವಿಚಾರಿಸಲು ಮತ್ತು ತರ್ಕಬದ್ಧವಾಗಿ ಯೋಚಿಸಲು ಪ್ರೇರೇಪಿಸುತ್ತದೆ ಎಂದರು. ಡಾ.ಎಸ್.ಆರ್.ನಾಗನೂರ, ಶಿವಕುಮಾರ್ ಕುರಿ, ಎಂ.ಎಚ್.ಕಾಂಬಳೆ, ಆನಂದ ಪೋತ್ನೀಸ್, ವೆರ್ಣೆಕರ್ , ಡಾ. ರಶ್ಮಿ, ಎಂ.ಎ. ಯರಗುಡಿ ಮತ್ತಿತರರಿದ್ದರು.



ಸಾಧಕಿಯರಿಗೆ ಪ್ರಶಸ್ತಿ ಪ್ರದಾನ



ಮುಂಡರಗಿ: ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ರಾಜ್ಯ ದೇವಾಂಗ ನೌಕರರ ಸಂಘ ಮತ್ತು ರಾಜ್ಯ ದೇವಾಂಗ ಮಹಿಳಾ ಜಾಗೃತಿ ವೇದಿಕೆ ಹಮ್ಮಿಕೊಂಡಿದ್ದ ಮಹಿಳಾ ದಿನಾಚರಣೆಯಲ್ಲಿ ಮುಂಡರಗಿ ದೇವಾಂಗ ಸಮಾಜದ ಸಾಧಕಿಯರಾದ ಚಂದ್ರಮತಿ ಗದ್ದಿ (ಶಿಕ್ಷಣ ಮತ್ತು ಸಾಮಾಜಿಕ ಕ್ಷೇತ್ರ), ಶಂಕ್ರಮ್ಮ ಹಡಗಲಿ (ಸಮಾಘಟನಾ ಕ್ಷೇತ್ರ), ಲಕ್ಷ್ಮೀದೇವಿ ಗುಬ್ಬಿ (ಸಾಮಾಜಿಕ ಕೇತ್ರ), ಪ್ರಭಾವತಿ ಗಡಾದ (ಶಿಕ್ಷಣ ಮತ್ತು ಸಾಮಾಜಿಕ ಕ್ಷೇತ್ರ), ಲಕ್ಷ್ಮೀದೇವಿ ಭೂತಾನವರ (ಸಾಮಾಜಿಕ ಕ್ಷೇತ್ರ) ಅವರಿಗೆ ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು.

ಹಂಪಿ ಹೇಮಕೂಟ ಪೀಠಾಧ್ಯಕ್ಷ ದಯಾನಂದಪುರಿ ಸ್ವಾಮೀಜಿ, ಡಾ.ರಾಜಕುಮಾರ ಜೀವಮಾನ ಪ್ರಶಸ್ತಿ ಪುರಸ್ಕೃತರಾದ ಉಮಶ್ರೀ ಅವರು ಪ್ರಶಸ್ತಿ ಪ್ರದಾನ ಮಾಡಿದರು.

ಪೌರಕಾರ್ಮಿಕರಿಗೆ ಸನ್ಮಾನ: ಪ್ರಶಸ್ತಿ

ಗದಗ: ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಹಾಗೂ ಹಸಿರು ಕ್ರಾಂತಿ ಹರಿಕಾರ, ಮಾಜಿ ಉಪ ಪ್ರಧಾನಮಂತ್ರಿ ಡಾ. ಬಾಬು ಜಗಜೀವನ್ ರಾಂ ಜಯಂತಿ ಉತ್ಸವದ ಅಂಗವಾಗಿ ನಗರದ ಅಂಬೇಡ್ಕರ್ ಭವನದಲ್ಲಿ ಭಾವಪೂರ್ಣ ವೇದಿಕೆ ಕಾರ್ಯಕ್ರಮ ಜರುಗಿತು.

ಈ ಸಂದರ್ಭದಲ್ಲಿ ವಿವಿಧ ನಗರಸಭೆ ಹಾಗೂ ಪುರಸಭೆಗಳಲ್ಲಿನ ಶ್ರಮಜೀವಿ ಪೌರಕಾರ್ಮಿಕರ ಸೇವೆಯನ್ನು ಗುರುತಿಸಿ "ಉತ್ತಮ ಪೌರಕಾರ್ಮಿಕ" ಪ್ರಶಸ್ತಿಯನ್ನು ಗಣ್ಯರು ಪ್ರದಾನ ಮಾಡಿ ಗೌರವಿಸಿದರು. ಸಮಾಜದ ಸ್ವಚ್ಛತೆ ಮತ್ತು ಆರೋಗ್ಯ ಕಾಪಾಡುವಲ್ಲಿ ಪೌರಕಾರ್ಮಿಕರ ಪಾತ್ರ ಅತ್ಯಂತ ಮಹತ್ತರವಾಗಿದ್ದು, ಅವರ ಸೇವೆ ಅಮೂಲ್ಯ ಎಂದು ಗಣ್ಯರು ಅಭಿಪ್ರಾಯಪಟ್ಟರು.

ಪ್ರಶಸ್ತಿ ಪಡೆದ ಪೌರಕಾರ್ಮಿಕರಾಧ ಮುದಕಪ್ಪ ಬಚ್ಚೇನಹಳ್ಳಿ, ಮರಿಯಪ್ಪ ಬಾನಪ್ಪ ಗುಡಿಮನಿ, ದುರುಗಪ್ಪ ಪಾದಗಟ್ಟಿ, ಬಸವರಾಜ ಜೋಗಣ್ಣವರ್, ಮಹೇಶ್, ದಾವಲಪ್ಪ , ರೇಣಪ್ಪ ಕಮತದ, ಶಿವಪ್ಪ ಮಾದರ, ಅಶೋಕ್ ಚಲವಾದಿ ಅವರನ್ನು ಸನ್ಮಾನಿಸಲಾಯಿತು.



ನೂತನ ಪದಾಧಿಕಾರಿಗಳ ಆಯ್ಕೆ



ಗಜೇಂದ್ರಗಡ: ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ತಾಲೂಕು ಘಟಕ ಗಜೇಂದ್ರಗಡಕ್ಕೆ ನೂತನವಾಗಿ ಪದಾಧಿಕಾರಿಗಳನ್ನು ಅವಿರೋಧವಾಗಿ ಆಯ್ಕೆ ಮಾಡಲಾಯಿತು.

ಆರ್.ಕೆ. ಹುನಗುಂದ, ಬಿ.ಎಂ.ಹಿರೇಮಠ, ಎಸ್.ಆರ್. ನೀಲೂರ, ಬಿ.ಬಿ. ಕುರಿ, ಎಂ.ಎಸ್. ಕುರಿ, ಬಿ.ಟಿ.ಹೊಸಮನಿ, ರಜಿಯಾಬೇಗಂ ನದಾಫ್ ಅವರನ್ನು ಆಯ್ಕೆ ಮಾಡಲಾಯಿತು. ನೂತನವಾಗಿ ಆಯ್ಕೆಯಾದ ಆರ್. ಕೆ. ಹುನಗುಂದ ಮಾತನಾಡಿ, ನಮ್ಮ ತಾಲೂಕಿನ ಪ್ರತಿಯೊಬ್ಬ ಶಿಕ್ಷಕರಿಗೆ ಯಾವುದೇ ತೊಂದರೆ ಆಗದಂತೆ ಕೆಲಸ ಕಾರ್ಯ ಮಾಡುತ್ತೇವೆ. ಸಂಘದ ವತಿಯಿಂದ ಶಿಕ್ಷಕರಿಗೆ ಸಲ್ಲಬೇಕಾದ ಅನುಕೂಲತೆಗಳನ್ನು ಪ್ರಾಮಾಣಿಕವಾಗಿ ಸಮರ್ಪಕವಾಗಿ ಸಿಗುವಂತೆ ಮಾಡಲು ಮುಂದಾಗುತ್ತೇವೆ. ಸೇವೆ ಮಾಡಲು ಅವಕಾಶ ಕೊಟ್ಟ ಎಲ್ಲರಿಗೂ ಋಣಿ ಎಂದರು. ಎಸ್.ಕೆ.ಸರಗನಚರಿ, ಬಸವರಾಜ ಅಂಗಡಿ, ಬಸವರಾಜ್ ಅಣ್ಣಿಗೇರಿ, ಆರ್.ಜಿ. ಮೈಕಲ್, ಕಾಲೇಶ್ ವನ್ನಲಾ, ಕೆ.ಬಿ.ಬಾಗರಿ ಸೇರಿದಂತೆ ಅನೇಕರು ಇದ್ದರು.

ಜಾಗೃತಿ ಶಿಬಿರ ಕಾರ್ಯಕ್ರಮ ಉದ್ಘಾಟನೆ

ಗದಗ: ನಮ್ಮ ಶಾಲೆಯ ಅಭಿವೃದ್ಧಿಗಾಗಿ ನಾವು ಒಂದಾದರೂ ಹೆಜ್ಜೆಗುರುತನ್ನು ಬಿಟ್ಟು ಹೋಗಬೇಕು ಎಂದು ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯ ಉಪ ನಿರ್ದೇಶಕ ಹಾಗೂ ಪ್ರಾಂಶುಪಾಲ ಜಿ.ಎಂ. ಮುಂದಿನಮನಿ ಹೇಳಿದರು.

ಕರ್ನಾಟಕ ಸರ್ಕಾರ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ಗದಗ ಉಪನಿರ್ದೇಶಕರು (ಅಭಿವೃದ್ಧಿ) ಮತ್ತು ಆಡಳಿತ ಇವರ ಸಂಯುಕ್ತ ಆಶ್ರಯದಲ್ಲಿ ಡಾ. ಬಿ.ಆರ್ ಅಂಬೇಡ್ಕರ್ ಸಭಾಭವನದಲ್ಲಿ 2026-27ನೇ ಸಾಲಿನ ಜಿಲ್ಲೆ ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ದಾಖಲಾತಿ (ಮಕ್ಕಳ ಸಂಖ್ಯೆ) ಹೆಚ್ಚಿಸಲು ಅಧ್ಯಕ್ಷರು, ಉಪಾಧ್ಯಕ್ಷರು, ಕಾರ್ಯದರ್ಶಿ, ಸದಸ್ಯರುಗಳಿಗೆ ಜಾಗೃತಿ ಶಿಬಿರ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ದಕ್ಷಿಣ ಕರ್ನಾಟಕದ ಜಿಲ್ಲೆಗಳಲ್ಲಿ ಜನರು ಶಿಕ್ಷಣಕ್ಕೆ ನೀಡುವ ಆದ್ಯತೆಯಿಂದಾಗಿ ಅವರು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಬಲಿಷ್ಠರಾಗಿದ್ದಾರೆ. ಉತ್ತರ ಕರ್ನಾಟಕದಲ್ಲೂ ಅಂತಹ ಬದಲಾವಣೆ ಬರಬೇಕು ಎಂದರು. ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಅಧ್ಯಕ್ಷ ಅಬ್ದುಲ್ ಸಲಾಂ ಪ್ರಾಸ್ತಾವಿಕವಾಗಿ ಮಾತನಾಡಿ, ಸಂವಿಧಾನದ ಆಶಯದಂತೆ ಪ್ರತಿಯೊಂದು ಮಗುವಿಗೂ ಉಚಿತ ಮತ್ತು ಕಡ್ಡಾಯ ಶಿಕ್ಷಣ ಸಿಗಬೇಕು ಎಂದರು. ಡಯಟ್ ಹಿರಿಯ ಉಪನ್ಯಾಸಕ ಬಿ.ಎಫ್. ಅರವಟಗಿ, ಡಯಟ್ ಅಧೀಕ್ಷಕ ಶ್ರೀನಿವಾಸ ಕುಲಕರ್ಣಿ ಇತರರಿದ್ದರು.



ಉತ್ತರ, ಕಲ್ಯಾಣ ಕರ್ನಾಟಕದಲ್ಲಿ ಉಷ್ಣತೆ ತೀವ್ರ ಏರಿಕೆ

ಚಿಟಾಂಕಿಯಲ್ಲಿ ಗರಿಷ್ಠ 44.6 ಡಿಗ್ರಿ ಸೆಲ್ಸಿಯಸ್ ದಾಖಲು

ಕಲಬುರಗಿ: ಬೀದರ್ ಜಿಲ್ಲೆಯ ಚಿಟಾಂಕಿ ಹೋಬಳಿಯಲ್ಲಿ ಗುರುವಾರ ರಾಜ್ಯದಲ್ಲೇ ಗರಿಷ್ಠ 44.6 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾದರೇ,ಈಕಡೇ ಕಲಬುರಗಿಯಲ್ಲೂ 44.3 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗಿದ್ದು, ಉತ್ತರ ಕರ್ನಾಟಕದ ಹಲವು ಜಿಲ್ಲೆಗಳಲ್ಲಿ ಭಾರೀ ಬಿಸಿಲಿನ ತಾಪಮಾನ ಜನಜೀವನವನ್ನು ಕಂಗೆಡಿಸಿದೆ.



ಏಪ್ರಿಲ್ 16ರಂದು ಕಲಬುರಗಿ ತಾಲೂಕಿನ ಔರಾದ್ ಗ್ರಾಮದಲ್ಲಿ -44.3 ಡಿಗ್ರಿ ಸೆಲ್ಸಿಯಸ್, ಆಳಂದ ತಾಲೂಕಿನ ಮಾದನ ಹಿಪ್ಪರಗಿಯಲ್ಲಿ 44.3 ಡಿಗ್ರಿ ಸೆಲ್ಸಿಯಸ್ ಹಾಗೂ ಅಫಜಲಪುರ ತಾಲೂಕಿನ ಅತನೂರ ಗ್ರಾಮದಲ್ಲಿ 44 ಡಿಗ್ರಿ ಸೆಲ್ಸಿಯಸ್ ತಾಪಮಾನ ದಾಖಲಾಗಿದೆ.

ಕಲಬುರಗಿ ರಾಯಚೂರು, ಬೀದರ ಹಾಗೂ ವಿಜಯಪುರ ಜಿಲ್ಲೆಗಳ ಅನೇಕ ಸ್ಥಳಗಳಲ್ಲಿ 42 ಡಿಗ್ರಿ ಸೆಲ್ಸಿಯಸ್‌ನಿಂದ 44.6 ನಡುವಿನ ಗರಿಷ್ಠ ತಾಪಮಾನ ದಾಖಲಾಗಿದೆ. ಯಾದಗಿರಿ ಮತ್ತು ಬಾಗಲಕೋಟೆ ಜಿಲ್ಲೆಗಳ ಕೆಲವು ಪ್ರದೇಶಗಳಲ್ಲಿ ಸಹ ಇದೇ ಮಟ್ಟದ ಉಷ್ಣತೆ ಕಂಡು ಬಂದಿದ್ದು, ಬೆಳಗಾವಿ, ಬಳ್ಳಾರಿ, ಗದಗ, ಕೊಪ್ಪಳ, ಚಿತ್ರದುರ್ಗ ಮತ್ತು ವಿಜಯನಗರ ಜಿಲ್ಲೆಗಳ ಕೆಲವು ಕಡೆಗಳಲ್ಲಿ ಕೂಡ ಉಷ್ಣತೆ 42 ಡಿಗ್ರಿ ಸೆಲ್ಸಿಯಸ್ ದಾಟಿದೆ.

ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ನಿರ್ವಹಣಾ ಕೇಂದ್ರ ಮಾಹಿತಿ ಪ್ರಕಾರ, ಕಲಬುರಗಿಯಲ್ಲಿ 21 ಸ್ಥಳಗಳು, ರಾಯಚೂರಿನಲ್ಲಿ 21, ಬೀದರಲ್ಲಿ 20, ವಿಜಯಪುರದಲ್ಲಿ 14 ಸ್ಥಳಗಳಲ್ಲಿ 42 ಡಿಗ್ರಿ ಸೆಲ್ಸಿಯಸ್‌ಗಿಂತ ಅಧಿಕ ತಾಪಮಾನ ದಾಖಲಾಗಿದೆ. ಬಾಗಲಕೋಟೆಯಲ್ಲಿ 9, ಯಾದಗಿರಿಯಲ್ಲಿ 8, ಬೆಳಗಾವಿಯಲ್ಲಿ 5 ಸ್ಥಳಗಳಲ್ಲಿ ಈ ಮಟ್ಟದ ಉಷ್ಣತೆ ಕಂಡು ಬಂದಿದೆ. ಕೊಪ್ಪಳದಲ್ಲಿ 2 ಸ್ಥಳಗಳು ಹಾಗೂ ಬಳ್ಳಾರಿ, ಚಿತ್ರದುರ್ಗ, ಗದಗ ಮತ್ತು ವಿಜಯನಗರ ಜಿಲ್ಲೆಗಳಲ್ಲಿ ತಲಾ ಒಂದು ಸ್ಥಳದಲ್ಲಿ ಗರಿಷ್ಠ ತಾಪಮಾನ 42 ಡಿಗ್ರಿ ಸೆಲ್ಸಿಯಸ್ ಮೀರಿದೆ. ಹಿಂದಿನ ದಿನದೊಂದಿಗೆ ಹೋಲಿಸಿದರೆ, ಉತ್ತರ ಒಳನಾಡು ಕರ್ನಾಟಕದ ಕೆಲವೆಡೆ 1.6 ಡಿಗ್ರಿ ಸೆಲ್ಸಿಯಸ್‌ನಿಂದ 3.0 ಡಿಗ್ರಿ ಸೆಲ್ಸಿಯಸ್ ತನಕ ಹೆಚ್ಚಿದ ತಾಪಮಾನ ಕಂಡುಬಂದಿದ್ದು, ದಕ್ಷಿಣ ಒಳನಾಡು ಪ್ರದೇಶಗಳಲ್ಲಿಯೂ ಉಷ್ಣತೆ ಏರಿಕೆಯಾಗಿದೆ.

ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆಯ ಪ್ರಕಾರ, ಮುಂದಿನ 5 ದಿನಗಳಲ್ಲಿ ರಾಜ್ಯದಾದ್ಯಂತ ಗರಿಷ್ಠ ತಾಪಮಾನ ಮತ್ತಷ್ಟು ಏರಿಕೆಯಾಗುವ ಸಾಧ್ಯತೆ ಇದೆ. ಉತ್ತರ ಒಳನಾಡು ಕರ್ನಾಟಕದಲ್ಲಿ ಮುಂದಿನ 3 ದಿನಗಳ ಕಾಲ ಹೀಟ್ ವೇವ್ ಪರಿಸ್ಥಿತಿ ಮುಂದುವರಿಯುವ ಸಾಧ್ಯತೆ ಇದೆ. ಕರಾವಳಿ ಕರ್ನಾಟಕದಲ್ಲಿ ಮುಂದಿನ 5 ದಿನಗಳವರೆಗೆ ಉಷ್ಣ ವಾತಾವರಣ ಮುಂದುವರಿಯಲಿದೆ.

ತೀವ್ರ ಬಿಸಿಲಿನ ಹಿನ್ನೆಲೆ, ಸಾರ್ವಜನಿಕರು ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳುವಂತೆ ಹವಾಮಾನ ಇಲಾಖೆ ಸೂಚಿಸಿದೆ.

ಇಥೆನಾಲ್ ತುಂಬಿದ್ದ ಟ್ಯಾಂಕರ್ ಲಾರಿ ಪಲ್ಟಿ

ಆತಂಕ ಸೃಷ್ಟಿಸಿದ ಬೆಂಕಿಯ ಜ್ವಾಲೆ

ಅಂಕೋಲಾ: ಇಥೆನಾಲ್ ರಾಸಾಯನಿಕ ತುಂಬಿದ್ದ ಟ್ಯಾಂಕರ್ ಲಾರಿ ಪಲ್ಟಿಯಾಗಿ ಬೆಂಕಿ ಹೊತ್ತಿಕೊಂಡು ಸುಟ್ಟು ಕರಕಲಾದ ಘಟನೆ ತಾಲೂಕಿನ ಕಂಚಿನಬಾಗಿಲ ಬಳಿ ರಾಷ್ಟ್ರೀಯ ಹೆದ್ದಾರಿಯ 52ರಲ್ಲಿ ಗುರುವಾರ ಮಧ್ಯಾಹ್ನ ಸಂಭವಿಸಿದ್ದು, ಅದೃಷ್ಟವಶಾತ್ ಪಾರಾದ ಲಾರಿ ಚಾಲಕನಿಗೆ ಸುಟ್ಟ ಗಾಯಗಳಾಗಿದ್ದು, ತಾಲೂಕು ಆಸ್ಪತ್ರೆಯಲ್ಲಿ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ.

ಯಲ್ಲಾಪುರ ಕಡೆಯಿಂದ ಅಂಕೋಲಾ ಕಡೆ ಬರುತ್ತಿದ್ದ ಟ್ಯಾಂಕರ್ ಲಾರಿ ಪಲ್ಟಿಯಾಗುತ್ತಿದ್ದಂತೆ ಬೆಂಕಿ ಹೊತ್ತಿಕೊಂಡು ಒಂದೇ ಸಮನೆ ಉರಿಯತೊಡಗಿದ್ದು, ಬೆಂಕಿಯ ಜ್ವಾಲೆಯಿಂದಾಗಿ ಮುಗಿಲೆತ್ತರಕ್ಕೆ ಹೊಗೆ ವ್ಯಾಪಿಸಿಕೊಂಡಿದೆ. ಬೆಂಕಿಗೆ ಸಿಲುಕಿದ ಲಾರಿಯ ಟಯರ್‌ಗಳು ಭಾರೀ ಸದ್ದಿನೊಂದಿಗೆ ಸ್ಫೋಟದಂತೆ ಸಿಡಿದಿದ್ದು ಭಯದ ವಾತಾವರಣ ಸೃಷ್ಟಿಸಿ ಸುತ್ತ ಮುತ್ತಲಿನ ಪರಿಸರದ ಕೆಲವು ಗಿಡಮರಗಳು ಬೆಂಕಿಯ ತಾಪದಿಂದ ಸುಟ್ಟ ಹೋಗಿವೆ.



ಬೆಂಕಿಯ ರುದ್ರ ನರ್ತನ ಕಂಡ ರಾಷ್ಟ್ರೀಯ ಹೆದ್ದಾರಿಯಲ್ಲಿ ಸಂಚರಿಸುವ ವಾಹನಗಳು ಮರಳಿ ದೂರಕ್ಕೆ ಹೋಗಿ ನಿಂತಿರುವುದು ಕಂಡು ಬಂದಿದ್ದು, ವಿಷಯ ತಿಳಿಯುತ್ತಿದ್ದಂತೆ ಅಗ್ನಿಶಾಮಕ ದಳ, ರಾಷ್ಟ್ರೀಯ ಹೆದ್ದಾರಿ ಗಸ್ತು ಪೊಲೀಸರು ಸ್ಥಳಕ್ಕೆ ಆಗಮಿಸಿ ಗಂಟೆಗಟ್ಟಲೆ ಪ್ರಯತ್ನ ನಡೆಸಿದರೂ ಬೆಂಕಿಯ ತೀವ್ರತೆಯನ್ನು ನಿಯಂತ್ರಣಕ್ಕೆ ತರಲು ಸಾಧ್ಯವಾಗಿಲ್ಲ, ರಾಷ್ಟ್ರೀಯ ಹೆದ್ದಾರಿ 52 ಅಂಕೋಲಾ ಹುಬ್ಬಳ್ಳಿ ಮಾರ್ಗದಲ್ಲಿ ವಾಹನಗಳ ಸಂಚಾರ ತಾತ್ಕಾಲಿಕ ಸ್ಥಗಿತಗೊಂಡಿದ್ದು ವಾಹನಗಳು ಹೆದ್ದಾರಿಯಲ್ಲಿ ಸಾಲುಗಟ್ಟಿ ನಿಂತಿದ್ದು ಕಂಡು ಬಂದಿದೆ.ಡಿ.ವೈ.ಎಸ್.ಪಿ ಗಿರೀಶ, ಅಂಕೋಲಾ ತಹಶೀಲ್ದಾರ್ ನಿಶ್ಚಲ ನರೋನ್ಹಾ, ತಾಪಂ ಕಾರ್ಯನಿರ್ವಹಣಾಧಿಕಾರಿ ರಾಮು ಗುನಗಿ, ಪಿ.ಎಸ್.ಐ ಗುರುನಾಥ್, ಪೊಲೀಸ್ ಇಲಾಖೆ,ಅರಣ್ಯ ಇಲಾಖೆ ಸಿಬ್ಬಂದಿಗಳು ಸ್ಥಳಕ್ಕೆ ಭೇಟಿ ನೀಡಿದ್ದು ಕಾರ್ಯಾಚರಣೆ ಮುಂದುವರಿದಿದೆ.

ಮತ್ತೊಬ್ಬ ಇರುವ ಶಂಕೆ

ಅಂಕೋಲಾ: ತಾಲೂಕಿನ ಕಂಚಿನಬಾಗಿಲ ಬಳಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಪಲ್ಟಿಯಾಗಿ ಸಂಪೂರ್ಣ ಸುಟ್ಟು ಹೋಗಿರುವ ಎಥೆನಾಲ್ ರಾಸಾಯನಿಕ ತುಂಬಿದ್ದ ಟ್ಯಾಂಕರ್ ಲಾರಿಯಲ್ಲಿ ಇನ್ನೊಬ್ಬ ವ್ಯಕ್ತಿ ಇದ್ದ ಎನ್ನುವ ಮಾತು ಕೇಳಿ ಬಂದ ಕಾರಣ ಪೊಲೀಸ್ ಇಲಾಖೆಯಿಂದ ಪರಿಶೀಲನೆ ನಡೆಸಲಾಗುತ್ತಿದೆ. ಅಪಘಾತದಲ್ಲಿ ಸುಟ್ಟ ಗಾಯಗಳೊಂದಿಗೆ ತಾಲೂಕು ಆಸ್ಪತ್ರೆಗೆ ದಾಖಲಾಗಿರುವ ಲಾರಿ ಚಾಲಕ ಸುಟ್ಟ ಗಾಯದಉರಿಯಿಂದ ಚೀರಾಡುತ್ತಿದ್ದು ಒಮ್ಮೆ ತಾನು ಒಬ್ಬನೇ ಲಾರಿಯಲ್ಲಿ ಇದ್ದಿರುವುದಾಗಿ ಹೇಳಿದರೆ ಮತ್ತೊಮ್ಮೆ ಇನ್ನೋರ್ವ ವ್ಯಕ್ತಿ ಇದ್ದ ಎಂದು ಹೇಳಿಕೆ ನೀಡುತ್ತಿರುವುದು ಕುತೂಹಲಕ್ಕೆ ಕಾರಣವಾಗಿದ್ದು ಬೆಂಕಿಯಲ್ಲಿ ಯಾರಾದರೂ ಸುಟ್ಟು ಮೃತ ಪಟ್ಟಿರಬಹುದೇ ಎನ್ನುವ ಅನುಮಾನಗಳಿಗೆ ದಾರಿ ಮಾಡಿಕೊಟ್ಟಿದೆ.ಡಿ.ವೈ.ಎಸ್.ಪಿ ಗಿರೀಶ ನೇತೃತ್ವದಲ್ಲಿ ಅಂಕೋಲಾ ಪೊಲೀಸರು ರಾತ್ರಿ ಮತ್ತೊಮ್ಮೆ ಘಟನಾ ಸ್ಥಳಕ್ಕೆ ದಾವಿಸಿದ್ದು ಲಾರಿಯಲ್ಲಿ ಯಾರಾದರೂ ಇದ್ದು ಮೃತ ಪಟ್ಟಿರುವರೋ ಎನ್ನುವ ಕುರಿತು ಪರಿಶೀಲನೆ ನಡೆಸುತ್ತಿದ್ದಾರೆ.ಲಾರಿ ಬೆಂಕಿಗಾಹುತಿಯಾದ ಸ್ಥಳದಲ್ಲಿ ಎಥನಾಲ್ ರಾಸಾಯನಿಕ ರಸ್ತೆ ಬದಿಯಲ್ಲಿ ಉರಿಯುತ್ತ ಹರಿಯುತ್ತಿರುವುದು ಘಟನೆ ಸಂಭವಿಸಿ ಹಲವು ಗಂಟೆಗಳು ಕಳೆದರೂ ಕಂಡು ಬರುತ್ತಿದ್ದು ಘಟನಾ ಸ್ಥಳದ ಪರಿಶೀಲನೆಗೆ ಸವಾಲಾಗಿ ಪರಿಣಮಿಸಿದೆ.

ಹುಬ್ಬಳ್ಳಿ-ಹೈದ್ರಾಬಾದ್ ವಿಮಾನ ಸೇವೆ ಬಗ್ಗೆ ಚರ್ಚೆ

ಹುಬ್ಬಳ್ಳಿ: ಫ್ಲೈ 91ಸಂಸ್ಥೆಯು ಪ್ರಾರಂಭಿಸುತ್ತಿರುವ ಹುಬ್ಬಳ್ಳಿ-ಹೈದ್ರಾಬಾದ್ ನಗರವನ್ನು ಸಂಪರ್ಕಿಸುವ ನೂತನ ವಿಮಾನ ಸೇವೆಯ ಪ್ರಯೋಜನಗಳು ಹಾಗೂ ಮುಂದಿನ ಅಭಿವೃದ್ಧಿ ಸಾಧ್ಯತೆಗಳ ಕುರಿತು ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆಯಲ್ಲಿ ಮಹತ್ವದ ಚರ್ಚೆ ನಡೆಯಿತು.

ಸಭೆಯಲ್ಲಿ ಏ.17ರಿಂದ ರಾತ್ರಿ 8.35ಕ್ಕೆ ಹುಬ್ಬಳ್ಳಿಯಿಂದ ಹೊರಟು ರಾತ್ರಿ 9.55ಕ್ಕೆ ಹೈದ್ರಾಬಾದ್ ತಲಪುತ್ತದೆ. ಹೈದರಾಬಾದದಿಂದ ಮಧ್ಯಾಹ್ನ 3ಕ್ಕೆ ಹೊರಟು ಸಂಜೆ 4.30ಕ್ಕೆ ಹುಬ್ಬಳ್ಳಿಯನ್ನು ತಲುಪುತ್ತದೆ. ಈ ದೈನಂದಿನ ವಿಮಾನ ಸಂಚಾರ ಆರಂಭವಾಗುತ್ತಿರುವುದನ್ನು ಸ್ವಾಗತಿಸಲಾಯಿತು. ಈ ಹೊಸ ವಿಮಾನ ಸೇವೆಯು ಉತ್ತರ ಕರ್ನಾಟಕದ ಕೈಗಾರಿಕೆ, ವ್ಯಾಪಾರ, ಶಿಕ್ಷಣ ಮತ್ತು ಪ್ರವಾಸೋದ್ಯಮ ಕ್ಷೇತ್ರಗಳಿಗೆ ಹೆಚ್ಚಿನ ಉತ್ತೇಜನ ನೀಡಲಿದೆ ಎಂದು ಸದಸ್ಯರು ಅಭಿಪ್ರಾಯಪಟ್ಟರು.



ಹುಬ್ಬಳ್ಳಿ-ಧಾರವಾಡ ಪ್ರದೇಶವು ವೇಗವಾಗಿ ಬೆಳೆಯುತ್ತಿರುವ ವಾಣಿಜ್ಯ ಕೇಂದ್ರವಾಗಿದ್ದು, ಇಂತಹ ವಿಮಾನ ಸೇವೆಗಳು ಹೂಡಿಕೆದಾರರನ್ನು ಆಕರ್ಷಿಸಲು ಹಾಗೂ ಸ್ಥಳೀಯ ಉದ್ಯಮಗಳಿಗೆ ಹೊಸ ಅವಕಾಶಗಳನ್ನು ಸೃಷ್ಟಿಸಲು ಸಹಕಾರಿ ಆಗಲಿದೆ ಎಂದು ಗೌರವ ಕಾರ್ಯದರ್ಶಿ ಉದಯ ರೇವಣಕರ ಅವರು ತಿಳಿಸಿದರು.

ಸಭೆಯಲ್ಲಿ ಸಂಸ್ಥೆಯ ಉಪಾಧ್ಯಕ್ಷ ಪ್ರವೀಣ ಅಗಡಿ, ಫ್ಲೈ 91 ಸಂಸ್ಥೆಯ ಮುಖ್ಯ ಆದಾಯ ಅಧಿಕಾರಿ ಅಶುತೋಷ ಚಿಟನಿಸ್, ಸೇಲ್ಸ ಅಸಿಸ್ಟಂಟ್ ಮ್ಯಾನೇಜರ್ ಡೆನ್‌ಜಿಲ್ ಡಿಸೋಜಾ ಹಾಗೂ ಸದಸ್ಯ ಡಿ.ಕೆ. ಶ್ರೀನಾಥ ಉಪಸ್ಥಿತರಿದ್ದರು.



ಧಾರವಾಡ: ಜನತಾ ಶಿಕ್ಷಣ ಸಮಿತಿ ಕಾರ್ಯದರ್ಶಿ ಡಾ.ಅಜಿತ ಪ್ರಸಾದ ಅವರಿಗೆ 75 ವರ್ಷ ತುಂಬಿದ ಹಿನ್ನೆಲೆ ಶಿಕ್ಷಕರಾದ ಡಾ.ಆರ್.ವಿ.ಚಿಟಗುಪ್ಪಿ, ವಾಣಿಶ್ರೀ ಕುಲಕರ್ಣಿ ಮತ್ತು ಅರ್ಚನಾ ಪಾಟೀಲ, ಶ್ರೀರಕ್ಷಾ ಶುಭ ಕೋರಿದ ಕ್ಷಣ.

ಕಿರುಸುದ್ದಿ

ಏ.21ಕ್ಕೆ ಮಹಿಳಾ ವಿವಿ 17ನೇ ಘಟಿಕೋತ್ಸವ

ವಿಜಯಪುರ: ನಗರದ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ಜ್ಞಾನಶಕ್ತಿ ಕ್ಯಾಂಪಸ್‌ನಲ್ಲಿ ವಿವಿಯ 17ನೇ ವಾರ್ಷಿಕ ಘಟಿಕೋತ್ಸವ ಏ.21ರಂದು ಬೆಳಗ್ಗೆ 11.30ಗಂಟೆಗೆ ಹಮ್ಮಿಕೊಳ್ಳಲಾಗಿದೆ.

ರಾಜ್ಯಪಾಲರು ಹಾಗೂ ವಿಶ್ವವಿದ್ಯಾನಿಲಯದ ಕುಲಾಧಿಪತಿ ಥಾವರ್ ಚಂದ್ ಗೆಹ್ಲೋಟ್, ಉನ್ನತ ಶಿಕ್ಷಣ ಸಚಿವರು ಹಾಗೂ ವಿಶ್ವವಿದ್ಯಾನಿಲಯದ ಸಮಕುಲಪತಿ ಡಾ.ಎಂ.ಸಿ.ಸುಧಾಕರ್ ಪಾಲ್ಗೊಳ್ಳಲಿದ್ದು, ಅತಿಥಿಗಳಾಗಿ ಮುಂಬೈನ (ಎಸ್.ಎನ್.ಡಿಟಿ) ಮಹಿಳಾ ವಿಶ್ವವಿದ್ಯಾಲಯದ ಕುಲಪತಿ ನಾಥಿಬಾಯಿ ದಾಮೋದರ್ ಠಾಕರ್ಸಿ ಹಾಗೂ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ವಿಜಯಾ ಕೋರಿಶೆಟ್ಟಿ ಭಾಗವಹಿಸುವವರು ಎಂದು ತಿಳಿಸಿದ್ದಾರೆ.

ಸಿಎನ್‌ಜಿ ಸಿಲಿಂಡರ್‌ಗಳಲ್ಲಿ ಸೋರಿಕೆ: ಕೆಲಕಾಲ ಆತಂಕ

ಗದಗ: ಅಡವಿಸೋಮಾಪುರದಿಂದ ಹುಲಕೋಟಿಗೆ ಸಿಎನ್‌ಜಿ ಸಿಲಿಂಡರ್‌ಗಳನ್ನು ಸಾಗಿಸುತ್ತಿದ್ದ ಟ್ರಕ್‌ನಲ್ಲಿ ಸೋರಿಕೆ ಕಾಣಿಸಿಕೊಂಡ ಪರಿಣಾಮ ಕೆಲಕಾಲ ಆತಂಕದ ವಾತಾವರಣ ನಿರ್ಮಾಣವಾಗಿತ್ತು. ನಗರದ ಕಳಸಾಪುರ ರಸ್ತೆ ಹಾಗೂ ಕೆಎಸ್‌ಆರ್‌ಟಿಸಿ ಕಾಲೋನಿ ಎದುರಿಗೆ ಇರುವ ಹುಬ್ಬಳ್ಳಿ-ಕೊಪ್ಪಳ ರಸ್ತೆಯಲ್ಲಿ ಬುಧವಾರ ಮಧ್ಯಾಹ್ನ ಈ ಘಟನೆ ನಡೆದಿದೆ.

ಟ್ರಕ್‌ನಲ್ಲಿ 60 ಸಿಎನ್‌ಜಿ ಸಿಲಿಂಡರ್‌ಗಳಿದ್ದವು. ತಾಂತ್ರಿಕ ಕಾರಣದಿಂದ ಸೋರಿಕೆ ಕಾಣಿಸಿಕೊಂಡಿದೆ ಎಂಬುದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ. ಘಟನೆಯ ಬಗ್ಗೆ ಮಾಹಿತಿ ಪಡೆದ ಅಗ್ನಿಶಾಮಕ ದಳದ ಸಿಬ್ಬಂದಿ ತಕ್ಷಣ ಸ್ಥಳಕ್ಕೆ ಬಂದು ಪರಿಸ್ಥಿತಿಯನ್ನು ನಿಯಂತ್ರಣಕ್ಕೆ ತಂದರು. ಘಟನೆದಿಂದ ಯಾವುದೇ ಹಾನಿ ಸಂಭವಿಸಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬೇಸಿಗೆ ಬಿಸಿಲು ಹೆಚ್ಚಿರುವುದು ದರಿಂದ ಬೆಂಕಿ ವಾಹಕಗಳನ್ನು ಸುರಕ್ಷತೆ ಯಿಂದ ಸಾಗಾಟ ಮಾಡಬೇಕು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕರ್ನಾಟಕ ಸ್ವಯಂ ಗಣತಿ ಅಭಿಯಾನ

ಪ್ರಗತಿಯಲ್ಲಿ ಬಳ್ಳಾರಿ ಪ್ರಥಮ

ಬಳ್ಳಾರಿ: ಕರ್ನಾಟಕ ರಾಜ್ಯದಲ್ಲಿ ನಡೆಯುತ್ತಿರುವ 2027ರ ಡಿಜಿಟಲ್ ಜನಗಣತಿ ಅಂಗವಾಗಿ ಸ್ವಯಂ ಗಣತಿ ಪ್ರಕ್ರಿಯೆ ಏ.1ರಿಂದ ಆರಂಭವಾಗಿ ಆಶಾದಾಯಕವಾಗಿ ಮುನ್ನಡೆದು, ಕೊನೆಯ ದಿನವಾದ (ಬುಧವಾರ) ಏ.15ರ ಸಂಜೆ 6 ಗಂಟೆಯ ಅಂಕಿಅಂಶಗಳ ಪ್ರಕಾರ ರಾಜ್ಯದ ಒಟ್ಟಾರೆ ಪ್ರಗತಿ ಶೇ.4.80ರಷ್ಟಾಗಿದೆ.

ರಾಜ್ಯದ ಒಟ್ಟು ಅಂದಾಜು 1.68 ಕೋಟಿ ಮನೆಗಳ ಪೈಕಿ ಈವರೆಗೆ 8,08,621 ಕುಟುಂಬಗಳು ಯಶಸ್ವಿಯಾಗಿ ತಮ್ಮ ವಿವರಗಳನ್ನು ದಾಖಲಿಸಿವೆ.

ರಾಜ್ಯದಲ್ಲಿ ಒಟ್ಟು 1,68,57,713 ನಿರೀಕ್ಷಿತ ಕುಟುಂಬಗಳಲ್ಲಿ 8,08,621 ಮನೆಗಳು ಸ್ವಯಂ ಗಣತಿ ಪ್ರಕ್ರಿಯೆಯಲ್ಲಿ ಭಾಗವಹಿಸಿ ಮಾಹಿತಿ ನೋಂದಾಯಿಸಿದ್ದು, ಏ.15ರ ಸಂಜೆ 6ರ ಅಂತ್ಯದವರೆಗೆ ಶೇ.4.80ರಷ್ಟು ಪ್ರಗತಿಯಾಗಿದೆ. ಜಿಲ್ಲಾವಾರು ಪಟ್ಟಿಯಲ್ಲಿ ಬಳ್ಳಾರಿ ಜಿಲ್ಲೆಯು ಮುಂಚೂಣಿಯಲ್ಲಿದ್ದರೆ, ಅತಿ ಹೆಚ್ಚು ಜನಸಂಖ್ಯೆ ಹೊಂದಿರುವ ಬೆಂಗಳೂರು ನಗರ ಜಿಲ್ಲೆಯು ಅತ್ಯಂತ ಕಡಿಮೆ ಪ್ರಗತಿ ಸಾಧಿಸಿದೆ.

ಬಳ್ಳಾರಿ ಜಿಲ್ಲೆಯು ಶೇ.18.33ರಷ್ಟು ಪ್ರಗತಿ ಸಾಧಿಸುವ ಮೂಲಕ ರಾಜ್ಯದಲ್ಲೇ ಮೊದಲ ಸ್ಥಾನದಲ್ಲಿದೆ. ಜಿಲ್ಲೆಯಲ್ಲಿ ನಿರೀಕ್ಷಿತ 2,98,536 ಕುಟುಂಬಗಳ ಪೈಕಿ ಈಗಾಗಲೇ 54,735 ಕುಟುಂಬಗಳು ಗಣತಿ ಪ್ರಕ್ರಿಯೆ ಪೂರ್ಣಗೊಳಿಸಿವೆ. ದಕ್ಷಿಣ ಕನ್ನಡ ಜಿಲ್ಲೆಯು ಶೇ.16.78ರಷ್ಟು ಸಾಧನೆಯೊಂದಿಗೆ ಎರಡನೇ ಸ್ಥಾನದಲ್ಲಿದ್ದರೆ, ಬಾಗಲಕೋಟೆ ಶೇ.16.08ರೊಂದಿಗೆ ಮೂರನೇ ಸ್ಥಾನದಲ್ಲಿದೆ. ಕೊನೆಯಲ್ಲಿ ಕೋಲಾರ (ಶೇ.1.12), ಬೆಂಗಳೂರು ನಗರ (ಶೇ.1.42) ಮತ್ತು ಬೆಳಗಾವಿ (ಶೇ.1.57) ಜಿಲ್ಲೆಗಳಿವೆ.

ಜಿಲ್ಲಾವಾರು ಸಾಧನೆ

- ಬಳ್ಳಾರಿ: ಶೇ.18.33
- ದಕ್ಷಿಣ ಕನ್ನಡ: ಶೇ.16.78
- ಬಾಗಲಕೋಟೆ: ಶೇ.16.08
- ವಿಜಯನಗರ: ಶೇ 11.38
- ತುಮಕೂರು: ಶೇ.10.48

ಬೆಂಗಳೂರು ನಗರ ಜಿಲ್ಲೆಯಲ್ಲಿ ಅತಿ ಹೆಚ್ಚು ಅಂದರೆ 33,51,383 ಕುಟುಂಬಗಳಿದ್ದು ಈವರೆಗೆ ಕೇವಲ 47,686 ಕುಟುಂಬಗಳು ಮಾತ್ರ ಗಣತಿಯಲ್ಲಿ ಪಾಲ್ಗೊಂಡಿವೆ. ಬೆಂಗಳೂರು ದಕ್ಷಿಣ (ಶೇ.5.23) ಮತ್ತು ಬೆಂಗಳೂರು ಗ್ರಾಮಾಂತರ (ಶೇ.2.24) ಜಿಲ್ಲೆಗಳ ಪ್ರಗತಿಯೂ ಸಾಧಾರಣ ಮಟ್ಟದಲ್ಲಿದೆ. ನಿಗದಿತ ಸಮಯದೊಳಗೆ ಪ್ರಕ್ರಿಯೆ ಪೂರ್ಣಗೊಳಿಸಲು ಸರ್ಕಾರವು ಈ ಡಿಜಿಟಲ್ ಸ್ವಯಂ ಎಣಿಕೆ ವಿಧಾನದ ಮೂಲಕ ಸಾರ್ವಜನಿಕರಿಗೆ ಸರಳ ಮತ್ತು ವೇಗವಾಗಿ ಮಾಹಿತಿ ನೀಡಲು ಅವಕಾಶ ಕಲ್ಪಿಸಿದ್ದು, ಬಳ್ಳಾರಿ ಜಿಲ್ಲೆಯ ಜನರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿರುವುದಕ್ಕೆ ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್.ಕೆ ಅವರು ಹರ್ಷ ವ್ಯಕ್ತಪಡಿಸಿದ್ದಾರೆ.

ಏಪ್ರಿಲ್16 ರಿಂದ ಮೇ 15ರವರೆಗೆ ಜನಗಣತಿದಾರರು ಮನೆ-ಮನೆಗೆ ಭೇಟಿ ನೀಡಿ ಮನೆಗಳಪಟ್ಟಿ ಮತ್ತು ಜನಗಣತಿ ಕಾರ್ಯವನ್ನು ಕೈಗೊಳ್ಳಲಿದ್ದಾರೆ. ಸಾರ್ವಜನಿಕರು ನಿಖರ ಮಾಹಿತಿ ನೀಡುವ ಮೂಲಕ ಜನಗಣತಿ ಕಾರ್ಯಕ್ಕೆ ಸಹಕರಿಸಬೇಕು ಎಂದು ಅವರು ವಿನಂತಿಸಿದ್ದಾರೆ.

ಮೀಸಲಾತಿ ಕಾಯ್ದೆ ಸಾಕಾರಕ್ಕೆ ಸಹಕಾರ ಅತ್ಯಗತ್ಯ

ರಾಯಚೂರು: ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಲೋಕಸಭೆ ಹಾಗೂ ರಾಜ್ಯ ಶಾಸಕಾಂಗ ಸಭೆಗಳಲ್ಲಿ ಮೂರನೇ ಒಂದು ಭಾಗದಷ್ಟು ಮಹಿಳೆಯರಿಗೆ ಮೀಸಲಾತಿ ನೀಡುವುದಕ್ಕೆ ಜಾರಿಗೆ ತರುತ್ತಿವ ಕಾನೂನು ಸಾಕಾರವಾಗುವುದಕ್ಕೆ ದೇಶದ ಪ್ರತಿಯೊಬ್ಬರ ಬೆಂಬಲ, ಸಹಕಾರ ಅತ್ಯಗತ್ಯವಾಗಿದೆ ಎಂದು ಬಿಜೆಪಿ ಮಹಿಳಾ ಮೋರ್ಚಾದ ರಾಜ್ಯ ಕಾರ್ಯದರ್ಶಿ ಸುಗುಣ ಹೇಳಿದರು.

ಗುರುವಾರ ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಈ ಮಹಿಳಾ ಮೀಸಲಾತಿ 2023ರಲ್ಲಿನೇ ಚರ್ಚೆ ಆಗಿದ್ದರೂ ಅದನ್ನು ಜಾರಿಗೆ ತರುವುದಕ್ಕೆ ಸಾಧ್ಯವಾಗಿರಲಿಲ್ಲ. ಆದರೆ, ಈ ಮೀಸಲಾತಿಯನ್ನು ನೀಡಲೇಬೇಕೆಂಬ ಸಂಕಲ್ಪದಿಂದ ಪ್ರಧಾನಿ ನರೇಂದ್ರ ಮೋದಿಯವರ ಸರ್ಕಾರ ಮುಂದಾಗಿದೆ. ಆದರೆ, ಇದಕ್ಕ ಈಗಾಗಲೇ ಕೆಲ ಪಕ್ಷಗಳ ನಾಯಕರು ಅಪಸ್ವರ ಎತ್ತುತ್ತಿದ್ದಾರೆ ಇದು ಇಂದು ಅಪ್ರಸ್ತುತ ಎನ್ನಿಸುತ್ತದೆ ಎಂದರು.



ಮಹಿಳಾ ಸಬಲೀಕರಣ, ಮಹಿಳಾ ಸಮಾನತೆ ಎಂದು ಹೇಳುವ ಪಕ್ಷಗಳು ಮೋದಿ ಸರ್ಕಾರವೀಗ ಇದನ್ನು ಸಕಾರಗೊಳಿಸುವುದಕ್ಕೆ ಬಿಡುತ್ತಿಲ್ಲ ಇದು ಮಹಿಳೆಯರ ಸಬಲೀಕರಣದ ವಿರೋಧಿ ನೀತಿ ಎಂದರೆ ತಪ್ಪಾಗಲಾರದು ಎಂದರು.

ನಾರಿ ಶಕ್ತಿ ವಂದನ ಕಾಯ್ದೆ-2023 ಜಾರಿಯಾದರೆ ಹಳ್ಳಿಯಿಂದ ದಿಲ್ಲಿಯವರೆಗಿನ ಚುನಾಯಿತ ಸಂಸ್ಥೆಗಳಲ್ಲಿ ಕೈಗೊಳ್ಳುವ ಯೋಜನೆಗಳು ಪರಿಣಾಮಕಾರಿಯಾಗಿ ಜಾರಿಯಾಗುವುದಕ್ಕೆ ಮಹತ್ವದ ಪಾತ್ರವಹಿಸುದಕ್ಕೆ ಸಾಧ್ಯವಾಗುತ್ತದೆ. ಮಹಿಳಾ ಸಬಲೀಕರಣಕ್ಕೆ ಪಕ್ಷಬೇಧ ಮರೆತು ಪ್ರತಿಯೊಬ್ಬರೂ ಸಹಕಾರ ನೀಡಬೇಕು ಎಂದು ಹೇಳಿದರು.

ಈ ಕಾಯ್ದೆ ಜಾರಿಗೆ ಬರುವಂತೆ ಆಗ್ರಹಿಸಿ ಸಹಿ ಸಂಗ್ರಹ, ಮಿಸ್ ಕಾಲ್ ಅಭಿಯಾನ, ವಾಕ್‌ಥಾನ್ ಸೇರಿದಂತೆ ಅನೇಕ ಕಾರ್ಯಕ್ರಮಗಳನ್ನು ಬಿಜೆಪಿ ಪಕ್ಷದ ಮಹಿಳಾ ಮೋರ್ಚಾದಿಂದ ಆಯೋಜನೆ ಮಾಡಲಾಗಿದೆ. ಇನ್ನು ಮಾಡಲಾಗುವುದು ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಮಹಿಳಾ ಮೋರ್ಚಾದ ಜಿಲ್ಲಾ ಘಟಕದ ಸುಮಾ ಗಸ್ತಿ, ಅಶ್ವಿನಿ, ಆದಿಲಕ್ಷ್ಮೀ ಸೇರಿದಂತೆ ಇತರರಿದ್ದರು.

ವಿಪರೀತ ತಾಪಮಾನ: ಕಲ್ಲಂಗಡಿ, ಎಳನೀರಿಗೆ ಮೊರೆ

ಕಲಬುರಗಿ: ಜಿಲ್ಲೆಯಲ್ಲಿ ದಿನದಿಂದ ದಿನಕ್ಕೆ ಏರುತ್ತಿರುವ ತಾಪಮಾನ ಜನಜೀವನವನ್ನು ಕಂಗೆಡಿಸಿದ್ದು, ವಿಪರೀತ ಬಿಸಿಲಿನಿಂದ ತಪ್ಪಿಸಿಕೊಳ್ಳಲು ಜನರು ಕಲ್ಲಂಗಡಿ ಹಾಗೂ ಎಳನೀರಿಗೆ ಮೊರೆ ಹೋಗುತ್ತಿದ್ದಾರೆ.

ನಗರದ ವಿವಿಧ ಭಾಗಗಳಲ್ಲಿ ತಂಪು ನೀಡುವ ಈ ನೈಸರ್ಗಿಕ ಪಾನೀಯಗಳಿಗೆ ಭಾರೀ ಬೇಡಿಕೆ ವ್ಯಕ್ತವಾಗಿದ್ದು, ಪ್ರಮುಖ ರಸ್ತೆಗಳು, ಮಾರುಕಟ್ಟೆಗಳು ಹಾಗೂ ತಾತ್ಕಾಲಿಕ ಅಂಗಡಿಗಳಲ್ಲಿ ಮಾರಾಟ ಜೋರಾಗಿದೆ. ವಿಶೇಷವಾಗಿ ಮಧ್ಯಾಹ್ನ ಹಾಗೂ ಸಂಜೆ ವೇಳೆಯಲ್ಲಿ ಗ್ರಾಹಕರ ದಟ್ಟಣೆ ಹೆಚ್ಚಾಗಿದೆ.

ಬಿಸಿಲಿನ ತೀವ್ರತೆಯಿಂದ ದೇಹದ ಉಷ್ಣತೆ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ದಾಹ ನೀಗಿಸಲು ಮತ್ತು ತಂಪು ಪಡೆಯಲು ನೀರಿನ ಅಂಶ ಹೆಚ್ಚಿರುವ ಕಲ್ಲಂಗಡಿ ಮತ್ತು ಎಳನೀರು ಜನರಿಗೆ ಮೊದಲ ಆಯ್ಕೆಯಾಗಿವೆ.

ಬೇಸಿಗೆಯ ಉಷ್ಣತೆಯ ನಡುವೆ ಈ ಹಣ್ಣುಗಳು ಹಾಗೂ ಪಾನೀಯಗಳ ಬೇಡಿಕೆ ಸಹಜವಾಗಿ ಹೆಚ್ಚುತ್ತಿದ್ದು, ಇತ್ತೀಚಿನ ದಿನಗಳಲ್ಲಿ ಮಾರಾಟದಲ್ಲಿ ಗಣನೀಯ ಏರಿಕೆ ಕಂಡುಬಂದಿದೆ ಎಂದು ವ್ಯಾಪಾರಿಗಳು ತಿಳಿಸಿದ್ದಾರೆ.



ಹೋರಾಟಗಾರ ಕಾಂತಕುಮಾರ್ ರಾಜ್ಯ ಸರ್ಕಾರಕ್ಕೆ ಎಚ್ಚರಿಕೆ

ನೇಮಕಾತಿಗೆ ಜೈಲ್ ಬರೋ ಚಳವಳಿ

ಧಾರವಾಡ: ರಾಜ್ಯದ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳ ಭರ್ತಿಗಾಗಿ ಜೈಲ್ ಬರೋ ಚಳವಳಿ ನಡೆಸುವುದಾಗಿ ಉದ್ಯೋಗಾಂಕ್ಷಿಗಳ ಹೋರಾಟಗಾರ ಮುಖಂಡ ಕಾಂತಕುಮಾರ್ ಸರ್ಕಾರಕ್ಕೆ ಎಚ್ಚರಿಕೆ ನೀಡಿದ್ದಾರೆ.



ಮಾಧ್ಯಮಗಳಿಗೆ ಹೇಳಿಕೆ ನೀಡಿದ ಅವರು, ಮೂರು ವರ್ಷದಿಂದ ರಾಜ್ಯ ಸರ್ಕಾರ ನೇಮಕಾತಿ ಮಾಡಿಲ್ಲ. ಮನನೊಂದ ಕೆಲ ವಿದ್ಯಾರ್ಥಿಗಳು ದಯಾಮರಣಕ್ಕೆ ಅರ್ಜಿ ಸಲ್ಲಿಸುವ ಸ್ಥಿತಿಗೆ ಸರ್ಕಾರ ತಂದಿಟ್ಟಿದೆ ಎಂದು ಕಿಡಿಕಾರಿದ್ದಾರೆ.

ಹುದ್ದೆಗಳ ಭರ್ತಿ ವಿಳಂಬದಿಂದ ಮಾನಸಿಕ ಒತ್ತಡದಿಂದ ನೊಂದ ವಿಜಯಪುರದ ಉಪ್ಪಲದಿನ್ನಿ ವಿಜಯ ಲಮಾಣಿ ಎಂಬ ಆಕಾಂಕ್ಷಿ ದಯಾಮರಣ ಕೋರಿ ಜಿಲ್ಲಾಧಿಕಾರಿಗೆ ಅರ್ಜಿ ಬರೆದ ಕುರಿತು ಖೇದ ವ್ಯಕ್ತಪಡಿಸಿದ್ದಾರೆ.

ನೇಮಕಾತಿ ವಿಳಂಬದಿಂದ ಆಕಾಂಕ್ಷಿಗಳು ಒಪ್ಪತ್ತಿನ ಊಟಕ್ಕೂ ಪರಿತಪಿಸುವ ಸ್ಥಿತಿ ಉಂಟಾಗಿದೆ. ಉಚಿತ ಊಟ ಸಿಗುವ ದೇವಸ್ಥಾನ, ಮದುವೆಯ ಕಲ್ಯಾಣ ಮಂಟಪ ಅಲೆಯುತ್ತಿರುವ ಕುರಿತು ಕಳವಳ ವ್ಯಕ್ತಪಡಿಸಿದ್ದಾರೆ.

ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಒಂದು ಲಕ್ಷ ಹುದ್ದೆಗಳ ಭರ್ತಿಗೆ ಆಶ್ವಾಸನೆ ನೀಡಿತ್ತು. ಅಧಿಕಾರಕ್ಕೆ ಬಂದು ಮೂರು ವರ್ಷಗಳು ಕಳೆದರೂ, ಒಂದೇ ಒಂದು ಹುದ್ದೆ ಭರ್ತಿ ಮಾಡಿಲ್ಲ ಎಂದು ಆಪಾದಿಸಿದ್ದಾರೆ.

ರಾಜ್ಯದಲ್ಲಿ ವಿವಿಧ ಇಲಾಖೆ ಹಾಗೂ ನಿಗಮ ಮಂಡಿಗಳು ಸೇರಿದಂತೆ ಒಟ್ಟು 3 ಲಕ್ಷಕ್ಕೂ ಅಧಿಕ ಹುದ್ದೆಗಳು ಖಾಲಿ ಇದ್ದರೂ, ಒಂದೇ ಒಂದು ನೋಟಿಫಿಕೇಶನ್ ಹೊರಡಿಸಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಹುದ್ದೆಗಳ ಭರ್ತಿಗೆ ರಾಜ್ಯದ ಎಲ್ಲ ಜಿಲ್ಲಾಧಿಕಾರಿ ಕಚೇರಿ ಮುಂದೆ ಅನಿರ್ದಿಷ್ಟಾವಧಿ ಧರಣಿ ನಡೆಸುತ್ತೇವೆ. ಪೊಲೀಸ್ ಇಲಾಖೆ ಮೂಲಕ ದಬ್ಬಾಳಿಕೆ ನಡೆಸಿದರೆ, ಜೈಲ್ ಬರೋ ಚಳವಳಿಗೂ ಸಿದ್ಧ ಎಂದು ಎಚ್ಚರಿಸಿದ್ದಾರೆ.

ಖಾಲಿ ಹುದ್ದೆಗಳ ನೇಮಕಾತಿಗೆ ರಾಜ್ಯದ ವಿದ್ಯಾರ್ಥಿಗಳು ಜೈಲ್ ಬರೋ ಚಳವಳಿ ನಡೆಸಲು ಸಿದ್ಧರಿದ್ದು, ಪೊಲೀಸ್ ಇಲಾಖೆ ಎಫ್‌ಐಆರ್ ಎಂಬ ಗೊಡ್ಡು ಬೆದರಿಕೆ ಹೆದರುವುದಿಲ್ಲ ಎಂದು ಸವಾಲ್ ಹಾಕಿದ್ದಾರೆ. ಧಾರವಾಡದಲ್ಲಿ ನಡೆದ ಹೋರಾಟದ ವೇಳೆ ತಮ್ಮ ಮೇಲೆಯ 38 ಎಫ್‌ಐಆರ್ ದಾಖಲಿಸಿದ್ದು, ಸಾವಿರ ಎಫ್‌ಐಆರ್ ಹಾಕಿದರೂ ಅಂಜಲ್ಲ, ನ್ಯಾಯಾಲಯದಿಂದ ನಮಗೆ ನ್ಯಾಯ ಸಿಗುವ ಭರವಸೆ ಇದೆ ಎಂದಿದ್ದಾರೆ.

ಸರ್ಕಾರದಲ್ಲಿ ಐಪಿಎಲ್ ಟಿಕೆಟ್, ಶಾಸಕರ-ಸಚಿವ ವೇತನದ ಜತೆಗೆ ಆಸ್ತಿ ಹೆಚ್ಚಳ ಕುರಿತು ಚರ್ಚಿಸಲಾಗುತ್ತಿದೆ ವಿನಃ ನಿರುದ್ಯೋಗಿಗಳು, ರೈತರ ಸಮಸ್ಯೆಗಳ ಬಗ್ಗೆ ಚರ್ಚೆ ಆಗುತ್ತಿಲ್ಲ ಎಂದು ಕಾಂತಕುಮಾರ ಬೇಸರಿಸಿದ್ದಾರೆ.

ಭವಿಷ್ಯದಲ್ಲಿ ವಿದ್ಯಾರ್ಥಿಗಳಿಗೆ ಆಗುವ ತೊಂದರೆಗೆ ಸರ್ಕಾರವೇ ನೇರ ಹೊಣೆ. ಯುವಕರ ತಾಳ್ಮೆ ಪರೀಕ್ಷಿಸುವ ಸರ್ಕಾರ ಬೀದಿಗೆ ಬರುವುದು ಗ್ಯಾರಂಟಿ. ಬ್ರಿಟಿಷ್ ಆಳ್ವಿಕೆ ಕೈಬಿಟ್ಟು ನೇಮಕಾತಿ ಮಾಡಿಕೊಳ್ಳಲು ಕೋರಿದ್ದಾರೆ.

ವಸ್ತು ಪ್ರದರ್ಶನಕ್ಕೆ ಸಚಿವರಿಗೆ ಆಹ್ವಾನ

ಹುಬ್ಬಳ್ಳಿ: ಕರ್ನಾಟಕ ವಾಣಿಜ್ಯೋದ್ಯಮ ಸಂಸ್ಥೆ, ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರ ಕೈಗಾರಿಕಾ ಹಾಗೂ ವಾಣಿಜ್ಯ ಇಲಾಖೆಯ ಸಹಯೋಗದಲ್ಲಿ ಏ.25ರಿಂದ 29ರ ವರೆಗೆ ನಡೆಯುವ ಇನ್ ಕಾಮೆಕ್ಸ್ 2026 ಬೃಹತ್ ಕೈಗಾರಿಕಾ ವಸ್ತು ಪ್ರದರ್ಶನಕ್ಕೆ ಎಪಿಎಂಸಿ ಸಚಿವ ಶಿವಾನಂದ ಪಾಟೀಲ ಅವರಿಗೆ ಆಹ್ವಾನಿಸಲಾಯಿತು.

ಈ ಮಹತ್ವದ ಕೈಗಾರಿಕಾ ವಸ್ತು ಪ್ರದರ್ಶನ ಅಂಗವಾಗಿ ಏ.27 ಏಪ್ರಿಲ್ 2026ರಂದು ಕೃಷಿಗೆ ಸಂಬಂಧಿಸಿದ ಕೃಷಿ ಮಾರುಕಟ್ಟೆ, ಕೃಷಿ ಸಂಸ್ಕರಣೆ, ಜವಳಿ ಉದ್ಯಮ ಕಬ್ಬು ಸಂಸ್ಕರಣೆ, ಸಕ್ಕರೆ ಉತ್ಪಾದನೆ ಸೇರಿದಂತೆ ಮುಂತಾದ ವಿಷಯಗಳ ಮೇಲೆ ವಿಚಾರ ಸಂಕಿರಣ ಆಯೋಜಿಸಲಾಗಿದೆ.



ಈ ವಿಚಾರ ಸಂಕಿರಣದ ಉದ್ಘಾಟಕರಾಗಿ ಆಗಮಿಸಬೇಕು ಎಂದು ಸಚಿವ ಶಿವಾನಂದ ಪಾಟೀಲ ಅವರನ್ನು ಬೆಂಗಳೂರಿನಲ್ಲಿ ಸಂಸ್ಥೆಯ ಅಧ್ಯಕ್ಷ ಜಿ.ಕೆ.ಆದಪ್ಪಗೌಡರ ಹಾಗೂ ಸದಸ್ಯ ಬಿ.ಬಿ.ಪಾಟೀಲ ಅವರನ್ನು ಭೇಟಿ ಮಾಡಿ ಮನವಿ ಮಾಡಿಕೊಳ್ಳಲಾಗಿದೆ.

ರಾಜ್ಯದ ಕೃಷಿ ಹಾಗೂ ತೋಟಗಾರಿಕೆ ಬೆಳವಣಿಗೆಗೆ ಉತ್ತೇಜನ ನೀಡುವ ಈ ಕಾರ್ಯಕ್ರಮಕ್ಕೆ ಸಚಿವರ ಉಪಸ್ಥಿತಿ ವಿಶೇಷ ಮೆರುಗು ನೀಡಲಿದೆ ಎಂಬ ವಿಶ್ವಾಸವನ್ನು ಸಂಸ್ಥೆಯು ವ್ಯಕ್ತಪಡಿಸಿದೆ. ಇನ್ ಕಾಮೆಕ್ಸ್ ಕೈಗಾರಿಕಾ ಮೇಳವು ದೇಶದ ವಿವಿಧ ಭಾಗಗಳಿಂದ ಕೈಗಾರಿಕೋದ್ಯಮಿಗಳು, ಉದ್ಯಮಿಗಳು, ತಂತ್ರಜ್ಞಾನ ತಜ್ಞರು ಹಾಗೂ ವ್ಯಾಪಾರ ವಲಯದ ಪ್ರತಿನಿಧಿಗಳನ್ನು ಒಂದೇ ವೇದಿಕೆಯಲ್ಲಿ ಸೇರಿಸುವ ಮಹತ್ವದ ವೇದಿಕೆಯಾಗಿದೆ.

ಸುಮಾರು 400ಕ್ಕೂ ಹೆಚ್ಚು ಮಳಿಗೆಗಳು ಈ ಪ್ರದರ್ಶನದಲ್ಲಿ ಭಾಗವಹಿಸಲಿದ್ದು, ನೂತನ ತಂತ್ರಜ್ಞಾನಗಳು, ಯಂತ್ರೋಪಕರಣಗಳು, ಉತ್ಪನ್ನಗಳು ಮತ್ತು ಸೇವೆಗಳ ಪ್ರದರ್ಶನ ನಡೆಯಲಿದೆ.

ಈ ಮೇಳವು ಕೃಷಿ ಹಾಗೂ ಕೈಗಾರಿಕಾ ವೃದ್ಧಿಗೆ ಉತ್ತೇಜನ ನೀಡುವುದರ ಜೊತೆಗೆ, ಉದ್ಯಮಿಗಳ ನಡುವೆ ಜಾಲತಾಣ (ನೆಟ್‌ವರ್ಕಿಂಗ್), ಹೂಡಿಕೆ ಅವಕಾಶಗಳು ಹಾಗೂ ವ್ಯಾಪಾರ ವಿಸ್ತರಣೆಗೆ ಸಹಕಾರಿಯಾಗಲಿದೆ ಎಂದು ಸಚಿವರಿಗೆ ಮನನ ಮಾಡಿದರು.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M/s Elegant Offset Printers, Pvt.Ltd, Plot no 33/1& 15/1(eastern part) MT Sagar Industrial Estate, Hubballi -580030, Published at Joshi Chambers, 2nd Floor, Near R.M.Joshi Petrol pump, Lamington Road, Hubballi-580020, Ph: 0836-2350942, Editor: P.S.Prakash, Group Editor: Vinayak S. Bhat

ಕಿರು ಸುದ್ದಿ

ಬೇಸಿಗೆ ರಜೆ: ಪ್ರವಾಸಿಗರ ಸಂಖ್ಯೆ ಹೆಚ್ಚಳ

ಗೋಕರ್ಣ: ಶಾಲಾ-ಕಾಲೇಜುಗಳ ವಾರ್ಷಿಕ ಪರೀಕ್ಷೆ ಫಲಿತಾಂಶ ಪ್ರಕಟಗೊಂಡು ರಜೆ ಪ್ರಾರಂಭವಾಗುತ್ತಿದ್ದಂತೆ, ಜನರು ಕುಟುಂಬ ಸಮೇತರಾಗಿ ಪ್ರವಾಸಿ ತಾಣದತ್ತ ಮುಖ ಮಾಡುತ್ತಿದ್ದು, ಎಲ್ಲೆಡೆ ಜನಜಂಗುಳಿ ಉಂಟಾಗಿದೆ. ವಾರಂತ್ಯದ ರಜೆಯ ಜೊತೆ ಮಂಗಳವಾರ ಸರ್ಕಾರಿ ರಜೆ ಇರುವುದರಿಂದ ಸೋಮವಾರವು ಪ್ರವಾಸಿಗರ ಸಂಖ್ಯೆ ಹೆಚ್ಚಾಗಿದೆ. ಬಿರುಬಿಸಿಲಿನ ತಾಪವನ್ನು ಸಹ ಲೆಕ್ಕಿಸಿದೆ ಜನರು ಆಗಮಿಸುತ್ತಿದ್ದಾರೆ.ಇಲ್ಲಿನ ಎಲ್ಲಾ ಪ್ರಮುಖ ಕಡಲತೀರದಲ್ಲಿ ಜನಸಾಗರ ನೆರೇದಿದ್ದು, ಸುಮುದ್ರಕ್ಕಿಳಿದು ಮೋಜು ಮಸ್ತಿ ಮಾಡುವವರನ್ನ ನಿಯಂತ್ರಿಸಲು ಜೀವರಕ್ಷಕ ಸಿಬ್ಬಂದಿ ಹರಸಾಹಸ ಮಾಡುತ್ತಿದ್ದಾರೆ. ಪ್ರಮುಖ ದೇವಾಲಯದಲ್ಲಿ ಸಹ ದೇವರ ದರ್ಶನಕ್ಕೆ ಸರದಿ ಸಾಲು ನೆರೆದಿದೆ. ಎಲ್ಲೆಡೆ ವಾಹನ ದಟ್ಟಣೆ ಮತ್ತಿತರ ಅಧಿಕ ಜನರು ಬಂದಾಗ ಉಂಟಾಗುವ ಮೂಲಭೂತ ಸೌಕರ್ಯ ಕೊರತೆಯಿಂದಾಗುವ ಸಮಸ್ಯೆ ಉಂಟಾಗಿದೆ.



ಸಿದ್ದಾಪುರ: ತಾಲೂಕಿನ ಮುಠ್ಠಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 19 ವರ್ಷಗಳ ಕಾಲ ಸೇವೆ ಸಲ್ಲಿಸಿ ವರ್ಗಾವಣೆಗೊಂಡ ಮುಖ್ಯಶಿಕ್ಷಕಿ ಸುಚಿತ್ರಾ ಬಾಂದೇಕರ್ ಅವರಿಗೆ ಎಸ್‌ಡಿಎಂಸಿಯವರು, ಪಾಲಕ-ಪೋಷಕರು ಗುರುವಂದನಾ ಕಾರ್ಯಕ್ರಮದ ಮೂಲಕ ಬೀಳ್ಕೊಟ್ಟರು.

ಜೀವ ರಕ್ಷಕ ಸಿಬ್ಬಂದಿಯಿಂದ ಪ್ರವಾಸಿಗನ ರಕ್ಷಣೆ



ಗೋಕರ್ಣ: ಆರೋಗ್ಯದಲ್ಲಿ ಏರುಪೇರಾಗಿ ಕುಸಿದು ಬಿದ್ದು ಅಸ್ವಸ್ಥನಾದ ಪ್ರವಾಸಿಗನನ್ನ ಜೀವರಕ್ಷಕ ಸಿಬ್ಬಂದಿ ಆಸ್ಪತ್ರೆಗೆ ಸಾಗಿಸಲು ನೆರವಾಗಿ ಚಿಕಿತ್ಸೆ ಕೊಡಿಸಿದ ಘಟನೆ ಇಲ್ಲಿನ ಮುಖ್ಯ ಕಡಲತೀರದಲ್ಲಿ ನಡೆದಿದೆ. ಶಿಕಾರಿಪುರದಿಂದ 24 ಜನ ಒಟ್ಟು ಕುಟುಂಬ ಸಮೇತರಾಗಿ ಇಲ್ಲಿಗೆ ಪ್ರವಾಸಕ್ಕೆ ಬಂದಿದ್ದುಸಮುದ್ರಕ್ಕಿಳಿದು ಆಟವಾಡಲು ತೆರಳಿದ್ದರು. ಈ ವೇಳೆ ಓರ್ವ ಕಡಲ ತಟದಲ್ಲಿ ಕುಸಿದು ಬಿದ್ದಿದ್ದು, ಇದನ್ನ ಗಮನಿಸಿದ ಜೀವರಕ್ಷ ಸಿಬ್ಬಂದಿ ತಕ್ಷಣ ಖಾಸಗಿ ಅಂಬ್ಯುಲೆನ್ಸ ತರಿಸಿ ಅಸ್ವಸ್ಥಗೊಂಡ ಪ್ರವಾಸಿಗನನ್ನ ಹೊತ್ತು ಅಂಬುಲೆನ್ಸಗೆ ಹಾಕಿ ಚಿಕಿತ್ಸೆಗೆ ಕಳುಹಿಸಿ ಕೊಟ್ಟಿದ್ದಾರೆ. ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಿದ್ದು, ಪ್ರವಾಸಿಗ ಚೇತರಿಸಿಕೊಂಡಿದ್ದಾನೆ. ನಂತರ ಹೆಚ್ಚಿನ ಚಿಕಿತ್ಸೆಗೆ ಕುಮಟಾಕ್ಕೆ ಕಳುಹಿಸಲಾಗಿದೆ. ಶಿಕಾರಿಪುರದ ಪ್ರಮೋದಜಯಪ್ಪ (20) ಅನಾರೋಗ್ಯಕ್ಕೆ ತುತ್ತಾದ ಪ್ರವಾಸಿಗನಾಗಿದ್ದು, ಇವರು ದಂತವೈದ್ಯಕೀಯ ಎರಡನೇ ವರ್ಷದ ವಿದ್ಯಾರ್ಥಿ ಎಂದು ತಿಳಿದು ಬಂದಿದೆ.

ಎಪಿಎಂಸಿ ಕೃಷಿ ಧಾರಣೆ

ಶಿರಸಿ	ಕನಿಷ್ಠ	ಗರಿಷ್ಠ
ಕಾಳುಮೆಣಸು	60009	69099
ಬಿಳಿಗೋಟು	26899	39869
ಕೆಂಪುಗೋಟು	32558	37989
ಬೆಟ್ಟೆ	41299	50709
ರಾಶಿ	50300	53899
ಚಾಲಿ	44089	49099
ಬಿ.ಕಾಳುಮೆಣಸು	91000	91000

ಯಲ್ಲಾಪುರ	ಕನಿಷ್ಠ	ಗರಿಷ್ಠ
ಅಪಿ	63689	63689
ರಾಶಿ	49869	59000
ಬೆಟ್ಟೆ	38199	51165
ಕೆಂಪುಗೋಟು	18612	37316
ಬಿಳಿಗೋಟು	16612	41899
ಚಾಲಿ	38412	49009
ಕೋಕಾ	12000	33899
ಕಾಳುಮೆಣಸು	55101	67299



ಗೋಕರ್ಣ: ಹಿರೇಗುತ್ತಿ ಸೆಕೆಂಡರಿ ಹೈಸ್ಕೂಲಿನಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಜಯಂತಿ ಆಚರಿಸಲಾಯಿತು. ಈ ಸಂದರ್ಭದಲ್ಲಿ ನಾಗರಾಜ.ಜಿ. ನಾಯಕ, ಎನ್. ರಾಮು ಹಿರೇಗುತ್ತಿ, ಜಾನಕಿ ಗೊಂಡ, ಮಹಾದೇವ ಗೌಡ ಹಾಗೂ ಮಹಾತ್ಮ ಗಾಂಧಿ ಇಂಗ್ಲೀಷ್ ಮೀಡಿಯಂ ಸ್ಕೂಲಿನ ಶಿಕ್ಷಕರಾದ ಜಯಶ್ರೀ, ಶಿಲ್ಪಾ, ಶಶಿಕಲಾ, ನಾಗರತ್ನ, ಗೋಪಾಲಕೃಷ್ಣ ಗುನಗಾ ಮತ್ತು ಗೋವಿಂದ ನಾಯ್ಕ ಉಪಸ್ಥಿತರಿದ್ದರು.

ಕೆರೆ ಹೂಳೆತ್ತುವ ಕಾರ್ಯಕ್ರಮಕ್ಕೆ ಚಾಲನೆ

ಸಿದ್ದಾಪುರ: ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ, ಗ್ರಾಪಂ ಕಾನಗೋಡ, ಕೆರೆ ಅಭಿವೃದ್ಧಿ ಸಮಿತಿ ನಿಡಗೋಡ ಇವರ ಸಹಭಾಗಿತ್ವದಲ್ಲಿ 'ನಮ್ಮೂರು ನಮ್ಮ ಕೆರೆ' ಕಾರ್ಯಕ್ರಮದಡಿಯಲ್ಲಿ ನಿಡಗೋಡಿನ ಕೆರೆಯ ಹೂಳೆತ್ತುವ ಕಾರ್ಯಕ್ರಮಕ್ಕೆ ಚಾಲನೆ ನೀಡದರು. ಗ್ರಾಮಾಭಿವೃದ್ಧಿ ಯೋಜನೆಯ ಜಿಲ್ಲಾ ನಿರ್ದೇಶಕ ದಿನೇಶ ಎಂ. ಚಾಲನೆ ನೀಡಿ ನಿಡಗೋಡು ಕೆರೆಯ ಹೂಳೆತ್ತುವ ಭಾಗ್ಯ ಧರ್ಮಸ್ಥಳ ಮಂಜುನಾಥನ ಕ್ಷೇತ್ರದಿಂದ ಈಶ್ವರ ಸನ್ನಿದಾನಕ್ಕೆ ಬಂದಿದೆ. ಈಗಾಗಲೇ ರಾಜ್ಯದಾದ್ಯಂತ ಒಂದು ಸಾವಿರಕ್ಕೂ ಹೆಚ್ಚು ಕೆರೆಗಳ ಹೂಳನ್ನು ತೆಗೆಯಲಾಗಿದ್ದು ಎಲ್ಲ ಕೆರೆಗಳಲ್ಲಿ ನೀರಿನ ಸಂಗ್ರಹಣೆಯಿಂದ ಸಾವಿರಾರು ರೈತರ ಕೃಷಿ ಭೂಮಿಗೆ, ಜಾನುವಾರುಗಳಿಗೆ, ಬೋರವೆಲ್, ಬಾವಿಗಳಿಗೆ ಅನುಕೂಲವಾಗಿದೆ. ನೀರಿನ ಕೊರತೆ ಆಗದಂತೆ ಇಲ್ಲಿಯೂ ಉತ್ತಮ ಕೆಲಸ ಆಗುವಂತೆ ಗ್ರಾಮಸ್ಥರು ಗಮನಹರಿಸಲು ಮುಂದಾಗಬೇಕೆಂದರು.ನಿಡಗೋಡು ಕೆರೆ ಸಮಿತಿ ಅಧ್ಯಕ್ಷ ನಾಗರಾಜ ನಾಯ್ಕ ಡಾ.ವೀರೇಂದ್ರ ಹೆಗ್ಗಡೆ ಮಾತನಾಡಿದರು. ಕಾನಗೋಡ ಗ್ರಾಪಂ ಕಾರ್ಯದರ್ಶಿ ರವಿಕುಮಾರ, ಗ್ರಾಪಂ ಮಾಜಿ ಅಧ್ಯಕ್ಷ ಕೃಷ್ಣಮೂರ್ತಿ ನಾಯ್ಕ, ಈಶ್ವರ ದೇವಸ್ಥಾನ ಕಮಿಟಿ ಅಧ್ಯಕ್ಷ ಈಶ್ವರ ನಾಯ್ಕ, ಉಪಾಧ್ಯಕ್ಷ ವೀರಭದ್ರ ನಾಯ್ಕ, ಮಾರಿಕಾಂಬಾ ಜಾತ್ರಾ ಕಮಿಟಿ ಅಧ್ಯಕ್ಷ ಸುರೇಶ ನಾಯ್ಕ, ಜಿಲ್ಲಾ ಜನಜಾಗೃತಿ ವೇದಿಕೆ ಸದಸ್ಯ ಗಣಪತಿ ನಾಯ್ಕ, ಕೆರೆ ಸಮಿತಿ ಸದಸ್ಯರು, ಗ್ರಾಮಸ್ಥರು, ಸೇವಾ ಪ್ರತಿನಿಧಿ ಸಂಘದ ಸದಸ್ಯರು ಉಪಸ್ಥಿತರಿದ್ದರು. ವಲಯ ಮೇಲ್ವಚಾರಕಿ ಗೋಪಿಕಾ ಸ್ವಾಗತಿಸಿದರು. ತಾಲೂಕು ಯೋಜನಾಧಿಕಾರಿ ಗಿರೀಶ ಜಿ.ಪಿ. ಪ್ರಾಸ್ತಾವಿಕ ಮಾತನಾಡಿದರು. ಕೃಷಿ ಮೇಲ್ವಿಚಾರಕ ಮಹಾದೇವ ಬಿ. ನಿರೂಪಿಸಿ ವಂದಿಸಿದರು.



ಹೊನ್ನಾವರ: ತಾಲೂಕಿನ ಗುಣವಂತೆಯ ಶಂಭುಲಿಂಗೇಶ್ವರ ದೇವಾಲಯದ ಅಷ್ಟಬಂಧ ಹಾಗೂ ಬ್ರಹ್ಮಕಲಶೋತ್ಸವ, ದೇವತಾ ಪ್ರಾರ್ಥನೆ, ಸೀಮಾ ಮರ್ಯಾದೆ, ಮಹಾಸಂಕಲ್ಪ, ಮಹಾ ಗಣಪತಿ ಹೋಮ, ಶತ ರುದ್ರೀಯ ಜಪ ಮೊದಲಾದ ಕಾರ್ಯಕ್ರಮಗಳೊಂದಿಗೆ ಶಾಸ್ತ್ರೋಕ್ತವಾಗಿ ನಡೆಯಿತು. ಶಿಲಾಮಯ ದೇವಾಲಯದ ನಿರ್ಮಾತೃ ಸುನಿಲ್ ಶೆಟ್ಟಿ ದಂಪತಿ, ದೇವಾಲಯದ ಅಭಿವೃದ್ಧಿ ಸಮಿತಿಯ ಅಧ್ಯಕ್ಷರಾದ ಡಾ ನರಸಿಂಹ ಪಂಡಿತ, ಮತ್ತಿತರರು ಉಪಸ್ಥಿತರಿದ್ದರು.

ಕಾನೂನು ಸೇವಾ ಪ್ರಾಧಿಕಾರದ ಕಾರ್ಯದರ್ಶಿ ದಿವ್ಯಶ್ರೀ ಅಭಿಮತ

ಮಕ್ಕಳ ಸರ್ವತೋಮುಖ ಪ್ರಗತಿಗೆ ಸಹಕಾರಿ

ಕಾರವಾರ: ವ್ಯಕ್ತಿತ್ವ ವಿಕಸನ, ಕೌಶಲ್ಯ ಅಭಿವೃದ್ಧಿಗೆ ಮಕ್ಕಳಿಗೆ ಪಾಠದ ಜೊತೆಯಲ್ಲಿ ಆಟಗಳು ಪ್ರಮುಖವಾಗಿದ್ದು, ಮಕ್ಕಳಲ್ಲಿ ಅಡಗಿರುವ ಕಲೆ, ಸಂಸ್ಕೃತಿ ಇತರೆ ಬೌದ್ಧಿಕ ಮತ್ತು ಕ್ರೀಯಾಶೀಲ ಚಟುವಟಿಕೆಗಳನ್ನು ವೃದ್ಧಿಸಿಕೊಳ್ಳಲು ಬೇಸಿಗೆ ಶಿಬಿರವು ಸಹಕಾರಿಯಾಗಲಿದೆ ಎಂದು ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ದಿವ್ಯಶ್ರೀ ಸಿ.ಎಂ. ಹೇಳಿದರು.

ಉಚಿತ ಬೇಸಿಗೆ ಶಿಬಿರ

ಅವರು ಗುರುವಾರ ರಾಜ್ಯ ಬಾಲಭವನ ಸೊಸೈಟಿ ಬೆಂಗಳೂರು, ಜಿಲ್ಲಾ ಪಂಚಾಯತ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಹಾಗೂ ಜಿಲ್ಲಾ ಬಾಲಭವನ ಸಮಿತಿ, ಕಾರವಾರ ಇವರ ಸಹಯೋಗದಲ್ಲಿ 2026-27 ನೇ ಸಾಲಿನ ಉಚಿತ ಬೇಸಿಗೆ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದರು.

ದೇಹಕ್ಕೆ ಒಳ್ಳೆಯ ಆಹಾರ ಎಷ್ಟು ಮುಖ್ಯವೋ ಹಾಗೇ ನಮ್ಮ ಮೆದುಳಿಗೆ ಒಳ್ಳೆಯ ಚಟುವಟಿಕೆ, ಒಳ್ಳೆಯ ನಡೆ-ನುಡಿ ಆಚಾರ ವಿಚಾರಗಳು ಅಷ್ಟೇ ಮುಖ್ಯವಾಗಿದೆ. 15 ದಿನ ಕಾಲ ನಡೆಯುವ ಈ ಬೇಸಿಗೆ ಶಿಬಿರದಲ್ಲಿ ಚಿತ್ರಕಲೆ, ಕ್ರಾಫ್ಟ್, ನೃತ್ಯ, ಸಂಗೀತ, ಕರಾಟೆ ಸೇರಿದಂತೆ ವಿವಿಧ ಚಟುವಟಿಕೆಗಳ ತರಬೇತಿ ನೀಡಲಿದ್ದು, ಮಕ್ಕಳು ಈ ಶಿಬಿರದ ಅವಕಾಶವನ್ನು ಸದುಪಯೋಗ ಪಡೆದುಕೊಳ್ಳಬೇಕು ಎಂದರು.



> ಮಕ್ಕಳಲ್ಲಿ ಅಡಗಿರುವ ಕಲೆ ಪ್ರತಿಭೆ ಸೃಜನಾತ್ಮಕ ಚಟುವಟಿಕೆಗಳನ್ನು ಬೇಸಿಗೆ ಶಿಬಿರದ ಮೂಲಕ ಹೊರತರಲು ಸಹಕಾರಿಯಾಗಿದೆ.
> ■ ಲತಾ ನಾಯ್ಕ, ಡಿಡಿಪಿಐ

ಜಿಪಂಉಪಕಾರ್ಯದರ್ಶಿ ಪ್ರಕಾಶ ಹಾಲಮ್ಮನವರು, ಮಕ್ಕಳು ರಜೆ ಅವಧಿಯಲ್ಲಿ ಮೊಬೈಲ್‌ನಿಂದ ದೂರವಿದ್ದು, ರಾಮಾಯಣ ಮಹಾಭಾರತ ಲವಕುಶ ಅಂತಹ ಪೌರಾಣಿಕ ಪುಸ್ತಕಗಳನ್ನು ಅಧ್ಯಯನ ಮಾಡುವುದುರ ಜೊತೆಗೆ ಹಿರಿಯರಿಂದ ಹಳೆಯ ಕಥೆಗಳನ್ನು ಕೇಳಿ ಪ್ರೇರಣೆ ಪಡೆಯಬೇಕು. ಬಿಸಿಲು ಹೆಚ್ಚಾಗಿರುವುದರಿಂದ ಪೋಷಕರು ಮಕ್ಕಳ ಆರೋಗ್ಯದ ಬಗ್ಗೆ ಹೆಚ್ಚಿನ ಗಮನ ವಹಿಸಬೇಕು ಎಂದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ಹಾಗೂ ಹಿರಿಯ ಸಹಾಯಕ ನಿರ್ದೇಶಕ ಕುಮಾರ ಎನ್, ತರಬೇತಿ ಶಿಕ್ಷಕರಾದ ತ್ರಿವೇಣಿ ವಡ್ಡರ್, ವಿನೂತ ಅಂಬೇಕರ, ಪೂರ್ಣಿಮಾ ಬಶೆಟ್ಟಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಿಬ್ಬಂದಿ, ಮಕ್ಕಳು ಪೋಷಕರು ಮತ್ತಿತರರು ಇದ್ದರು. ಕಲ್ಪನಾ ರಶ್ಮಿ ಕಲಾಲೋಕದ ಅಧ್ಯಕ್ಷ ಬಿ.ಎಂ ಸೂರ್ಯಪ್ರಕಾಶ ಸ್ವಾಗತಿಸಿ, ನಿರೂಪಿಸಿ, ವಂದಿಸಿದರು.

ಅಂಗನವಾಡಿ ಕೇಂದ್ರ ಪುನರಾರಂಭಕ್ಕೆ ಒತ್ತಾಯ



ಗೋಕರ್ಣ: ಇಲ್ಲಿನ ಬಂಡಿಕೇರಿ ಮಠದ ಪಕ್ಕದಲ್ಲಿರುವ ಅಂಗನವಾಡಿ ಕೇಂದ್ರವನ್ನ ಬಂದ ಮಾಡಿದ್ದು, ಇದನ್ನ ದುರಸ್ಥಿಗೊಳಿಸಿ ಪುನಃ ಆರಂಭಿಸುವಂತೆ ಈ ಭಾಗದ ಸಾರ್ವಜನಿಕರು ಆಗ್ರಹಿಸಿದ್ದಾರೆ.

ತಾತ್ಕಾಲಿಕವಾಗಿ ಎಂದು ಅಜ್ಜಿಹಕ್ಕಲ ಸರ್ಕಾರಿ ಶಾಲೆಗೆ ಎರಡು ವರ್ಷದ ಹಿಂದೆ ಸ್ಥಳಾಂತರ ಮಾಡಲಾಗಿತ್ತು. ಆದರೆ ಇದುವರೆಗೂ ಪುನಃ ಈ ಭಾಗದಲ್ಲಿ ಅಂಗನವಾಡಿ ಕೇಂದ್ರ ತೆರೆಯದೆ ಅಲ್ಲಿ ಮುಂದುವರಿಸಿದ್ದರಿಂದ ಇಲ್ಲಿನ ಮಕ್ಕಳಿಗೆ ಹಾಗೂ ಅಂಗನವಾಡಿಯಲ್ಲಿ ನಡೆಯುವ ಗರ್ಭಿಯಣಿಯರ ತಪಾಸಣೆ, ಮಕ್ಕಳಿಗೆ ಚುಚ್ಚುಮದ್ದು ನೀಡುವುದು, ಪೌಷ್ಟಿಕ ಆಹಾರ ವಿತರಣೆ ಮತ್ತಿತರ ಕಾರ್ಯಕ್ರಮದ ವೇಳೆ ದೂರದ ಅಜ್ಜಿಹಕ್ಕಲಕ್ಕೆ ಹೋಗಬೇಕಾದ ಅನಿವಾರ್ಯತೆ ಎದುರಾಗಿದೆ. ಕಾಡಿನ ಹಾದಿಯಲ್ಲಿ ನಡೆದು ಸಾಗಲು ಪರಿತಪಿಸಬೇಕಿದೆ.

ಸಮಸ್ಯೆ ಏನು: ತೊಂಭತ್ತರ ದಶಕದಲ್ಲಿ ಇಲ್ಲಿನ ಪುಟ್ಟಮಕ್ಕಳ ಅನುಕೂಲತೆಗಾಗಿ ಅಂಗನವಾಡಿ ಕೇಂದ್ರವನ್ನ ಪ್ರಾರಂಭಿಸಲಾಗಿತ್ತು. ಅಂದು ಸರ್ಕಾರಿ ಜಾಗ ಎಂದು ನಮೂದಾಗಿದ್ದ ಈ ಸ್ಥಳ ಭೂ ಪರಿವರ್ತನೆಯ ಸಂದರ್ಭದಲ್ಲಿ ಪಕದ್ಕದಲ್ಲಿನ ಖಾಸಗಿ ವ್ಯಕ್ತಿಗೆ ಈ ಜಾಗವಾಗಿದೆ. ತನ್ನ ಖಾಸಗಿ ಜಾಗದಲ್ಲಿ ಅಂಗನವಾಡಿ ಮುಂದುವರಿಸಲು ಮಾಲಿಕರು ನಿರಾಕರಿಸಿದ್ದಾರೆ ಎನ್ನಲಾಗಿದ್ದು, ಇದಕ್ಕಾಗಿಯೇ ಸ್ಥಳಾಂತರಿಸಲಾಗಿದೆ ಎಂದು ಸ್ಥಳೀಯರು ಹೇಳುತ್ತಾರೆ.

ಆದರೆ ಈ ಬಗ್ಗೆ ಕುಮಟಾ ಸಿಡಿಪಿಓ ಅವರನ್ನ ವಿಚಾರಿಸಿದಾಗ ಕಟ್ಟಡ ದುರಸ್ತಿ ಇರುವುದರಿಂದ ಮಕ್ಕಳ ಸುರಕ್ಷತಾ ದೃಷ್ಟಿಯಿಂದ ಸ್ಥಳಾಂತರಿಸಲಾಗಿದೆ. ಇದರ ಜೊತೆ ಜಾಗದ ಸಮಸ್ಯೆಯೂ ಇದೆ ಎನ್ನುತ್ತಾರೆ. ಇಲ್ಲಿನ ಜನರಿಗೆ ಅಂಗನವಾಡಿ ಮೂಲಕ ವಿವಿಧ ಸೌಲಭ್ಯ ಪಡೆಯಲು ತೊಂದರೆಯಾಗುತ್ತಿರುವುದು, ಮಕ್ಕಳು ತೆರಳಲು ದೂರವಾಗುತ್ತಿರುವ ಬಗ್ಗೆ ಪ್ರಶ್ನಿಸಿದಾಗ ಸಮಸ್ಯೆ ಬಗೆಹರಿಸಲು ಪ್ರಯತ್ನಿಸುತ್ತೇವೆ ಎಂಬ ಉತ್ತರ ನೀಡುತ್ತಿದ್ದು, ಆದರೆ ಬಗೆಹರಿಯುವ ಬಗ್ಗೆ ನಿಖರವಾಗಿ ಹೇಳಿಲಿಲ್ಲ.

ಈ ಬಗ್ಗೆ ಇಲಾಖೆಯ ಹಿರಿಯ ಅಧಿಕಾರಿಗಳು, ಜನಪ್ರತಿನಿಧಿಗಳು ಗಮನಹರಿಸಿ ಇದೇ ಭಾಗದ ಬೇರೆ ಸ್ಥಳದಲ್ಲಾದರೂ ಅಂಗನವಾಡಿ ಕೇಂದ್ರ ನಡೆಯುವಂತೆ ಮಾಡಬೇಕಿದೆ.

ಸಾರ್ವಜನಿಕ ಹಣ ಪೋಲು

ಕಟ್ಟಡ ನಿರ್ಮಾಣಕ್ಕೆ ಲಕ್ಷಾಂತರ ರೂಪಾಯಿ ವ್ಯಯಿಸಲಾಗಿದೆ. ಇದಾದ ಹಲವು ವರ್ಷಗಳ ಬಳಿಕೆ ದುರಸ್ತಿ ಹಾಗೂ ಇತರೆ ನಿರ್ವಹಣೆಗೆ ಹಣ ಮಂಜೂರಾಗಿ ಕಾಮಗಾರಿ ನಡೆದಿದೆ. ಹೀಗೆ ನಿರಂತರ ಹಣವ್ಯಯಿಸಿದರೂ ಸಹ ಮತ್ತೆ ಪಾಳು ಬಿದ್ದು ಉಪಯೋಗಕ್ಕೆ ಬಾರದಂತಾಗಿದ್ದು, ಸಾರ್ವಜನಿಕರ ಹಣ ಪೋಲಾಗಿದೆ.

ನಾಳೆ ವಿದ್ಯುತ್ ಅದಾಲತ್, ಗ್ರಾಹಕರ ಸಂವಾದ ಸಭೆ

ಕಾರವಾರ: ಹೊನ್ನಾವರ ಉಪ-ವಿಭಾಗ ವ್ಯಾಪ್ತಿಯಲ್ಲಿ ಏ.18ರಂದು ಬೆಳಗ್ಗೆ 11 ಗಂಟೆಗೆ ವಿದ್ಯುತ್ ಅದಾಲತ್ ಹಾಗೂ ಮಧ್ಯಾಹ್ನ 3.30 ಗಂಟೆಗೆ ಗ್ರಾಹಕರಸಂವಾದಸಭೆಯನ್ನು ಹೊನ್ನಾವರ ಉಪ-ವಿಭಾಗ ಕಚೇರಿಯಲ್ಲಿ ಹಮ್ಮಿಕೊಳ್ಳಲಾಗಿದೆ. ಗ್ರಾಹಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ತಮ್ಮ ವಿದ್ಯುತ್ ಸಂಬಂಧಿತ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬಹುದು ಎಂದು ಹೊನ್ನಾವರ ಉಪ-ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್‌ರವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಏ.19ಕ್ಕೆ ಸಾಧಕರಿಗೆ ಸನ್ಮಾನ, ಪ್ರತಿಬಿಂಬ ಕಾರ್ಯಕ್ರಮ

ಸಿದ್ದಾಪುರ: ಅಖಿಲ ಹವ್ಯಕ ಮಹಾಸಭಾದ ವತಿಯಿಂದ ಸಿದ್ದಾಪುರ ಪ್ರಾಂತ್ಯದ ಹವ್ಯಕ ಪ್ರತಿಭೆಗಳಿಗಾಗಿ ಸಾಂಸ್ಕೃತಿಕ ಸ್ಪರ್ಧೆ, ಸಾಧಕರಿಗೆ ಸನ್ಮಾನ 'ಪ್ರತಿಬಿಂಬ' ಕಾರ್ಯಕ್ರಮ ತಾಲೂಕಿನ ಶ್ರೀಮನ್ನೆಲೆಮಾವಿನಮಠದಲ್ಲಿ ಏ. 19ರಂದು ಬೆಳಗ್ಗೆ 9 ರಿಂದ ಆಯೋಜಿಸಲಾಗಿದೆ ಎಂದು ಹವ್ಯಕ ಮಹಾಸಭಾದ ಉಪಾಧ್ಯಕ್ಷ ಆರ್. ಎಂ.ಹೆಗಡೆ ಬಾಳೇಸರ ತಿಳಿಸಿದರು.

ಪಟ್ಟಣದ ಟಿಎಂಎಸ್ ಸಭಾಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಅವರು ಶ್ರೀಮನ್ನೆಲೆಮಾವಿನಮಠದಶ್ರೀಮಾಧವಾನಂದ ಭಾರತೀ ಸ್ವಾಮೀಜಿ ಸಾನಿಧ್ಯದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಶಿಕ್ಷಣ ಪ್ರಸಾರಕ ಸಮಿತಿ ಉಪಾಧ್ಯಕ್ಷ ಡಾ.ಶಶಿಭೂಷಣ ಹೆಗಡೆ, ಕೆಡಿಸಿಸಿ ಬ್ಯಾಂಕ್ ನಿರ್ದೇಶಕ ರಾಘವೇಂದ್ರ ಶಾಸ್ತ್ರಿ ಕಂಚಿಕೈ, ಸೊಸೈಟಿ ಅಧ್ಯಕ್ಷ ಎಂ.ವಿ.ಹೆಗಡೆ, ನೆಲೆಮಾವು ಸೊಸೈಟಿ ಅಧ್ಯಕ್ಷ ಅಶೋಕ ಹೆಗಡೆ ಮುಖ್ಯ ಅಭ್ಯಾಗತರಾಗಿ ಪಾಲ್ಗೊಳ್ಳಲಿದ್ದಾರೆ. ಮಹಾಸಭಾದ ಉಪಾಧ್ಯಕ್ಷ ಆರ್.ಎಂ.ಹೆಗಡೆ ಬಾಳೇಸರ ಅಧ್ಯಕ್ಷತೆ ವಹಿಸಿವರು. ವಿದ್ವಾನ್ ಉಮಾಕಾಂತ ಭಟ್ಟ ಕೆರೆಕೈ ಹಾಗೂ ವಿದ್ವಾನ್ ಶೇಷಗಿರಿ ಭಟ್ಟ ಗುಂಜಗೋಡ ಉಪನ್ಯಾಸ ನೀಡಲಿದ್ದಾರೆ ಎಂದರು.

ಪ್ರತಿಬಿಂಬದ ಶಿರೋನಾಮೆಯಲ್ಲಿ ಹವ್ಯಕ ಪ್ರತಿಭೆಗಳಿಗಾಗಿ ಶ್ಲೋಕ ಪಠಣ, ಛದ್ಮವೇಷ, ಬಣ್ಣ ತುಂಬುವುದು, ಭಗವದ್ಗೀತಾ ಕಂಠಪಾಠ, ಚಿತ್ರಕಲೆ, ಏಕಪಾತ್ರಾಭಿನಯ, ರಸಪ್ರಶ್ನೆ, ಆಶುಭಾಷಣ, ದೇಶಭಕ್ತಿಗೀತೆ, ಚರ್ಚಾ ಸ್ಪರ್ಧೆ, ಹವ್ಯಕ ಸಂಪ್ರದಾಯ ಗೀತೆ, ರಂಗೋಲಿ, ಹವಿಗನ್ನಡ ಆಶುಭಾಷಣ, ಹವಿರುಚಿ ಸೇರಿದಂತೆ ವಿವಿಧ ಸ್ಪರ್ಧೆ ಆಯೋಜಿಸಲಾಗಿದೆ. ಕರಕುಶಲ ವಸ್ತುಗಳ ಪ್ರದರ್ಶನ ನಡೆಯಲಿದೆ.

ಯಕ್ಷನೃತ್ಯ,ಭರತನಾಟ್ಯ,ಸಂಗೀತವಾದ್ಯಗಳ ನುಡಿಸುವಿಕೆ, ವಿಶಿಷ್ಟ ಚಿತ್ರ ರಚನೆ, ಮಿಮಿಕ್ರಿ, ಜಾದೂ ಇತ್ಯಾದಿ ಪ್ರದರ್ಶನ ನೀಡುವವರಿಗೆ ಐದು ನಿಮಿಷಗಳ ಅವಕಾಶ ಕಲ್ಪಿಸಲಾಗುತ್ತದೆ. ಶ್ರೀ ಮಾಧವಾನಂದ ಭಾರತೀ ಶ್ರೀಗಳ ಉಪಸ್ಥಿತಿಯಲ್ಲಿ ನಡೆಯುವ ಸಮಾರೋಪ ಹಾಗೂಬಹುಮಾನವಿತರಣೆಕಾರ್ಯಕ್ರಮದಲ್ಲಿ ಅಭ್ಯಾಗತರಾಗಿ ನ್ಯಾಯವಾದಿ ಡಾ.ರವಿ ಹೆಗಡೆ ಹೂವಿನಮನೆ, ನೆಲೆಮಾವು ಮಠದ ಅಧ್ಯಕ್ಷ ಗಣಪತಿ ಹೆಗಡೆ, ಹೆಗ್ಗರಣಿ ಸೊಸೈಟಿ ಅಧ್ಯಕ್ಷ ಮಂಜುನಾಥ ಭಟ್ಟ, ಬಾಳೇಸರ ಸೊಸೈಟಿ ಅಧ್ಯಕ್ಷ ಚಂದ್ರಶೇಖರ ಹೆಗಡೆ ಪಾಲ್ಗೊಳ್ಳಲಿದ್ದು, ಮಹಾಸಭಾದ ಉಪಾಧ್ಯಕ್ಷ ಆರ್.ಎಂ.ಹೆಗಡೆ ಅಧ್ಯಕ್ಷತೆ ವಹಿಸಲಿದ್ದಾರೆ.

ಇದೇ ವೇಳೆ ವಿವಿಧ ಕ್ಷೇತ್ರದ ಸಾಧಕರನ್ನು ಸನ್ಮಾನಿಸಲಾಗುವುದು ಎಂದರು.

ಮಹಾಸಭಾದ ನಿರ್ದೇಶಕ ಜಿ.ಎಂ.ಭಟ್ಟ ಕಾಜಿನಮನೆ,ಪ್ರತಿಬಿಂಬದ ರಾಜ್ಯ ಸಂಚಾಲಕ ದೀಪಕ ಹೆಗಡೆ ಗೋಳಿಕೈ, ಟಿಎಂಎಸ್ ನಿರ್ದೇಶಕ ಸುಬ್ರಮಣ್ಯ ಭಟ್ಟ, ಪ್ರತಿಬಿಂಬದ ತಾಲೂಕಾ ಸಂಚಾಲಕ ಜಿ.ಜಿ.ಹೆಗಡೆ ಬಾಳಗೋಡ ಉಪಸ್ಥಿತರಿದ್ದರು.



ಸಮಯಕ್ಕೆ ಸರಿಯಾಗಿ ಬಸ್ ಬಿಡಲು ಸಾರ್ವಜನಿಕರ ಆಗ್ರಹ

ಗೋಕರ್ಣ: ಇಲ್ಲಿನ ಸಾರಿಗೆ ಸಂಸ್ಥೆಯ ಬಸ್ ಸಂಚಾರ ವ್ಯವಸ್ಥೆಯ ದೂರು ದುಮ್ಮಾನಗಳನ್ನ ಆಲಿಸುವವರೇ ಇಲ್ಲ ಎಂದು ಸಾರ್ವಜನಿಕರು ಆಡಿಕೊಳ್ಳುತ್ತಿದ್ದಾರೆ.

ಅಂಕೋಲಾದಿಂದ ಬಂದ ವಸತಿ ಬಸ್ ಆಯಿಲ್ ಲೀಕೇಜ್ ಮತ್ತು ಡಿಸೇಲ್ ಟ್ಯಾಂಕ್ ಸೋರಿಕೆಯಾಗಿ ನಿಂತಿತ್ತು. ಈ ಬಗ್ಗೆ ಘಟಕ ವ್ಯವಸ್ಥಾಪಕರಿಗೆ ತಿಳಿಸಲಾಗಿತ್ತು. ಬೆಳಗ್ಗೆ ಬದಲಿ ಬಸ್ ಬರಬಹುದು ಎಂಬ ನಿರೀಕ್ಷೆ ಇತ್ತು ಆದರೆ ಬರಲಿಲ್ಲ, ಇದರಿಂದ ಬೆಳಗ್ಗೆ 6.45ಕ್ಕೆ ಅಗ್ರಗೋಣ ಜುಗಾಕ್ಕೆ ಬಸ್ ಬಿಡಲಿಲ್ಲ, ಇದೇ ಬಸ್ 7.45ಕ್ಕೆ ತದಡಿ ಬೇಲೆಖಾನ ಅಶೋಕೆ ಹೋಗಬೇಕಿತ್ತು, ಬದಲಿ ಬಸ್ ಇರದಿದ್ದರಿಂದ ಈ ಎಲ್ಲಾ ಮಾರ್ಗದ ಬಸ್ ಸಂಚಾರ್ ಬಂದ್ ಆಗಿತ್ತು. ಗ್ರಾಮೀಣ ಭಾಗದಿಂದ ಶಾಲಾ, ಕಾಲೇಜಿಗೆ ತೆರಳುವ ವಿದ್ಯಾರ್ಥಿಗಳು, ತಾಲೂಕಾ ಕೇಂದ್ರಕ್ಕೆ ತೆರಳುವ ಉದ್ಯೋಗಿಗಳು, ಕೂಲಿ ಕಾರ್ಮಿಕರಿಗೆ ತೀವ್ರ ತೊಂದರೆಯಾಯಿತು. ಮಧ್ಯಾಹ್ನದ ನಂತರ ಹಾಳಾಗಿ ನಿಂತಿದ್ದ ಬಸ್‌ನ್ನು ದುರಸ್ತಿಗೊಳಿಸಿ ಪುನಃ ಮಧ್ಯಾಹ್ನದ ನಂತರ ಸಂಚರಿಸುವ ಮಾರ್ಗಕ್ಕೆ ಕಳುಹಿಸಲಾಗಿದೆ.



ಕಳೆದ ಎರಡು ದಿನಗಳ ಹಿಂದೆ ಇಲ್ಲಿಂದ ಅಂಕೋಲಾಕ್ಕೆ ಗಂಗಾವಳಿ ಮಾರ್ಗದಲ್ಲಿ ತೆರಳುವ ಬಸ್, ಗಂಗಾವಳಿಯಲ್ಲಿ ಹಾಳಾದ ಬಸ್ ದುರಸ್ತಿಗೆ ಸಹಕರಿಸಲು ಅರ್ಧ ಗಂಟೆಗಳ ಕಾಲ ನಿಂತು ಪ್ರಯಾಣಿಕರಿಗೆ ಪ್ರಯಾಣದ ಸಮಯದಲ್ಲಿ ವಿಳಂಬವಾಗಿತ್ತು. ಹೀಗೆ ಪ್ರತಿನಿತ್ಯ ಸಮಸ್ಯೆಗಳ ಸರಮಾಲೆಗಳ ಹೊತ್ತ ಸಾರಿಗೆ ಸಂಸ್ಥೆ ಬಸ್ ತಲುಪಬೇಕಾದ ಸ್ಥಳವನ್ನ ಸರಿಯಾದ ಸಮಯದಲ್ಲೇ ತಲುಪುವುದು ವಿರಳವಾಗಿದೆ. ಪ್ರವಾಸಿ ತಾಣದಿಂದ ವಾಯುವ್ಯ ಕರ್ನಾಟಕ ರಸ್ತೆ ಸಂಸ್ಥೆಯವರು ಹೊರ ಊರಿಗೆ ಬಸ್ ವ್ಯವಸ್ಥೆ ಮಾಡದಿದ್ದರೂ ಗ್ರಾಮೀಣ ಪ್ರದೇಶಕ್ಕಾದರೂ ಸರಿಯಾದ ಬಸ್ ವ್ಯವಸ್ಥೆ ಕಲ್ಪಿಸಿ ಎಂದು ಸಾರ್ವಜನಿಕರ ಒತ್ತಾಯವಾಗಿದೆ.

ಸುಂಕ ವಸೂಲಾತಿ ಖಂಡಿಸಿ ಪ್ರತಿಭಟನೆ

ಕುಮಟಾ: ಉಕ ಜಿಲ್ಲೆಯ ವಿಶ್ವವಿಖ್ಯಾತ ಮಿರ್ಜಾನ್ ಕೋಟೆಗೆ ಹೋಗುವ ರಸ್ತೆಯಲ್ಲಿ ಸ್ಥಳೀಯ ಮಿರ್ಜಾನ್ ಗ್ರಾಪಂ ವತಿಯಿಂದ ವಾಹನಗಳಿಗೆ ವಿಧಿಸಲಾಗುತ್ತಿರುವ ಸುಂಕ ವಸೂಲಾತಿ ಜಿಲ್ಲೆಯ ವಾಹನ ಚಾಲಕ ಮಾಲಕರಿಗೆ ದೊಡ್ಡ ಹೊರೆಯಾಗಿ ಪರಿಣಮಿಸಿತ್ತು. ಕಳೆದ ಎರಡು ತಿಂಗಳಿಂದ ಚಾಲಕರು ವಿವಿಧ ಹೋರಾಟಗಳು ಹಾಗೂ ಮನವಿಗಳ ಮೂಲಕ ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಿದ್ದರೂ ಯಾವುದೇ ಸ್ಪಷ್ಟ ಕ್ರಮ ಕೈಗೊಳ್ಳದ ಹಿನ್ನೆಲೆಯಲ್ಲಿ ಬೃಹತ್ ಪ್ರತಿಭಟನೆ ನಡೆಯಿತು.

ಕರಾವಳಿ ಕನ್ನಡ ಸಂಘದ ಅಧ್ಯಕ್ಷ ಭಾಸ್ಕರ ಪಟಗಾರ ಅವರ ನೇತೃತ್ವದಲ್ಲಿ ಜಿಲ್ಲೆಯ ಎಲ್ಲಾ ತಾಲೂಕುಗಳ ಟ್ಯಾಕ್ಸಿ ಯೂನಿಯನ್ ಸದಸ್ಯರು ಮಿರ್ಜಾನ್ ಕೋಟೆ ರಸ್ತೆಯಲ್ಲಿ ಪ್ರತಿಭಟನೆ ಹಮ್ಮಿಕೊಂಡು ತಕ್ಷಣ ಸುಂಕ ವಸೂಲಾತಿ ನಿಲ್ಲಿಸುವಂತೆ ಆಗ್ರಹಿಸಿದರು.

ಮಾನ್ಯ ಉಸ್ತುವಾರಿ ಸಚಿವರ ಗಮನಕ್ಕೆ ತರಲಾಗಿದ್ದು, ಅವರು ಸ್ಥಳದಲ್ಲಿದ್ದ ಕಾರ್ಯನಿರ್ವಹಣಾ ಅಧಿಕಾರಿಗಳಿಂದ ಮಾಹಿತಿ ಪಡೆದು, ಜಿಲ್ಲಾಧಿಕಾರಿಗಳ ಮೂಲಕ ಚಾಲಕರೊಂದಿಗೆ ದೂರವಾಣಿ ಮೂಲಕ ಮಾತುಕತೆ ನಡೆಸಿದರು. ಚಾಲಕರ ಸಂಕಷ್ಟವನ್ನು ಮನಗಂಡ ಸಚಿವರು, ಈ ಸುಂಕದ ಹೊರೆಯನ್ನು ನಿಮಗೆ ತಪ್ಪಿಸುತ್ತೇನೆ. ನಾನು ಚಾಲಕರ ಪರವಾಗಿ ನಿಲ್ಲುತ್ತೇನೆ ಎಂದು ಭರವಸೆ ನೀಡಿದರು.



ಅದರಂತೆ ತಕ್ಷಣವೇ ಕೆ.ಎ-30 ಹಾಗೂ ಕೆ.ಎ-47 ನೋಂದಣಿ ಸಂಖ್ಯೆಯ ವಾಹನಗಳಿಗೆ ಸುಂಕ ವಿನಾಯಿತಿ ನೀಡುವಂತೆ ಸ್ಥಳದಲ್ಲೇ ಅಧಿಕಾರಿಗಳಿಗೆ ಆದೇಶಿಸಿದರು. ಸಚಿವರ ಈ ಕ್ರಮದಿಂದ ಸಂತೋಷಗೊಂಡ ಚಾಲಕ ಮಾಲಕರು ಹಾಗೂ ಟ್ಯಾಕ್ಸಿ ಯೂನಿಯನ್ ಸದಸ್ಯರು ಜಯಘೋಷ ಮಾಡಿ ತಮ್ಮ ಕೃತಜ್ಞತೆಯನ್ನು ವ್ಯಕ್ತಪಡಿಸಿದರು.ಕರವೇ ಸ್ವಾಭಿಮಾನಿ ಬಣದ ಅಧ್ಯಕ್ಷ ರಾಜು ಮಾಸ್ತಿ ಹಳ್ಳ, ಕಾರವಾರ ಅಧ್ಯಕ್ಷ ರಘು ನಾಯ್ಕ, ಅಂಕೋಲಾ ಅಧ್ಯಕ್ಷ ಗಜು ನಾಯ್ಕ, ಮಾದನಗೇರಿ ಅಧ್ಯಕ್ಷ ಗಣಪತಿ ಗೌಡ, ಭಟ್ಕಳ ಅಧ್ಯಕ್ಷ ಗಣೇಶ ದೇವಾಡಿಗ, ಗೋಕರ್ಣ ಅಧ್ಯಕ್ಷ ಅನಂತ ಗೌಡ, ಕುಮಟಾ ಅಧ್ಯಕ್ಷ ನವೀನ ನಾಯ್ಕ, ಮುರುಡೇಶ್ವರ ಅಧ್ಯಕ್ಷ ರಂಜನ್ ದೇವಾಡಿಗ ಸೇರಿದಂತೆ ಮತ್ತಿತರರಿದ್ದರು.

ಶಿಕ್ಷಣದ ಬಗ್ಗೆ ಅಭಿಮಾನ ಮೂಡಲಿ: ಶಾಸಕ ದಿನಕರ ಶೆಟ್ಟಿ

ಹೊನ್ನಾವರ: ಶಿಕ್ಷಣದ ಬಗ್ಗೆ ಅಭಿಮಾನ ಪ್ರತಿಯೊಬ್ಬ ಸಾರ್ವಜನಿಕರಲ್ಲಿ ಮೂಡಿದಾಗ ಮಾತ್ರ ಸರ್ಕಾರಿ ಶಾಲೆಗಳು ಉನ್ನತ ಮಟ್ಟಕ್ಕೆ ತಲುಪಲಿದೆ ಎಂದು ಶಾಸಕ ದಿನಕರ ಶೆಟ್ಟಿ ಹೇಳಿದರು.

ಅವರು ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಗುಣಗುಣಿ ರಾಯಲಕೇರಿಯ 125 ನೇ ವರ್ಷದ ರಜತ ಶತಮಾನೋತ್ಸವ ಚಾಲನೆ ನೀಡಿ ಮಾತನಾಡಿದರು.

ಸರ್ಕಾರಿ ಶಾಲೆಯ ಗುಣಮಟ್ಟ ಸುಧಾರಿಸಲು ಶಿಕ್ಷಣ ಇಲಾಖೆ ಸಹಕಾರ ನೀಡುತ್ತಿದೆ. ಸರ್ಕಾರವು ಕೂಡಾ ಶಾಲೆಯಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಿಸಲು ಹಲವು ಬದಲಾವಣೆ ತರುತ್ತಿದೆ. ಮಾಜಿ ಮುಖ್ಯಮಂತ್ರಿ ದಿ.ರಾಮಕೃಷ್ಣ ಹೆಗಡೆ ಮುಖ್ಯಮಂತ್ರಿ ಆಗಿದ್ದಾಗ ಮೊದಲು ಸಮವಸ್ತ್ರ ನೀಡಿದರು. ಆ ನಂತರ ಬಿಸಿಯೂಟ, ಪಠ್ಯ ಪುಸ್ತಕ ನೀಡುವ ಮೂಲಕ ಹಲವು ಸೌಲಭ್ಯ ಸರ್ಕಾರ ನೀಡುತ್ತಾ ಬಂದಿದೆ. ಪಾಲಕರಾದವರು ಮಕ್ಕಳನ್ನು ಶಾಲೆಗೆ ಕಲಿಸುದೇ ದೊಡ್ಡ ಜವಾಬ್ದಾರಿ ಆಗಿದೆ ಅದನ್ನು ನಾವೆಲ್ಲರೂ ಸರಿಯಾಗಿ ನಿಭಾಯಿಸೋಣ ಎಂದರು.

'ಬಾಲ ಬೆಳಕು' ಹಸ್ತಪತ್ರಿಕೆ ಬಿಡುಗೊಳಿಸಿ ತಾಪಂಆಡಳಿತಾಧಿಕಾರಿ ಎನ್.ಆರ್.ಹೆಗಡೆ ಮಾತನಾಡಿ, ಇಲಾಖೆಯ ಹೆಮ್ಮೆಯ ಶಾಲೆ ಇದಾಗಿದ್ದು, ಇಂದು ಶತಮಾನೋತ್ಸವ ರಜತ ಶತಮಾನೋತ್ಸವದ ಸಂಭ್ರಮ ಆಚರಿಸಿಕೊಳ್ಳುತ್ತಿದೆ. ರಾಜ್ಯ ಶಿಕ್ಷಣ ನೀತಿ ಜಾರಿಯಲ್ಲಿದ್ದು, ದ್ವಿಭಾಷಾ ನೀತಿ ಅನುಷ್ಠಾನಕ್ಕೆ ಸರ್ಕಾರ ಹೆಚ್ಚಿನ ಒತ್ತು ನೀಡುತ್ತಾ ಬಂದಿದೆ. ನಮ್ಮ ರಾಜ್ಯದ 15 ಜಿಲ್ಲೆಯಲ್ಲಿ ಮುಂದಿನ ಜೂನ್ ತಿಂಗಳಿನಿಂದ ಕನ್ನಡ ಮತ್ತು ಆಂಗ್ಲ ಮಾಧ್ಯಮ ಎರಡು ಶಿಕ್ಷಣ ನೀಡುತ್ತಿದೆ. 120 ಕ್ಕಿಂತ ಹೆಚ್ಚು ಸೌಲಭ್ಯ ಸರ್ಕಾರಿ ಶಾಲೆಗಳಿಗೆ ಸರ್ಕಾರ ನೀಡುತ್ತಿದೆ. ಎಂದರು.ಬಿಇಓ ವಿನಾಯಕ ಅವಧಾನಿ ಮಾತನಾಡಿದರು. ಶಾಲೆಯಲ್ಲಿ ಸೇವೆ ಸಲ್ಲಿಸಿದ್ದ ಶಿಕ್ಷಕರನ್ನು, ಸ್ಥಳದಾನಿಗಳನ್ನು ಸಾಧಕ ವಿದ್ಯಾರ್ಥಿಗಳನ್ನು ಸನ್ಮಾನಿಸಿದರು.



ಶತಮಾನೋತ್ಸವ ಸಮಿತಿ ಗೌರವಾಧ್ಯಕ್ಷ ದೇವಿದಾಸ ಮಡಿವಾಳ, ಕ್ಷೇತ್ರ ಸಮನ್ವಯಾಧಿಕಾರಿ ಜಯಶ್ರೀ ನಾಯ್ಕ, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಎಂ.ಜಿ.ನಾಯ್ಕ, ಅಕ್ಷರದಾಸೋಹ ಸಹಾಯಕ ನಿರ್ದೇಶಕ ಸಹನಾಬಾನು ಪಠಾಣ ಮಾತನಾಡಿದರು.ಧರ್ಮದರ್ಶಿ ರಾಘವೇಂದ್ರ ಭಟ್, ರಜತ ಎಸ್‌ಡಿಎಂಸಿ ಅಧ್ಯಕ್ಷ ಪದ್ಮಾವತಿ ನಾಯ್ಕ, ಸಿ.ಆರ್.ಪಿ ಪ್ರಕಾಶ ಶೇಟ್, ಸಮಿತಿಯ ಪದಾಧಿಕಾರಿಗಳಾದ ಕುಮಾರ ನಾಯ್ಕ, ಸುರೇಶ ಮೊಗೇರ, ನಾರಾಯಣ ನಾಯ್ಕ, ರವಿ ನಾಯ್ಕ, ರಾಘವೇಂದ್ರ ಹೊನ್ನಾವರ, ರತ್ನಾಕರ ನಾಯ್ಕ, ರಾಜೇಶ ನಾಯ್ಕ, ವೇದಿಕೆಯಲ್ಲಿ ಉಪಸ್ಥಿತರಿದ್ದರು. ರಜತ ಶತಮಾನೋತ್ಸವ ಸಮಿತಿ ಅಧ್ಯಕ್ಷ ನೀಲಕಂಠ ನಾಯ್ಕ ಸ್ವಾಗತಿಸಿದರು. ರವಿ ನಾಯ್ಕ ರಾಯಲಕೇರಿ ವಂದಿಸಿದರು. ಶಾಲಾ ಮುಖ್ಯ ಶಿಕ್ಷಕಿ ಮಮತಾ ಪಟಗಾರ ವರದಿ ವಾಚಿಸಿದರು. ಯುವಜನಸೇವಾ ಕ್ರೀಡಾಧಿಕಾರಿ ಸುಧೀಶ ನಾಯ್ಕ, ಭಾರತಿ ನಾಯ್ಕ ಕಾರ್ಯಕ್ರಮ ನಿರ್ವಹಿಸಿದರು.

ಜಾನಪದ ಕಲೆ ಪ್ರೋತ್ಸಾಹಿಸಿ: ಹೊನ್ನೆಹದ್ದ

ಸಿದ್ದಾಪುರ: ಇಂದಿನ ತಂತ್ರಜ್ಞಾನದ ಯುಗದಲ್ಲಿ ನಮ್ಮ ನಾಡಿನ ಜಾನಪದ ಕಲೆ ಹಾಗೂ ಸಂಸ್ಕೃತಿಗಳು ನಮ್ಮಿಂದ ದೂರವಾಗುತ್ತಿವೆ. ಜಾನಪದ ಕಲೆ ಹಾಗೂ ನಮ್ಮ ಸಂಸ್ಕೃತಿಯನ್ನು ಪ್ರೋತ್ಸಾಹಿಸಿ ಉಳಿಸಿ ಮುಂದಿನ ತಲೆಮಾರಿಗೆ ಹಸ್ತಾಂತರಿಸುವ ಜವಾಬ್ದಾರಿ ನಮ್ಮ ಮೇಲಿದೆ ಎಂದು ಪ್ರಗತಿಪರ ಕೃಷಿಕ ಚಂದ್ರಶೇಖರ ನರಸಿಂಹ ಹೆಗಡೆ ಹೊನ್ನೆಹದ್ದ ಹೇಳಿದರು.

ತಾಲೂಕಿನ ಹಾರ್ಸಿಕಟ್ಟಾ ಸಮೀಪದ ಹೊನ್ನೆಹದ್ದದ ಮಾವಿನಕಟ್ಟೆ ಭೂತೇಶ್ವರ ಸ್ವಾಮಿಯ ವಾರ್ಷಿಕೋತ್ಸವದ ಅಂಗವಾಗಿ ಆಯೋಜಿಸಿದ್ದ ಕಡೆವಿನ ಕೋಲಾಟ ಪ್ರದರ್ಶನ ಉದ್ಘಾಟಿಸಿ ಅವರು ಮಾತನಾಡಿದರು.

ಕಡೆವಿನ ಕೋಲಾಟದ ನಿರ್ಣಾಯಕರಾಗಿ ಆಗಮಿಸಿದ್ದ ಉಪನ್ಯಾಸಕ ಎನ್.ಟಿ.ನಾಯ್ಕ ದೇವಾಸ ಮಾತನಾಡಿ ಗ್ರಾಮೀಣ ಸೊಗಡಿನ ಮಹತ್ವವನ್ನು ಹೊಂದಿರುವ ಅನೇಕ ಜನಪದ ಕಲೆಗಳು, ಕ್ರೀಡೆಗಳಿಂದ ಜನತೆ ದೂರವಾಗುತಿದ್ದಾರೆ. ಇಂತಹ ಕಲೆಗಳು ಉಳಿಯಬೇಕಾದರೆ ಸಂಘಟನೆ ಅವಶ್ಯ ಎಂದು ಹೇಳಿದರು. ಅಧ್ಯಕ್ಷತೆವಹಿಸಿದ್ದ ನಾಟಿ ವೈದ್ಯ ಕೆ.ಟಿ.ಗೌಡ ಮಾದಲಮನೆ ಮಾತನಾಡಿದರು.ಬಿದರಕಾನ ಗ್ರಾಪಂ ನಿಕಟಪೂರ್ವ ಸದಸ್ಯೆ ಮಮತಾ ನಾರಾಯಣ ಚನ್ನಯ್ಯ, ನಾರಾಯಣ ಸ್ವಾಮಿ ಕೊಳಗಿಜಡ್ಡಿ, ನಿರ್ಣಾಯಕ ಶ್ರೀನಿವಾಸ, ಭೂತೇಶ್ವರ ಸಮಿತಿಯ ಮಂಜುನಾಥ ಹೊನ್ನೆಹದ್ದ ಉಪಸ್ಥಿತರಿದ್ದರು.ದೀಪಾ ಸಂಗಡಿಗರು ಪ್ರಾರ್ಥಿಸಿದರು. ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ರಮೇಶ ಹೆಗಡೆ ಹಾರ್ಸಿಮನೆ ಕಾರ್ಯಕ್ರಮ ನಿರೂಪಿಸಿದರು.



ಯುವ ಪ್ರತಿಭಾ ದೀಪ್ತಿ ಪ್ರಶಸ್ತಿಗೆ ಭಾಜನ



ಸಿದ್ದಾಪುರ : ವಿದ್ಯಾಧರ ಕನ್ನಡ ಪ್ರತಿಷ್ಠಾನ ಧಾರವಾಡ ಹಾಗೂ ಪ್ರಜ್ವಲ ಟ್ರಸ್ಟ್ ಶಿರಸಿ ಇವರ ಸಂಯುಕ್ತ ಆಶ್ರಯದಲ್ಲಿ ಮಾತೋಶ್ರೀ ಜಾನಕಿಬಾಯಿ ರಂಗರಾವ ಮುತಾಲಿಕ ದೇಸಾಯಿ ಇವರ ಸಂಸ್ಮರಣೆಯ ಅಂಗವಾಗಿ ಕೊಡಮಾಡುವ ಕನ್ನಡ ಚೂಡಾಮಣಿ 2025 ಪ್ರಶಸ್ತಿ, ಕನ್ನಡ ನುಡಿ ತೇರು-2026 ಪ್ರಶಸ್ತಿ ಹಾಗೂ 'ಯುವ ಪ್ರತಿಭಾ ದೀಪ್ತಿ'(ರಂಗ ಕಲಾ ಕ್ಷೇತ್ರ) ಪ್ರಶಸ್ತಿಗೆ ಸಿದ್ದಾಪುರದ ರಾಕೇಶ ಆರ್. ಭಟ್ಟ ಅವರು ಭಾಜನರಾಗಿದ್ದು ಶಿರಸಿಯ ರಂಗಧಾಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಈ ಸಂದರ್ಭದಲ್ಲಿ ವಿದ್ಯಾಧರ ಕನ್ನಡ ಪ್ರತಿಷ್ಠಾನದ ಅಧ್ಯಕ್ಷ ವಿದ್ಯಾಧರ ಮುತಾಲಿಕ ದೇಸಾಯಿ, ಶಿರಸಿಯ ಪ್ರಜ್ವಲ ಟ್ರಸ್ಟ್ ಅಧ್ಯಕ್ಷೆ ಬಿಂದು ಹೆಗಡೆ, ಬೆಳಗಾವಿಯ ವಾಣಿಜ್ಯ ತೆರಿಗೆ ಅಧಿಕಾರಿ ಸುರೇಶ ಕೋರಕೊಪ್ಪ, ಬೆಳಗಾವಿ ಹೊಂಬೆಳಕು ಸಾಂಸ್ಕೃತಿಕ ಸಂಘದ ಅಧ್ಯಕ್ಷ ಸ.ರಾ.ಸುಳುಕೂಡೆ ಇತರರು ಉಪಸ್ಥಿತರಿದ್ದರು. ರಾಕೇಶ ಭಟ್ಟ ಅವರು ನಿರ್ದೇಶಿಸಿದ 'ಪ್ರಸ್ತುತ' ಕಿರು ನಾಟಕವನ್ನು ಎಂಇಎಸ್., ಎಂಎಂಕಲಾ ಮತ್ತು ವಿಜ್ಞಾನ ಮಹಾವಿದ್ಯಾಲಯದ ವಿದ್ಯಾರ್ಥಿಗಳು ಪ್ರದರ್ಶಿಸಿದರು.



ಕುಮಟಾ: ಅಗ್ನಿವೀರ ತರಬೇತಿ ಶಿಬಿರದ ಉದ್ಘಾಟನೆ ಕಾರ್ಯಕ್ರಮಕ್ಕೆ ಆಗಮಿಸಿದ್ದ ಕುಮಟಾ ಉಪವಿಭಾಗಾಧಿಕಾರಿ ಶ್ರವಣಕುಮಾರ್ ತಮ್ಮ ಸರಳತೆಯ ಮೂಲಕ ಗಮನ ಸೆಳೆದರು. ಅವರು ವಿದ್ಯಾರ್ಥಿಗಳಿಗೆ ಬೆಳಗ್ಗೆಯ ತಿನಿಸುಗಳನ್ನು ಬಡಿಸಿದರು. ಜೊತೆಗೆ ಸೈನಿಕರಾಗುವ ಕನಸು ಹೊಂದಿರುವ ವಿದ್ಯಾರ್ಥಿಗಳಿಗೆ ಈ ಮೂಲಕ ಗೌರವಿಸಿ, ಪ್ರೋತ್ಸಾಹ ನೀಡಿದರು. ಅವರ ಈ ನಡೆ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು.

ಕಿರುಸುದ್ದಿ

ಪ್ರವಚನ ಮಾಲಿಕೆ ಇಂದು

ಗದಗ: ಇಲ್ಲಿನ ವಿವೇಕಾನಂದ ನಗರದ ಕಾಶೀ ವಿಶ್ವನಾಥ ದೇವಸ್ಥಾನದ ಸ್ವಾಮಿ ವಿವೇಕಾನಂದ ಸಾಂಸ್ಕೃತಿಕ ಭವನದಲ್ಲಿ ಏ.17 ರಂದು ಸಂಜೆ 6.30ಕ್ಕೆ ಸ್ವಾಮಿ ವಿವೇಕಾನಂದ ಸಾಂಸ್ಕೃತಿಕ ಸಮಿತಿಯಿಂದ 57ನೇ ಜೀವನ ದರ್ಶನ ಪ್ರವಚನ ಮಾಲಿಕೆ ಹಾಗೂ ಕಾಶಿ ವಿಶ್ವನಾಥನ ಪಾಲಕಿ ಸೇವೆ ಜರುಗಲಿದೆ. ಸಾನ್ನಿಧ್ಯ ಗುಳೇದಗುಡ್ಡದ ಒಪ್ಪತ್ತೇಶ್ವರ ಸಂಸ್ಥಾನಮಠದ ಅಭಿನವ ಒಪ್ಪತ್ತೇಶ್ವರ ಸ್ವಾಮೀಜಿ ವಹಿಸುವರು. ಅಧ್ಯಕ್ಷತೆ ಸ್ವಾಮಿ ವಿವೇಕಾನಂದ ಸಾಂಸ್ಕೃತಿಕ ಸಮಿತಿಯ ಅಧ್ಯಕ್ಷ ಎ.ಟಿ.ನರೇಗಲ್ಲ ವಹಿಸುವರು. ಸಮಿತಿಯ ಗೌರವಾಧ್ಯಕ್ಷ ಜಿ.ಜಿ.ಕುಲಕರ್ಣಿ, ಉಪಾಧ್ಯಕ್ಷ ಆರ್.ಆರ್.ಕಾಶಪ್ಪನವರ ಉಪಸ್ಥಿತರಿರುವರು ಎಂದು ಸಮಿತಿಯ ಕಾರ್ಯದರ್ಶಿ ಕೆ.ಪಿ.ಗುಳಗೌಡರ ತಿಳಿಸಿದ್ದಾರೆ.

ಕನ್ನಡ ಪುಸ್ತಕ ಸೊಗಸು ಬಹುಮಾನಕ್ಕೆ ಅರ್ಜಿ ಆಹ್ವಾನ

ಹಾವೇರಿ: ಕನ್ನಡ ಪುಸ್ತಕ ಪ್ರಾಧಿಕಾರದ ವತಿಯಿಂದ 2025ರ ಕ್ಯಾಲೆಂಡರ್ ವರ್ಷದಲ್ಲಿ (ಜನವರಿಯಿಂದ ಡಿಸೆಂಬರ್) ಕನ್ನಡದಲ್ಲಿ ಪ್ರಕಟವಾದ ಕೃತಿಗಳಿಗೆ, ಅವುಗಳ ಮುದ್ರಣ, ಮುಖಪುಟ ವಿನ್ಯಾಸ, ಗುಣಮಟ್ಟವನ್ನು ಪರಿಗಣಿಸಿ ವಿವಿಧ 'ಕನ್ನಡ ಪುಸ್ತಕ ಸೊಗಸು ಬಹುಮಾನ'ಗಳಿಗಾಗಿ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತ ಪ್ರಕಾಶಕರು,ಮುದ್ರಕರು, ಕಲಾವಿದರು ಅರ್ಜಿ ಸಲ್ಲಿಸಬಹುದಾಗಿದೆ. ಪುಸ್ತಕದ ಹೆಸರು, ಲೇಖಕರ ಹೆಸರು, ಪ್ರಕಟವಾದ ವರ್ಷ, ಪ್ರಕಾಶಕರ ಹೆಸರು, ಮುದ್ರಣಾಲಯದ ಹೆಸರು, ಮುಖಪುಟಚಿತ್ರ ರಚನೆಯ ಕಲಾವಿದರ ಹೆಸರು, ಚಿತ್ರಕಲಾವಿದರ ಪೂರ್ಣವಿಳಾಸ, ದೂರವಾಣಿ ಸಂಖ್ಯೆ ಈ ಎಲ್ಲಾ ವಿವರಗಳೊಂದಿಗೆ ಪುಸ್ತಕದ ಎರಡು ಪ್ರತಿಗಳನ್ನು ಅರ್ಜಿ ನಮೂನೆಯೊಂದಿಗೆ ಮೇ 11ರೊಳಗಾಗಿ ಆಡಳಿತಾಧಿಕಾರಿಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡಭವನ, ಜೆ.ಸಿ.ರಸ್ತೆ, ಬೆಂಗಳೂರು-560 002 ಈ ವಿಳಾಸಕ್ಕೆ ಕಳುಹಿಸಿ ಕೊಡಬಹುದಾಗಿದೆ. ಸಲ್ಲಿಸಲಾಗುವ ಪುಸ್ತಕಗಳನ್ನು ಯಾವುದೇ ಕಾರಣಕ್ಕೂ ಹಿಂದಿರುಗಿಸಲಾಗುವುದಿಲ್ಲ, ಕೊನೆಯ ದಿನಾಂಕ ಮುಗಿದ ನಂತರ ಬಂದ ಪುಸ್ತಕಗಳನ್ನು ಬಹುಮಾನಕ್ಕೆ ಪರಿಗಣಿಸಲಾಗುವುದಿಲ್ಲ. ಅರ್ಜಿ ನಮೂನೆಯನ್ನು ವೆಬ್ ಸೈಟ್ https://kpp.karnataka.gov.in ರಲ್ಲಿ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಆಡಳಿತಾಧಿಕಾರಿಗಳು, ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಭವನ, ಮೊದಲನೇಮಹಡಿ, ಜೆ.ಸಿ. ರಸ್ತೆ, ಬೆಂಗಳೂರು -560002 ಇಲ್ಲಿ ಸಂಪರ್ಕಿಸ ಬಹುದಾಗಿದೆ.

ಕಾರು ಡಿಕ್ಕಿ: ಮಹಿಳೆ ಸಾವು

ಹಾವೇರಿ: ರಸ್ತೆಯ ಬದಿಯಲ್ಲಿ ನಡೆದುಕೊಂಡು ಹೋಗುತ್ತಿದ್ದ ಮಹಿಳೆಗೆ ಹಿಂದಿನಿಂದ ಬಂದ ಕಾರು ಡಿಕ್ಕಿ ಹೊಡೆದ ಪರಿಣಾಮ ಗಂಭೀರವಾಗಿ ಗಾಯಗೊಂಡ ಮಹಿಳೆ ಸ್ಥಳದಲ್ಲೇ ಸಾವನ್ನಪ್ಪಿದ ಘಟನೆ ತಾಲೂಕಿನ ಸಂಗೂರು ಗ್ರಾಮದಲ್ಲಿ ನಡೆದಿದೆ. ಸಂಗೂರಿನ ಶಮ್‌ಶಾದಬೇಗಂ ಅಬ್ದುಲ್‌ಗನಿ ಬಂಕಾಪುರ (55) ಮೃತಪಟ್ಟ ಮಹಿಳೆಯಾಗಿದ್ದಾಳೆ. ಇವರು ಸಂಗೂರ ಗ್ರಾಮದಲ್ಲಿ ರಸ್ತೆ ಎಡಬದಿಯಲ್ಲಿ ನಡೆದುಕೊಂಡು ಹೋಗುತ್ತಿರುವಾಗ ಹಾನಗಲ್ ಕಡೆಯಿಂದ ವೇಗವಾಗಿ ಬಂದ ಕಾರು ಡಿಕ್ಕಿ ಹೊಡೆದು ಅಪಘಾತ ಪಡಿಸಿದೆ. ಅಪಘಾತದಿಂದಾಗಿ ಮಹಿಳೆ ಗಂಭೀರವಾಗಿ ಗಾಯಗೊಂಡು ಸ್ಥಳದಲ್ಲೇ ಮೃತಪಟ್ಟಿದ್ದಾಳೆ. ಕಾರಿನ ಚಾಲಕ ವಾಹನ ನಿಲ್ಲಿಸದೆ ಪರಾರಿಯಾಗಿದ್ದಾನೆಂದು ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದೆ. ಹಾವೇರಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಲ್ಯಾಪ್‌ಟಾಪ್ ಕಳ್ಳತನ

ಹಾವೇರಿ: ಇಲ್ಲಿಯ ಇಜಾರಿಲಕಮಾಪುರದಲ್ಲಿ ಮನೆಯ ಆವರಣದಲ್ಲಿ ಕುರ್ಚಿ ಮೇಲೆ ಇಟ್ಟಿದ್ದ 2.50ಲಕ್ಷ ರೂ. ಮೌಲ್ಯದ ಲ್ಯಾಪ್‌ಟಾಪ್ ಸಹಿತ ಬ್ಯಾಗ್‌ನ್ನು ಕಳುವು ಮಾಡಲಾಗಿದೆ. ಇಜಾರಿಲಕಮಾಪುರದ ಎಂಜನೀಯರ್ ಶಿವರಾಜ ಮಲ್ಲೇಶಪ್ಪ ಕಣಗಾರ ಎಂಬುವವರಿಗೆ ಸೇರಿದ ಲ್ಯಾಪ್‌ಟಾಪ್ ಇದಾಗಿದೆ. ಮನೆಯ ಆವರಣದಲ್ಲಿ ಕುರ್ಚಿ ಮೇಲೆ ಇಟ್ಟು, ಒಳಗಡೆ ಹೋದಾಗ ಕಳ್ಳರು ಕಳ್ಳತನ ಮಾಡಿದ್ದಾರೆ. ಲ್ಯಾಪಟಾಪ್ ಬ್ಯಾಗನಲ್ಲಿದ್ದ ವಾಚ್, ಮೊಬೈಲ್ ಚಾರ್ಜರ್ ಸಹಿತ ಕಳುವು ಮಾಡಲಾಗಿದೆ ಎಂದು ಎಫ್‌ಐಆರ್‌ನಲ್ಲಿ ತಿಳಿಸಿದೆ. ಹಾವೇರಿ ಶಹರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪಲ್ಲಕ್ಕಿ ಸೇವೆ ಇಂದು

ಗದಗ: ಬೆಟಗೇರಿಯ ಹಳೇಬನಶಂಕರಿದೇವಿ ದೇವಸ್ಥಾನದಲ್ಲಿ ಏ.17 ರಂದು ಸಂಜೆ 6ಕ್ಕೆ ದೇವಾಂಗ ಮಹಿಳಾ ಮಂಡಳ ಸದಸ್ಯರಿಂದ ಲಲಿತ ಸಹಸ್ರ ನಾಮಾವಳಿ, ಭಜನೆ, ಬನಶಂಕರಿದೇವಿಯ ಪಲ್ಲಕ್ಕಿ ಉತ್ಸವ ಜರುಗಲಿದೆ. ಪಲ್ಲಕ್ಕಿ ಉತ್ಸವದ ಪ್ರಸಾದ ಸೇವೆ ಚೇತನ್ ಕೋಚಿ ಹಾಗೂ ಕುಟುಂಬ ವರ್ಗದವರು ವಹಿಸಿಕೊಂಡಿದ್ದಾರೆ. ದೇವಾಂಗ ಸಮಾಜ ಬಾಂಧವರು ಭಕ್ತರು ಹಾಗೂ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಶ್ರೀದೇವಿ ಕೃಪೆಗೆ ಪಾತ್ರರಾಗಬೇಕೆಂದು ಹಳೇಬನಶಂಕರಿದೇವಿ ದೇವಸ್ಥಾನ ಟ್ರಸ್ಟ್ ಕಮಿಟಿ ಪದಾಧಿಕಾರಿಗಳು ತಿಳಿಸಿದ್ದಾರೆ.



ಸಿದ್ದಾಪುರ: ತಾಲೂಕಿನ ನಿಡಗೋಡಿನ ಶ್ರೀ ಶಂಭುಲಿಂಗೇಶ್ವರ ದೇವಸ್ಥಾನದ ವಾರ್ಷಿಕೋತ್ಸವದ ಪ್ರಯುಕ್ತ ಹೆಗ್ಗರಣಿಯ ವೀರಮಾರುತಿ ಕದಂಬೇಶ್ವರ ಯಕ್ಷಗಾನ ಮಂಡಳಿಯ ಕಲಾವಿದರಿಂದ ಏರ್ಪಡಿಸಲಾಗಿದ್ದ 'ಮಾರುತಿ ಪ್ರತಾಪ' ಯಕ್ಷಗಾನ ಸೇರಿದ್ದ ಸಮಸ್ತರ ಕಣ್ಮನಗಳನ್ನು ತಣಿಸಿತು.

ತರಬೇತಿ ಮೂಲಕ ವಿದ್ಯಾರ್ಥಿಗಳಿಗೆ ಅವಕಾಶ

ಕುಮಟಾ: ಉತ್ತರ ಕನ್ನಡ ಜಿಲ್ಲೆಯ ವಿದ್ಯಾರ್ಥಿಗಳಿಗೆ ಅಪೂರ್ವ ಅವಕಾಶವನ್ನು ಒದಗಿಸಿರುವ ಅಗ್ನಿವೀರ ತರಬೇತಿ ಶಿಬಿರವು ಯುವಜನರಲ್ಲಿ ದೇಶಭಕ್ತಿ, ಶಿಸ್ತು ಹಾಗೂ ಆತ್ಮವಿಶ್ವಾಸವನ್ನು ಬೆಳೆಸುವ ಮಹತ್ವದ ವೇದಿಕೆಯಾಗಿದೆ ಎಂದು ಕುಮಟಾ ಉಪವಿಭಾಗಾಧಿಕಾರಿ ಶ್ರವಣಕುಮಾರ್ ಅಭಿಪ್ರಾಯಪಟ್ಟರು.

ತಾಲೂಕಿನ ಸರಸ್ವತಿ ವಿದ್ಯಾ ಕೇಂದ್ರದಲ್ಲಿ 'ರಾಷ್ಟ್ರ ನಿರ್ಮಾಣ ವೇದಿಕೆ', 'ಕೊಂಕಣ ಎಜ್ಯುಕೇಶನ್ ಟ್ರಸ್ಟ್', 'ವಿಧಾತ್ರಿ ಫೌಂಡೇಶನ್' ಹಾಗೂ ನಿವೃತ್ತ ಸೈನಿಕರ ತಂಡದ ಸಂಯುಕ್ತ ಆಶ್ರಯದಲ್ಲಿ ನಡೆಯುತ್ತಿರುವ ಅಗ್ನಿವೀರ ತರಬೇತಿ ಶಿಬಿರವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಅಗ್ನಿವೀರ ತರಬೇತಿಯು ವಿದ್ಯಾರ್ಥಿಗಳ ಜೀವನದಲ್ಲಿ ಶಿಸ್ತು, ಸಮಯಪಾಲನೆ ಹಾಗೂ ದೈಹಿಕ ಸಾಮರ್ಥ್ಯವನ್ನು ಬೆಳೆಸುವಲ್ಲಿ ಮಹತ್ವದ ಪಾತ್ರ ವಹಿಸುತ್ತದೆ. ಇಂತಹ ತರಬೇತಿಗಳು ಗ್ರಾಮೀಣ ಹಾಗೂ ನಗರ ಪ್ರದೇಶದ ಯುವಕರಿಗೆ ಸಮಾನವಾಗಿ ಅವಕಾಶಗಳನ್ನು ಒದಗಿಸುತ್ತವೆ ಎಂದು ಹೇಳಿದರು. ಕೊಂಕಣ ಎಜ್ಯುಕೇಶನ್ ಟ್ರಸ್ಟ್ ಕಾರ್ಯದರ್ಶಿ ಮುರಳೀಧರ ಪ್ರಭು ಪ್ರಾಸ್ತಾವಿಕವಾಗಿ ಮಾತನಾಡಿದರು. ಕೊಂಕಣ ಎಜ್ಯುಕೇಶನ್ ಟ್ರಸ್ಟ್ ಉಪಾಧ್ಯಕ್ಷ ರಮೇಶ ಪ್ರಭು, ವಿಧಾತ್ರಿ ಅಕಾಡೆಮಿಯ ಸಹ ಸಂಸ್ಥಾಪಕ ಗುರುರಾಜ ಶೆಟ್ಟಿ, ಪ್ರಾಂಶುಪಾಲ ಜಿ. ಎಸ್. ಹೆಗಡೆ ಕಣ್ಣಿ, ನಿವೃತ್ತ ಸೈನಿಕ ಗಿರೀಶ ನಾಯ್ಕ, ಡಾ. ಸುರೇಶ ಹೆಗಡೆ ಹಾಗೂ ತರಬೇತುದಾರರು ಮತ್ತು ನಿವೃತ್ತ ಸೈನಿಕರು ಉಪಸ್ಥಿತರಿದ್ದರು. ಮುಖ್ಯೋಪಾಧ್ಯಾಯ ಗಣೇಶ ಜೋಶಿ ಸಂಕೊಳ್ಳಿ ನಿರೂಪಿಸಿದರು. ಉಪನ್ಯಾಸಕ ಚಿದಾನಂದ ಭಂಡಾರಿ ವಂದಿಸಿದರು.



ಕುಮಟಾ: ತಾಲೂಕಿನ ಸರಸ್ವತಿ ವಿದ್ಯಾ ಕೇಂದ್ರದಲ್ಲಿ 'ರಾಷ್ಟ್ರ ನಿರ್ಮಾಣ ವೇದಿಕೆ', 'ಕೊಂಕಣ ಎಜ್ಯುಕೇಶನ್ ಟ್ರಸ್ಟ್', 'ವಿಧಾತ್ರಿ ಫೌಂಡೇಶನ್' ಹಾಗೂ ನಿವೃತ್ತ ಸೈನಿಕರ ತಂಡದ ಸಂಯುಕ್ತ ಆಶ್ರಯದಲ್ಲಿ ನಡೆಯುತ್ತಿರುವ ಅಗ್ನಿವೀರ ತರಬೇತಿ ಶಿಬಿರವನ್ನು ಕುಮಟಾ ಉಪವಿಭಾಗಾಧಿಕಾರಿ ಶ್ರವಣಕುಮಾರ್ ಉದ್ಘಾಟಿಸಿದರು.

ಜಿಪಂ ಸಿಇಒಗಳ ಸಭೆ | ಸಚಿವ ಶಿವಾನಂದ ಪಾಟೀಲ ಹೇಳಿಕೆ

ನೀರಿನ ಸಮಸ್ಯೆಗೆ ಗುತ್ತಿಗೆದಾರರೇ ಕಾರಣ

ಹಾವೇರಿ: ಜಿಲ್ಲೆಯ ಕುಡಿಯುವ ನೀರಿನ ಸಮಸ್ಯೆಗೆ ಗುತ್ತಿಗೆದಾರರೇ ಕಾರಣ. ಡೆಡ್‌ಲೈನ್ ಮುಗಿದು 2ವರ್ಷ ಕಳೆದರೂ ಬಹುಗ್ರಾಮ ಕುಡಿಯುವ ನೀರು ಯೋಜನೆ ಸೇರಿದಂತೆ ಜಿಲ್ಲೆಯ ಎಲ್ಲಾ ನೀರು ಪೂರೈಕೆ ಯೋಜನೆಗಳ ಅನುಷ್ಠಾನ ಪೂರ್ಣವಾಗಿಲ್ಲ, ನೋಟೀಸ್ ನೀಡಲಾಗಿದೆ, ದಂಡ ವಿಧಿಸಲಾಗಿದೆ ಆದರೂ ನಿರ್ಲಕ್ಷ್ಯ ವಹಿಸಿದ್ದು, ಅವರ ಮೇಲೆ ಕಠಿಣ ಕ್ರಮ ಅನಿವಾರ್ಯ ಎಂದು ಜಿಲ್ಲಾ ಉಸ್ತುವಾರಿ ಸಚಿವ ಶಿವಾನಂದ ಪಾಟೀಲ ಹೇಳಿದರು.

ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಬೇಸಿಗೆ ಹಿನ್ನಲೆಯಲ್ಲಿ ಕುಡಿವ ನೀರು ಮತ್ತು ಮೇವಿನ ಸಮಸ್ಯೆ ಕುರಿತು ಚರ್ಚಿಸಲು ಸಿಎಂ ಗುರುವಾರ ಕರೆದಿದ್ದ ಸಚಿವರು, ಜಿಲ್ಲಾಧಿಕಾರಿಗಳು, ಜಿಪಂ ಸಿಇಒಗಳ ಸಭೆಯಲ್ಲಿ ಮಾತನಾಡಿದ ಅವರು, ಸುಮಾರು ಹತ್ತಕ್ಕೂ ಹೆಚ್ಚು ಬಾರಿ ಅವಧಿ ವಿಸ್ತರಿಸಲಾಗಿದೆ. ಆದಾಗ್ಯೂ ಅನುಷ್ಠಾನಗೊಳಿಸುತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ

ಜಿಲ್ಲೆಯ 541 ಗ್ರಾಮಗಳಿಗೆ ನೀರು ಪೂರೈಸಲು ತಡಸ, ಅಣೂರು ಮತ್ತು ಹಂಸಭಾವಿ ಬಹುಗ್ರಾಮ ಕುಡಿಯುವ ನೀರು ಪೂರೈಕೆ ಯೋಜನೆ ರೂಪಿಸಿದ್ದು ಇವು ಅನುಷ್ಠಾನಕ್ಕೆ ಬಂದಲ್ಲಿ ಜಿಲ್ಲೆಯ ಎಲ್ಲ ಹಳ್ಳಿಗಳಿಗೆ ಕುಡಿವ ನೀರು ಪೂರೈಕೆ ಈಡೇರಲಿದೆ ಎಂದು ಸಿಎಂ ಗಮನಕ್ಕೆ ತಂದರು.

ತಡಸ ಯೋಜನೆ 2024ರ ಆಗಸ್ಟ್, ಅಣೂರು ಯೋಜನೆ 2024ರ ಫೆಬ್ರವರಿ ಹಾಗೂ ಹಂಸಭಾವಿ ಯೋಜನೆ 2024ರ ಜೂನ್‌ಗೆ ಅನುಷ್ಠಾನಕ್ಕೆ ಬರಬೇಕಿತ್ತು. ಗುತ್ತಿಗೆದಾರರು ಪದೇಪದೆ ಅವಧಿ ವಿಸ್ತರಣೆ ಮಾಡಿಕೊಳ್ಳುತ್ತಿದ್ದಾರೆ. ಶೇ.80ಕ್ಕೂ ಹೆಚ್ಚು ಹಣ ಪಾವತಿ ಮಾಡಲಾಗಿದೆ. ಆದರೂ ವಿಳಂಬ ಮಾಡುತ್ತಿದ್ದಾರೆ. ಹಾವೇರಿ ನಗರಕ್ಕೆ ಪ್ರಸ್ತುತ 15ದಿನಕ್ಕೊಮ್ಮೆ ನೀರು ಪೂರೈಸುವ ಪರಿಸ್ಥಿತಿ ಇದೆ. 24/7 ಹಾಗೂ ಒಳಚರಂಡಿ ಯೋಜನೆ ಅನುಷ್ಠಾನದ ಗುತ್ತಿಗೆ ಪಡೆದ ವ್ಯಕ್ತಿ ಕಲ್ಕತ್ತ ಕೋರ್ಟ್‌ನಿಂದ ತಡೆಯಾಜ್ಞೆ ತಂದು, ತಾವೂ ಕೆಲಸ ಮಾಡುತ್ತಿಲ್ಲ, ಬೇರೆಯವರಿಗೂ ಕೆಲಸ ಮಾಡಲು ಬಿಡುತ್ತಿಲ್ಲ. ಗುತ್ತಿಗೆದಾರರೇ ಹಾವೇರಿ ಜಿಲ್ಲೆಯ ನೀರಿನ ಸಮಸ್ಯೆ ಪರಿಹಾರಕ್ಕೆ ಅಡ್ಡಿಯಾಗಿದ್ದಾರೆ ಎಂದರು.

ಇದಕ್ಕೆ ವಿಧಾನಸಭೆ ಉಪಾಧ್ಯಕ್ಷ ರುದ್ರಪ್ಪ ಲಮಾಣಿ ಬೆಂಬಲಿಸಿ ಮಾತನಾಡಿ, ಹಾವೇರಿ ನಗರದ ಕುಡಿವ ನೀರು ಪೂರೈಕೆ ಯೋಜನೆಗೆ ಅಗತ್ಯ ಹಣ ಬಿಡುಗಡೆ ಮಾಡುವ ಭರವಸೆ ನೀಡಿದ್ದೀರಿ, ದಯವಿಟ್ಟು ಅಗತ್ಯ ಹಣಬಿಡುಗಡೆ ಮಾಡಿ ಯೋಜನೆ ಅನುಷ್ಠಾನಕ್ಕೆ ಸಹಕಾರ ನೀಡಿ ಎಂದು ಸಿಎಂಗೆ ಮನವಿ ಮಾಡಿದರು.

ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಮಾತನಾಡಿ, ಗುತ್ತಿಗೆದಾರರ ಬಗ್ಗೆ ಸಚಿವ ಶಿವಾನಂದ ಪಾಟೀಲರ ಅಭಿಪ್ರಾಯ ಸರಿ ಇದೆ. ಕೆಲವು ದೊಡ್ಡ ಕಂಪನಿಗಳು ರಾಜ್ಯದ ಹಲವು ಯೋಜನೆಗಳ ಗುತ್ತಿಗೆ ಪಡೆದುಕೊಂಡಿವೆ. ಆದರೆ ಕಾಲಮಿತಿಯಲ್ಲಿ ಪೂರ್ಣಗೊಳಿಸುತ್ತಿಲ್ಲ. ಪ್ರಶ್ನೆ ಮಾಡಿದರೆ ಎಲ್ಲೆಲ್ಲಿಂದಲೋ ಪೋನ್ ಕರೆ ಮಾಡಿಸಿ ಒತ್ತಡ ತರುತ್ತಿದ್ದಾರೆ. ಅವರ ಇಂತಹ ವರ್ತನೆಯನ್ನು ಸರ್ಕಾರ ಸಹಿಸಬಾರದು ಎಂದರು.

ಜಿಲ್ಲಾಧಿಕಾರಿ ಡಾ.ವಿಜಯಮಹಾಂತೇಶ ದಾನಮ್ಮನವರ ಪ್ರತಿಕ್ರಿಯಿಸಿ ಹಾವೇರಿ ನಗರದ ನೀರು ಪೂರೈಕೆ ಯೋಜನೆಯ ಯುಎಲ್‌ಬಿ ಪಾಲು ಪೆಂಡಿಂಗ್ ಇದೆ. ಯೋಜನೆಯ ಅನುಷ್ಠಾನಕ್ಕೆ 40ಕೋಟಿ ರೂ., ಅನುದಾನದ ಅಗತ್ಯವಿದೆ ಎಂದು ಸಭೆಯ ಗಮನಕ್ಕೆ ತಂದರು.



ಟೆಂಡರ್ ರದ್ಧತಿಗೆ ಸಿಎಂ ನಿರ್ದೇಶನ

ನೋಟೀಸ್ ನೀಡಿದರೂ ಕಾಲಮಿತಿಯಲ್ಲಿ ಕುಡಿವ ನೀರು ಪೂರೈಕೆ ಯೋಜನೆ ಪೂರ್ಣಗೊಳಿಸದ ಗುತ್ತಿಗೆ ಪಡೆದ ಏಜನ್ಸಿಗಳು ಎಷ್ಟೇ ಪ್ರಭಾವಿಯಾಗಿದ್ದರೂ, ದೊಡ್ಡ ಕಂಪನಿಯಾಗಿದ್ದರೂ ಟೆಂಡರ್ ರದ್ದುಪಡಿಸಿ ಎಂದು ಸಿಎಂ ಸಿದ್ದರಾಮಯ್ಯ ನಿರ್ದೇಶನ ನೀಡಿದರು. ಜಿಲ್ಲೆಗಳ ಕುಡಿಯುವ ನೀರು ಪೂರೈಕೆ ಯೋಜನೆಗಳ ಗುತ್ತಿಗೆ ಪಡೆದಿರುವ ದೊಡ್ಡ ಕಂಪನಿಗಳು ಸಕಾಲದಲ್ಲಿ ಯೋಜನೆಗಳನ್ನು ಅನುಷ್ಠಾನಕ್ಕೆ ತರುತ್ತಿಲ್ಲ. ಹೀಗಾಗಿ ನೀರಿನ ಸಮಸ್ಯೆಗೆ ಪರಿಹಾರದ ಪ್ರಯತ್ನಗಳು ಸಫಲವಾಗುತ್ತಿಲ್ಲ ಎಂದು ಹಲವು ಸಚಿವರು ಹೇಳಿದ ಹಿನ್ನಲೆಯಲ್ಲಿ, ಡೆಡ್‌ಲೈನ್ ಪಾಲಿಸದಿದ್ದರೆ ಸಹಿಸಿಕೊಳ್ಳುವ ಅಗತ್ಯವಿಲ್ಲ ಎಂದು ಸಿಎಂ ಹೇಳಿದರು.

ಅಂತರ್ಜಲ ಅಭಿವೃದ್ಧಿ ಅಗತ್ಯ: ಶಾಸಕ ಮಾನೆ

ಹಾನಗಲ್ಲ: ಕಾಲ ಬದಲಾಗಿದ್ದು, ಮಳೆ ಸಮಯೋಚಿತವಾಗಿ ಬೀಳುತ್ತಿಲ್ಲ, ಹಾಗಾಗಿ ಜಲ ಮೂಲಗಳನ್ನು ಸಂರಕ್ಷಿಸಿ ಅಂತರ್ಜಲ ಅಭಿವೃದ್ಧಿ ಪಡಿಸುವ ಅಗತ್ಯ ಹೆಚ್ಚಿದೆ. ಸರ್ಕಾರದ ಜೊತೆಗೆ ಸಮುದಾಯವೂ ಕೈ ಜೋಡಿಸಿ ಕೆರೆ, ಕಟ್ಟೆಗಳನ್ನು ಮುಂದಿನ ಪೀಳಿಗೆವರೆಗೆ ಉಳಿಸಬೇಕಿದೆ ಎಂದು ಶಾಸಕ ಶ್ರೀನಿವಾಸ ಮಾನೆ ಕರೆ ನೀಡಿದರು.

ತಾಲೂಕಿನ ಕ್ಯಾಸನೂರು ಗ್ರಾಮದಲ್ಲಿ 2 ಕೋಟಿ ರೂ. ವೆಚ್ಚದಲ್ಲಿ ದೊಡ್ಡಕೆರೆ ಸಮಗ್ರ ಅಭಿವೃದ್ಧಿ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿದ ಅವರು ಕೆರೆಗಳ ಅಭಿವೃದ್ಧಿ ಕೇವಲ ನೀರಿನ ಸಂಗ್ರಹಣೆಗೆ ಮಾತ್ರ ಸೀಮಿತವಲ್ಲ, ಇದು ರೈತರ ಬದುಕಿಗೆ ಬಲ ನೀಡುವುದರ ಜೊತೆಗೆ ಭೂಗರ್ಭದ ಜಲಮಟ್ಟವನ್ನು ಹೆಚ್ಚಿಸಲು ಪ್ರಮುಖ ಪಾತ್ರ ವಹಿಸಲಿದೆ. ಈ ಭಾಗದಲ್ಲಿ ನೀರಿನ ಸಮಸ್ಯೆಗೆ ಶಾಶ್ವತ ಪರಿಹಾರ ಒದಗಿಸುವಲ್ಲಿ ದೊಡ್ಡಕೆರೆಯ ಸಮಗ್ರ ಅಭಿವೃದ್ಧಿ ಮಹತ್ವದ ಹೆಜ್ಜೆಯಾಗಿದೆ ಎಂದರು.

ತಾಪಂ ಮಾಜಿ ಅಧ್ಯಕ್ಷ ಸಿದ್ದನಗೌಡ ಪಾಟೀಲ ಮಾತನಾಡಿ, 90 ಎಕರೆಗೂ ಹೆಚ್ಚು ಪ್ರದೇಶ ಹೊಂದಿರುವ ದೊಡ್ಡ ಕೆರೆಯನ್ನು ಸಮಗ್ರವಾಗಿ ಅಭಿವೃದ್ಧಿ ಪಡಿಸಬೇಕು ಎನ್ನುವ ಬೇಡಿಕೆ ಹತ್ತಾರು ವರ್ಷಗಳಿಂದ ಗ್ರಾಮಸ್ಥರಿಂದ ಕೇಳಿ ಬರುತ್ತಿತ್ತು. ಕೆರೆಯ ಸಮಗ್ರ ಅಭಿವೃದ್ಧಿಯ ಜೊತೆಗೆ ಕಾಲುವೆ, ತೂಬು ದುರಸ್ತಿ ಮಾಡಲಾಗುತ್ತಿದೆ. ಕೆರೆಯ ಪಕ್ಕದಲ್ಲಿನ ನೂರಾರು ಎಕರೆ ಕೃಷಿ ಜಮೀನುಗಳಿಗೆ ತೆರಳಲು ರಸ್ತೆ ಇರದೇ ರೈತ ಸಮೂಹ ತೊಂದರೆ ಅನುಭವಿಸುತ್ತಿತ್ತು. ಇದೀಗ ರಸ್ತೆ ನಿರ್ಮಾಣವಾಗಲಿದ್ದು, ರೈತರಿಗೆ ಅನುಕೂಲವಾಗಲಿದೆ. 2 ಕೋಟಿ ರೂ. ಅನುದಾನ ಒದಗಿಸಿ ಈ ಭಾಗದ ಗ್ರಾಮಸ್ಥರ ಬಹುವರ್ಷಗಳ ಬೇಡಿಕೆಯನ್ನು ಶಾಸಕ ಶ್ರೀನಿವಾಸ ಮಾನೆ ಈಡೇರಿಸಿದ್ದಾರೆ ಎಂದರು.

ಕೆಪಿಸಿಸಿ ಸದಸ್ಯರಾದ ಟಾಕನಗೌಡ ಪಾಟೀಲ, ಖ್ವಾಜಾಮೊಹಿದ್ದೀನ್ ಜಮಾದಾರ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಹನುಮಂತಪ್ಪ ಮರಗಡಿ, ಮುಖಂಡರಾದ ನಾಗರಾಜ ಗಾಜಿಪೂರ, ವೀರಭದ್ರಗೌಡ ಪಾಟೀಲ, ಈರಣ್ಣ ಬೈಲವಾಳ, ಎಸ್.ಜಿ.ಪಾಟೀಲ, ಗುರುನಾಥಗೌಡ ಪಾಟೀಲ, ಪ್ರಶಾಂತಗೌಡ ಪಾಟೀಲ, ವಿಜಯಕಾಂತ ಪಾಟೀಲ, ಗಣೇಶ ದಡ್ಡಿಕೊಪ್ಪ, ಸುರೇಶ ದಡ್ಡಿಕೊಪ್ಪ, ಬಸಪ್ಪ ಪೂಜಾರ, ಕೃಷ್ಣ ವಡ್ಡರ, ಸಂಜೀವ್ ಪಾಟೀಲ, ನಾಗರಾಜ್ ಶಿಶುನಾಳ, ಸುರೇಶ ಕರೆಪ್ಪನವರ, ಆದರ್ಶ ಶೆಟ್ಟಿ, ರಾಘವೇಂದ್ರ ಹಾನಗಲ್, ರಾಜ ಕುಮಾರ ಜೋಗಪ್ಪನವರ ಸೇರಿದಂತೆ ಇನ್ನೂ ಹಲವರು ಇದ್ದರು.



ಕೆಲಸದ ಸಮಯ ಬದಲಾವಣೆಗೆ ಒತ್ತಾಯ



ಹಾವೇರಿ: ಬೇಸಿಗೆಯಲ್ಲಿ ಜಿಲ್ಲೆಯಲ್ಲಿ ಬಿಸಿಲಿನ ತಾಪ ಹೆಚ್ಚಾಗಿದ್ದು ಜಿಲ್ಲೆಯ ಸರ್ಕಾರಿ ಕಚೇರಿಗಳು ಹಾಗೂ ಶಾಲಾ ಕಾಲೇಜುಗಳ ಕೆಲಸದ ಸಮಯ ಬದಲಾವಣೆ ಮಾಡಿಸುವಂತೆ ಒತ್ತಾಯಿಸಿ ರಾಜ್ಯ ಸರ್ಕಾರಿ ನೌಕರರ ಸಂಘ ಜಿಲ್ಲಾ ಘಟಕದ ಪದಾಧಿಕಾರಿಗಳು ಇಲ್ಲಿಯ ಜಿಲ್ಲಾಡಳಿತ ಭವನದಲ್ಲಿ ಜಿಲ್ಲಾಧಿಕಾರಿ ಡಾ.ವಿಜಯಮಹಾಂತೇಶ ದಾನಮ್ಮನವರ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ಈ ವೇಳೆ ಮಾತನಾಡಿದ ಸಂಘದ ಜಿಲ್ಲಾಧ್ಯಕ್ಷ ಮಲ್ಲೇಶ ಕರಿಗಾರ, ಬೇಸಿಗೆಯ ಬಿಸಿಲಿನ ತಾಪ ದಿನೇದಿನೇ ಹೆಚ್ಚುತ್ತಿರುವ ಕಾರಣ ಉತ್ತರ ಕರ್ನಾಟಕದ ಕಲಬುರಗಿ ವಿಭಾಗ ಹಾಗೂ ಬೆಳಗಾವಿ ವಿಭಾಗದ ಬಿಜಾಪೂರ ಮತ್ತು ಬಾಗಲಕೋಟೆ ಜಿಲ್ಲೆಗಳಲ್ಲಿ ನೆಗೋಷಿಯೇಬಲ್ ಇನ್‌ಸ್ಟ್ರೂಮೆಂಟ್ ಆ್ಯಕ್ಟ್ ಅಡಿಯಲ್ಲಿ ಕಚೇರಿ ಸಮಯವನ್ನು ಬೆಳಗ್ಗೆ 10ರಿಂದ ಸಂಜೆ 5.30ರ ಬದಲಾಗಿ ಬೆಳಗ್ಗೆ 8ರಿಂದ ಮಧ್ಯಾಹ್ನ 1.30ರ ವರೆಗೆ ಬದಲಾವಣೆ ಮಾಡಿ ಪ್ರತಿವರ್ಷ ರಾಜ್ಯ ಸರ್ಕಾರದಿಂದ ಆದೇಶ ಹೊರಡಿಸಲಾಗುತ್ತಿದೆ.

ಉತ್ತರ ಕರ್ನಾಟಕದ ಬೆಳಗಾವಿ ವಿಭಾಗದ ಹಾವೇರಿ ಜಿಲ್ಲೆಯಲ್ಲೂ ಬಿಸಿಲಿನ ತಾಪ 37ರಿಂದ 42 ಡಿಗ್ರಿ ಸೆಲ್ಸಿಯಸ್‌ವರೆಗೆ ಇರುವ ಬಗ್ಗೆ ಹವಾಮಾನ ಇಲಾಖೆ ಮುನ್ಸೂಚನೆ ನೀಡಿರುವುದರಿಂದ ಸಾರ್ವಜನಿಕರು ಮಧ್ಯಾಹ್ನದ ಅವಧಿಯಲ್ಲಿ ಕಚೇರಿಗಳಿಗೆ ಬರಲು, ಹೋಗಲು ಮತ್ತು ಸರ್ಕಾರಿ ನೌಕರರು ಮಧ್ಯಾಹ್ನದ ಅವಧಿಯಲ್ಲಿ ಕರ್ತವ್ಯ ನಿರ್ವಹಿಸುವುದು ಕಷ್ಟವಾಗುತ್ತಿದೆ. ಸಾರ್ವಜನಿಕರು, ವಯೋವೃದ್ಧರು ತಮ್ಮ ಕೆಲಸ ಕಾರ್ಯಗಳಿಗೆ ಕಚೇರಿಗಳಿಗೆ ಮಧ್ಯಾಹ್ನದ ಅವಯಲ್ಲಿ ಭೇಟಿ ನೀಡುವುದು ಬಹಳ ತೊಂದರೆಯಾಗುತ್ತಿದೆ ಎಂದರು.

ರಕ್ತದೊತ್ತಡ, ಮಧುಮೇಹ ಇರುವ ಹಲವಾರು ಸಾರ್ವಜನಿಕರು, ಸರ್ಕಾರಿ ನೌಕರರು ಹಾಗೂ ಮಹಿಳಾ ಸಿಬ್ಬಂದಿಗಳ ಆರೋಗ್ಯದ ಹಿತದೃಷ್ಟಿಯಿಂದ ಪ್ರತಿ ವರ್ಷ ಕಲಬುರಗಿ ವಿಭಾಗದಂತೆ ಹಾವೇರಿ ಜಿಲ್ಲೆಯಲ್ಲಿಯೂ ಸಹ ಏ.1ರಿಂದ ಮೇ.31ರವರೆಗೆ ನೆಗೋಷಿಯೇಬಲ್ ಇನ್‌ಸ್ಟ್ರೂಮೆಂಟ್‌ಆಕ್ಟ್ ಅಡಿಯಲ್ಲಿ ಕಚೇರಿ-ಶಾಲಾ ಕಾಲೇಜುಗಳ ಕರ್ತವ್ಯದ ಸಮಯವನ್ನು ಬೆಳಗ್ಗೆ 8ರಿಂದ ಮಧ್ಯಾಹ್ನ 1.30ಕ್ಕೆ ಬದಲಾವಣೆ ಮಾಡಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಬೇಕೆಂದು ಒತ್ತಾಯಿಸಿ ಮನವಿ ಸಲ್ಲಿಸಿದರು.

ಸಂಘದ ರಾಜ್ಯ ಸಮಿತಿ ಸದಸ್ಯ ಮುನೀಶ್ವರ ಚೂರಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಜಿ.ಎಸ್. ಪಾಟೀಲ, ಖಜಾನೆ ಇಲಾಖೆ ನಿರ್ದೇಶಕ ಸುರೇಶ ಜಿ., ಆರ್‌ಟಿಒ ಇಲಾಖೆಯ ಶ್ರೀಪಾದ ಬ್ಯಾಳಿ, ಸಂಘದ ಖಜಾಂಚಿ ದಾವಲಸಾಬ ಕಮಗಾಲ ಸೇರಿದಂತೆ ಅನೇಕ ಪದಾಧಿಕಾರಿಗಳು ಹಾಜರಿದ್ದರು.

ಡಾ.ಅಂಬೇಡ್ಕರರ ತತ್ವಾದರ್ಶ ಅಳವಡಿಸಿಕೊಳ್ಳಿ

ಬ್ಯಾಡಗಿ: ಶೋಷಿತ ಹಾಗೂ ದುರ್ಬಲ ವರ್ಗದವರಿಗೆ ಮಾನವ ಹಕ್ಕುಗಳನ್ನು ಒದಗಿಸಿದ ಶ್ರೇಯಸ್ಸು ಸಂವಿಧಾನಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವರಿಗೆ ಸಲ್ಲುತ್ತದೆ ಎಂದು ಕೆಡಿಪಿ ಸದಸ್ಯೆ ಪ್ರೇಮಾ ಜೋಗುಳ ಹೇಳಿದರು.

ಅವರು ತಾಲೂಕಿನ ಕಾಗಿನೆಲೆ ಗ್ರಾಮದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಜಯಂತಿ ಉದ್ಘಾಟಿಸಿ ಅವರು ಮಾತನಾಡಿ, ಸಾಮಾಜಿಕ ಸಮಾನತೆಗಾಗಿ ಹೋರಾಡಿದ ಮಹಾನ್ ನಾಯಕ. ಶ್ರೇಷ್ಠ ಅರ್ಥಶಾಸ್ತ್ರಜ್ಞ. ಸಮಾಜ ಸುಧಾರಕ. ವಿಶ್ವರತ್ನ. ಮಹಾಮಾನವತಾವಾದಿ ಹಾಗೂ ಸಂವಿಧಾನ ಶಿಲ್ಪಿ. ಅವರ ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕೆಂದರು.

ಸಮಾಜ ಸೇವಕ ಮಾಲತೇಶ ಕಟ್ಟಿಮನಿ ಮಾತನಾಡಿ, ಮೌಢ್ಯತೆಯನ್ನು ತೊಲಗಿಸಲು ಶಿಕ್ಷಣವು ಪ್ರಬಲ ಅಸ್ತ್ರವಾಗಬೇಕೆಂದು ಪ್ರತಿಪಾದಿಸಿದ್ದ ಅಂಬೇಡ್ಕರ್ ಅವರು ಶಿಕ್ಷಣಕ್ಕೆ ಹೆಚ್ಚಿನ ಪ್ರಾಧಾನ್ಯತೆ ನೀಡಿದ್ದರು. ಮನುಷ್ಯ ಚಿರಂಜೀವಿಯಾಗಲಾರ. ಆದರೆ ಆತನ ಚಿಂತನೆಗಳು ಶಾಶ್ವತವಾಗಿ ಉಳಿಯುತ್ತವೆ. ಗಿಡಕ್ಕೆ ನೀರು ಎಷ್ಟು ಮುಖ್ಯವೋ ಅದೇ ರೀತಿಯಾಗಿ ಒಂದು ಚಿಂತನೆಯು ಸಮಾಜದಲ್ಲಿ ಪ್ರಸರಣವಾಗುವುದು ಕೂಡ ಅಷ್ಟೇ ಮುಖ್ಯ. ಈ ನಿಟ್ಟಿನಲ್ಲಿ ಅಂಬೇಡ್ಕರ್ ಅವರ ಜೀವನ, ಧ್ಯೇಯಗಳು, ಚಿಂತನೆಗಳು ನಮಗೆ ಆದರ್ಶವಾಗಬೇಕು. ಅವು ಅದಮ್ಯ ಚೇತನಗಳೂ ಆಗಿವೆ. ಇದನ್ನು ಯುವ ಪೀಳಿಗೆ ಅರಿತುಕೊಂಡು ಆದರ್ಶ ಪಥದಲ್ಲಿ ನಡೆಯಬೇಕು ಎಂದು ಸಲಹೆ ನೀಡಿದರು.

ಕಂಡಪ್ಪ ಪವಾರ್ ಶರಣ ಪಾಟೀಲ್ ಮೈಲಾರಪ್ಪ ಪವಾರ್ ಮಲ್ಲಮ್ಮ ನಿಸಾರ್ ಸೇರಿದಂತೆ ಇತರರಿದ್ದರು.



ಸಮರ್ಪಕ ಪೂರೈಕೆಯಾಗದ ಇಂಧನ: ಗ್ರಾಹಕರಲ್ಲಿ ಗೊಂದಲ ಸೃಷ್ಟಿ



ದಾಂಡೇಲಿ: ನಗರದಲ್ಲಿ ಮೂರು ಪೆಟ್ರೋಲ್ ಬಂಕ್‌ಗಳಿದ್ದು, ಇತ್ತೀಚಿನ ಕೆಲವು ದಿನಗಳಿಂದ ಸಮರ್ಪಕ ರೀತಿಯಲ್ಲಿ ಇಂಧನ ಪೂರೈಕೆಯಾಗದೆ ಇರುವುದರಿಂದ ಸೇವೆಯಲ್ಲಿ ವ್ಯತ್ಯಯವಾಗಲು ಆರಂಭವಾಗಿದೆ.

ಮಧ್ಯಪ್ರಾಚ್ಯ ರಾಷ್ಟ್ರಗಳಲ್ಲಿ ನಡೆಯುತ್ತಿರುವ ಯುದ್ಧದಿಂದಾಗಿ ಈ ಸಮಸ್ಯೆ ತಲೆದೋರಿದೆ ಎಂದು ಹೇಳಲಾಗುತ್ತಿದೆ. ಈ ಹಿಂದಿನ ದಿನಗಳಲ್ಲಿ ಪೆಟ್ರೋಲ್ ಬಂಕ್ ಗಳಿಗೆ ಇಂಧನ ಬುಕ್ ಮಾಡಿ, ಒಂದು ದಿನದ ಬಳಿಕ ಇಂಧನ ಸರಬರಾಜಾಗುತ್ತಿತ್ತು. ಆದರೆ ಇತ್ತೀಚಿನ ಕೆಲದಿನಗಳಿಂದ ಬುಕ್ ಮಾಡಿ ಮೂರ್ನಾಲ್ಕು ದಿನಗಳ ನಂತರ ಇಂಧನ ಸರಬರಾಜಾಗುತ್ತಿದೆ ಎಂಬ ಮಾಹಿತಿ ಲಭ್ಯವಾಗಿದೆ.

ಬುಧವಾರ ಬೆಳಗ್ಗೆ 11 ಗಂಟೆಯಿಂದ ನಗರದ ಇಂಡಿಯನ್ ಆಯಿಲ್ ಬಂಕ್ ನಲ್ಲಿ ಪೆಟ್ರೋಲ್ ಖಾಲಿಯಾಗಿ, ಡೀಸೆಲ್ ನೀಡುವ ಕಾರ್ಯ ಮುಂದುವರೆದಿತ್ತು. ಆದರೆ ಭಾರತ್ ಪೆಟ್ರೋಲಿಯಂ ಮತ್ತು ಎಚ್.ಪಿ ಬಂಕಿನಲ್ಲಿ ಸದ್ಯಕ್ಕೆ ಪೆಟ್ರೋಲ್ ಮತ್ತು ಡಿಸೆಲ್ ನೀಡಲಾಗುತ್ತಿದೆ. ಹಾಗಾಗಿ ಭಾರತ್ ಪೆಟ್ರೋಲಿಯಂ ಮತ್ತು ಎಚ್ ಪಿ ಬಂಕಿನಲ್ಲಿ ಪೆಟ್ರೋಲ್ ಗಾಗಿ ಹೆಚ್ಚಿನ ಸಂಖ್ಯೆಯಲ್ಲಿ ವಾಹನಗಳು ಸರತಿಯ ಸಾಲಿನಲ್ಲಿ ನಿಂತಿರುವುದು ಕಂಡುಬಂದಿತ್ತು. ಎಂತಹದ್ದೇ ಕಠಿಣ ಪರಿಸ್ಥಿತಿಯಲ್ಲಿಯೂ ದಾಂಡೇಲಿಯ ಇಂಡಿಯನ್ ಆಯಿಲ್ ಬಂಕ್ ನಲ್ಲಿ ಯಾವತ್ತೂ ಪೆಟ್ರೋಲ್ ಆಗಲಿ ಡಿಸೆಲ್ ಆಗಲಿ ಖಾಲಿಯಾಗಿರುವ ಸ್ಥಿತಿ ಬಂದಿರಲಿಲ್ಲ. ಆದರೆ ಇಂದು ಪೆಟ್ರೋಲ್ ಖಾಲಿ ಆಗುವ ಮೂಲಕ ಪೆಟ್ರೋಲ್ ಪೂರೈಕೆಯ ಸೇವೆ ನೀಡಲು ಅಸಾಧ್ಯವಾಗಿತ್ತು.

ಸಮಯಕ್ಕೆ ಸರಿಯಾಗಿ ಇಂಧನ ಪೂರೈಕೆಯಾಗದೇ ಇರುವುದರಿಂದ ಗ್ರಾಹಕರಿಗೆ ಸಮರ್ಪಕ ಸೇವೆ ನೀಡಲು ತಕ್ಕಮಟ್ಟಿಗೆ ತೊಂದರೆಯಾಗುವಂತಾಗಿದೆ. ಇದರಿಂದ ಸಾರ್ವಜನಿಕರು ಹಾಗೂ ಗ್ರಾಹಕರು ಗೊಂದಲಕ್ಕೆ ಒಳಗಾದಂತೆ ಕಂಡುಬರುತ್ತಿದೆ.

ಅನಧಿಕೃತ ರಸಗೊಬ್ಬರ ಮಾರಾಟ ಕಂಡುಬಂದರೆ ತಿಳಿಸಿ: ಕಮ್ಮಾರ

ಬ್ಯಾಡಗಿ: ಕೃಷಿಯಲ್ಲಿ ರಾಸಾಯನಿಕ ಗೊಬ್ಬರದ ಬಳಕೆ ಹೆಚ್ಚುತ್ತಿದ್ದು ರೈತರು ವಿವೇಚನೆಯಿಂದ ಸಮಗ್ರವಾಗಿ ಸಮತೋಲಿತ ರಸಗೊಬ್ಬರಗಳ ಬಳಕೆ ಮಾಡಬೇಕು ಎಂದು ಸಹಾಯಕ ಕೃಷಿ ನಿರ್ದೇಶಕ ಗಣೇಶ್ ಕಮ್ಮಾರ ತಿಳಿಸಿದರು.

ತಾಲೂಕಿನ ಬನ್ನಿಹಟ್ಟಿ ಗ್ರಾಪಂಯಲ್ಲಿ ಗುರುವಾರ ಆಯೋಜಿಸಿದ್ದ ಧರ್ತಿ ಮಾತಾ ಬಚಾವೋ ಸಮಿತಿ (ಭೂಮಿ ತಾಯಿ ರಕ್ಷಣೆ ಕಣ್ಗಾವಲು ಸಮಿತಿ) ಸಭೆ ಉದ್ದೇಶಿಸಿ ಮಾತನಾಡಿದ ಅವರು, ರಾಸಾಯನಿಕ ಗೊಬ್ಬರವನ್ನು ವಿಶೇಷವಾಗಿ ಕೈಗಾರಿಕೆಗಳಿಗೆ ಮತ್ತು ತಾಲೂಕಿನ ಗಡಿಯುದ್ದಕ್ಕೂ ಅಕ್ರಮವಾಗಿ ವರ್ಗಾಯಿಸುವ ವಿಷಯದ ಬಗ್ಗೆ ತಳಮಟ್ಟದಲ್ಲಿ ಕಣ್ಗಾವಲು ಮತ್ತು ಕ್ರಮಗಳ ಅಗತ್ಯವಿದೆ. ಈ ಸವಾಲುಗಳನ್ನು ಎದುರಿಸಲು ಎಲ್ಲಾ ಗ್ರಾಪಂ ಮಟ್ಟದಲ್ಲಿ ಧರ್ತಿ ಮಾತಾ ಬಚಾವೋ ಸಮಿತಿ ರಚಿಸಲಾಗಿದೆ. ಗಡಿಯಾಚೆಗಿನ ರಸಗೊಬ್ಬರ ಸಾಗಣೆ ಅಥವಾ ಅನಧಿಕೃತ ರಸಗೊಬ್ಬರ ಮಾರಾಟ ಚಟುವಟಿಕೆಗಳು ಕಂಡುಬಂದರೆ ಸಮಿತಿಯು ಗ್ರಾಪಂ ಅಥವಾ ತಾಲೂಕು ಮಟ್ಟದ ಕಚೇರಿಗೆ ತಿಳಿಸಬೇಕು ಎಂದರು.

2026-27ರ ಮುಂಗಾರು ಹಂಗಾಮಿನ ಹಿನ್ನೆಲೆಯಲ್ಲಿ ಯೂರಿಯಾ ಬಳಕೆಯನ್ನು ನಿಯಂತ್ರಿಸಲು ಕೃಷಿ ಇಲಾಖೆ ಹೊಸ ಮಾರ್ಗಸೂಚಿ ಜಾರಿಗೊಳಿಸಿದೆ. ಅದರಂತೆ ಪ್ರತಿ ಎಕರೆಗೆ ತಿಂಗಳಿಗೆ ಕೇವಲ ಒಂದು ಚೀಲ ಯೂರಿಯಾ ಮಾತ್ರ ವಿತರಿಸಲಾಗುವುದು ಎಂದು ಸಹಾಯಕ ಕೃಷಿ ನಿರ್ದೇಶಕ ಗಣೇಶ್ ಕಮ್ಮಾರ್ ತಿಳಿಸಿದ್ದಾರೆ.



ಎಫ್‌ಐಡಿ ಹೊಂದಿರದ ರೈತರು ತಕ್ಷಣ ರೈತ ಸಂಪರ್ಕ ಕೇಂದ್ರ ಅಥವಾ ತೋಟಗಾರಿಕೆ ಇಲಾಖೆಯಲ್ಲಿ ನೋಂದಣಿ ಮಾಡಿಕೊಳ್ಳುವಂತೆ ಸೂಚಿಸಲಾಗಿದೆ. ಕೃಷಿ ಪರಿಕರ ಮಾರಾಟಗಾರರು ಆಧಾರ್ ಪರಿಶೀಲನೆಯಿಲ್ಲದೆ ಗೊಬ್ಬರ ನೀಡಬಾರದು ಹಾಗೂ ರೈತರಿಗೆ ಬಿಲ್ ನೀಡುವುದು ಕಡ್ಡಾಯವಾಗಿದೆ. ಜೊತೆಗೆ ಅಂಗಡಿಗಳಲ್ಲಿ ದಾಸ್ತಾನು ಹಾಗೂ ಪರವಾನಗಿ ವಿವರಗಳನ್ನು ಸ್ಪಷ್ಟವಾಗಿ ಪ್ರದರ್ಶಿಸುವಂತೆ ಸೂಚಿಸಲಾಗಿದೆ.

ಅನಧಿಕೃತವಾಗಿ ಮನೆಬಾಗಿಲಿಗೆ ಬರುವವರಿಂದ ಕೃಷಿ ಪರಿಕರಗಳನ್ನು ಖರೀದಿಸಬಾರದು. ಬ್ಯಾಡಗಿ ತಾಲೂಕಿಗೆ 6500 ಮೆ.ಟನ್ ಯೂರಿಯಾ, 2500ಮೆ.ಟನ್ ಡಿ.ಎ.ಪಿ, 3500ಮೆ.ಟನ್ ಕಾಂಪ್ಲೆಕ್ಸ್ ರಸಗೊಬ್ಬರಗಳ ಬೇಡಿಕೆ ಇದ್ದು, ಸರ್ಕಾರದಿಂದ ಬೇಡಿಕೆಗೆ ಅನುಸಾರ ರಸಗೊಬ್ಬರ ಸಂಗ್ರಹ ಮಾಡುವುದರಿಂದ ಕೃತಕ ಅಭಾವದ ವದಂತಿಗಳಿಗೆ ಒಳಗಾಗಿ ಅಗತ್ಯಕ್ಕಿಂತ ಹೆಚ್ಚು ರಸಗೊಬ್ಬರ ಸಂಗ್ರಹಿಸಬಾರದು ಎಂದು ಮನವಿ ಮಾಡಲಾಗಿದೆ. ರೈತರು ಒಂದೇ ಸಂಸ್ಥೆ ಅಥವಾ ಒಂದೇ ರಸಗೊಬ್ಬರಕ್ಕೆ ಆದ್ಯತೆ ನೀಡದಿರಿ. ಎಂದರು.

ಸಭೆಯಲ್ಲಿ ಕೃಷಿ ಅಧಿಕಾರಿ ನಾಗರಾಜ ಬನ್ನಿಹಟ್ಟಿ, ಗ್ರಾಪಂ ಅಭಿವೃದ್ಧಿ ಅಧಿಕಾರಿ ವಿದ್ಯಾವತಿ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನಿರ್ವಾಹಕ ಅಧಿಕಾರಿ ಸುಭಾಷ್ ದ್ಯಾಮನಗೌಡರ, ಕೃಷಿ ಇಲಾಖೆ ಆತ್ಮ ಸಿಬ್ಬಂದಿ ಗುಡ್ಡಪ್ಪ ಆರಳಿಕಟ್ಟಿ, ಕೃಷಿ ಸಖಿ ಲಕ್ಷ್ಮಿ ಕೆರೆಕರ ಹಾಗೂ ಗ್ರಾಮದ ರೈತರು ಉಪಸ್ಥಿತರಿದ್ದರು.

ಸಮತೋಲಿತ ರಸಗೊಬ್ಬರ ಬಳಸಿ

ಯೂರಿಯಾ ರಸಗೊಬ್ಬರಕ್ಕೆ ಪರ್ಯಾಯವಾಗಿ ನ್ಯಾನೋ ಯೂರಿಯ ಹಾಗೂ ಡಿಎಪಿ ರಸಗೊಬ್ಬರಕ್ಕೆ ಪರ್ಯಾಯವಾಗಿ ನ್ಯಾನೋ ಡಿ.ಎ.ಪಿ, ಗಂಧಕ ಒದಗಿಸುವ 20:20:0:13 ಹಾಗೂ ಪೊಟ್ಯಾಸಿಯಂ ಒದಗಿಸುವ ಇತರೆ ಸಂಯುಕ್ತ ರಸಗೊಬ್ಬರಗಳಾದ 10:26:26, 15:15:15, 17:17:17, 19:19:19, 12:32:16 ರಸಗೊಬ್ಬರ ಸಮತೋಲಿತವಾಗಿ ಬಳಸಬಹುದಾಗಿದೆ.

ಶಿರಸಿಯ ಸಾಧಕರು, ಕಾವ್ಯ ಕುಸುಮಾಂಜಲಿ ಕೃತಿ ಬಿಡುಗಡೆ

ಶಿರಸಿ: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಶಿರಸಿ ತಾಲೂಕಾ ಘಟಕದ ವತಿಯಿಂದ ಹಿರಿಯ ಸಾಹಿತಿ ವಾಸುದೇವ ಶಾನುಭಾಗ ಅವರ ಶಿರಸಿಯ ಸಾಧಕರು ಹಾಗೂ ಕಾವ್ಯ ಕುಸುಮಾಂಜಲಿ ಕೃತಿಗಳು ನಗರದ ನೆಮ್ಮದಿ ಕುಟೀರದಲ್ಲಿ ಗುರುವಾರ ಲೋಕಾರ್ಪಣೆ ಗೊಂಡಿತು.

ಶಿರಸಿ ಸಾಧಕರು ಕೃತಿಯನ್ನು ಬಿಡುಗಡೆ ಗೊಳಿಸಿ ಮಾತನಾಡಿದ ಹಿರಿಯ ಪತ್ರಕರ್ತ ಜಯರಾಮ ಹೆಗಡೆ, ವಾಸುದೇವ ಶಾನುಭಾಗ ಅವರ ಪುಸ್ತಕ ಲೋಕಾರ್ಪಣೆ ಗೊಳಿಸಿರುವುದು ನನಗೆ ಸಂತಸ ತಂದಿದೆ. ಶಿರಸಿಯಲ್ಲಿರುವ ಸಾಧಕರನ್ನು ಗುರುತಿಸಿ ಅದನ್ನು ಜನರಿಗೆ ತಿಳಿಸುವ ಕೆಲಸವನ್ನು ವಾಸುದೇವ ಶಾನುಭಾಗ ಅವರು ಬಹಳ ಶ್ರದ್ಧೆಯಿಂದ ಮಾಡಿದ್ದಾರೆ ಎಂದರು.

ಕಾವ್ಯಕುಸುಮಾಂಜಲಿ ಕೃತಿಯನ್ನು ಬಿಡುಗಡೆ ಗೊಳಿಸಿ ಮಾತನಾಡಿದ ಹಿರಿಯ ಸಾಹಿತಿ ಭಾಗೀರಥಿ ಹೆಗಡೆ,

ಮಾತೃಭಾಷೆ ಕೊಂಕಣಿ ಮಾಡಿದ್ದರೂ ಕನ್ನಡದಲ್ಲಿ ಹಲವು ಪುಸ್ತಕಗಳನ್ನು ವಾಸುದೇವ ಶಾನುಭಾಗ ಅವರು ಬರೆದಿದ್ದಾರೆ. ಕಾವ್ಯ ಕುಸುಮಾಂಜಲಿ ಕೃತಿಯು ಬಹಳ ಸುಂದರವಾಗಿ ಮೂಡಿ ಬಂದಿದೆ. ಯಾವುದನ್ನೇ ಬರೆದರೂ ಅದರಲ್ಲಿ ಕಾವ್ಯ ಸಂಯೋಜನೆ ಇರಬೇಕು.ತನಗೆ ಹಿತವಾಗಿ ಇತರರಿಗೆ ನೋವಾಗದಂತೆ ಬದುಕಬೇಕು ಎಂದರು.

ಹಿರಿಯ ಪತ್ರಕರ್ತ ಹಾಗೂ ಸಾಹಿತಿ ಅಶೋಕ ಹಾಸ್ಯಗಾರ ಆಶಯ ನುಡಿಗಳನ್ನಾಡಿದರು.

ಕಸಾಪ ಶಿರಸಿ ಘಟಕದ ಅಧ್ಯಕ್ಷ ಜಿ.ಸುಬ್ರಾಯ ಭಟ್ ಬಕ್ಕಳ ಅಧ್ಯಕ್ಷತೆ ವಹಿಸಿದ್ದರು.

ಕವಿ ಕೃಷ್ಣ ಪದಕಿ, ಹಾಗೂ ಬರಹಗಾರ ಗಣಪತಿ ಭಟ್ ವರ್ಗಾಸರ ಕೃತಿಯನ್ನು ಪರಿಚಯಿಸಿದರು.

ಸಾಹಿತಿ ಜಿ.ಎ ಹೆಗಡೆ ಸೋಂದಾ, ಹಿರಿಯ ಪತ್ರಕರ್ತ ಶ್ರೀಧರ ಮಂಗಳೂರು ಸೇರಿದಂತೆ ಹಲವರು ಇದ್ದರು.

ಪ್ರೋ.ಕೆ.ಎನ್ ಹೊಸ್ಮನಿ ನಿರ್ವಹಿಸಿದರು. ಶೀಲಾ ಶಾನಭಾಗ ಹಾಗೂ ಶ್ರೀದೇವಿ ಕಿಣಿ ಪ್ರಾರ್ಥಿಸಿದರು. ಕಸಾಪ ಶಿರಸಿ ಘಟಕದ ಗೌರವ ಕೋಶಾಧ್ಯಕ್ಷ ವಿ.ಆರ್.ಹೆಗಡೆ ಮತ್ತೀಘಟ್ಟ ಸ್ವಾಗತಿಸಿದರು.

ಇತ್ತೀಚೆಗೆ ಅಗಲಿದ ಸ್ವಾತಂತ್ರ್ಯ ಹೋರಾಟಗಾರ ಕಾಶಿನಾಥ ಮೂಡಿ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಲಾಯಿತು.



ಕಿರುಸುದ್ದಿ

ದ್ವಿತೀಯ ಪಿಯು: ಶೇ. 90.6 ಫಲಿತಾಂಶ



◆**ಗೋಕಾಕ:** ತಾಲೂಕಿನ ಉರುಬಿನಹಟ್ಟಿಯ ಸರ್ಕಾರಿ ಪದವಿ ಪೂರ್ವ ಮಹಾವಿದ್ಯಾಲಯ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಶೇ. 90.6 ಫಲಿತಾಂಶ ಪಡೆದಿದೆ. ಕಲಾ ವಿಭಾಗದಲ್ಲಿ ರೇವತಿ ಪಾಟೀಲ 93% ಪ್ರಥಮ ಸ್ಥಾನ, ಸಂಗೀತಾ ಬೋರಜ್ಜಗೋಳ 90.16 ದ್ವಿತೀಯ, ಸಾವಿತ್ರಿ ಬೆಕ್ಕನವರ 89.33 ತೃತೀಯ ಸ್ಥಾನ ಪಡೆದಿದ್ದಾರೆ. ಏಳು ವಿದ್ಯಾರ್ಥಿಗಳು ಡಿಸ್ಟಿಂಕ್ಷನ ಪಡೆದಿದ್ದು 16 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿದ್ದಾರೆ.

ಸಿಬಿಎಸ್‌ಇಯಲ್ಲಿ ಶೇ. 100 ಫಲಿತಾಂಶ



◆**ಚಿಕ್ಕೋಡಿ:** ನಿಪ್ಪಾಣಿ ತಾಲೂಕಿನ ಬೋರಗಾಂವ ಪಟ್ಟಣದ ಎ ಆರ್ ಡಿ ಸೊಸೈಟಿಯ ಆರ್ ಎ ಪಾಟೀಲ ಪಬ್ಲಿಕ್ ಶಾಲೆಗೆ 10ನೇ ತರಗತಿಯ ಸಿಬಿಎಸ್‌ಇ ಪರೀಕ್ಷೆಯಲ್ಲಿ ಶೇ.100ರಷ್ಟು ಫಲಿತಾಂಶ ಪಡೆದಿದೆ. 34 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು, ಅತ್ಯುನ್ನತ ಶ್ರೇಣಿಯಲ್ಲಿ 16, ಪ್ರಥಮ ಶ್ರೇಣಿಯಲ್ಲಿ 14, ದ್ವಿತೀಯ ಶ್ರೇಣಿಯಲ್ಲಿ 4 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಸಕ್ಷಮ ಪಾಟೀಲ ಶೇ. 94.2, ಸ್ಥವನ ಪಾಟೀಲ ಶೇ. 93.6, ಅಕ್ಷಯ ಅಮ್ಮಣ್ಣವರ ಶೇ. 91.2 ಪಡೆದುಕೊಂಡು ಶಾಲೆಗೆ ಕೀರ್ತಿ ತಂದಿದ್ದಾರೆ. ಶಾಲೆಯ ಅಧ್ಯಕ್ಷ ಉತ್ತಮ ಪಾಟೀಲ, ನಿರ್ದೇಶಕಿ ಮೀನಾಕ್ಷಿ ಪಾಟೀಲ, ಉದ್ಯಮಿ ಅಭಿನಂದನ ಪಾಟೀಲ, ಶಿಕ್ಷಕರು ಹಾಗೂ ಸಿಬ್ಬಂದಿ ವರ್ಗ ವಿದ್ಯಾರ್ಥಿಗಳ ಸಾಧನೆಯನ್ನು ಅಭಿನಂದಿಸಿದ್ದಾರೆ.

ಇಂದು ತತ್ವಪದಗಳ ಭಜನಾ ಕಾರ್ಯಕ್ರಮ

◆**ಯರಗಟ್ಟಿ:** ಪಟ್ಟಣದ ಮರಡಿ ಬಸವೇಶ್ವರ ಜಾತ್ರಾ ಮಹೋತ್ಸವದ ನಿಮಿತ್ತ ಏ.17ರಂದು ಶುಕ್ರವಾರ ರಾತ್ರಿ 8ಗಂಟೆಗೆ ಬಸವೇಶ್ವರ ದೇವಸ್ಥಾನದ ಆವರಣದಲ್ಲಿ ಶೆರೆವಾಡದ ಬಸವೇಶ್ವರ ಭಜನಾ ಮಂಡಳಿ ಹಾಗೂ ಕನಕೂರ ರಾಮಲಿಂಗೇಶ್ವರ ಭಜನಾ ಮಂಡಳಿ ಇವರಿಂದ ತತ್ವಪದಗಳ ಭಜನಾ ಕಾರ್ಯಕ್ರಮ ಹಮ್ಮಿಕೊಳ್ಳಾಗಿದೆ. ಅಧ್ಯಕ್ಷತೆಯನ್ನು ನಿವೃತ್ತ ಶಿಕ್ಷಕ ಮಹಾದೇವಪ್ಪ ವಾಲಿ, ಉದ್ಘಾಟಕರಾಗಿ ಗಣ್ಯ ವ್ಯಾಪಾರಸ್ಥರಾದ ಸಂತೋಷ ಹಾದಿಮನಿ, ಅತಿಥಿಗಳಾಗಿ ಶ್ರೀಮಠದ ಅಧ್ಯಕ್ಷ ಮಹಾಮತೇಶ ಜಕಾತಿ, ಶಿವಶಂಕರ ಪಟ್ಟೇದ, ರಮೇಶಗೌಡ ದೇವರಡ್ಡಿ, ಶಶಿಕಾಂತ ಹಾದಿಮನಿ, ವಿರೂಪಾಕ್ಷ ಮದ್ದಾಣಿ, ಉಮೇಶ ಇಟ್ನಾಳ, ಬಸಯ್ಯ ಹಿರೇಮಠ ಸೇರಿದಂತೆ ಅನೇಕ ಗಣ್ಯರು ಆಗಮಿಸಲಿದ್ದಾರೆ ಎಂದು ಆಯೋಜಕರು ಪ್ರಕಟಣೆ ಮೂಲಕ ತಿಳಿಸಿದ್ದಾರೆ.

ಏ.20ರಂದು ದೇವಸ್ಥಾನದಲ್ಲಿ ಬಸವ ಜಯಂತಿ

◆**ಗೋಕಾಕ:** ನಗರದ ಶ್ರೀ ಬಸವೇಶ್ವರ ದೇವಸ್ಥಾನ ಟ್ರಸ್ಟ ಕಮಿಟಿ, ಬಸವ ಸಮಿತಿ ಹಾಗೂ ಬಸವ ಮಂದಿರ ಸತ್ಸಂಗ ಸಮಿತಿ ಸಂಯುಕ್ತ ಆಶ್ರಯದಲ್ಲಿ ಇಲ್ಲಿಯ ಶ್ರೀ ಮುರುಘರಾಜೇಂದ್ರ ಮಹಾಸ್ವಾಮಿಗಳ ಹಾಗೂ ರಾಚೋಟೇಶ್ವರ ಮಹಾಸ್ವಾಮಿಗಳವರ ನೇತೃತ್ವದಲ್ಲಿ ಏ.20ರಂದು ಕಿಲ್ಲಾದ ಶ್ರೀ ಬಸವೇಶ್ವರ ದೇವಸ್ಥಾನದಲ್ಲಿ ವಿಶ್ವಗುರು ಬಸವಣ್ಣನವರ ಜಯಂತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಏ.20ರಂದು ಬೆಳಿಗ್ಗೆ ಬಸವೇಶ್ವರ ಮೂರ್ತಿಗೆ ರುದ್ರಾಭಿಷೇಕ, ದೇವಸ್ಥಾನದಲ್ಲಿ ಷಟಸ್ಥಲ ಧ್ವಜಾರೋಹಣ ಹಾಗೂ ಶ್ರೀ ಮಹಾಲಿಂಗೇಶ್ವರ ಭಜನಾ ಮಂಡಳಿಯವರಿಂದ ಭಜನೆ ನಡೆಯುವುದು. 9.30ಕ್ಕೆ ಬಸವೇಶ್ವರ ವೃತ್ತದಲ್ಲಿ ಷಟಸ್ಥಲ ಧ್ವಜಾರೋಹಣ, ಸರ್ಕಾರಿ ಆಸ್ಪತ್ರೆಯಲ್ಲಿ ರೋಗಿಗಳಿಗೆ ಹಣ್ಣು ಹಂಪಲು ವಿತರಣೆ ಮಾಡಲಾಗುವದು. ಮಧ್ಯಾಹ್ನ 11ಗಂಟೆಗೆ ದೇವಸ್ಥಾನದಲ್ಲಿ ಬಸವೇಶ್ವರರ ನಾಮಕರಣ ಹಾಗೂ ಮುತ್ತೈದೆಯರಿಗೆ ಉಡಿ ತುಂಬುವ ಕಾರ್ಯಕ್ರಮ ನಡೆಯಲಿದೆ. ಸಂಜೆ 5ಗಂಟೆಗೆ ನಗರದ ಪ್ರಮುಖ ಬೀದಿಗಳಲ್ಲಿ ಸಕಲವಾದ್ಯ ಮೇಳ ಬಸವೇಶ್ವರರ ಭಾವಚಿತ್ರದೊಂದಿಗೆ ಪಲ್ಲಕ್ಕಿ ಉತ್ಸವ ಜರುಗುವದೆಂದು ಶ್ರೀ ಬಸವೇಶ್ವರ ದೇವಸ್ಥಾನ ಟ್ರಸ್ಟ ಕಮಿಟಿ ಅಧ್ಯಕ್ಷ ಎಸ್ ಬಿ ಮಗದುಮ ತಿಳಿಸಿದ್ದಾರೆ.



ಯಮಕನಮರಡಿ: ಸ್ಥಳೀಯ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಅವರ 135ನೇ ಜಯಂತಿ ಆಚರಿಸಲಾಯಿತು. ಎಸ್.ಆರ್. ತಬರಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಪ್ರಾಚಾರ್ಯ ಎಸ್.ಎ. ರಾಮನಕಟ್ಟಿ, ಕಿವಂಡಾ, ಎಸ್. ಬಿ. ಬಲ್ಲೂರಕರ್, ಬಿ.ಬಿ.ಕೊಡ್ಲಿ, ಎಸ್.ಆರ್. ಹೊನ್ನರಗಿ, ಎಸ್.ಎಸ್. ಹೊಳಾಪಗೂಳು, ಎಸ್.ಐ.ಗುರವ ಸೇರಿದಂತೆ ಮತ್ತಿತರರು ಇದ್ದರು.

ಅಕ್ಷರ, ಗುರು ಗೌರವಿಸಿ: ಶ್ರೀಗಳು

◆**ತೆಲಸಂಗ:** ಅಕ್ಷರ ಮತ್ತು ಗುರು – ಇವೆರಡನ್ನೂ ಗೌರವಿಸುವ ಸಮಾಜ ಎಂದಿಗೂ ದಾರಿತಪ್ಪಲು ಸಾಧ್ಯವಿಲ್ಲ ಎಂದು ಹಿರೇಮಠದ ವೀರೇಶ್ವರ ದೇವರು ಹೇಳಿದರು. ಬುಧವಾರ ಗ್ರಾಮದ ಮಹಾತ್ಮಾ ಗಾಂಧಿ ಹೈಸ್ಕೂಲ್ ಆವರಣದಲ್ಲಿ 2000–01ನೇ ಸಾಲಿನ ಎಸ್‌ಎಸ್‌ಎಲ್‌ಸಿ ಬ್ಯಾಚ್‌ನ ವಿದ್ಯಾರ್ಥಿಗಳಿಂದ ಆಯೋಜಿಸಲಾಗಿದ್ದ ಗುರುವಂದನಾ ಹಾಗೂ ಸ್ನೇಹ ಸಮ್ಮಿಲನ ಮತ್ತು ಮೀರಾಸಾಬ ಮುಲ್ಲಾ ಸಂಪಾದಕತ್ವದ ಹುಟ್ಟುತ್ತಾ ಹುಲ್ಲು, ಬೆಳೆದಂತೆ ಬಿದಿರು ಎಂಬ ವಿಶೇಷ ಸ್ಮರಣ ಸಂಚಿಕೆ ಬಿಡುಗಡೆ ಸಮಾರಂಭದಲ್ಲಿ ಅವರು ಮಾತನಾಡಿ, 2000–01ರ ಬ್ಯಾಚ್‌ನ ವಿದ್ಯಾರ್ಥಿಗಳು ಕಾಲು ಶತಮಾನದ ನಂತರ ಇಂದು ಇಲ್ಲಿ ಸೇರಿ ತಮ್ಮ ಗುರುಗಳನ್ನು ಗೌರವಿಸುತ್ತಿರುವುದು ಕೇವಲ ಒಂದು ಶಿಷ್ಟಾಚಾರವಲ್ಲ, ಇದು ನಮ್ಮ ಸಂಸ್ಕೃತಿಯ ಪ್ರತಿಬಿಂಬ. ಹುಟ್ಟುತ್ತಾ ಹುಲ್ಲು ಎಂಬಂತೆ ಅಜ್ಞಾನದಲ್ಲಿದ್ದ ನಮಗೆ, ಜ್ಞಾನದ ನೀರೆರೆದು ಬೆಳೆದಂತೆ ಬಿದಿರು ಎಂಬಂತೆ ಬಾಗಿ ನಡೆಯುವ ಸಂಸ್ಕಾರ ಕಲಿಸಿದವರು ಶಿಕ್ಷಕರು ಎಂದರು.ನಿವೃತ್ತ ಪ್ರಾಚಾರ್ಯ ಜಿ.ಎಂ. ಬೈರೋಡಗಿ ಮಾತನಾಡಿದರು.ಎರಡು ದಿನಗಳ ಕಾಲ ನಡೆದ ಈ ಕಾರ್ಯಕ್ರಮದಲ್ಲಿ ಕ್ರೀಡಾಕೂಟ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ಮೇಳೈಸಿದ್ದವು. ಹಳೆಯ ವಿದ್ಯಾರ್ಥಿಗಳು ತಮ್ಮ ಶಾಲಾ ದಿನಗಳನ್ನು ಮೆಲುಕು ಹಾಕುತ್ತಾ, ತಮ್ಮ ನೆಚ್ಚಿನ ಗುರುಗಳಿಗೆ ಭಕ್ತಿಯಿಂದ ನಮಿಸಿ ಸತ್ಕರಿಸಿದರು.ನಿವೃತ್ತ ಶಿಕ್ಷಕ ಈರಪ್ಪ ಇಂಚಗೇರಿ, ಮಹಾದೇವ ನಡುವಿನಕೇರಿ, ಬಸವರಾಜ ಅವಟಿ, ಗಂಗಪ್ಪಾ ಗಂಗಾಧರ, ನಬಿಸಾಹೇಬ ಮುಜಾವರ, ಸೇರಿದಂತೆ ಸಕಲ ಗುರುವೃಂದದವರು ಉಪಸ್ಥಿತರಿದ್ದರು.



ತೆಲಸಂಗ ಗ್ರಾಮದ ಮಹಾತ್ಮಾ ಗಾಂಧಿ ಹೈಸ್ಕೂಲ್ ಆವರಣದಲ್ಲಿ 2000–01ನೇ ಸಾಲಿನ ಎಸ್‌ಎಸ್‌ಎಲ್‌ಸಿ ಬ್ಯಾಚ್‌ನ ವಿದ್ಯಾರ್ಥಿಗಳಿಂದ ಆಯೋಜಿಸಲಾಗಿದ್ದ ಗುರುವಂದನಾ ಹಾಗೂ ಸ್ನೇಹ ಸಮ್ಮಿಲನ ಮತ್ತು ಮೀರಾಸಾಬ ಮುಲ್ಲಾ ಸಂಪಾದಕತ್ವದ ಹುಟ್ಟುತ್ತಾ ಹುಲ್ಲು, ಬೆಳೆದಂತೆ ಬಿದಿರು ಎಂಬ ವಿಶೇಷ ಸ್ಮರಣ ಸಂಚಿಕೆ ಬಿಡುಗಡೆ ಸಮಾರಂಭ ನಡೆಯಿತು.

ಅಧಿಕಾರಿಗಳ ಗೈರಿಗೆ ವ್ಯಾಪಾಕ ಆಕ್ರೋಶ

ಸಭೆ ಬಹಿಷ್ಕರಿಸಿದ ಬಸವಾಭಿಮಾನಿಗಳು

◆**ರಾಮದುರ್ಗ:** ಏ.20 ರಂದು ಆಚರಿಸಲಿರುವ ಕರ್ನಾಟಕದ ಸಾಂಸ್ಕೃತಿಕ ನಾಯಕ, ವಿಶ್ವಗುರು ಬಸವೇಶ್ವರ ಜಯಂತಿಯ ಆಚರಣೆಯ ಪೂರ್ವಭಾವಿ ಸಭೆಗೆ ಕಂದಾಯ ಮತ್ತು ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳನ್ನು ಹೊರತುಪಡಿಸಿ ಇನ್ನುಳಿದ ತಾಲೂಕಾ ಮಟ್ಟದ ಅಧಿಕಾರಿಗಳು ಸಭೆಗೆ ಗೈರಾಗಿದ್ದಕ್ಕೆ ಸಭೆಯನ್ನು ಬಸವಾಭಿಮಾನಿಗಳು ಬಹಿಷ್ಕರಿಸಿ ಹೊರನಡೆದರು.



ಗುರುವಾರ ಬಸವ ಜಯಂತಿಯನ್ನು ತಾಲೂಕು ಮಟ್ಟದಲ್ಲಿ ಆಚರಿಸಲು ತಹಶೀಲ್ದಾರ ಪ್ರಕಾಶ ಹೊಳೆಪ್ಪಗೋಳ ಅಧ್ಯಕ್ಷತೆಯಲ್ಲಿ ತಾಲೂಕಿನ ಲಿಂಗಾಯತ ಸಮಾಜದ ಒಳಪಂಗಡಗಳ ಮತ್ತು ಅಧಿಕಾರಿಗಳ ಸಭೆಯನ್ನು ಕರೆಯಲಾಗಿತ್ತು.

ಸಭೆಗೆ ಲಿಂಗಾಯತ ಸಮಾಜದ ಮುಖಂಡರು ಆಗಮಿಸಿದ್ದರು. ಆದರೆ, ತಹಶೀಲ್ದಾರ್ ನ್ಯಾಯಾಲಯದ ಕೆಲಸದ ನಿಮಿತ್ತ ಗೈರಾಗಿದ್ದರು. ಇನ್ನುಳಿದಂತೆ ತಾಲೂಕಾ ಮಟ್ಟದಲ್ಲಿ ಆಚರಣೆ ಮಾಡುವ ಸಭೆಗೆ ತಾಲೂಕಿನಲ್ಲಿರುವ ಯಾವ ಇಲಾಖೆಯ ಅಧಿಕಾರಿಗಳು ಸಭೆಗೆ ಆಗಮಿಸಿರಲಿಲ್ಲ ಇದನ್ನು ಪ್ರಶ್ನಿಸಿದ ಜಾಗತಿಕ ಲಿಂಗಾಯತ ಮಹಾಸಭಾದ ಪದಾಧಿಕಾರಿಗಳು ಪ್ರತಿ ವರ್ಷ ಬಸವ ಜಯಂತಿ ಸಭೆಗೆ ಅಧಿಕಾರಿಗಳು ಗೈರಾಗುತ್ತಾರೆ ಹೇಳಿದರೆ ಕ್ರಮಮಕೈಗೊಳ್ಳುವದಾಗಿ ಸಭೆ ನಡೆಸಲಾಗುತ್ತದೆ ಅವರ ವಿರುದ್ಧ ಯಾವ ಕ್ರಮವನ್ನು ಕೈಗೊಂಡಿಲ್ಲ ಎಂದು ಆಕ್ರೋಶ ಹೊರ ಹಾಕಿದರು.

ಈ ಸಂದರ್ಭದಲ್ಲಿ ಜಾಗತಿಕ ಲಿಂಗಾಯತ ಮಹಾಸಭೆಯ ಅಧ್ಯಕ್ಷ ಜಿ. ವಿ. ನಾಡಗೌಡ್ರ, ಪ್ರಧಾನ ಕಾರ್ಯದರ್ಶಿ ಎಸ್. ಎಂ.ಸಕ್ರಿ, ಎಸ್ .ಜಿ.ಮಾಳವಾಡ, ಡಾ.ವೈ.ಬಿ.ಕುಲಗೋಡ, ಜಿ.ವಿ.ಬೈಲವಾಡ , ಎಸ್.ಎಸ್.ಸುಲ್ತಾನಪೂರ, ಶಿವಾನಂದ ಚಿಕ್ಕೋಡಿ, ಬಸವರಾಜ ಗಂಗಣ್ಣವರ, ಶಿವಾನಂದ ಮಾಳಿ, ಆರ್. ಜಿ. ವಜ್ಜರಮಟ್ಟಿ, ಎಸ್. ಜಿ. ಚಿಕ್ಕನರಗುಂದ, ಎಸ್. ವಿ. ಕಲ್ಯಾಣಶೆಟ್ಟಿ, ಬಸವರಾಜ ಪಾರಶೆಟ್ಟಿ, ಚಿದಾನಂದ ದೊಡಮನಿ ಸೇರಿದಂತೆ ಬಸವ ಭಕ್ತರು ಇದ್ದರು.

- ಏ.20ರಂದು ಬಸವ ಜಯಂತಿ
- ಪ್ರತಿ ಪೂರ್ವಭಾವಿ ಸಭೆಗೂ ಗೈರಾಗುವ ಅಧಿಕಾರಿಗಳು: ಆರೋಪ
- ಜಾಗತಿಕ ಲಿಂಗಾಯತ ಮಹಾಸಭಾದಿಂದ ವ್ಯಾಪಕ ವಿರೋಧ
- ಕ್ರಮಕ್ಕೆ ಆಗ್ರಹ

» ಸರ್ಕಾರದ ಮಟ್ಟದಲ್ಲಿ ಅದ್ದೂರಿ ಆಚರಣೆಗೆ ವ್ಯವಸ್ಥೆ ಇದ್ದರು ಸಹಿತ ತಾಲೂಕಿನ ಅಧಿಕಾರಿಗಳು ಬೇಜವಾಬ್ದಾರಿಯಿಂದ ವರ್ತಿಸುತ್ತ ವಿಶ್ವಗುರು ಬಸವಣ್ಣನವರಿಗೆ ಅವಮಾನ ಮಾಡುತ್ತಿದ್ದಾರೆ ಎಂದು ಅಸಮಾಧಾನ ಹೊರ ಹಾಕಿ ಸಭೆಯನ್ನು ಶುಕ್ರವಾರ ಕರೆಯುವಂತೆ ಕಂದಾಯ ಇಲಾಖೆಯ ಸಿಬ್ಬಂದಿಗೆ ಒತ್ತಾಯಿಸಿದರು.

ಏ.19ರಂದು ಮೂಲ ಜ್ಯೋತಿರ್ಲಿಂಗ ದರ್ಶನ

◆**ಬೈಲಹೊಂಗಲ:** ಮೂರುಸಾವಿರ ಮಠದ ಸಭಾ ಭವನದಲ್ಲಿ ಏ.19ರಂದು ಬೆಳಿಗ್ಗೆ 8 ರಿಂದ 11 ರವರೆಗೆ ಆರ್ಟ್ ಆಫ್ ಲಿವಿಂಗ್ ಬೆಳಗಾವಿ ವತಿಯಿಂದ ಮೂಲ ಜ್ಯೋತಿರ್ಲಿಂಗ ದರ್ಶನಕ್ಕೆ ಅವಕಾಶ ಕಲ್ಪಿಸಲಾಗುತ್ತಿದೆ. ಈ ಭಾಗದ ಎಲ್ಲ ಜನತೆ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಜ್ಯೋತಿರ್ಲಿಂಗ ದರ್ಶನ ಪಡೆದುಕೊಂಡು ಸಾರ್ಥಕತೆ ಹೊಂದಬೇಕು' ಎಂದು ಮೂರುಸಾವಿರಮಠದ ಪೀಠಾಧಿಪತಿ ಪ್ರಭುನೀಲಕಂಠ ಸ್ವಾಮೀಜಿ ಹೇಳಿದರು.

ನಗರದ ಮೂರುಸಾವಿರಮಠದಲ್ಲಿ ಜ್ಯೋತಿರ್ಲಿಂಗ್ ದರ್ಶನ ಹಾಗೂ ಬಸವ ಜಯಂತಿ ಆಚರಣೆ ಕಾರ್ಯಕ್ರಮ ಪೂರ್ವಭಾವಿ ಸಭೆ ಸಾನ್ನಿಧ್ಯವಹಿಸಿ ಅವರು ಮಾತನಾಡಿದರು.

ದೇಶಾದ್ಯಂತ ಜ್ಯೋತಿರ್ಲಿಂಗ ಸಂಚಾರ ಮಾಡಿ ತಾಲೂಕು ಕೇಂದ್ರವಾಗಿರುವ ಬೈಲಹೊಂಗಲಕ್ಕೂ ಆಗಮಿಸುತ್ತಿರುವುದು ನಮ್ಮ ನಾಡಿನ ಜನತೆಯ ಸೌಭಾಗ್ಯವಾಗಿದೆ ಎಂದರು.

ಏ.20ರಂದು ವಿಶ್ವಗುರು ಬಸವೇಶ್ವರ ಜಯಂತಿ ಆಚರಣೆನಡೆಯಲಿದೆ. ಅಂದು ಬೆಳಗ್ಗೆ 8 ಕ್ಕೆ ಷಟಸ್ಥಲ ಧ್ವಜಾರೋಹಣ, ತೊಟ್ಟಿಲೋತ್ಸವ, ಮಿನಿ ವಿಧಾನ ಸೌಧದ ಪಕ್ಕದ ಬಸವೇಶ್ವರ ಉದ್ಯಾನವನದಬಸವೇಶ್ವರಪುತ್ಥಳಿಗೆಪುಷ್ಪಾರ್ಚನೆ ಮಾಡಿ ಪೂಜೆ ಸಲ್ಲಿಸಲಾಗುವುದು. ಸಂಜೆ 4 ಕ್ಕೆ ಪೂರ್ಣಕುಂಭಮೇಳದೊಂದಿಗೆ ಜೋಡೆತ್ತಿನ ಭವ್ಯ ಮೆರವಣಿಗೆ ನಡೆಸಲಾಗುವುದು. ಮನೆ, ಮನೆ ಎದುರು ರಂಗೋಲಿ ಬಿಡಿಸಿ ಮೆರವಣಿಗೆ ಸ್ವಾಗತಿಸಬೇಕು. ಬಸವ ಜಯಂತಿ ಆಚರಣೆ ಕಾರ್ಯಕ್ರಮವನ್ನು ಎಲ್ಲರೂ ಯಶಸ್ವಿಗೊಳಿಸಬೇಕು' ಎಂದರು.

ಹರ್ಷಾ ಮೆಟಗುಡ್ಡ ಜ್ಯೋತಿರ್ಲಿಂಗ ಆಗಮಿಸುವ ಕುರಿತು ಮಾಹಿತಿ ನೀಡಿದರು. ಮುಖಂಡರಾದ ಶಿವರಂಜನ ಬೋಳನ್ನವರ, ಡಾ.ಎ.ಎನ್.ಬಾಳಿ, ಬಸವರಾಜ ಶಿಂತ್ರಿ, ಮಹೇಶ ಕೋಟಗಿ ಮಾತನಾಡಿದರು.

ವಿಶ್ವಹಿಂದೂ ಪರಿಷತ್ ಜಿಲ್ಲಾ ಘಟಕ ಅಧ್ಯಕ್ಷ ಪ್ರಮೋದಕುಮಾರ ವಕ್ಕುಂದಮಠ, ರಾಯಣ್ಣ ಸಮಿತಿ ಉಪಾಧ್ಯಕ್ಷ ಸೋಮನಾಥ ಸೊಪ್ಪಿಮಠ, ಕಾಂಗ್ರೆಸ್ ಬ್ಲಾಕ್ ಘಟಕ ಅಧ್ಯಕ್ಷ ಮಹಾಂತೇಶ ಕಳ್ಳಿಬಡ್ಡಿ, ವೀರಶೈವ ಲಿಂಗಾಯತ ಮಹಾಸಭಾ ನಿರ್ದೇಶಕ ಗುರು ಮೆಟಗುಡ್ಡ, ಡಾ.ಮಹಾಂತೇಶ ಗದಗ, ಮಹಾಂತೇಶ ಮತ್ತಿಕೊಪ್ಪ, ಶಶಿಧರ ಚಿಕ್ಕೋಡಿ, ಬಸವರಾಜ ಗುರುವನ್ನವರ, ದಯಾನಂದ ಪರಾಳಶೆಟ್ಟರ, ಗೌತಮ ಇಂಚಲ, ಅರ್ಜುನ ಕಲಕುಟಕರ, ಶ್ರೀಶೈಲ ಶರಣಪ್ಪನವರ, ಬಸವರಾಜ ದೊಡಮನಿ, ರವಿ ಹುಲಕುಂದ, ಅನೇಕರು ಇದ್ದರು.



ಬಸವ ಜಯಂತಿ: ಬೈಕ್ ರ‍್ಯಾಲಿ

◆**ಬೆಳಗಾವಿ:** ಬಸವ ಜಯಂತಿ ನಿಮಿತ್ತ ಏ.19ರಂದು ಬೃಹತ್ ಬೈಕ್ ರ‍್ಯಾಲಿ ಬೆಳಗಾವಿ ನಗರದಲ್ಲಿ ಆಯೋಜಿಸಲಾಗಿದೆ ಎಂದು ಬಸವ ಜಯಂತಿ ಉತ್ಸವ–2026 ಸಮಿತಿಯ ಸಂಚಾಲಕ ಬಸವರಾಜ ರೊಟ್ಟಿ ತಿಳಿಸಿದರು.

ಗುರುವಾರ ನಗರದ ಸರ್ಕಿಟ್ ಸೌಟ್ ನಲ್ಲಿ ಪತ್ರಿಕಾ ಪರಿಷತ್ತಿನಲ್ಲಿ ಮಾತನಾಡಿದ ಅವರು, ಅಂದು ಬೆಳಿಗ್ಗೆ 8 ಗಂಟೆಗೆ ಶಹಾಪೂರ ಗೋವಾವೇಸ ಬಸವೇಶ್ವರ ಸರ್ಕಲ್ ದಿಂದ ಪ್ರಾರಂಭಗೋಳಲ್ಲಿರುವ ಬಸರ ಜಯಂತಿಯ ಬೈಕ್ ರ‍್ಯಾಲಿಯಲ್ಲಿ ಸುಮಾರು 2 ಸಾವಿರಕ್ಕೂ ಅಧಿಕ ಬೈಕ್ ಗಳು ಮತ್ತು ಕಾರುಗಳು ಭಾಗಿಯಾಗಲಿವೆ.

ಬಸವಣ್ಣನವರು ಸಾರಿದ ಸಮಾನತೆಗಾಗಿ ಈ ರ‍್ಯಾಲಿಯನ್ನು ಆಯೋಜಿಸಲಾಗುತ್ತಿದ್ದು, ಸಮಾಜದ ಸಮಸ್ತ ಜನತೆಯು ಈ ರ್ಯಾ ಲಿಯಲ್ಲಿ ಭಾಗಿಯಾಗಬೇಕೆಂದು ಬೆಳಗಅವಿ ನಗರದ ಜನತೆಯಲ್ಲಿ ಮನವಿ ಮಾಡಿಕೊಂಡರು.

ಏ.19ರಂದು ನಡೆಯಲಿರುವ ಬವಸ ಜಯಂತಿಯ ಬೈಕ್ ರ‍್ಯಾಲಿಗೆ ಬೆಳಗಾವಿಯ ನಾಗನೂರು ರುದ್ರಾಕ್ಷಿ ಮಠದ ಪೀಠಾಧಿಕಾರಿ ಡಾ. ಅಲ್ಲಮಪ್ರಭು ಮಹಸ್ವಾಮೀಜಿಯವರು, ಬೆಳಗಾವಿಯ ಸಂಸದ ಜಗದೀಶ್ ಶೆಟ್ಟರ್ , ಕೆಎಲ್‌ಇ ಸಂಸ್ಥೆಯ ಗೌರವ ಕಾರ್ಯಧ್ಯಕ್ಷ ಡಾ. ಪ್ರಭಾಕರ್ ಕೋರೆ ಅವರುಗಳು ಚಾಲನೆ ನೀಡಲಿದ್ದಾರೆ.

ಮಹಾಪೌರ ಪ್ರೀತಿ ಕಾಮಕರ, ಉಪಮಹಾಪೌರ ಹಣಮಂತ ಕೊಂಗಾಲಿ, ಶಾಸಕ ಅಭಯ್ ಪಾಟೀಲ್, ಕೈ ಶಾಸಕ ರಾಜು ಸೇಠ್ ಹಾಗೂ ನಗರ ಸೇವಕರು ಅತಿಥಿಗಳಾಗಿ ಆಗಮಿಸಲಿದ್ದು, ಬಸವ ಸಂಘಟನೆಯ ಪದಾಧಿಕಾರಿಗಳು ಕಾರ್ಯಕರ್ತರು ಸೇರಿದಂತೆ ಸಾವಿರಾರು ಜನ ಭಾಗಿಯಾಗಿಲಿದ್ದಾರೆ ಎಂದು ಹೇಳಿದರು.

ಈ ವೇಳೆ ರತ್ನಪ್ರಭಾ ಬೆಲ್ಲದ, ಈರಣ್ಣ ದೇಯಣ್ಣವರ್, ಕಿರಣ್ ಅಗಡಿ, ರಮೇಶ್ ತುಬಚಿ, ಶಂಕರ್ ಗುಡಸ, ಎಸ್.ಜಿ. ಸಿದ್ನಾಳ, ಆನಂದ್ ಗುಡಸ್ , ಪ್ರೇಮ ಚೌಗಲಾ , ಮನೋಹರ ಪುಡಕಲಕಟ್ಟಿ, ಬಾಲಚಂದ್ರ ಬಾಗಿ,ಅಶೋಕ್ ಬೆಂಡಿಗೇರಿ, ಮುರಗೆಪ್ಪ ಬಾಳಿ ಮತ್ತು ಸಿ.ಎಂ.ಬೂದಿಹಾಳ ಸೇರಿದಂತೆ ಹಲವರು ಇದ್ದರು.



ಡಾ.ಬಿ.ಆರ್.ಅಂಬೇಡ್ಕರ್ ಕೊಡುಗೆ ಅಪಾರ

◆**ಚನ್ನಮ್ಮ ಕಿತ್ತೂರ :** ಭಾರತಕ್ಕೆ ಶ್ರೇಷ್ಠ ಸಂವಿಧಾನ ನೀಡಿದ ಅಂಬೇಡ್ಕರ ಅವರ ಕೊಡುಗೆ ಅಪಾರ ಎಂದು ಶಾಸಕ ಬಾಬಾಸಾಹೇಬ ಪಾಟೀಲ ಹೇಳಿದರು

ಅವರು ಸಮೀಪದ ಬೈಲೂರು ಗ್ರಾಮದಲ್ಲಿ ಮಂಗಳವಾರ ನಡೆದ ಡಾ.ಬಿ.ಆರ್. ಅಂಬೇಡ್ಕರ್ ಅವರ 135 ನೇ ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿ, ಡಾ. ಬಾಬಾಸಾಹೇಬರು ರಚಿಸಿದ ಸಂವಿಧಾನವು ದೇಶದ ಪ್ರತಿಯೊಬ್ಬ ನಾಗರಿಕನಿಗೂ ಸಮಾನ ಹಕ್ಕುಗಳನ್ನು ನೀಡುವ ಮಹತ್ವದ ಗ್ರಂಥವಾಗಿದ್ದು, ಅದರಲ್ಲಿ ತತ್ವ ಸಿದ್ಧಾಂತಗಳನ್ನು ಪ್ರತಿಯೊಬ್ಬರೂ ಪಾಲಿಸಬೇಕು ಎಂದರು,

ಬೈಲಹೊಂಗಲದ ಡಿ.ಎಸ್.ಪಿ ಡಾ.ವೀರಯ್ಯ ಹಿರೇಮಠ, ಉಪನ್ಯಾಸಕ ಪ್ರಕಾಶ ಶಿವಣ್ಣವರ, ಕರವೇ ಅಧ್ಯಕ್ಷ ವಿಠ್ಠಲ ಹಿಂಡಲಕರ, ಬಿಜೆಪಿ ಯುವ ಮುಖಂಡ ಶಿವಾನಂದ ಹಣಮಸಾಗರ, ನಿವೃತ್ತ ಮುಖ್ಯಾಧ್ಯಾಪಕ ಶಂಕರ ದಂಡಿನ ಮಾತನಾಡಿದರು.

ಸಿಪಿಐ ಶಿವಾನಂದ ಗುಡಗನಟ್ಟಿ ಹಾಗೂ ಪಿಡಿಒ ಈಶ್ವರ ಹಡಪದ ಅವರು ಹಾಡಿದ ಅಂಬೇಡ್ಕರವರ ಜೀವನ ಚರಿತ್ರೆ ಎಲ್ಲರ ಗಮನ ಸೆಳೆಯಿತು.

ಇದೆ ಸಂದರ್ಭದಲ್ಲಿ ದಲಿತ ಸಮಾಜದ ಸೇವಾ ನಿರತ ಮತ್ತು ಸೇವಾ ನಿವೃತ್ತ ನೌಕರರನ್ನು ಸತ್ಕರಿಸಲಾಯಿತು. ಎಂ.ದೊಡ್ಡಪ್ಪ ತಂಡದಿಂದ ಸಂಗೀತ ಗಾನ ಸಂಭ್ರಮ ಜರುಗಿತು.



ಯಮಕನಮರಡಿಯ ಸಿದ್ಧಬಸವದೇವರು ಸಾನಿಧ್ಯ ವಹಿಸಿದ್ದರು, ಮಹಾದೇವ ಗಿರಿಯಾಲ, ದಲಿತ ರಕ್ಷಣಾ ವೇದಿಕೆಯ ಅಧ್ಯಕ್ಷ ಗಂಗಾಧರ ಮುಳಕೂರ, ಬಾವುದ್ದೀನ ಮಕಾನದಾರ, ಮಂಜುನಾಥ ಶಿಡ್ಲವ್ವಗೋಳ, ಗಂಗಾಧರ ಹನುಮಸಾಗರ, ಮಾರುತಿ ಅನಿಗೋಳ, ವಿ ಎಸ್ ನಂದಿಹಳ್ಳಿ, ನಿಂಗಪ್ಪ ಮುಂದಿನಮನಿ, ಸುರೇಶ ಕುರಗುಂದ, ಜಗದೀಶ ಕೇರವಾಡ ಹಾಗೂ ಇತರರು ಇದ್ದರು. ಗಂಗಾಧರ ಮುಳಕೂರ ಸ್ವಾಗತಿಸಿದರು, ಶಿಕ್ಷಕ ವಿವೇಕ ಕುರಗುಂದ ನಿರೂಪಿಸಿದರು.

ಅಂತಾರಾಜ್ಯ ಬೈಕ್ ಕಳ್ಳನ ಬಂಧನ

◆**ಗೋಕಾಕ:** ಅಂತಾರಾಜ್ಯ ಬೈಕ್ ಕಳ್ಳನನ್ನು ಬಂಧಿಸಿರುವ ಗೋಕಾಕ ಶಹರ ಪೊಲೀಸರು, 3.84 ಲಕ್ಷ ಮೌಲ್ಯದ 7 ಬೈಕ್‌ಗಳನ್ನು ಜಪ್ತಿ ಮಾಡಿದ್ದಾರೆ.

ಕೋಲ್ಹಾಪೂರ ಜಿಲ್ಲೆಯ ಗಡಹಿಂಗ್ಲಜ. ಹಾಲಿವಾಸ ರಾಮದುರ್ಗ ತಾಲೂಕಿನ ಕಡಕೋಳ ಗ್ರಾಮದ ರಮೇಶ ಮನೋಹರ ಸುತಾರ (36) ಬಂಧಿತ ಕಳ್ಳ. ಮಾ 30ರಂದು ನಗರದ ಬಸ್ ನಿಲ್ದಾಣದಲ್ಲಿ ಬೈಕ್ ಕಳ್ಳತನವಾಗಿತ್ತು. ಈ ಕುರಿತು ಗೋಕಾಕ ನಗರದ ಶಹರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಆರೋಪಿಯ ಪತ್ತೆಗೆ ವಿಶೇಷ ತಂಡ ರಚಿಸಲಾಗಿತ್ತು. ಇದರ ಬೆನ್ನು ಬಿದ್ದ ಪೊಲೀಸ್ ಅಧಿಕಾರಿಗಳು ರಮೇಶ ಮನೋಹರ ಸುತಾರನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಕಳವು ಪ್ರಕರಣಗಳು ಹೊರ ಬಂದಿದೆ.

ಗೋಕಾಕ ಶಹರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ 2, ಬೆಳಗಾವಿ ಸಾಂಬ್ರಾ, ಸಂಕೇಶ್ವರ, ಗಡಹಿಂಗ್ಲಜ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಕಳುವು ಮಾಡಿದ್ದ 5 ಒಟ್ಟು 7 ಬೈಕ್ ಗಳನ್ನು ಜಪ್ತಿ ಮಾಡಲಾಗಿದೆ.ಪೊಲೀಸ್ ವರಿ?ಾಧಿಕಾರಿ ರಾಮರಾಜನ ಕೆ, ಹೆಚ್ಚುವರಿ ಎಸ್.ಪಿ ರಾಮಗೊಂಡ ಬಸರಗಿ, ಡಿವೈಎಸ್‌ಪಿ ರವಿನಾಯಿಕ, ಗೋಕಾಕವೃತ್ತಇನ್‌ಸ್ಪೆಕ್ಟರ್ ಸುರೇಶಬಾಬು ಇವರ ಮಾರ್ಗದರ್ಶನದಲ್ಲಿ ಪಿಎಸ್‌ಐ ಕಿರಣ ಮೋಹಿತೆ, ಪ್ರೋ. ಪಿ.ಎಸ್.ಐ ಗೌರಿಶಂಕರ, ಸಿಬ್ಬಂದಿ ಆರ್ .ಬಿ.ಹಡಪದ, ಕೆ.ಎನ್.ಇಳಿಗೇರ,ಬಿ.ಎಸ್.ಸಿದ್ನಾಳ,ಎಂ.ಆರ್.ಅಂಬಿ, ಪಿ.ಎಮ್ ಘಸ್ತಿ, ಜೆ.ಎಚ್.ಗುಡ್ಲಿ, ಎಸ್ .ಎಲ್.ಮಂಗಿ, ಮಂಜು ಹುಚ್ಚಗೌಡರ, ಐ.ವಿ.ಘಂಟಿ, ಮಂಜುನಾಥ್ ನಾಯಿಕ,ಬೆಳಗಾವಿಯ ಟೆಕ್ನಿಕಲ್ ಸೆಲ್ ನ ಸಚೀನ ಪಾಟೀಲ್ ನೇತೃತ್ವದ ತಂಡ ಕಾರ್ಯಾಚರಣೆ ನಡೆಸಿತ್ತು. ಸದರಿ ತಂಡದ ಕಾರ್ಯಾಚರಣೆಯನ್ನು ಪೊಲೀಸ್ ವರಿಷ್ಠಾಧಿಕಾರಿ ರವರು ಶ್ಲಾಘಿಸಿದ್ದು, ಆರೋಪಿಯನ್ನು ನ್ಯಾಯಾಂಗ ವಶಕ್ಕೆ ಒಪ್ಪಿಸಲಾಗಿದ್ದು, ತನಿಖೆ ಮುಂದುವರೆದಿದೆ.



ಅಂಬೇಡ್ಕರ್ ಜಯಂತಿ ಆಚರಣೆ

◆**ಚನ್ನಮ್ಮನ ಕಿತ್ತೂರು:** ಸಂವಿಧಾನ ಶಿಲ್ಪಿ ಡಾ. ಬಾಬಾಸಾಹೇಬ ಅಂಬೇಡ್ಕರವರ 135 ನೇ ಜಯಂತಿಯನ್ನು ಅದ್ದೂರಿಯಾಗಿ ಆಚರಿಸಲಾಯಿತು.

ಸಮೀಪದ ಬಸಾಪೂರ ಗ್ರಾಮದ ಗಾಂವಟನ್‌ನಲ್ಲಿರುವ ಯುವಕರಿಂದ ಡಾ. ಬಾಬಾಸಾಹೇಬ ಅಂಬೇಡ್ಕರ ಅವರ ಭಾವಚಿತ್ರಕ್ಕೆ ಪೂಜೆಯನ್ನು ಸಲ್ಲಿಸುವ ಮೂಲಕ ಅತೀ ವಿಜೃಂಭಣೆಯಿಂದ ಆಚರಿಸಲಾಯಿತು.

ಬೀಮಪ್ಪ ಹಂಚಿನಮನಿ, ಸಾವಕ್ಕ ಕರಿಕಟ್ಟಿ, ಆನಂದ ಮಾದರ, ಯಲ್ಲಪ್ಪ ತಳವಾರ, ಪಕ್ಕೀರಪ್ಪ ಮಾದರ, ಪಕ್ಕೀರಪ್ಪ ಚುಂಚವಾಡ, ಬಸವರಾಜ ಮಾತನವರ, ರವಿ ಹಂಚಿನಮನಿ, ಮಂಜುನಾಥ ಹಂಚಿನಮನಿ, ರಾಜು ಕರಿಕಟ್ಟಿ, ಮಾರುತಿ ಹಂಚಿನಮನಿ, ಮಂಜುನಾಥ ಅನಿಗೋಳ, ಪ್ರದೀಪ ಕರಿಕಟ್ಟಿ, ವಿಜಯ ಹಂಚಿನಮನಿ, ನಾಗಪ್ಪ ಅಡಿಬಟ್ಟಿ ಸೇರಿದಂತೆ ಮುಂತಾದವರು ಉಪಸ್ಥಿತರಿದ್ದರು.



ಸಾವಳಗಿ ಶಿವಲಿಂಗೇಶ್ವರರು ಕೃತಿ ಲೋಕಾರ್ಪಣೆ



◆**ಯರಗಟ್ಟಿ:** ಪಟ್ಟಣದ ಸಿ.ಎಂ. ಮಾಮನಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಧ್ಯಾಪಕರಾದ ಡಾ. ರಾಜಶೇಖರ ಬಿರಾದಾರ ಅವರು ರಚಿಸಿದ ಸಾವಳಗಿ ಶಿವಲಿಂಗೇಶ್ವರರು ಕೃತಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಲೋಕಾರ್ಪಣೆಗೊಳಿಸಿದರು.

ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವ್ಯಾಪ್ತಿಯ ಕನ್ನಡ ಅಭಿವೃದ್ಧಿ ಪ್ರಾಧಿಕಾರವು ಕನ್ನಡ ಸಾಮರಸ್ಯ ನೆಲೆಗಳು ಶೀರ್ಷಿಕೆಯ ಅಡಿಯಲ್ಲಿ ರಾಜ್ಯದ ವಿವಿಧ ಭಾಗಗಳ ಲೇಖಕರ ಒಟ್ಟು 41 ಕೃತಿಗಳನ್ನು ಬೆಂಗಳೂರಿನ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಮುಖ್ಯಮಂತ್ರಿಗಳು ಬಿಡುಗಡೆಗೊಳಿಸಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರು ಶಿವರಾಜ ತಂಗಡಗಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸರ್ಕಾರದ ಕಾರ್ಯದರ್ಶಿ ಮಂಜುನಾಥ, ಕನ್ನಡದ ಖ್ಯಾತ ಸಾಹಿತಿ ಡಾ. ಬರಗೂರು ರಾಮಚಂದ್ರಪ್ಪ, ಶಿಕ್ಷಣ ತಜ್ಞ ಡಾ. ನಿರಂಜನರಾಧ್ಯ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಡಾ. ಸಂತೋಷ ಹಾನಗಲ್ ಸೇರಿದಂತೆ ಯೋಜನೆಯ ಸಂಚಾಲಕರು, ಲೇಖಕರು ಭಾಗವಹಿಸಿದ್ದರು.ತಾಲೂಕಿನ ಸಾಹಿತಿಯೊಬ್ಬರ ಕೃತಿಯು ಮಾನ್ಯ ಮುಖ್ಯಮಂತ್ರಿಗಳಿಂದ ಲೋಕಾರ್ಪಣೆಯಾದುದು ಹೆಮ್ಮೆಯ ಸಂಗತಿ ಎಂದು ಯರಗಟ್ಟಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ತಮ್ಮಣ್ಣ ಕಾಮಣ್ಣವರ ಅವರು ಸಂತಸ ವ್ಯಕ್ತಪಡಿಸಿದ್ದಾರೆ.

ದೀನ ದಲಿತರ ಅಭಿವೃದ್ಧಿಗೆ ಶ್ರಮಿಸಿದ್ದ ಮಹಾತ್ಮ

◆**ಸವದತ್ತಿ:** ಡಾ.ಬಿ.ಆರ್.ಅಂಬೇಡ್ಕರ್ ಅವರು ತಮ್ಮ ಜೀವನವನ್ನು ದೀನ ದಲಿತರ ಅಭಿವೃದ್ಧಿಗಾಗಿ ಮುಡುಪಾಗಿಟ್ಟಿದ್ದರು ಎಂದುಬಿಜೆಪಿ ಮಂಡಲದ ಅಧ್ಯಕ್ಷ ವಿರುಪಾಕ್ಷಪ್ಪ ಕ ಮಾಮನಿ ಹೇಳಿದರು.ಅಂಬೇಡ್ಕರ್ ಜಯಂತಿ ಅಂಗವಾಗಿ ಪಟ್ಟಣದ ಮಧ್ಯ ಭಾಗದಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಮಾತನಾಡಿದರು.ನಂತರ ಭಾರತೀಯ ಜನತಾ ಪಕ್ಷದ ವತಿಯಿಂದ ಮಾಜಿ ಶಾಸಕ ದಿವಂಗತ ಆನಂದ ಮಾಮನಿ ಅವರ ಕಾರ್ಯಾಲಯದಲ್ಲಿ ಭಾರತೀಯ ಜನತಾ ಪಕ್ಷದ ವತಿಯಿಂದ ಡಾ.ಬಿ.ಆರ್.ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿದರು.ಈ ಸಂದರ್ಭದಲ್ಲಿ ಭಾರತೀಯ ಜನತಾ ಪಕ್ಷದ ಮುಖಂಡರಾದ ಕುಮಾರಸ್ವಾಮಿ ತಲ್ಲೂರಮಠ, ಜಗದೀಶ್, ಡಾ. ಹೇಮಂತ್ ಬಸ್ಮೆ , ಸಿಂತ್ರಿ , ವೈ. ವೈ. ಕಾಳಪ್ಪನವರ್, ಪುಂಡಲಿಕ ಮಾದರ, ಶಿವಾನಂದ ಅಮಾತೆನ್ನವರ , ಬಾಬು ಕಾಳೆ, ಮಹಾಂತೇಶ ಸುಬೇದಾರ್, ಅರ್ಜುನ ಅಮೋಜಿ, ರವಿ ಬ್ಯಾಹಟ್ಟಿ, ಮಲ್ಲಿಕಾರ್ಜುನ ಬೀಳಗಿ, ರೇಣಪ್ಪ ಗುಡೇನ್ನವರ್, ಅಪ್ಪು ಕಾಳಪ್ಪನವರ, ರಾಜು ಲಮಾಣಿ , ಪ್ರಕಾಶ್ ಲಮಾಣಿ, ರವಿ ರಾಠೋಡ್, ರಾಜಪ್ಪ ಬೆಳವಡಿ, ಮಡಿವಾಳಪ್ಪ ಪೇಂಟೇದ, ರಮೇಶ್ ಲ್ಯಾವಕ್ಕಿ, ಮಲ್ಲಿಕಾರ್ಜುನ ಬೀಳಗಿ, ಮಹಾಂತೇಶ ಸುಬೇದಾರ ಸೇರಿದಂತೆ ಭಾರತೀಯ ಜನತಾ ಪಕ್ಷದ ಮುಖಂಡರು ಉಪಸ್ಥಿತರಿದ್ದರು.





ಸಾವಳಗಿ: ಗೋಕಾಕ ತಾಲೂಕಿನ ಸಾವಳಗಿ ಗ್ರಾಮದಲ್ಲಿ ಶಿವಲಿಂಗೇಶ್ವರ ಜಾತ್ರಾ ಮಹೋತ್ಸವ ಹಾಗೂ ಅಡ್ಡ ಪಲ್ಲಕ್ಕಿ ಉತ್ಸವವು ಶೂನ್ಯ ಸಿಂಹಾದೀಶ್ ಮಹಾರಾಜ ನಿರಂಜನ ಜಗದ್ಗುರು ಶಿವಲಿಂಗೇಶ್ವರ ಕುಮಾರೇಂದ್ರ ಮಹಾಸಾನಿಧ್ಯ ಸಿದ್ಧ ಸಂಸ್ಥಾನ ಪೀಠ ಸಾವಳಗಿ ಮಹಾಸನ್ನಿದಿ ಅವರ ನೇತೃತ್ವದಲ್ಲಿ ಅದ್ದೂರಿಯಾಗಿ ಜರುಗಿತು.ಜಾತ್ರಾ ಮಹೋತ್ಸವದ ಅಂಗವಾಗಿ ದೇವಸ್ಥಾನದಲ್ಲಿ ವಿಶೇಷ ಪೂಜೆಗಳು, ಅಭಿಷೇಕಗಳು ನೆರವೇರಿದವು. ಸುತ್ತಮುತ್ತಲಿನ ಗ್ರಾಮಗಳಿಂದ ಸಾವಿರಾರು ಭಕ್ತರು ಆಗಮಿಸಿ ದೇವರ ದರ್ಶನ ಪಡೆದು ಪೂಜೆ ಸಲ್ಲಿಸಿದರು. ಭಕ್ತರು ಪಲ್ಲಕ್ಕಿಯಲ್ಲಿ ಡೊಳ್ಳು-ಕುಣಿತ, ಭಜನಾ ತಂಡಗಳು ಮತ್ತು ವಿವಿಧ ಕಲಾ ಪ್ರದರ್ಶನಗಳೊಂದಿಗೆ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿದರು. ಗ್ರಾಮಸ್ಥರು ಹಾಗೂ ಸಮಿತಿ ವತಿಯಿಂದ ಅನ್ನಸಂತರ್ಪಣೆ ಸೇರಿದಂತೆ ಅಗತ್ಯ ವ್ಯವಸ್ಥೆಗಳನ್ನು ಕಲ್ಪಿಸಲಾಗಿತ್ತು.

ಕಿರುಸುದ್ದಿ

ಏ.19ರಂದು ಶಿವತೀರ್ಥಭೂಮಿ ಪೂಜೆ

ಚಿಕ್ಕೋಡಿ: ನಿಪ್ಪಾಣಿ ತಾಲೂಕಿನ ಹಂಚಿನಾಳ ಕೆ.ಎಸ್ ಗ್ರಾಮದಲ್ಲಿ ಏ.19ರಂದು ಭಕ್ತಿಯೋಗಾಶ್ರಮ ಟ್ರಸ್ಟ್ ವತಿಯಿಂದ ಆಶ್ರಮದ ಮಹೇಶಾನಂದ ಮಹಾಸ್ವಾಮೀಜಿ ಸಾನ್ನಿಧ್ಯದಲ್ಲಿ ವಿವಿಧ ಧಾರ್ಮಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಬೆಳಿಗ್ಗೆ 10ಕ್ಕೆ ಭಕ್ತಿಯೋಗಾಶ್ರಮದಲ್ಲಿ ಶಿವತೀರ್ಥದ ಭೂಮಿಪೂಜೆ ಹಾಗೂ ಆಡಿಗಲ್ಲು ಸಮಾರಂಭ ನೆರವೇರಲಿದೆ. ಬೆಳಿಗ್ಗೆ 11ಕ್ಕೆ ಮಹೇಶಾನಂದ ಸ್ವಾಮೀಜಿಯವರಿಂದ ಪ್ರವಚನ, ಮಧ್ಯಾಹ್ನ 12ಕ್ಕೆ ಮಹಾಪ್ರಸಾದ ಸೇರಿದಂತೆ ವಿವಿಧ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ 9373818796, 9686811563, 6361229466 ಸಂಖ್ಯೆಯನ್ನು ಸಂಪರ್ಕಿಸುವಂತೆ ಭಕ್ತಿಯೋಗಾಶ್ರಮ ಪ್ರಕಟಣೆಯಲ್ಲಿ ತಿಳಿಸಿದೆ.



ಬಸವ ಜಯಂತಿ: ವಿವಿಧ ಸ್ಪರ್ಧೆ


ಹಾರೂಗೇರಿ: ಪಟ್ಟಣದಲ್ಲಿ ಏ.19, 20 ರಂದು ಜಗಜ್ಯೋತಿ ಬಸವಣ್ಣನವರ ಜಯಂತಿಯನ್ನು ಅದ್ದೂರಿಯಾಗಿ ಆಚರಿಸಲಾಗುವುದು ಎಂದು ಲಿಂಗಾಯತ ಕಾಯಕ ಸಮಿತಿ ಅಧ್ಯಕ್ಷ ಪರಗೌಡ ಉಮಾರಾಣಿ ಹೇಳಿದರು. ಅವರು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಜಗತ್ತಿಗೆ ಸರ್ವ ಧರ್ಮಗಳ ಸಮನ್ವಯತೆಯನ್ನು ಸಾರಿದ ಮಹಾಮಾನವತಾವಾದಿ ಜಗಜ್ಯೋತಿ ಬಸವಣ್ಣನವರ ಜಯಂತಿ ಉತ್ಸವ ನಿಮಿತ್ತ ಹಲವಾರು ಕಾರ್ಯಕ್ರಮ ಏರ್ಪಡಿಸಲಾಗಿದೆ. ಏ.19ರಂದು ಬಸವ ಸ್ಪ್ರಿಂಟ್ 100 ಮೀಟರ ಓಟದ ಸ್ಪರ್ಧೆಯನ್ನು ಬೆಳಿಗ್ಗೆ 7 ಕ್ಕೆ ಎಚ್ ವಿ ಮಹಾವಿದ್ಯಾಲಯದ ಮೈದಾನದಲ್ಲಿ ಹಮ್ಮಿಕೊಳ್ಳಲಾಗಿದೆ. ಮಧ್ಯಾಹ್ನ 11 ಕ್ಕೆ ಶ್ರೀ ರಾಮಲಿಂಗೇಶ್ವರ ದೇವಸ್ಥಾನದಲ್ಲಿ 15 ವರ್ಷದೊಳಗಿನ ಮಕ್ಕಳಿಗೆ ವಚನ ಕಂಠ ಪಾಠ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ. ಸ್ಪರ್ಧೆಗಳಲ್ಲಿ ವಿಜೇತರಿಗೆ ಪ್ರಥಮ 2000 ರೂ. ದ್ವಿತೀಯ 1500, ತೃತೀಯ 1000 ರೂ.ಗಳ ಬಹುಮಾನ ನೀಡಲಾಗುವುದು. ಏ.20ರಂದು ಬೆಳಿಗ್ಗೆ 8 ಕ್ಕೆ ಬಸವ ತೊಟ್ಟಿಲೋತ್ಸವ ಕಾರ್ಯಕ್ರಮ, 9 ಕ್ಕೆ ಬಸವ ಬೈಕ್ ರ್‍ಯಾಲಿಯನ್ನು ನಡೆಸಲಾಗುವುದು. ಮಧ್ಯಾಹ್ನ ಹನುಮಾನ ದೇವಸ್ಥಾನದಲ್ಲಿ ಮಹಾಪ್ರಸಾದ ಏರ್ಪಡಿಸಲಾಗಿದೆ. ಸಂಜೆ 4 ಬಸವಣ್ಣವರ ಭಾವ ಚಿತ್ರದ ಮೆರವಣಿಗೆ ಸಕಲ ವಾದ್ಯ ಮೇಳದೊಂದಿಗೆ ನಡೆಯಲಿದ್ದು, ಬಸವ ಭಕ್ತರು ಹೆಚ್ಚಿನ ಸಂಖ್ಯೆ ಯಲ್ಲಿ ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸಲು ಕೋರಿದರು. ಸ್ಪರ್ಧೆಗಳಲ್ಲಿ ಭಾಗವಹಿಸಲಿರುವವರು ತಮ್ಮ ಹೆಸರನ್ನು 9538574272, 94492 57394 ನಂಬರ್‌ಗಳಿಗೆ ಸಂಪರ್ಕಿಸಲು ತಿಳಿಸಿದರು.

ಅಪ್ರಾಪ್ತೆ ಅತ್ಯಾಚಾರ: 30 ವರ್ಷ ಶಿಕ್ಷೆ

ಹಿರೇಬಾಗೇವಾಡಿ: ಮಾನಸಿಕ ಸ್ಥಿತಿ ಸರಿ ಇಲ್ಲದ ಅಪ್ರಾಪ್ತ ವಯಸ್ಸಿನ ಬಾಲಕಿಯ ಮೇಲೆ ನಿರಂತರ ಲೈಂಗಿಕ ಅತ್ಯಾಚಾರ ನಡೆಸಿದ ಆರೋಪದ ಮೇಲೆ ಸಮೀಪದ ಅರಳೀಕಟ್ಟಿ ಗ್ರಾಮದ ಯುವಕನಿಗೆ ಬೆಳಗಾವಿ ಜಿಲ್ಲಾ ಪೋಕ್ಸೋ ನ್ಯಾಯಾಲಯ ಮೂವತ್ತು ವರ್ಷ ಕಠಿಣ ಕಾರಾಗೃಹ ಶಿಕ್ಷೆ ಮತ್ತು ಒಂದು ಲಕ್ಷ ರೂಪಾಯಿಗಳ ದಂಡ ವಿಧಿಸಿ ಬುಧವಾರ ತೀರ್ಪು ನೀಡಿದೆ. ಅರಳೀಕಟ್ಟಿ ಗ್ರಾಮದ ಯುವಕ ಮಹಾಂತೇಶ ಶಿವಾನಂದ ಗಿರೆಣ್ಣವರ (23) ಎಂಬಾತ ಅದೇ ಓಣಿಯ ಅಪ್ರಾಪ್ತ ಬಾಲಕಿಯ ಮೇಲೆ ಮದುವೆಯಾಗುವುದಾಗಿ ನಂಬಿಸಿ 2-3-2025 ರಿಂದ ಬಲವಂತವಾಗಿ ಪದೇ ಪದೇ ಅತ್ಯಾಚಾರ ಮಾಡಿದ್ದ ಎನ್ನಲಾಗಿದೆ. ಈ ಬಗ್ಗೆ ಬಾಲಕಿಯ ಪಾಲಕರು ನೀಡಿದ ದೂರಿನನ್ವಯ ಪಿಎಸ್ಐ ಅವಿನಾಶ ಎ.ವೈ. ಅವರು ದೂರು ದಾಖಲಿಸಿಕೊಂಡು ಮುಂದಿನ ತನಿಖೆಗಾಗಿ ಸಿಪಿಐ ಸುಂದ್ರೇಶ ಹೊಳೆಣ್ಣವರ ಅವರಿಗೆ ಹಸ್ತಾಂತರಿಸಲಾಗಿ ಅವರು ದೋಷಾರೋಪಣೆ ಪಟ್ಟಿಯೊಂದಿಗೆ ಅದನ್ನು ಪೋಕ್ಸೋ ನ್ಯಾಯಾಲಯಕ್ಕೆ ಒಪ್ಪಿಸಿದ್ದಾರೆ. 9 ಸಾಕ್ಷಿಗಳ ವಿಚಾರಣೆ ಮತ್ತು ಪೂರಕ ದಾಖಲೆಗಳ ಆಧಾರದ ಮೇಲೆ ನ್ಯಾಯಾಧೀಶೆ ಸಿ.ಎಂ. ಪುಷ್ಪಲತಾ ಅವರು ಶಿಕ್ಷೆ ಘೋಷಿಸಿ ಈ ತೀರ್ಪು ನೀಡಿದ್ದಾರೆ. ಒಂದು ವೇಳೆ ಆರೋಪಿತನು ದಂಡದ ಮೊತ್ತ ಒಂದು ಲಕ್ಷ ರೂ. ತುಂಬದಿದ್ದರೆ ಹೆಚ್ಚುವರಿಯಾಗಿ ಎರಡು ವರ್ಷ ಕಾರಾಗೃಹ ಶಿಕ್ಷೆ ಘೋಷಿಸಿದೆ. ಸಂತ್ರಸ್ತೆಗೆ ಜಿಲ್ಲಾ ಕಾನೂನು ಪ್ರಾಧಿಕಾರದಿಂದ ನಾಲ್ಕು ಲಕ್ಷ ರೂಪಾಯಿಗಳ ಪರಿಹಾರ ಧನವನ್ನು ಪಡೆಯಲು ಆದೇಶಿಸಿದೆ. ಸರ್ಕಾರದ ಪರವಾಗಿ ವಿಶೇಷ ಸರ್ಕಾರಿ ಅಭಿಯೋಜಕ ಎಲ್.ವಿ. ಪಾಟೀಲ ಕಾರ್ಯ ನಿರ್ವಹಿಸಿದ್ದಾರೆ.

ವ್ಯಕ್ತಿ ಕಾಣೆ

ಸವದತ್ತಿ: ಗದಗ ಜಿಲ್ಲೆಯ ಜಗಾಪುರ ಗ್ರಾಮದ ಬಸಪ್ಪ ಗುರಪ್ಪ ಅಂಗಡಿ (43) ಈತನು ತನ್ನ ಗ್ರಾಮದಿಂದ ಬಂದು ಸವದತ್ತಿ ತಾಲೂಕಿನ ಹಿರೆಕುಂಬಿ ಗ್ರಾಮದ ಅವನ ತಂಗಿಯ ಮನೆಗೆ ಬಂದು ಅಲ್ಲಿಂದ ಎಲ್ಲಿಯೂ ಹೋಗಿ ಕಾಣೆಯಾಗಿರುತ್ತಾರೆ. ಈತನು ಮಾನಸಿಕ ಅಸ್ವಸ್ಥ ನಾಗಿರುತ್ತಾನೆ.



ಈ ಕುರಿತು ಸವದತ್ತಿ ಪೊಲೀಸ್ ಠಾಣೆಗೆ ಅವನ ತಂಗಿ ಕವಿತಾ ಸಿದ್ದಾರೂಡ ತಗ್ಗಿಯವರು ದೂರ ನೀಡಿರುತ್ತಾರೆ. ಈ ವ್ಯಕ್ತಿಯು ಇರುವ ಬಗ್ಗೆ ಯಾರಿಗಾದರೂ ಮಾಹಿತಿ ಇದ್ದಲ್ಲಿ ಸವದತ್ತಿ ಪೊಲೀಸ್ ಠಾಣೆಗೆ ತಿಳಿಸಲು ಕೋರಿದ್ದಾರೆ.



ಯಮಕನಮರಡಿ : ಸಮೀಪದ ಹತ್ತರಗಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ 2027 ನೇ ಸಾಲಿನ ಮನೆ ಪಟ್ಟಿ ಜನಗಣತಿ ಕಾರ್ಯಕ್ಕೆ ಚಾಲನೆ ನಿಡಲಾಯಿತು. ಹುಕ್ಕೇರಿ ತಾಲೂಕು ದಂಡಾಧಿಕಾರಿಗಳಾಗಿದ್ದ ಬಲರಾಮ ಕಟ್ಟಿಮನಿ ಚಾಲನೆ ನೀಡಿದರು.

ಅಂಬೇಡ್ಕರ್ ತತ್ವಗಳು ದಾರಿದೀಪ: ಕಾಂಬ್ಳೆ

ತೆಲಸಂಗ: ಬಾಬಾ ಸಾಹೇಬರ ವಿಚಾರಧಾರೆಗಳು ಕೇವಲ ಪುಸ್ತಕಕ್ಕೆ ಸೀಮಿತವಾಗದೆ ಪ್ರತಿಯೊಬ್ಬರ ಮನೆ ಮತ್ತು ಮನಗಳನ್ನು ತಲುಪಬೇಕು. ಅವರ ಸಮಾನತೆಯ ತತ್ವಗಳು ಇಂದಿನ ಯುವ ಪೀಳಿಗೆಗೆ ದಾರಿದೀಪವಾಗಬೇಕು ಎಂದು ಉಪನ್ಯಾಸಕ ಬಾಹು ಸಾಹೇಬ್ ಕಾಂಬ್ಳೆ ಹೇಳಿದರು.

ಗ್ರಾಮದ ಸರ್ಕಾರಿ ಪ್ರಥಮ ದರ್ಜೆ ಕಾಲೇಜನಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅವರ 135ನೇ ಜಯಂತಿ ಮಹೋತ್ಸವದ ಅಂಗವಾಗಿ ಮನೆ ಮನೆಗೆ ಮನ ಮನಕೆ ಬಾಬಾ ಸಾಹೇಬರು ಎಂಬ ಅಭಿಯಾನದಡಿ, ರಾಷ್ಟ್ರೀಯ ಸೇವಾ ಯೋಜನೆ, ರೆಡ್ ಕ್ರಾಸ್ ಘಟಕ, ಸಾಂಸ್ಕೃತಿಕ ವಿಭಾಗ ಹಾಗೂ ರಾಜ್ಯಶಾಸ್ತ್ರ ವಿಭಾಗಗಳ ಜಂಟಿ ಸಹಯೋಗದಲ್ಲಿ ಹಮ್ಮಿಕೊಳ್ಳಲಾಗಿದ್ದ ವಿಶೇಷ ಉಪನ್ಯಾಸ, ಕ್ವಿಜ್ ಸ್ಪರ್ಧೆ ಹಾಗೂ ಪರಿಸರ ಜಾಗೃತಿಗಾಗಿ ಗಿಡ ನೆಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು

ಕಾರ್ಯಕ್ರಮದ ಅಂಗವಾಗಿ ವಿದ್ಯಾರ್ಥಿಗಳಿಗಾಗಿ ಅಂಬೇಡ್ಕರ್ ಅವರ ಜೀವನ ಮತ್ತು ಸಾಧನೆ ಕುರಿತು ರಸಪ್ರಶ್ನೆ (ಕ್ವಿಜ್) ಸ್ಪರ್ಧೆಯನ್ನು ಆಯೋಜಿಸಲಾಗಿತ್ತು. ನಂತರ ಕಾಲೇಜು ಆವರಣದಲ್ಲಿ ಗಿಡಗಳನ್ನು ನೆಡುವ ಮೂಲಕ ಪರಿಸರ ಸಂರಕ್ಷಣೆಯ ಸಂದೇಶ ಸಾರಲಾಯಿತು. ಈ ಸಂದರ್ಭದಲ್ಲಿ ಪ್ರಾಂಶುಪಾಲ ಶಿವಕುಮಾರ್ ಕೆ, ಡಾ.ಬಿ.ಆಯ್.ಮಠಪತಿ, ಮಠಪತಿ, ಜ್ಯೋತಿ ಎಸ್.ಎನ್, ರಮ್ಯಾ ಜೆ, ಶ್ವೇತಾ ಜುಗಳೆ, ವಿಶ್ವನಾಥ್ ಪಾಟೀಲ, ಸುಭಾಷ್ ಕಾಂಬ್ಳೆ, ಅನಿತಾ, ಅಕ್ಷತಾ, ಹೇಮಾ ತುಂಬರಮಟ್ಟಿ, ಡಾ.ಡಿ.ಬಿ.ಬಿರಾದಾರ ಹಾಗೂ ಇತರ ಗಣ್ಯರು ಮತ್ತು ಶಿಕ್ಷಕ ವೃಂದದವರು ಉಪಸ್ಥಿತರಿದ್ದರು. ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.



ತೆಲಸಂಗ: ಗ್ರಾಮದ ಸರ್ಕಾರಿ ಪ್ರಥಮ ದರ್ಜೆ ಕಾಲೇಜನಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಅವರ 135ನೇ ಜಯಂತಿ ಮಹೋತ್ಸವದ ಅಂಗವಾಗಿ ಮನೆ ಮನೆಗೆ ಮನ ಮನಕೆ ಬಾಬಾ ಸಾಹೇಬರು ಎಂಬ ಅಭಿಯಾನದಡಿ ರಾಷ್ಟ್ರೀಯ ಸೇವಾ ಯೋಜನೆ, ರೆಡ್ ಕ್ರಾಸ್ ಘಟಕ, ಸಾಂಸ್ಕೃತಿಕ ವಿಭಾಗ ಹಾಗೂ ರಾಜ್ಯಶಾಸ್ತ್ರ ವಿಭಾಗಗಳ ಜಂಟಿ ಸಹಯೋಗದಲ್ಲಿ ಹಮ್ಮಿಕೊಳ್ಳಲಾಗಿದ್ದ ವಿಶೇಷ ಉಪನ್ಯಾಸ, ಕ್ವಿಜ್ ಸ್ಪರ್ಧೆ ಹಾಗೂ ಪರಿಸರ ಜಾಗೃತಿಗಾಗಿ ಗಿಡ ನೆಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.

ರಾಷ್ಟ್ರೀಯ ಯೋಜನಾ ಸಮನ್ವಯಾಧಿಕಾರಿಗಳ ಸಭೆ

ಅಧ್ಯಯನಕ್ಕೆ ಬೆಳಗಾವಿ ಆಯ್ಕೆ

ಬೆಳಗಾವಿ: ಕೃಷಿ ಕ್ಷೇತ್ರದಲ್ಲಿ ಮಕ್ಕಳ ಬಳಕೆ ಕುರಿತ ಅಧ್ಯಯನಕ್ಕೆ ಸಂಭಂದಿಸಿದಂತೆ ನವದೆಹಲಿಯಿಂದ ಜಿಲ್ಲೆಯನ್ನು ಪ್ರಾಯೋಗಿಕವಾಗಿ ಆಯ್ಕೆ ಮಾಡಲಾಗಿದ್ದು, ಸದರಿ ಅಧ್ಯಯನಕ್ಕೆ ಸಂಬಂಧಿಸಿದಂತೆ ಕ್ರಿಯಾ ಯೋಜನೆಯನ್ನು ರೂಪಿಸುವಂತೆ ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ಅವರು ತಿಳಿಸಿದರು.

ಗುರುವಾರ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜರುಗಿದ ರಾಷ್ಟ್ರೀಯ ಯೋಜನಾ ಸಮನ್ವಯಾಧಿಕಾರಿಗಳ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಮೂರು ವರ್ಷಗಳ ಈ ಯೋಜನೆ ಕುರಿತು ವಿಸ್ತøತ ಕ್ರಿಯಾಯೋಜನೆ ರೂಪಿಸಿ ಇತರೆ ಇಲಾಖೆಗಳೊಂದಿಗೆ ಸಮನ್ವಯ ಸಾಧಿಸಿ ನಿರಂತರ ಸಭೆಳನ್ನು ಆಯೋಜಿಸುವಂತೆ ಹೇಳಿದರು.

ಕೃಷಿ ಕ್ಷೇತ್ರದಲ್ಲಿ ಮಕ್ಕಳ ಬಳಕೆ ಅಧ್ಯಯನ

ಈ ಕುರಿತು ಗ್ರಾಮಿಣ ಪ್ರದೇಶಗಳಲ್ಲಿ ಜಾಗೃತಿ ಮೂಡಿಸುವುದರ ಜೊತೆಗೆ ಕಾರ್ಯಾಗಾರಗಳನ್ನು ಆಯೋಜಿಸಬೇಕು. ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ, ಉದ್ಯೋಗದಾತರು, ಉದ್ಯೋಗಸ್ಥರು ಹಾಗೂ ಗುತ್ತಿಗೆದಾರರಿಗೂ ಕಾರ್ಯಾಗಾರಗಳನ್ನು ಆಯೋಜಿಸಿ ಈ ಯೋಜನೆಯ ಮಾಹಿತಿ ಹಾಗೂ ಜಾಗೃತಿ ಮೂಡಿಸಬೇಕು.

ಆಯ್.ಎಲ್.ಓ ಪ್ರತಿನಿಧಿ ಜೊತೆ ನಿರಂತರ ಸಂಪರ್ಕ ಸಾಧಿಸಬೇಕು. ಸಧ್ಯ ರಚಿಸಲಾದ ಸಮಿತಿಯ ಜೊತೆಗೆ ಉಪಸಮಿತಿ ರಚಿಸಿ ಯೋಜನೆಯ ಕುರಿತು ಕ್ರಿಯಾಯೊಜನೆ ರಚಿಸಿ ಯೋಜನೆಯನ್ನು ಯಶಸ್ವಿಯಾಗಿ ಅನು ಅನುಷ್ಠಾನ ಗೊಳಿಸುವಂತೆ ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ಅವರು ಸೂಚನೆ ನೀಡಿದರು. ರಾಷ್ಟ್ರೀಯ ಯೋಜನಾ ಸಂಯೋಜಕರಾದ ರಂಜಿತ ಪ್ರಕಾಶ ಅವರು ಮಾತನಾಡಿ ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆ ಸಾಮಾಜಿಕ ನ್ಯಾಯ ಮತ್ತು ಅಂತರ ರಾಷ್ಟ್ರೀಯವಾಗಿ ಗುರುತಿಸಲ್ಪಟ್ಟ ಮಾನವ ಮತ್ತು ಕಾರ್ಮಿಕ ಹಕ್ಕುಗಳನ್ನು ಉತ್ತೇಜಿಸಲು ಮೀಸಲಾಗಿರುವ ವಿಶೇಷ ಸಂಸ್ಥೆಯಾಗಿದೆ ಎಂದರು.

ಸಭೆಯಲ್ಲಿ ಸಹಾಯಕ ಕಾರ್ಮಿಕ ಆಯುಕ್ತ ಕೆ.ಬಿ.ನಾಗರಾಜ, ಜಿಲ್ಲಾ ಪಂಚಾಯತ ಯೋಜನಾ ನಿರ್ದೇಶಕ ರವಿಕುಮಾರ ಬಂಗಾರಪ್ಪನವರ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಆಯ್.ಪಿ.ಗಡಾದ, ಜಿಲ್ಲಾ ಕಾರ್ಮಿಕ ಅಧಿಕಾರಿಗಳಾದ ಮಲ್ಲಿಕಾರ್ಜುನ ಜೋಗುರ, ರಾಜೇಶ ಜಾಧವ, ಕಾರ್ಮಿಕ ನೀರಿಕ್ಷಕರು ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳು ಸಭೆಯಲ್ಲಿ ಹಾಜರಿದ್ದರು.



ತರಬೇತಿ ನೀಡುವುದು ಮುಖ್ಯ ಉದ್ದೇಶ

ತ್ರಿಪಕ್ಷೀಯ ಸಾಮಾಜಿಕ ಸಂವಾದ ಮೂಲಕ ಕಾರ್ಮಿಕ ನೀತಿ ಮತ್ತು ಆರ್ಥಿಕ ಪ್ರಗತಿಯ ಮೇಲೆ ಪ್ರಭಾವ ಬೀರಲು ಸರ್ಕಾರಗಳು, ಉದ್ಯೋಗದಾತರು ಮತ್ತು ಕಾರ್ಮಿಕರ ನಡುವೆ ಸಹಕಾರವನ್ನು ಬೆಳೆಸುವುದರ ಜೊತೆಗೆ ಕೆಲಸದ ಭವಿಷ್ಯದ ಕುರಿತು ಸಂಶೋಧನೆಯನ್ನು ಪ್ರಕಟಿಸುವುದು ಮತ್ತು ಅಂತಾರಾಷ್ಟೀಯ ತರಬೇತಿ ಕೇಂದ್ರ ಮೂಲಕ ತರಬೇತಿಯನ್ನು ಒದಗಿಸುವುದು ಇದರ ಮುಖ್ಯ ಉದ್ದೇಶವಾಗಿದ್ದು ರಾಜ್ಯದಲ್ಲಿ ಪ್ರಾಯೋಗಿಕವಾಗಿ ರಾಯಚೂರು, ಚಿಕ್ಕಮಂಗಳೂರು, ಬಾಗಲಕೋಟೆ, ಬೆಳಗಾವಿ ಹಾಗೂ ಕೊಡಗು ಜಿಲ್ಲೆಗಳನ್ನು ಆಯ್ಕೆ ಮಾಡಲಾಗಿದೆ ಎಂದು ಜಿಲ್ಲಾಧಿಕಾರಿ ತಿಳಿಸಿದರು.

ಅಂಬೇಡ್ಕರ್ ಟ್ರೋಫಿ ಕ್ರಿಕೆಟ್ ಪಂದ್ಯಾವಳಿಗೆ ಚಾಲನೆ

ಬೆಳಗಾವಿ: ವಿಶ್ವರತ್ನ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ 135ನೇಜಯಂತಿಯ ಅಂಗವಾಗಿ ಕರ್ನಾಟಕ ದಲಿತ ಸಂಘರ್ಷ ಸಮಿತಿ, ಭೀಮವಾದ ಮತ್ತು ಬೆಳಗಾವಿಯ ಕಂಗ್ರಾಳ ಗಲ್ಲಿಯ ಜೈ ಭೀಮ್ ಯುವಕ ಮಂಡಳದ ನೇತೃತ್ವದಲ್ಲಿ ವಿಶ್ವರತ್ನ ಬಾಬಾಸಾಹೇಬ್ ಭೀಮರಾವ್ ಅಂಬೇಡ್ಕರ್ ಟ್ರೋಫಿ-2026ಗೆ ಚಾಲನೆ ನೀಡಲಾಯಿತು.

ಗುರುವಾರ ಬೆಳಗಾವಿ ನಗರದ ಸರ್ದಾರ್ಸ್ ಮೈದಾನದಲ್ಲಿ ವಿಶ್ವರತ್ನ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ 135ನೇ ಜಯಂತಿಯ ಹಿನ್ನೆಲೆ ವಿಶ್ವರತ್ನ ಬಾಬಾಸಾಹೇಬ್ ಭೀಮರಾವ್ ಅಂಬೇಡ್ಕರ್ ಟ್ರೋಫಿ-2026ನ್ನು ಆಯೋಜಿಸಲಾಗಿದೆ.

ಈ ಪಂದ್ಯಾವಳಿಗೆ ಉತ್ತರ ವಿಧಾನಸಭಾ ಕ್ಷೇತ್ರದ ಶಾಸಕ ಆಸೀಫ್ ಸೇಠ್, ಕಾಂಗ್ರೆಸ್ ಯುವ ನಾಯಕ ರಾಹುಲ್ ಜಾರಕಿಹೊಳಿ, ಮಹಾನಗರ ಪಾಲಿಕೆ ಆಯುಕ್ತರಾದ ಕಾರ್ತಿಕ್ ಎಂ., ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕರಾದ ರಾಮನಗೌಡ ಕನ್ನೊಳ್ಳಿ, ಡಿ.ಡಿ ಪಿ ಐ ಲೀಲಾವತಿ ಹಿರೇಮಠ, ಬಿ.ಇ.ಓ ರವಿ ಭಜಂತ್ರಿ, ಕೆಪಿಸಿಸಿ ಸದಸ್ಯ ಮಲಗೌಡ ಪಾಟೀಲ್, ಬೆಳಗಾವಿ ಜಿಲ್ಲಾ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಬಸವರಾಜ್ ರಾಯವ್ವಗೋಳ, ದಲಿತ ಮುಖಂಡ ಮಲ್ಲೇಶ್ ಚೌಗಲೆ, ಸಿದ್ರಾಯಿ ಮೇತ್ರಿ, ಪರಶುರಾಮ್ ವಗ್ಗನ್ನವರ, ನಸ್ಸೀರ್ ಪಟ್ಟೇಗಾರ, ಬಾಬು ಪುಜಾರಿ, ಸಿದ್ದಪ್ಪ ಕಾಂಬಳೆ, ದೀಪಕ ಗುಡಗನಟ್ಟಿ ಸೇರಿದಂತೆ ಗಣ್ಯರ ಉಪಸ್ಥಿತಿಯಲ್ಲಿ ದೀಪ ಬೆಳಗಿಸಿ ಪಂದ್ಯಾವಳಿ ಉದ್ಘಾಟಿಸಿದರು.

> ವಿಶ್ವರತ್ನ ಬಾಬಾಸಾಹೇಬ್ ಅಂಬೇಡ್ಕರ್ ಅವರ 135ನೇ ಜಯಂತಿಯ ನಿಮಿತ್ತ ಕ್ರಿಕೆಟ್ ಪಂದ್ಯವನ್ನು ಆಯೋಜಿಸಿದ ಆಯೋಜಕರಾದ ಸಿದ್ರಾಯಿ ಮೇತ್ರಿ, ಬಸವರಾಜ್ ರಾಯಪ್ಪಗೊಳ ಶ್ಲಾಘನೀಯ. ಯುವಕರು ಸದೃಢ ಸಮಾಜ ನಿರ್ಮಾಣಕ್ಕೆ, ಆಟೋಟಗಳಲ್ಲಿ ತೊಡಗಿಕೊಳ್ಳಬೇಕು.
>
> ■ ಆಸೀಫ್ ಸೇಠ್, ಉತ್ತರ ಕ್ಷೇತ್ರದ ಶಾಸಕ

ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ 135ನೇ ಜಯಂತಿ

ಕಾಂಗ್ರೆಸ್ ಯುವ ನಾಯಕ ರಾಹುಲ್ ಜಾರಕಿಹೊಳಿ ಅವರು ಯುವಕರಲ್ಲಿ ಕ್ರೀಡಾ ಮನೋಭಾವನೆ ಹೆಚ್ಚಾಗಬೇಕು. ಯುವಕರು ದೈಹಿಕ ಮತ್ತು ಮಾನಸೀಕವಾಗಿ ಸದೃಢರಾಗಬೇಕೆಂಬ ಉದ್ದೇಶದಿಂದ ಡಾ. ಅಂಬೇಡ್ಕರರ ಜಯಂತಿಯ ಅಂಗವಾಗಿ ಕ್ರಿಕೇಟ್‌ಪಂದ್ಯಾವಳಿಯನ್ನು ಆಯೋಜಿಸಿದ್ದ ಕಾರ್ಯವನ್ನು ಪ್ರಶಂಸಿಸಿದರು.

ಈ ವೇಳೆ ಕ್ರಿಕೆಟ್ ಪಂದ್ಯಾವಳಿಯಲ್ಲಿ ಭಾಗವಹಿಸಲು ವಿವಿಧ ಕ್ರಿಕೆಟ್ ತಂಡಗಳು ಪಂದ್ಯಾವಳಿಯಲ್ಲಿ ರೋಚಕ ಪ್ರದರ್ಶನಗಳನ್ನು ನೀಡಿದರು. ಕಾಂಗ್ರೆಸ್ ಪಕ್ಷದ ಹಲವು ಮುಖಂಡರುಗಳು ಮಹಾನಗರ ಪಾಲಿಕೆಯ ಅಧಿಕಾರಿಗಳು ಸೇರಿದಂತೆ ಇತರರು ಇದ್ದರು.

ಏ.26ರಿಂದ ಶಿಲಾ ಮಂಟಪ ಲೋಕಾರ್ಪಣೆ

ಗೋಕಾಕ: ತಾಲೂಕಿನ ಬೆಟಗೇರಿ ಗ್ರಾಮಸ್ಥರ ಸಹಯೋಗದಲ್ಲಿ ಬಸವ ಜಯಂತಿ ಹಾಗೂ 775 ವರ್ಷ ಬಾಳಿದ ಮಹಾತಪಸ್ವಿ ಜಗದ್ಗುರು ಬೂದೀಶ್ವರ ಮಹಾಶಿವಯೋಗಿಗಳ ಶಿಲಾ ಮಂಟಪ ಲೋಕಾರ್ಪಣೆ ನಿಮಿತ್ತ ಬೆಟಗೇರಿ ಗ್ರಾಮದಲ್ಲಿ ಪ್ರಪ್ರಥಮವಾಗಿ ಇದೇ ಏ.26 ರಿಂದ ಏ.30 ರವರೆಗೆ ಹೊಸಳ್ಳಿ ಮತ್ತು ಕೊಪ್ಪಳ ಶ್ರೀಗಳಿಂದ ಆಧ್ಯಾತ್ಮಿಕ ಪ್ರವಚನದ ಆಮಂತ್ರಣ ಪತ್ರಿಕೆ ಬಿಡುಗಡೆ ಕಾರ್ಯಕ್ರಮ ಸ್ಥಳೀಯ ಮಹಾಲಕ್ಷ್ಮಿ ದೇವಾಲಯದ ಸಭಾಂಗಣದಲ್ಲಿ ನಡೆಯಿತು.

ಏ.26 ರಿಂದ ಏ.29 ರವರೆಗೆ ಹೊಸಳ್ಳಿಯ ಅಭಿನವ ಬೂದೀಶ್ವರ ಸ್ವಾಮಿಜಿ ಅವರಿಂದ ನಾಲ್ಕು ದಿನಗಳ ಕಾಲ ಪ್ರತಿ ದಿನ

ಸಂಜೆ 7 ಗಂಟೆಯಿಂದ 8 ಗಂಟೆಯವರೆಗೆ ವಿವಿಧ ವಿಷಗಳ ಮೇಲೆ ಶ್ರೀ ಗಜಾನನ ವೇದಿಕೆ ಮೇಲೆ ಪ್ರವಚನ, ಏ.30ರಂದು ಪ್ರವಚನ ಮಂಗಲ ಕಾರ್ಯಕ್ರಮ, ಬೆಳಿಗ್ಗೆ 10 ಗಂಟೆಗೆ ಕೊಪ್ಪಳ ಗವಿಸಿದ್ದೇಶ್ವರ ಮಠದ ಅಭಿನವ ಗವಿಸಿದ್ದೇಶ್ವರ ಸ್ವಾಮೀಜಿ ಅವರಿಂದ ಸ್ಥಳೀಯ ವಿವಿಡಿ ಸರಕಾರಿ ಪ್ರೌಢ ಶಾಲೆಯ ಆವರಣದಲ್ಲಿ ಆಧ್ಯಾತ್ಮಿಕ ಪ್ರವಚನ ಜರುಗಲಿದೆ.

ಏ.26ರಂದು ಸಂಜೆ 5 ಗಂಟೆಗೆ ಸ್ಥಳೀಯ ಆಡವಿಸಿದ್ದೇಶ್ವರ ದೇವಸ್ಥಾನದಿಂದ ಶ್ರೀ ಗಜಾನನ ವೇದಿಕೆ ತನಕ ಸುಮಂಗಲೆಯರಿಂದ ಆರತಿ ಮತ್ತು ಕುಂಭಮೇಳ, ಸಕಲ ವಾದ್ಯಮೇಳಗಳೊಂದಿಗೆ ಭವ್ಯ ಸ್ವಾಗತ ಜರುಗಲಿದೆ. ಏ.30ರಂದು ಬೆಳಿಗ್ಗೆ 8 ಗಂಟೆಗೆ ಬಳಗಾನೂರದ ಶಿವಶಾಂತವೀರ ಶರಣರಿಂದ ಶಿವಭಜನೆ ಮೂಲಕ ಗ್ರಾಮದ ವಿವಿಧಡೆ ಪಾದಯಾತ್ರೆ ನಡೆಯಲಿದೆ.

ಕಲ್ಲೂರದ ಶಂಕರಯ್ಯ ಗುರುಮಠ ಅವರಿಂದ ಸಂಗೀತ, ಮಲ್ಲಿಕಾರ್ಜುನ ಕೊಡಗನೂರ ಅವರಿಂದ ತಬಲಾ ಸೇವೆ ನಡೆಯಲಿದೆ. ಸ್ಥಳೀಯ ಹಾಗೂ ಸುತ್ತಲಿನ ಹಳ್ಳಿಗಳ ಹರ, ಗುರು, ಚರಮೂರ್ತಿಗಳು, ಸಂತ, ಶರಣರು ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಿದ್ದಾರೆ.

ಸ್ಥಳೀಯ ಪಿಕೆಪಿಎಸ್ ಅಧ್ಯಕ್ಷ ಬಸವಂತ ಕೋಣಿ, ಈರಯ್ಯ ಹಿರೇಮಠ, ವಿಜಯ ಹಿರೇಮಠ, ಈಶ್ವರ ಬಳಿಗಾರ, ಲಕ್ಷ್ಮಣ ನೀಲಣ್ಣವರ, ಬಸವರಾಜ ಪಣದಿ, ತಮ್ಮಣ್ಣ ಗಾಣಿಗಿ ಗೌಡಪ್ಪ ದೇಯಣ್ಣವರ, ಈರಣ್ಣ ಬಳಿಗಾರ, ಶ್ರೀಧರ ದೇಯಣ್ಣವರ, ವಿಠಲ ಕೋಣಿ, ಈರಪ್ಪ ದೇಯಣ್ಣವರ, ರಾಮಣ್ಣ ನೀಲಣ್ಣವರ, ಹಜರತ ಮಿರ್ಜಾನಾಯ್ಕ, ಮಲ್ಲಪ್ಪ ಪಣದಿ, ರಾಮಣ್ಣ ದೇಯಣ್ಣವರ,, ದುಂಡಪ್ಪ ಕಂಬಿ, ಸುರೇಶ ನೀಲಣ್ಣವರ, ಭರಮಣ್ಣ ಪೂಜೇರ, ದುಂಡಪ್ಪ ಮಾಳೇದ, ಬಾಳಪ್ಪ ಕನೋಜಿ, ರಾಚಪ್ಪ ಮುರಗೋಡ, ಮುತ್ತೆಪ್ಪ ದೇಯಣ್ಣವರ ಸೇರಿದಂತೆ ಕೊಪ್ಪಳ ಮತ್ತು ಹೊಸಳ್ಳಿ ಶ್ರೀಗಳ ಪ್ರವಚನ ಆಯೋಜನೆ ಸಮಿತಿ ಪದಾಧಿಕಾರಿಗಳು, ಸದಸ್ಯರು, ಯುವಕರು, ಸ್ಥಳೀಯ ಹಿರಿಯ ನಾಗರಿಕರು ಇದ್ದರು.



ದಾನ, ಧರ್ಮ, ದಾಸೋಹ, ಪರೋಪಕಾರ ಸದ್ಗುಣ ರೂಢಿಸಿಕೊಳ್ಳಿ

ಮುಗಳಖೋಡ: ಮನುಷ್ಯ ಜನ್ಮವು ಶ್ರೇಷ್ಠವಾದ ಜನ್ಮವು. ಈ ಪವಿತ್ರವಾದ ಜನ್ಮ ಪಡೆದ ನಂತರ ಸತ್ಸಂಗ, ಧರ್ಮಕಾರ್ಯದಲ್ಲಿ ಪಾಲ್ಗೊಂಡು ಜೀವನವನ್ನು ಸಾಕಾರಗೊಳಿಸಿಕೊಳ್ಳಬೇಕು. ದಾನ, ಧರ್ಮ, ದಾಸೋಹ, ಪರೋಪಕಾರ ಸದ್ಗುಣಗಳನ್ನು ಮೈಗೂಡಿಸಿಕೊಂಡರೆ ಜೀವನವೂ ಸಾರ್ಥಕವಾಗುವುದೆಂದು ಹಿಪ್ಪರಗಿಯ ಶ್ರೀ ಸಂಗಮೇಶ್ವರ ಮಠದ ಪೀಠಾಧಿಪತಿ ಪ್ರಭುಜಿ ಮಹಾರಾಜರು ಬೆನ್ನಾಳೆ ಆಶೀರ್ವಚನ ನೀಡಿದರು.

ಅವರು ಪಟ್ಟಣದ ಲಿಂಗೈಕ್ಯ ಭೀಮಪ್ಪ ಯಡವಣ್ಣವರ ಮಹಾರಾಜರ 36ನೇ ಪುಣ್ಯಸ್ಮರಣೋತ್ಸವದ ಪ್ರಯುಕ್ತ ಜ್ಞಾನಯಜ್ಞ ಸಪ್ತಾಹ, ವಿಮಲಬ್ರಹ್ಮ ನಿರೂಪಣೆ ಕಾರ್ಯಕ್ರಮದ ಸನ್ನಿದಾನವಹಿಸಿ ಆಶೀರ್ವಚನ ನೀಡಿದರು. ಪಾಲಬಾವಿ ಗಿರೆಪ್ಪ ಮಹಾರಾಜರು, ಶಶಿಕಾಂತ ಗುರೂಜಿ, ಅರವಿಂದ ವಕೀಲರು, ಮಹಾದೇವ ಮೇತ್ರಿ ಸಂತರು ಪ್ರವಚನ ನೀಡಿದರು.

ಮಾಜಿ ಶಾಸಕ ಪಿ. ರಾಜೀವ್, ಬಿಜೆಪಿ ಕುಡಚಿ ಮಂಡಲ ಅಧ್ಯಕ್ಷ ಸಿದ್ದು ಮೂಡಲಗಿ, ಮಲ್ಲಪ್ಪ ಯಡವಣ್ಣವರ, ಡಾ.ಗಣಪತಿ ಕುಲಿಗೋಡ, ಪುರಸಭೆಯ ಮುಖ್ಯಾಧಿಕಾರಿ ಮಹೇಶ ಶೆಟ್ಟಿ, ಇಂಜಿನಿಯರ್ ಎಸ್.ಆರ್.ಚೌಗಲಾ, ಭೀಮಶಿ ಬನಶಂಕರಿ, ಪುರಸಭೆಯ ಸದಸ್ಯರಾದ ಚನ್ನಪ್ಪ ಯಡವಣ್ಣವರ, ಮಹಾಂತೇಶ ಯರಡತ್ತಿ, ಹಾಲಪ್ಪ ಶೇಗುಣಸಿ, ಪರಪ್ಪ ಖೇಡಗೌಡರ, ರಾವಸಾಬ ಗೌಲೆತ್ತಿನವರ, ಪಿಕೆಪಿಎಸ್ ಸಂಘದ ಅಧ್ಯಕ್ಷ ಶಿವಾನಂದ ಗೋಕಾಕ, ಉಪಾಧ್ಯಕ್ಷ ಹನುಮಸಾಬ ನಾಯಿಕ, ಶಿವಾನಂದ ಮೆಕ್ಕಳಕ್ಕಿ, ಲಕ್ಷ್ಮಣ ಗೋಕಾಕ, ಅಶೋಕ ಬಾಗಿ, ಮೋಹನ್ ಲೋಹರ, ವಿಠಲ ಯಡವಣ್ಣವರ, ಗೋಪಾಲ ಗೋಕಾಕ, ಶ್ರೀಪಾಲ ಕುರಬಳ್ಳಿ, ಶಿವಲಿಂಗ ಯರಡತ್ತಿ, ಮಹಾದೇವ ಶೇಗುಣಶಿ, ಕೃಷ್ಣರಾವ್ ನಾಯಿಕ, ಅಗ್ರಾಣಿ, ಶೇಗುಣಸಿ, ಮುಪ್ಪಯ್ಯ ಹಿರೇಮಠ, ಅಶೋಕ ಗಸ್ತಿ, ಗೋಪಾಲ ಯಡವಣ್ಣವರ, ಚೇತನ್ ಯಡವಣ್ಣವರ, ಮಹಾದೇವ ಯಡವಣ್ಣವರ ಇತರರು ಇದ್ದರು. ನಂತರ ದಾಸೋಹದ ಮಹಾಮನೆಯಲ್ಲಿ ಅನ್ನ ಸಂತರ್ಪಣೆ ನೆರವೇರಿತು.



ಕ್ರೀಡೆ ಬದುಕಿನ ಅವಿಭಾಜ್ಯ ಅಂಗ

ಬೆಳಗಾವಿ: ಕ್ರೀಡೆ ನಮ್ಮ ಬದುಕಿನ ಅವಿಭಾಜ್ಯ ಅಂಗವಾಗಿದೆ. ಒಳ್ಳೆಯ ಆರೋಗ್ಯ ನಮ್ಮ ಬದುಕಿನಲ್ಲಿ ಭರವಸೆಯನ್ನು ಹೊತ್ತು ತರುತ್ತದೆ. ಒಳ್ಳೆಯ ಆರೋಗ್ಯ ಹೊಂದಲು ಕ್ರೀಡೆ ನಿರ್ಣಾಯಕ ಪಾತ್ರ ವಹಿಸುತ್ತದೆ ಎಂದು ಪೊಲೀಸ್ ಆಯುಕ್ತ ಬೊರಸೆ ಭೂಷಣ್ ಗುಲಾಬರಾವ್ ಹೇಳಿದರು.

ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ಸ್ನಾತಕೋತ್ತರ ವಿದ್ಯಾರ್ಥಿ ಒಕ್ಕೂಟ ಆಯೋಜಿಸಿದ್ದ ವಾರ್ಷಿಕ ಕ್ರೀಡಾಕೂಟಗಳ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿದರು. ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ವಿದ್ಯಾರ್ಥಿ ಜೀವನ ಪ್ರತಿಯೊಬ್ಬರ ಬದುಕಿನ ಮಹತ್ತರ ಘಟ್ಟ, ವಿದ್ಯಾರ್ಥಿಗಳು ತಮ್ಮ ಸಮಯದ ಸದುಪಯೋಗ ಪಡೆಯಬೇಕು ಮತ್ತು ಮಾದಕ ವಸ್ತುಗಳಿಂದ ದೂರವಿರಬೇಕು ಎಂದು ಕಿವಿಮಾತು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕುಲಪತಿ ಪ್ರೊ. ಸಿ. ಎಂ. ತ್ಯಾಗರಾಜ ಇವರು ಮಾತನಾಡಿ, ಕ್ರೀಡೆ ಮನಸ್ಸಿಗೆ ಹೊಸ ಚೇತನ ತರುತ್ತದೆ. ಸಮತೋಲನದ ಬದುಕನ್ನು ಹೊಂದಲು ಕ್ರೀಡೆ ಮತ್ತು ವ್ಯಾಯಾಮ ಅತ್ಯಗತ್ಯ, ಹೀಗಾಗಿ ಪ್ರತಿಯೊಬ್ಬರು ತಮ್ಮ ವೈಯಕ್ತಿಕ ಜೀವನದಲ್ಲಿ ಕ್ರೀಡೆ ಮತ್ತು ವ್ಯಾಯಾಮಕ್ಕೆ ಪ್ರಾಮುಖ್ಯತೆ ನೀಡಬೇಕು ಎಂದು ಹೇಳಿದರು.

ಕುಲಸಚಿವ ಸಂತೋಷ ಕಾಮಗೌಡ,ವಿದ್ಯಾರ್ಥಿ ಒಕ್ಕೂಟದ ನಿರ್ದೇಶಕಿ ಡಾ. ಸುಷ್ಮಾ ಆರ್, ಕ್ರೀಡಾ ಸಂಯೋಜಕ ಡಾ.ಚಂದ್ರಶೇಖರ ಬನಸೋಡೆ, ಪ್ರಧಾನ ಕಾರ್ಯದರ್ಶಿ ಸಮರ್ಥ ಹಿರೇಕೊಡಿ, ಕ್ರೀಡಾ ಕಾರ್ಯದರ್ಶಿಗಳಾದ ಭಾರತಿ ನಾಯಕ, ಯಲ್ಲಪ್ಪ ಭಜಂತ್ರಿ ಪ್ರಾಧ್ಯಾಪಕರು, ವಿದ್ಯಾರ್ಥಿಗಳು ಸೇರಿದಂತೆ ಇತರರು ಇದ್ದರು.



ನಷ್ಟದಲ್ಲಿರುವ ಕಾರ್ಖಾನೆಗಳಿಗೆ ಮರು ಸಾಲ ನೀಡದಿರಿ

ಬೆಳಗಾವಿ: ಡಿಸಿಸಿ ಬ್ಯಾಂಕ್ ರೈತರ ಬ್ಯಾಂಕ್ ಆಗಿದ್ದು, ನಷ್ಟದಲ್ಲಿರುವ ಸಕ್ಕರೆ ಕಾರ್ಖಾನೆಗಳಿಗೆ ಕೋಟ್ಯಂತರ ರೂಪಾಯಿ ಸಾಲ ನೀಡುತ್ತಿರುವುದರ ವಿರುದ್ಧ ರೈತ ಮುಖಂಡ ಶಶಿಕಾಂತ ಗುರೂಜಿ ಡಿಡಿಸಿ ಬ್ಯಾಂಕ್ ನಿರ್ದೇಶಕರ ವಿರುದ್ಧ ಅಸಮಾಧಾನ ಹೊರ ಹಾಕಿದರು.

ಗುರುವಾರ ನಗರದ ಚನ್ನಮ್ಮ ವೃತ್ತದಲ್ಲಿರುವ ಕನ್ನಡ ಸಾಹಿತ್ಯ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸಂಗಮ ಸಕ್ಕರೆ ಕಾರ್ಖಾನೆಗೆ 27 ಈ ಕೋಟಿ ಸಾಲ ಮಂಜೂರು ಮಾಡುವುದಾಗಿ ಡಿಸಿಸಿ ಬ್ಯಾಂಕ್ ಸಭೆಯಲ್ಲಿ ಅಧ್ಯಕ್ಷ ಅಣ್ಣಾಸಾಹೇಬ ಜೊಲ್ಲೆ ನಿರ್ಧಾರ ಕೈಗೊಂಡಿರುವುದು ಸರಿ ಇಲ್ಲ ಎಂದು ಆಕ್ರೋಶ್ ವ್ಯಕ್ತಪಡಿಸಿದರು.

ಬೆಳಗಾಂ ಶುಗರ್ಸ್ ಸಂಸ್ಥೆಯೂ 16 ಕೋಟಿ ಸಾಲಕ್ಕಾಗಿ ಮನವಿ ಮಾಡಿರುವುದಾಗಿ ತಿಳಿಸಿದ ಅವರು, ಈಗಾಗಲೇ ನಷ್ಟದಲ್ಲಿರುವ ಕಾರ್ಖಾನೆಗಳಿಗೆ ಮರುಮರು ಸಾಲ ನೀಡುವುದು ರೈತರ ಹಿತಾಸಕ್ತಿಗೆ ವಿರುದ್ಧವಾಗಿದೆ ಎಂದರು.

ರೈತರ ಹಣದಿಂದ ನಡೆಯುವ ಬ್ಯಾಂಕ್ ಇಂತಹ ಸಂಸ್ಥೆಗಳಿಗೆ ಹಣ ನೀಡುವುದನ್ನು ತಕ್ಷಣ ನಿಲ್ಲಿಸಬೇಕು ಎಂದು ಅವರು ಆಗ್ರಹಿಸಿದರು.

ಇದೇ ವೇಳೆ ರೈತ ಸಂಘಟನೆಯ ರಾಜ್ಯಾಧ್ಯಕ್ಷ ಚೂನ್ನಪ್ಪ ಪೂಜಾರಿ ಮಾತನಾಡಿ, ಸಂಗಮ ಸಹಕಾರಿ ಸಕ್ಕರೆ ಕಾರ್ಖಾನೆ ಸಾಲ ಕೊಡಲು ನಿನ್ನೆ ಬುಧವಾರ ನಡೆದ ಸಭೆಯಲ್ಲಿ ನಿರ್ಧಾರ ಕೈಗೊಳ್ಳಲಾಗಿದೆ. ಮಾಜಿ ಶಾಸಕ ಸಂಜಯ ಪಾಟೀಲ ಅವರಿಗೆ 123 ಕೋಟಿ ಸಾಲ ಕೊಡಲು ನಿರ್ಧಾರ ಮಾಡಿದ್ದನ್ನು ತೀವ್ರವಾಗಿ ಅಸಮಾಧಾನವನ್ನು ಹೋರ ಹಾಕಿದರು.

ಸಾಲದಲ್ಲಿ ಇರುವ ಸಕ್ಕರೆ ಕಾರ್ಖಾನೆಗಳಿಗೆ ಸಾಲ ಕೊಡಬಾರದು, ರಾಜಕಾರಣ ಮಾಡಿ ಡಿಸಿಸಿ ಬ್ಯಾಂಕ್ ಹಾಳು ಮಾಡಬೇಡಿ ಎಂದು ಎಚ್ಚರಿಸುವ ಮೂಲಕ ಆಗ್ರಹಿಸಿದರು.

ಜಯಶೀಲ ಶೆಟ್ಟಿಗೆ ಸಾಲ ಕೊಟ್ಟು ಮುಜುಗರ ಉಂಟು ಮಾಡಿದ್ದೀರಿ ಆದರ ಬದಲು ರೈತರಿಗೆ ಸಾಲ ಕೊಡಿ ಇಲ್ಲದಿದ್ದರೇ ಹೋರಾಟ ನಡೆಸಲಾಗವುದು ಎಂದು ಎಚ್ಚರಿಕೆ ನೀಡಿದರು.ಈ ವೇಳೆ ಪ್ರೇಮ್ ಚೌಗಲಾ, ಪ್ರಕಾಶ ಉಮರಾಣಿ, ಶಿವಾನಂದ ಮೆಕ್ಕಳಕಿ, ಶಿವಾನಂದ ಮುಗಳಿ ಪಾಲ್ಗೊಂಡಿದ್ದರು.



ಸಂವಿಧಾನ ಪೀಠಿಕೆಯ ಪ್ರತಿ ಹಂಚಿಕೆ

ಬೆಳಗಾವಿ: ಬೆಳಗಾವಿ ಜಿಲ್ಲಾ ಮಾಜಿ ಸೈನಿಕರ ಸಂಘಟನೆಗಳ ಮಹಾ ಒಕ್ಕೂಟದ ಕಾರ್ಯಾಲಯದಲ್ಲಿ ಸಂವಿಧಾನ ಶಿಲ್ಪಿ ಡಾ: ಬಿ. ಆರ್.ಅಂಬೇಡ್ಕರ್ ಅವರ ಭಾವಚಿತ್ರ ಪೂಜೆ ಸಲ್ಲಿಸಿ, ಸಾರ್ವಜನಿಕರಿಗೆ ಸಂವಿಧಾನ ಪೀಠಿಕೆಯ ಪ್ರತಿಗಳನ್ನು ಹಂಚುವುದರ ಮೂಲಕ ವಿಭಿನ್ನವಾಗಿ ಡಾ. ಅಂಬೇಡ್ಕರ್ ಜಯಂತಿ ಆಚರಣೆ ಮಾಡಲಾಯಿತು.

ಈ ವೇಳೆ ಮಹಾ ಒಕ್ಕೂಟದ ಜಿಲ್ಲಾಧ್ಯಕ್ಷ ಜಗದೀಶ ಪೂಜೇರಿ ಅವರು ಮಾತನಾಡಿದರು.

ಇದೇ ಸಂದರ್ಭದಲ್ಲಿ ಸಂವಿಧಾನ ಪೀಠಿಕೆಯ 200 ಪ್ರತಿಗಳನ್ನು ಸಾರ್ವಜನಿಕರಿಗೆ ಹಂಚಿ, ಡಾ. ಅಂಬೇಡ್ಕರ್ ಅವರ ಜಯಂತಿಯ ಶುಭಾಶಯ ತಿಳಿಸಲಾಯಿತು.

ಈ ವೇಳೆ ಜಿಲ್ಲಾಧ್ಯಕ್ಷ ಜಗದೀಶ ಪೂಜೇರಿ ಉಪಾಧ್ಯಕ್ಷ ಸಂಗಪ್ಪ ಮೇಟಿ, ಸಹ ಕಾರ್ಯದರ್ಶಿಗಳಾದ ಸಂತೋಷ ಮಠಪತಿ, ಹಿರಿಯರಾದ ಅಶೋಕ ಮಜಗಿ, ಬಸವರಾಜ ವನ್ನೂರ, ಮಹಿಳಾ ಘಟಕದ ಅಧ್ಯಕ್ಷೆ ಸುನಿತಾ ಪಟ್ಟಣಶೆಟ್ಟಿ, ಸದಸ್ಯರಾದ ಗೀತಾ ಗನಬಸಪ್ಪನವರ ಸೇರಿದಂತೆ ಹಲವರು ಇದ್ದರು.



ಧುಳಗನವಾಡಿಯಲ್ಲಿ ಭೀಮಗೀತ ಗಾಯನ ಯಶಸ್ವಿ



ಚಿಕ್ಕೋಡಿ: ಡಾ. ಬಿ.ಆರ್. ಅಂಬೇಡ್ಕರ ಅವರು ಭಾರತ ದೇಶಕ್ಕೆ ಸರ್ವರಿಗೂ ಸಮಾನತೆಯ ಆಧಾರದ ಮೇಲೆ ಸಂವಿಧಾನವನ್ನು ರಚಿಸಿದವರು. ಶಿಕ್ಷಣದಲ್ಲಿ ಆಗಾಧವಾದ ಪಾಂಡಿತ್ಯ ಸಾಧಿಸಿದ್ದರಿಂದಲೇ ಇಂತಹದೊಂದು ಮಹತ್ಕಾರ್ಯ ಅವರಿಂದ ಸಾಧ್ಯವಾಯಿತು ಎಂದು ಖಡಕಲಾಟ ಠಾಣೆ ಪಿಎಸ್ಐ ಕೃಷ್ಣವೇಣಿ ಗೋರನಹೊಸೂರ ಹೇಳಿದರು.

ತಾಲೂಕಿನ ಧುಳಗನವಾಡಿ ಗ್ರಾಮದಲ್ಲಿ ಚಿಕ್ಕೋಡಿಯ ಆಶಾದೀಪ ಸಮುದಾಯ ಕಲಾಕೇಂದ್ರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು ಸಹಯೋಗದಲ್ಲಿ ಈಚೆಗೆ ಹಮ್ಮಿಕೊಂಡಿದ್ದ ಭೀಮಗೀತ ಗಾಯನ ಕಲಾಸಂಭ್ರಮ ಉದ್ಘಾಟಿಸಿ ಮಾತನಾಡುತ್ತಾ, ಶಿಕ್ಷಣವನ್ನು ಪ್ರತಿಯೊಬ್ಬರೂ ಪಡೆದುಕೊಳ್ಳಬೇಕಾಗಿರುವುದು ಅತ್ಯವಶ್ಯಕವಾಗಿದೆ. ಶಿಕ್ಷಣದಿಂದಲೇ ಏನೆಲ್ಲ ಸಾಧಿಸಬಹುದು ಎಂಬುವದಕ್ಕೆ ಡಾ. ಅಂಬೇಡ್ಕರ್ ಸೇರಿದಂತಾ ಸಾಕಷ್ಟು ಮಹಾನ್ ಪುರುಷರ ಜೀವನ ಚರಿತ್ರೆಯಿಂದ ನಮಗೆ ತಿಳಿಯುತ್ತದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಮುಖ್ಯ ಶಿಕ್ಷಕ ವಿಶ್ವನಾಥ ಧುಮಾಳ ಮಾತನಾಡಿ, ಶಿಕ್ಷಣದಿಂದ ಮಾತ್ರ ನಮ್ಮ ಬದುಕನ್ನು ಸುಂದರಗೊಳಿಸಕೊಳ್ಳಬಹುದಾಗಿದೆ. ಸ್ವಾಭಿಮಾನದ ಜೀವನ ನಡೆಸಲು, ನಮ್ಮ ಹಕ್ಕುಗಳನ್ನು ಪಡೆದುಕೊಳ್ಳಲು ಶಿಕ್ಷಣ ಪಡೆದುಕೊಳ್ಳಬೇಕು ಎಂದು ಹೇಳಿದರು.

ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಭೀಮಗೀತ ಗಾಯನ, ವೀರಗಾಸೆ ಕುಣಿತ, ಡೊಳ್ಳಿನ ಪದ, ಹಾಸ್ಯ ಅಭಿನಯ, ಗೀಗೀಪದ ಮುಂತಾದ ಮನೋರಂಜನಾ ಕಾರ್ಯಕ್ರಮಗಳನ್ನು ಕಲಾವಿದರು ಪ್ರದರ್ಶಿಸಿದರು.

ನಾಯಿಂಗ್ಲಜ ಗ್ರಾಪಂ ಪಿಡಿಒ ಶಿವಾನಂದ ದೇಸಾಯಿ, ಶಿವಕುಮಾರ ಕಮತೆ, ಮಾರುತಿ ಕಾಮಗೌಡ, ಭರತ ಕಲಾಚಂದ್ರ, ಅಪ್ಪಾಸಾಹೇಬ ಖೋತ, ಆನಂದ ಕಮತೆ, ಸಂಘದ ಅಧ್ಯಕ್ಷೆ ಸುಪ್ರಿಯಾ ಕಲಾಚಂದ್ರ, ಸುಜಾತ ಮಗದುಮ್ಮ ಇತರರು ಇದ್ದರು.

ಕಿರುಸುದ್ದಿ

ನೇಹಾ ಕಂಕಣವಾಡಿ ಜಿಲ್ಲೆಗೆ ಪ್ರಥಮ

ಬಾಗಲಕೋಟೆ: ಪ್ರಸಕ್ತ 2026ನೇ ಸಾಲಿನ ಕೇಂದ್ರೀಯ ಪ್ರೌಢ ಶಿಕ್ಷಣ ಮಂಡಳಿಯ (ಸಿಬಿಎಸ್ಇ) 10ನೇ ತರಗತಿ ಪರೀಕ್ಷೆಯ ಫಲಿತಾಂಶ ಎಪ್ರೀಲ್ 15 ರಂದು ಪ್ರಕಟಗೊಂಡಿದ್ದು, ಬಸವೇಶ್ವರ ಇಂಟರ್ ನ್ಯಾಷನಲ್ ಪಬ್ಲಿಕ್ ಸ್ಕೂಲನ ವಿದ್ಯಾರ್ಥಿ ನೇಹಾ ಕಂಕಣವಾಡಿ ಶೇ.98.40 ರಷ್ಟು ಅಂಕ ಪಡೆಯುವ ಮೂಲಕ ಬಾಗಲಕೋಟೆ



ಜಿಲ್ಲೆಗೆ ಪ್ರಥಮ ಸ್ಥಾನ ಪಡೆದುಕೊಂಡಿದ್ದು, ಈ ಹಿನ್ನಲೆಯಲ್ಲಿ ಜಿಲ್ಲಾಧಿಕಾರಿ ಸಂಗಪ್ಪ, ಅಪರ ಜಿಲ್ಲಾಧಿಕಾರಿ ಅಶೋಕ ತೇಲಿ, ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಎ.ಸಿ.ಮನ್ನಿಕೇರಿ ಹಾಗೂ ಶಾಲೆಯ ಪ್ರಾಚಾರ್ಯರು ಅಭಿನಂದನೆ ಸಲ್ಲಿಸಿದ್ದಾರೆ. ನೇಹಾ ಕಂಕಣವಾಡಿ ಇಂಗ್ಲೀಷ ವಿಷಯಕ್ಕೆ 96, ಕನ್ನಡಕ್ಕೆ 99, ಗಣಿತ ವಿಷಯಕ್ಕೆ 97, ವಿಜ್ಞಾನಕ್ಕೆ 99, ಸಮಾಜ ವಿಜ್ಞಾನ ವಿಷಯಕ್ಕೆ 97 ಸೇರಿ ಒಟ್ಟು 492 ಅಂಕ ಪಡೆದು (ಶೇ.98.40) ಬಾಗಲಕೋಟೆ ಜಿಲ್ಲೆಗೆ ಪ್ರಥಮ ಸ್ಥಾನ ಪಡೆದುಕೊಂಡಿದ್ದಾರೆ. ಮಗಳ ಸಾಧನೆಗೆ ಆಹಾರ ಇಲಾಖೆಯ ಜಂಟಿ ನಿರ್ದೇಶಕ ಶ್ರೀಶೈಲ ಕಂಕಣವಾಡಿ ಅವರು ಹರ್ಷ ವ್ಯಕ್ತಪಡಿಸಿದ್ದಾರೆ.

ಎ.20ರೊಳಗಾಗಿ ಹಣ ಪಾವತಿಸದಿದ್ದರೆ ಹೋರಾಟ: ಶಿವು

ಬೀಳಗಿ: ತಾಲೂಕಿನ ಕುಂದರಗಿ ಜೆಮ್ ಸಕ್ಕರೆ ಕಾರ್ಖಾನೆಗೆ 2025-26ನೇ ಸಾಲಿನ ಹಂಗಾಮಿಗೆ ಕಬ್ಬು ಪೂರೈಸಿದ ರೈತರಿಗೆ ಎಪ್ರಿಲ್ 20ರೊಳಗಾಗಿ ರೈತರ ಖಾತೆಗೆ ಬಿಲ್ಲ ಜಮಾ ಮಾಡದಿದ್ದರೆ ಎ.21ರಂದು ಜೆಮ್ ಸಕ್ಕರೆ ಕಾರ್ಖಾನೆ ಮುಂದೆ ಉಗ್ರ ಹೋರಾಟ ಮಾಡುತ್ತೇವೆ ಎಂದು ಜೆಮ್ ಸಕ್ಕರೆ ಕಾರ್ಖಾನೆ ವ್ಯಾಪ್ತಿಯ



ಕಬ್ಬು ಬೆಳೆಗಾರರ ಸಂಘದ ಪ್ರಧಾನ ಕಾರ್ಯದರ್ಶಿ ಶಿವು ಕೆರಕಲಮಟ್ಟಿ ತಿಳಿಸಿದ್ದಾರೆ. ಪತ್ರಿಕೆಯೊಂದಿಗೆ ಅವರು ಮಾತನಾಡಿ, ಡಿಸೆಂಬರ್ ವರೆಗೆ ಪೂರೈಸಿದ ಕಬ್ಬಿಗೆ ಮಾತ್ರ ಬಿಲ್ ಪಾವತಿಸಿದ್ದು, ಇನ್ನುಳಿದ ರೈತರಿಗೆ ಬಿಲ್ ಪಾವತಿಸಿಲ್ಲ, ಇದರಿಂದ ಕಬ್ಬು ಬೆಳೆಗಾರರಿಗೆ ಬಹಳಷ್ಟು ತೊಂದರೆಯಾಗಿದೆ. ರೈತರ ವ್ಯವಹಾರ ಬಂದಾಗಿದೆ ಎಂದು ಹೇಳಿದರು. ಕಾರ್ಖಾನೆ ಆರಂಭಿಸುವಾಗ ಕಬ್ಬು ಪೂರೈಸಿದ 15 ದಿನಗಳೊಳಗಾಗಿ ರೈತರ ಖಾತೆಗೆ ಹಣ ಜಮಾ ಮಾಡುತ್ತೇವೆಂದು ಕಾರ್ಖಾನೆಯ ಆಡಳಿತ ಮಂಡಳಿ ಮತ್ತು ಹಿರಿಯ ಅಧಿಕಾರಿಗಳು ಭರವಸೆ ನೀಡಿ ಕಾರ್ಖಾನೆ ಆರಂಭಿಸಿದ್ದರು. ಆದರೆ ಜನೇವರಿ ತಿಂಗಳಿನಿಂದ ಕಾರ್ಖಾನೆ ಮುಕ್ತಾಯದ ವರೆಗೆ ಪೂರೈಸಿದ ಕಬ್ಬಿಗೆ ಇನ್ನು ಹಣ ಪಾವತಿ ಮಾಡಿಲ್ಲ ಎಂದು ಹರಿಹಾಯ್ದರು. ಕೂಡಲೆ ಕಾರ್ಖಾನೆ ಆಡಳಿತ ಮಂಡಳಿಯವರು ರೈತರ ಖಾತೆಗೆ ಹಣ ಪಾವತಿಸಬೇಕು. ಜಿಲ್ಲಾಡಳಿತ ಈ ಕುರಿತು ಮುತುವರ್ಜಿ ವಹಿಸಿ ತ್ರಿಶಂಖು ಸ್ಥಿತಿಯಲ್ಲಿರುವ ರೈತರಿಗೆ ಬೇಗನೇ ಹಣ ಪಾವತಿಸುವಂತೆ ಕ್ರಮಕೈಗೊಳ್ಳಬೇಕು. ಇಲ್ಲದಿದ್ದರೆ ಎ.21ರಿಂದ ಜೆಮ್ ಸಕ್ಕರೆ ಕಾರ್ಖಾನೆ ಮುಂದೆ ಉಗ್ರ ಹೋರಾಟ ಮಾಡುತ್ತೇವೆ. ಏನಾದರೂ ಅನಾಹುತಗಳು ಸಂಭವಿಸಿದಲ್ಲಿ ಸರ್ಕಾರ ಮತ್ತು ಕಾರ್ಖಾನೆ ಆಡಳಿತ ಮಂಡಳಿಯವರೇ ನೇರ ಹೊಣೆಗಾರರಾಗಬೇಕಾಗುತ್ತದೆ ಎಂದು ಎಚ್ಚರಿಸಿದರು. ಕಬ್ಬು ಬೆಳೆಗಾರರಾದ ಬೀರಪ್ಪ ಪೂಜಾರಿ, ಸದಾಶಿವ ಆಗೋಜಿ, ದ್ಯಾವಣ್ಣ ಬಡಿಗೇರ, ಮಲ್ಲಪ್ಪ ತೋಳಮಟ್ಟಿ, ಸಿದ್ದಪ್ಪ ಚಂಡಕಿ ಮತ್ತಿತರಿದ್ದರು.

ಅಧಿಕಾರಿಗಳ ದಾಳಿ

ಜಮಖಂಡಿ: ತಾಲೂಕಿನ ಹಿಪ್ಪರಗಿ ಗ್ರಾಮದ ನದಿ ತೀರದಲ್ಲಿ ಮರಳು ಶೇಖರಣೆಯಾಗುತ್ತಿದೆ ಎನ್ನುವ ಮಾಹಿತಿಯನ್ನಾಧಾರಿಸಿ ರಾತ್ರಿ ತಹಶೀಲ್ದಾರ್ ಮತ್ತು ತಂಡದಿಂದ ದಾಳಿ ಮಾಡಿದ್ದಾರೆ. ತಹಶೀಲ್ದಾರ್ ಅನಿಲ ಬಡಿಗೇರ, ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಅಧಿಕಾರಿಗಳು ಇದ್ದರು. ಈ ವೇಳೆ ಮಾತನಾಡಿದ ಅವರು, ಎ.15ರಂದು ಅಕ್ರಮ ಮರಳು ಶೇಖರಣೆಯ ವಿಷಯವನ್ನಾಧರಿಸಿ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಸಹಯೋಗದಲ್ಲಿ ದಾಳಿ ಮಾಡಲಾಗಿದೆ. ಅಲ್ಲಿ ಸುಮಾರು 5ರಿಂದ 6 ಟಿಪ್ಪರ್ ಅಂದರೆ ಸುಮಾರು 15 ಬ್ರಾಸ ಗಳಿಗೂ ಹೆಚ್ಚು ಮರಳು ಶೇಖರಣೆಯಾಗಿದ್ದು, ಅದನ್ನು ಇಲಾಖೆಯ ಅಧಿಕಾರಿಗಳು ಸ್ವಾಧೀನ ಪಡಿಸಿಕೊಂಡಿದ್ದಾರೆಂದು ತಿಳಿಸಿದರು.

ನಿಧನಸುದ್ದಿ

ಪ್ರಹ್ಲಾದಾಚಾರ್ಯ ನಾಮಣ್ಣಾ

ಜಮಖಂಡಿ: ನಗರದ ಸಿದ್ಧರಾಮೇಶ್ವರ ಕಾಲೋನಿ ನಿವಾಸಿ ತಾಲೂಕಿನ ಶೂರಪಾಲಿಯ ಗ್ರಾಮದ ಲಕ್ಷ್ಮೀ ನರಸಿಂಹ ದೇವಳ ವಿಸ್ವಸ್ಥ ಮಂಡಲಿ ಸದಸ್ಯ ವಿಠ್ಠಲ ನಾಮಣ್ಣಾ ಅವರ ತಂದೆ ಪ್ರಹ್ಲಾದಾಚಾರ್ಯ ನಾಮಣ್ಣಾ (90) ವಿಜಯಪುರದಲ್ಲಿ ವಯೋಸಹಜವಾಗಿ ನಿಧನರಗಿದ್ದಾರೆ.



ಮೃತರಿಗೆ ಪತ್ನಿ ಮತ್ತು ನಾಲ್ವರು ಪುತ್ರರು ಸೇರಿದಂತೆ ಅಪಾರ ಬಂಧು ಬಳಗ ಇದ್ದಾರೆ.



ಜಮಖಂಡಿ: ನಗರದ ಬಿಎಲ್‌ಡಿಇ ಸಂಸ್ಥೆಯ ವಾಣಿಜ್ಯ, ಬಿಎಚ್ ಎಸ್ ಕಲೆ ಮತ್ತು ಟಿಜಿಪಿ ವಿಜ್ಞಾನ ಮಹಾವಿದ್ಯಾಲಯದ 2025-26ನೇ ಶೈಕ್ಷಣಿಕ ವರ್ಷದ ವಿದ್ಯಾರ್ಥಿ ಒಕ್ಕೂಟ ಮತ್ತು ಕ್ರೀಡಾ ಚಟುವಟಿಕೆಗಳ ಸಮಾರೋಪ ಸಮಾರಂಭ ನಡೆಯಿತು. ಉಪಪ್ರಾಚಾರ್ಯ ಡಾ.ಡಿ.ಎಸ್.ನಿಟ್ಟೂರ, ಡಾ.ಬಿ.ಎಂ.ನುಚ್ಚಿ, ಡಾ.ಎಸ್.ಎಸ್.ಸುವರ್ಣಖಂಡಿ, ಪ್ರೊ.ಎ.ಬಿ.ಖೋತ, ಎನ್.ಎಸ್. ಕಾಖಂಡಕಿ, ಪ್ರೊ.ಶ್ರೀನಿವಾಸ ಕಟ್ಟಿಮನಿ, ಪ್ರೊ.ಎಸ್.ಪಿ.ಗದ್ಯಾಳ, ಪ್ರೊ.ಮಲ್ಲಿಕಾರ್ಜುನ ಬಿ.ಇದ್ದರು.

ಸತತ ಪರಿಶ್ರಮವೇ ಯಶಸ್ಸಿನ ಮೂಲ

ಜಮಖಂಡಿ: ಸತತ ಪರಿಶ್ರಮವೇ ಯಶಸ್ಸಿನ ಮೂಲ. ಈ ಭೂಮಿಯ ಮೇಲೆ ಅಸಾಧ್ಯವಾದುದು ಯಾವುದು ಇಲ್ಲ, ನಿರಂತರ ಅಧ್ಯಯನ ಮತ್ತು ಆತ್ಮವಿಶ್ವಾಸವಿದ್ದರೆ ಯಶಸ್ಸು ಕಟ್ಟಿಟ್ಟ ಬುತ್ತಿ ಎಂದು ಬಾಗಲಕೋಟೆ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಆನಂದ ದೇಶಪಾಂಡೆ ಹೇಳಿದರು. ನಗರದ ಬಿಎಲ್‌ಡಿಇ ಸಂಸ್ಥೆಯ ವಾಣಿಜ್ಯ, ಬಿಎಚ್ ಎಸ್ ಕಲೆ ಮತ್ತು ಟಿಜಿಪಿ ವಿಜ್ಞಾನ ಮಹಾವಿದ್ಯಾಲಯದ 2025-26ನೇ ಶೈಕ್ಷಣಿಕ ವರ್ಷದ ವಿದ್ಯಾರ್ಥಿ ಒಕ್ಕೂಟ ಮತ್ತು ಕ್ರೀಡಾ ಚಟುವಟಿಕೆಗಳ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ಸತತ ಪ್ರಯತ್ನ, ಸ್ಪಷ್ಟ ಗುರಿ, ಆತ್ಮವಿಶ್ವಾಸ ಮತ್ತು ಛಲದೊಂದಿದೆ ಅವಕಾಶಗಳನ್ನು ಸದ್ಬಳಕೆ ಮಾಡಿಕೊಳ್ಳಿ, ವಿದ್ಯಾರ್ಥಿ ಜೀವನ ಅತ್ಯಂತ ಮಹತ್ವದ್ದು, ಇಂದಿನ ಎಐ ಯುಗದಲ್ಲಿ ಕೌಶಲ್ಯಕ್ಕೆ ಹೆಚ್ಚಿನ ಮಹತ್ವ ನೀಡಿ. ಆಧುನಿಕ ತಂತ್ರಜ್ಞಾನ ಬಳಕೆಯೊಂದಿಗೆ ಕಠಿಣ ಪರಿಶ್ರಮಪಟ್ಟರೆ ಯಶಸ್ಸು ಸಾಧ್ಯ ಎಂದು ಹೇಳಿದರು. ಸಂಸ್ಥೆಯ ಆಡಳಿತಾಧಿಕಾರಿ ಪ್ರೊ.ಎಸ್.ಎಚ್.ಲಗಳಿ, ಪ್ರಾಚಾರ್ಯ ಡಾ.ಪಿ.ಡಿ.ಮೋಳ ಮಾತನಾಡಿದರು. ವಿದ್ಯಾರ್ಥಿ ಒಕ್ಕೂಟದ ಕಾರ್ಯಾಧ್ಯಕ್ಷ ಡಾ.ರವಿಶಂಕರ ಬಿ.ಎಸ್. ಹಾಗೂ ದೈಹಿಕ ನಿರ್ದೇಶಕ ಡಾ.ಕೆ. ಎಂ.ಶಿರಹಟ್ಟಿ ವರದಿ ವಾಚನ ಮಾಡಿದರು. ಕಾಲೇಜಿನ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದಿಂದ ವಿದ್ಯಾರ್ಥಿಗಳೇ ಸಿದ್ಧಪಡಿಸಿದ ಜಮಖಂಡಿ ಬಿಎಲ್‌ಡಿಇ ದರ್ಪಣ ಪ್ರಾಯೋಗಿಕ ಪತ್ರಿಕೆಯನ್ನು ಬಿಡುಗಡೆ ಮಾಡಲಾಯಿತು. ದತ್ತಿಗಳು ನೀಡಿದ ಒಟ್ಟು 56 ದತ್ತಿನಿಧಿಗಳನ್ನು ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಹಸ್ತಾಂತರಿಸಲಾಯಿತು.



ಗುಳೇದಗುಡ್ಡ: ತಹಶೀಲ್ದಾರ್ ಕಚೇರಿಯಲ್ಲಿ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ ಅವರ ಜಯಂತಿ ಆಚರಿಸಲಾಯಿತು. ತಾಪಂ ಇಒ ಮಲ್ಲಿಕಾರ್ಜುನ ಬಡಿಗೇರ ಸೇರಿದಂತೆ ಪಟ್ಟಣದ ಪ್ರಮುಖರು ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿದರು. ಸಮಾಜದ ಮುಖಂಡರಾದ ರಡ್ಡಿ ನಡುವಿನಮನಿ, ಫಕೀರಪ್ಪ ತಳವಾರ, ಮಲ್ಲಿಕಾರ್ಜುನ ತುಪ್ಪದ, ಪಿ.ಪಿ.ತಳವಾರ, ಚವ್ಹಾಣ, ಭಜಂತ್ರಿ, ಹುನಗುಂದ, ರವಿ ಬೀಳಗಿ, ಶಿವು ಮನ್ನಿಕಟ್ಟಿ ಸೇರಿದಂತೆ ಇತರರು ಇದ್ದರು.

ಗ್ರಾಮೀಣಾಭಿವೃದ್ಧಿ ಯೋಜನೆಗಳ ಅನುಷ್ಠಾನ | ತೆರಿಗೆ ಸಂಗ್ರಹದಲ್ಲಿ ಸಾಧನೆ

ಜಿಲ್ಲೆಗೆ ಬಾದಾಮಿ ತಾಲೂಕು ಅಗ್ರಸ್ಥಾನ

ಬಾದಾಮಿ: ಗ್ರಾಮಗಳ ಅಭ್ಯುದಯವಾಗದ ಹೊರತು ರಾಷ್ಟ್ರದ ಅಭಿವೃದ್ಧಿ ಅಸಾಧ್ಯವೆಂಬುದು ಮಹಾತ್ಮ ಗಾಂಧೀಜಿಯವರ ನಿಲುವಾಗಿತ್ತು. ಬಾಪೂಜಿಯವರ ಗ್ರಾಮ ಸ್ವರಾಜ್ಯ ಪರಿಕಲ್ಪನೆ ಸಾಕಾರಗೊಳಿಸಲು ಸರ್ಕಾರ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಇಲಾಖೆ ಮೂಲಕ ಯೋಜನೆಗಳನ್ನು ಜಾರಿಗೆ ತಂದಿದೆ. ಗ್ರಾಮೀಣ ಜನರ ಬದುಕನ್ನು ಹಸನುಗೊಳಿಸಲು, ಗ್ರಾಮಗಳ ಸಮಗ್ರ ಅಭಿವೃದ್ಧಿಗೆ ಜಾರಿಗೆ ತಂದ ಯೋಜನೆಗಳನ್ನು ಜನರಿಗೆ ಪರಿಣಾಮಕಾರಿಗೆ ತಲುಪಿಸಲು ಬಾದಾಮಿ ತಾಲೂಕು ಸದಾ ಮುಂದಿದೆ. ಪಿಎಂಎವೈ ಬಸವ ಅಂಬೇಡ್ಕರ್ ವಸತಿ ಯೋಜನೆ, 15ನೇ ಹಣಕಾಸು ಯೋಜನೆ, ತೆರಿಗೆ ಸಂಗ್ರಹದಲ್ಲಿ ಗುರಿ ಮೀರಿದ ಸಾಧನೆಗೈದು ಜಿಲ್ಲೆಗೆ ಪ್ರಥಮ ಸ್ಥಾನ ಗಳಿಸಿದೆ.

ತೆರಿಗೆ ಸಂಗ್ರಹ ಗ್ರಾಮ ಪಂಚಾಯತಿ ಪ್ರಮುಖ ಹಾಗೂ ಪ್ರಾಥಮಿಕ ಆದಾಯದ ಮೂಲವಾಗಿದೆ. ಆರ್ಥಿಕ ಸ್ವಾವಲಂಬನೆಗೆ ತೆರಿಗೆ ಸಂಗ್ರಹವೇ ಅಡಿಪಾಯವಾಗಿದೆ. ಜನರ ಮೂಲಭೂತ ಸೌಲಭ್ಯ ಹಾಗೂ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಸಹಾಯಕವಾಗಿದೆ. 2025-26 ಸಾಲಿನಲ್ಲಿ ಬಾದಾಮಿ ತಾಲೂಕು ರೂ.3,74,59,530 ತೆರಿಗೆ ಸಂಗ್ರಹಿಸುವ ಗುರಿ ಇತ್ತು.

ಗುರಿಗೆ ಎದುರಾಗಿ ರೂ 4,62,49,486 ತೆರಿಗೆ ಸಂಗ್ರಹಿಸುವ ಮೂಲಕ 123.5% ಪ್ರಗತಿ ಸಾಧಿಸಿ ಬಾಗಲಕೋಟೆ ಜಿಲ್ಲೆಗೆ ಪ್ರಥಮ ಸ್ಥಾನ ಪಡೆದುಕೊಂಡಿದೆ. ತೆರಿಗೆ ಸಂಗ್ರಹದಲ್ಲಿ ತಾಲೂಕು ಗುರಿ ಮೀರಿದ ಸಾಧನೆಯು ಜಿಲ್ಲೆಯ ತೆರಿಗೆ ಸಂಗ್ರಹದ 100% ಗುರಿ ತಲುಪಲು ಸಹಕಾರಿಯಾಯಿತು. 100% ತೆರಿಗೆ ಸಂಗ್ರಹದ ಗುರಿ



ಸಾಧನೆಗೆ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳನ್ನು ಅಭಿನಂದಿಸಿದ್ದಾರೆ.

ಗ್ರಾಮೀಣ ಭಾಗದ ಬಡ ಜನರಿಗೆ, ವಸತಿ ರಹಿತರಿಗೆ, ಹಾಗೂ ಕಚ್ಚಾ ಮನೆಗಳಲ್ಲಿ ವಾಸಿಸುವವರಿಗೆ ಶಾಶ್ವತ ಮನೆ ನಿರ್ಮಾಣಕ್ಕೆ ಪಿಎಂಎವೈ ಹಾಗೂ ಕರ್ನಾಟಕದ ಬಸವ-ಅಂಬೇಡ್ಕರ್ ಯೋಜನೆಯು ಆರ್ಥಿಕ ನೆರವನ್ನು ನೀಡುತ್ತಿದೆ. 6100 ಗುರಿಗೆ ಎದುರಾಗಿ 5224 ಫಲಾನುಭವಿಗಳನ್ನು ಆಯ್ಕೆ ಮಾಡಿ 85.64% ಪ್ರಗತಿ ಹಾಗೂ ಬಸವ-ಅಂಬೇಡ್ಕರ್ ಯೋಜನೆಯಡಿ ಬಾದಾಮಿ ಮತಕ್ಷೇತ್ರಕ್ಕೆ 1500 ಎದುರಾಗಿ 1500 ಫಲಾನುಭವಿಗಳನ್ನು ಆಯ್ಕೆ ಮಾಡಿ 100% ಪ್ರಗತಿ ಸಾಧಿಸಿದ್ದು, ಬಾದಾಮಿ ಮೊದಲ ಸ್ಥಾನ ಪಡೆದಿದೆ.

ಗ್ರಾಮಗಳ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ಸರ್ಕಾರ ಅನುದಾನ ನೀಡುತ್ತಿದ್ದು ಬಾದಾಮಿ ತಾಲೂಕು 62.49% ಪ್ರಗತಿ ಸಾಧಿಸುವ ಮೂಲಕ ಜಿಲ್ಲೆಗೆ ಮೊದಲ ಸ್ಥಾನ ಪಡೆದಿದೆ.

ದೇಶವನ್ನು ಬಯಲು ಶೌಚಮುಕ್ತ ಹಾಗೂ ನೈರ್ಮಲ್ಯ ಸುಧಾರಿಸುವ ಉದ್ದೇಶದಿಂದ ಸ್ವಚ್ಛ ಭಾರತ ಮಿಷನ್ ಜಾರಿ ತರಲಾಗಿದ್ದು, ಅರ್ಹ ಗ್ರಾಮೀಣ ಕುಟುಂಬಕ್ಕೆ ಶೌಚಾಲಯ ನಿರ್ಮಿಸಲು ಪ್ರೋತ್ಸಾಹ ನೀಡಲಾಗುತ್ತಿದೆ. ವೈಯಕ್ತಿಕ ಶೌಚಾಲಯ ನಿರ್ಮಾಣಕ್ಕೆ ಸಂಬಂಧಿಸಿದಂತೆ ಬಾದಾಮಿ ತಾಲೂಕ ಗುರಿಗೆ ಅನುಗುಣವಾಗಿ 80.93% ಮೂಲಕ ಉತ್ತಮ ಪ್ರಗತಿ ಸಾಧಿಸಿದೆ.

ಸರ್ಕಾರದ ವಿವಿಧ ಯೋಜನೆಗಳನ್ನು ಸಕಾಲದಲ್ಲಿ ಪರಿಣಾಮಕಾರಿಯಾಗಿ ತಲುಪಿಸುವಲ್ಲಿ ಬಾದಾಮಿ ತಾಲೂಕಿನ ಅಧಿಕಾರಿಗಳ ಹಾಗೂ ಸಿಬ್ಬಂದಿ ತಂಡ ಯಶಸ್ವಿಯಾಗಿದ್ದು, ಈ ಸಾಧನೆ ಉಳಿದ ತಾಲೂಕಿನವರಿಗೆ ಮಾದರಿಯಾಗಿದೆ ಎಂದು ಜಿಪಂ ಡಿ.ಎಸ್.1 ಎನ್.ವೈ.ಬಸರಿಗಿಡದ ಎಂದರು.

> ಅಧಿಕಾರಿಗಳು ಹಾಗೂ ಸಿಬ್ಬಂದಿಗಳ ಸೇವಾ ಸಮರ್ಪಿತ ಭಾವ, ಉತ್ತಮ ಯೋಜಿಸುವಿಕೆ, ಗ್ರಾಮಸ್ಥರ ಭಾಗವಹಿಸುವಿಕೆಯಿಂದ ಬಾದಾಮಿ ತಾಲೂಕ ಅಗ್ರಸ್ಥಾನ ಪಡೆದಿದೆ
> ■ ಶಶಿಧರ ಕುರೇರ, ಜಿಪಂ ಸಿಇಒ

> ಎಲ್ಲ ಗ್ರಾಪಂ ಅಧಿಕಾರಿಗಳು ಹಾಗೂ ಸಿಬ್ಬಂದಿಯವರು ಪರಿಣಾಮಕಾರಿಯಾಗಿ ಅವಿರತ ಶ್ರಮಿಸಿದ್ದರ ಫಲವಾಗಿ ತಾಲೂಕು ಪ್ರಥಮ ಸ್ಥಾನ ಪಡೆಯಲು ಸಾಧ್ಯವಾಯಿತು.
> ■ ಸತೀಶ ಮಾಕೊಂಡ, ಇಒ ತಾಪಂ ಬಾದಾಮಿ

ಸ್ವಯಂ ಗಣತಿಯಲ್ಲಿ ಬಾಗಲಕೋಟೆ ರಾಜ್ಯಕ್ಕೆ 3ನೇ ಸ್ಥಾನ

ಬಾಗಲಕೋಟೆ: ಜಿಲ್ಲೆಯಲ್ಲಿ ಎ.1ರಿಂದ 15ರ ವರೆಗೆ ನಡೆದ ಸ್ವಯಂ ಗಣತಿ ಕಾರ್ಯ ಮುಕ್ತಾಯಗೊಂಡಿದ್ದು, ಎ.16ರಿಂದ ಮೇ 15ರ ವರೆಗೆ ಮನೆ ಮನೆ ಗಣತಿ ಕಾರ್ಯ ನಡೆಯಲಿದೆ ಎಂದು ಜಿಲ್ಲಾಧಿಕಾರಿ ಸಂಗಪ್ಪ ತಿಳಿಸಿದ್ದಾರೆ.

ಮನೆ ಮನೆ ಗಣತಿ ಕಾರ್ಯಕ್ಕೆ 3190 ಬ್ಲಾಕ್‌ಗಳನ್ನು ಮಾಡಲಾಗಿದೆ. ಪ್ರತಿಯೊಂದು ಬ್ಲಾಕ್‌ಗೆ ಓರ್ವ ಗಣತಿದಾರರು ಸೇರಿದಂತೆ ಒಟ್ಟು 4212 ಗಣತಿದಾರರನ್ನು ನಿಯೋಜಿಸಲಾಗಿದೆ. 6 ಜನಗಣತಿದಾರರಿಗೆ ಓರ್ವ ಸುಪರ್‌ವೈಜರ್ ನಂತೆ ಒಟ್ಟು 776 ಸುಪರ್ ವೈಜರಗಳನ್ನು ನೇಮಿಸಲಾಗಿದೆ. ಜಿಲ್ಲೆಯಲ್ಲಿ 4,40,602 ಮನೆಗಳಿದ್ದು, ಪ್ರತಿಯೊಂದು ಮನೆಗಳಿಗೆ ತೆರಳಿ ಗಣತಿದಾರರು ಮನೆಯ ಸ್ಥಿತಿಗತಿ, ಮೂಲಸೌಕರ್ಯ ಸೇರಿದಂತೆ ಇತರೆ ಮಾಹಿತಿಗಳನ್ನು ಕಲೆ ಹಾಕಲಿದ್ದಾರೆಂದು ತಿಳಿಸಿದರು.

ಮನೆಗಣತಿ ಕಾರ್ಯವನ್ನು ನಿಖರವಾಗಿ ಮತ್ತು ಪಾರದರ್ಶಕವಾಗಿ ನಡೆಸಲು ಗಣತಿದಾರರಿಗೆ ಈಗಾಗಲೇ ತರಬೇತಿ ಕೂಡಾ ನೀಡಲಾಗಿದೆ. ಯಾವುದೇ ಮಾಹಿತಿ ತಪ್ಪದೇ ದಾಖಲಾಗುವಂತೆ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳಲಾಗಿದೆ. ಸಾರ್ವಜನಿಕರು ಸಹ ಸಹಕಾರ ನೀಡಿ, ಸರಿಯಾದ ಮಾಹಿತಿಯನ್ನು ನೀಡುವಂತೆ ಮನವಿ ಮಾಡಿದ್ದಾರೆ.

ಸ್ವಯಂ ಗಣತಿ : ಜಿಲ್ಲೆಗೆ ರಾಜ್ಯದಲ್ಲಿ 3ನೇ ಸ್ಥಾನ ಜಿಲ್ಲೆಯಲ್ಲಿ ಎಪ್ರೀಲ್ 1 ರಿಂದ 15 ವರೆಗೆ ನಡೆದ ಸ್ವಯಂ ಗಣತಿ ಕಾರ್ಯದಲ್ಲಿ ಜಿಲ್ಲೆಯಲ್ಲಿರುವ 4,40,602 ಮನೆಗಳ ಪೈಕಿ 72,789 ಮನೆಗಳು ಸ್ವಯಂ ಗಣತಿ ಕೈಗೊಳ್ಳುವ ಮೂಲಕ ಶೇ.16.52 ಪ್ರಗತಿ ಸಾಧಿಸುವ ಮೂಲಕ ರಾಜ್ಯದಲ್ಲಿ 3ನೇ ಸ್ಥಾನ ಪಡೆದುಕೊಂಡಿದೆ. ಬಳ್ಳಾರಿ ಜಿಲ್ಲೆ ಶೇ.19.02 ರಷ್ಟು ಪ್ರತಿ ಸಾಧಿಸುವ ಮೂಲಕ ಪ್ರಥಮ ಸ್ಥಾನ ಪಡೆದುಕೊಂಡರೆ, ದಕ್ಷಿಣ ಕನ್ನಡ ಶೇ.17.48 ರಷ್ಟು ಪ್ರತಿ ಸಾಧಿಸುವ ಮೂಲಕ ದ್ವಿತೀಯ ಸ್ಥಾನ ಪಡೆದುಕೊಂಡಿದೆ ಎಂದು ಜಿಲ್ಲಾಧಿಕಾರಿಗಳು ತಿಳಿಸಿದ್ದಾರೆ.




ಸಾರಸ್ವತ ಲೋಕಕ್ಕೆ ಮಧುರ ಚನ್ನರ ಕೊಡುಗೆ ಅಪಾರ

ಬಾಗಲಕೋಟೆ: ಆಧುನಿಕ ಸಾಹಿತ್ಯದಲ್ಲಿ ಮಧುರಚೆನ್ನರಿಗಿಂತ ಶ್ರೇಷ್ಠ ಸಾಹಿತ್ಯ ಕೃಷಿ ಮಾಡಿದವರು ಬೇರೆ ಯಾರೂ ಇಲ್ಲ, ಕನ್ನಡ ಸಾಹಿತ್ಯದಲ್ಲಿ ಅನುಭಾವದ ಮಧುರತೆ ಕೇಳಿ ಬಂದಿದ್ದು ಮಧುರಚೆನ್ನರ ಕಾವ್ಯದಲ್ಲಿ ಎಂದು ರಂಗಕರ್ಮಿ ಗಣೇಶ ಅಮೀನಗಡ ಹೇಳಿದರು.

ಮೈಸೂರಿನ ಕವಿತಾ ಕಲಾ ತಂಡ ಹಾಗೂ ಬಸವೇಶ್ವರ ಕಲಾ ಮಹಾವಿದ್ಯಾಲಯದ ಸಹಯೋಗದಲ್ಲಿ ಬಿ.ವಿ.ವಿ. ಸಂಘದ ನೂತನ ಸಭಾ ಭವನದಲ್ಲಿ ಗುರುವಾರ ಹಮ್ಮಿಕೊಂಡ ಮಧುರಚೆನ್ನ ಅನುಭಾವಿಯೊಂದಿಗೆ ಅನುಸಂಧಾನ ಏಕವ್ಯಕ್ತಿ ನಾಟಕ ಪ್ರದರ್ಶನ ಸಮಾರಂಭದಲ್ಲಿ ಮಾತನಾಡಿದ ಅವರು ಆಧುನಿಕ ಸಾಹಿತ್ಯದಲ್ಲಿ ಮಧುರಚೆನ್ನರಿಗಿಂತ ಶ್ರೇಷ್ಠ ಸಾಹಿತ್ಯ ಕೃಷಿ ಮಾಡಿದವರು ಬೇರೆ ಯಾರೂ ಇಲ್ಲ, ಕನ್ನಡ ಸಾಹಿತ್ಯದಲ್ಲಿ ಅನುಭಾವದ ಮಧುರತೆ ಕೇಳಿ ಬಂದಿದ್ದು ಮಧುರಚೆನ್ನರ ಕಾವ್ಯದಲ್ಲಿ, ಲಿಪಿಶಾಸ್ತ್ರ, ಶಾಸನಶಾಸ್ತ್ರ , ಭಾಷಾ ಶಾಸ್ತ್ರ , ವ್ಯಾಕರಣ ಶಾಸ್ತ್ರ , ಜ್ಯೋತಿಷ್ಯ ಶಾಸ್ತ್ರವನ್ನು ವೈಜ್ಞಾನಿಕ ನೆಲೆಗಟ್ಟಿನಲ್ಲಿ ಅರ್ಥೈಸಿಕೊಂಡು ರಚಿಸಿದ ಕೀರ್ತಿ ಮಧುರಚೆನ್ನರಿಗೆ ಸಲ್ಲುತ್ತದೆ, ಇಪ್ಪತ್ತನೆ ಶತಮಾನದ ಸಾಹಿತ್ಯ ಲೋಕ ಕಂಡ ಮಹಾನ್ ಅಧ್ಯಾತ್ಮಿಕ ಕವಿ, ಮಧುರ ಚೆನ್ನರು ಕೇವಲ 50 ವರ್ಷ ಬದುಕಿದ್ದರೂ ವಿಶ್ವ ಶ್ರೇಷ್ಠ ಅನುಭಾವ ಸಾಹಿತಿಯಾಗಿ ಅಲೌಕಿಕ ವ್ಯಕ್ತಿಯಾಗಿದ್ದರು ಎಂದು ಹೇಳಿದರು.

ಸಂಘದ ಆಡಳಿತಾಧಿಕಾರಿಯಾದ ಡಾ.ವಿಜಯಕುಮಾರ ಕಟಗಿಹಳ್ಳಿಮಠ ಮಾತನಾಡಿ, ಮಧುರ ಚೆನ್ನರ ಬದುಕಿನ ಇನ್ನೊಂದು ಆಯಾಮವೆಂದರೆ ಅವರ ಆಧ್ಯಾತ್ಮಿಕ ಸಾಧನೆ, ಹನ್ನೆರಡು ತುಂಬಿಲ್ಲ ಕನ್ನಕ್ಕಿ ನಾನಂದು. ನನ್ನ ನಲ್ಲನ ಕತೆಗೆ ಮರುಳುಗೊಂಡೆ. ಇನ್ನೇನು ಹೇಳುವೆನು ಇಂದಿಗಿಪ್ಪತ್ತಾರು. ಈಸೊಂದು ದಿನಕರಗಿ ಗೊತ್ತುಗೊಂಡೆ ಎಂದು ನನ್ನನಲ್ಲದಲ್ಲಿ ಮಧುರಚೆನ್ನರು ತಮ್ಮ ಆತ್ಮಕಥೆಯನ್ನು ಹೇಳಿಕೊಂಡಿದ್ದಾರೆ. ತಮ್ಮ ಹನ್ನೆರಡನೆಯ ವಯಸ್ಸಿನ ಸುಮಾರಿಗೆ ದೇವರನ್ನು ಕಾಣುವ ಹಂಬಲವುಳ್ಳವರಾದರು. ಅವರ ಆಧ್ಯಾತ್ಮಿಕ ಸಾಧನೆಯ ಕಥನ ಅವರ ಗದ್ಯಕೃತಿಗಳಾದ ಪೂರ್ವರಂಗ, ಕಾಳರಾತ್ರಿ, ಬೆಳಗು ಮತ್ತು ಆತ್ಮಸಂಶೋಧನೆ ಇವುಗಳಲ್ಲಿ ಮನೋಜ್ಞವಾಗಿ ಪ್ರಕಟಗೊಂಡಿದೆ ಎಂದರು.

ಬಿ.ಆರ್.ಬನಸೋಡೆ ಅವರು ತಮ್ಮ ಸಾಂಧರ್ಬಿಕ ಹಾಡುಗಳನ್ನು ಹಾಡುವ ಮೂಲಕ ಏಕವ್ಯಕ್ತಿ ನಾಟಕ ಪ್ರದರ್ಶನಕ್ಕೆ ಜೀವ ತುಂಬಿದರು. ಬಿವಿವಿ ಸಂಘದ ಆಡಳಿತಾಧಿಕಾರಿಯಾದ ವಿ.ಆರ್.ಶಿರೋಳ, ಪ್ರಸಾರ ರಂಗದ ವಿಭಾಗದ ನಿರ್ದೇಶಕ ಪಿ.ಎನ್.ಶಿಂಪಿ, ಕಾಲೇಜಿನ ಪ್ರಾಚಾರ್ಯ ಎಸ್.ಆರ್.ಮೂಗನೂರಮಠ ಇದ್ದರು.




ಸರ್ಕಾರಿ ಶಾಲೆಗಳಿಗೆ ಅನುದಾನ ನೀಡದ ಸರ್ಕಾರ: ರಮೇಶ

ಬಾಗಲಕೋಟೆ: ಮತಬ್ಯಾಂಕ್ ಇರುವ ಶಾಲೆಗಳಿಗೆ ಮಾತ್ರ ಅನುದಾನ ನೀಡುವ ಮೂಲಕ ಹೀನ ಸಂಸ್ಕೃತಿಯನ್ನು ಸರ್ಕಾರ ಮಾಡುತ್ತಿದೆ. ರಾಜ್ಯದ ಪ್ರತಿಯೊಂದು ಶಾಲೆಗಳಿಗೆ ಮೂಲಭೂತ ಸೌಕರ್ಯ ಕಲ್ಪಿಸಲು ಅನುದಾನವನ್ನು ರಾಜ್ಯ ಸರ್ಕಾರ ಬಿಡುಗಡೆ ಮಾಡುತ್ತಿಲ್ಲ ಎಂದು ಕದಂಬ ಸೇನೆಯ ರಾಜ್ಯಾಧ್ಯಕ್ಷ ಬೇಕ್ರಿ ರಮೇಶ್ ಕೆ.ಆರೋಪಿಸಿದರು.

ನವನಗರದ ಪತ್ರಿಕಾಭವನದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪರಭಾಷಿಕರ ದಾಳಿಗೆ ನಲುಗುತ್ತಿರುವ ಕನ್ನಡಿಗರ ಅಸ್ಮಿತೆ ದ್ವಿಭಾಷಾ ನೀತಿ ಜಾರಿಗೆ ತರಬೇಕು. ಸರ್ಕಾರಿ ಶಾಲೆಗಳ ಅವನತಿಗೆ ರಾಜ್ಯ ಸರ್ಕಾರ ನಿರ್ಲಕ್ಷ್ಯ ವಹಿಸಿದೆ. ಕನ್ನಡಿಗರ ಉದ್ಯೋಗದಾತೆ 2017ರ ಡಾ.ಸರೋಜಿನಿ ಮಹಿಷಿ ಪರಿಷ್ಕೃತ ವರದಿಯನ್ನು ಜಾರಿ ಮಾಡಬೇಕು. ಬಾಂಗ್ಲಾ ದೇಶದ ಮುಸ್ಲಿಂರು ಅಕ್ರಮವಾಗಿ ನೆಲೆಸಿದ್ದಾರೆ ಶಾಂತಿಯ ತೋಟಕ್ಕೆ ಬೆಂಕಿ ಹಚ್ಚುವ ಮುನ್ನ ಇವರನ್ನು ಹೊರದಬ್ಬಬೇಕು ಎಂದು ರಾಜ್ಯ ಸರ್ಕಾರವನ್ನು ಆಗ್ರಹಿಸಿದರು.

ಸರ್ಕಾರಿ ಶಾಲೆಗಳ ಅವನತಿಗೆ ರಾಜ್ಯ ಸರ್ಕಾರ ನಿರ್ಲಕ್ಷ್ಯದಿಂದ ಮುಚ್ಚುತ್ತಿವೆ ಸ್ಪರ್ಧಾತ್ಮಕ ಯುಗದಲ್ಲಿ ಸರ್ಕಾರಿ ಶಾಲೆಗಳ ಮಕ್ಕಳ ಭವಿಷ್ಯ ಮಣ್ಣು ಪಾಲು ಮಾಡುತ್ತಿದ್ದಾರೆ. ರಾಜ್ಯ ಸರ್ಕಾರ ಅನುದಾನ ಕೊರತೆ ಮಕ್ಕಳ ಸಂಖ್ಯೆ ಕಡಿಮೆ ಎಂದು ಏಳು ಸಾವಿರ ಶಾಲೆಗಳನ್ನು ಮುಚ್ಚಲಾಗಿದೆ. ಈ ಹಿಂದೆ ಕೂಡ ಶಾಲೆಗಳ ದುಸ್ಥಿತಿಗೆ ಕಾರಣ ರಾಜ್ಯ ಸರ್ಕಾರಗಳು ಪರೋಕ್ಷವಾಗಿ ಖಾಸಗಿ ಶಾಲೆ, ಕಾಲೇಜು ಪ್ರೋತ್ಸಾಹ ನೀಡುತ್ತಿದ್ದಾರೆ ಎಂದು ದೂರಿದರು.

2017 ರಲ್ಲಿ ಡಾ.ಸರೋಜಿನಿ ಮಹಿಷಿ ಪರಿಷ್ಕೃತ ಐಟಿಬಿಟಿ ಕ್ಷೇತ್ರ ಸೇರಿದಂತೆ



ಎಂಎನ್‌ಸಿ ಬ್ಯಾಂಕಗಳು ಸೇರಿ ರಾಜ್ಯ ಸರ್ಕಾರ ಪ್ರಮುಖ 14 ಶಿಫಾರಸ್ಸುಗಳನ್ನು ಅನುಷ್ಠಾನಗಳಿವೆ, ಕೇಂದ್ರ ಸರ್ಕಾರಕ್ಕೆ 9 ಅಂಶಗಳು ಒಳಗೊಂಡ ಶಿಫಾರಸ್ಸು ಮಾಡಲು ಕಳುಹಿಸಿ ಒತ್ತಡ ಹೇರಬೇಕು. ಉಳಿದ ಶಿಫಾರಸ್ಸುಗಳು ವರದಿಯಲ್ಲಿದೆ. ವರದಿ ಸಲ್ಲಿಸಿದರೂ ಇದುವರೆಗೂ ಪರಿಷ್ಕೃತ ವರದಿ ಜಾರಿಗೆ ಬರಲೇ ಇಲ್ಲ, ಕನ್ನಡಿಗರಿಗೆ ಮೀಸಲಾತಿ ಒಂದು ಸರ್ಕಾರ, ಇನ್ನೊಂದು ಸರ್ಕಾರ ಆದ್ಯತೆ ಎಂದು ಘೋಷಿಸಿ ನಂತರ ಖಾಸಗಿ ಸಂಸ್ಥೆಗಳ ಹೆದರಿಕೆಯಿಂದ ಮೌನ ರಾಜ್ಯ ಸರ್ಕಾರಗಳು ಸಂಪೂರ್ಣ ನಿರ್ಲಕ್ಷ್ಯ ವಹಿಸಿವೆ. ಕಾಯಿದೆಯಾಗಿ ಜಾರಿಗೆ ತಂದರೆ ಎಲ್ಲಾ ಕ್ಷೇತ್ರಗಳಲ್ಲಿ ಖಾಸಗಿ ಸಂಸ್ಥೆಗಳ ಕಾರ್ಖಾನೆಗಳಲ್ಲಿ ಉದ್ಯೋಗ ಸಿಗುತ್ತವೆ. ಕನ್ನಡ ಪರ ಸಂಘಟನೆಗಳ ಹೋರಾಟ ಮಾಡುತ್ತಲೇ ಬಂದಿದ್ದಾರೆ. ರಾಜ್ಯ ಸರ್ಕಾರ ಕನ್ನಡಿಗರಿಗೆ ಉದ್ಯೋಗ ನೀಡಲು ಮೀನಾಮೇಷ ಎಣಿಸುತ್ತಾ ಬರುತ್ತಿದೆ. ಇದಕ್ಕೆ ಕನ್ನಡ ರಾಜಕೀಯ ಇಚ್ಛಾಶಕ್ತಿ ಕೊರತೆ ಕಾರಣ ಎಂದು ದೂರಿದರು. ಎನ್.ಸಿ.ಕಾಂಬಳೆ, ರಾಮು ಚಿಕ್ಕಗೌಡನದೊಡ್ಡಿ, ನಿಂಗಪ್ಪ ಇಸರೆಡ್ಡಿ ಇದ್ದರು.

ಜನಗಣತಿ: ಕಂದಾಯ ಅಧಿಕಾರಿಗಳು ಭಾಗಿ

ಕಲಾದಗಿ: ಗುರುವಾರದಿಂದ ಸಾರ್ವತ್ರಿಕ ಜನಗಣತಿ ಪ್ರಾರಂಭವಾಗಿದ್ದು, ಮೊದಲ 3 ದಿನಗಳಲ್ಲಿ ಮನೆಗಳ ಪಟ್ಟಿ ಹಾಗೂ ಮನೆ ಸಂಖ್ಯೆ ಗುರುತು ಮಾಡಬೇಕಿದೆ. ಗ್ರಾಮದಲ್ಲಿ ಆರ್ಥಿಕ ಮತ್ತು ಸಾಮಾಜಿಕ ಜನಗಣತಿಯ ಮ್ಯಾಪಿಂಗ ಕಾರ್ಯ ಪ್ರಾರಂಭದ ನಿಮಿತ್ಯವಾಗಿ ಕಂದಾಯ ಇಲಾಖೆ ಅಧಿಕಾರಿ ಉಪತಹಶೀಲ್ದಾರ್ ಆರ್.ಆರ್.ಕುಲಕರ್ಣಿ, ವಿ.ವಿ.ಸೂರ್ಯವಂಶಿ, ಗಣತಿದಾರರಾದ ಆರ.ಪಿ.ಜೋಶಿ, ಲಕ್ಷ್ಮಣ ಅಂಕಲಗಿ, ಉಮೇಶ ಭಜಂತ್ರಿ, ಸಂದೀಪ ಪವಾರ ಸೇರಿದಂತೆ ಸಿಬ್ಬಂದಿ ಪಾಲ್ಗೊಂಡಿದ್ದರು.

ಉಪತಹಶೀಲ್ದಾರ್ ಆರ್.ಆರ್.ಕುಲಕರ್ಣಿ ಮಾತನಾಡಿ, ಪ್ರತಿ 10 ವರ್ಷಗಳಿಗೊಮ್ಮೆ ನಡೆಯುವ ಜನಗಣತಿ ಪ್ರಕ್ರಿಯೆಯು ಜನರ ವಯಸ್ಸು, ಲಿಂಗ, ಸಾಕ್ಷರತೆ, ಉದ್ಯೋಗ, ವಸತಿ ಸೌಕರ್ಯಗಳಂತಹ ಸಾಮಾಜಿಕ ಆರ್ಥಿಕ ವಿವರಗಳನ್ನು ದಾಖಲಿಸಲಾಗುತ್ತಿದ್ದು 2026-27ರ ಸಾಲಿನಲ್ಲಿ ಜನಗಣತಿ



ಮಾಡಲು ಪ್ರಾರಂಭವಾಗಿದ್ದು, ಕಲಾದಗಿ ಹೋಬಳಿ ವ್ಯಾಪ್ತಿಯ ಎಲ್ಲ ಸಾರ್ವಜನಿಕರು ಸೂಕ್ತ ಮಾಹಿತಿ ಒದಗಿಸಿ ಗಣತಿದಾರರಿಗೆ ಸಹಕರಿಸಬೇಕೆಂದು ವಿನಂತಿಸಿದರು.

ವಿದ್ಯಾಭ್ಯಾಸ ಅನುಕೂಲಕ್ಕೆ ಬಹುಮಾನ

ಮುಧೋಳ: ಐದನೇ ತರಗತಿಯ ವಾರ್ಷಿಕ ಪರೀಕ್ಷೆಯಲ್ಲಿ ಪ್ರಥಮ ಸ್ಥಾನ ಪಡೆಯುವ ವಿದ್ಯಾರ್ಥಿಗೆ ಆತನ ಮುಂದಿನ ವಿದ್ಯಾಭ್ಯಾಸ ಅನುಕೂಲಕ್ಕಾಗಿ ಪ್ರತಿ ವರ್ಷ ಬಹುಮಾನ ರೂಪದಲ್ಲಿ ಐದು ಸಾವಿರ ರೂ.ನೀಡುವದಾಗಿ ಮಲ್ಲನಗೌಡ ಪಾಟೀಲ ಘೋಷಿಸಿದರು.

ಜಿಪಂ, ಶಾಲಾ ಶಿಕ್ಷಣ ಇಲಾಖೆ ಬಾಗಲಕೋಟೆ, ಕ್ಷೇತ್ರ ಸಮನ್ವಯಾಧಿಕಾರಿ ಕಚೇರಿ ಮುಧೋಳ ಇವರ ಸಹಯೋಗದಲ್ಲಿ ತಾಲೂಕಿನ ಹಲಗಲಿ ಗ್ರಾಮದ ಸರಕಾರಿ ಕಿರಿಯ ಪ್ರಾಥಮಿಕ ಪಾಟೀಲ ತೋಟದ ಶಾಲೆಯ ವಿದ್ಯಾರ್ಥಿಗಳ ಬೀಳ್ಕೊಡುವ ಹಾಗೂ ವಾರ್ಷಿಕೋತ್ಸವ ಸಮಾರಂಭದಲ್ಲಿ ಅವರು ಮಾತನಾಡಿದರು.

ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ಬಸವರಾಜ ಬಾಗೆನ್ನವರ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳ ಶಿಕ್ಷಣದ ಅನುಕೂಲಕ್ಕಾಗಿ ಗ್ರಾಮಸ್ಥರು ಸಹಾಯ ಸಹಕಾರ ನೀಡಬೇಕಾಗಿದೆ. ಬರುವ ಶೈಕ್ಷಣಿಕ ಅವಧಿಯಲ್ಲಿ ಈ ಶಾಲೆಯ 30.ವಿದ್ಯಾರ್ಥಿಗಳಿಗೆ ಉಚಿತವಾಗಿ ಸ್ಕೂಲ್ ಬ್ಯಾಗ್ ನೀಡುವದಾಗಿ ಅವರು ಹೇಳಿದರು. ಎಸ್‌ಡಿಎಂಸಿ ಅಧ್ಯಕ್ಷ ವೆಂಕಪ್ಪ ಕೋರಡ್ಡಿ ಅಧ್ಯಕ್ಷತೆ ವಹಿಸಿದ್ದರು, ಉಪಾಧ್ಯಕ್ಷೆ ರುಕ್ಮವ್ವಾ ತಳವಾರ, ವೈದ್ಯೆ ವೀಣಾ ಕಕರಡ್ಡಿ, ವಿದ್ಯಾಧರಗೌಡ ಪಾಟೀಲ, ಲಕ್ಷ್ಮಣ ಮುತ್ತಣ್ಣವರ, ಎಸ್.ಬಿ.ಅನಂತಪುರ, ಆರ್.ಪಿ.ಹೊಳೆಹಾಸೂರ, ಅರ್ಚನಾ ಜಕರಡ್ಡಿ, ಮುಖ್ಯಗುರು ತುಕಾರಾಮ ಲಮಾಣಿ, ಎಸ್.ಎಸ್.ಪುರವಾರ, ಎ.ಆರ್.ಯಡಹಳ್ಳಿ ಇತರರಿದ್ದರು.



ಸಂಭ್ರಮದ ಕಾಡಸಿದ್ಧೇಶ್ವರ ರಥೋತ್ಸವ



ಗುಳೇದಗುಡ್ಡ: ಪಟ್ಟಣದ ಮರಡಿಮಠದ ಕಾಡಸಿದ್ಧೇಶ್ವರರ ರಥೋತ್ಸವ ಗುರುವಾರ ಸಂಜೆ ಸಾವಿರಾರು ಭಕ್ತರ ಹರ್ಷೋದ್ಘಾರದ ನಡುವೆ ಸಂಭ್ರಮದಿಂದ ನಡೆಯಿತು.

ಶ್ರೀಮಠದ ಅಭಿನವ ಕಾಡಸಿದ್ದೇಶ್ವರ ಸ್ವಾಮಿಗಳ ನೇತೃತ್ವದಲ್ಲಿ ಮುರುಘಾಮಠದ ಕಾಶಿನಾಥ ಸ್ವಾಮೀಜಿ, ಗುರುಸಿದ್ದೇಶ್ವರ ಮಠದ ಗುರುಸಿದ್ಧ ಪಟ್ಟದಾರ್ಯ ಸ್ವಾಮೀಜಿ, ರುದ್ರಮುನಿ ದೇವರು ಸಾನಿಧ್ಯ ವಹಿಸಿದ್ದರು. ರಥೋತ್ಸವದಲ್ಲಿ ಮಾಜಿ ಶಾಸಕ ರಾಜಶೇಖರ ಶೀಲವಂತ, ಬಿಜೆಪಿ ಜಿಲ್ಲಾಧ್ಯಕ್ಷ ಶಾಂತಗೌಡ ಪಾಟೀಲ, ಜೆಡಿಎಸ್ ಜಿಲ್ಲಾಧ್ಯಕ್ಷ ಹನಮಂತ ಮಾವಿನಮರದ ಸೇರಿದಂತೆ ಗುಳೇದಗುಡ್ಡ, ಮುಗಳೊಳ್ಳಿ, ಹಡಗಲಿ, ತಿಮ್ಮಸಾಗರ, ಕಮತಗಿ, ಮುಳ್ಳೂರು, ಕಟಗೇರಿ, ಚಿಕ್ಕನರಗುಂದ, ಗಂಗೂರು, ಕೆಲವಡಿ, ಇಂಗಳಗಿ ಸೇರಿದಂತೆ ಸುತ್ತಮುತ್ತಲಿನ ಗ್ರಾಮದ ಭಕ್ತರು ರಥೋತ್ಸವದಲ್ಲಿ ಪಾಲ್ಗೊಂಡಿದ್ದರು. ಅಭಿನವ ಕಾಡಸಿದ್ದೇಶ್ವರ ಸ್ವಾಮಿಗಳ ದ್ವಾದಶ ಪಟ್ಟಾಧಿಕಾರ ನಿಮಿತ್ತ ಬೆಳಗಿನಜಾವ ಮಂಗಲ ಸ್ನಾನ, ಪೀಠಾರೋಹಣ, ಅಯ್ಯಾಚಾರ, ಶಿವದೀಕ್ಷೆ, ರುದ್ರಾಅಭಿಷೇಕ ನಡೆಯಿತು. ಬಳಿಕ ಪಲ್ಲಕ್ಕಿ ಉತ್ಸವ ಕರಡಿಮಜಲು ಹಾಗೂ ಸುಮಂಗಲೆಯರ ಕಳಸಾದಾರತಿಯೊಂದಿಗ ನಗರದ ಪ್ರಮುಖ ಬೀದಿಯಲ್ಲಿ ಸಾಗಿ ಬಂದಿತು. ಮಧ್ಯಾಹ್ನ ಮಹಾಪ್ರಸಾದ ನಡೆಯಿತು.

ಮನೆಗಳ ಗಣತಿ ಕಾರ್ಯಕ್ರಮಕ್ಕೆ ಚಾಲನೆ

ಕೆರೂರ: ಸ್ಥಳಿಯ ಪಟ್ಟಣ ಪಂಚಾಯತಿ ವತಿಯಿಂದ 2026ನೇ ಸಾಲಿನ ಮನೆಗಳ ಗಣತಿ ಕಾರ್ಯಕ್ರಮಕ್ಕೆ ಗುರುವಾರ ಪಟ್ಟಣದ ಬ್ಲಾಕ್ ನಂ 14ರಲ್ಲಿ ಚಾಲನೆ ನೀಡಲಾಯಿತು.

ಗಣತಿ ಕಾರ್ಯಕ್ರಮವು ಇದೊಂದು ರಾಷ್ಟ್ರೀಯ ಕಾರ್ಯಕ್ರಮವಾಗಿದ್ದು, ಪಟ್ಟಣದ ಜನರು ತಮ್ಮ ಮನೆ ಬಾಗಿಲಿಗೆ ಬಂದ ಗಣತಿದಾರಿಗೆ ತಮ್ಮ ಕುಟುಂಬ ಸದಸ್ಯರ ಸಂಖ್ಯೆ ಹಾಗೂ ಇನ್ನಿತರ ಮಾಹಿತಿಯನ್ನು ನೀಡಿ ಗಣತಿ ಕಾರ್ಯಕ್ರಮದ ಯಶಸ್ವಿಗೆ ಕೈಜೋಡಿಸಬೇಕು ಎಂದು ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ರಮೇಶ ಮಾಡಬಾಳ ಹೇಳಿದರು. ಈಗಾಗಲೇ ದೇಶದಲ್ಲಿ ಎ.1ರಿಂದ 15ರ ವರೆಗೆ ಸ್ವಯಂ ಗಣತಿ ಕಾರ್ಯ ನಡೆದಿದ್ದು, ಎ.16ರಿಂದ ಮೇ 15 ರ ವರೆಗೆ ಗಣತಿದಾರರು ಮನೆ ಮನೆಗೆ ಬೇಟಿ ನೀಡಿ ಮಾಹಿತಿ ಸಂಗ್ರಹಿಸಲಿದ್ದಾರೆ,ಇದು ಸಂಪೂರ್ಣವಾಗಿ ಡಿಜಿಟಲ್ ರೂಪದಲ್ಲಿ ಜಾರಿಯಲ್ಲಿದ್ದು ಗಣತಿದಾರರು ದೋಷಮುಕ್ತವಾಗಿ ಗಣತಿ ನಡೆಸಲಿದ್ದಾರೆ ಎಂದು ಹೇಳಿದರು. ಪಟ್ಟಣ ಪಂಚಾಯತಿ ಸಿಬ್ಬಂದಿ ಗಣತಿ ಮೇಲ್ವಿಚಾರಕ ಮಾಂತೇಶ ಅಣ್ಣೆನ್ನವರ, ಗಣತಿದಾರರಾದ ಎಂ.ಎಸ್.ಹೂಲಿ, ಆರ್ .ಬಿ.ಬಿಲ್ಲಾರ್, ಕವಿತಾ ದಾವಣಗೆರಿ, ರವಿ ಮುಂಡಾಸದ, ಪಟ್ಟಣ ಪಂಚಾಯಿತಿ ಸಿಬ್ಬಂದಿ ಸಂಗೇಶ ಮಾದರ, ಸಂತೋಷ ಗದ್ದನಕೇರಿ ಇತರರು ಇದ್ದರು.



ಸಮಾಜಕ್ಕೆ ಅಂಬೇಡ್ಕರ್ ಕೊಡುಗೆ ಅಪಾರ



ಜಮಖಂಡಿ: ನಗರದ ಬಾಗಲಕೋಟೆ ವಿಶ್ವವಿದ್ಯಾಲಯದ ಆವರಣದಲ್ಲಿ ಡಾ.ಬಾಬಾಸಾಹೇಬ್ ಅಂಬೇಡ್ಕರ್ ಅವರ 135ನೇ ಜನ್ಮದಿನಾಚರಣೆ ಆಚರಿಸಲಾಯಿತು.

ಬಾಗಲಕೋಟೆ ವಿವಿ ಕುಲಪತಿ ಪ್ರೊ.ಆನಂದ ದೇಶಪಾಂಡೆ ಮಾತನಾಡಿ, ಡಾ.ಬಾಬಾಸಾಹೇಬ್ ಅಂಬೇಡ್ಕರರವರು ಸಮಾಜಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ಶಿಕ್ಷಣಕ್ಕೆ ಇರುವ ಶಕ್ತಿಯನ್ನು ಅವರು ಅರತಿದ್ದರು. ಹಾಗೂ ಎಲ್ಲರು ಶಿಕ್ಷಣ ಕಲಿಯಬೇಕು. ಸ್ತ್ರೀ ಶಕ್ತಿ, ಮಹಿಳೆಯರಿಗೆ ಸಮಾಜದಲ್ಲಿ ಸಮಾನ ಅವಕಾಶ ದೊರೆಯಬೇಕು. ಇಂದಿನ ದಿನಮಾನಗಳ್ಳಿ ಎಲ್ಲ ಕ್ಷೇತ್ರದಲ್ಲಿ ಮಹಿಳೆಯರು ಪುರುಷರಷ್ಟೇ ಸಮಾನರಾಗಿ ಇರುವುದನ್ನು ನಾವು ಇಂದು ಕಾಣಬಹುದಾಗಿದೆ. ಮಹಿಳೆಯರಿಗೂ ತಂದೆಯ ಆಸ್ತಿಯಲ್ಲಿ ಸಮಾನಪಾಲು ಸಿಗಬೇಕು ಎಂದು ಡಾ. ಬಾಬಾಸಾಹೇಬ್ ಅಂಬೇಡ್ಕರರ ಹೋರಾಟದ ಪ್ರತಿಫಲ ಸವಿಯುತ್ತಿದ್ದೇವೆ ಎಂದು ಹೇಳಿದರು. ಬಾಗಲಕೋಟೆ ವಿಶ್ವವಿದ್ಯಾಲಯದ ಕುಲಸಚಿವ ಸೋಮಲಿಂಗ ಗೆಣ್ಣೂರ, ಮೌಲ್ಯಮಾಪನ ಕುಲಸಚಿವೆ ಪ್ರೊ.ಲತಾಕೆ.ಪಿ., ವಿಜ್ಞಾನ ಹಾಗೂ ತಂತ್ರಜ್ಞಾನ ಡೀನ ಪ್ರೊ.ದಯಾನಂದ ಜಿ. ಸಾವಕಾರ, ಉಪಕುಲಸಚಿವೆ ಡಾ.ರಾಜೇಶ್ವರಿ ಎಸ್.ಮಠದ, ಪ್ರವೀಣ ಮಡಿವಾಳ ಇದ್ದರು.

ಕಿರುಸುದ್ದಿ

ಸಹನಾ ಕಾಖಂಡಕಿಗೆ ಸನ್ಮಾನ



◆**ಕೊಲ್ಹಾರ:** ಮಂಗಳೂರಿನ ಕಮ್ಮಾಜೆ ಮೊರಾರ್ಜಿ ದೇಸಾಯಿ ಪದವಿ ಪೂರ್ವ ವಸತಿ ಕಾಲೇಜಿನ ವಿದ್ಯಾರ್ಥಿನಿ ಪಟ್ಟಣದ ರೈತ ಕಲ್ಲಪ್ಪ ಕಾಖಂಡಕಿ ಅವರ ಪುತ್ರಿ ಸಹನಾ ಕಾಖಂಡಕಿ ಅವಳು ದ್ವಿತೀಯ ಪಿಯುಸಿ ವಿಜ್ಞಾನ ವಿಭಾಗದಲ್ಲಿ 98.33% (590) ಅಂಕ ಗಳಿಸಿ ಸಮಾಜ ಕಲ್ಯಾಣ ಇಲಾಖೆಯ ಮೊರಾರ್ಜಿ ದೇಸಾಯಿ ವಸತಿ ಕಾಲೇಜುಗಳಲ್ಲಿ ರಾಜ್ಯಕ್ಕೆ ಎರಡನೇ ರ‍್ಯಾಂಕ್ ಪಡೆದ ಕಾರಣ ಮಂಗಳವಾರ ಬೆಂಗಳೂರಿನಲ್ಲಿ ನಡೆದ ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸನ್ಮಾನಿಸಿ ಗೌರವಿಸಿದರು. ಸಚಿವರಾದ ಡಾ.ಎಚ್.ಸಿ.ಮಹದೇವಪ್ಪ, ಕೆ.ಎಚ್.ಮುನಿಯಪ್ಪ ಹಾಗೂ ಮಾಜಿ ಸಚಿವ ಎಚ್.ಆಂಜನೇಯ, ಅಧಿಕಾರಿಗಳು ಇದ್ದರು.

ಒಂದು ಟಿಎಂಸಿ ನೀರು ಹರಿಬಿಡಲಾಗಿದೆ

◆**ಇಂಡಿ:** ಇಂಡಿ ಮುಖ್ಯ ಕಾಲುವೆ ಮೂಲಕ ಇಂಡಿ ಹಾಗೂ ಚಡಚಣ ತಾಲೂಕಿನಲ್ಲಿ ಹರಿಯುವ ಕೃಷ್ಣಾ ಮುಖ್ಯ ಕಾಲುವೆಗೆ ಜನ-ಜಾನುವಾರುಗಳಿಗೆ ಕುಡಿಯುವ ನೀರಿಗಾಗಿ ಒಂದು ಟಿಎಂಸಿ ನೀರು ಹರಿಬಿಡಲಾಗಿದೆ ಎಂದು ಉಪವಿಭಾಗಾಧಿಕಾರಿ ಚಿದಾನಂದ ಗುರುಸ್ವಾಮಿ ತಿಳಿಸಿದ್ದಾರೆ. ತಾಲೂಕಿನ ಸಾಲೋಟಗಿಯಿಂದ ಮಾವಿನಹಳ್ಳಿಯವರೆಗೆ ನೀರು ಹರಿಯುವ ಕೃಷ್ಣಾ ಮುಖ್ಯ ಕಾಲುವೆ ಸ್ಥಳಕ್ಕೆ ಭೇಟಿ ನೀಡಿ ನೀರು ಹರಿಯುವಿಕೆ ಪರಶೀಲನೆ ಮಾಡಿದರು. ನಂತರ ಮಾತನಾಡಿ ಕಲಬುರ್ಗಿ ವಿಭಾಗೀಯ ಆಯುಕ್ತರ ಹಾಗೂ ಬೆಳಗಾವಿ ವಿಭಾಗೀಯ ಆಯುಕ್ತರ ಕೋರಿಕೆ ಮೇರೆಗೆ ನಾರಾಯಣಪುರ ಜಲಾಶಯದಿಂದ ಒಂದು ಟಿ.ಎಂ.ಸಿ ನೀರನ್ನು ಹರಿಸಿದ್ದಾರೆ. ಕೆಬಿಜೆಎನ್‌ಎಲ್ ಅಧೀಕ್ಷಕ ಅಭಿಯಂತರ ಮನೋಜಕುಮಾರ ಗಡಬಳ್ಳಿಯವರು ಮಾತನಾಡಿ ಇಂಡಿಯ ಶಾಸಕ ಯಶವಂತರಾಯಗೌಡ ಪಾಟೀಲ ಅವರು ಹಾಗೂ ನಾಗಠಾಣದ ಶಾಸಕರಾದ ವಿಠ್ಠಲ ಕಟಕದೊಂಡ ಅವರ ಪ್ರಯತ್ನದಿಂದ ನೀರು ಹರಿಸಲು ಸಾಧ್ಯವಾಗಿದೆ ಎಂದು ಹೇಳಿದರು. ಈ ನೀರು ಈಗಾಗಲೇ ಏ.11ರಿಂದ ಕೃಷ್ಣಾ ಕಾಲುವೆಯಲ್ಲಿ ಹರಿಯುತ್ತಿದ್ದು ಒಂದು ಟಿಎಂಸಿ ಹೆಚ್ಚುವರಿ ನೀರಿನಿಂದ ಏ.23ರ ವರೆಗೆ ನೀರು ಕಾಲುವೆಯಲ್ಲಿ ಹರಿಯುತ್ತದೆ. ಈ ನೀರು ಜನ ಜಾನುವಾರುಗಳಿಗೆ ಕುಡಿಯಲು ಮಾತ್ರ ಉಪಯೋಗಿಸಲು ತಿಳಿಸಿದ್ದಾರೆ. ತಾಪಂ ಇಒ ಭೀಮಾಶಂಕರ ಕನ್ನೂರ, ಹೆಸ್ಕಾಂ ಎಇಇ ಎಸ್.ಆರ್. ಮೆಂಡೆಗಾರ, ಕೆಬಿಜೆಎನ್‌ಎಲ್ ಸಹಾಯಕ ಅಭಿಯಂತರ ಭೀರಪ್ಪ ಪೂಜಾರಿ ಮತ್ತಿತರಿದ್ದರು.

ಯುವ ವಿಜ್ಞಾನಿಗಳ ಮೇಳಕ್ಕೆ ಗ್ರಂಥಿಕಾ ಆಯ್ಕೆ



◆**ಮುದ್ದೇಬಿಹಾಳ:** ತಾಲೂಕಿನ ಬೀದರಕುಂದಿ ಗ್ರಾಮದ ಸರ್ಕಾರಿ ಆದರ್ಶ ವಿದ್ಯಾಲಯ ಹೈಸ್ಕೂಲಿನ ಒಂಬತ್ತನೇ ತರಗತಿ ವಿದ್ಯಾರ್ಥಿನಿ ಗ್ರಂಥಿಕಾ ಕುಂಬಾರ ಭಾರತದ ಬಾಹ್ಯಾಕಾಶ ಇಲಾಖೆ ಹಾಗೂ ಬಾಹ್ಯಾಕಾಶ ಸಂಸ್ಥೆ ಇಸ್ರೋ ನಡೆಸುವ ರಾಷ್ಟ್ರಮಟ್ಟದ ಯುವ ವಿಜ್ಞಾನಿಗಳ ಮೇಳಕ್ಕೆ ಆಯ್ಕೆಯಾಗಿದ್ದಾಳೆ. ಗ್ರಂಥಿಕಾ ಬರುವ ಮೇ ತಿಂಗಳು10 ನೇ ತಾರೀಕಿಗೆ ನಡೆಯುವ ಯುವಿಕಾ - 2026 ಮೇಳದಲ್ಲಿ ಭಾಗವಹಿಸಲು ಆಯ್ಕೆಯಾಗಿದ್ದಕ್ಕೆ ಪ್ರಾಂಶುಪಾಲ ಅನಿಲ್ ರಾಠೋಡ್, ಸಂಗಮೇಶ ಸಜ್ಜನ್, ಅಸ್ಲಾಂ ಕೆರೂರು ಸೇರಿದಂತೆ ಶಿಕ್ಷಕರು ಹಾಗೂ ಸಿಬ್ಬಂದಿ ಹರ್ಷ ವ್ಯಕ್ತಪಡಿಸಿದ್ದಾರೆ.

ಸರೋಜಿನಿಗೆ ಪಿಎಚ್‌ಡಿ



◆**ವಿಜಯಪುರ:** ಇಲ್ಲಿನ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯವು ಸರೋಜಿನಿ ಗೋಪಾಲನ್ ಅವರಿಗೆ ಪಿಎಚ್‌ಡಿ ನೀಡಿದೆ. ಸರೋಜಿನಿ ಗೋಪಾಲನ್ ಸಲ್ಲಿಸಿದ್ದ ಎ ಸ್ಟಡಿ ಆಫ್ ಜಾಬ್ ಇನ್‌ವಾಲ್ಮೆಂಟ್, ಅವೇರ್‌ನೆಸ್ ಆಫ್ ಐಸಿಟಿ ಆಂಡ್ ಇನ್-ಸರ್ವಿಸ್ ಟ್ರೈನಿಂಗ್ ಪ್ರೋಗ್ರಾಮ್ಸ್ ಆನ್ ದೇರ್ ಪ್ರೊಫೆಷನಲ್ ಡೆವಲಪ್ಮೆಂಟ್ ಆಫ್ ಪ್ರೈಮರಿ ಸ್ಕೂಲ್ ವುಮೆನ್ ಟೀಚರ್ಸ್ ಆಫ್ ನಾರ್ಥ್ ಕರ್ನಾಟಕ ಕುರಿತು ಸಲ್ಲಿಸಿದ್ದ ಮಹಾಪ್ರಬಂಧಕ್ಕೆ ಪಿಎಚ್‌ಡಿ ನೀಡಲಾಗಿದ್ದು, ಸರೋಜಿನಿ ಗೋಪಾಲನ್ ಅವರು ಶಿಕ್ಷಣ ವಿಭಾಗದ ಡಾ.ವಿಷ್ಣು ಶಿಂದೆ ಅವರ ಮಾರ್ಗದರ್ಶನದಲ್ಲಿ ಸಂಶೋಧನೆ ಕೈಗೊಂಡಿದ್ದರು. ಡಾಕ್ಟರೇಟ್ ಪದವಿ ಪಡೆದಿರುವ ಸರೋಜಿನಿ ಅವರನ್ನು ಕುಲಪತಿ ಪ್ರೊ.ವಿಜಯಾ ಕೋರಿಶೆಟ್ಟಿ, ಕುಲಸಚಿವ ಶಂಕರಗೌಡ ಸೋಮನಾಳ, ಮೌಲ್ಯಮಾಪನ ಕುಲಸಚಿವ ಪ್ರೊ.ಬಿ.ಎಲ್. ಲಕ್ಕಣ್ಣನವರ ಅಭಿನಂದಿಸಿದ್ದಾರೆ.



ಆಲಮೇಲ: 2027ನೇ ಸಾಲಿನ ಮೊದಲ ಹಂತದ ಗಣತಿ ಕಾರ್ಯವನ್ನು ತಾಲೂಕಿನ ಹೊಸ ತಾವರಖೇಡ ಮತ್ತು ಹಳೆ ತಾವರಕೆಡ ಗ್ರಾಮದಲ್ಲಿ ಬ್ಲಾಕ್ ನಂಬರ್ 07, 08 ಮೇಲ್ವಿಚಾರಕರ ಹಾಗೂ ಗಣತಿದಾರರ ಮತ್ತು ಊರಿನ ನಾಗರಿಕರ ಉಪಸ್ಥಿತಿಯಲ್ಲಿ 2026ನೇ ಸಾಲಿನ ಮೊದಲನೆ ಹಂತದ ಜನಗಣತಿಯ ಮನೆ ಪಟ್ಟಿ ಮ್ಯಾಪಿಂಗ್ ಮಾಡಲಾಯಿತು. ಮೇಲ್ವಿಚಾರಕ ಶಾಂತಪ್ಪ ರಾ.ಕಾಂಬಳೆ, ಗಣತಿದಾರರು ಎ.ಕೆ.ಕಲ್ಲೂರ. ಎಸ್.ಎಸ್.ಕಡಣಿ ಇದ್ದರು.

ಮಹಾನ್ ನಾಯಕ ಅಂಬೇಡ್ಕರ್: ಯತ್ನಾಳ

◆**ವಿಜಯಪುರ:** ಭವಿಷ್ಯದ ಭಾರತ ಹೇಗೆ ಇರಬೇಕೆಂಬ ಕಲ್ಪನೆ ಕೊಟ್ಟ ಮಹಾನ್ ನಾಯಕರು ಡಾ.ಬಿ.ಆರ್.ಅಂಬೇಡ್ಕರ್ ಅವರು ಒಂದು ಸಮುದಾಯದ ನಾಯಕರಲ್ಲ, ದೇಶದ ಹಿತದೃಷ್ಟಿಯಿಂದ ಅವರ ವಿಚಾರಧಾರೆಗಳನ್ನು ನಾವೆಲ್ಲರೂ ಅಳವಡಿಸಿಕೊಳ್ಳಬೇಕು ಎಂದು ನಗರ ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದರು. ನಗರದ ಡಾ.ಅಂಬೇಡ್ಕರ್ ವೃತ್ತದಲ್ಲಿರುವ ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡುವ ಮೂಲಕ ಗೌರವ ನಮನ ಸಲ್ಲಿಸಿ ಅವರು ಮಾತನಾಡಿದರು. ಸಾಮಾಜಿಕ ಸಮಾನತೆ, ಅಸ್ಪೃಶ್ಯತೆ ನಿವಾರಣೆಗಾಗಿ ತಮ್ಮ ಜೀವನದುದ್ದಕ್ಕೂ ಶ್ರಮಿಸಿದ ಮಹಾನ್ ನಾಯಕ ಭಾರತ ರತ್ನ ಡಾ.ಬಿ.ಆರ್.ಅಂಬೇಡ್ಕರ್ ಅವರು ಜಗತ್ತಿಗೆ ಮಾದರಿಯಾದ ಸಂವಿಧಾನದ ನೀಡಿದ್ದಾರೆ ಎಂದರು. ದೇಶಕ್ಕೆ ಅಂಬೇಡ್ಕರ್ ನೀಡಿರುವ ಕೊಡುವೆ ಅಪಾರವಾದದ್ದು. ತಮ್ಮ ವಿಚಾರಗಳನ್ನು ಸ್ಪಷ್ಟವಾಗಿ ಮತ್ತು ಯಾವುದೇ ಮುಲಾಜಿಲ್ಲದೆ ಮಾತನಾಡುತ್ತಿದ್ದ ಅಂಬೇಡ್ಕರ್ ಅವರು ಜಗತ್ತಿನ ಎಲ್ಲ ಧರ್ಮಗಳ ಅಧ್ಯಯನ ಮಾಡಿದ್ದರು. ಅವರ ಕೊಡುಗೆಗಳನ್ನು ಸ್ಮರಿಸುವ ಹಾಗೂ ಅವರ ಉದ್ದೇಶ ಈಡೇರಿಸುವ ಕೆಲಸವನ್ನು ನರೇಂದ್ರ ಮೋದಿಯವರು ಮಾಡಿದ್ದಾರೆ ಎಂದರು. ಮಹಾನಗರ ಪಾಲಿಕೆ ಮೇಯರ್ ಎಂ.ಎಸ್. ಕರಡಿ, ಸದಸ್ಯರಾದ ಪ್ರೇಮಾನಂದ ಬಿರಾದಾರ, ರಾಜಶೇಖರ ಕುರಿಯವರ, ಕುಮಾರ ಗಡಗಿ, ವಿಠ್ಠಲ ಹೊಸಪೇಟೆ, ರಾಹುಲ್ ಜಾಧವ, ಮುಖಂಡರಾದ ಮಡಿವಾಳ ಯಾಳವಾರ, ಶಶಿಧರ ಆಥರ್ಗಾ, ವಿಠ್ಠಲ ನಡುವಿನಕೆರಿ, ಸಂತೋಷ ತಲಕೇರಿ ಇದ್ದರು.



ವಿಜಯಪುರ: ನಗರದ ಡಾ.ಅಂಬೇಡ್ಕರ್ ವೃತ್ತದಲ್ಲಿರುವ ಅಂಬೇಡ್ಕರ್ ಪ್ರತಿಮೆಗೆ ನಗರ ಶಾಸಕ ಬಸನಗೌಡ ಪಾಟೀಲ ಯತ್ನಾಳ ಮಾಲಾರ್ಪಣೆ ಮಾಡುವ ಮೂಲಕ ಗೌರವ ನಮನ ಸಲ್ಲಿಸಿ ಅಶೋಕ ಬೆಲ್ಲದ, ವಿಕ್ರಮ ಗಾಯಕವಾಡ, ಲಕ್ಷ್ಮಣ ಜಾಧವ, ರಾಜಶೇಖರ ಬಜಂತ್ರಿ, ಶರಣು ಕಾಖಂಡಕಿ, ದತ್ತಾ ಗೊಲಂಡೆ, ಪಾರೀಶ ಶಿರಹಟ್ಟಿ ಇದ್ದರು.

ರಸಗೊಬ್ಬರ ಕೃತಕ ಅಭಾವ ಸೃಷ್ಟಿಸಿದರೆ ನಿರ್ದಾಕ್ಷಿಣ್ಯ ಕ್ರಮ: ಜಿಲ್ಲಾಧಿಕಾರಿ

◆**ವಿಜಯಪುರ:** ರಸಗೊಬ್ಬರ ಮಾರಾಟ ಸಂಬಂಧಿಸಿದಂತೆ ನಿಗದಿತ ದರಕ್ಕಿಂತ ಹೆಚ್ಚಿನ ದರ ವಸೂಲಿ, ಅಕ್ರಮ ದಾಸ್ತಾನು ಹಾಗೂ ಕೃತಕ ಅಭಾವ ಸೃಷ್ಟಿಸಿದರೆ ಸಂಬಂಧಪಟ್ಟವರ ವಿರುದ್ಧ ನಿಯಮಾನುಸಾರ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾಧಿಕಾರಿ ಡಾ.ಆನಂದ ಕೆ. ಎಚ್ಚರಿಕೆ ನೀಡಿದರು.

ನಗರದ ಕೃಷಿ ತಂತ್ರಜ್ಞರ ಸಂಸ್ಥೆಯಲ್ಲಿ ಹಮ್ಮಿಕೊಂಡ ಜಿಲ್ಲಾ ಮಟ್ಟದ ರಸಗೊಬ್ಬರ ಉತ್ಪಾದಕರು ಹಾಗೂ ಮಾರಾಟಗಾರರ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಎಲ್ಲ ರಸಗೊಬ್ಬರಗಳನ್ನು ಪಿಒಎಸ್ (ಪಾಯಿಂಟ್ ಆಫ್ ಸೇಲ್) ಯಂತ್ರದ ಮೂಲಕವೇ ಕಡ್ಡಾಯವಾಗಿ ಮಾರಾಟ ಮಾಡಿ ದಾಖಲಿಸಬೇಕು. ಯೂರಿಯಾ ರಸಗೊಬ್ಬರ ಮಾರಾಟ ಮಾಡುವಾಗ ಕೃಷಿ ಇಲಾಖೆಯ ಕೆ- ಕಿಸಾನ್ ತಂತ್ರಾಂಶದ ಮೂಲಕ ಫ್ರುಟ್ಸ್ ಐಡಿ ಆಧಾರಿತ ಜಮೀನಿನ ವಿಸ್ತೀರ್ಣದ ಪ್ರಕಾರ, ಒಂದು ಎಕರೆಗೆ ಒಂದು ಚೀಲದಂತೆ ಮಾರಾಟ ಮಾಡಬೇಕು ಎಂದರು.

ರಸಗೊಬ್ಬರ ಮಳಿಗೆಗಳಲ್ಲಿ ಪಿಒಎಸ್ ದಾಖಲಾತಿ ಮತ್ತು ಭೌತಿಕ ದಾಸ್ತಾನು ಹೊಂದಾಣಿಕೆ ಇರುವುದನ್ನು ಖಚಿತಪಡಿಸಿಕೊಳ್ಳಬೇಕು ಎಂದರು.

ರಸಗೊಬ್ಬರ ಮಾರಾಟಗಾರರು ತಮ್ಮ ಮಳಿಗೆಯ ಮುಂದೆ ಅಂದಿನ ರಸಗೊಬ್ಬರ ದರ ಹಾಗೂ ದಾಸ್ತಾನು ವಿವರಗಳನ್ನು ಕಾಣುವಂತೆ ಫಲಕ ಪ್ರದರ್ಶಿಸುವುದು ಕಡ್ಡಾಯವಾಗಿದೆ ಎಂದರು.



ಜಂಟಿ ಕೃಷಿ ನಿರ್ದೇಶಕ ಶಿವನಗೌಡ ಪಾಟೀಲ ಮಾತನಾಡಿ, ಮುಂಬರುವ ಮುಂಗಾರು ಹಂಗಾಮಿಗೆ ಜಿಲ್ಲೆಗೆ ಏಪ್ರಿಲ್ 2026 ದಿಂದ ಸೆಪ್ಟೆಂಬರ್ 2026 ರವರೆಗೆ ಒಟ್ಟು 1.27 ಲಕ್ಷ ಮೆಟ್ರಿಕ್ ಟನ್ ವಿವಿಧ ರಸಗೊಬ್ಬರಗಳ ಬೇಡಿಕೆ ಇದ್ದು, ಏ.15, 2026ರ ಸ್ಥಿತಿಗೆ ಜಿಲ್ಲೆಯಲ್ಲಿ ಒಟ್ಟು 64,337 ಮೆಟ್ರಿಕ್ ಟನ್ ರಸಗೊಬ್ಬರ ದಾಸ್ತಾನು ಲಭ್ಯವಿದ್ದು, ಅದರಲ್ಲಿ ಮುಖ್ಯವಾಗಿ 16,442 ಮೆಟ್ರಿಕ್ ಟನ್ ಯೂರಿಯಾ, 9,871 ಮೆಟ್ರಿಕ್ ಟನ್ ಡಿಎಪಿ ಹಾಗೂ 32,466 ಮೆಟ್ರಿಕ್ ಟನ್ ಕಾಂಪ್ಲೆಕ್ಸ್ ರಸಗೊಬ್ಬರಗಳ ದಾಸ್ತಾನು ಇದೆ. ಮಾಹೆವಾರು ಸರಬರಾಜು ಯೋಜನೆಯಂತೆ ಜಿಲ್ಲೆಗೆ ರಸಗೊಬ್ಬರ ಪೂರೈಕೆ ಆಗುತ್ತಿದ್ದು, ಸಮರ್ಪಕ ವಿತರಣೆಗೆ ಅಗತ್ಯ ಕ್ರಮ ಕೈಗೊಳ್ಳುವಂತೆ ರಸಗೊಬ್ಬರ ಮಾರಾಟಗಾರರಿಗೆ ಸೂಚಿಸಿದರು.

ಜಿಲ್ಲೆಯು ಅಂತಾರಾಜ್ಯ ಗಡಿಭಾಗದಲ್ಲಿರುವುದರಿಂದ ಗಡಿಭಾಗಗಳಲ್ಲಿ ಚೆಕ್ ಪೋಸ್ಟ್‌ಗಳ ಮೂಲಕ ಯೂರಿಯಾ ಅನಧಿಕೃತ ಸಾಗಾಣಿಕೆಗೆ ನಿಗಾ ವಹಿಸಲಾಗುತ್ತಿದೆ. ಪ್ರತಿವಾರ ವಿಡಿಯೋ ಕಾನ್ಫರೆನ್ಸ್ ಸಭೆಗಳ ಮೂಲಕ ರಸಗೊಬ್ಬರ ಪೂರೈಕೆ, ಮಾರಾಟ ಹಾಗೂ ದಾಸ್ತಾನು ಸ್ಥಿತಿಯನ್ನು ಮೇಲ್ವಿಚಾರಣೆ ಮಾಡಲಾಗುತ್ತಿದೆ ಎಂದರು.

▸▸ ರಸಗೊಬ್ಬರ ಮಳಿಗೆಗಳಲ್ಲಿ ಪಿಒಎಸ್ ದಾಖಲಾತಿ ಮತ್ತು ಭೌತಿಕ ದಾಸ್ತಾನು ಹೊಂದಾಣಿಕೆ ಇರುವುದನ್ನು ಖಚಿತಪಡಿಸಿಕೊಳ್ಳಬೇಕು.

▸▸ ಅಂದಿನ ರಸಗೊಬ್ಬರ ದರ ಹಾಗೂ ದಾಸ್ತಾನು ವಿವರ ಸ್ಪಷ್ಟವಾಗಿ ಕಾಣುವಂತೆ ಫಲಕ ಪ್ರದರ್ಶಿಸುವುದು ಕಡ್ಡಾಯ.

ಯೂರಿಯಾ ಹಾಗೂ ಡಿಎಪಿ ರಸಗೊಬ್ಬರಗಳಿಗೆ ಪರ್ಯಾಯವಾಗಿ ನ್ಯಾನೋ ಯೂರಿಯಾ ಮತ್ತು ನ್ಯಾನೋ ಡಿಎಪಿ ಬಳಕೆಗೆ ಉತ್ತೇಜನ ನೀಡುವಂತೆ ಮಾರಾಟಗಾರರಿಗೆ ಸೂಚನೆ ನೀಡಲಾಗಿದೆ ಎಂದರು. ಏಪ್ರಿಲ್ 2026ರಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಯೂರಿಯಾ ಮತ್ತು ಡಿಎಪಿ ಮಾರಾಟ ಮಾಡಿದ ಕೆಲ ರಸಗೊಬ್ಬರ ಮಾರಾಟಗಾರರಿಗೆ ಈಗಾಗಲೇ ನೋಟಿಸ್ ಜಾರಿಗೊಳಿಸಲಾಗಿದೆ ಎಂದು ಜಂಟಿ ನಿರ್ದೇಶಕರು ವಿವರಿಸಿದರು. ರಸಗೊಬ್ಬರ ಉತ್ಪಾದಕ ಕಂಪನಿಗಳ ಪ್ರತಿನಿಧಿಗಳು, ಸಗಟು ಹಾಗೂ ಚಿಲ್ಲರೆ ರಸಗೊಬ್ಬರ ಮಾರಾಟಗಾರರು, ತಾಲೂಕು ಸಹಾಯಕ ಕೃಷಿ ನಿರ್ದೇಶಕರು ಹಾಗೂ ವಿಭಾಗೀಯ ಉಪ ಕೃಷಿ ನಿರ್ದೇಶಕರು ಇದ್ದರು.

ದೇಶದ ಸಮಗ್ರ ಅಭಿವೃದ್ಧಿಗೆ ಮಾಹಿತಿ ಅಗತ್ಯ

◆**ಆಲಮಟ್ಟಿ:** ಜನಗಣತಿ ದೇಶದ ಅತಿ ದೊಡ್ಡ ಕಾರ್ಯಕ್ರಮವಾಗಿದ್ದು, ಪ್ರತಿಯೊಂದು ಮನೆ ಮತ್ತು ನಾಗರಿಕರ ಮಾಹಿತಿ ಒಳಗೊಂಡಿರುತ್ತದೆ. ದೇಶದ ಸಮಗ್ರ ಅಭಿವೃದ್ಧಿಗೆ ಈ ಮಾಹಿತಿ ಅತ್ಯಗತ್ಯವಾಗಿದೆ ಎಂದು ತಹಶೀಲ್ದಾರ್ ಎ.ಡಿ.ಅಮರಾವದಗಿ ಹೇಳಿದರು.

ಆಲಮಟ್ಟಿ ಪು.ಕೇಂದ್ರದಲ್ಲಿ ಗುರುವಾರ ಜನಗಣತಿಗೆ ಚಾಲನೆ ನೀಡಿ ಮಾತನಾಡಿದರು.

ದೇಶ ಅಭಿವೃದ್ಧಿ ಪಥಕ್ಕೆ ವೇಗ ನೀಡಲು ಮತ್ತು ಸರ್ಕಾರದ ಯೋಜನೆಗಳು ಪ್ರತಿಯೊಬ್ಬ ನಾಗರಿಕನಿಗೂ ತಲುಪುವಂತೆ ಮಾಡಲು ಈ ಜನಗಣತಿ ಅತ್ಯಂತ ಮುಖ್ಯವಾಗಿದೆ. ಶೀಘ್ರದಲ್ಲೇ ಜನಗಣತಿ ತಂಡವು ನಿಮ್ಮ ಮನೆಗೂ ಬರಲಿದೆ. ಈ ರಾಷ್ಟ್ರೀಯ ಜವಾಬ್ದಾರಿಯಲ್ಲಿ ಸಹಕರಿಸಿ ಮತ್ತು ಅಗತ್ಯ ಮಾಹಿತಿಗಳನ್ನು ಒದಗಿಸಿ ಎಂದರು.

ಒಟ್ಟಾರೆ ಜನಗಣತಿ ಪ್ರಕ್ರಿಯೆಗೆ ನಿಡಗುಂದಿ ತಾಲ್ಲೂಕಿಗೆ ಸಾರ್ವಜನಿಕ ಶಿಕ್ಷಣ ಇಲಾಖೆಯಿಂದ ಒಟ್ಟು 142 ಗಣತಿದಾರರನ್ನು ಮತ್ತು 17 ಜನ ಮೀಸಲು ಪಡೆ ನೇಮಕ ಮಾಡಲಾಗಿದೆ. 25 ಜನ ಮೇಲ್ವಿಚಾರಕರನ್ನು ಮತ್ತು 3 ಜನ ಮೀಸಲು ಪಡೆಯನ್ನು ನಿಯೋಜಿಸಲಾಗಿದೆ. ಅವರಿಗೆ ಈಗಾಗಲೇ ತಾಲ್ಲೂಕು ಮಟ್ಟದಲ್ಲಿ ತಲಾ ಮೂರು ದಿನಗಳ ತರಬೇತಿ ಕಾರ್ಯವೂ ಪೂರ್ಣಗೊಂಡಿದೆ ಎಂದರು.

ಈ ಕಾರ್ಯವನ್ನು ಸುಲಭ ಸಾಧ್ಯಗೊಳಿಸಲು ಅವರು ಕಾರ್ಯನಿರ್ವಹಿಸುವ ಪ್ರದೇಶಗಳಲ್ಲಿಯೇ ಗಣತಿಗೆ ಹಾಕಲಾಗಿದೆ. ಪ್ರತಿ ಆರು ಮಂದಿ ಗಣತಿದಾರರಿಗೆ ಒಬ್ಬರು ಮೇಲ್ವಿಚಾರಕರು ಇರಲಿದ್ದಾರೆ. ಗಣತಿದಾರರು ಅನಾರೋಗ್ಯಕ್ಕೀಡಾದರೆ ಇಲ್ಲವೇ ಬೇರೆ ಬೇರೆ ಕಾರಣಕ್ಕೆ ಗೈರು ಹಾಜರಾದರೆ ಅವರ ಬದಲಿಗೆ ಕೆಲಸ ಮಾಡಲು ತಾಲ್ಲೂಕಿಗೆ 20 ಜನರ ಮೀಸಲು ಪಡೆಯನ್ನು ನೇಮಿಸಲಾಗಿದೆ ಎಂದರು.

ತಾಪಂ ಇಒ ವೆಂಕಟೇಶ ವಂದಾಲ, ಕಂದಾಯ ನಿರೀಕ್ಷಕ ಸಲೀಮ ಯಲಗೋಡ, ಗ್ರಾಮಾಡಳಿತಾಧಿಕಾರಿ ನಾನಾಗೌಡ ಪಾಟೀಲ, ಶಿಕ್ಷಣ ಸಂಯೋಜಕ ಉದಯಕುಮಾರ ಬಸೆಟ್ಟಿ, ಸುರೇಶ ಹುರಕಡ್ಲಿ, ಭೂ ನ್ಯಾಯ ಮಂಳಿ ಸದಸ್ಯ ಮಂಜುನಾಥ ಹಿರೇಮಠ ಸೇರಿದಂತೆ ಮತ್ತಿತರರಿದ್ದರು.



ಅಂಬೇಡ್ಕರ್ ಚಿಂತನೆಗಳಿಗೆ ಕಾಂಗ್ರೆಸ್ ವಿರೋಧ

◆**ವಿಜಯಪುರ:** ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ ಅವರ ಜಯಂತಿಯನ್ನು ಬಿಜೆಪಿ ವತಿಯಿಂದ ಅರ್ಥಪೂರ್ಣವಾಗಿ ಆಚರಿಸಲಾಯಿತು.

ಮೊದಲು ಬಿಜೆಪಿಯ ಮುಖಂಡರು ನಗರದ ಡಾ. ಅಂಬೇಡ್ಕರ್ ವೃತ್ತದಲ್ಲಿ ಜಮಾಯಿಸಿ ಡಾ.ಅಂಬೇಡ್ಕರ ಅವರ ಪ್ರತಿಮೆಗೆ ಪುಷ್ಪಾಂಜಲಿ ಸಲ್ಲಿಸಿದರು. ಪಾಪುಸಿಂಗ ರಜಪೂತ ಅವರು 'ವಂದೇ ಮಾತರಂ' ಗೀತೆ ಹಾಡಿದರು. ಭಾರತಿ ಶಿವಣಗಿ ಅವರು ಡಾ. ಅಂಬೇಡ್ಕರ್ ಅವರ ಕುರಿತಾದ ಸುಂದರ ಕವನ ವಾಚನ ಮಾಡಿದರು. ಇದೇ ವಿಶೇಷ ಸಂದರ್ಭದಲ್ಲಿ ಜಿಲ್ಲೆಯ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಗುರುತಿಸಿ ಸನ್ಮಾನಿಸಿ ಗೌರವಿಸಲಾಯಿತು.

ರಾಘವೇಂದ್ರ ಕಾಪಸೆ ಮಾತನಾಡಿ, ಡಾ. ಅಂಬೇಡ್ಕರ್ ಚಿಂತನೆಗಳಿಗೆ ಕಾಂಗ್ರೆಸ್ ಸದಾ ವಿರೋಧ ಮಾಡುತ್ತಲೇ ಬಂದಿತು, ಅವರ ಶ್ರೇಷ್ಠ ಸಾಧನೆಗೆ ಅವರು ಜೀವಿತಾವಧಿಯಲ್ಲಿ ಭಾರತ ರತ್ನ ನೀಡಲಿಲ್ಲ, ಅವರ ಸಮಾಧಿಗೆ ನವದೆಹಲಿಯಲ್ಲಿ ಸ್ಥಳ ಸಹ ನೀಡಲಿಲ್ಲ, ಅವರ ಆಶಯಗಳಿಗೆ ವಿರುದ್ಧವಾಗಿ ಹಾಗೂ ವೈಯುಕ್ತವಾಗಿ ಕಾಂಗ್ರೆಸ್ ಡಾ.ಅಂಬೇಡ್ಕರ ಅವರನ್ನು ಅತ್ಯಂತ ಅವಮಾನಕಾರಿಯಾಗಿ ನಡೆದುಕೊಂಡಿದೆ ಎಂದು ಅಸಮಾಧಾನ ಹೊರಹಾಕಿದರು.

ಸಿದ್ದು ಬುಳ್ಳಾ ಅವರು ಬಾಬಾಸಾಹೇಬರಿಗೆ ಭಾರತೀಯ ಜನತಾ ಪಾರ್ಟಿ ಹಾಗೂ ಕೇಂದ್ರ ಸರ್ಕಾರ ನೀಡಿದ ಅತ್ಯುನ್ನತ ಗೌರವಗಳ ಕುರಿತು ಅವರ ಜೀವನಕ್ಕೆ ಸಂಬಂಧಿಸಿದ ಸ್ಥಳಗಳನ್ನು ಪಂಚ ತೀರ್ಥಕ್ಷೇತ್ರಗಳನ್ನಾಗಿ ಅಭಿವೃದ್ಧಿ ಮಾಡಿದೆ, ಡಾ.ಅಂಬೇಡ್ಕರ ಅವರ ಬಗ್ಗೆ ನೈಜವಾದ ಗೌರವವನ್ನು ಹೊಂದಿದೆ ಎಂದರು.

ಸಂಸದ ರಮೇಶ ಜಿಗಜಿಣಗಿ ಮಾತನಾಡಿ, ಡಾ.ಅಂಬೇಡ್ಕರ ಎಂದರೆ ಒಂದು ಸ್ಫೂರ್ತಿ, ಒಂದು ಶಕ್ತಿ, ಅವರ ತತ್ವಾದರ್ಶಗಳನ್ನು ಜೀವನದಲ್ಲಿ ಮೈಗೂಡಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ಮಂಜುನಾಥ ಮಿಸೆ ಮಾತನಾಡಿದರು. ಬಿಜೆಪಿ ಜಿಲ್ಲಾಧ್ಯಕ್ಷ ಗುರುಲಿಂಗಪ್ಪ ಅಂಗಡಿ ಮಾತನಾಡಿದರು. ಬಿಜೆಪಿ ಜಿಲ್ಲಾಧ್ಯಕ್ಷ ಗುರುಲಿಂಗಪ್ಪ ಅಂಗಡಿ, ಮಾಜಿ ಸಚಿವ ಅಪ್ಪಾಸಾಹೇಬ ಪಟ್ಟಣಶೆಟ್ಟಿ, ಚಂದ್ರಶೇಖರ ಕವಟಗಿ, ವಿಜುಗೌಡ ಪಾಟೀಲ, ಕಾಸುಗೌಡ ಬಿರಾದಾರ, ಸಂಜೀವ ಐಹೊಳೆ, ವಿವೇಕಾನಂದ ಡಬ್ಬಿ, ಸುರೇಶ ಬಿರಾದಾರ, ಈರಣ್ಣ ರಾವೂರ, ಸಾಬು ಮಾಶ್ಯಾಳ, ಮಳುಗೌಡ ಪಾಟೀಲ, ಚಿದಾನಂದ ಚಲವಾದಿ, ಮಲ್ಲಿಕಾರ್ಜುನ ಜೋಗೂರ, ರವಿಕಾಂತ ವಗ್ಗೆ, ಮಹೇಶ ಒಡೆಯರ, ಶಿವರುದ್ರ ಬಾಗಲಕೋಟ, ಭರತ ಕೋಳಿ ಇದ್ದರು.



ದೇವಸ್ಥಾನ ಉದ್ಘಾಟನೆ ಇಂದಿನಿಂದ

◆**ಮುದ್ದೇಬಿಹಾಳ:** ತಾಲೂಕಿನ ಸಿದ್ದಾಪುರ ಪಿ.ಟಿ ಗ್ರಾಮದಲ್ಲಿ ನೂತನವಾಗಿ ನಿರ್ಮಿಸಲಾದ ಅಮೋಘ ಸಿದ್ದೇಶ್ವರ ದೇವಸ್ಥಾನದ ನೂತನ ಕಟ್ಟಡದ ಉದ್ಘಾಟನಾ ಸಮಾರಂಭ ಏ.17ರಿಂದ 20ರ ವರೆಗೆ ನಡೆಯುವದು. ಈ ಕುರಿತು ಧಾರ್ಮಿಕ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಯನ್ನು ಗ್ರಾಮದ ದೇವಸ್ಥಾನದ ಆವರಣದಲ್ಲಿ ಆಡಳಿತ ಮಂಡಳಿ ಹಾಗೂ ಗ್ರಾಮದ ಹಿರಿಯರ ಸಮ್ಮುಖದಲ್ಲಿ ಆಮಂತ್ರಣ ಪತ್ರಿಕೆ ಗುರುವಾರ ಬಿಡುಗಡೆ ಮಾಡಲಾಯಿತು. ಏ.17ರಂದು ಶುಕ್ರವಾರ ಹನಗಂಡಿ ಗ್ರಾಮದಿಂದ ಕಳಸದ ಆಗಮನ, ಗಂಗಸ್ಥಳ ಪೂಜೆ ಹಾಗೂ ವಾದ್ಯ ವೈಭವದೊಂದಿಗೆ ದೇವಸ್ಥಾನಕ್ಕೆ ಕಳಸ ತರುವುದು. ಏ.18ರಂದು ಶನಿವಾರ ಭೂತನಾಳ ಸಿದ್ದೇಶ್ವರ ದೇವಸ್ಥಾನದಿಂದ ಪಲ್ಲಕ್ಕಿ ಉತ್ಸವ, ಕುಂಭಮೇಳ ಹಾಗೂ ರಾತ್ರಿ 10 ಗಂಟೆಗೆ ಸುಪ್ರಸಿದ್ಧ ವಾದಿ-ಪ್ರತಿವಾದಿ ಡೊಳ್ಳಿನ ಪದಗಳ ಕಾರ್ಯಕ್ರಮ. ಏ.19ರಂದು ಭಾನುವಾರ ನಸುಕಿನ ಜಾವ ಹೋಮ-ಹವನ, ಮೂರ್ತಿ ಪ್ರತಿಷ್ಠಾಪನೆ, ಕಲಶಾರೋಹಣ ಹಾಗೂ ಧರ್ಮಸಭೆ ನಡೆಯಲಿದೆ. ಸಂಗಯ್ಯ ಒಡೆಯರ, ಶ್ರೀಕಾಂತಯ್ಯ ಒಡೆಯರ, ಶ್ರೀಶೈಲ್ ಒಡೆಯರ, ಅರವಿಂದ್ರಯ್ಯ, ನಿವೃತ್ತ ಶಿಕ್ಷಕ ಹಿರಿಯರಾದ ಒಡೆಯರ, ಎಚ್.ಬಿ.ಅಸ್ಕಿ, ಗ್ರಾಪಂ ಮಾಜಿ ಉಪಾಧ್ಯಕ್ಷ ಬಸಪ್ಪ ಚಲವಾದಿ, ಶಿವಪ್ಪ ಸೋಮನಾಳ, ದ್ಯಾವಪ್ಪ ಮೇಟಿ, ಗುರುಪಾದ ಹಾಲ್ಯಾಳ, ಹಣಮಂತರಾ ಸೋಮನಾಳ, ಡಾ.ಸಿದ್ದು ಮುತ್ತತಿ, ಎಂ.ಬಿ.ಹಾಲ್ಯಾಳ, ಲಕ್ಕಪ್ಪ ಸೋಮನಾಳ, ಗುರುಪಾದ ಅಸ್ಕಿ, ಸಿದ್ದಲಿಂಗಪ್ಪ ಸೋಮನಾಳ, ಯಲ್ಲಪ್ಪ ಗೊಡೇಕಾರ, ತಿಪ್ಪಣ್ಣ ಹಾಲ್ಯಾಳ, ಅಮೋಗಿ ಮೇಟಿ ಉಪಸ್ಥಿತರಿದ್ದರು.



ಡಾ.ಅಂಬೇಡ್ಕರ್ ಜಯಂತಿ ಆಚರಣೆ



◆**ಮುದ್ದೇಬಿಹಾಳ:** ಹಿಂದು ಸಮಾಜ ಸಂಘಟನೆಯ ವತಿಯಿಂದ ಕಿತ್ತೂರು ಚನ್ನಮ್ಮ ವೃತ್ತದಲ್ಲಿ ಡಾ.ಬಿ.ಆರ್.ಅಂಬೇಡ್ಕರ ರವರ 135ನೇ ಜಯಂತ್ಯುತ್ಸವ ಕಾರ್ಯಕ್ರಮದಲ್ಲಿ ಭಾವಚಿತ್ರಕ್ಕೆ ಅಲಂಕಾರ ಮಾಡಿ ಗೌರವ ನೀಡಿದರು. ವೆಂಕನಗೌಡ ಪಾಟೀಲ, ಪ್ರಭು ಕಡಿ, ಮಾಣಿಕ ದಂಡಾವತಿ, ಅಶೋಕ ನಾಡಗೌಡ, ಗುರುಸ್ವಾಮಿ ಬೂದಿಹಾಳಮಠ, ಹಣಮಂತ ತಿಡಗುಂದಿ, ಮಹಾಂತೇಶ ಮೋಟಗಿ, ಬರ್ತಿಶ ಮಂಕಣಿ, ಬಸವರಾಜ ನಂದಿಕೇಶ್ವರಮಠ, ಹಣಮಂತ ನಾಯಕಮಕ್ಕಳ, ಶ್ರೀಶೈಲ ಹುಗ್ಗಿ, ಮಾಂತೂ ಬೂದಿಹಾಳಮಠ, ಶ್ರೀಕಾಂತ ಹಿರೇಮಠ, ಪ್ರಭು ನಂದಪ್ಪನವರ, ಆನಂದ ಪತ್ರಿ, ಚೇತನ ಶಿವಶಿಂಪಿ, ಮುತ್ತಣ್ಣ ಹಡಪದ, ಮಹಾಂತೇಶ್ ಹುರಕಡ್ಲಿ, ನಟರಾಜ ಕಂಠಿ, ಸಾಗರ ಉಕ್ಕಲಿ, ಯಮನೂರಿ ನಾಯಕಮಕ್ಕಳ, ಶಾಂತು ನಾಯಕಮಕ್ಕಳ, ಸಂಗನಗೌಡ ಬಿರಾದರ, ಶಿವು ಬಿರಾದರ, ರವಿ ಜಗಲಿ, ಪ್ರಶಾಂತ ರಾಂಪುರ, ಮದನ ಕುಲಕರ್ಣಿ ಇದ್ದರು.

ಆಯುರ್ಥಿಂಕ್ ಫೆಸ್ಟ್ ಕಾರ್ಯಕ್ರಮ

◆**ವಿಜಯಪುರ:** ನಗರದ ಬಿಎಲ್‌ಡಿಇ ಸಂಸ್ಥೆಯ ಎವಿಎಸ್ ಆಯುರ್ವೇದ ಮಹಾವಿದ್ಯಾಲಯ ಆಸ್ಪತ್ರೆ ಮತ್ತು ಸಂಶೋಧನ ಕೇಂದ್ರದ ಐಡಿಸೆಲ್ ವತಿಯಿಂದ, ಆಯುರ್ವೇದ ವೈದ್ಯಕೀಯ ಪದ್ಧತಿಯ ತತ್ವಗಳನ್ನು ನವೀಕರಿಸುವ ಹೊಸ ತರ್ಕ ಮಂಡನೆಯ ಕುರಿತು ವಿದ್ಯಾರ್ಥಿಗಳಿಗೆ ಆಯುರ್ಥಿಂಕ್ ಫೆಸ್ಟ-2026 ವಿಷಯ ಕುರಿತು ತರ್ಕ ಸಂಗ್ರಹಣೆ ಕಾರ್ಯಕ್ರಮ ನಡೆಯಿತು.

ಕಾರ್ಯಕ್ರಮ ಉದ್ಘಾಟಿಸಿದ ಕೆಎಲ್‌ಇ ಸಂಸ್ಥೆಯ ನಿರ್ದೇಶಕ ಡಾ.ಬಿ.ಶ್ರೀನಿವಾಸ ಪ್ರಸಾದ, ಇಂದಿನ ದಿನಗಳಲ್ಲಿ ಆಯುರ್ವೇದ ಪದ್ಧತಿಯನ್ನು ವೈಜ್ಞಾನಿಕರಣ ಮಾಡುವುದು ಮುಖ್ಯವಾಗಿದೆ ಎಂದು ಹೇಳಿದರು.

ಬಿಎಲ್‌ಡಿಇ ಡೀಮ್ಡ್ ವಿಶ್ವವಿದ್ಯಾಲಯದ ಸಂಶೋಧನ ಕೇಂದ್ರದ ಸಿಬ್ಬಂದಿ ಸಂಯೋಜಕ ಡಾ.ನಿರ್ಮಲಾ, ಕಾಲೇಜಿನ ಪ್ರಾಚಾರ್ಯ ಡಾ. ಅಶೋಕ ಪಾಟೀಲ, ವೈದ್ಯರಾದ ಡಾ.ವಿಜಯಲಕ್ಷ್ಮಿ ಪೂಜಾರಿ, ಡಾ. ಕಾಶೀನಾಥ ಹದಿಮೂರ ಮುಂತಾದವರು ಇದ್ದರು. ಆಯುರ್ವೇದ, ಎಂಜಿನಿಯರಿಂಗ್, ಬೇರೆ ಕಾಲೇಜುಗಳಿಂದ ಸುಮಾರು 80 ವಿದ್ಯಾರ್ಥಿಗಳು ಭಾಗವಹಿಸಿದ್ದರು.



ನೀರು ಹರಿಸಿ ನೀರಿನ ತೊಂದರೆ ತಪ್ಪಿಸಿ



◆**ಇಂಡಿ:** ತಾಲೂಕಿನ ಮಿರಗಿ ಹಳ್ಳ ಮತ್ತು ಗೋಳಸಾರ ಗ್ರಾಮಕ್ಕೆ ಕೃಷ್ಣಾ ಕಾಲುವೆ ಮುಖಾಂತರ ನೀರು ಹರಿಸಿ ನೀರಿನ ತೊಂದರೆ ತಪ್ಪಿಸಬೇಕೆಂದು ಆಗ್ರಹಿಸಿ ಗ್ರಾಮದ ರೈತರು ಆಡಳಿತ ಸೌಧ ಎದುರು ಪ್ರತಿಭಟನೆ ನಡೆಸಿದರು.

ಕರವೇ ತಾಲೂಕು ಅಧ್ಯಕ್ಷ ಬಾಳು ಮುಳಜಿ ಮಾತನಾಡಿ, ಮಿರಗಿ ಹಳ್ಳಕ್ಕೆ ಕೃಷ್ಣಾ ಕಾಲುವೆ ನೀರು ಹರಿಸಿದರೆ ಮಿರಗಿ, ಗೋಳಸಾರ, ನಾದ ಸಂಗೋಗಿ, ಶಿರಶ್ಯಾಡ ಈ ಎಲ್ಲ ಗ್ರಾಮಗಳಿಗೆ ಕುಡಿಯುವ ನೀರಿನ ಅನುಕೂಲವಾಗುತ್ತದೆ ಕಾರಣ ಕಾಲುವೆ ಮುಖಾಂತರ ಹಳ್ಳಕ್ಕೆ ನೀರು ಹರಿಸಬೇಕು ಎಂದು ಆಗ್ರಹಿಸಿದರು.

ರೈತ ಮುಖಂಡ ಶ್ರೀಶೈಲ ಮದರಿ ಮಾತನಾಡಿದರು. ಬಸವರಾಜ ಖಸ್ಕಿ, ಭೀಮಣ್ಣ ಅವಟಿ, ಬಸವರಾಜ ಭಂಥನಾಳ, ಶಿವಲಿಂಗಪ್ಪ ರೋಡಗಿ, ಯಲ್ಲಪ್ಪ ಗಾಳಿ, ಶಿವಾನಂದ ಕಲಶೆಟ್ಟಿ, ರವಿಕಾಂತ ರೋಡಗಿ, ಭೀಮರಾಯ ಹಳ್ಳಿ, ಕಾಂತಪ್ಪ ಗಡೆಕರ, ಸುರೇಸ ಪಾಟೀಲ, ನಾಮದೇವ ಸಾಳುಂಕೆ, ಅಶೋಕ ಆನೂರ, ಶಿವಲಿಂಗಪ್ಪ ರೋಡಗಿ ಮುತ್ತಿತರಿದ್ದರು. ತಹಶೀಲ್ದಾರ್ ಬಿ.ಎಸ್.ಕಡಕಬಾವಿ ಇವರಿಗೆ ಮನವಿ ಸಲ್ಲಿಸಿದರು.

ಬಜರಂಗದಳದಿಂದ ಡಿವೈಎಸ್‌ಪಿಗೆ ಸನ್ಮಾನ

◆**ಬಸವನಬಾಗೇವಾಡಿ:** ವಿಶ್ವ ಹಿಂದೂ ಪರಿಷತ್ ಬಜರಂಗದಳ ಪ್ರಖಂಡದ ವತಿಯಿಂದ ಪೊಲೀಸ್ ಇಲಾಖೆಯ ಹೆಮ್ಮೆಯ ದಕ್ಷ ಪೊಲೀಸ್ ಅಧಿಕಾರಿ ಮುಖ್ಯಮಂತ್ರಿಗಳಿಂದ ಗೌರವ ಪದಕ ಪುರಸ್ಕೃತ ಡಿವೈಎಸ್‌ಪಿ ಬಲಪ್ಪ ನಂದಗಾಂವಿ ಅವರಿಗೆ ಸನ್ಮಾನಿಸಲಾಯಿತು.

ಅಧ್ಯಕ್ಷ ಮಹೇಶ ಸಾಲೋಡಗಿ ಮಾತನಾಡಿ, ಕರ್ನಾಟಕದಲ್ಲಿ 2025ನೇ ಸಾಲಿಗೆ ಮುಖ್ಯಮಂತ್ರಿ ಪದಕವನ್ನು 153 ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಗಳಿಗೆ ಘೋಷಿಸಲಾಗಿತು. ಅತ್ಯುತ್ತಮ ಸೇವೆ ಅಪರಾಧ ತಡೆಗಟ್ಟುವಿಕೆ ಮತ್ತು ಕರ್ತವ್ಯ ನಿಷ್ಠೆಗಾಗಿ ಈ ಪದಕಗಳನ್ನು ನೀಡಿ ಅದರಲ್ಲಿ ವಿಶೇಷವಾಗಿ ಪಟ್ಟಣದ ಹೆಮ್ಮೆಯ ದಕ್ಷ ಪೊಲೀಸ್ ಅಧಿಕಾರಿ ಬಲಪ್ಪ ನಂದಗಾಂವಿ ಅವರಿಗೆ ಮುಖ್ಯಮಂತ್ರಿ ಗೌರವ ಪದಕ ಪುರಸ್ಕೃತವಾಗಿದ್ದು ಅವರ ಕರ್ತವ್ಯ ನಿಷ್ಠೆ, ಉತ್ತಮ ಸೇವೆಗೆ ಸಂದ ಗೌರವಾಗಿದೆ ಎಂದರು.

ಕಾರ್ಯದರ್ಶಿ ಅಶ್ವಿನಕುಮಾರ ಪಟ್ಟಣಶೆಟ್ಟಿ, ಪ್ರಮುಖರಾದ ಸೀತಾರಾಮ ಭಜಂತ್ರಿ, ಅಶೋಕ ಪವಾರ, ಈರಣ್ಣ ಬಡಿಗೇರ, ಬಾಬು ಭೈರವಾಡಗಿ, ಸಂಗಮೇಶ ಬಡಿಗೇರ, ಪ್ರವೀಣ ಕಾಮುನಕೇರಿ, ಬಾಲು ಅಗಸರ, ಆಕಾಶ ಮಡಿವಾಳರ, ರಾಹುಲ್ ಜೀರ, ದರ್ಶನ ಕೋಳೂರ, ಆನಂದ ನರಸಲಗಿ, ಸಿದ್ದು ತಳವಾರ, ಸೋನು ಮಡಿವಾಳರ ಸೇರಿ ಇತರರು ಉಪಸ್ಥಿತರಿದ್ದರು.



ಆಯುರ್ವೇದದಲ್ಲಿ ಇನ್ನಷ್ಟು ಸಂಶೋಧನೆ ನಡೆಯಲಿ

◆**ವಿಜಯಪುರ:** ಆಯುರ್ವೇದದಲ್ಲಿ ಹೆಚ್ಚೆಚ್ಚು ಸಂಶೋಧನೆ ಕೈಗೊಳ್ಳುವ ಮೂಲಕ ಆರೋಗ್ಯ ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡಲು ಸಾಧ್ಯ ಎಂದು ನವದೆಹಲಿ ಎನ್‌ಸಿಐಎಸ್‌ಎಂ ಬೋರ್ಡ್ ಆಫ್ ಆಯುರ್ವೇದ ಅಧ್ಯಕ್ಷ ಡಾ.ಅಲ್ಲಮಪ್ರಭು ಗುಡ್ಡಾ ಹೇಳಿದರು.

ನಗರದ ಬಿಎಲ್‌ಡಿಇ ಸಂಸ್ಥೆಯ ಎವಿಎಸ್ ಆಯುರ್ವೇದ ಮಹಾವಿದ್ಯಾಲಯ ಆಸ್ಪತ್ರೆ ಮತ್ತು ಸಂಶೋಧನದ ಕೇಂದ್ರದ ವತಿಯಿಂದ ಬೆಂಗಳೂರು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಆಶ್ರಯದಲ್ಲಿ ವಚನ ಪಿತಾಮಹ ಡಾ. ಫ.ಗು. ಹಳಕಟ್ಟಿ ಎಂಜಿನಿಯರಿಂಗ್ ಕಾಲೇಜು ಸಭಾಂಗಣದಲ್ಲಿ ಹಮ್ಮಿಕೊಂಡ ರಾಷ್ಟ್ರಮಟ್ಟದ ಒಂದು ದಿನದ ವಿಚಾರ ಸಂಕಿರಣ ಅನುಸಂಧಾನ-11 ಉದ್ಘಾಟಿಸಿ ಅವರು ಮಾತನಾಡಿದರು. ಆಯುರ್ವೇದ ವಿದ್ಯಾರ್ಥಿಗಕಳು ಸಂಶೋಧನೆಗೆ ಹೆಚ್ಚು ಒತ್ತು ನೀಡಬೇಕು. ಈ ಮೂಲಕ ಜನರಿಗೆ ಆಯುರ್ವೇದ ಚಿಕಿತ್ಸೆಯ ಹೆಚ್ಚು ಲಾಭ ದೊರೆಯುವಂತೆ ಮಾಡಬೇಕು ಎಂದರು.



ಬೆಳಗಾವಿ ಕೆಎಲ್‌ಇ ಆಯುರ್ವೇದ ಕಾಲೇಜಿನ ಪ್ರಾಚಾರ್ಯ ಡಾ. ಸುಹಾಸಕುಮಾರ ಶೆಟ್ಟಿ, ಪುಣೆಯ ಭಾರತೀಯ ವಿದ್ಯಾಪೀಠದ ಪ್ರಾಚಾರ್ಯ ಡಾ. ಶೈಲೇಶ ದೇಶಪಾಂಡೆ, ಬಿ.ಎಂ.ಪಾಟೀಲ ವೈದ್ಯಕೀಯ ಮಹಾವಿದ್ಯಾಲಯದ ಸಂಖ್ಯಾಶಾಸ್ತ್ರಜ್ಞ ಡಾ.ಅಜಯಕುಮಾರ ರಂಗೋಲಿ ಮಾತನಾಡಿದರು.

ಬಿಎಲ್‌ಡಿಇ ಡೀಮ್ಡ್ ವಿಶ್ವವಿದ್ಯಾಲಯದ ರಜಿಸ್ಟ್ರಾರ್ ಡಾ.ಆರ್.ವಿ ಕುಲಕರ್ಣಿ, ನವದೆಹಲಿ ಬೋರ್ಡ್ ಆಫ್ ಆಯುರ್ವೇದ ಎನ್‌ಸಿಐಎಸ್‌ಎಂ ಮಾಜಿ ಅಧ್ಯಕ್ಷ ಬೆಳಗಾವಿ ಕೆಎಲ್‌ಇ ಮಾಜಿ ಅಧ್ಯಕ್ಷ ಡಾ. ಬಿ.ಶ್ರೀನಿವಾಸ ಪ್ರಸಾದ, ಕಾಲೇಜಿನ ಪ್ರಾಚಾರ್ಯ ಡಾ.ಅಶೋಕ ಪಾಟೀಲ, ಆಸ್ಪತ್ರೆಯ ಆಡಳಿತಾಧಿಕಾರಿ ಡಾ.ಸಂಜಯ ಕಡ್ಲಿಮಟ್ಟಿ, ಉಪಪ್ರಾಚಾರ್ಯ ಡಾ.ಶಶಿಧರ ನಾಯಕ, ಡಾ. ಪ್ರಮೋದ ಬರಗಿ, ಡಾ.ಸತೀಶ ಪಾಟೀಲ ಇದ್ದರು.

ದಯಾಮರಣಕ್ಕೆ ಮನವಿ

◆**ವಿಜಯಪುರ:** ರಾಜ್ಯದಲ್ಲಿ ಸರ್ಕಾರಿ ಉದ್ಯೋಗಗಳ ಅಧಿಸೂಚನೆ ವಿಳಂಬಗೊಳ್ಳುತ್ತಿದೆ ಎಂದು ಆರೋಪಿಸಿ ಜಿಲ್ಲೆಯ ನೊಂದ ಸ್ಪರ್ಧಾರ್ಥಿ ವಿಜಯ ಲಮಾಣಿ ದಯಾಮರಣ ಕೋರಿ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿದ್ದಾನೆ. ಈ ಕುರಿತು ಪತ್ರ ಬರೆದ ಸ್ಪರ್ಧಾರ್ಥಿ ವಿಜಯ ಲಮಾಣಿ, ಕಳೆದ ನಾಲ್ಕೈದು ವರ್ಷಗಳಿಂದ ಸರ್ಕಾರಿ ಹುದ್ದೆಗಳಿಗಾಗಿ ಸಿದ್ಧತೆ ನಡೆಸುತ್ತಿದ್ದು, ಚುನಾವಣೆ ಪೂರ್ವದಲ್ಲಿ ಸರ್ಕಾರವು ಭರವಸೆ ನೀಡಿದಂತೆ ಲಕ್ಷಾಂತರ ಉದ್ಯೋಗಗಳ ಅಧಿಸೂಚನೆ ಹೊರಡಿಸಬೇಕಿತ್ತು. ಆದರೆ ಅಧಿಕಾರಕ್ಕೆ ಬಂದ ಇಷ್ಟು ದಿನಗಳು ಕಳೆದರೂ ಪ್ರಮುಖ ನೇಮಕಾತಿ ಕುರಿತು ಅಧಿಸೂಚನೆಗಳು ಹೊರಬಂದಿಲ್ಲ. ಬೇರೆ ಯಾವುದೇ ಜೀವನೋಪಾಯದ ದಾರಿ ಕಾಣದ ಪರಿಸ್ಥಿತಿಯಲ್ಲಿರುವ ತನಗೆ ಬದುಕು ನಡೆಸುವುದು ಅಸಾಧ್ಯವಾಗಿದೆ. ಆದ್ದರಿಂದ ತನಗೆ ದಯಾಮರಣಕ್ಕೆ ಅವಕಾಶ ನೀಡಬೇಕು ಎಂದು ನೊಂದ ಸ್ಪರ್ಧಾರ್ಥಿ ಪತ್ರದಲ್ಲಿ ಒತ್ತಾಯಿಸಿದ್ದಾನೆ.

ಕಿರುಸುದ್ದಿ

ಡಾ.ಅಂಬೇಡ್ಕರ್ ಜಯಂತ್ಯುತ್ಸವ



ಕುಷ್ಟಗಿ: ತಾಲೂಕಿನ ಹಿರೇಮನ್ನಾಪುರು ಗ್ರಾಮದಲ್ಲಿ ಸಂವಿಧಾನ ಶಿಲ್ಪಿ ಮಹಾನ್ ಮಾನವತವಾದಿ ಡಾ.ಬಾಬಾಸಾಹೇಬ್ ಅಂಬೇಡ್ಕರ್ 135ನೇ ಜಯಂತ್ಯುತ್ಸವ ನಿಮಿತ್ತ ನೂತನ ವೃತ್ತದ ಮೂರ್ತಿ ಅನಾವರಣ ಕಾರ್ಯಕ್ರಮಕ್ಕೆ ಶಂಕರಲಿಂಗ ಮಠದ ಪೀಠಾದಿಪತಿ ಬಾಲಚಂದ್ರಪ್ಪಜ್ಜ ಮಂಗಳವಾರ ಚಾಲನೆ ನೀಡಿದರು. ಸಮಾಜ ಸೇವಕ ಪ್ರಕಾಶಗೌಡ ಬೆದವಟ್ಟಿ, ಡಿಎಸ್ಎಸ್ ಸಂಚಾಲಕ ಮರಿಯಪ್ಪ ಮಾದರ, ಕರವೇ ಅಧ್ಯಕ್ಷ ಪರಸಪ್ಪ ಆಳ್ಳಿ, ಪಿಕೆಪಿಎಸ್ಎಸ್ ಅಧ್ಯಕ್ಷ ಮಂಜುನಾಥ ಕಜ್ಜಿ, ಮುಖಂಡರಾದ ಏಕಲವ್ಯ ಚಳ್ಳೂರು, ದೇವಣ್ಣ ನೆರಬೆಂಚಿ, ಶರಣಪ್ಪ ವಂದಾಲಿ, ಲಕ್ಷ್ಮಣ ನಾಯಕ ರಂಜಾನಸಾಬ್ ಆಳ್ಳಿ, ರಾಜೇಸಾಬ್ ಭಾವಿಕಟ್ಟಿ, ಶರಣಪ್ಪ ಲೈನದ್, ಮಂಜುನಾಥ ಸಂಕನಾಳ, ಮರಿಯಪ್ಪ ಮುಳ್ಳೂರು, ದಾನಪ್ಪ ಹರಿಜನ ಗ್ಯಾನಪ್ಪ ಮಾದರ ಇನ್ನಿತರರು ಇದ್ದರು.

ಪಿಕಾರ್ಡ್ ಬ್ಯಾಂಕಿನ ಚುನಾವಣೆ ಪ್ರಕ್ರಿಯೆಗೆ ತಡೆಯಾಜ್ಞೆ

ಮಾನ್ವಿ: ಪಟ್ಟಣದ ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ನಿ.ಮಾನ್ವಿ ಸಹಕಾರ ಸಂಘದ ಕಚೇರಿಯಲ್ಲಿ ಏ.7ರ ಚುನಾವಣೆ ಪ್ರಕ್ರಿಯೆಯನ್ನು ಸ್ಥಗಿತ ಗೊಳಿಸುವಂತೆ ಉಚ್ಚನ್ಯಾಯಾಲಯ ಕಲಬುರಗಿ ಪೀಠವು ನೀಡಿದ ತಡೆಯಾಜ್ಞೆ ನೀಡಿದೆ. ಚುನಾವಣಾಧಿಕಾರಿಗಳಿಗೆ ಪಿಕಾರ್ಡ್ ಬ್ಯಾಂಕಿನ ಅಧಿಕಾರಿಗಳ ಮೂಲಕ ತಲುಪಿಸಿ ಅರ್ಜಿದಾರರ ಪರ ವಕೀಲರಾದ ವಿಶ್ವನಾಥ ರಾಯಪ್ಪ ಮಾತನಾಡಿ ಪಿಕಾರ್ಡ ಬ್ಯಾಂಕಿನ 2025-26ನೇ ಸಾಲಿನ ಆಡಳಿತ ಮಂಡಳಿಯ ನಿರ್ದೇಶಕರ ಮುಂದುವರೆದ ಚುನಾವಣಾವೇಳಾ ಪಟ್ಟಿ ಏ.7ರ ಚುನಾವಣೆ ಪ್ರಕ್ರಿಯೆಯಲ್ಲಿ ಮತದಾರರ ಪಟ್ಟಿ ಸೇರಿದಂತೆ ವಿವಿಧ ಲೋಪದೋಷಗಳ ವಿರುದ್ಧ ಉಚ್ಚನ್ಯಾಯಾಲಯ ಕಲಬುರಗಿ ಪೀಠಕ್ಕೆ ಅರ್ಜಿದಾರರಾದ ಜೆ.ಸುದಾಕರ್ ಹಾಗೂ ಇತರರು ಮನವಿ ಸಲ್ಲಿಸಿರುವುದನ್ನು ಪರಿಗಣಿಸಿ ಉಚ್ಚನ್ಯಾಯಾಲಯ ಕಲಬುರಗಿ ಪೀಠವು ಏ.7ರ ಚುನಾವಣೆ ಪ್ರಕ್ರಿಯೆಯನ್ನು ಸ್ಥಗಿತ ಗೊಳಿಸುವಂತೆ ತಡೆಯಾಜ್ಞೆಯನ್ನು ನೀಡಿದ್ದು ನ್ಯಾಯಾಲಯದ ಆದೇಶ ಪ್ರತಿಯನ್ನು ಇಂದು ಬ್ಯಾಂಕಿನ ಅಧಿಕಾರಿಗಳಿಗೆ ಸಲ್ಲಿಸಲಾಯಿತು ಎಂದು ತಿಳಿಸಿದರು.

ಏ.20ಕ್ಕೆ ಬಸವ ಜಯಂತಿ

ಕುಷ್ಟಗಿ: ತಾಲೂಕಾಡಳಿತ ವತಿಯಿಂದ ಏ.20ರಂದು ಬಸವ ಜಯಂತ್ಯುತ್ಸವ ಆಚರಣೆಗೆ ಎಲ್ಲ ಸಿದ್ಧತೆ ಕೈಗೊಳ್ಳಲಾಗುತ್ತಿದೆ ಎಂದು ತಹಶೀಲ್ದಾರ್ ಅಶೋಕ ಶಿಗ್ಗಾವಿ ಹೇಳಿದರು. ತಹಶೀಲ್ದಾರ್ ಕಚೇರಿ ಸಭಾಂಗಣದಲ್ಲಿ ನಡೆದ ಬಸವ ಜಯಂತಿ ಆಚರಣೆ ಪೂರ್ವಭಾವಿ ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಗುರುವಾರ ಮಾತನಾಡಿದರು. ಪ್ರತಿ ವರ್ಷದಂತೆ ಈ ವರ್ಷವೂ ಕೂಡ ಬಸವ ಜಯಂತಿ ಆಚರಣೆಗೆ ಅದ್ದೂರಿಯಾಗಿ ನಡೆಸಲಾಗುವುದು. ತಾಲೂಕು ಮಟ್ಟದ ಅಧಿಕಾರಿಗಳು ಕಡ್ಡಾಯವಾಗಿ ಪಾಲ್ಗೊಳ್ಳಬೇಕಿದೆ. ಕಾರ್ಯಕ್ರಮಕ್ಕೆ ಎಲ್ಲರ ಸಹಕಾರ ಅಗತ್ಯ ಎಂದು ತಿಳಿಸಿದರು. ಕಸಾಪ ನಿಕಟಪೂರ್ವ ಅಧ್ಯಕ್ಷ ವಿರೇಶ ಬಂಗಾರಶೆಟ್ಟರ್ ಮಾತನಾಡಿ, ತಾಲೂಕಿನಲ್ಲಿ ಆಚರಣೆ ಮಾಡುವ ಬಸವ ಜಯಂತಿ ಕಾರ್ಯಕ್ರಮ ಕಾಟಾಚಾರಕ್ಕೆ ಆಗದಂತೆ ಜಯಂತಿಗೆ ಮೆರಗು ಬರುವಂತೆ ತಾಲೂಕಾಡಳಿತ ಇಂತಹ ಕಾರ್ಯಕ್ರಮ ಆಯೋಜನೆ ಮಾಡಬೇಕಿದೆ. ಕಾರ್ಯಕ್ರಮ ಅರ್ಥಪೂರ್ಣವಾಗಿ ಆಚರಿಸಬೇಕಿದೆ. ಬಸವ ಅಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಲಿದ್ದಾರೆ.ಉತ್ತಮ ವ್ಯಕ್ತಿಗಳಿಂದ ವಿಶೇಷ ಉಪನ್ಯಾಸ ನೀಡುವರನ್ನು ಆಹ್ವಾನಿಸಬೇಕು. ಮೆರವಣಿಗೆ ಮೂಲಕ ವೇದಿಕೆಗೆ ಕಳೆ ತರುವಂತಾಗಬೇಕಿದೆ ಎಂದರು. ಜಾಗತಿಕ ಮಹಾಸಭಾದ ಅಧ್ಯಕ್ಷ ಟಿ.ಬಸವರಾಜ್, ಬಸವ ಸಮಿತಿ ಅಧ್ಯಕ್ಷ ಶಿವಸಂಗಪ್ಪ ಬಿಜಕಲ್, ಸೋಮಶೇಖರ ವೈಜಾಪುರ ಮಲ್ಲಪ್ಪ ಹೊಸಪೇಟೆ ಶಶಿಧರ ಕವಲಿ, ಬಸವರಾಜ್ ಗಾಣಿಗೇರ್, ಶಿವಾಜಿ ಹಡಪದ್, ವಸಂತ ಮೇಲಿನಮನಿ ಉಮೇಶ ಅಕ್ಕಿ ಮಾತನಾಡಿದರು. ಉಪತಹಶೀಲ್ದಾರ್ ರಜನಿಕಾಂತ ಕೆಂಗೇರಿ ಇದ್ದರು.





ಯಲಬುರ್ಗಾ: ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ಯಲಬುರ್ಗಾ-2026ರಿಂದ 2031ರ ಅವಧಿಯ ಕಾರ್ಯಕಾರಿ ಸಮಿತಿ ಸದಸ್ಯರ ಚುನಾವಣೆಯಲ್ಲಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಸಾಮಾನ್ಯ ಕ್ಷೇತ್ರದಿಂದ ಶಿಕ್ಷಕರಾದ ಶಿವಬಸಪ್ಪ ಧರಣಾ, ನಾಗರಾಜ ನಡುವಲಕೇರಿ, ಮುಳಗುಂದ ಬಸವರಾಜ, ಮುರ್ತುಜಸಾಬ ಮುಜಾವರ್, ಆಂಜನೇಯ, ಬಾಲದಂಡಪ್ಪ ತಳವಾರ, ಬಸವರಾಜ ಎಸ್.ಧರ್ಮಣ್ಣ, ಮಹಿಳಾ ಮೀಸಲು ಕ್ಷೇತ್ರದಿಂದ ಶಿಕ್ಷಕಿಯರಾದ ಬಸಮ್ಮ ನರಸಪ್ಪ ಚಲುವಾದಿ, ಗಂಗಮ್ಮ ಸೊಬಗಿನ, ಶಾಂತಮ್ಮ ಜಂತ್ಲಿ ಅವಿರೋಧ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ಎಂ.ಎನ್.ಜನಾದ್ರಿ ತಿಳಿಸಿದ್ದಾರೆ.

ಕಟ್ಟಡ ಕಾಮಗಾರಿಗೆ ಶಾಸಕ ಭೂಮಿಪೂಜೆ

ಸಿಂಧನೂರು: ತಾಲೂಕಿನ ತುರುವಿಹಾಳ ಪಟ್ಟಣದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಮಹಿಳಾ ವಸತಿ ನಿಲಯ 5 ಕೋಟಿ 32 ಲಕ್ಷ ರೂ.ಗಳ ಅನುದಾನದಲ್ಲಿ ನೂತನ ಕಟ್ಟಡ ನಿರ್ಮಾಣ ಕಾಮಗಾರಿಗೆ ಶಾಸಕ ಖಾದಿ ಮತ್ತು ಗ್ರಾಮೋದ್ಯೋಗ ನಿಗಮದ ಅಧ್ಯಕ್ಷ ಆರ್.ಬಸನಗೌಡ ಭೂಮಿಪೂಜೆ ನೆರವೇರಿಸಿದರು.

ವಿದ್ಯಾರ್ಥಿಗಳು ಶಿಕ್ಷಣದಿಂದ ವಂಚಿತರಾಗಬಾರದು ಎನ್ನುವ ದೃಷ್ಟಿಯಿಂದ ನಮ್ಮ ಸರಕಾರ ಶಿಕ್ಷಣಕ್ಕೆ ಮೊದಲ ಆದ್ಯತೆ ನೀಡುತ್ತಿದೆ. 2025-2026ನೇ ಸಾಲಿನ ಕಾಮಗಾರಿ ಇದಾಗಿದ್ದು, ಕಾಮಗಾರಿಯನ್ನು ಗುಣಮಟ್ಟದಲ್ಲಿ ಮಾಡಬೇಕು. ಅಧಿಕಾರಿಗಳು ಮುತುವರ್ಜಿ ವಹಿಸಬೇಕು. ಕಾಮಗಾರಿಯನ್ನು ಕಾಲಮಿತಿಯ ಒಳಗಡೆ ಮಾಡಬೇಕು. ಕಾಮಗಾರಿ ಕಳಪೆ ಕಂಡು ಬಂದರೆ ಅಧಿಕಾರಿಗಳ, ಗುತ್ತಿಗೆದಾರ ಮೇಲೆ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು. ಮಲ್ಲನಗೌಡ ದೇವರಮನಿ, ಪಪಂ ಅಧ್ಯಕ್ಷರಾದ ಬಾಪುಗೌಡ, ಆರ್.ಶಿವನಗೌಡ, ಶರಣಪ್ಪ ಹೊಸಗೌಡರ್, ಕರಿಯಪ್ಪ ವಿರುಪಾಪುರ್, ದೊಡ್ಡಪ್ಪ ಕಲ್ಲುಡಿ, ನಿಂಗಪ್ಪ ಗೊಸಬಾಳ, ಹೊನ್ನೂರಪ್ಪ, ಕೋಮಾರಪ್ಪ, ರಾಮಣ್ಣ, ಗುತ್ತಿಗೆದಾರ ಶರಣೇಗೌಡ ಮಾನವಿ, ಅರವಿಂದ ರೆಡ್ಡಿ, ಮರಿಯಪ್ಪ ನಾಮದ, ಮರಿಸ್ವಾಮಿ ಹತ್ತಿಗುಡ್ಡ, ಶಾಮೀದ ಸಾಬ್, ವೀರಭದ್ರಗೌಡ ಪಾಟೀಲ, ಶಾಮೀದ ಅಲಿ ಅರಬ್, ಭೀಮದಾಸ, ಹುಲುಗಪ್ಪ, ಶಿವಪುತ್ರಪ್ಪ, ಪಪಂ ಮುಖ್ಯಾಧಿಕಾರಿ ನರಸರೆಡ್ಡಿ, ಮಹಾಂತೇಶ ಸಾಹುಕಾರ, ಮುನಿಯಪ್ಪ ಬೆಳ್ಳಿ ಇತರರಿದ್ದರು.



ಸಿಂಧನೂರು: ತಾಲೂಕಿನ ತುರುವಿಹಾಳ ಪಟ್ಟಣದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಮಹಿಳಾ ವಸತಿ ನಿಲಯ 5 ಕೋಟಿ 32 ಲಕ್ಷ ರೂ.ಗಳ ಅನುದಾನದಲ್ಲಿ ನೂತನ ಕಟ್ಟಡ ನಿರ್ಮಾಣ ಕಾಮಗಾರಿಗೆ ಶಾಸಕ ಖಾದಿ ಮತ್ತು ಗ್ರಾಮೋದ್ಯೋಗ ನಿಗಮದ ಅಧ್ಯಕ್ಷ ಆರ್.ಬಸನಗೌಡ ಭೂಮಿಪೂಜೆ ನೆರವೇರಿಸಿದರು.

ಶಿವಕುಮಾರ್ ಶ್ರೀಗಳ ಗುರುವಂದನಾ ಕಾರ್ಯಕ್ರಮ
ಶರಣರ ಸಂಸ್ಮರಣೆಯಿಂದ ಋಣಭಾರ ತೀರಿಸಿ

ಕಲಬುರಗಿ: ಜಗತ್ತಿನಲ್ಲಿ ನಾಗರಿಕತೆಯೂ ಹುಟ್ಟುತ್ತಿರುವಾಗಲೇ, ಸಂಸ್ಕೃತಿ ಅನ್ನೋದು ಅಲ್ಲಲ್ಲಿ ಕಣ್ಣು ಬಿಡುತ್ತಿರುವಾಗಲೇ, ನಾಗರಿಕತೆಯ ಅದ್ವಿತೀಯ ಭಾಸ್ಕರನ ಉದಯವಾಗಿ ಜಗತ್ತಿಗೆ ಬೆಳಕು ನೀಡಿದ ಏಕೈಕ ರಾಷ್ಟ್ರ ಅದು ಭಾರತ ಎಂದು ತುಮಕೂರಿನ ಸಿದ್ಧಗಂಗಾ ಮಠದ ಉತ್ತರಾಧಿಕಾರಿ ಶಿವಸಿದ್ಧೇಶ್ವರ ಸ್ವಾಮೀಜಿ ಹೇಳಿದರು.

ನಗರದ ವೀರಶೈವ ಕಲ್ಯಾಣ ಮಂಟಪದಲ್ಲಿ ಸಿದ್ಧಗಂಗಾ ಹಳೆಯ ವಿದ್ಯಾರ್ಥಿಗಳ ಹಾಗೂ ಹಿತೈಷಿಗಳ ಸಂಘ ಮತ್ತು ಜಿಲ್ಲಾ ವೀರಶೈವ ಸಮಾಜದ ವತಿಯಿಂದ ಆಯೋಜಿಸಿದ್ದ ಡಾ.ಶಿವಕುಮಾರ ಮಹಾಶಿವಯೋಗಿಗಳ 119ನೇ ಜಯಂತಿ ಹಾಗೂ ಗುರುವಂದನಾ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದ ಅವರು,ಇಡೀ ಜಗತ್ತಿಗೆ ನಾಗರಿಕತೆ ಹಾಗೂ ಸಂಸ್ಕೃತಿಯ ಶಿಕ್ಷಣ ನೀಡಿದ್ದು ಭಾರತ,ಈ ಮಾತನ್ನು ಅಭಿಮಾನ ಪೂರ್ವಕವಾಗಿ ಶ್ರೀಗಳು ಸದಾ ನುಡಿಯುತ್ತಿದ್ದರು ಎಂದರು.

ನಾವು ಜಗತ್ತಿಗೆ ಬರಬೇಕಾದರೆ ಒಂದಿಷ್ಟು ಋಣಭಾರ ಹೊತ್ತು ಬಂದಿದ್ದೇವೆ. ಬದುಕಿನಲ್ಲಿ ಭಾರವಾದ ವಸ್ತುವೆಂದರೆ ಋಣಭಾರ. ಹುಟ್ಟುತ್ತಾ ಹೆತ್ತ ತಾಯಿಯ-ತಂದೆ, ಜ್ಞಾನ ನೀಡಿ ಜೀವನಕ್ಕೆ ಬೆಳಕಾದ ಗುರುವಿನ ಋಣಭಾರ ತಿರಿಸಲು ಸಾಧ್ಯವಿಲ್ಲ. ಆದರೆ, ಒಂದಿಷ್ಟು ಈ ಭಾರ ತಿರಿಸಬಹುದಾದರೇ ಶರಣರಿಗೆ, ದಾಸರಿಗೆ, ಸಿದ್ದರಿಗೆ ಶಿರಬಾಗಿ ಸಂಸ್ಮರಿಸಿ, ಹೃದಯಾಂತರದಿಂದ ಗುರುವರಿಯರಿಗೆ ಸ್ಮರಣೆ ಮಾಡುವುದರಿಂದ ಒಂದಿಷ್ಟು ಋಣ ತೀರಿಸುವ ಮೂಲಕ ಜೊತೆಗೆ ಬದುಕಿಗೆ ಬೆಳಕನ್ನು ಹಚ್ಚಿಕೊಳ್ಳುವ ಕಾರ್ಯ ಮಾಡಬಹುದೆಂದರು.

ಸದಾಕಾಲ ಮಹಾತ್ಮರ ಸ್ಮರಣೆ ಮಾಡಬೇಕು. ನಮ್ಮ ಬದುಕನ್ನು ಉದಾತ್ತಗೊಳಿಸಬೇಕಿದ್ದಲ್ಲಿ ಅಂಗ ಭಾವದಲ್ಲಿ ಲಿಂಗ ಭಾವ ಉಂಟು ಮಾಡಬೇಕು. ಕಾಯಕ, ದಾಸೋಹ ಶರಣರ ಅದ್ವಿತೀಯ ಸಿದ್ಧಾಂತಗಳಾಗಿವೆ. ಕಾಲದ ಮರಳಿನಲ್ಲಿ ಹೆಜ್ಜೆಯ ಗುರುತು ಬಿಟ್ಟು ಹೋಗಿರುವ ಶರಣರ, ಸಿದ್ದರ ಸಂಸ್ಮರಣೆ ಮಾಡುವುದೇನಿಜವಾದ ಜಯಂತಿ, ಪುಣ್ಯಸ್ಮರಣೆಯ ಆಶಯವಾಗಿದೆ. ಜಯಂತಿಗಳ ಸ್ಮರಣೆಗಳ ಒಂದು ಅಂಶವನ್ನಾದರೂ ನಮ್ಮ ಬದುಕಿನಲ್ಲಿ ಅಳವಡಿಸಿದರೆ ಬದುಕು ಸಾರ್ಥಕವಾಗಲಿದೆ. ಜಗತ್ತಿನಲ್ಲಿ ನಡೆಗಿಂತ ನುಡಿಯೇ ಮುಖ್ಯವಾಗಿದೆ. ಸಂಸ್ಕಾರ ಹೋದರೆ, ಮನುಷ್ಯನ ಸಂಪಾದನೆ ಜೊತೆಗೆ ಆರೋಗ್ಯವೂ ಕಳೆದುಹೋಗಲಿದೆ ಎಂದು ಶ್ರೀಗಳು ಹೇಳಿದರು.



> ಸಿದ್ಧಗಂಗಾ ಮಠದಲ್ಲಿ ಸಿಕ್ಕ ಅನ್ನ,ಅಕ್ಷರ ಹಾಗೂ ಆಶ್ರಯದಿಂದ ಲಕ್ಷಾಂತರ ಬದುಕು ಹಸನಾಗಿದೆ. ಕಲಬುರಗಿಯ 500ಕ್ಕೂ ಅಧಿಕ ವಿದ್ಯಾರ್ಥಿಗಳು ಶಿಕ್ಷಣದ ಜೊತೆಗೆ ನೈತಿಕತೆ ಕಲಿತು ಮಠದ ಕೀರ್ತಿ ರಾಷ್ಟ್ರ,ಅಂತಾರಾಷ್ಟ್ರೀಯ ಮಟ್ಟದಲ್ಲಿ ಬೆಳೆಸಿದ್ದಾರೆ.
>
> ■ ಅರುಣಕುಮಾರ ಪಾಟೀಲ, ಕೊಡಲಹಂಗರಗಾ ಅಧ್ಯಕ್ಷರು, ಜಿಲ್ಲಾ ವೀರಶೈವ ಸಮಾಜ

ಶರಣಬಸವೇಶ್ವರ ಸಂಸ್ಥಾನದ 9ನೇ ಪೀಠಾಧಿಪತಿ ದೊಡ್ಡಪ್ಪ ಅಪ್ಪ ಉದ್ಘಾಟಿಸಿದರು. ಜಗದ್ಗುರು ಡಾ.ಸಾರಂಗಧರ ದೇಶಿಕೇಂದ್ರ ಮಹಾಸ್ವಾಮೀಜಿ ನೇತೃತ್ವ ವಹಿಸಿದ್ದರು.

ನಿಡಗುಂದಾದ, ಬೆಳಗುಂಪಾದ ಹಾಗೂ ಸರಡಗಿ ಶ್ರೀಗಳು ಆಶೀರ್ವಚನ ನೀಡಿದರು.

ಚವದಾಪುರಿಯ ರಾಜಶೇಖರ ಶಿವಾಚಾರ್ಯರು, ಎಂಎಲ್ಸಿ ಬಿ.ಜಿ.ಪಾಟೀಲ, ಶವಿವ ಸಂಘದ ಕಾರ್ಯದರ್ಶಿ ಬಸವರಾಜ್ ದೇಶಮುಖ ಮಾತನಾಡಿದರು.

ಈ ಸಂದರ್ಭದಲ್ಲಿ ರಾಜಾ ಭೀಮಳ್ಳಿ, ಅಲ್ಲಂಪ್ರಭು ಪಾಟೀಲ, ನೀಲಕಂಠರಾವ್ ಮೂಲಗೆ, ಜಯಶ್ರೀ ಮತ್ತಿಮಡು, ಶರಣಕುಮಾರ್ ಪಾಟೀಲ, ಕಲ್ಯಾಣಪ್ಪ ಪಾಟೀಲ, ಸಂಗಮೇಶ ನಾಗನಹಳ್ಳಿ, ರಮೇಶ್ ತಿಪನೂರ, ಮಲ್ಲಿಕಾರ್ಜುನ ನಾಗನಹಳ್ಳಿ, ಅಲ್ಲಂಪ್ರಭು ದೇಶಮುಖ ಇದ್ದರು.

ಶ್ರೀಶೈಲ್ ಘೂಳಿ ಸ್ವಾಗತಿಸಿದರು. ದೇವೇಂದ್ರಪ್ಪ ಅವಂಟಿ ಉಸ್ತುವಾರಿ ವಹಿಸಿದ್ದರು. ಚನ್ನಬಸಯ್ಯ ಗುರುವಿನ ನಿರೂಪಿಸಿದರು.

ಬಾಲ್ಯವಿವಾಹ ಮುಕ್ತ ಜಿಲ್ಲೆಯನ್ನಾಗಿಸಲು ಸಹಕರಿಸಿ

ಕೊಪ್ಪಳ: ಬಾಲ್ಯವಿವಾಹ ಎನ್ನುವುದು ಸಮಾಜಕ್ಕೆ ಅಂಟಿದ ಶಾಪವಾಗಿದ್ದು, ಇದನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡಿ ಕೊಪ್ಪಳವನ್ನು ಬಾಲ್ಯವಿವಾಹ ಮುಕ್ತ ಜಿಲ್ಲೆಯನ್ನಾಗಿಸಲು ಸಾರ್ವಜನಿಕರು ಕೈಜೋಡಿಸಬೇಕು ಎಂದು ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳಾದ ಮಹಾಂತೇಶ ದರಗದ ಅವರು ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಹಾಗೂ ರೀಡ್ ಸಂಸ್ಥೆ ಬಳ್ಳಾರಿ ಇವರುಗಳ ಸಂಯುಕ್ತಾಶ್ರಯದಲ್ಲಿ ಕೊಪ್ಪಳ ನಗರದ ತಹಶೀಲ್ದಾರರ ಸಭಾಂಗಣದಲ್ಲಿ ಬುಧವಾರ ಆಯೋಜಿಸಲಾಗಿದ್ದ 'ಬಾಲ್ಯವಿವಾಹ ನಿಷೇಧ ಕಾಯ್ದೆ-2006 ಕರ್ನಾಟಕ ತಿದ್ದುಪಡಿ-2016ರ ಜಾಗೃತಿ ಕಾರ್ಯಕ್ರಮ' ಉದ್ಘಾಟಿಸಿ ಅವರು ಮಾತನಾಡಿದರು.

ತಾಯಿ ಮರಣ, ಶಿಶು ಮರಣ, ಅಪೌಷ್ಟಿಕ ಮಕ್ಕಳ ಜನನ ನಿರ್ಮೂಲನೆಗಾಗಿ ಸರಕಾರವು ಬಾಲ್ಯವಿವಾಹ ನಿಷೇಧ ಕಾಯ್ದೆಯನ್ನು ಜಾರಿಗೊಳಿಸಿದೆ ಎಂದು ತಿಳಿಸಿದರು.

ಕೊಪ್ಪಳ ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳಾದ ಸಿಂಧು ಅಂಗಡಿ ಮಾತನಾಡಿ, ಮಾನ್ಯ ಉಚ್ಚ ನ್ಯಾಯಾಲಯ, ಕರ್ನಾಟಕವು, ವಿವಾಹಗಳು ನಡೆಯುವ, ಆಯೋಜಿಸುವಸ್ಥಳಗಳಲ್ಲಿಕಡ್ಡಾಯವಾಗಿ ಬಾಲ್ಯವಿವಾಹ ನಿಷೇಧದ ಕುರಿತು ಶಾಶ್ವತ ಗೋಡೆ ಬರಹವನ್ನು ಬರೆಯಿಸಲು ಆದೇಶಿಸಿದೆ ಎಂದರು.

ಕೊಪ್ಪಳ ಗ್ರೇಡ್-2 ತಹಶೀಲ್ದಾರರಾದ ಗವಿಸಿದ್ದಪ್ಪ ಮಣ್ಣೂರ ಅವರು ಕಾರ್ಯಕ್ರಮ ಅಧ್ಯಕ್ಷತೆ ವಹಿಸಿದ್ದರು. ಈ ಸಂದರ್ಭದಲ್ಲಿ ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ ಕೊಪ್ಪಳ ಅಧ್ಯಕ್ಷರಾದ ಪ್ರಕಾಶ ಕಡಗದ, ಸಹಾಯಕ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಶರಣಪ್ಪ ಸೇರಿದಂತೆ ಕೊಪ್ಪಳ ತಾಲೂಕಿನ ಸಾಮೂಹಿಕ ವಿವಾಹ ಆಯೋಜಕರು, ಪ್ರಿಟಿಂಗ್ ಪ್ರೆಸ್ ಮಾಲೀಕರಿದ್ದರು. ಪ್ರತಿಭಾ ಕಾಶೀಮಠ ಬಾಲ್ಯವಿವಾಹ ನಿಷೇಧ ಕಾಯ್ದೆ-2006 ಕರ್ನಾಟಕ ತಿದ್ದುಪಡಿ-2016ರ ಕುರಿತು ಮಾಹಿತಿಯನ್ನು ನೀಡಿದರು. ರೀಡ್ ಬಳ್ಳಾರಿ ಸಂಯೋಜಕ ತಿಪ್ಪೇಶಪ್ಪ ಪ್ರಸ್ತಾವಿಕವಾಗಿ ಮಾತನಾಡಿದರು. ಶರಣಪ್ಪ ಹಿರೇಹೆಮ್ಮಿನಾಳ ನಿರೂಪಿಸಿದರು.



ಗುರುವಿನ ಋಣ ತೀರಿಸಲು ಸಾಧ್ಯವಿಲ್ಲ: ಕಳಕಪ್ಪ



ಯಲಬುರ್ಗಾ: ಹೆತ್ತವರು ನಮಗೆ ಜನ್ಮ ನೀಡಿದರೇ, ಗುರುಗಳು ಜೀವನ ರೂಪಿಸುವ ದಾರಿ ದೀಪವಾಗುತ್ತಾರೆ. ಅಂತಹ ಗುರುಗಳ ಋಣ ತೀರಿಸಲು ಸಾಧ್ಯವಿಲ್ಲ ಎಂದು ತಾಪಂ ಮಾಜಿ ಉಪಾಧ್ಯಕ್ಷ ಕಳಕಪ್ಪ ಕಂಬಳಿ ಹೇಳಿದರು.

ತಾಲೂಕಿನ ಚಿಕ್ಕಮ್ಯಾಗೇರಿ ಗ್ರಾಮದ ನಿವೃತ್ತ ಮುಖ್ಯ ಶಿಕ್ಷಕ ವೀರಭದ್ರಪ್ಪ ಎಸ್. ಬೆಣಕಲ್ ಗುರುಗಳ ಸೇವಾ ನಿವೃತ್ತಿ ನಿಮಿತ್ತ ಹಮ್ಮಿಕೊಂಡಿದ ಗೌರವ ಸಮರ್ಪಣಾ ಸಮಾರಂಭ ಹಾಗೂ ವಜ್ರಬಂಡಿಯ ಅಭಿನವ ಗವಿ ಶ್ರೀನಾಟ್ಯ ಸಂಘದಿಂದ ಅಭಿನಯಿಸಲ್ಪಟ್ಟ ತಾಯಿಯ ಮಡಿಲು ನಾಟಕ ಪ್ರದರ್ಶನಕ್ಕೆ ಚಾಲನೆ ನೀಡಿ ಮಾತನಾಡಿದರು.

ಗುರು ನಮಗೆ ಅರಿವು ಮೂಡಿಸುವ ಮೂಲಕ ತಮಗಿಂತ ಶಿಶ್ಯರು ಉನ್ನತ ಸ್ಥಾನದಲ್ಲಿ ಇರಬೇಕೆಂಬ ಮಹಾದಾಸೆ ಇರುತ್ತದೆ. ಬೆಣಕಲ್ ಗುರುಗಳಿಂದ ಕಲಿತಂಥ ಸಾವಿರಾರು ವಿದ್ಯಾರ್ಥಿಗಳು ಉನ್ನತ ಸ್ಥಾನದಲ್ಲಿರುವುದು ನಿಜಕ್ಕೂ ಸಂತಸ. ಗುರುವಿನ ಋಣ ತೀರಿಸುವ ಸಲುವಾಗಿ ಗ್ರಾಮಗಳ ಶಿಷ್ಯಂದಿರ ಬಳಗದಿಂದ ಉತ್ತಮ ಜೀವನಾಧಿರತ ನಾಟಕ ಪ್ರದರ್ಶನಗೊಳ್ಳುವುದು ಸಂತಸದ ಸಂಗತಿ ಎಂದರು.

ಜಿಪಂ ಮಾಜಿ ಸದಸ್ಯ ಈರಪ್ಪ ಕುಡಗುಂಟಿ ಮಾತನಾಡಿ, ನಿವೃತ್ತ ಶಿಕ್ಷಕ ವಿ.ಎಸ್.ಬೆಣಕಲ್ ಗುರುಗಳು ತಮ್ಮ ಸೇವಾ ಅವಧಿಯಲ್ಲಿ ಸಾವಿರಾರು ವಿದ್ಯಾರ್ಥಿಗಳಿಗೆ ದಾರಿ ದೀಪವಾಗಿವಾಗಿದ್ದಾರೆ ಎಂದು ಹೇಳಿದರು.

ವೇ.ಮೂ.ಶರಣಯ್ಯಶಾಸ್ತ್ರಿ ಮಠ ಸಾನ್ನಿಧ್ಯ ವಹಿಸಿದ್ದರು.

ಈ ವೇಳೆ ಅಪರ ಸರ್ಕಾರಿ ವಕೀಲ ಮಲ್ಲನಗೌಡ ಎಸ್.ಪಾಟೀಲ, ಉಪನ್ಯಾಸಕ ಡಾ.ಮಹಾಂತೇಶ ನೆಲಾಗಣಿ, ಮಾಜಿ ಸೈನಿಕ ಶಂಕ್ರಪ್ಪ ಮೆಣಸಿಗೇರಿ, ನಟ ತಿರುಪತಿ ರಾಠೋಡ, ಮುಖ್ಯ ಶಿಕ್ಷಕರಾದ ಬಸವರಾಜ ಮಾಸ್ತಿ, ಸುರೇಶ ವೇದಪಾಠಕ, ಶರಣಪ್ಪ ಚನ್ನಾಳ, ನೌಕರ ಸಂಘದ ಅಧ್ಯಕ್ಷ ಸಿದ್ದಲಿಂಗಪ್ಪ ಶ್ಯಾಗೋಟಿ, ಸಕ್ರಪ್ಪ ಕುಂಟ್ರು, ಸೋಲಬಗೌಡ್ರ, ಎಸ್ ಡಿಎಂಸಿ ಅಧ್ಯಕ್ಷ ಶರಣಪ್ಪ ಬೂದಗುಂಪ, ರಾಜಶೇಖರ ಹೂಗಾರ, ಬಸವರಾಜ ಮೇಟಿ, ಹನುಮಂತಪ್ಪ ನಡುಕಟ್ಟಿನ, ಕೃಷಿ ಅಧಿಕಾರಿ ಪ್ರಕಾಶ ಚವಡಿ, ಚಾಲಕ, ನಿರ್ವಾಹಕ ಶರಣಪ್ಪ ಕರಿಗಾರ, ಮುಖಂಡರಾದ ಬಸವರಾಜ ಅಂಗಡಿ, ಕಾಳೇಶ ಕಮ್ಮಾರ, ಮಾರುತಿ ಚಂಡೂರು, ಬಾಗೇಶ ಬಿಂದ್ಗಿ, ರಾಮಣ್ಣ ವಣಗೇರಿ ಇದ್ದರು.

ಹಳೇ ಬಸ್ ನಿಲ್ದಾಣದ ರಸ್ತೆಯಲ್ಲಿ ನೆರಳಿನ ವ್ಯವಸ್ಥೆ: ಮೆಚ್ಚುಗೆ

ಮಸ್ಕಿ: ಜಿಲ್ಲೆಯಲ್ಲಿ ಬಿಸಿಲಿನ ತಾಪ ದಿನದಿಂದ ದಿನಕ್ಕೆ ಹೆಚ್ಚಾಗುತ್ತಲೇ ಇದ್ದು, ಇದನ್ನು ಅರಿತ ಮಸ್ಕಿ ದೇವನಾಂಪ್ರೀಯ ಆಟೋ ಚಾಲಕರ ಸಂಘ ಸಾರ್ವಜನಿಕರಿಗೆ ಅನುಕೂಲಕ್ಕಾಗಿ ಉತ್ತಮ ಕಾರ್ಯ ಮಾಡಿದೆ. ಪಟ್ಟಣದ ಹಳೆ ಬಸ್ ನಿಲ್ದಾಣ ಹತ್ತಿರ ಬಿಸಿಲಿನ ಬೇಗೆಯಲ್ಲಿ ಬಸ್‌ಗಾಗಿ ಕಾಯುತ್ತಿರುವ ಹಳ್ಳಿ ಜನರಿಗೆ ನೆರಳಿಗಾಗಿ ಪರದೆ ಹಾಗೂ ಕುಳಿತುಕೊಳ್ಳಲು ಆಸನದ ವ್ಯವಸ್ಥೆ ಕಲ್ಪಿಸಿಕೊಡುವ ಕೆಲಸ ಮಾಡಿದೆ. ಇದಕ್ಕೆ ಎಲ್ಲೆಡೆ ಪ್ರಶಂಸೆ ವ್ಯಕ್ತವಾಗಿದೆ.

ಬಿರು ಬಿಸಿಲಿಗೆ ಬೇಸತ್ತ ಜನರಿಗೆ ಇದು ಸ್ವಲ್ಪ ಮಟ್ಟಿಗೆ ಸುಧಾರಿಸಿಕೊಳ್ಳಲು ಉತ್ತಮ ವ್ಯವಸ್ಥೆಯಾಗಿದೆ. ಬಸ್ ಬರುವವರೆಗೂ ಈ ನೆರಳು ಪರದೆಯಲ್ಲಿ ಕುಳಿತು ಸುಧಾರಿಸಿಕೊಂಡ ಬಳಿಕ ಪ್ರಯಾಣಿಕರು ಪ್ರಯಾಣ ಮುಂದುವರೆಸುತ್ತಾರೆ. ಇದಕ್ಕೆ ಸಹಕಾರಿ ಅಧ್ಯಕ್ಷ ನಾಗಭೂಷಣ ಬಾರಕೇರ, ಪುರಸಭೆ ಮಾಜಿ ಅಧ್ಯಕ್ಷ ಮಲ್ಲಯ್ಯ ಅಂಬಾಡಿ ಹಾಗೂ ಶಿವಕುಮಾರ ಸಹಾಯ ಪಡೆದು ಮಸ್ಕಿ ದೇವನಾಂಪ್ರಿಯ ಆಟೋ ಚಾಲಕರ ಸಂಘ ನೆರಳಿನ ವ್ಯವಸ್ಥೆ ಮಾಡಿದ್ದಾರೆ. ಯಪ್ಪಾ ಇಂತಾ ಬಿಸಿಲಿನ್ಯಾಗ ಮಕ್ಳನ್ನ ಕರಕಂಡು ಬಸ್ ಬರೋತನ ಕಾಯಾಕ ಭಾಳ ತ್ರಾಸ್ ಆಗಿತ್ತು. ಪುಣ್ಯಾತ್ಮರು ನೆರಳು ಮಾಡಿ, ಕುಂದ್ರಾಕ ಮಾಡ್ಯಾರ, ಅವ್ರ ತಾಯಿ ಹೊಟ್ಟೆ ತಣ್ಣಗ ಇರ್ಲಿ. ಅವ್ರಿಗೆಲ್ಲ ಪುಣ್ಯ ಬರ್ಲಿ ಎನ್ನುತ್ತಾರೆ ಪಾರ್ವತೆಮ್ಮ. ರಸ್ತೆ ಮಧ್ಯೆ ಬಿಸಿಲಿನಲ್ಲಿ ಬಸ್‌ಗಾಗಿ ಕಾಯುತ್ತಿರುವ ಪ್ರಯಾಣಿಕರನ್ನು ನೋಡಲಾಗದೇ ನಮ್ಮ ಆಟೋ ಚಾಲಕರ ಸಂಘದವರು ಸೇರಿ ಒಂದು ಅಳಿಲು ಸೇವೆ ಮಾಡಿದ್ದೇವೆ. ಈ ಸೇವೆಗೆ ನಮ್ಮ ಎಲ್ಲ ಆಟೋ ಸಂಘದ ಬಂಧುಗಳಿಗೆ ಹೃದಯ ಪೂರ್ವಕ ಧನ್ಯವಾದ ಹೇಳುತ್ತೇವೆ ಎನ್ನುತ್ತಾರೆ ಸಾರ್ವಜನಿಕರು.



ಇಬ್ಬರು ರೈಲ್ವೆ ಸಿಬ್ಬಂದಿಗೆ ಜನರಲ್ ಮ್ಯಾನೇಜರ್ ಸುರಕ್ಷತಾ ಪ್ರಶಸ್ತಿ

ಕಲಬುರಗಿ: ಸೋಲಾಪುರ ಮಧ್ಯ ರೈಲ್ವೆಯ ಜನರಲ್ ಮ್ಯಾನೇಜರ್ ರಾಜೀವ್ ಶ್ರೀವಾಸ್ತವ ಮುಂಬೈನ ಛತ್ರಪತಿ ಶಿವಾಜಿ ಮಹಾರಾಜ್ ಟರ್ಮಿನಸ್‌ನಲ್ಲಿ ನಡೆದ ಸಮಾರಂಭದಲ್ಲಿ ಸೋಲಾಪುರ ವಿಭಾಗದ ಇಬ್ಬರು ಕೇಂದ್ರ ರೈಲ್ವೆ ಸಿಬ್ಬಂದಿಗೆ ಸುರಕ್ಷತಾ ಪ್ರಶಸ್ತಿ ನೀಡಿ ಸನ್ಮಾನಿಸಿದರು.

ಕಳೆದ ತಿಂಗಳುಗಳಲ್ಲಿ ಸಂಭಾವ್ಯ ಅಹಿತಕರ ಘಟನೆಗಳನ್ನು ತಪ್ಪಿಸಲು ಮತ್ತು ಸುರಕ್ಷಿತ ರೈಲು ಕಾರ್ಯಾಚರಣೆಯನ್ನು ಖಚಿತಪಡಿಸಿಕೊಳ್ಳಲು ಸಹಾಯ ಮಾಡಿದ ಕರ್ತವ್ಯದಲ್ಲಿರುವಾಗ ನೌಕರರು ಪ್ರದರ್ಶಿಸಿದ ಜಾಗರೂಕತೆ, ಮನಸ್ಸಿನ ಉಪಸ್ಥಿತಿ ಮತ್ತು ಕರ್ತವ್ಯ ಸಮರ್ಪಣೆಯನ್ನು ಗುರುತಿಸಿ ಈ ಸುರಕ್ಷತಾ ಪ್ರಶಸ್ತಿಗಳನ್ನು ನೀಡಲಾಯಿತು. ಪ್ರತಿ ಪ್ರಶಸ್ತಿಯು ಪದಕ, ಪ್ರಶಂಸಾ ಪ್ರಮಾಣಪತ್ರ, ಅನುಕರಣೀಯ ಸುರಕ್ಷತಾ ಕಾರ್ಯಕ್ಕಾಗಿ ಉಲ್ಲೇಖ ಮತ್ತು 3500 ರೂ. ನಗದು ಬಹುಮಾನವನ್ನು ಒಳಗೊಂಡಿದೆ.

ಸೋಲಾಪುರ ವಿಭಾಗದ ಧರಾಶಿವದ ತಂತ್ರಜ್ಞ (ಟಿಆರ್‌ಡಿ) ರಮೇಶ್ ತನ್ಮೋರ್ ಮತ್ತು ದುಧನಿಯ ತಂತ್ರಜ್ಞ (ಟಿಆರ್‌ಡಿ) ಯೋಗೇಂದ್ರ ಕುಮಾರ್ ಪ್ರಶಸ್ತಿ ಪ್ರಶಸ್ತಿ ಪುರಸ್ಕೃತರಾಗಿದ್ದಾರೆ. ಜನರಲ್ ಮ್ಯಾನೇಜರ್ ಪ್ರಶಸ್ತಿ ಪುರಸ್ಕೃತರನ್ನು ಅವರ ಕರ್ತವ್ಯ ಮತ್ತು ಜಾಗರೂಕತೆ ಕಾರ್ಯಾಚರಣೆಗಾಗಿ ಅಭಿನಂದಿಸಿದರು ಮತ್ತು ಅವರ ಕಾರ್ಯಗಳು ಇತರ ರೈಲ್ವೆ ನೌಕರರು ಪ್ರಯಾಣಿಕರ ಸುರಕ್ಷತೆ ಮತ್ತು ರೈಲ್ವೆ ಆಸ್ತಿಗಳ ರಕ್ಷಣೆಯನ್ನು ಖಚಿತಪಡಿಸಿಕೊಳ್ಳಲು ಜಾಗರೂಕರಾಗಿ ಮತ್ತು ಬದ್ಧರಾಗಿರಲು ಪ್ರೇರೇಪಿಸುತ್ತದೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು. ಪ್ರಧಾನ ಮುಖ್ಯ ಸುರಕ್ಷತಾ ಅಧಿಕಾರಿ ಚಂದ್ರ ಕಿಶೋರ್ ಪ್ರಸಾದ್ ಮತ್ತು ಇತರ ಇಲಾಖೆಗಳ ಮುಖ್ಯಸ್ಥರು ಮತ್ತು ಕೇಂದ್ರ ರೈಲ್ವೆಯ ಹಿರಿಯ ಅಧಿಕಾರಿಗಳು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.




ಭೀಮಾಂಬಿಕ ದೇವಿಯ ನೂತನ ರಥೋತ್ಸವ ನಾಳೆ

ಕುಕನೂರ: ತಾಲೂಕಿನ ಭಟಪನಹಳ್ಳಿ ಗ್ರಾಮದ ಶ್ರೀಭೀಮಾಂಬಿಕಾದೇವಿ ಜಾತ್ರಾ ಮಹೋತ್ಸವ, ಸಾಮೂಹಿಕ ವಿವಾಹ, ನೂತನ ಪಂಚಕಳಸ ತೇರಿನ ಲೋಕಾರ್ಪಣೆ ಹಾಗೂ ಪುರಾಣ ಮಹಾಮಂಗಲೋತ್ಸವ ಕಾರ್ಯಕ್ರಮಗಳ ಏ.17ರಿಂದ ಪ್ರಾರಂಭಗೊಳ್ಳಲಿವೆ ಎಂದು ಕೆಪಿಎಸ್ಸಿ ಮಾಜಿ ಸದಸ್ಯ ಎಚ್.ಡಿ.ಪಾಟೀಲ ಹೇಳಿದರು.

ಪಟ್ಟಣದ ಪ್ರವಾಸಿಮಂದಿರದಲ್ಲಿ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ಭಟಪನಹಳ್ಳಿ ಗ್ರಾಮದಲ್ಲಿ ಕಳೆದ 29 ವರ್ಷಗಳಿಂದ ಶಿವಶರಣೆ ಭೀಮಾಂಬಿಕಾ ದೇವಿಯ ಪುರಾಣ ಕಾರ್ಯಕ್ರಮ ಮುನ್ನಡೆಸಿಕೊಂಡು ಬಂದಿದ್ದು ಹಾಗೆ 01-05-2022 ರಂದುಶ್ರೀಭೀಮಾಂಬಿಕಾದೇವಿಯನೂತನದೇವಾಲಯದ ಲೋಕಾರ್ಪಣೆ ಹಾಗೂ ದೇವಿಯ ಮೂರ್ತಿ ಪ್ರತಿಷ್ಠಾಪನೆ ಕಾರ್ಯಕ್ರಮವು ಅಂದಿನ ಜಾತ್ರಾ ಮಹೋತ್ಸವದಲ್ಲಿ ಅತ್ಯಂತ ವಿಜೃಂಬಣೆಯಿಂದ ನೆರವೇರಿತು. ಅದರಂತೆ ವರ್ಷದಿಂದಾ ವರ್ಷಕ್ಕೆ ವಿಭಿನ್ನ ರೀತಿಯಲ್ಲಿ ಜಾತ್ರೆಯನ್ನು ಮಾಡುವಂತೆ ಈ ವರ್ಷ ಭಕ್ತರ ಆಶಯದಂತೆ ಸುಮಾರು 25 ಲಕ್ಷ ರೂ.ಗಳ ವೆಚ್ಚದಲ್ಲಿ ಶ್ರೀಭೀಮಾಂಬಿಕಾ ದೇವಿಯ ನೂತನ ಪಂಚಕಳಸ ರಥೋತ್ಸವವನ್ನು ಸಿದ್ಧಗೊಂಡಿದ್ದು ಏ.18ರಂದು ಲೋಕಾರ್ಪಣೆಯಾಗಲಿದೆ. ಅಲ್ಲದೆ ಬೆಳಿಗ್ಗೆ 11 ಜೋಡಿಗಳ ಸಾಮೂಹಿಕ ವಿವಾಹ ನಡೆಯಲಿವೆ.

ಏ.17ರಂದು ಸಂಜೆ 4 ಘಂಟೆಗೆ ಭೀಮಾಂಬಿಕಾ ದೇವಿ ಜಾತ್ರಾ ಮಹೋತ್ಸವ, ನೂತನ ಪಂಚಕಳಸ ತೇರಿನ ಲೋಕಾರ್ಪಣೆ ಕಾರ್ಯಕ್ರ ನಡೆಯಲಿದ್ದು ಜಗದ್ಗುರು ಡಾ.ನಿರಂಜನಾನಂದಪುರಿ ಮಹಾಸ್ವಾಮೀಜಿ ಕಾಗಿನೆಲೆ ಮಹಾಸಂಸ್ಥಾನ ಕನಕಗುರು ಪೀಠ ಶ್ರೀಕ್ಷೇತ್ರ ಕಾಗಿನೆಲೆ ಪಾವನ ಸಾನಿಧ್ಯವನ್ನು ವಹಿಸಲಿದ್ದು, ದಿವ್ಯ ಸಾನಿಧ್ಯವನ್ನು ಡಾ.ಮಹಾದೇವ ಮಹಾಸ್ವಾಮೀಜಿ ಅನ್ನದಾನೇಶ್ವರ ಶಾಖಾ ಮಠ ಹಾಗೂ ಶಿವಶಾಂತವೀರ ಶರಣರು ಸುಕ್ಷೇತ್ರ ಬಳಗಾನೂರು ತಾ.ಗದಗ ಚಿದಾನಂದಯ್ಯ ಸ್ವಾಮಿ ತುರವಿಹಾಳ, ಸಿಂಧನೂರು, ಮಾದಯ್ಯ ಗುರುವಿನ ಅಮೋಘಸಿದ್ದೇಶ್ವರ ಮಠ ತುರವಿಹಾಳ, ಸಿಂಧನೂರು ವಹಿಸಲಿದ್ದಾರೆ. ಉದ್ಘಾಟಕರಾಗಿ ಮಾಜಿ ಶಾಸಕ ಬಸವರಾಜ ಹಿಟ್ನಾಳ ಮಾಡಲಿದ್ದಾರೆ. ಅಧ್ಯಕ್ಷತೆಯನ್ನು ಮಾಜಿ ಸಂಸದ ಕೆ.ವಿರುಪಾಕ್ಷಪ್ಪಸುಕಾಲಪೇಟವಹಿಸಲ್ಲಿದ್ದಾರೆ.ಸಿಂಧನೂರು, ಮುಖ್ಯ ಅತಿಥಿಗಳಾಗಿ ಬಿಜೆಪಿ ರಾಜ್ಯ ಕಾರ್ಯದರ್ಶಿ ಶರಣು ತಳ್ಳಿಕೇರಿ ಇವರು ಆಗಮಿಸಲಿದ್ದಾರೆ. ಭೀಮಾಂಬಿಕಾ ದೇವಿಯ ಲಘು ರಥೋತ್ಸವ ನೆರವೇರಲಿದೆ. ಅದೇ ದಿನ ಬೆಳಿಗ್ಗೆ ಸುಮಂಗಲೆಯರಿಂದ ಕುಂಭಮೇಳ ನೆರವೇರಲಿದೆ. ಮಲ್ಲಿಕಾರ್ಜುನ ಕರಮುಡಿ, ಯಲಪ್ಪ ಕಲ್ಗೋಡಿ ಶ್ರೀಧರ್ ಹೊಸಮನಿ, ಮಲ್ಲಪ್ಪ ಗುಡಿಹಿಂದಲ್ ಇತರರಿದ್ದರು.



ಭಗೀರಥ ಜಯಂತಿ ಪೂರ್ವಭಾವಿ ಸಭೆ

ಕುಷ್ಟಗಿ: ಭಗೀರಥ ಜಯಂತಿಯನ್ನು ಏ.23ರಂದು ಆಚರಣೆ ಮಾಡಲಾಗುವುದು. ಸರ್ಕಾರಿ ಎಲ್ಲ ಕಚೇರಿಗಳಲ್ಲಿ ಕಡ್ಡಾಯವಾಗಿ ಜಯಂತ್ಯುತ್ಸವ ಆಚರಣೆ ಮಾಡಬೇಕು. ಕಾರ್ಯಕ್ರಮದಲ್ಲಿ ಎಲ್ಲ ತಾಲೂಕು ಮಟ್ಟದ ಅಧಿಕಾರಿಗಳು ಪಾಲ್ಗೊಳ್ಳಬೇಕು ಎಂದು ತಹಶೀಲ್ದಾರ್ ಅಶೋಕ ಶಿಗ್ಗಾವಿ ಹೇಳಿದರು.

ಪಟ್ಟಣದ ತಹಶೀಲ್ದಾರ್ ಕಚೇರಿ ಸಭಾಂಗಣದಲ್ಲಿ ಇತ್ತೀಚಿಗೆ ನಡೆದ ಮಹರ್ಷಿ ಭಗೀರಥ ಜಯಂತಿ ಆಚರಣೆ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದರು.

ಭಗೀರಥ ಸಮಾಜದ ಜಿಲ್ಲಾಧ್ಯಕ್ಷ ಯಲ್ಲಪ್ಪ ಗದ್ದಿ, ಭಗೀರಥ ಉಪ್ಪಾರ್ ಸಮಾಜ ತಾಲೂಕಾಧ್ಯಕ್ಷ ಸಂಗಪ್ಪ ಭಾವಿಕಟ್ಟಿ, ಪ್ರಧಾನ ಕಾರ್ಯದರ್ಶಿ ಹಾಗೂ ರಾಬಕೊವಿ ನಿರ್ದೇಶಕ ಮಂಜುನಾಥ ಕೆ.ಬಿ., ಯುವ ಘಟಕದ ಅಧ್ಯಕ್ಷ ಪುಂಡಲೀಕಪ್ಪ ಜೂಲಕಟ್ಟಿ, ಶಿಕ್ಷಕ ಮಲ್ಲಪ್ಪ ಭಂಡಾರಿ, ಮುಖಂಡರಾದ ಹನಮಂತಪ್ಪ ಮಾಲಗಿತ್ತಿ, ಶರಣಪ್ಪ ಮುಗಳಿ, ಕನಕಪ್ಪ ಆಗಸಿಮುಂದಿನ, ಮಂಜುನಾಥ್ ಗುಳಗುಳಿ, ಶೇಖಪ್ಪ ಗೂಳಿ, ಮೈಲಾರಪ್ಪ ಮಂತ್ರಿ ಬಸವರಾಜ್ ಹುಗ್ಗಿ, ರಂಗಪ್ಪ ಮಿಟ್ಟಲಕೋಡ, ಚಂದಾಲಿಂಗಪ್ಪ, ಬಸವರಾಜ ಬಿ, ಶಿವು ಹಿರೇಮನಿ ಹಾಗೂ ಸಮಾಜದ ಮುಖಂಡರು ಪಾಲ್ಗೊಂಡಿದ್ದರು.



ದೇಶದ ಐಕ್ಯತೆ, ಅಭಿವೃದ್ಧಿಗಾಗಿ ಬಾಳೋಣ

ಮಾನ್ವಿ: ಡಾ.ಬಿ.ಆರ್.ಅಂಬೇಡ್ಕರರು ದೇಶದಲ್ಲಿನ ಎಲ್ಲ ಸಮುದಾಯವನ್ನು ಒಂಗೂಡಿಸುವ ಕಾರ್ಯ ಮಾಡಿದರು. ಭೇದ-ಭಾವ ಬಿಟ್ಟು ನಾವೆಲ್ಲರೂ ಒಂದೇ ಎನ್ನುವ ಭಾವನೆಯಿಂದ ದೇಶದ ಐಕ್ಯತೆಗಾಗಿ, ಅಭಿವೃದ್ಧಿಗಾಗಿ ಬಾಳೋಣ ಎಂದು ಶಾಸಕ ಹಂಪಯ್ಯ ನಾಯಕ ಸಲಹೆ ನೀಡಿದರು.

ತಾಲೂಕು ಆಡಳಿತ, ವಿವಿಧ ಇಲಾಖೆಗಳ ಸಹಯೋಗದೊಂದಿಗೆ ಆಯೋಜಿಸಿದ ಡಾ.ಬಿ.ಆರ್. ಅಂಬೇಡ್ಕರ್ ಅವರ 135ನೇ ಜಯಂತಿಯಲ್ಲಿ ಪ್ರತಿಮೆಗೆ ಪೂಜೆ ಸಲ್ಲಿಸಿ ಮಾತನಾಡಿದರು.

ತಾಯಪ್ಪ ಬಿ.ಹೋಸೂರು ಮಾತನಾಡಿ, ಅಂಬೇಡ್ಕರರು ದೇಶದ ಅಭಿವೃದ್ಧಿಗಾಗಿ ಸಂವಿಧಾನ ರೂಪಿಸಿದರೂ ಅವರನ್ನು ಕೇವಲ ಒಂದು ಸಮುದಾಯಕ್ಕೆ ಸಿಮೀತವಾಗಿ ನೋಡದೆ ಅವರನ್ನು ಮಾನವತವಾದಿಯನ್ನಾಗಿ ನೋಡಬೇಕು. ಅವರು ಮಹಿಳೆಯರಿಗೂ ಸಮಾನ ಹಕ್ಕು ನೀಡುವ ಮೂಲಕ ಸರ್ವರಿಗೂ ಸಮಾನತೆ ನೀಡಿದ್ದಾರೆ ಎಂದರು.

ತಹಶೀಲ್ದಾರ್ ಭೀಮರಾಯ ರಾಮಸಮುದ್ರ ಸಂವಿಧಾನ ಪೀಠಿಕೆಯ ಪ್ರತಿಜ್ಞಾವಿಧಿ ಬೋಧಿಸಿ ಮಾತನಾಡಿ, ಅಂಬೇಡ್ಕರ್ ಅವರು ಇಡೀ ದೇಶದ ಆಸ್ತಿ. ಅವರ ಸಮಾನತೆಯ ತತ್ವಗಳು ಇಂದಿಗೂ ನಮಗೆ ದಾರಿದೀಪ ಎಂದು ತಿಳಿಸಿದರು.

ಅಂಬೇಡ್ಕರ್ ವೃತ್ತದಿಂದ ಬಸವ ವೃತ್ತ ಮಾರ್ಗದ ಮೂಲಕ ತಹಶೀಲ್ದಾರ್ ಕಚೇರಿಯ ಆವರಣದವರೆಗೆ ಭಾವಚಿತ್ರ ಮೆರವಣಿಗೆ ನಡೆಯಿತು.

ಸಮಾಜದ ವಿವಿಧ ಕ್ಷೇತ್ರಗಳ ಸಾಧಕರನ್ನು ಸನ್ಮಾನಿಸಿದರು.ಮಾಜಿ ಶಾಸಕ ರಾಜಾ ವೆಂಕಟಪ್ಪ ನಾಯಕ, ಶಿವರಾಜ ನಾಯಕ, ನಯೋಪ್ರ ಅಧ್ಯಕ್ಷ ಅಬ್ದುಲ್ ಗಫೂರ ಸಾಬ್, ಗ್ಯಾರಂಟಿ ಸಮಿತಿ ಅಧ್ಯಕ್ಷ ಬಿ.ಕೆ. ಅಮರೇಶಪ್ಪ, ತಾಪಂ ಇಒ ಖಾಲಿದ್ ಅಹ್ಮದ್, ಪುರಸಭೆ ಮುಖ್ಯಾಧಿಕಾರಿ ಪರಶುರಾಮ ದೇವಮಾನೆ, ಸಮಾಜ ಕಲ್ಯಾಣ ಇಲಾಖೆಯ ತಾಲೂಕು ಸಹಾಯಕ ನಿರ್ದೇಶಕ ಸಾಯಿರಾಬಾನು ನದಾಫ್, ಪಿಐ ಸೋಮಶೇಖರ ಎಸ್, ಕೆಂಚರೆಡ್ಡಿ, ಕೃಷಿ ಅಧಿಕಾರಿ ಗುರುನಾಥ ಭೋಸನೂರ, ಪ.ಪಂಗಡ ಕಲ್ಯಾಣಾಧಿಕಾರಿ ಮಹಾಲಿಂಗಪ್ಪ ಇಂಗಳದಾಳ, ಕನಾರ್ಮಿಕ ನಿರೀಕ್ಷಕ ಮಲ್ಲಯ್ಯದೊರೆ, ಅಗ್ನಿಶಾಮಕಾಧಿಕಾರಿ ರಂಗಪ್ಪ, ಕ್ಷೇತ್ರ ಶಿಕ್ಷಣಾಧಿಕಾರಿ ಚಂದ್ರಶೇಖರ ಡಿ., ಬಿಸಿಎಂ ಇಲಾಖೆ ಅಧಿಕಾರಿ ಭಾಗಯ್ಯ ನಾಯಕ ಸೇರಿದಂತೆ ಇನ್ನಿತರರು ಇದ್ದರು.



ಹೊಸದಿಗಂತ
ರಾಷ್ಟ್ರ ಜಾಗೃತಿಯ ಧ್ಯೇಯ

ಕಿರುಸುದ್ದಿ

ನಾರಿ ಶಕ್ತಿ ವಂದನ್ ಜಾಥಾ

ಕುರುಗೋಡು: ಪಟ್ಟಣದ ಬಸವೇಶ್ವರ ದೇವಸ್ಥಾನದಿಂದ ಪ್ರಮುಖ ಬೀದಿಯಿಂದ ನಾರಿ ಶಕ್ತಿ ವಂದನ್ ಜಾಥಾ ಕುರುಗೋಡು ಮಂಡಲದ ಬಿಜೆಪಿ ಮಹಿಳಾ ಮೋರ್ಚಾದ ವತಿಯಿಂದ ಗುರುವಾರ ನಡೆಸಲಾಯಿತು. ಈ ವೇಳೆ ಜಿಲ್ಲಾ ಮಹಿಳಾ ಮೋರ್ಚಾ ಅಧ್ಯಕ್ಷೆ ಹಂಪಿ ರಮಣ, ರಾಜ್ಯ ಕಾರ್ಯಕಾರಿಣಿ ಸದಸ್ಯೆ ಡಾ.ಅರುಣಾ, ಮಹಿಳಾ ಮೋರ್ಚಾ ರಾಜ್ಯ ಉಪಾಧ್ಯಕ್ಷ ವಿಜಯಲಕ್ಷ್ಮೀ ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ರಬಿಯಾ, ಭಾರತಿ, ಸಿರುಗುಪ್ಪ ಮಂಡಲ ಮಹಿಳಾ ಮೋರ್ಚಾ ಅಧ್ಯಕ್ಷ ಮಹಾಲಕ್ಷ್ಮೀ ಮಾತನಾಡಿದರು. ಈ ವೇಳೆ ಕುರುಗೋಡು ಪುರಸಭೆ ಸದಸ್ಯೆ ಲಲಿತಾ ತಿಪ್ಪನಗೌಡ, ಪುರಸಭೆ ಮಾಜಿ ಉಪಾಧ್ಯಕ್ಷ ಪೂರ್ಣಿಮಾ ಕುರುಗೋಡು, ಮಹಿಳಾ ಮೋರ್ಚಾ ಅಧ್ಯಕ್ಷ ಲತಾ ಕುರುಗೋಡು, ಮಂಡಲ ಅಧ್ಯಕ್ಷ ಮದಿರೆ ಕುಮಾರಸ್ವಾಮಿ, ಮಹಾಶಕ್ತಿ ಕೇಂದ್ರ ಅಧ್ಯಕ್ಷ ವೀರಭದ್ರಗೌಡ ಹಾಗೂ ಯುವ ಮೋರ್ಚಾ ಅಧ್ಯಕ್ಷ ಮೇಲಗಿರಿ ಬಸವರಾಜ ಇದ್ದರು.

ಪುಸ್ತಕ ಜ್ಞಾನಾರ್ಜನೆ ಮಾಡಿಕೊಳ್ಳಿ: ಶಾಸಕ ಕೃಷ್ಣ



ಹೂವಿನಹಡಗಲಿ: ಪಟ್ಟಣದಲ್ಲಿ ಇತ್ತೀಚೆಗೆ ನಡೆದ ಡಾ.ಬಿ.ಆರ್.ಅಂಬೇಡ್ಕರರ 135ನೇ ಜಯಂತ್ಯುತ್ಸವ ಹಾಗೂ ಮಾಜಿ ಉಪಪ್ರಧಾನಿ ಡಾ.ಬಾಬು ಜಗಜೀವನ ರಾಂ ಅವರ 119ನೇ ಜಯಂತಿ ನಿಮಿತ್ತ ಸಮಾಜ ಕಲ್ಯಾಣ ಇಲಾಖೆ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯ ನಂ-1 ಮತ್ತು ನಂ-3 ನಿಲಯಗಳಲ್ಲಿ ಗ್ರಂಥಾಲಯ ಕೊಠಡಿವನ್ನು ಶಾಸಕ ಕೃಷ್ಣ ನಾಯಕ ಉದ್ಘಾಟಿಸಿದರು. ಬಳಿಕ ಮಾತನಾಡಿ, ಈಗೀನ ಮಕ್ಕಳಿಗೆ ತಮ್ಮ ಮೊಬೈಲ್ ಫೋನ್ ನೀಡುವ ಬದಲು ಗ್ರಂಥಾಲಯಕ್ಕೆ ಕರೆ ತಂದು ಪುಸ್ತಕಗಳನ್ನು ಓದಿ ಹೆಚ್ಚಿನ ಜ್ಞಾನಾರ್ಜನೆ ಸದುಪಯೋಗ ಪಡಿಸಿ ಕೊಳ್ಳಬೇಕೆಂದು ಪೋಷಕರಿಗೆ ತಿಳಿಸಿದರು.ವಸತಿ ನಿಲಯದ ಮಕ್ಕಳಿಗೆ ಯಾವುದೇ ತೊಂದರೆಯಾಗದಂತೆ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದರು.ಈ ವೇಳೆ ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕ ಆನಂದ ವೈಡೊಳ್ಳಿನ , ಸಮಾಜ ಕಲ್ಯಾಣ ಇಲಾಖೆ ಸಿಬ್ಬಂದಿ ವರ್ಗದವರು, ನಿಲಯ ಪಾಲಕರು ಮತ್ತು ವಿದ್ಯಾರ್ಥಿಗಳಿದ್ದರು.

ಅರ್ಜಿ ಆಹ್ವಾನ

ವಿಜಯನಗರ: ಜಿಲ್ಲೆಯ ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಮಾಲವಿ ತೋಟಗಾರಿಕೆ ತರಬೇತಿ ಕೇಂದ್ರದಲ್ಲಿ ತೋಟಗಾರಿಕೆ ಇಲಾಖೆ ಮೇ.2ರಿಂದ 2027ರ ಫೆ.28ರವರೆಗೆ ತೋಟಗಾರಿಕೆ ತರಬೇತಿಗಾಗಿ ಅರ್ಜಿ ಆಹ್ವಾನಿಸಿದೆ.ಆಸಕ್ತರು ಏ.18ರೊಳಗಾಗಿ ವೆಬ್ ಸೈಟ್ www.horticulture.kar.nic.in ಅರ್ಜಿ ಡೌನ್ಲೋಡ್ ಮಾಡಿ ಸಲ್ಲಿಸಬೇಕು. ಏ.23ರ ಬೆಳಿಗ್ಗೆ 10 ಗಂಟೆಗೆ ತೋಟಗಾರಿಕೆ ಜಂಟಿ ನಿರ್ದೇಶಕರ ಕಛೇರಿಯಲ್ಲಿ ಸಂದರ್ಶನ ಏರ್ಪಡಿಸಲಾಗಿದೆ. ಹೆಚ್ಚಿನ ಮಾಹಿತಿಗೆ ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕರು ಅಥವಾ ಹಿರಿಯ ಸಹಾಯಕ ನಿರ್ದೇಕರ ಕಚೇರಿಗೆ ಸಂಪರ್ಕಿಸಬೇಕು ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಅರ್ಜಿ ಆಹ್ವಾನ

ವಿಜಯನಗರ: ಜಿಲ್ಲೆಯ ನಗರ ಸ್ಥಳೀಯ ಸಂಸ್ಥೆಗಳಲ್ಲಿ 132 ಪೌರಕಾರ್ಮಿಕರ ಹುದ್ದೆಗಳಿಗೆ ಅರ್ಜಿ ಆಹ್ವಾನಿಸಲಾಗಿದೆ. ಖಾಲಿ ಇರುವ ಹುದ್ದೆಗಳಿಗೆ ನಗರ ಸ್ಥಳೀಯ ಸಂಸ್ಥೆಗಳಲ್ಲಿ ನೇರ ಪಾವತಿ ಅಡಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು. ಖಾಲಿ ಹುದ್ದೆಗಳಿಗೆ ಭರ್ತಿ ಮಾಡಿದ ನಂತರ ನೇರಪಾವತಿ ಅಡಿ ಮಂಜೂರಾದ ಹುದ್ದೆಗಳು ತಂತಾನೆ ರದ್ದಾಗುತ್ತವೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ನಿಧನ ಸುದ್ದಿ

ಕಡ್ಲಿ ಶಾರದಮ್ಮ



ಹಗರಿಬೊಮ್ಮನಹಳ್ಳಿ: ತಾಲೂಕಿನ ಮುಟುಗನಹಳ್ಳಿ ಗ್ರಾಮದ ವ್ಯಂಗ್ಯ ಚಿತ್ರಕಲಾವಿದ ಆನಂದ್ ಕಡ್ಲಿ ಅವರ ತಾಯಿ ಕಡ್ಲಿ ಶಾರದಮ್ಮ ನಿಧನರಾದರು. ಮೃತರಿಗೆ ಪತಿ, ಮೂರು ಪುತ್ರರು, ಮೂರು ಪುತ್ರಿಯರು ಅಪಾರ ಬಂಧುವನ್ನು ಇದ್ದರು. ಅಂತ್ಯ ಸಂಸ್ಕಾರ ಶುಕ್ರವಾರ ಮುಟುಗನಹಳ್ಳಿ ಗ್ರಾಮದಲ್ಲಿ ನಡೆಯಲಿದೆ.



ಕುರುಗೋಡು: ಪಟ್ಟಣದ ಬಸವೇಶ್ವರ ದೇವಸ್ಥಾನದಿಂದ ಪ್ರಮುಖ ಬೀದಿಯಿಂದ ನಾರಿ ಶಕ್ತಿ ವಂದನ್ ಜಾಥಾ ಕುರುಗೋಡು ಮಂಡಲದ ಬಿಜೆಪಿ ಮಹಿಳಾ ಮೋರ್ಚಾದ ವತಿಯಿಂದ ಗುರುವಾರ ನಡೆಸಲಾಯಿತು.

ಗ್ರಾ.ಪಂ ನೌಕರರ ವೇತನ ಬಿಡುಗಡೆಗೆ ಒತ್ತಾಯ

ವಿಜಯನಗರ: ಜಿಲ್ಲೆಯ ಗ್ರಾಮ ಪಂಚಾಯಿತಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರಿಗೆ ಕನಿಷ್ಠ ವೇತನ ಪಾವತಿ, ನಿವೃತ್ತಿ ನೌಕರರಿಗೆ ಆರು ಲಕ್ಷ ರೂ ಇಡಿಗಂಟು ನೀಡಬೇಕು ಎಂದು ಒತ್ತಾಯಿಸಿ, ಕರ್ನಾಟಕ ರಾಜ್ಯ ಗ್ರಾಮ ಪಂಚಾಯಿತಿ ನೌಕರರ ಸಂಘ, ವಿಜಯನಗರ ಜಿಲ್ಲಾ ಸಮಿತಿ ವತಿಯಿಂದ ನಗರದ ಜಿಲ್ಲಾ ಪಂಚಾಯ್ತಿ ಕಚೇರಿ ಎದುರು ಗುರುವಾರ ಪ್ರತಿಭಟನೆ ನಡೆಸಲಾಯಿತು.

ಈ ಸಂದರ್ಭದಲ್ಲಿ ಜಿಲ್ಲಾ ಮುಖಂಡ ಎನ್ ಯಲ್ಲಾಲಿಂಗ ಮಾತನಾಡಿ ಕೇಂದ್ರ ಸರ್ಕಾರ, ಸಂಸದರಿಗೆ ಮತ್ತು ಶಾಸಕರ ವೇತನ ಲಕ್ಷಾಂತರ ರೂ ಏರಿಕೆ ಮಾಡಿಕೊಂಡು ತಕ್ಷಣವೇ ಹಣ ಖಾತೆಗೆ ಜಮಾ ಮಾಡಿಕೊಳ್ಳುತ್ತಾರೆ. ಆದರೆ ಗ್ರಾಮೀಣ ಪ್ರದೇಶಗಳಲ್ಲಿ ಅತ್ಯಂತ ಪ್ರಾಮಾಣಿಕವಾಗಿ ನಿಸ್ವಾರ್ಥವಾಗಿ ಕೆಲಸ ಮಾಡುವ ಕಾರ್ಮಿಕರಿಗೆ ಸರಿಯಾದ ಸಂಬಳ ಹಾಗೂ ಕನಿಷ್ಠ ವೇತನ ಸಿಗುತ್ತಿಲ್ಲ, ಕೇಂದ್ರ ಕಾರ್ಮಿಕ ಮಂತ್ರಿ ಮತ್ತು ರಾಜ್ಯ ಕಾರ್ಮಿಕ ಸಚಿವರು ಕಾರ್ಮಿಕರ ಕುಟುಂಬಗಳ ಬಗ್ಗೆ ಕಿಂಚಿತ್ತೂ ಕಾಳಜಿ ತೋರುತ್ತಿಲ್ಲ ಇದರಿಂದ ಮಹಾತ್ಮ ಗಾಂಧಿಜೀಯವರ ಗ್ರಾಮ ಸ್ವರಾಜ್ಯ ಭಾರತ ಭವ್ಯ ಕನಸು ನನಸಾಗಿಸಲು ಸಾಧ್ಯವಾಗುತ್ತಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು. ಮುಖಂಡರಾದ ಹಗರಿಬೊಮ್ಮನಹಳ್ಳಿ ಯರಿಸ್ವಾಮಿ, ಸಿದ್ರಾಮೇಶ್ವರ, ಮಮತಾ, ಕೂಡ್ಲಿಗಿ ಕರಿಯಪ್ಪ, ತಿಪ್ಪೇಶಿ, ನಾಗರತ್ನ ಹರಪನಹಳ್ಳಿ, ಹಂಪಿ ಮರಿಸ್ವಾಮಿ, ನಾಗರಾಜ್ ಚಿಲಕನಹಟ್ಟಿ, ಪ್ರವೀಣ ಓಬಪ್ಪ, ಜಿಲ್ಲೆಯ ವಿವಿಧ ತಾಲ್ಲೂಕುಗಳ ಮುಖಂಡರು ಭಾಗವಹಿಸಿದ್ದರು.



ವಿಜಯನಗರ: ಜಿಲ್ಲೆಯ ಗ್ರಾಮ ಪಂಚಾಯಿತಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರಿಗೆ ಕನಿಷ್ಠ ವೇತನ ಪಾವತಿ, ನಿವೃತ್ತಿ ನೌಕರರಿಗೆ ಆರು ಲಕ್ಷ ರೂ ಇಡಿಗಂಟು ನೀಡಬೇಕು ಎಂದು ಒತ್ತಾಯಿಸಿ, ಕರ್ನಾಟಕ ರಾಜ್ಯ ಗ್ರಾಮ ಪಂಚಾಯಿತಿ ನೌಕರರ ಸಂಘ, ವಿಜಯನಗರ ಜಿಲ್ಲಾ ಸಮಿತಿ ವತಿಯಿಂದ ನಗರದ ಜಿಲ್ಲಾ ಪಂಚಾಯ್ತಿ ಕಚೇರಿ ಎದುರು ಗುರುವಾರ ಪ್ರತಿಭಟನೆ ನಡೆಸಲಾಯಿತು.

ಇ-ಸೇವಾ ವಲಯಗಳ ಆಡಳಿತ ಮಂಡಳಿಯವರೊಂದಿಗೆ ಸಭೆ

ಸಿಬ್ಬಂದಿ ಮಾಹಿತಿ ಸಲ್ಲಿಕೆ ಕಡ್ಡಾಯ: ಎಸ್ಪಿ

ಬಳ್ಳಾರಿ: ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ವಿಗ್ಗಿ, ಜೊಮ್ಯಾಟೊ, ಅಮೆಜಾನ್, ಬ್ಲಿಂಕಿಟ್ ಸೇರಿದಂತೆ ವಿವಿಧ ಸಂಸ್ಥೆಗಳು ಮತ್ತು ಖಾಸಗಿ ಸಾರಿಗೆ ಸಂಸ್ಥೆಗಳು ತಮ್ಮಲ್ಲಿ ಕೆಲಸ ಮಾಡುವ ಪ್ರತಿಯೊಬ್ಬ ಸಿಬ್ಬಂದಿ ಪೂರ್ಣ ವಿವರವನ್ನು ಹತ್ತಿರದ ಪೊಲೀಸ್ ಠಾಣೆಗೆ ಸಲ್ಲಿಸುವುದು ಕಡ್ಡಾಯವಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಸುಮನ್ ಡಿ.ಪೆನ್ನೇಕರ್ ಹೇಳಿದರು.

ನಗರದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಡೆಲಿವರಿ ಸಮಯದಲ್ಲಿ ಮಾದಕ ವಸ್ತು ಸೇರಿದಂತೆ ಇನ್ನಿತರ ನಿಷೇಧಿತ ವಸ್ತು ಸಾಗಟ ಮಾಡುವುದನ್ನು ತಡೆಯಲು ಹಾಗೂ ಪ್ರತಿನಿತ್ಯದ ಚಟುವಟಿಕೆಗಳ ಮೇಲೆ ನಿಗಾ ವಹಿಸಲು ಗ್ರಾಹಕರ ಹಿತದೃಷ್ಟಿಯಿಂದ ವಿವಿಧ ಇ-ಸೇವಾ ವಲಯಗಳ ಮುಖ್ಯಸ್ಥರೊಂದಿಗೆ ಆಯೋಜಿಸಿದ್ದ ಸಭೆಯಲ್ಲಿ ಮಾತನಾಡಿದರು.

ಇತ್ತೀಚಿನ ದಿನಗಳಲ್ಲಿ ಸಾರ್ವಜನಿಕರ ಸುರಕ್ಷತೆ ಗಮನದಲ್ಲಿಟ್ಟುಕೊಂಡು ಅಂಚೆ ಇಲಾಖೆ, ರೈಲ್ವೆ ಪೊಲೀಸ್, ಇ-ಕಾಮರ್ಸ್ ಸಂಸ್ಥೆಗಳು, ಆಹಾರ ವಿತರಣಾ ಸಂಸ್ಥೆಗಳು ಮತ್ತು ಖಾಸಗಿ ಟ್ರಾವೆಲ್ಸ್ ಏಜೆನ್ಸಿಗಳು ತಮ್ಮ ಸಿಬ್ಬಂದಿಗಳ ಬಗ್ಗೆ ಹೆಚ್ಚಿನ ನಿಗಾ ವಹಿಸಬೇಕು ಎಂದು ತಿಳಿಸಿದರು.

ಪ್ರತಿಯೊಬ್ಬ ಸಿಬ್ಬಂದಿ ತಮ್ಮ ಆಧಾರ್ ಕಾರ್ಡ್ ಅಥವಾ ಅಧಿಕೃತ ಗುರುತಿನ ಚೀಟಿ ಹೊಂದಿರಬೇಕು. ಹೊಸದಾಗಿ ಕೆಲಸಕ್ಕೆ ಸೇರುವ, ಈಗಾಗಲೇ ಕೆಲಸದಲ್ಲಿರುವ ಸಿಬ್ಬಂದಿ ಕಡ್ಡಾಯವಾಗಿ ಪೊಲೀಸ್ ಪರಿಶೀಲನಾ ಪ್ರಮಾಣಪತ್ರ ಹೊಂದಿರಬೇಕು. ಕಂಪನಿಗಳು ತಮ್ಮಲ್ಲಿ ಕೆಲಸ ಮಾಡುವ ಸಿಬ್ಬಂದಿ ಬಿಟ್ಟು ಹೋದರೆ ಅಥವಾ ಹೊಸದಾಗಿ ಸೇರಿದ ಸಿಬ್ಬಂದಿಯ ಮಾಹಿತಿ ಸಂಬಂಧಪಟ್ಟ ಪೊಲೀಸ್ ಠಾಣೆಗೆ ಮಾಹಿತಿ ನೀಡಬೇಕು ಎಂದು ಸೂಚಿಸಿದರು.

ಮುಖ್ಯವಾಗಿ ಡೆಲಿವರಿ ಬಾಯ್ಸ್, ಚಾಲಕರು ಸಂಚಾರ ನಿಯಮ ಉಲ್ಲಂಘಿಸದಂತೆ ಎಚ್ಚರಿಕೆ ವಹಿಸಬೇಕು. ನಿಯಮ ಉಲ್ಲಂಘಿಸುವ ಸಂಸ್ಥೆಗಳ ವಿರುದ್ಧ ಕಾನೂನು ಕ್ರಮಕ್ಕೆಗೊಳ್ಳಲಾವುದು ಎಂದು ಎಚ್ಚರಿಸಿದರು.



> ಪ್ರತಿಯೊಬ್ಬ ಸಿಬ್ಬಂದಿ ತಮ್ಮ ಆಧಾರ್ ಕಾರ್ಡ್ ಅಥವಾ ಅಧಿಕೃತ ಗುರುತಿನ ಚೀಟಿ ಹೊಂದಿರಬೇಕು. ಹೊಸದಾಗಿ ಕೆಲಸಕ್ಕೆ ಸೇರುವ, ಈಗಾಗಲೇ ಕೆಲಸದಲ್ಲಿರುವ ಸಿಬ್ಬಂದಿ ಕಡ್ಡಾಯವಾಗಿ ಪೊಲೀಸ್ ಪರಿಶೀಲನಾ ಪ್ರಮಾಣಪತ್ರ ಹೊಂದಿರಬೇಕು. ಕಂಪನಿಗಳು ತಮ್ಮಲ್ಲಿ ಕೆಲಸ ಮಾಡುವ ಸಿಬ್ಬಂದಿ ಬಿಟ್ಟು ಹೋದರೆ ಅಥವಾ ಹೊಸದಾಗಿ ಸೇರಿದ ಸಿಬ್ಬಂದಿಯ ಮಾಹಿತಿ ಸಂಬಂಧಪಟ್ಟ ಪೊಲೀಸ್ ಠಾಣೆಗೆ ಮಾಹಿತಿ ನೀಡಬೇಕು.
> ■ ಡಾ.ಸುಮನ್ ಡಿ.ಪೆನ್ನೇಕರ್ , ಎಸ್ಪಿ

ವಸ್ತುಗಳ ದಾಸ್ತಾನು ಹಾಗೂ ಪ್ಯಾಕಿಂಗ್ ಕೇಂದ್ರದಲ್ಲಿ ಸಿಸಿಟಿವಿ ಅಳವಡಿಕೆ, ಬುಕ್ಕಿಂಗ್ ರಿಜಿಸ್ಟಾರ್ ನಿರ್ವಹಣೆ, ಸಂಸ್ಥೆಗಳು ಕಡ್ಡಾಯವಾಗಿ ಲೈಸೆನ್ಸ್ ಹೊಂದಿರಬೇಕು, ಡೆಲಿವರಿ ಬಾಯ್ಸ್ ನೊಂದಣಿ ಕಡ್ಡಾಯ, ವಾಹನ ಚಾಲನಾ ಲೈಸನ್ಸ್ ಹೊಂದಿದ ಡೆಲಿವರಿ ಬಾಯ್ಸ್ ಮಾತ್ರ ನೇಮಕ ಮಾಡಿಕೊಳ್ಳಬೇಕು. ಡೆಲಿವರಿ ಬಾಯ್ಸ್ ಹಾಗೂ ಕಚೇರಿ ಸಿಬ್ಬಂದಿಯವರ ಸಮಗ್ರ ಮಾಹಿತಿ ಜಿಲ್ಲಾ ಪೊಲೀಸ್ ಕಚೇರಿಗೆ ಸಲ್ಲಿಸಬೇಕು ಎಂದು ಸೂಚಿಸಿದರು.

ಕೆಲವು ಡೆಲಿವರಿ ಸಂದರ್ಭದಲ್ಲಿ ಗ್ರಾಹಕರಿಗೆ ಆರ್ಡರ್ ಮಾಡಿದವಸ್ತುಗಳ ತಲುಪಿಸುವ ಜತೆಯಲ್ಲಿ ಇನ್ನಿತರ ವಸ್ತುಗಳನ್ನು (ಮಾದಕ) ತಲುಪಿಸುತ್ತಿರುವ ಬಗ್ಗೆ ಮಾಹಿತಿ ಇದ್ದು, ಹೀಗಾಗಿ ವಿಳಂಬವಾಗಿ ವಸ್ತುಗಳನ್ನು ಗ್ರಾಹಕರಿಗೆ ತಲುಪಿಸುವ ಡೆಲಿವರಿ ಬಾಯ್ಸ್‌ಗಳ ಮಾಹಿತಿ ಕಡ್ಡಾಯವಾಗಿ ಪೊಲೀಸ್ ಕಚೇರಿಗೆ ಸಲ್ಲಿಸಬೇಕು. ವಸ್ತುಗಳ ಬಗ್ಗೆ ಅನುಮಾನ ಕಂಡು ಬಂದಲ್ಲಿ ಕೂಡಲೇ ಪೊಲೀಸರಿಗೆ ಮಾಹಿತಿ ನೀಡಬೇಕು ಎಂದರು.

ಪೋಸ್ಟಲ್ ಇಲಾಖೆ, ಡೊಮಿನೋಸ್, ಕೆಎಫ್‌ಸಿ, ಡಿಟಿಡಿಸಿ ಕೊರಿಯರ್, ಟ್ರಾವೆಲ್ಸ್ ಏಜೆನ್ಸಿಗಳು ಸೇರಿದಂತೆ ಎಲ್ಲಾ ಖಾಸಗಿ ಮತ್ತು ಸಾರ್ವಜನಿಕ ಸೇವಾ ಸಂಸ್ಥೆಗಳು ಸುರಕ್ಷತಾ ಕ್ರಮಕ್ಕೆ ಸಹಕರಿಸಬೇಕು ಎಂದರು.

ಸಭೆಯಲ್ಲಿ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ನವೀನ್ ಕುಮಾರ್.ಎಸ್, ಬಳ್ಳಾರಿ ನಗರ ಉಪವಿಭಾಗದ ಡಿಎಸ್‌ಪಿ ಎಂ.ಗೋವಿಂದ್ ರಾಜ್ ಸೇರಿದಂತೆ ನಗರದ ವಿವಿಧ ಪೊಲೀಸ್ ಠಾಣೆಗಳ ಪೊಲೀಸ್ ಇನ್ಸ್‌ಪೆಕ್ಟರ್ ಇತರರಿದ್ದರು.

ಬಸವ ಜಯಂತಿ ಉತ್ಸವ ಆಚರಣೆ ನಾಳೆಯಿಂದ

ಬೀದರ್: ಏ.18,ರಿಂದ 20 ರವರೆಗೆ ಮೂರು ದಿನ ಬಸವ ಜಯಂತಿ ಆಚರಿಸಲು ನಿರ್ಧರಿಸಲಾಗಿದೆ ಎಂದು ಬಸವ ಜಯಂತಿ ಉತ್ಸವ ಸಮಿತಿ ಅಧ್ಯಕ್ಷ ಡಾ.ರಜನೀಶ. ಎಸ್.ವಾಲಿ ತಿಳಿಸಿದರು.

ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಬಸವ ಜಯಂತಿ ಉತ್ಸವ ಸಮಿತಿ ವತಿಯಿಂದ ಗುರುವಾರ ನಡೆದ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿ, ಬಸವ ಜಯಂತಿ ಉತ್ಸವವನ್ನು ವಿವಿಧ ಧಾರ್ಮಿಕ, ಸಾಂಸ್ಕೃತಿಕ ಮತ್ತು ಸಾಮಾಜಿಕ ಕಾರ್ಯಕ್ರಮಗಳೊಂದಿಗೆ ಆಚರಿಸಲಾಗುತ್ತಿದೆ ಎಂದು ತಿಳಿಸಿದರು.

ಏ.18ರಂದು ಬೆಳಿಗ್ಗೆ 7ರಿಂದ 8ರವರೆಗೆ ಡಾ.ಚನ್ನಬಸವ ಪಟ್ಟದ್ದೇವರ ರಂಗ ಮಂದಿರದಲ್ಲಿ ಇಷ್ಟಲಿಂಗ ಪೂಜೆ ನಡೆಯಲಿದೆ. ಬೆಳಿಗ್ಗೆ 9.00 ಕ್ಕೆ ಸಿದ್ಧಾರೂಢ ಮಠದಿಂದ ಮಂದಿರದ ವರೆಗೆ ಕಾರ್ ರ್‍ಯಾಲಿ ನಡೆಯಲಿದೆ.

ಮಧ್ಯಾಹ್ನ 30ಕ್ಕೆ ವಚನ ಸಮೂಹ ನೃತ್ಯ ಸ್ಪರ್ಧೆ. ಸಂಜೆ 6.30ಕ್ಕೆ ಸಾಹಿತಿ ಡಾ. ವಿ.ಎಸ್. ಹಿರೇಮಠ ಉಪನ್ಯಾಸ. ಶರಣೆ ಅಕ್ಕಿಸಿ ರಾಜಕುಮಾರ ಹಿರೇಮಠ ಅವರಿಂದ ವಚನ ಗಾಯನ ಇರಲಿದೆ.

ಏ.19ರಂದು ಬೆಳಿಗ್ಗೆ 7 ವರಗೆ ವಚನ ಪಾರಾಯಣ ನಡೆಯಲಿದೆ. ವಚನ ಭಜನೆ ಸ್ಪರ್ಧೆ, ಶರಣರ ವೇಷ ಭೂಷಣ, ವಚನ ಸಂಗೀತೋತ್ಸವ ನಡೆಯಲಿದೆ.

ಏ.20ರಂದು ಬೆಳಿಗ್ಗೆ 11ಕ್ಕೆ ಬಸವ ಜಯಂತಿ ಉತ್ಸವ ನಡೆಯಲಿದೆ. ಬಸವೇಶ್ವರ ವೃತ್ತದಿಂದ ಬಸವಣ್ಣನವರ ಭಾವಚಿತ್ರ, ವಚನ ಸಾಹಿತ್ಯದ ಭವ್ಯ ಮೆರವಣಿಗೆ ನಡೆಯಲಿದೆ ಎಂದರು.

ಉತ್ಸವ ಸಮಿತಿಯ ಪ್ರಧಾನ ಕಾರ್ಯದರ್ಶಿ ಶಶಿಧರ ಹೊಸಳ್ಳಿ ಮಾತನಾಡಿದರು.

ಸಮಿತಿಯ ಪ್ರಮುಖರಾದ ಕುಶಾಲ ಪಾಟೀಲ ಖಾಜಾಪುರ, ಸೋಮಶೇಖರ ಪಾಟೀಲ ಗಾದಗಿ, ಮಹಿಳಾ ಸಮಿತಿ ಅಧ್ಯಕ್ಷೆ ಡಾ. ದೇವಕಿ ನಾಗೂರೆ, ಮೆರವಣಿಗೆ ಸಮಿತಿಯ ಅಧ್ಯಕ್ಷ ಧನರಾಜ ಹಂಗರಗಿ, ಬಸವ ಜಯಂತಿ ಉತ್ಸವ ಸಮಿತಿಯ ನಿಟಪೂರ್ವ ಅಧ್ಯಕ್ಷ ಜಯರಾಜ ಖಂಡ್ರೆ, ಸುರೇಶ ಚನಶೆಟ್ಟಿ, ರಾಜೇಂದ್ರಕುಮಾರ ಗಂದಗೆ, ದೀಪಕ ವಾಲಿ ಮಾತನಾಡಿದರು.

ಉತ್ಸವ ಸಮಿತಿಯ ಖಜಾಂಚಿ ಸಿದ್ರಾಮಯ್ಯ ಸ್ವಾಮಿ, ಇತರೆ ಪ್ರಮುಖರಾದ ಆಧೀಶ ವಾಲಿ, ವಿಕ್ರಮ ಮುದಾಳೆ, ಸುರೇಶ ಸ್ವಾಮಿ, ದಾನಿ ಬಾಬುರಾವ, ನೀಲಮ್ಮ ರೂಗನ್, ವೀರುಪಾಕ್ಷ ಗಾದಗಿ, ಸಂತೋಷ ಪಾಟೀಲ, ಅನೇಕರು ಪತ್ರಿಕಾಗೋಷ್ಠಿಯಲ್ಲಿ ಇದ್ದರು.



ಓದಿನ ಅಭಿರುಚಿ ಬೆಳೆಸಿ: ಪಾಟೀಲ

ಹೂವಿನ ಹಡಗಲಿ: ಯುವಕರಲ್ಲಿ ಓದಿನ ಅಭಿರುಚಿ ಬೆಳೆಸಿ ಎಂದು ಚಂದ್ರಕಾಂತ ಎಸ್ .ಪಾಟೀಲ್ ಹೇಳಿದರು.

ಪಟ್ಟಣದ ಗವಿಸಿದ್ದೇಶ್ವರಶಾಖಾಮಠದಲ್ಲಿ ಶರಣ ಸಾಹಿತ್ಯ ಪರಿಷತ್, ಕದಳಿ ಮಹಿಳಾ ವೇದಿಕೆ ಶರಣ ಸಾಹಿತ್ಯ ಪರಿಷತ್ ಯುವ ಘಟಕ ಸಹಯೋಗದಲ್ಲಿ ಆಯೋಜಿಸಿದ್ದ ಕಾಯಕ ದೀಕ್ಷೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿ, ಶರಣರ ವಚನಗಳು ವಿಚಾರಗಳನ್ನು ಗ್ರಂಥಗಳ ರೂಪದಲ್ಲಿ ಪ್ರಕಟಿಸುವ ಮೂಲಕ ಓದುಗರಿಗೆ ಒದಗಿಸುವ ಕಾರ್ಯವಾಗಬೇಕೆಂದರು.

ಹೊಸಪೇಟೆ ಕವಯಿತ್ರಿ ಡಾ.ಭಾರತಿ ಮೂಲಿಮನಿ ಉಪನ್ಯಾಸ ನೀಡಿದರು. ಜಿಲ್ಲಾ ಶಸಾಪ ಅಧ್ಯಕ್ಷ ಡಾ.ಕೆ.ರವೀಂದ್ರನಾಥ ಜಿಲ್ಲೆ , ತಾಲೂಕು ಶಸಾಪ ಚಟುವಟಿಕೆಗಳು ಕುರಿತು ಮಾಹಿತಿ ನೀಡಿದರು.

ಗವಿಮಠದ ಡಾ.ಹಿರಿಶಾಂತವೀರ ಶ್ರೀಗಳು, ಹಿರೇಮಲ್ಲನಕೆರೆ ಮಠ ಅಭಿನವ ಚೆನ್ನಬಸವ ಶ್ರೀಗಳು, ಡಾ.ಮಂಜುನಾಥ ಶ್ರೀಗಳು ಸಾನಿಧ್ಯ ವಹಿಸಿ ಶರಣ ಸಾಹಿತ್ಯ ಪರಿಷತ್ತಿನಕಾರ್ಯಕ್ರಮಗಳುನಿರಂತರವಾಗಿ ನೆಡೆಯಲಿ ಎಂದು ಆಶೀರ್ವದಿಸಿದರು.

ಶಸಾಪ ಜಿಲ್ಲಾ ಕಾರ್ಯದರ್ಶಿ ರವಿಕುಮಾರ್ ಎನ್.ಎಂ., ಸಾಹಿತಿ ತೋ.ಮ.ಶಂಕ್ರಯ್ಯ, ಕಸಾಪ ಮಾಜಿ ಅಧ್ಯಕ್ಷ ಹೆಚ್ ಜಿ ಪಾಟೀಲ್, ಚಿತ್ರಕಲಾ ಶಿಕ್ಷಕರ ಸಂಘದ ರಾಜ್ಯ ಉಪಾಧ್ಯಕ್ಷ ದ್ವಾರಕೀಶ್ ರೆಡ್ಡಿ ಎಸ್ ಮಾತನಾಡಿದರು.

ಶಸಾಪ ತಾಲೂಕು ಘಟಕದ ಅಧ್ಯಕ್ಷ ಟಿ.ಎಂ. ನಾಗಭೂಷಣ, ಕದಳಿ ಮಹಿಳಾ ವೇದಿಕೆ ಅಧ್ಯಕ್ಷೆ ಡಾ.ಶೈಲಜಾ ಪವಾಡಶೆಟ್ರು,ಯುವ ಘಟಕದ ಅಧ್ಯಕ್ಷ ಎಂ.ದಯಾನಂದ ರವರಿಗೆ ಸಂಸ್ಥೆಗಳಿಂದ ಸನ್ಮಾನ ಮಾಡಿದರು.

ಈ ವೇಳೆ ಕನ್ನಡ ಪುಸ್ತಕ ಪ್ರಾಧಿಕಾರದ ಜಿಲ್ಲಾ ಜಾಗೃತಿ ಸಮಿತಿ ಸದಸ್ಯ ಮುದೇನೂರು ಉಮಾಮಹೇಶ್ವರ, ಮನೆಗೊಂದು ಗ್ರಂಥಾಲಯ ಅನುಷ್ಠಾನದ ಅಂಗವಾಗಿ 9 ಜನರಿಗೆ ಅಭಿನಂದನಾ ಪತ್ರ ವಿತರಿಸಿದರು.

ಯುವರಾಜ್ ಗೌಡ್ರು, ಜಯಮಾಲ, ಎ.ವೀಣಾ, ಮೇಘನಾ,ಯಶಸ್ವಿನಿ, ಸಿಂಚನಾ, ಬಸವರಾಜ ಭಂಡಾರಿ ವಚನ ಗಾಯನ ಪ್ರಸ್ತುತ ಪಡಿಸಿದರು.

ಹೆಚ್ ಬಿ ರಾಜೇಶ್, ರಾಜೇಶ್ವರಿ ಕಮ್ಮಾರ, ಚಂದ್ರಪ್ಪ ಅಕ್ಕಸಾಲಿ ನಿರ್ವಹಿಸಿದರು.



ಸರ್ಕಾರಿ ಜಾಗ ಒತ್ತುವರಿ ತೆರವು: ಜಿಲ್ಲಾಡಳಿತದಿಂದ ಕ್ರಮ

ಬಳ್ಳಾರಿ: ನಗರದ ವಿವಿಧೆಡೆ ಹಲವು ವರ್ಷಗಳಿಂದ ಅಕ್ರಮವಾಗಿ ಒತ್ತುವರಿಯಾಗಿದ್ದ ಸರ್ಕಾರಿ ಜಾಗವನ್ನು ಜಿಲ್ಲಾಡಳಿತವು ಕಾರ್ಯಾಚರಣೆ ಮೂಲಕ ಗುರುವಾರ ತೆರವುಗೊಳಿಸಿದೆ.

ನಗರದ ಅವಂಭಾವಿಯ ದೇವಸ್ಥಾನದ ಹಿಂಭಾಗದಲ್ಲಿ ಒತ್ತುವರಿ ಮಾಡಿ ತಡೆಗೋಡೆ ನಿರ್ಮಿಸಿದ್ದ ರಸ್ತೆ ಸೇರಿದಂತೆ 22 ಸೆಂಟ್ಸ್ ವಿಸ್ತೀರ್ಣದ ಸರ್ಕಾರಿ ಜಾಗ ಅಧಿಕಾರಿಗಳು ವಶಕ್ಕೆ ಪಡೆಯಲಾಯಿತು. ತೆರವುಗೊಳಿಸಿದ ಜಾಗಕ್ಕೆ ಅಳವಡಿಸಿ 'ಸರ್ಕಾರಿ ಸ್ವತ್ತು' ಎಂಬ ನಾಮಫಲಕ ಹಾಕಲಾಯಿತು. ಬೆಳಗ್ಗೆ ಸ್ಥಳಕ್ಕೆ ಆಗಮಿಸಿದ ಕಂದಾಯ ಇಲಾಖೆ ಅಧಿಕಾರಿಗಳು ಮತ್ತು ಪೊಲೀಸರು ಜೆಸಿಬಿ ಮೂಲಕ ನೆಲಸಮ ಮಾಡಿದರು.

ಬಳಿಕ ನಲ್ಲಚೇರುವು ಪ್ರದೇಶದಲ್ಲಿ ಒತ್ತುವರಿ 5.5 ಎಕರೆ ಜಮೀನು ಸರ್ಕಾರದ ಸ್ವತ್ತು ಎಂದು ನಾಮಫಲಕ ಹಾಕಿದರು. ನಂತರ ಭತ್ರಿ ಕಾಲೋನಿ ಈಶ್ವರ ದೇವಸ್ಥಾನದ ಬಳಿ ಸರ್ಕಾರಿ ಜಾಗದಲ್ಲಿ ಅನಧಿಕೃತವಾಗಿ ನಿರ್ಮಿಸಿದ್ದ ಶೆಡ್, ಮನೆ ತೆರವು ಮಾಡಲಾಯಿತು.



ಕಾರ್ಯಾಚರಣೆಯಲ್ಲಿ ಅಪರ ಜಿಲ್ಲಾಧಿಕಾರಿ ಮಹಮ್ಮದ್ ಝುಬೇರ್. ಎನ್., ಸಹಾಯಕ ಆಯುಕ್ತ ರಾಜೇಶ್ ಹೆಚ್.ಡಿ., ಬಳ್ಳಾರಿ ತಾಲ್ಲೂಕು ತಹಶೀಲ್ದಾರ್ ಟಿ.ರೇಖಾ ಸೇರಿದಂತೆ ಡಿಡಿಎಲ್‌ಆರ್, ಎಡಿಎಲ್‌ಆರ್ ಅಧಿಕಾರಿಗಳು, ಪೊಲೀಸ್ ಅಧಿಕಾರಿಗಳು ಹಾಗೂ ಇತರರು ಪಾಲ್ಗೊಂಡಿದ್ದರು.

ಕುಡಿಯುವ ನೀರಿನ ಸಮಸ್ಯೆ ಆಗದಂತೆ ಕ್ರಮ ವಹಿಸಿ

ಹಗರಿಬೊಮ್ಮನಹಳ್ಳಿ: ಬೇಸಿಗೆ ಬಿಸಿಲಿನ ತಾಪ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ಜನ ಜಾನುವಾರುಗಳಿಗೆ ಕುಡಿಯುವ ನೀರಿನ ಸಮಸ್ಯೆಯಾಗದಂತೆ ಧನ ಕರುಗಳಿಗೆ ಮೇವಿನ ಕೊರತೆ ಉಂಟಾಗದಂತೆ ಮುಂಜಾಗ್ರತೆ ವಹಿಸಬೇಕು. ಈ ನಿಟ್ಟಿನಲ್ಲಿ ಸಂಬಂಧಿಸಿದ ಇಲಾಖೆ ಅಧಿಕಾರಿಗಳು ಕಾರ್ಯನಿರ್ವಹಿಸಬೇಕಾಗಿದೆ ಎಂದು ತಹಶೀಲ್ದಾರ್ ಆರ್ ಕವಿತಾ ತಿಳಿಸಿದರು.

ನಗರದ ಜಿಲ್ಲಾಧಿಕಾರಿಗಳ ನಿರ್ದೇಶನದ ಮೇರೆಗೆ ಕರೆಯಲಾಗಿದ್ದ ಸಭೆಯಲ್ಲಿ ಮಾತನಾಡಿ, ನಗರ ಹಾಗೂ ಗ್ರಾಮೀಣ ಪ್ರದೇಶದ ಜನರಿಗೆ ಕುಡಿಯುವ ನೀರಿನ ಅಭಾವ ಹಾಗೂ ಮೇವಿನ ಸಮಸ್ಯೆ ಉಂಟಾಗದಂತೆ ಸಮರ್ಪಕವಾಗಿ ಒದಗಿಸುವ ನಿಟ್ಟಿನಲ್ಲಿ ಅಗತ್ಯ ಕ್ರಮ ವಹಿಸುವಂತೆ ಸೂಚಿಸಿದರು.



ಉಪ ತಹಶೀಲ್ದಾರ್ ಶಿವಕುಮಾರ್‌ಗೌಡ ,ತಾಪಂ ಕಾ.ನಿ.ಅಧಿಕಾರಿ ವಿಶ್ವನಾಥ ಪಲ್ಲಯ್ಯನ ಕೋಟೆ, ಪುರಸಭೆ ಮುಖ್ಯ ಅಧಿಕಾರಿ ಎಂ.ಕೆ. ಮುಗಳಿ, ಸಮಾಜ ಕಲ್ಯಾಣ ಇಲಾಖೆಯ ಜಗದೀಶ್ ದಿಡಗೂರು, ಬಿಸಿಎಂ ಇಲಾಖೆಯ ಕಲ್ಯಾಣಾಧಿಕಾರಿ ಕೊಟ್ರೇಶ್ ನಾಯ್ಕ್, ಲೋಕೋಪಯೋಗಿ ಇಲಾಖೆ ಅಧಿಕಾರಿ ಸತೀಶ್ ನಾಯ್ಕ್, ಬಿಇಒ ಪ್ರಭಾಕರ್, ಬಿಸಿಯೂಟದ ಅಧಿಕಾರಿ ರಾಜಕುಮಾರ ನಾಯ್ಕ್, ತೋಟಗಾರಿಕಾ ಇಲಾಖಾಧಿಕಾರಿ ವಿಜಯಕುಮಾರ್, ಪಶು ಸಂಗೋಪನೆ ಇಲಾಖಾಧಿಕಾರಿ ಡಾ.ಸೂರಪ್ಪ, ಗ್ರಾ ಕು ನೀ ಮತ್ತು ನೈ ಇಲಾಖೆಯ ನಂದೀಶ್, ಇನ್ನಿತರ ಇಲಾಖೆಗಳ ತಾಲೂಕು ಮಟ್ಟದ ಅಧಿಕಾರಿಗಳು ಪಾಲ್ಗೊಂಡಿದ್ದರು.

ರಾಷ್ಟ್ರೋತ್ಥಾನ ಸಿಬಿಎಸ್‌ಇಗೆ ಶೇ.100 ಫಲಿತಾಂಶ

ಹಗರಿಬೊಮ್ಮನಹಳ್ಳಿ: ಇಲ್ಲಿನ ರಾಷ್ಟ್ರೋತ್ಥಾನ ವಿದ್ಯಾಕೇಂದ್ರ ಸಿಬಿಎಸ್‌ಇ ಶಾಲೆ 10ನೇ ತರಗತಿ ವಾರ್ಷಿಕ ಪರೀಕ್ಷೆಯಲ್ಲಿ ಶೇ.100 ಫಲಿತಾಂಶ ದಾಖಲಿಸಿ ಜಿಲ್ಲೆಗೆ ಪ್ರಥಮ ಸ್ಥಾನ ಪಡೆದು ಗಮನ ಸೆಳೆದಿದೆ.

ಈ ವರ್ಷ ಒಟ್ಟು 88 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು, ಎಲ್ಲರೂ ಉತ್ತೀರ್ಣರಾಗಿ ಶತಮಾನ ಫಲಿತಾಂಶ ಸಾಧಿಸಿದ್ದಾರೆ. ವಿದ್ಯಾರ್ಥಿಗಳ ಸಾಧನೆಗಳಲ್ಲಿ ಮೋಹನ್ ಬಿ.ಆರ್. 98.20% ಅಂಕ ಪಡೆದು ಜಿಲ್ಲೆಗೆ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಯಾಗಿ ಹೊರಹೊಮ್ಮಿದ್ದಾರೆ. ಆದರ್ಶ ವಸಂತ್ ಅಸೋಡೆ 97% ಮತ್ತು ವೈಷ್ಣವಿ ಹೆಚ್.ಆರ್. 94.40% ಅಂಕ ಪಡೆದು ಶಾಲೆಯ ಕೀರ್ತಿ ಹೆಚ್ಚಿಸಿದ್ದಾರೆ.

ಅಂಕಗಳ ವಿಂಗಡಣೆಯಲ್ಲಿ ವಿದ್ಯಾರ್ಥಿಗಳು ಗಮನಾರ್ಹ ಸಾಧನೆ ತೋರಿದ್ದಾರೆ. 95–100% ಅಂಕಗಳನ್ನು 3 ವಿದ್ಯಾರ್ಥಿಗಳು, 91–94% ಅಂಕಗಳನ್ನು 8 ವಿದ್ಯಾರ್ಥಿಗಳು, 81–90% ಅಂಕಗಳನ್ನು 36 ವಿದ್ಯಾರ್ಥಿಗಳು, 71–80% ಅಂಕಗಳನ್ನು 19 ವಿದ್ಯಾರ್ಥಿಗಳು, 61–70% ಅಂಕಗಳನ್ನು 13 ವಿದ್ಯಾರ್ಥಿಗಳು, 51–60% ಅಂಕ 8 ವಿದ್ಯಾರ್ಥಿಗಳು ಹಾಗೂ 41–50% ಅಂಕ 1 ವಿದ್ಯಾರ್ಥಿ ಗಳಿಸಿದ್ದಾರೆ.

ಮಕ್ಕಳ ಸಾಧನೆಯ ಕುರಿತು ಪ್ರಧಾನಾಚಾರ್ಯ ಹೆಚ್.ಆರ್. ರಂಗನಾಥ ಮಾತನಾಡಿ, ವಿದ್ಯಾರ್ಥಿಗಳ ಕಠಿಣ ಪರಿಶ್ರಮ, ಶಿಕ್ಷಕರ ಸಮರ್ಪಿತ ಬೋಧನೆ ಮತ್ತು ಪಾಲಕರ ನಿರಂತರ ಪ್ರೋತ್ಸಾಹವೇ ಸಾಧನೆ ಹಿನ್ನಲೆ. ಎಲ್ಲರ ಸಹಕಾರದಿಂದಲೇ ಈ ಯಶಸ್ಸು ಸಾಧ್ಯವಾಗಿದೆ ಎಂದರು.



ಎಲ್ಲಾ ವಿದ್ಯಾರ್ಥಿಗಳಿಗೆ ಅಭಿನಂದನೆಗಳನ್ನು ತಿಳಿಸಿ, ಈ ಫಲಿತಾಂಶದ ಮೂಲಕ ಹಗರಿಬೊಮ್ಮನಹಳ್ಳಿ ಪ್ರದೇಶದ ವಿದ್ಯಾರ್ಥಿಗಳು ಜಿಲ್ಲೆಯಲ್ಲಿಯೇ ತಮ್ಮ ಪ್ರತಿಭೆಯನ್ನು ಸಾಬೀತುಪಡಿಸಿದ್ದು, ಶಾಲೆ ಶಿಕ್ಷಣ ಕ್ಷೇತ್ರದಲ್ಲಿ ಮತ್ತೊಂದು ಮೈಲಿಗಲ್ಲು ಸಾಧಿಸಿದೆ. ಮುಂದಿನ ದಿನಗಳಲ್ಲಿ ಸಾಧನೆ ಮುಂದುವರಿಯಲಿ ಎಂದು ಹಾರೈಸಿದರು.

ಈ ವೇಳೆ ಶಿಕ್ಷಕರಾದ ಕೆ.ನಾಗರಾಜ್, ಎಸ್. ರೇಣುಕಾ, ಆಶಾ, ಅನಿತಾ, ಕೊಟ್ರಮ್ಮ, ಕಾವ್ಯ, ಪೂಜಾ, ಬಿ.ಟಿ.ನಾಗರಾಜ್, ಮಹೇಶ್ ಹಾಗೂ ಶಿವಶಂಕ್ರಯ್ಯ ಉಪಸ್ಥಿತರಿದ್ದು, ವಿದ್ಯಾರ್ಥಿಗಳ ಸಾಧನೆಯನ್ನು ಅಭಿನಂದಿಸಿದರು.

ಸ್ವಯಂ ಗಣತಿ ಪೂರ್ಣಗೊಳಿಸಿದ ಶಾಸಕ ರೆಡ್ಡಿ

ಬಳ್ಳಾರಿ: ಸರ್ಕಾರದ ಮಹತ್ವಾಕಾಂಕ್ಷೆಯ ಜನಗಣತಿ 2027 ನಿಮಿತ್ತ ಬಳ್ಳಾರಿ ಶಾಸಕ ನಾರಾ ಭರತ್ ರೆಡ್ಡಿ ಬುಧವಾರ ತಮ್ಮ ನಿವಾಸದಲ್ಲಿ ಸ್ವಯಂ ಗಣತಿ ಪ್ರಕ್ರಿಯೆ ಯಶಸ್ವಿಯಾಗಿ ಪೂರ್ಣಗೊಳಿಸಿದರು.

ಕುಟುಂಬದ ವಿವರವನ್ನು ಆನ್ ಲೈನ್ ಪೋರ್ಟಲ್ ಮೂಲಕ ದಾಖಲಿಸಿದರು.

ಈ ವೇಳೆ ಮಾತನಾಡಿ, ದೇಶದ ಅಭಿವೃದ್ಧಿ ಯೋಜನೆಗಳ ರೂಪಿಸುವಿಕೆಯಲ್ಲಿ ಜನಗಣತಿ ಬಹಳ ಮುಖ್ಯ ಪಾತ್ರ ವಹಿಸುತ್ತದೆ. ಪ್ರತಿಯೊಬ್ಬ ನಾಗರಿಕ ನಿಖರವಾದ ಮಾಹಿತಿ ನೀಡಿ ಸರ್ಕಾರದ ಕರ್ತವ್ಯಕ್ಕೆ ಸಹಕಾರಿವಾಗಿ ಎಂದರು.

ಈ ಗಣತಿಯ ದತ್ತಾಂಶವು ಮುಂದಿನ ದಿನಗಳಲ್ಲಿ ಕ್ಷೇತ್ರದ ಮೂಲಸೌಕರ್ಯ ಮತ್ತು ಕಲ್ಯಾಣ ಯೋಜನೆಗಳ ಅನುಷ್ಠಾನಕ್ಕೆ ದಾರಿದೀಪವಾಗಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಬಳ್ಳಾರಿ ನಗರದ ಪ್ರತಿಯೊಂದು ಕುಟುಂಬವೂ ಈ ಪ್ರಕ್ರಿಯೆಯಲ್ಲಿ ಭಾಗವಹಿಸಿ, ಗಣತಿದಾರರಿಗೆ ಸಹಕರಿಸಬೇಕು ಎಂದು ಶಾಸಕ ನಾರಾ ಭರತ್ ರೆಡ್ಡಿ ಅವರು ಮನವಿ ಮಾಡಿದರು.



ಶರಣರ ತತ್ವ ಸಿದ್ಧಾಂತಗಳೇ ಇಂದಿನ ಸಂವಿಧಾನ

ವಿಜಯನಗರ: 12ನೇ ಶತಮಾನದಲ್ಲಿ ಬಸವಾದಿ ಶರಣರು ಪ್ರತಿಪಾದಿಸಿದ ತತ್ವ ಸಿದ್ಧಾಂತಗಳೇ ಇಂದಿನ ಭಾರತೀಯ ಸಂವಿಧಾನದ ಆಶಯಗಳಾಗಿವೆ ಎಂದು ಶರಣ ಚಿಂತಕ ಡಾ. ಕೆ. ರವೀಂದ್ರನಾಥ್ ಅಭಿಪ್ರಾಯಪಟ್ಟರು.

ಹೊಸಪೇಟೆಯ ನ್ಯಾಷನಲ್ ಬಿ.ಎಡ್ ಕಾಲೇಜಿನಲ್ಲಿ ವಿಜಯನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್, ಜಾಗತಿಕ ಲಿಂಗಾಯತ ಮಹಾಸಭಾ ಹಾಗೂ ನ್ಯಾಷನಲ್ ಬಿ.ಎಡ್ ಕಾಲೇಜ್ ಸಹಯೋಗದೊಂದಿಗೆ ಹಮ್ಮಿಕೊಂಡಿದ್ದ 893ನೇ ಬಸವ ಜಯಂತಿ ಪ್ರಯುಕ್ತ 'ಕರ್ನಾಟಕ ಸಾಂಸ್ಕೃತಿಕ ನಾಯಕ ಬಸವಣ್ಣ' ವಿಷಯದ ಕುರಿತು ಅವರು ವಿಶೇಷ ಉಪನ್ಯಾಸ ನೀಡಿದರು.

?ಸಂವಿಧಾನದ ಪೂರ್ವ ಪೀಠಿಕೆಯಲ್ಲಿರುವ ಸ್ವತಂತ್ರ, ಸಮಾನತೆ, ಭ್ರಾತೃತ್ವ ಮತ್ತು ನ್ಯಾಯ ಎಂಬ ಪ್ರಮುಖ ಅಂಶಗಳನ್ನು ಶರಣರು ಅಂದೇ ಪ್ರತಿಪಾದಿಸಿ ಸಮ ಸಮಾಜದ ನಿರ್ಮಾಣಕ್ಕೆ ಪ್ರಯತ್ನಿಸಿದ್ದರು. ಬಸವಣ್ಣನವರ ಸಿದ್ಧಾಂತಗಳು ಕನ್ನಡದ ಅಸ್ಮಿತೆಯಾಗಿದ್ದು, ಇವು ಸರ್ವಕಾಲಕ್ಕೂ ಶ್ರೇಷ್ಠವಾಗಿವೆ. ವಿದ್ಯಾರ್ಥಿಗಳು ಈ ತತ್ವಗಳನ್ನು ಅನುಸರಿಸುವ ಮೂಲಕ ಸಮಾಜದ ಪರಿವರ್ತನೆಗೆ ನಾಂದಿ ಹಾಡಬೇಕು ಎಂದು ಕರೆ ನೀಡಿದರು.

ಜಾಗತಿಕ ಲಿಂಗಾಯತ ಮಹಾಸಭಾ ಜಿಲ್ಲಾ ಘಟಕದ ಕಾರ್ಯದರ್ಶಿ ಅಕ್ಕಿ ಮಲ್ಲಿಕಾರ್ಜುನ ಪ್ರಾಸ್ತಾವಿಕವಾಗಿ ಮಾತನಾಡಿ, ಇಂದು ಸಾಂಸ್ಕೃತಿಕ ನಾಯಕರ ಜಯಂತಿಗಳು ಕೇವಲ ಆಯಾ ಸಮುದಾಯಕ್ಕೆ ಸೀಮಿತವಾಗುತ್ತಿರುವುದು ದುರದೃಷ್ಟಕರ. ಬಸವಣ್ಣನವರು ಯಾರ ವಿರುದ್ಧ, ಯಾರಿಗಾಗಿ ಮತ್ತು ಯಾಕಾಗಿ ಹೋರಾಡಿದರು ಎಂಬ ಸತ್ಯವನ್ನು ವಿದ್ಯಾರ್ಥಿಗಳು ಅರಿಯಬೇಕು. ಅಂದಾಗ ಮಾತ್ರ ಸಮ ಸಮಾಜದ ನಿರ್ಮಾಣ ಸಾಧ್ಯ ಎಂದರು.



ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ವಿನಾಯಕ ಎಜುಕೇಶನ್ ಸೊಸೈಟಿ ಅಧ್ಯಕ್ಷ ಚಾಲಿ ಬಸವರಾಜ ಅವರು ಮಾತನಾಡಿ, ಬಸವಣ್ಣನವರು ಕೇವಲ ಒಂದು ಜನಾಂಗಕ್ಕೆ ಅಥವಾ ಪ್ರದೇಶಕ್ಕೆ ಸೀಮಿತವಾದವರಲ್ಲ, ಅವರ ತತ್ವಗಳು ಇಂದು ಜಾಗತಿಕ ಮಟ್ಟದಲ್ಲಿ ಮನ್ನಣೆ ಗಳಿಸಿವೆ ಎಂದು ತಿಳಿಸಿದರು.

ಜಾಗತಿಕ ಲಿಂಗಾಯತ ಮಹಾಸಭಾ ಜಿಲ್ಲಾ ಘಟಕದ ಅಧ್ಯಕ್ಷ ಎಸ್. ಬಸವರಾಜ್ ಮಾವಿನಹಳ್ಳಿ ಉದ್ಘಾಟಿಸಿದರು.

ವೇದಿಕೆಯಲ್ಲಿ ಬಿ.ಎಡ್ ಕಾಲೇಜಿನ ಪ್ರಾಂಶುಪಾಲರಾದ ಡಾ. ಆಯೂಬ್ ಖಾನ್, ಶರಣ ಸಾಹಿತ್ಯ ಪರಿಷತ್ ಕಾರ್ಯದರ್ಶಿ ಡಾ. ಬಿ. ಸತೀಶ್ ಗೌಡ, ಜಿಲ್ಲಾ ಸದಸ್ಯರಾದ ಕೆ.ಬಿ. ಪೊಲೀಸ್ ಪಾಟೀಲ್, ಜೆ. ಬಸವನಗೌಡ, ಶರಣೆ ಸೌಭಾಗ್ಯ ಲಕ್ಷ್ಮಿ ಸೇರಿದಂತೆ ಗಣ್ಯರು ಉಪಸ್ಥಿತರಿದ್ದರು.